4	[illegible]	5054-03-337-0-01-433	.	.	.	.	.	.	.	.	.	.	.	.	.	.	.	.	.	.	.
	[illegible]	5054-04-800-8-02-172	93.31	1003.15	190.95	.	139.81	460.85	356.75	.	18.80	82.08	30.15	30.88	304.79	115.15	.	70.03	.	.	2981.41
	[illegible]	5054-04-337-1-09-172	271.74	635.10	363.28	410.48	474.06	258.00	341.08	207.84	533.00	346.77	364.10	285.46	461.37	870.64	401.08	178.20	.	.	6489.07
	[illegible]	3054-03-337-0-05-200	276.19	0.19	130.77	68.54	.	.	60.03	.	134.59	163.91	.	150.26	49.23	52.00	66.63	53.07	.	.	1222.30
	[illegible]	3054-04-105-1-01-200	440.92	265.23	360.96	.	89.13	52.79	301.82	654.88	5.71	180.53	272.48	653.38	160.73	09.51	35.90	70.11	.	.	3083.96
	[illegible]																				
	[illegible]	4059-80-051-0-40-386	.	.	.	.	.	4534.34	.	.	.	.	.	.	.	.	.	.	.	.	4534.34
	[illegible]	4059-80-051-0-36-386	300.00	.	.	.	.	.	.	.	.	1700.00	.	.	.	.	.	.	.	.	2000.00
	[illegible]	4059-80-051-0-30-386	.	.	.	80.00	20.00	.	.	.	.	.	.	.	.	.	.	.	.	.	100.00
	[illegible]	4059-80-051-0-29-386	383.31	463.88	78.73	35.00	282.83	186.43	137.11	204.18	241.08	171.38	143.83	38.81	10.38	28.89	10.90	84.15	.	.	2381.73
5	[illegible]	4216-01-700-3-01-386	229.83	371.04	70.81	3.38	71.47	144.12	40.73	82.87	46.83	108.00	85.18	38.88	87.54	71.88	33.58	71.90	.	.	1387.04
	[illegible]																				
	[illegible]																				
1	[illegible]	2059-80-053-3-02-200	164.38	34.27	81.11	35.46	3.37	51.02	28.29	140.10	.	100.78	1.40	54.53	7.88	80.71	.	40.00	.	.	728.28
2	[illegible]	2059-80-053-1-00-800	278.54	158.78	118.88	36.47	86.81	99.84	34.87	17.77	41.88	78.48	87.40	81.88	301.48	149.48	48.12	13.17	16.76	6.00	1688.08
3	[illegible]	2216-01-700-3-01-300	183.77	11.17	10.93	49.16	54.31	69.51	0.87	6.59	19.69	81.08	13.87	34.44	46.24	25.15	38.48	8.80	.	.	603.68
4	[illegible]	2216-01-700-4-00-231	9.28	18.00	3.38	11.70	12.14	28.38	.	.	16.46	.	11.01	9.75	7.50	5.88	11.16	8.76	.	.	149.70
	[illegible]		4656.00	6176.74	2961.74	1611.81	2987.71	1943.06	2498.70	2383.05	2263.36	4676.36	2316.36	2006.90	1946.38	2716.87	2338.32	1304.76	16.76	6.00	50721.86

	ಒಟ್ಟು ಮೊತ್ತ ರೂ:	1500000

4059-80-051-0-30-386 ಯೋಜನೆ: ಮಿನಿ ವಿಧಾನ ಸೌಧ-

1	ಸಂಖ್ಯೆ: ಪಿಡಬ್ಲ್ಯೂಡಿ:65: ಡಬ್ಲ್ಯು ಬಿ ಆರ್: 2006: ದಿ: 21-1	716000
2	ಸಂಖ್ಯೆ: ಪಿಡಬ್ಲ್ಯೂಡಿ:214: ಐ ಎಫ್ಎ: 2009: ದಿ: 21-12-	700000
	ಒಟ್ಟು ಮೊತ್ತ ರೂ:	1416000

5054-04-800-1-09-133 ಯೋಜನೆ ಡಾ.ನಂಜುಂಡಪ್ಪ ವರದಿ-

1	ಸಂಖ್ಯೆ: ಪಿಡಬ್ಲ್ಯೂಡಿ:125: ಐ ಎಫ್ಎ: 2009: ದಿ: 29-8-2	2977000
2	ಸಂಖ್ಯೆ: ಪಿಡಬ್ಲ್ಯೂಡಿ:233: ಐ ಎಫ್ಎ: 2009: ದಿ: 18-12-	219000
3	ಸಂಖ್ಯೆ: ಪಿಡಬ್ಲ್ಯೂಡಿ:233: ಐ ಎಫ್ಎ: 2009: ದಿ: 19-12-	10000000
4	ಸಂಖ್ಯೆ: ಪಿಡಬ್ಲ್ಯೂಡಿ:267: ಐ. ಎಫ್ಎ: 2009: ದಿ: 20-1-2	8000000
5	ಸಂಖ್ಯೆ: ಪಿಡಬ್ಲ್ಯೂಡಿ:267: ಐ ಎಫ್ಎ: 2009: ದಿ: 22-1-2	347000
	ಒಟ್ಟು ಮೊತ್ತ ರೂ:	21543000

5054-04-800-3-01-133 ಡಾ: ನಂಜುಂಡಪ್ಪ ನಬಾರ್ಡ್

1	ಸಂಖ್ಯೆ: ಪಿಡಬ್ಲ್ಯೂಡಿ:267: ಐ ಎಫ್ಎ: 2009: ದಿ: 23-1-2	3300000
	ಒಟ್ಟು ಮೊತ್ತ ರೂ:	3300000

5054-04-800-1-09-172 ಸುವರ್ಣ ರಸ್ತೆಗಳು-

1	ಸಂಖ್ಯೆ: ಪಿಡಬ್ಲ್ಯೂಡಿ:267: ಐ ಎಫ್ಎ: 2009: ದಿ: 20-1-2	5000000
2	ಸಂಖ್ಯೆ: ಪಿಡಬ್ಲ್ಯೂಡಿ:267: ಐ ಎಫ್ಎ: 2009: ದಿ: 20-1-2	8200000
3	ಸಂಖ್ಯೆ: ಪಿಡಬ್ಲ್ಯೂಡಿ:267: ಐ ಎಫ್ಎ: 2009: ದಿ: 20-1-2	10000000
	ಒಟ್ಟು ಮೊತ್ತ ರೂ:	23200000

3054-03-337-0-05-200 ರಾಜ್ಯ ಹೆದ್ದಾರಿ ನಿರ್ವಹಣೆ -

1	ಸಂಖ್ಯೆ: ಪಿಡಬ್ಲ್ಯೂಡಿ:267: ಐ ಎಫ್ಎ: 2009: ದಿ: 22-1-2	216000
	ಒಟ್ಟು ಮೊತ್ತ ರೂ:	216000

ಒಟ್ಟು - 2009-10 202406000.00

ಅನುಬಂಧ-4

2008-09ನೇ ಸಾಲಿನ ಬಿಡುಗಡೆ (ಲಕ್ಷ ರೂ.ಗಳಲ್ಲಿ)

ಕ್ರ. ಸಂ	ಲೆಕ್ಕಶೀರ್ಷಿಕೆ	04/08	05/08	06/08	07/08	08/08	09/08	10/08	11/08	12/08	01/09	02/09	03/09	2008-09ನೇ ಸಾಲಿನ ಬಿಡುಗಡೆ (ಲಕ್ಷ ರೂ.ಗಳಲ್ಲಿ)
1	5054-04-800-2-02-172-ಕೇಂದ್ರ ರಸ್ತೆ ನಿಧಿ	0.00	13.14	0.00	13.14	0.00	54.66	0.00	0.00	0.00	0.00	0.00	98.96	179.90
2	5054-03-337-0-02-172-ಇತರೇ ರಸ್ತೆ ನಿರ್ಮಾಣ	0.00	12.00	0.00	7.59	5.17	3.29	0.00	0.00	10.05	5.43	0.00	112.00	155.53
3	5054-04-800-3-01-436-ನಬಾರ್ಡ್ ರಸ್ತೆಗಳು	0.00	73.52	0.00	25.07	25.30	215.54	0.00	162.85	337.88	160.54	0.00	357.93	1358.63
4	5054-03-337-0-02-422 ಎಸ್.ಸಿ.ಪಿ (ಟಿ.ಆರ್.ಎಫ್)	0.00	63.31	0.00	41.86	44.83	50.21	0.00	3.91	0.00	0.00	0.00	16.00	220.12
5	5054-04-800-3-01-422 ಎಸ್.ಸಿ.ಪಿ (ನಬಾರ್ಡ್)	0.00	1.52	0.00	1.39	1.55	0.00	0.00	0.00	0.00	0.00	0.00	0.00	4.46
6	5054-03-337-0-02-423 ಟಿ.ಎಸ್.ಪಿ (ಟಿ.ಆರ್.ಎಫ್)	0.00	11.44	0.00	8.45	8.92	20.66	0.00	11.41	0.46	0.00	0.00	36.72	98.06

7	5054-04-800-3-01-423 ಟಿ.ಎಸ್.ಪಿ (ನಬಾರ್ಡ್)	0.00	6.63	0.00	5.52	5.35	38.82	0.00	49.34	26.01	0.00	0.00	0.00	131.67
8	3054-04-337-1-09-172 ಸಿ.ಎಂ.ಜಿ.ಎಸ್.ವೈ	0.00	138.03	0.00	30.97	63.59	50.02	0.00	280.73	76.00	0.00	0.00	494.00	1133.34
9	3054-04-105-1-01-200-12ನೇ ಹಣಕಾಸು	0.00	11.69	0.00	11.30	30.75	37.54	0.00	0.00	0.00	73.76	0.00	218.02	383.06
10	4059-80-051-0-29-386 ಇಲಾಖೆ ಕಟ್ಟಡಗಳು	0.00	59.96	0.00	6.95	2.80	57.32	0.00	0.00	5.03	0.00	0.00	380.00	512.06
11	2059-80-053-4-00-200 ಯೋಜನೇತರ	0.00	1.60	0.00	1.22	1.20	4.63	0.00	1.80	1.80	1.52	0.00	1.40	15.17
12	2059-80-053-5-02-200-12ನೇ ಹಣಕಾಸು	0.00	3.31	0.00	2.78	2.00	4.72	0.00	0.00	0.00	0.00	0.00	0.00	12.81
13	2216-01-700-3-01-200-ವಸತಿ ಯೋಜನೇತರ	0.00	2.29	0.00	1.72	2.03	3.03	0.00	2.22	0.73	0.88	0.00	0.25	13.15
14	4216-01-700-2-01-386-ವಸತಿ ಕಟ್ಟಡಗಳು	0.00	0.00	0.00	0.00	0.00	0.00	0.00	0.00	0.00	3.56	0.00	9.60	13.16
15	4059-80-051-0-32-ನ್ಯಾಯಾಲಯ ಕಟ್ಟಡಗಳು	0.00	0.00	0.00	0.00	0.00	36.69	0.00	0.00	15.00	0.00	0.00	0.00	51.69
19	4059-80-051-0-30-386-ಮಿನಿ ವಿಧಾನ ಸೌಧ	0.00	0.00	0.00	0.00	0.00	0.00	0.00	0.00	0.00	10.00	0.00	2.85	12.85
20	5054-04-800-3-03-172-ಡಾ|| ನಂಜುಂಡಪ್ಪ ವರದಿ	0.00	0.00	0.00	0.00	0.00	0.00	0.00	0.00	0.00	0.00	0.00	78.26	78.26

21	5054-04-800-1-09-133-ಡಾ|| ನಂಜುಂಡಪ್ಪ ವರದಿ	0.00	0.00	0.00	0.00	0.00	0.00	0.00	0.00	0.00	0.00	0.00	0.00	
22	5054-04-800-3-01-133-ಡಾ|| ನಂಜುಂಡಪ್ಪ ನಬಾರ್ಡ್	0.00	0.00	0.00	0.00	0.00	0.00	0.00	0.00	0.00	0.00	0.00	0.00	
23	5054-04-800-1-09-172-ಸುವರ್ಣ ರಸ್ತೆ	0.00	0.00		0.00	0.00	0.00	0.00	0.00	0.00	0.00	0.00	0.00	
24	3054-03-337-0-05-200-ರಾಜ್ಯ ಹೆದ್ದಾರಿ	0.00	0.00	0.00	0.00	0.00	0.00	0.00	0.00	0.00	0.00	0.00	0.00	
	ಒಟ್ಟು	0.00	398.44	0.00	157.96	193.49	577.13	0.00	512.26	472.96	255.69	0.00	1805.99	4373.92

O. 32 F-7

ಅನುಬಂಧ 4 (ಮುಂದುವರೆದ)

2009-10ನೇ ಸಾಲಿನ ಬಿಡುಗಡೆ 01-2010ರಂತ್ಯಕ್ಕೆ (ಲಕ್ಷ ರೂ.ಗಳಲ್ಲಿ)

ಕ್ರ. ಸಂ	ಲೆಕ್ಕಶೀರ್ಷಿಕೆ	04/09	05/09	06/09	07/09	08/09	09/09	10/09	11/09	12/09	01/10	2009-10ನೇ ಸಾಲಿನ ಬಿಡುಗಡೆ 01-2010ರಂತ್ಯಕ್ಕೆ (ಲಕ್ಷ ರೂ.ಗಳಲ್ಲಿ)
1	5054-04-800-2-02-172-ಕೇಂದ್ರ ರಸ್ತೆ ನಿಧಿ	0.00	0.00	0.40	0.00	54.00	100.00	0.00	0.00	7.29	100.00	261.69
2	5054-03-337-0-02-172-ಇತರೇ ರಸ್ತೆ ನಿರ್ಮಾಣ	0	0.09	0	4	2.14	0	0	2	0	0	8.23
3	5054-04-800-3-01-436-ನಬಾರ್ಡ್ ರಸ್ತೆಗಳು	0	9.09	9.31	0	116.4	0	9.17	0	18.96	165	327.92
4	5054-03-337-0-02-422 ಎಸ್.ಸಿ.ಪಿ (ಟಿ.ಆರ್.ಎಫ್)	0	0	0	0	0	0	0	0	0	60	60.00
5	5054-04-800-3-01-422 ಎಸ್.ಸಿ.ಪಿ (ನಬಾರ್ಡ್)	0	0	0	0	0.	0	0	0	0	60	60.00
6	5054-03-337-0-02-423 ಟಿ.ಎಸ್.ಪಿ (ಟಿ.ಆರ್.ಎಫ್)	0	0	0	0	1.06	0	0	0	0	30	31.06

7	5054-04-800-3-01-423 ಟಿ.ಎಸ್.ಪಿ (ನಬಾರ್ಡ್)	0	0	0	0	0	0	0	0	0	40	40
8	3054-04-337-1-09-172 ಸಿ.ಎಂ.ಜಿ.ಎಸ್.ವೈ	0	24.5	212	0	115	141.9	0	30	76	0	599.43
9	3054-04-105-1-01-200-12ನೇ ಹಣಕಾಸು	0	1.2	2.48	0	4.98	0	4.2	2.98	2.04	0	17.88
10	4059-80-051-0-29-386 ಇಲಾಖೆ ಕಟ್ಟಡಗಳು	0	5.73	29.68	0	6.49	0	0	0	0	20	61.90
11	2059-80-053-4-00-200 ಯೋಜನೇತರ	0	2	13.4	0	13.94	0	6	1.23	0	0	36.57
12	2059-80-053-5-02-200-12ನೇ ಹಣಕಾಸು	0	0	0	0	0	0	0	0	0	0	-
13	2216-01-700-3-01-200-ವಸತಿ ಯೋಜನೇತರ	0	0.39	3.37	0	3.61	0	0.2	0.06	0	0	7.63
14	4216-01-700-2-01-386-ವಸತಿ ಕಟ್ಟಡಗಳು	0	0	0	0	0	0	0	0	0	0	-
15	4059-80-051-0-32-ನ್ಯಾಯಾಲಯ ಕಟ್ಟಡಗಳು	0	0	0	0	0	0	0	0	0	15	15.00
19	4059-80-051-0-30-386-ಮಿನಿ ವಿಧಾನ ಸೌಧ	0	0	0	0	0	0	0	7.16	7	0	14.16
20	5054-04-800-3-03-172-ಡಾ|| ನಂಜುಂಡಪ್ಪ.ವರದಿ.	0	0	0	0	0	0	0	0	0	0	-

21	5054-04-800-1-09-133-ಡಾ|| ನಂಜುಂಡಪ್ಪ ವರದಿ	0	0	0	0	29.77	0	0	0	102.2	83.47	215.43
22	5054-04-800-3-01-133-ಡಾ|| ನಂಜುಂಡಪ್ಪ ನಬಾರ್ಡ್	0	0	0	0	0	0	0	0	0	33	33.00
23	5054-04-800-1-09-172-ಸುವರ್ಣ ರಸ್ತೆ	0	0	0	0	0	0	0	0	0	232	232.00
24	3054-03-337-0-05-200-ರಾಜ್ಯ ಹೆದ್ದಾರಿ	0	0	0	0	0	0	0	0	0	2.16	2.16
	ಒಟ್ಟು	0.00	43.00	270.64	4.00	347.38	241.93	19.57	43.43	213.48	840.63	2024.06

ಅನುಬಂಧ II

STATEMENT SHOWING THE DETAILS HEADWISE PENDING BILLS AS ON 28-02-10

NAME OF DIVISION : PWP & IWTD Division, Yadgir.

Sl. No.	Name of work	Estimate cost Rs in lakhs	Expdtr. Already incurred upto	Name of the Agency/ Contractor	Pending bill details in Rs: DBR No. & Date	Pending bill details in Rs: Grosss amount of the bill	Pending bill details in Rs: Cheque Amount	Remarks
1	2	3	4	5	6	7	8	9
	3054-04-337-01-09-172- C.M.G.S.Y & SH. Maintenance 3054 (Plan) P.W.D. Sub-Division, Jewargi		Rs in lakhs					
1	Widening of Jewargi-Jeratagi Road Km. To Nelogi Km. 0.00 to 15.00	16.00	0.00	Sri. S.C. Mathapathi	279 of 8/04	324425 00	306643 00	
2	Improvements to road from Andola-Biral Hosur road Km. 0.00 to 5.50 C.C. Vth & part	40.00	22.40	Sri. Basavaraj G. patil	237 of 8/07	282957.00	282957.00	
3	Improvements to road from approach road to N.G.O. Quarters Km.0.00 to 0.60 C.C. IInd & part in Jewargi tq	10.00	8.82	Sri. Malleshappa Kallur	456 of 12/07	100194.00	100194.00	
4	Improvements to road from N.H. 218 Raddewadgi Road Km.0.00 to 4.20 in Jewargi tq	1.40	0.00	Sri. M.S. Jewargi	475 of 12/07	138988.00	127114 00	
5	Improvements to Side drain Raddewadi Kudi Darga road Km.19.00 to 14.00 & fixing Km. Stones & Hectromers stones in Jewargi tq	0.40	0.00	Sri. Ashok S. Jewargi	476 of 12/07	39607.00	36211.00	
6	Improvements to road from Mendewal-Mahoor road Km. 0,00 to 6,60 to 8,00 C.C. IIIrd & part	10 00	6.80	Sri. S.N. Biredar	652 of 2/08	314670.00	289670.00	
7	Pothole filling & Jungle cutting on Srirangapattana-Jewargi road SH-19 Km. 503 to 508	1.00	0.00	Sri. Rajashekar M. Patil	825 of 3/08	98207.00	90633.00	
8	Pothole filling & Jungle cutting on Srirangapattana-Jewargi road SH-19 Km. 509 to 515	1.00	0.00	Sri. Rajashekar M. Patil	826 of 3/08	98572.00	90971.00	
9	Pothole filling & Jungle cutting on Srirangapattana-Jewargi road SH-19 Km. 515 to 521	1.00	0.00	Sri Rajashekar M. Patil	827 of 3/08	99950.00	92248 00	
10	Pothole filling & Jungle cutting on Srirangapattana-Jewargi road SH-19 Km. 527 to 530	1.00	0.00	Sri. Rajashekar M. Patil	829 of 3/08	99832.00	91899.00	
11	Pothole filling & Jungle cutting on Srirangapattana-Jewargi road SH-19 Km. 530 to 532	1.00	0.00	Sri. Rajashekar M. Patil	830 of 3/08	99908.00	91669.00	
12	Estimate for Pothole filling on & Improvements to Kattisangavi Jewargi Via Naribol road Km. 18,00 to 23,00 C C. Ist & part	2.00	0 00	Sri. Hullkantrayya	833 of 3/08	199981.00	182498 00	
13	Estimate for Pothole filling on & Improvements to Andola Biral Hosur road Km.13,00 to 115	2.00	0.00	Sri. Mallikarjun patil	836 of 3/08	199469.00	184807 00	
14	Recarpetting Chickmudbal-Chamnal road Km. 5,80 to 6,00	1.00	0 00	Sri. S.B. Join	902 of 3/08	99498 00	92184 00	
15	Improvements to side shoulder jungle cutting Chickmudbal-Chamnal road Km. 19,10 to 22,00	1.46	0.00	Sri. Hullkantrayya	904 of 3/08	45770.00	45770 00	

1	2	3	4	5	6	7	8	9
16	Patching of potholes Jungle cutting berm cutting & Improvements to side shoulders on C.B. road Km. 0,00 to 0,80 & 9,00 to 15,00	1.90	0.00	Sri. Hulikantrayya	906 of 3/08	183390.00	169810.00	
17	Patching of potholes Jungle cutting berm cutting & on Itga-Jeratagi Badanihal road Km. 23,00 to 26,00	0.80	0.00	Sri. Bheemanna gouda	915 of 3/08	26076 00	24157.00	
18	Providing & depression filling Nadalagi-Aralagundagi road Km. 5,00 to 9,00	1.50	0.00	Sri. Bheemanna gouda	916 of 3/08	98607.00	91359.00	
19	Providing & depression filling & Jungle cutting & Improvements to Side Shoulders Aralagundagi-Kambhavi road Km. 0,00 to 3,00	1.00	0.00	Sri. Siddannagouda S. Malipatil	920 of 3/08	19726.00	19725.00	
20	Providing & depression filling & Jungle cutting & Improvements to Side Shoulders Aralagundagi-Kambhavi road Km. 6,00 to 10,00	1.00	0.00	Sri. Md. Ali Hassan	924 of 3/08	49324.00	49324 00	
21	Improvements to Raddewadi Kudi road Km. 7,00 to 13,20 pothole filling & Improvements to Side shoulders	2.00	0.00	Sri. Manojkumar S. Jewargi	936 of 3/08	68290 00	68290.00	
22	Improvements to road from Kudi Darga road Km 10,20 to 10,30	1.70	0.00	Sri. Ashok S. Jewargi	937of 3/08	169219.00	154063.00	
23	Improvements & Construction of C.C. road & drains Raddewadi Kudi road Km. 0,00 to 0,75	2.00	0.00	Sri. Ashok S. Jewargi	938 of 3/08	99671.00	99671.00	
24	Improvements to Maintenance Itga-Jeratagi Badnihal Km. 4.00 to 10,50	1.40	0.00	Sri. Shivkumar C. Kurikoti	939 of 3/08	139749.00	128118.00	
25	Improvements to Maintenance Itga-Jeratagi Badnihal Km. 7,00 to 9,00 Construction of C.D. works in Jewargi taluka	1.70	0.00	Sri. Shivkumar C. Kurikoti	940 of 3/08	169776.00	155756.00	
26	Estimate pothole filling & Improvements to side shoulder on S.B. road to Yadrami Km. 0,00 to 6,00	1.50	0.00	Sri. Sudhakar G. Joshi	944 of 3/08	149906.00	135170.00	
27	Pothole filling Improvements to Side shoulder NH-218 Kalhangarga cross to Jewargi road Km. 7,10 to 14,00	1.50	0.00	Sri. Sudhakar G. Joshi	946 of 3/08	149842.00	137035.00	
28	Pothole filling Improvements to Side shoulder NH-218 Kalhangarga cross to Jewargi road Km. 0,00 to 7,00	2.00	0.00	Sri. Sudhakar G. Joshi	947 of 3/08	99783.00	99783.00	
29	Filling and depression with maxphalt & berm cutting on S.B. road Km. 16.00 to 18.00	1.00	0.00	Sri. Abdul Alfiz Abdul Rahiman	956 of 3/08	19881.00	19881.00	
30	Filling and depression with maxphalt & berm cutting on Aralagundagi-Kambhavi road Km. 20,10 to 21,00	1.50	0 00	Sri. Abdul Alfiz Abdul Rahiman	958 of 3/08	49739 00	49739.00	
31	Improvements to Mandewal Mahoo road Km. 6,80 to 7,20 C.C. Ist & part	5.00	0.00	Sri. Subash P. Kanagoudar	84 of 6/08	14329.00	14329.00	
32	Improvements to side shoulder side berms jungle clearance paiting & writing letters Km. & Furlong & stone S.B. road Km. 592,50 to 595,50	1.00	0.00	Sri. Varadaraj Deshpande	98 of 6/08	99748.00	92417.00	
33	Improvements to side shoulder side berms jungle clearança paiting & writing letters Km. & Furlong & stone S.B. road Km. 595,50 to 598,00	0.50	0.00	Sri. M.K. Patil	99 of 6/08	49937.00	46267.00	

1	2	3	4	5	6	7	8	9
34	Improvements to side shoulder side berms jungle clearance paiting & writing letters Km. & Furlong & stone S.B. road Km 573,00 to 576,00	1.00	0.00	Sri. S.B, Join Shahapur	100 of 6/08	99974.00	92626.00	
35	Improvements to side shoulder side berms jungle clearance paiting & writing letters Km. & Furlong & stone S.B. road Km. 576,00 to 579,30	1.00	0.00	Sri. S.B, Join Shahapur	101 of 6/08	99929.00	92584.00	
36	Improvements to side shoulder side berms jungle clearance paiting & writing letters Km. & Furlong & stone S.B. road Km. 579,50 to 582,50	1.00	0.00	Sri. S.B, Join Shahapur	103 of 6/08	99946.00	92600.00	
37	Improvements to side shoulder side berms jungle clearance paiting & writing letters Km. & Furlong & stone S.B. road Km. 582.70 to 585.80	1.00	0.00	Sri. B.M. Janapal	104 of 6/08	99929.00	92584.00	
38	Improvements to side shoulder side berms jungle clearance paiting & writing letters Km. & Furlong & stone S.B. road Km. 586,00 to 589,00	1.00	0.00	Sri. Sudhakar G. Joshi	105 of 6/08	99909.00	92566 00	
39	Improvements to side shoulder side berms jungle clearance paiting & writing letters Km. & Furlong & stone S.B. road Km. 589.20 to 592,30	1.00	0.00	Sri. Varadaraj Deshpande	106 of 6/08	99890.00	92548.00	
40	Repairs to Nedalgi to Aralgundagi road from Km. 8,00 to 9,00	2.00	1.00	Sri. S.B.Kori	263 of 9/08	14928.00	14928.00	
41	Improvements to road from Andola Biral_hosur road 2,150 to 3,00 C.C. IInd & final	10.40	9.54	Sri. Vishveshwar reddy	444 of 12/08	190100.00	163771.00	
42	Improvements to road from Itga Jeratagi Badnihal road Km. 1,30 to 3,40 C.C. IInd & final	15.00	16.90	Sri. G.C. Hiremath	519 of 1/09	27924.00	27924.00	
43	Recarpeting to Kalhangra cross to Chigralli-Malli road Km. 0,00 to 4,00 & 5,50 to 6,60 C.C. Ist & part	26.25	0.00	Sri. S.S. Desai	586 of 1/09	3446862.00	2966047.00	
44	Construction of C.D. @ Km. 8,05 & Providing & depression filling & Improvements to side shoulder SH-19 S.B. road to Yadrami Km. 7,50 to 10,00	2.00	0.00	Sri. Sudhakar G. Joshi	716 of 3/09	199782.00	182176.00	
45	Providing & depression filling in Improvements to side shoulder on SH-19 S.B. road to Yadrami Km. 10,00 to 11,00	4.75	0.00	Sri. Kavindra Deshpande	717 of 3/09	474671 00.	439782.00	
46	Providing & depression filling in Improvements to side shoulder on SH-19 S.B. road to Yadrami Km. 12,40 to 15,50	3.80	0.00	Sri. Ravindara B. Patil	718 of 3/09	49762 00	40762.00	
47	Repairs to Nedalagi-Aralagundagi road Km. 5,00	2.00	0.00	Sri. Bheemanna gouda	719 of 3/09	199204.00	180419.00	
48	Imp. To road from Itga-Jeratagi-Badnihal (M.D.R) road Itga-Jeratagi Km. 0,00 to 11,00 C.C. Ist & part	120.00	0.00	Sri. M.S. Patil Shahapur	1000 of 3/09	5358907.00	4616698.00	

1	2	3	4	5	6	7	8	9
49	Widening & Re-Carpetting Kalhanngarga cross to Chigralli-Malli road Km. 0,00 to 4,00 & 5,60 to 6,60 (Km. 0,00 to 6,00) Jewargi Ta C.C.IInd & final	37.16	34.47	Sri. S.S. Desai	35 of 5/09	267431.00	247775.00	
50	Impls. To road from Andola Biral-Hosur road Km. 0,00 to 1,50	15.00	7 34	Sri. G.C. Hiremath	91 of 6/09	80370.00	69240.00	
51	Conducting of Traffic Censes SH on M.D.R. road in Jewargi Ta	0.00	0.00	Sri. Ravindara B. Patil	157 of 7/09	90000.00	83385.00	
52	Widening to Chikmudbol-Chamnal road Km. 0,820 to 3,40 CC IInd & Final	23.35	25.27	Sri. H.S. Deshpande	201 of 8/09	226562.00	171871.00	
53	Improvements to road from J.J. Kudi Darga road in Jewargi taluka 9.00 to 10.00 in Jewargi taluka C.C. VIth & final	20.00	20.21	Sri. Basavaraj G. Patil	816 of 2/10	117020.00	99483.00	
54	Improvements to road from J.J. Kudi Darga road in Jewargi taluka 12.00 to 14.00 & Reconstruction of C.D. work @ Km. 6.70 to 14.00 in Jewargi taluka C.C. IVth & final	16.70	15.13	Sri. Basavaraj G. Patil	817 of 2/10	125316.00	105750.00	
55	Formation of C.C. drain in Biral (K) village limit & Recarpetting Km. 12.00 to 14.00 C C. Ist & part	10.89	0.00	Sri. Ganalingaya Gadda	818 of 2/10	712476.00	611667.00	
					Total	16079915.00	14237648.00	
						160.80 Lakh	142.37 lakh	

STATEMENT SHOWING THE DETAILS HEADWISE PENDING BILLS AS ON 28-02-10

NAME OF DIVISION : PWP & IWTD Division, Yadgir.

Sl. No.	Name of work	Estimate cost Rs in lakhs	Expdtr. Already incurred upto 28/2	Name of the Agency/ Contractor	Pending bill details in Rs: DBR No. & Date	Gross amount of the bill	Cheque Amount	Remarks
1	2	3	4 Rs in lakhs	5	6	7	8	9
	5054-04-800-3-01-436- Nabard Works Rural Roads							
1	Improvements to road from Yelgud-Mangalore Bilwar road C.C. Ivth & part	65.00	68.87	Sri. M.K. Patil	159 of 7/09	501249.00	501249 00	
2	Improvements to road from Kodachi to Yalwar in Jewargi taluka Km. 0,00 to 4,00 (3,50) C.C. Vth & part	60.00	43.21	Sri. Mahaboobsab K. Sigarthalli	423 of 11/09	40000.00	40000.00	
						Total	541249 00 5.41 lakhs	
	5054-04-800-3-02-436- Nabard Works Rural Bridge							
1	Construction of Bridge near Yatnal Village on Kadkole to Malli road CC Vth & Part	105.00	75.41	Shri Hulikantraya	223 of 8/09	1109646.00	1109646 00	
2	Construction of Bridge near Yatnal Village on Kadkole to Malli road CC Vith & Part	105.00	92.35	Shri Hulikantraya	483 of 12/09	3189022.00	2699669.00	
					Total	4298668.00 42.98 lakhs	3809315.00 38.09 lakhs	
	5054-04-800-8-03-172 Dr. Nalundappa Report							
1	Improvements to road from Kudi Darga Via Banamagi road NH-218 Km. 0,00 to 14,20 Widening of road Km. 0,0 to 2,80 C.C. IIIrd & final	20.00	22.28	Sri. Kashiraya gouda	518 of 1/09	48177 00	41504.00	
2	Widening of Aralagundagi-Kembhavi road Km. 21 to 23 in Jewargi taluka	15.99	11.28	Sri. G.H. Biradar	587 of 1/09	500000 00	431250.00	
3	Widening of Kattaangavi-Jewargi road Via Naribol road Km. 15 to 20 in Jewargi taluka C.C. IInd part	20.00	21.47	Sri. Basavaraj G. Patil	874 of 3/09	3888.00	3888 00	
					Total	552065.00 5.52 lakhs	476642.00 4.76 lakhs	
	5054-03-337-0-02-172 (Plan O.R.F.)							
1	Impts. To road from Nedalagi Aralagundagi road Km 5,00 to 6,00 C.C. Ist & part in Jewargi taluka	20.00	2.00	Sri. Kaha Abdul Majeed	282 of 9/09	845674 00	845674.00	
2	Improvements to road from Nedalagi to Halgatarga Km. 5.00 to 6.00 in Jewargi taluka	20.00	10.21	Sri. Khaja Abdul Majeed	634 of 1/10	1064723 00	867259 00	
3	Improvements to road from Kellur-Andola road Jainapur C.C. Ist & part in Jewargi taluka	12.00	0.00	Sri. Basannagouda S. Malipatil Andola	810 of 2/10	1255160 00	1066733 00	
4	Improvements to Recarpetting to Srirangapattana-Bidar road ro Yadrami Km. 8.00 to 9.00 10.00 to 12.00 & 13.00 to 14.00 C.C. Ist & part in Jewargi taluka	30.00	0.00	Sri. Kallannagouda Patil	814 of 2/10	2643325.00	2227439.00	

19TH MARCH 2010

1	2	3	4	5	6	7	8	9
5	Improvements to road from Srirangapattana-Bidar Ganwar to Km. 0.00 to 3.40 C.C. IInd & final in Jewargi taluka	33.00	27.28	Sri. Basavaraj G. Patil	820 of 2/10	29525.00	29525.00	
					Total	5838407.00	5036830.00	
						58.39 lakh	50.36 lakh	
	5054 SC SP Plan							
1	Improvements to road from Srirangapattan-Jewargi road SH-19 In Selected road Km. 505,00 to 538,00 in Jewargi Tq C.C. IINd & part	19.04	4.38	Sri. M.S. Patil	73 of 6/09	514021.00	447988.00	
					Total	514021.00	447988.00	
						5.14 lakh	4.47 lakh.	
	5054 S.C.S.P. Nabard Road							
1	Imprvoements to Selected reaches road from Jewargi cross to Madrki of Srirangapattana- Bidar road SH-19 Km. 572,00 to 586,00 (573,00 to 598,00) in Jewargi taluka C.C. IInd & Part	18.13	12.34	Sri. Subash K	505 of 01/09	291400.00	291400.00	
2	Tender Notfication Advertisement bill	0.00	0.00	V.PL Time Group	191 of 07/09	51082.00	51082.00	
					Total	342482.00	342482.00	
						3.42 lakh.	3.42 lakh.	
	5054-03-337-0-081-172 S.C.S. P. KSHIP							
1	Imprvoements to Selected reaches Srirangapattana- Jewargi road Km. 538,00 to 550,00 C.C. Ist & Part	6.44	0.00	Sri. Rudragouda B.R.	359 of 11/08	195857.00	195857.00	
2	Imprvoements to Selected reaches road from Jewargi cross to Madrki of Srirangapattana- Bidar road SH-19 Km. 570,00 to 585,00 (573,00 to 598,00) in Jewargi taluka C.C. Ist & Part	18.13	0.00	Sri. Subash K	468 of 01/09	331650.00	331650.00	
					Total	527507.00	527507.00	
						5.27 lakh.	5.27 lakh	
	5054 T.S.P. Nabard Road							
1	Improvements to road from Andola Biral Housur road Km. 14,00 to 14,50	2.90	0.00	Sri.Deepak P. Kulgeri	990 of 03/09	274900.00	249942.00	
2	Repairs to Bheema Bridge C.D's in Jewargi road Via Naribol	0.65	0.00	Sri.Mallikarjun Esharappa	992 of 03/09	64427.00	59079.00	
					Total	339327.00	309021.00	
						3.39 lakh.	3.09 lakh.	

1	2	3	4	5	6	7	8	9
	5054 T.S.P. KSHIP							
1	Improvements to road from Jewargi cross to Madarki of Srirangapattana-Bidar Road SH-19 Km. 572.00 to 585.00 in Jewargi taluka	10.00	1.00	Sri. Chandrakant B. Kussti	517 of 01/09	455929.00	455929.00	
					Total	455929.00	455929.00	
						4.55 lakh	4.55 lakh.	

ಶ್ರೀ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ ನಾರಿಬೋಳ್ (ಜೇವರ್ಗಿ): ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಗುಲ್ಬರ್ಗಾ ಮತ್ತು ಯಾದಗಿರಿ ವಿಭಾಗಗಳಲ್ಲಿ ಲೋಕೋಪಯೋಗಿ ಇಲಾಖೆಯ ಲೆಕ್ಕ ಶೀರ್ಷಿಕೆ 5054 ಮತ್ತು ಲೆಕ್ಕ ಶೀರ್ಷಿಕೆ 3054 ಅಡಿಯಲ್ಲಿ ಕಾಮಗಾರಿಗಳು ಪೂರ್ಣ ಗೊಂಡಿದ್ದು, ಅದರಲ್ಲಿ ಗುತ್ತಿಗೆದಾರರಿಗೆ ಯಾವುದೇ ರೀತಿಯ ಪೇಮೆಂಟ್ ಆಗಿಲ್ಲ. ಆ ಒಂದು ಹಿನ್ನಲೆಯಲ್ಲಿ 5054 ಗುಲ್ಬರ್ಗಾ ಮತ್ತು ಯಾದಗಿರಿ ಎರಡೂ ಸೇರಿ 2477.66 ಲಕ್ಷ ರೂ. ಮತ್ತು 3054 ಅಡಿಯಲ್ಲಿ 1288.76 ಲಕ್ಷ ರೂ.ಗಳ ಪೇಮೆಂಟ್ ಅನ್ನು ಒದಗಿಸಬೇಕಾಗಿದೆ. ಇವತ್ತು ಗುತ್ತಿಗೆದಾರರು ಕೆಲಸವನ್ನು ಮಾಡಿ ಬಡ್ಡಿ ಮುಖಾಂತರ, Finance ಮುಖಾಂತರ ದುಡ್ಡನ್ನು ತಂದು ಗುತ್ತಿಗೆದಾರರು ಬಹಳಷ್ಟು ಸಂಕಷ್ಟದಲ್ಲಿದ್ದಾರೆ. ಗುತ್ತಿಗೆದಾರರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ, ಮಾನ್ಯ ಸಚಿವರು ಇಲ್ಲವೆಂದು ಹೇಳಿದ್ದಾರೆ. ಇವತ್ತು ನಾವು localನಲ್ಲೇ ಇದ್ದು, ಗುತ್ತಿಗೆದಾರರು ಬಹಳ ಸಂಕಷ್ಟದಲ್ಲಿರುವುದರಿಂದ ಆದಷ್ಟು ಬೇಗನೆ ಗುತ್ತಿಗೆದಾರರಿಗೆ ಬಿಲ್ ಅನ್ನು ಪಾವತಿಸಬೇಕೆಂದು ರಾಜ್ಯ ಸರ್ಕಾರ, ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಅಧ್ಯಕ್ಷರ ಮುಖಾಂತರ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಸದಸ್ಯರು ಹೇಳಿದ ಹಾಗೆ, 5054 ಮತ್ತು 3054ನ ಎರಡು head ನಲ್ಲಿ ಹಣ ಬಿಡುಗಡೆಯಾಗಬೇಕಾಗಿದೆ. ಬಾಕಿ ಇರುವುದನ್ನು ನನ್ನ ಗಮನಕ್ಕೆ ತಂದಿದ್ದಾರೆ. ಈಗ 320 ಕೋಟಿ ರೂ.ಗಳ ಹಣ ಬಿಡುಗಡೆಯಾಗಿದೆ. ಅದರಲ್ಲಿ ಕೆಲವು ಮಟ್ಟಿಗೆ ಹಣ ಸಂದಾಯ ವಾಗುತ್ತದೆ. ಮತ್ತೆ 300 ಕೋಟಿ ರೂ.ಗಳ ಹಣ ಬಿಡುಗಡೆಯಾಗಲಿದೆ. ಬಿಡುಗಡೆಯಾದ ತಕ್ಷಣ ಪೂರ್ತಿ ಹಣ ಬಿಡುಗಡೆ ಮಾಡುವಂಥ ಕೆಲಸವನ್ನು ಮಾಡಿಸಿಕೊಡುತ್ತೇನೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ ನಾರಿಬೋಳ್ : ಮಾನ್ಯ ಅಧ್ಯಕ್ಷರೆ, 2004 ಮತ್ತು 2007–08ರಲ್ಲಿರತಕ್ಕಂಥ ಕಾಮಗಾರಿಗೆ ಬಿಲ್ ಇನ್ನೂ ಆಗಿಲ್ಲ. ಅದಕ್ಕೆ ಮಾನ್ಯ ಸಚಿವರು ಆದಷ್ಟು ಬೇಗನೆ ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಮತ್ತೊಮ್ಮೆ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ : ಆಯಿತು.

ಚಿತ್ರದುರ್ಗ ನಗರದಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಗಾಜಿನ ಮನೆ ನಿರ್ಮಾಣ

133 (1509) ಶ್ರೀ ಬಸವರಾಜನ್ ಎಸ್.ಕೆ (ಚಿತ್ರದುರ್ಗ) : ಮಾನ್ಯ ತೋಟಗಾರಿಕೆ ಮತ್ತು ಬಂಧೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ನಗರದಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಗಾಜಿನ ಮನೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಗಾಜಿನ ಮನೆ ನಿರ್ಮಿಸಲು ನಗರದ ಯಾವ ಭಾಗದಲ್ಲಿ ಸ್ಥಳ ಗುರುತಿಸಲಾಗಿದೆ;

ಇ) ಹಾಗಿದ್ದಲ್ಲಿ, ಗಾಜಿನ ಮನೆಯನ್ನು ಯಾವಾಗ ನಿರ್ಮಿಸ ಲಾಗುವುದು;

ಈ) ಈ ಗಾಜಿನ ಮನೆ ನಿರ್ಮಾಣಕ್ಕಾಗಿ ಸರ್ಕಾರ ಅನುಸರಿಸುವ ರೂಪರೇಷೆಗಳೇನು (ರೂಪುರೇಷೆಗಳ ಪ್ರತಿಯನ್ನು ನೀಡುವುದು)

ಉ) ಗಾಜಿನ ಮನೆ ನಿರ್ಮಾಣಕ್ಕಾಗಿ ಸರ್ಕಾರ ಅನುದಾನವನ್ನು ನಿಗಧಿಪಡಿಸಿದೆಯೇ;

ಊ) ಹಾಗಿದ್ದಲ್ಲಿ, ಎಷ್ಟು ಅನುದಾನವನ್ನು ನಿಗಧಿಪಡಿಸಲಾಗಿದೆ (ವಿವರ ನೀಡುವುದು);

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) ಇಲ್ಲ.

ಆ) ಇ) ಈ) ಉ) ಮತ್ತು ಊ) ಉದ್ಭವಿಸುವುದಿಲ್ಲ.

ಶ್ರೀ ಬಸವರಾಜನ್ ಎಸ್.ಕೆ (ಚಿತ್ರದುರ್ಗ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಚಿತ್ರದುರ್ಗ ನಗರದಲ್ಲಿ ಗಾಜಿನ ಮನೆ ಬಹಳ ಅವಶ್ಯಕತೆ ಇದೆ. ಪ್ರತಿ ವರ್ಷ ಫಲಪುಷ್ಪ ಪ್ರದರ್ಶನ ಐದು ದಿನಗಳ ಕಾಲ ನಡೆಯುತ್ತದೆ. ಆ ಸಂದರ್ಭದಲ್ಲಿ ಮಳೆಗಾಲವಿರುವು ದರಿಂದ ಈಗಿರುವ ವ್ಯವಸ್ಥೆಯಲ್ಲಿ ಮಾಡುವುದು ಬಹಳ ಕಷ್ಟವಾಗುತ್ತಿದೆ. ಬಹಳ ಜನ ನಾಗರೀಕರು, ರೈತರು, ಅದರಲ್ಲಿ ಭಾಗವಹಿಸುತ್ತಿದ್ದಾರೆ ಮತ್ತು ತೋಟಗಾರಿಕೆ ಬೆಳೆಗಳನ್ನು ಹೆಚ್ಚು ಬೆಳೆಯುತ್ತಿರುವುದರಿಂದ ರೈತರಿಗೆ ಆಗಾಗ್ಗೆ

ಅಲ್ಲಿ ಮಾಹಿತಿಯನ್ನು ಮತ್ತು ಪ್ರಾತ್ಯಕ್ಷಿಕೆಯನ್ನು ನಡೆಸಬೇಕಾಗುತ್ತದೆ. ಸಾರ್ವಜನಿಕ ಕಾರ್ಯಕ್ರಮಗಳಿಗೂ ಸಹ ಅನುಕೂಲವಾಗುತ್ತದೆ. ಆ ಕಾರಣ ತಾವೂ ಸರ್ಕಾರಕ್ಕೆ ಒತ್ತಾಯ ಮಾಡಿ ಗಾಜಿನ ಮನೆಯನ್ನು ನಿರ್ಮಾಣ ಮಾಡಿಸಲಿಕ್ಕೆ ತಾವು ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು) : ಮಾನ್ಯ ಅಧ್ಯಕ್ಷರೆ, ಚಿತ್ರದುರ್ಗ ನಗರದಲ್ಲಿ ಗಾಜಿನ ಮನೆ ನಿರ್ಮಾಣ ಮಾಡಬೇಕೆಂದು ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಇವತ್ತಿನ ಪರಿಸ್ಥಿತಿಯನ್ನು ನನಗೆ ತಿಳಿಸಿ ಹೇಳಿದರು. ಮಾನ್ಯ ಸದಸ್ಯರು ಏನು ಸದನದ ಗಮನಕ್ಕೆ ತರುತ್ತಿದ್ದಾರೋ ಬರುವ ದಿನಗಳಲ್ಲಿ ನೀಲಿ ನಕ್ಷೆಯನ್ನು ತಯಾರು ಮಾಡುತ್ತೇವೆ. ಅದರ ಜೊತೆಗೆ ಶಾಸಕರು ಆ ಸ್ಥಳಕ್ಕೆ ಭೇಟಿ ಕೊಟ್ಟಾಗ, ಅಲ್ಲಿ ಆರು ಎಕರೆ ನಮ್ಮ ಜಮೀನು ಇದೆ. ಶಾಸಕರೂ ಹಣವನ್ನು ಕೊಡುತ್ತೇವೆಂದು ಹೇಳಿದ್ದಾರೆ ಮತ್ತು ನಮ್ಮ ಇಲಾಖೆಯಿಂದಲೂ ಹಣವನ್ನು ಹಾಕಿ ಮುಂದಿನ ದಿನಗಳಲ್ಲಿ ಗಾಜಿನ ಮನೆಯನ್ನು ನಿರ್ಮಾಣ ಮಾಡುವಂಥ ಕಾರ್ಯಕ್ರಮ ವನ್ನು ಹಾಕಿಕೊಳ್ಳುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಕೊಳ್ಳೇಗಾಲದಿಂದ ಮಲೈಮಹದೇಶ್ವರ ಬೆಟ್ಟಕ್ಕೆ ಹೋಗುವ ರಸ್ತೆ ಅಭಿವೃದ್ಧಿ

135 (1126) ಶ್ರೀ ನರೇಂದ್ರ ಆರ್. (ಹನೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲದಿಂದ ಮಲೈಮಹದೇಶ್ವರ ಬೆಟ್ಟಕ್ಕೆ ಹೋಗುವ ರಸ್ತೆಗಳು ತುಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅವುಗಳ ದುರಸ್ಥಿ ಹಾಗೂ ನಿರ್ವಹಣೆ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು);

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಗಮನಕ್ಕೆ ಬಂದಿದೆ.

ಆ) ಕೊಳ್ಳೇಗಾಲದ ಮಲೈ ಮಹದೇಶ್ವರ ಬೆಟ್ಟದ ರಸ್ತೆಯು ರಾಹೆ-79 ಆಗಿದ್ದು ಸರಪಳಿ 59-59 ರಿಂದ 156.60 ಕಿಮೀ ವರೆಗೆ ಒಟ್ಟು 97.31

ಕಿಮೀ ಉದ್ದವಿದ್ದು, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹಾದು ಹೋಗುತ್ತಿರುತ್ತದೆ.

ಸದರಿ ರಸ್ತೆಯ ಸರಪಳಿ ಕಿಮೀ 59.59 ರಿಂದ 60.00, 70.00 ರಿಂದ 92.60, 97.60 ರಿಂದ 112.40, 117.40 ರಿಂದ 122.20 ಕಿಮೀ ಒಟ್ಟು 42.61 ಕಿಮೀ ಉದ್ದವು ಸುಸ್ಥಿತಿಯಲ್ಲಿದ್ದು ಸುಗಮ ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ.

ಉಳಿಕೆ ಸರಪಳಿಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ. 49.00 ಲಕ್ಷ ಅನುದಾನದಲ್ಲಿ 54.70 ಕಿಮೀ ಉದ್ದದ ರಸ್ತೆಯಲ್ಲಿನ ಗುಂಡಿ ಮುಚ್ಚುವ ಕಾಮಗಾರಿಗಳನ್ನು ಕೈಗೊಂಡಿದ್ದು, ಸಂಚಾರಕ್ಕೆ ಯೋಗ್ಯವಾಗಿಡಲಾಗಿದೆ.

ಶ್ರೀ ನರೇಂದ್ರ ಆರ್ (ಹನೂರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಅವರೇ ಒಪ್ಪಿಕೊಂಡಿದ್ದಾರೆ ಅದೇನೆಂದರೆ, 97 ಕಿ.ಮೀ. ರಸ್ತೆಯಲ್ಲಿ 55 ಕಿ.ಮೀ ರಸ್ತೆ ಸಂಚಾರಕ್ಕೆ ಯೋಗ್ಯವಾಗಿಲ್ಲ ಅದಕ್ಕೆ ಗುಂಡಿ ಮುಚ್ಚುವಂಥ ಕೆಲಸವನ್ನು ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಹೊಸ ರಸ್ತೆಯನ್ನು ಮಾಡಿಕೊಡಿ ಎಂದು ನಾನು ಒಂದು ವರ್ಷದಿಂದಲೂ ಕೇಳುತ್ತಿದ್ದೇನೆ. ಇದು ಯಾತ್ರಾ ಸ್ಥಳ ದಿನಕ್ಕೆ ಸಾವಿರಾರು ವಾಹನಗಳು ಇಲ್ಲಿಂದ ಓಡಾಡುತ್ತವೆ. ನಮ್ಮ ರಾಜ್ಯದಿಂದ ಬರುತ್ತವೆ. ತಮಿಳುನಾಡು, ಆಂಧ್ರದಿಂದ ಅಲ್ಲಿಗೆ ಬರುತ್ತಾರೆ. ಆದರೆ ರಸ್ತೆ 50 ಕಿ.ಮೀ ಓಡಾಡುವಂಥ ಸುಸ್ಥಿತಿಯಲ್ಲಿ ಇಲ್ಲ. ನಮಗೆ ಹೊಸ ರಸ್ತೆ ಮಾಡಿ ಕೊಡಿ ಎಂದರೆ ಅವರು ಗುಂಡಿ ಮುಚ್ಚುವಂಥ ಕಾರ್ಯವನ್ನು ಮಾಡಿಕೊಡುತ್ತೇವೆ ಎಂದು ಹೇಳುತ್ತಾರೆ. ಕಳೆದ ಬಾರಿಯೂ ಗುಂಡಿ ಮುಚ್ಚುತ್ತೇವೆಂದು ಹೇಳಿದರು. ಈ ಸಲವೂ ಗುಂಡಿಯನ್ನು ಮುಚ್ಚಿದ್ದಾರೆ. ಆದರೆ ಮುಚ್ಚಿರತಕ್ಕಂಥ ಗುಂಡಿ ಒಂದು ತಿಂಗಳು ಅಥವಾ ಎರಡು ತಿಂಗಳು ಸಹಾ ಅದನ್ನು ಯೋಗ್ಯವಾಗಿ ಬಳಸುವುದಕ್ಕೆ ಬರುತ್ತಿಲ್ಲ. ಆದ್ದರಿಂದ 58 ಕಿ.ಮೀ ರಸ್ತೆ ಇರುವುದನ್ನು ಹೊಸದಾಗಿ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವಂಥ ಸ್ಥಳದಲ್ಲಿ ವಾಹನಗಳ ದಟ್ಟಣೆಯನ್ನು ಗಮನದಲ್ಲಿಟ್ಟು ಕೊಂಡಿದ್ದೇವೆ. ನಾವು ಅದಕ್ಕೆ ಒಂದು ಡಿಪಿಆರ್ ಮಾಡಿ 97.31 ಕಿ.ಮೀ ಅನ್ನು ಒಂದು VGF (Viability Gap Fund) ನಲ್ಲಿ ತೆಗೆದುಕೊಳ್ಳಬೇಕೆನ್ನುವ ವಿಚಾರದಲ್ಲಿ ನಾವು ಮಾಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಅದನ್ನು ಪಿಪಿಪಿ ಮಾಡೆಲ್‌ನಲ್ಲಿ ಮಾಡುವುದಕ್ಕೆ ಈಗಾಗಲೇ 97 ಕಿ.ಮೀ. ಗೆ ಮಾಡಿಸುತ್ತಿದ್ದೇವೆ. ಅತೀ ಶೀಘ್ರದಲ್ಲಿ ಇದಕ್ಕೆ ಟೆಂಡರ್ ಅನ್ನು ಕರೆದು ಕಾರ್ಯಕ್ರಮವನ್ನು ಮಾಡಿಸಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೇವೆ ಎನ್ನುವುದನ್ನು ಅವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈ ರಸ್ತೆ ಬಹಳ ಪ್ರಮುಖವಾದಂಥ ರಸ್ತೆ. ಕರ್ನಾಟಕ, ತಮಿಳುನಾಡು ಸಂಚಾರವಾಗುವಂಥ ರಸ್ತೆ ಮತ್ತು ತಮಗೆಲ್ಲಾ ಗೊತ್ತಿರುವ ಹಾಗೆ ಮಲೈ ಮಹದೇಶ್ವರ ಬೆಟ್ಟ ಬಹಳ ಕರ್ನಾಟಕದಲ್ಲೇ ಅತಿ ಹೆಚ್ಚು ವರಮಾನ ತಂದುಕೊಡುವಂಥ ಒಂದು ಧಾರ್ಮಿಕ ಕ್ಷೇತ್ರವಾಗಿದೆ. ಹಬ್ಬ ಹರಿದಿನಗಳಲ್ಲಿ ಲಕ್ಷಾಂತರ ಜನ ಭಕ್ತಾದಿಗಳು ಈ ದೇವಸ್ಥಾನಕ್ಕೆ ಬರುತ್ತಾರೆ. ಮೊನ್ನೆ ನಡೆದ ಯುಗಾದಿ ಹಬ್ಬಕ್ಕೆ 4 ರಿಂದ 5 ಲಕ್ಷ ಜನ ತಮಿಳುನಾಡು ಮತ್ತು ಕರ್ನಾಟಕ ಎರಡು ಕಡೆಯಿಂದ ಹಬ್ಬದ ಸಂದರ್ಭದಲ್ಲಿ ದರ್ಶನಕ್ಕಾಗಿ ಭಾಗವಹಿಸುತ್ತಾರೆ. ಈ ರಸ್ತೆ ಹದಗೆಟ್ಟಿರುವುದರಿಂದ ಅಂತಹ ಸಂದರ್ಭದಲ್ಲಿ ಅಲ್ಲಲ್ಲಿ ವಾಹನಗಳು ನಿಂತುಕೊಂಡು ನಾನಾ ರೀತಿಯ ಅಡಚಣೆಗಳಿಂದ ಸಂಚಾರ ಸುಗಮವಾಗಲು ಸಾಧ್ಯವಾಗದೇ ಎಷ್ಟೋ ಜನ ಹಬ್ಬದ ದಿನ ದೇವಸ್ಥಾನಕ್ಕೆ ದರ್ಶನಕ್ಕೆ ಹೋಗುವುದಕ್ಕೆ ಸಾಧ್ಯವಾಗದೇ ಇರುವ ಸನ್ನಿವೇಶ ಕೂಡ ನಿರ್ಮಾಣವಾಗಿದೆ. ಮಾನ್ಯ ಸಚಿವರು ನಮ್ಮ ಭಾಗಕ್ಕೆ ಒಮ್ಮೆ ಭೇಟಿ ಕೊಟ್ಟು, ನಮ್ಮ ಮಹದೇಶ್ವರ ಬೆಟ್ಟದ ರಸ್ತೆಯನ್ನು ವೀಕ್ಷಣೆ ಮಾಡಿ ಆದಷ್ಟು ಬೇಗನೆ ಅದಕ್ಕೆ ಸುಧಾರಣೆ ಮಾಡಿಕೊಡಬೇಕು. ಮತ್ತೆ ಒಂದು ರಾಷ್ಟ್ರಪತಿ ಭವನ ಎಂದು ಹೇಳಿ, ಅದಕ್ಕೆ 3-4 ಕೋಟಿ ರೂ.ಗಳನ್ನು ವೆಚ್ಚ ಮಾಡಿ ಒಂದು ದೊಡ್ಡ ಗೆಸ್ಟ್‌ಹೌಸ್ ಅನ್ನು ಕಟ್ಟಿದ್ದಾರೆ. ಅದು ಉದ್ಘಾಟನೆ ಆಗಿ ಎರಡು ವರ್ಷಗಳ ಮೇಲಾಗಿದ್ದರೂ ಕೂಡ ಇದುವರೆಗೂ ಮಾನ್ಯ ಮುಖ್ಯಮಂತ್ರಿಗಳಾದಿಯಾಗಿ ಅನೇಕ ಸಚಿವರು ಅಲ್ಲಿಗೆ ಬಂದರೂ ಆ ಗೆಸ್ಟ್‌ಹೌಸ್‌ನಲ್ಲಿ ಹೋಗಿ ವಿಶ್ರಾಂತಿ ಪಡೆಯಲು ಸಾಧ್ಯವಾಗದೇ ಇರುವಂಥ ಒಂದು ವಾತಾವರಣವಿದೆ. ಎಷ್ಟೊಂದು ಸರ್ಕಾರದ ಹಣ ಖರ್ಚು ಮಾಡಿ ಅದು ಉಪಯೋಗವಾಗದೇ ಇದ್ದರೆ national waste ಆಗುತ್ತದೆ. ಇದನ್ನು ತಮ್ಮ ಗಮನಕ್ಕೂ ಅನೇಕ ಬಾರಿ ನಾವು ತಂದಿದ್ದೇವೆ. ಅದಕ್ಕೆ ಪೀಠೋಪಕರಣಗಳನ್ನು ಒದಗಿಸತಕ್ಕಂಥದ್ದು ಮತ್ತೆ ಬೇಕಾದಂಥ ಸಿಬ್ಬಂದಿಯನ್ನು ವಿಶೇಷವಾಗಿ ಅಲ್ಲಿ ನೋಡಿಕೊಳ್ಳುವಂಥ ಒಂದು ವ್ಯವಸ್ಥೆಯನ್ನು ತಾವು ಕೂಡಲೇ ಮಾಡಿದರೆ ಸಾರ್ವಜನಿಕರಿಗೆ

ಅನುಕೂಲವಾಗುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಸದಸ್ಯರಾದ ಶ್ರೀ ಮಹದೇವ ಪ್ರಸಾದ್‌ರವರು ಅದೇ ಪ್ರದೇಶದಿಂದ ಬಂದಿರುವವರಾಗಿದ್ದು, ಆ ರಸ್ತೆ ಬಗ್ಗೆ ಅವರಿಗಿರುವ ಕಳಕಳಿ ಬಗ್ಗೆ ನನಗೆ ಗೊತ್ತಿದೆ. ನಾನು ಒಂದು ಸಲ ಅಲ್ಲಿಗೆ ಹೋಗಿ ಬಂದಿದ್ದೇನೆ. ಮತ್ತೊಂದು ಸಲ ಹೋಗಬೇಕೆಂದರೆ, ಅವಕಾಶ ಒದಗಿದಾಗ ಹೋಗಿ ಬರುತ್ತೇನೆ. ಈಗ EGF ನಲ್ಲಿ DPR ಮಾಡಿರುವುದನ್ನು ನಿಮ್ಮ ಗಮನಕ್ಕೆ ತಂದಿದ್ದೇವೆ. ಇದರ ಜೊತೆಗೆ, K-SHIP ನಲ್ಲಿ ಇದರ ಪ್ರಸ್ತಾವನೆ ಇತ್ತು. ಹನೂರಿನಿಂದ ಮಹದೇಶ್ವರ ಬೆಟ್ಟದವರೆಗೆ ರಸ್ತೆ ಮಾಡಿದರಾಯಿತು ಎಂಬ ಆಲೋಚನೆ ಇತ್ತು. ಆದರೆ, ಸದ್ಯದಲ್ಲಿ ಅದಕ್ಕೆ ಅವಕಾಶಗಳು ಕಡಿಮೆ ಇರುವುದರಿಂದ, ಅದನ್ನು EGFನಲ್ಲಿ ತೆಗೆದು ಕೊಂಡು, ಸುಮಾರು 97 ಕಿಲೋಮೀಟರ್‌ಗಳ ರಸ್ತೆ ಮಾಡಿಸಬೇಕೆಂದು DPR ಮಾಡಿಸುತ್ತಿದ್ದೇವೆ. ಇದು ತಮ್ಮ ಗಮನಕ್ಕೆ ಬಂದಿರಬಹುದೆಂದು ನಾನು ಭಾವಿಸಿದ್ದೇನೆ. ಜೊತೆಗೆ, 4 ಕೋಟಿ ರೂ.ಗಳನ್ನು ಖರ್ಚು ಮಾಡಿ ಕಟ್ಟಿರುವ ಕಟ್ಟಡಕ್ಕೆ ಪೀಠೋಪಕರಣಗಳಿಲ್ಲದೆ ಉದ್ಘಾಟನೆಯಾಗಿದೆಯೆಂಬ ಮಾತನ್ನು ಅವರು ಒಪ್ಪಿಕೊಳ್ಳುತ್ತಿದ್ದಾರೆ. ಈ ಕೆಲಸವನ್ನು 2010–11ನೇ ಸಾಲಿನಲ್ಲಿ ಮಾಡಿಸಿಕೊಡುವುದಾಗಿ ಅವರಿಗೆ ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಹದೇಶ್ವರ ಬೆಟ್ಟದಲ್ಲಿ ಒಂದು ಸಬ್ ಡಿವಿಜನ್ ಇದೆ. ಆದರೆ, ಅಲ್ಲಿಗೆ ಅಧಿಕಾರಿಗಳು ಬರುವುದಿಲ್ಲ. ಸಮಸ್ಯೆ ಏನೆಂದರೆ, ಬೆಟ್ಟದಲ್ಲಿರುವ ಆ ಸಬ್ ಡಿವಿಜನ್‌ನಲ್ಲಿ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಸುಮಾರು 15 ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದಾರೆ. ಅಲ್ಲಿಗೆ ಯಾರೇ ಒತ್ತಡ ತಂದು ಬರಬೇಕೆಂದು ಯಾರೂ ಅಪೇಕ್ಷಿಸುವುದಿಲ್ಲ. ಆದುದರಿಂದ, ಅಲ್ಲಿ ಜ್ಯೂನಿಯರ್ ಇಂಜಿನಿಯರ್‌ಗಳನ್ನು ಹೊರತುಪಡಿಸಿ ಬೇರೆ ಸಿಬ್ಬಂದಿ ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಆದುದರಿಂದ, ಖಾಲಿ ಇರುವ ಹುದ್ದೆಗಳನ್ನು ಭರ್ತಿಗೊಳಿಸುವ ಕೆಲಸವನ್ನು ತಾವು ಮಾಡಬೇಕಾಗುತ್ತದೆ.

ಶ್ರೀ ಸಿ.ಎಂ. ಉದಾಸಿ : ಪರಿಗಣಿಸಲಾಗುವುದು.

ಬೆಳಗಾವಿ ಜಿಲ್ಲೆಯಲ್ಲಿರುವ ನ್ಯಾಯಬೆಲೆ ಅಂಗಡಿ ಕುರಿತು

124 (1510) ಶ್ರೀ ಕಾಕಾಸಾಹೇಬ್ ಪಾಂಡುರಂಗ ಪಾಟೀಲ್ (ನಿಪ್ಪಾಣಿ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು);

ಆ) ಅವುಗಳಲ್ಲಿ ಮುಚ್ಚಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು);

ಇ) ಚಾಲ್ತಿ ವರ್ಷದಲ್ಲಿ ಜನಸಂಖ್ಯೆ ಆಧಾರದ ಮೇಲೆ ಹೊಸದಾಗಿ ನ್ಯಾಯಬೆಲೆ ಅಂಗಡಿ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಈ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಹಾಲಪ್ಪ (ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 1,687 ನ್ಯಾಯಬೆಲೆ ಅಂಗಡಿಗಳು ಇರುತ್ತವೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ :-

ಕ್ರ ಸಂ.	ತಾಲ್ಲೂಕಿನ ಹೆಸರು	ನ್ಯಾಯಬೆಲೆ ಅಂಗಡಿಗಳ ಸಂಖ್ಯೆ
1	ಬೆಳಗಾವಿ (ಅಪ)	165
2	ಬೆಳಗಾವಿ (ಗ್ರಾ)	165
3	ಖಾನಾಪುರ	136
4	ಹುಕ್ಕೇರಿ	143
5	ಬೈಲಹೊಂಗಲ	143
6	ಸದತ್ತಿ	127
7	ರಾಮದುರ್ಗ	121
8	ಗೋಕಾಕ್	193

9	ಚಿಕ್ಕೋಡಿ	215
10	ಅಥಣಿ	140
11	ರಾಯಭಾಗ	139
	ಒಟ್ಟು	**1687**

ಆ) ಮೇಲಿನವುಗಳಲ್ಲಿ ಕರ್ನಾಟಕ ಅಗತ್ಯ ವಸ್ತುಗಳ (ಸಾವಿಪ) ನಿಯಂತ್ರಣಾ ಆದೇಶ 1992 ರ ನಿಯಮಗಳ ಉಲ್ಲಂಘನೆ ಮಾಡಿದ್ದರಿಂದ 18 ನ್ಯಾಯಬೆಲೆ ಅಂಗಡಿಗಳನ್ನು ರದ್ದುಪಡಿಸಲಾಗಿರುತ್ತದೆ. ತಾಲ್ಲೂಕುವಾರು ವಿವರ ಕೆಳಗಿನಂತಿದೆ:-

ಕ್ರ ಸಂ.	ತಾಲ್ಲೂಕಿನ ಹೆಸರು	ರದ್ದುಪಡಿಸಿದ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ (ಮಾರ್ಚ್ 2009 ರಿಂದ ಫೆಬ್ರವರಿ 2010ರ ವರೆಗೆ)
1	ಬೆಳಗಾವಿ (ಅಪ)	1
2	ಬೆಳಗಾವಿ (ಗ್ರಾ)	0
3	ಖಾನಾಪುರ	1
4	ಹುಕ್ಕೇರಿ	1
5	ಬೈಲಹೊಂಗಲ	1
6	ಸದತ್ತಿ	3
7	ರಾಮದುರ್ಗ	1
8	ಗೋಕಾಕ್	0
9	ಚಿಕ್ಕೋಡಿ	9
10	ಅಥಣಿ	1
11	ರಾಯಭಾಗ	0
	ಒಟ್ಟು	**18**

ಇ) ಇಲ್ಲ.

ಆದರೆ, 1992ರ ಅವಶ್ಯಕ ವಸ್ತುಗಳ (ಸಾ.ವಿ.ಪ) ನಿಯಂತ್ರಣ ಆದೇಶ ರನ್ವಯ ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಟ 300 ಪಡಿತರ ಚೀಟಿಗಳು

ಹಾಗೂ ಪಟ್ಟಣ ಪ್ರದೇಶಗಳಲ್ಲಿ 500 ಪಡಿತರ ಚೀಟಿಗಳು ಲಭ್ಯವಿದ್ದಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶದಲ್ಲಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಅಪರ ನಿರ್ದೇಶಕರು ನ್ಯಾಯಬೆಲೆ ಅಂಗಡಿಗಳಿಗೆ ನಿಯಮಾನುಸಾರ ಅಧಿಸೂಚನೆಯನ್ನು ಹೊರಡಿಸಿ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವರು.

ಈ) ಪ್ರಸ್ತುತ ರಾಜ್ಯದಲ್ಲಿ ಎಲ್ಲಾ ಕಾರ್ಡುದಾರರಿಗೆ ಗಣಕೀಕೃತ ಖಾಯಂ ಪಡಿತರ ಚೀಟಿ ವಿತರಣೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಈ ಕಾರ್ಯ ಪೂರ್ಣಗೊಂಡ ನಂತರ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಜಿಲ್ಲೆಗಳಲ್ಲಿ ಅಧಿಸೂಚನೆ ಹೊರಡಿಸಿ ಹೊಸ ನ್ಯಾಯಬೆಲೆ ಅಂಗಡಿಗಳನ್ನು ನಿಯಮಾನುಸರ ಎಲ್ಲೆಲ್ಲಿ ಅವಶ್ಯವಿದೆಯೋ ಆ ಗ್ರಾಮಗಳಲ್ಲಿ ಮಂಜೂರು ಮಾಡಲು ಕ್ರಮ ಕೈಗೊಳ್ಳುವರು.

ಶ್ರೀ ಕಾಕಾಸಾಹೇಬ್ ಪಾಂಡುರಂಗ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಎಲ್ಲಾ ಹಳದಿ ಪಡಿತರ ಚೀಟಿಗಳ ವಿತರಣೆ ಮುಗಿದ ನಂತರ ಜಿಲ್ಲಾಧಿಕಾರಿಗಳ ಮುಖಾಂತರ ನೋಟೀಸ್ ಕೊಟ್ಟು ಅನಂತರ, ಪಡಿತರ ಚೀಟಿಗಳನ್ನು ವಿತರಿಸುವ ಕಾರ್ಯವನ್ನು ಕೆಲವು ನ್ಯಾಯಬೆಲೆ ಅಂಗಡಿಗಳಲ್ಲಿ ತಡೆ ಹಿಡಿದಿದ್ದಾರೆ. ಹವಾರು ವರ್ಷಗಳಿಂದ ಕೆಲವು ಊರುಗಳಲ್ಲಿ ಒಂದೊಂದೇ ನ್ಯಾಯ ಬೆಲೆ ಅಂಗಡಿ ಇದೆ. ಇದರಿಂದ ಜನರಿಗೆ ತೊಂದರೆಯಾಗುತ್ತಿದೆ. ಅಲ್ಲಿ ಸ್ಥಳೀಯರು, ಜನಪ್ರತಿನಿಧಿಗಳು ಜಿಲ್ಲಾಧಿಕಾರಿಗಳಿಗೆ ಹೇಳಿದಾಗ ಆ ಸೂಚನೆಯನ್ನು ಪರಿಗಣಿಸಿ ಪಡಿತರ ಚೀಟಿಗಳನ್ನು ವಿತರಿಸುವ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಹಾಲಪ್ಪ : ಕುರಿತು ಕ್ರಮ ಕೈಗೊಳ್ಳುತ್ತೇವೆ.

ಹುಬ್ಬಳ್ಳಿ ಕಿತ್ತೂರ ಚೆನ್ನಮ್ಮ ಸರ್ಕಲ್‌ನಿಂದ ಕಾರವಾರ ರೋಡ್ ಬೈಪಾಸ್‌ವರೆಗೆ ದ್ವಿಮುಖ ರಸ್ತೆ ನಿರ್ಮಾಣ

127 (978) ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ-ಧಾರವಾಡ ಪೂರ್ವ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಕಿತ್ತೂರ ಚೆನ್ನಮ್ಮ ಸರ್ಕಲ್‌ನಿಂದ ಕಾರವಾರ ರೋಡ್ ಬೈಪಾಸ್‌ವರೆಗೆ ದ್ವಿಮುಖ ರಸ್ತೆಯನ್ನು ನಿರ್ಮಿಸುವ ವಿಚಾರವಿದೆಯೇ;

ಆ) ಇದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು;

ಇ) ಇಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಇರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಪ್ರಸ್ತಾವಿತ ರಸ್ತೆಯು ರಾಷ್ಟ್ರೀಯ ಹೆದ್ದಾರಿ– 63ರ ಭಾಗವಾಗಿದೆ. ಸದರಿ ರಸ್ತೆಯ ಭಾಗವು ನಗರದ ಪರಿಮಿತಿಯಲ್ಲಿರುವುದರಿಂದ ಹಾಗೂ ಹುಬ್ಬಳ್ಳಿ ನಗರಕ್ಕೆ ಈಗಾಗಲೇ ಬೈಪಾಸ್ ರಸ್ತೆ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಅಂದಾಜು ಮಂಜೂರಾಗಿದ್ದು, ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿರುವುದರಿಂದ, ಈ ರಸ್ತೆಯ ಭಾಗದಲ್ಲಿ ಚತುಷ್ಪಥ ರಸ್ತೆ ನಿರ್ಮಿಸಲು ಭೂಸ್ವಾಧೀನ ಪ್ರಕ್ರಿಯೆಗೆ ಕೇಂದ್ರ ಭೂಸಾರಿಗೆ ಮಂತ್ರಾಲಯ ಸಮ್ಮತಿಸುವ ಸಾಧ್ಯತೆ ಇರುವುದಿಲ್ಲ. ಆದ್ದರಿಂದ, ಈಗ ಹಾಲಿ ಇರುವ ದ್ವಿಪಥ ಹೆದ್ದಾರಿಯನ್ನು ಪೇವ್ಡ್ ಶೋಲ್ಡರ್ ನೊಂದಿಗೆ 10 ಮೀ. ಅಗಲಕ್ಕೆ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ 2010–11ರ ವಾರ್ಷಿಕ ಯೋಜನೆ ಅಡಿಯಲ್ಲಿ ಪ್ರಸ್ತಾವನೆ ಯನ್ನು ಅನುಮೋದನೆಗಾಗಿ ಸಲ್ಲಿಸಿದೆ. ಅನುಮೋದನೆ ದೊರೆತ ನಂತರ ಕಾಮಗಾರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ವೀರಭದ್ರಪ್ಪ ಹಾಲಹರವಿ : ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ, ಹುಬ್ಬಳ್ಳಿ ನಗರವನ್ನು ಪ್ರವೇಸಿಸಿರುವ ಎರಡು ಮುಖ್ಯ ರಸ್ತೆಗಳಲ್ಲಿ ಒಂದು, ಬೆಂಗಳೂರಿನಿಂದ ಹುಬ್ಬಳ್ಳಿಗೆ ಬರುವ ರಾಷ್ಟ್ರೀಯ ಹೆದ್ದಾರಿ ನಂ.63 ಭಾರೀ ಜನದಟ್ಟಣೆ ಮತ್ತು ವಾಹನ ದಟ್ಟಣೆಯಿಂದ ಕೂಡಿರುವುದರಿಂದ ಈಗಾಗಲೇ ಸಾಕಷ್ಟು ಅಪಘಾತಗಳು ಆ ಹೆದ್ದಾರಿಯಲ್ಲಿ ಸಂಭವಿಸುತ್ತಿವೆ. ಆದುದರಿಂದ, ಹುಬ್ಬಳ್ಳಿ ನಗರಕ್ಕೆ ಈಗಾಗಲೇ ಬೈಪಾಸ್ ರಸ್ತೆ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಅಂದಾಜು ಮಂಜೂರಾಗಿದೆ' ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ, ಹುಬ್ಬಳ್ಳಿ ನಗರ ಎಂದರೆ, ಬಿದ್ನಾಳ್ ವರ್ತುಲ ರಸ್ತೆಯಿಂದ ರಾಣಿ ಚೆನ್ನಮ್ಮ

ಸರ್ಕಲ್‌ವರೆಗೆ ಮತ್ತು ರಾಣಿ ಚೆನ್ನಮ್ಮ ವರ್ತುಲದಿಂದ ಧಾರವಾಡದವರೆಗೆ ಹುಬ್ಬಳ್ಳಿ ನಗರವೆಂದು ನಾವು ಪರಿಗಣಿಸುತ್ತೇವೆ. ಅದರಲ್ಲಿ ಬಿದ್ನಾಳ್ ವರ್ತುಲ ರಸ್ತೆ ಎಂದು ಬಂದಿಲ್ಲ.

ಎರಡನೆಯದಾಗಿ, ರಾಷ್ಟ್ರೀಯ ಹೆದ್ದಾರಿ ನಂ.63, ಅದು ಕೂಡ ಅನುಮೋದನೆಗೊಂಡಿಲ್ಲ ಮತ್ತು ಇದರಲ್ಲಿ ನಮೂದಾಗಿಲ್ಲ. ಹಾಗಾಗಿ, ಕಳೆದ 6 ತಿಂಗಳ ಹಿಂದೆ ರೈತರಿಗೆ ಸಂಪರ್ಕ ರಸ್ತೆ ಇಲ್ಲದೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತವುಂಟಾಗಿ 5 ರೈತರು ಮೃತಪಟ್ಟಿದ್ದಾರೆ. ಇದು ಗಂಭೀರ ವಿಷಯವಾಗಿರುವುದರಿಂದ ಮಾನ್ಯ ಸಚಿವರು ನೀಡಿರುವ ಉತ್ತರ ನಮಗೆ ಸಮಾಧಾನ ಕರವಾಗಿಲ್ಲ. ಆದುದರಿಂದ, ನಮಗೆ ವಿವರವಾಗಿ ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂತೆ, ಇಲ್ಲಿ ಚತುಷ್ಪಥ ರಸ್ತೆ ನಿರ್ಮಿಸುವುದಕ್ಕಾಗುವುದಿಲ್ಲವೆಂದು ಅವರ ಗಮನಕ್ಕೆ ತರುವ ಪ್ರಯತ್ನ ಮಾಡಿದ್ದೇವೆ. ಆದರೆ, ಅದರಲ್ಲಿ ಚತುಷ್ಪಥ ರಸ್ತೆಯು ಗಬ್ಬೂರಿನಿಂದ ಕಿತ್ತೂರು ರಾಣಿ ಚೆನ್ನಮ್ಮ ಸರ್ಕಲ್‌ವರೆಗೆ ರಾಷ್ಟ್ರೀಯ ಹೆದ್ದಾರಿ ನಂ.63ನೇ ರಸ್ತೆ ಇತ್ತು. ಕಾರವಾರಕ್ಕೆ ಹೋಗುವ ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿ ಮಾಡಲು ಸಾಧ್ಯವಾಗುವುದಿಲ್ಲ. ಆದುದರಿಂದ, ಬೈಪಾಸ್ ರಸ್ತೆಗಳನ್ನು ಮಾಡಬಹುದಾಗಿದೆ. ಕುರಿತು ಏನು ಆಲೋಚನೆ ಮಾಡಿದ್ದೇವೆಂದರೆ, 10 ಮೀಟರ್ ಅಗಲದ ರಸ್ತೆ ನಿರ್ಮಿಸುವ ಸಲುವಾಗಿ ಪೇವ್ಡ್ ಸೋಲ್ಡರ್ ಅವರೊಂದಿಗೆ 2010-11ನೇ ಸಾಲಿನ ಯೋಜನೆಯಲ್ಲಿ ನಾವು ಪ್ರಸ್ತಾವನೆ ಮಾಡಿದ್ದೇವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ನಿಮ್ಮ ಗಮನದಲ್ಲಿರುವುದೇನೆಂದರೆ, ಹೊಸೂರಿನಿಂದಿಡಿದು ಧಾರವಾಡದವರೆಗೆ 155 ಕೋಟಿ ರೂ. ವೆಚ್ಚದಲ್ಲಿ ದ್ವಿಪಥ ರಸ್ತೆ ನಿರ್ಮಾಣವಾಗುತ್ತದೆ. ಅದೇ ರೀತಿ ಇಲ್ಲಿಯೂ ಆಗಿದ್ದರೆ ಚೆನ್ನಾಗಿತ್ತೆಂದು ಅವರು ಮನಸ್ಸಿನಲ್ಲಿಟ್ಟುಕೊಂಡು ಈ ಪ್ರಶ್ನೆ ಕೇಳಿರಬಹುದೆಂದು ನನ್ನ ಭಾವನೆಯಾಗಿದೆ. ಆದರೆ, ಈ ಭಾಗದಲ್ಲಿ ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. 10 ಮೀಟರ್ ಅಗಲದ ರಸ್ತೆ ಮಾಡುವ ಕೆಲಸ ಮಾಡುತ್ತೇನೆಂದು ನಾನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ವೀರಭದ್ರಪ್ಪ ಹಾಲಹರವಿ : ಮಾನ್ಯ ಸಚಿವರಲ್ಲಿ ವಿನಂತಿ. ಹುಬ್ಬಳ್ಳಿ ನಗರದಲ್ಲಿ ಜನ ದಟ್ಟಣೆ ಮತ್ತು ವಾಹನ ದಟ್ಟಣೆ ಬಹಳಷ್ಟು ಇರುವುದರಿಂದ ಮುಂದಿನ ವರ್ಷದ ಸಾಲಿನಲ್ಲಾದರೂ ಚತುಷ್ಪಥ ರಸ್ತೆಯಲ್ಲದಿದ್ದರೂ ದ್ವಿಪಥ

ರಸ್ತೆ ನಿರ್ಮಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಈಗ 10 ಮೀಟರ್ ರಸ್ತೆ ಎಂದರೆ ದ್ವಿಪಥ ರಸ್ತೆ ಆದಂತಾಗುತ್ತದೆ ಎಂಬ ಮಾತನ್ನು ಅವರ ಗಮನಕ್ಕೆ ತರಬಯಸುತ್ತೇನೆ.

B.P.L. Ration Cards

129 (1265) Sri Shivakumar D.K. (Kanakapura) : Hon'ble Minister for Food, Civil Supplies & Consumer Affairs)

A) How many BPL cards are distributed in the State; (Furnish district wise and taluk wise details)

B) What is the share of Central Government and State Government in BPL, cards?

C) What are all the guidelines issued by Central Government and State Government regarding issue of foodgrains to families (full details be furnished)

D) How many temporary (Nemmadi) ration cards are distributed

(District wise and taluk wise details be furnished)

E) What is the alternative arrangements made by the Government while taking back temporary ration cards;

Sri H. Halappa (Hon'ble Minister for Food, Civil Supplies & Consumer Affairs)

A) In the State, at present there are 98,44,334 BPL families are in existence.

(district wise and taluk wise details are enclosed)

B) Government of India has identified 31.29. lakh families as BPL families as far as Karnataka state is concerned. This includes Anthyodaya Anna Yojana families of 11, 99,700. But Government of Karnataka has identified 67,. 15, 334 families as BPL families in excess of Central Government identified families. At present in the State there are 98, 44, 334

BPL families and all these families are getting food grains under Public Distribution system.

C) Following are the details of foodgrains received monthly from the Central Government.

(MT)

Sl. No.	Commodities	AAY	BPL	APL (EBPL)	Total
1.	Rice	34709	55820	57663	148192
2.	Wheat	7282	11712	5417	24411
	Total	**41991**	**67532**	**63080**	**172603**

The Central Government release foodgrains to 31.29 BPL families at the rate of 35 kg per family and release foodgrains to APL families at the rate of 10 kg per family. But the State Government release the above foodgrains to 98,44,334 BPL families by bearing additional subsidy and by utilizing the foodgrains released to APL families. For this purpose Government had introduced Unit System. The details of foodgrains released to BPL families are as below.

Category of Cards	Rice	Wheat	Sugar
	Quantity (Kg per card)	Quantity (Kg per card)	Quantity (Kg per card)
AAy	29	6	1
Akshay/BPL Per family	Per person 4 kg maximum 20 kg	Per person 1 kg maximum 3 kg	1

Kerosene (For Non gas cards)	Quantity (Ltr per card)
Bangalore Informal Rationing Area	7
Other Informal Rationing Area	6
Urban Area	5
Rural Area	3

D) In the State, 28,44,361 temporary Nemmadi cards were distributed.

(District wise and taluk wise details is closed)

E) Now, permanent Computerized ration cards are being issued to the cards holders in place of temporary ration cards, However in this process, the foodgrains are released without any hardship to the cards holders.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಒದಗಿಸಿದ್ದಾರೆ. ಮಾನ್ಯ ಸಚಿವರು ಈ ವಿಚಾರದಲ್ಲಿ ನಮಗೆಲ್ಲರಿಗೂ ಗೊಂದಲದ ವಾತಾವರಣ ಸೃಷ್ಟಿಸುತ್ತಿದ್ದಾರೆ. ನಾವು ಸರಳವಾದ ಪ್ರಶ್ನೆ ಕೇಳಿದ್ದೇವೆ. ಪ್ರಶ್ನೆಗಳಿಗೆ ಅವರು ಉತ್ತರವನ್ನು ಸುಮ್ಮನೆ general ಆಗಿ ಕೊಟ್ಟಿದ್ದಾರೆ. ಪ್ರತಿ ಕುಟುಂಬಕ್ಕೆ ಆಹಾರ ಪದಾರ್ಥ ವಿತರಿಸಲು ಕೇಂದ್ರ ಹಾಗೂ ಆಜ್ಯ ಸರ್ಕಾರದ ಮಾರ್ಗಸೂಚಿ ಏನು ಎಂದು ಕೇಳಿರುವುದಕ್ಕೂ ಸುಮ್ಮನೆ general ಆಗಿ '.....ಪ್ರತಿ ಬಿಪಿಎಲ್ ಕುಟುಂಬಕ್ಕೂ 35 ಕೆ.ಜಿ ಗಳಷ್ಟು ಆಹಾರ ಪಡಿತರ ವಿತರಿಸಲಾಗುತ್ತಿದೆ' ಎನ್ನುವ ಉತ್ತರ ಕೊಟ್ಟಿದ್ದಾರೆ. ಆದರೆ, ಚುನಾವಣೆ ಸಂದರ್ಭದಲ್ಲಿ ಇಡೀ ರಾಜ್ಯಾದ್ಯಂತ 'ನೆಮ್ಮದಿ' ಕಾರ್ಡು ಕೊಟ್ಟರು.

ಅಧ್ಯಕ್ಷರು : ನಿನ್ನೆ ಇದರ ಬಗ್ಗೆ ಚರ್ಚೆಯಾಗಿದೆ.

ಶ್ರೀ ಡಿ.ಕೆ.ಶಿವಕುಮಾರ್ : 'ನೆಮ್ಮದಿ' ಕಾರ್ಡು ಕೊಟ್ಟ ನಂತರ ಪುನಃ ಅದನ್ನು ವಾಪಸ್ಸು ತೆಗೆದುಕೊಂಡರು. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮಂಡಿಸುತ್ತಾ, 'ಯಾರ್ಯಾರಿಗೆ ಕಾರ್ಡುಗಳು ಸಿಕ್ಕಲ್ಲವೋ, ಅವರಿಗೆ

ಪರ್ಯಾಯ ವ್ಯವಸ್ಥೆ ಮಾಡಿದ್ದೇವೆ' ಎಂದು ಹೇಳಿದ್ದಾರೆ. ನಾನು ಮಂತ್ರಿಗಳಿಗೆ ಹೇಳಬಯಸುವುದೇನೆಂದರೆ, ಇಲ್ಲಿಯವರೆಗೆ ಯಾರ್ಯಾರು ಅರ್ಹರಿದ್ದಾರೋ, ಈ ಕಾರ್ಡು ಬಗ್ಗೆ ಹಿಂದೆ ಶೋಭಾ ಕರಂದ್ಲಾಜೆಯವರು ಯಾವುದೋ ಸಂದರ್ಭದಲ್ಲಿ ಮಂತ್ರಿಯಾಗಿದ್ದಾಗ ನಾವು ಬಿಪಿಎಲ್ ಕಾರ್ಡಿನ ಸ್ಟೇಟಸ್ ಏರಿಸುತ್ತೇವೆಂದು ಒಂದು ಹೇಳಿಕೆ ಕೊಟ್ಟಿದ್ದರು. ಅಲ್ಲದೆ, ಬಿಪಿಎಲ್ ಕಾರ್ಡು ಅರ್ಹತೆಯನ್ನು ಹೆಚ್ಚು ಮಾಡುತ್ತಿದ್ದೇವೆ, 30,000, 40,000 ಮಾಡುತ್ತಿದ್ದೇವೆಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ರಾಜ್ಯದ ಜನರೆಲ್ಲರೂ ಗೊಂದಲದಲ್ಲಿದ್ದಾರೆ. ಬಿಪಿಎಲ್ ಕಾರ್ಡಿಗೆ ಅರ್ಹತೆ ಎಷ್ಟಿರಬೇಕು? ಈಗ 'ನೆಮ್ಮದಿ' ಕಾರ್ಡು ಕೊಟ್ಟಿರುವುದನ್ನು ವಾಪಸ್ಸು ಕೊಟ್ಟಿ ಚುನಾವಣೆಯಾದ ನಂತರ ಓಟು ಹಾಕಿಸಿಕೊಂಡು, ಈ ರೀತಿ ನಿಲ್ಲಿಸಿದ್ದಾರಲ್ಲ, ಅವರಿಗೆ ಪರ್ಯಾಯ ವ್ಯವಸ್ಥೆ ಏನು ಮಾಡಿದ್ದೀರಿ? ತಿಳಿಸಬೇಕು. ಕಾರ್ಡುಗಳನ್ನು ಎಲ್ಲಾ ಅರ್ಹರಿಗೂ ಯಾವಾಗ ಕೊಡುತ್ತೀರಿ? ಏಕೆಂದರೆ ಅರ್ಜಿಗಳೆಲ್ಲವೂ ಪೆಂಡಿಂಗ್ ಇವೆ. ನೀವು ಆಹಾರ ಕೊಡುವುದಕ್ಕಾಗುವುದಿಲ್ಲ, ಕೇಂದ್ರ ಸರ್ಕಾರದಿಂದ ಸಬ್ಸಿಡಿ ಸಿಕ್ಕಿಲ್ಲವೆಂದು ಯಾವುದೋ ನೆಪದಲ್ಲಿದ್ದೀರಿ. ಕೇಂದ್ರ ಮಾಡಲಿ, ಮತ್ತೊಂದು ಮಾಡಲಿ, ನೀವು ರಾಜ್ಯದಲ್ಲಿ ತಂದಿರುವ ಕಾನೂನು ಬೇರೆ ವಿಚಾರ, ಈ ರಾಜ್ಯದ ಜನತೆಗೆ ಇಷ್ಟು ರೂ.ಗೆ ಇಂತಿಷ್ಟು ಕೆ.ಜಿ. ಅಕ್ಕಿ ಕೊಡುತ್ತೇವೆಂದು ನೀವು ಮಾತು ಕೊಟ್ಟಿದ್ದೀರಿ. ಆ ಪ್ರಕಾರ ಕೊಡುವುದಕ್ಕಾಗುತ್ತದೆಯೇ? ಇಲ್ಲವೇ? ಎಷ್ಟು ಕೊಡುತ್ತೀರಿ? ಯಾವಾಗ ಕೊಡುತ್ತೀರಿ? ತಿಳಿಸಬೇಕು.

ಶ್ರೀ ಹೆಚ್. ಹಾಲಪ್ಪ : ಅಧ್ಯಕ್ಷರೆ, 'ನೆಮ್ಮದಿ' ಕೇಂದ್ರಗಳ ಮೂಲಕ ಎಷ್ಟು ಕಾರ್ಡುಗಳನ್ನು ವಿತರಿಸಲಾಗಿದೆ, ಎಷ್ಟು ಕಾರ್ಡುಗಳನ್ನು ಹಿಂಪಡೆಯಲಾಗಿದೆ ಎಂದು ಮಾನ್ಯ ಸದಸ್ಯರು ಕೇಳಿರುವುದಕ್ಕೆ, 'ನೆಮ್ಮದಿ' ಕೇಂದ್ರಗಳ ಮೂಲಕ ನಾವು ಒಟ್ಟು 28,44,361 ಕಾರ್ಡುಗಳನ್ನು ವಿತರಿಸಿದ್ದೆವು. ಆದರೆ, ಪರಿಶೀಲನೆ ಬಳಿಕ 23,19.975 ಕಾರ್ಡುಗಳಿವೆ. ಫೋಟೋ ಪರಿಶೀಲನೆಯಿಂದ ಕಾರ್ಡುಗಳ ಸಂಖ್ಯೆ ಸ್ವಲ್ಪ ಕಡಿಮೆಯಾಗಿದ್ದು, ಮತ್ತು ಕೆಲವು ಕಾರ್ಡುಗಳನ್ನು ಹಿಂಪಡೆದಿದ್ದೇವೆ. ಆದರೆ, ಕಾರ್ಡುಗಳನ್ನು ಹಿಂಪಡೆಯುವಾಗ ಹಿರಿಯ ಸದಸ್ಯರಾದ ಶಿವಕುಮಾರ್‌ರವರು ಹೇಳಿದಂತೆ ಸ್ವಲ್ಪ ವ್ಯತ್ಯಾಸಗಳಾಗಿದ್ದು, ಕೆಲವು ಅರ್ಹರು ಕೈಬಿಟ್ಟು ಹೋಗಿದ್ದಾರೆಂದು ಹೇಳಿದ್ದಾರೆ. ಇದೇ ಅಧಿವೇಶನದಲ್ಲಿ ಹೇಳಿದಂತೆ......

ಶ್ರೀ ವೈ.ಎನ್. ರುದ್ರೇಗೌಡ : ಶೇಕಡ 25ರಷ್ಟು ಅರ್ಹರು ಕೈಬಿಟ್ಟು ಹೋಗಿರುವುದರ ಬಗ್ಗೆ ತಾವು ಗಮನಹರಿಸಬೇಕು.

ಶ್ರೀ ಹೆಚ್. ಹಾಲಪ್ಪ : ಯಾರ್‍ಯಾರು ಅರ್ಹರು ಕೈ ಬಿಟ್ಟು ಹೋಗಿದ್ದಾರೋ, ಅವರುಗಳನ್ನು ಮುಂದಿನ ದಿನಗಳಲ್ಲಿ, ಮೊನ್ನೆ ಹೇಳಿದಂತೆ ಡಿ.ಸಿ.ಯವರಿಗೆ ಅಧಿಕಾರ ಕೊಟ್ಟು ಪರಿಶೀಲಿಸಿ, ಯಾರ್‍ಯಾರು ಅರ್ಹರಿದ್ದಾರೋ, ಅವರೆಲ್ಲರಿಗೂ ಮುಂದಿನ ದಿನಗಳಲ್ಲಿ ಕಾರ್ಡುಗಳನ್ನು ವಿತರಿಸಲಾಗುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್ : ಮುಂದಿನ ದಿನಗಳಲ್ಲಿ ಅಲ್ಲ. ಒಂದು time frame fix ಮಾಡಿ. ಬಡವ ಎಂದರೆ ಆತ ಬಡವನೇ. ಅರ್ಹರಾದ ಒಬ್ಬ ಬಡವನಿಗೂ ಕಾರ್ಡು ಸಿಗುತ್ತಿಲ್ಲ. ಬಿಪಿಎಲ್ ಕಾರ್ಡುದಾರರಗೆ ಎಪಿಎಲ್ ಕಾರ್ಡು, ಎಪಿಎಲ್ ಕಾರ್ಡುದಾರರಗೆ ಬಿಪಿಎಲ್ ಕಾರ್ಡು ಸಿಕ್ಕಿರುವುದು ತಮಗೂ ಗೊತ್ತಿದೆ. ಎಷ್ಟೋ ಅರ್ಜಿಗಳನ್ನು ಕೊಟ್ಟಿದ್ದಾರೆ.

(11-10 AM)

ನಿಮ್ಮಲ್ಲೆ ನಿಮ್ಮ ಶಾಸಕರು complaint ಕೊಟ್ಟಿದ್ದಾರೆಂದು ಹೇಳಿದ್ದಾರೆ. ನೀವು ಬಡತನ ರೇಖೆಗೆ ಒಳಪಟ್ಟಿರತಕ್ಕವರೆಲ್ಲರಿಗೂ ಇಂಥ ದಿನದಲ್ಲಿ ಕಾರ್ಡನ್ನು ಕೊಡುತ್ತೇನೆಂದು ಹೇಳಿ. ಅನೇಕ ಸರ್ಕಾರಗಳು, ಮಂತ್ರಿಗಳು ಬಂದು ಹೋಗಿರಬಹುದು. ಆದರೆ, ನೀವು ಹೊಸದಾಗಿ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೀರಿ. ಏಕೆಂದರೆ ಜಿಲ್ಲಾಧಿಕಾರಿಗಳು ಕೆಲವು ಸಂದರ್ಭದಲ್ಲಿ ಆ ಹಳ್ಳಿಗಳಲ್ಲಿ ಕಾರ್ಡುದಾರರ ಜೊತೆ ಸ್ವಲ್ಪ adjustment ಮಾಡಿಕೊಂಡು ಬಿ.ಪಿ.ಎಲ್., ಎ.ಪಿ.ಎಲ್ ಕಾರ್ಡುನವರಿಗೆ ಕಡಿಮೆ ಮಾಡಿ ಕೊಡುವಂಥ ಅವಕಾಶಗಳು ಇತ್ತು. ಆದರೆ, ಡೆಪ್ಯೂಟಿ ಕಮಿಷನರ್‌ಗಳು ಇಲ್ಲಾ ಆಗುವುದಿಲ್ಲ ಯಾರಿಗೆ ಕಾರ್ಡು ಇದೆ ಅವರಿಗೆ ಮಾತ್ರ ಕೊಡಬೇಕೆಂದು ಕಾನೂನನ್ನು ಅವರು ಇಡುತ್ತಿದ್ದಾರೆ. ನೀವು ಇಷ್ಟು ದಿವಸಗಳಲ್ಲಿ ಅರ್ಹರಾಗಿರುವವರಿಗೆ ಕೊಡುತ್ತೇವೆಂದು ಹೇಳಿ. ಯಾರ್‍ಯಾರು ಬಿ.ಪಿ.ಎಲ್. ಗೆ eligible ಇರತಕ್ಕವರು, ಇಲ್ಲದಿರುವವರ ಬಗ್ಗೆ ನಾವು ಪ್ರಶ್ನೆ ಕೇಳುವುದಿಲ್ಲ. ಎಷ್ಟು ದಿವಸದಲ್ಲಿ ಈ ಸಮಸ್ಯೆಯನ್ನು ಬಗೆಹರಿಸುತ್ತೀರಿ? ಅವರೆಲ್ಲಾ ಅರ್ಜಿಗಳನ್ನು ನೆಮ್ಮದಿ ಕೇಂದ್ರಗಳಿಗೆ ಹಾಕಿಕೊಂಡಿದ್ದಾರೆ. ನಿಮ್ಮ ಹತ್ತಿರ ಆಹಾರ ಧಾನ್ಯ ಇಲ್ಲ, ಸಬ್ಸಿಡಿ ಹೆಚ್ಚಿಗೆ ಆಗುತ್ತದೆ, ಸರ್ಕಾರಕ್ಕೆ ಹೊರೆಯಾಗುತ್ತದೆ ಎಂಬ ದೃಷ್ಟಿಯಿಂದ ತಾವು ನಿಲ್ಲಿಸಿದ್ದೀರಿ, ನಮಗೆ ಅರ್ಥವಾಗುತ್ತದೆ. ಕನಕಪುರ ತಾಲ್ಲೂಕಿನಲ್ಲಿ

ಇರಬಹುದು, ನನ್ನ ಕ್ಷೇತ್ರದಲ್ಲಿ ಇರಬಹುದು, ಬೇರೆ ಕಡೆ ಇರಬಹುದು, ಬಡವರ ಬಿ.ಪಿ.ಎಲ್. ಕಾರ್ಡಿನ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಒಂದು time bound programme ಹೇಳಿ.

ಶ್ರೀ ಟಿ.ಬಿ. ಜಯಚಂದ್ರ : ಇದರ ಬಗ್ಗೆ ಸದನದಲ್ಲಿ ನಾನಾ ರೀತಿಯಾಗಿ ನಿನ್ನೆಯವರೆಗೂ ಚರ್ಚೆಯಾಗಿದೆ. ದಯಮಾಡಿ ಮಾನ್ಯ ಸಚಿವರ ಗಮನಕ್ಕೆ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಯಾರು ಬಿ.ಪಿ.ಎಲ್. ಕಾರ್ಡ್‌ಗೆ ಅರ್ಹರಿದ್ದಾರೆ, ಕೇಂದ್ರ ಸರ್ಕಾರ ನಿಗದಿಮಾಡಿರುವ ನಿಯಮಾ ವಳಿಯ ವ್ಯಾಪ್ತಿಯಲ್ಲಿ ಬರತಕ್ಕವರಿಗೆ ನಿರಂತರವಾಗಿ ಕಾರ್ಡುಗಳನ್ನು ಕೊಡಬೇಕಾಗುತ್ತದೆ. ಇದು ಒಂದು ನಿರಂತರ ಪ್ರಕ್ರಿಯೆ. ಇವತ್ತು ಕೊಡುತ್ತೇವೆ, ನಾಳೆ ಕೊಡುತ್ತೇವೆ ಎಂದು ಹೇಳತಕ್ಕದ್ದಲ್ಲ. ನಿನ್ನೆ ಡೆಪ್ಯೂಟಿ ಕಮಿಷನರ್ ಗಳಿಗೆ authorize ಮಾಡಿದ್ದೇವೆಂದು ಹೇಳಿಕೆ ಕೊಟ್ಟುಬಿಟ್ಟಿರಿ. ಈಗ ಶಿವಕುಮಾರ್‌ರವರು ಇದನ್ನು ಯಾವತ್ತಿನಿಂದ ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ. ದಯಮಾಡಿ ನೀವು ಅದನ್ನು ಕ್ಲಾರಿಫೈ ಮಾಡಿ. ಯಾರು ಬಿ.ಪಿ.ಎಲ್. ವ್ಯಾಪ್ತಿಯಲ್ಲಿ ಬರುತ್ತಾರೋ ಅವರು ಯಾವತ್ತೂ ಕೂಡ ಅರ್ಜಿ ಹಾಕಿ ತೆಗೆದುಕೊಳ್ಳಬಹುದು. ನಮ್ಮಲ್ಲಿ ಸಹ ಆ Problem ಆಗಿದೆ. Directorate ನಿಂದ ಏನಾದರೂ ಸೂಚನೆ ಬರುತ್ತದೆಯೇ ಎಂದರೆ ಮೇ ತಿಂಗಳಿನಿಂದ ಪ್ರಾರಂಭ ಮಾಡುತ್ತೇವೆಂದು ಹೇಳುತ್ತಾರೆ. ಯಾವಾಗಿನಿಂದ ಇದನ್ನು ಪ್ರಾರಂಭ ಮಾಡುತ್ತೀರಿ ಎಂಬುದನ್ನು ಕ್ಲಾರಿಫೈ ಮಾಡಿಬಿಡಿ. ಈ ಕಾರ್ಡ್‌ನ್ನು ತೆಗೆದುಕೊಳ್ಳುವುದು ನಿಮ್ಮ ಹಕ್ಕು, ಈ ನಿಯಮಾವಳಿಯ ವ್ಯಾಪ್ತಿಯಲ್ಲಿ ನೀವು ಯಾವಾಗ ಬೇಕಾದರೂ ಅರ್ಜಿ ಹಾಕಿ ತೆಗೆದು ಕೊಳ್ಳಬಹುದು ಎನ್ನತಕ್ಕದ್ದು ಒಂದು. ಎರಡನೆಯದ್ದು, ನೆಮ್ಮದಿಯಿಂದ ಗೊಂದಲವಾಗಿದೆಯಲ್ಲಾ ಅದಕ್ಕಿಂತಾ ಹೆಚ್ಚಾಗಿ ನಿಮ್ಮ ಕೊಮ್ಯಾಟ್ ಅವ್ಯವಸ್ಥೆ ಯಿಂದಾಗಿ ಇದೆಲ್ಲಾ ಆಗಿರುವುದು. Permanent card ಕೊಡುವುದೊಂದೇ final solution. ನೀವೇನು ಬಯೋಮೆಟ್ರಿಕ್ ಕಾಡನ್ನು ಕೊಡಬೇಕೆಂದು ಮಾಡಿದ್ದೀರಲ್ಲಾ ಅದನ್ನು systemize ಮಾಡಿ ಸರಿಯಾಗಿ ಬೇಗ ಕೊಡತಕ್ಕ ಕೆಲಸವನ್ನು ಮಾಡಿದರೆ ineligible ನ್ನು ಕೂಡ weed out ಮಾಡುವುದಕ್ಕೆ ಸಾಧ್ಯವಾಗುತ್ತದೆ, eligible ಗೆ ಕೊಡಲು ಸಾಧ್ಯವಾಗುತ್ತದೆ. ದಯಮಾಡಿ, ಈ ವಿಚಾರದಲ್ಲಿ ನಾನು ಒಂದೇ ಒಂದು ಸಲಹೆಯನ್ನು ಕೊಡಲು ಇಚ್ಛೆಪಡುವು

ದೇನೆಂದರೆ, ineligible ನ್ನು eligible ಆಗಿ ಮಾಡತಕ್ಕದ್ದನ್ನು ಕೊಮ್ಯಾಟ್ ಮೇಲೆ ಹಾಕಿಬಿಡುತ್ತಾರೆ. ಅಧಿಕಾರಿಗಳೇ ಅಲ್ಲಿ ತಪ್ಪು ಮಾಡಿಸಿರುತ್ತಾರೆ. ಅವರೇ ತಪ್ಪು ಮಾಡಿ ಕೊಮ್ಯಾಟ್ ಮೇಲೆ ಕಂಪ್ಯೂಟರ್ ಮೇಲೆ ಹಾಕಿಬಿಡುತ್ತಾರೆ. ಇವೆಲ್ಲವನ್ನು ಸೂಕ್ಷ್ಮವಾಗಿ ನೋಡಿ ಬಗೆಹರಿಸುವ ಕೆಲಸವನ್ನು ಮಾಡಿದರೆ ಪ್ರಯೋಜನವಾಗುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್ : ವಿಲೇಜ್ ಅಕೌಂಟೆಂಟ್, ರೆವಿನ್ಯೂ ಇನ್ಸ ಪೆಕ್ಟರ್‌ಗಳಿಗೆ ಯಾವ್ಯಾವ ಕಾರ್ಡ್‌ನ್ನು ineligible ಆಗಿ ತೆಗೆದುಕೊಂಡಿದ್ದಾರೆ ಅವರ ಪಹಣಿಯನ್ನು roundup ಮಾಡಿಸಿ. ಅವರು ಆಫಿಡೆವಿಟ್ ಕೊಡಬೇಕಲ್ಲಾ? ಎಲ್ಲಾ ಬಿಟ್ಟುಬಿಡುತ್ತಾರೆ. ಏಕೆಂದರೆ ನಿಜವಾದ ಬಡವರು ಯಾರಿದ್ದಾರೆ ಅವನಿಗಂತೂ ಸಿಗುತ್ತಿಲ್ಲ. ನಮ್ಮ ಹಳ್ಳಿಗಳಲ್ಲಂತೂ ಇವನು ಬಲಿಷ್ಠ, ಸಾಹುಕಾರ ಇವನಿಗೆ ಇದೆಯೆಂದು ಯಾರೂ ಬಡವರು ಹೇಳಲು ತಯಾರಿಲ್ಲ. ವಿಲೇಜ್ ಅಕೌಂಟ್‌ಟೆಂಟ್ adjustment, identification ಮಾಡಿರುವವರಿಗೆ adjustment ಯಾರೂ ಮಾಡುವುದಿಲ್ಲ. ನೀವು ಏನಾದರೂ ಒಂದನ್ನು ತೆಗೆದುಕೊಂಡು ಬನ್ನಿ. ನೀವು ಈ ಬಡವರಿಗೆ ಎಷ್ಟು ದಿವಸಗಳಲ್ಲಿ ಈ ಸಮಸ್ಯೆಯನ್ನು ಬಗೆಹರಿಸುತ್ತೀರಿ ಎಂದು ಸಮಯ ಕೊಡಿ. ನೀವು ಇಲ್ಲಿ ಉತ್ತರ ಹೇಳಿದ ಮೇಲೆ ನಾವು ಮುಂದೆ ಭರವಸೆ ಸಮಿತಿಗೆ ಬರುತ್ತೇವೆ. ದಯವಿಟ್ಟು ಇದನ್ನು ಗಮನದಲ್ಲಿ ಇಟ್ಟುಕೊಂಡು ತಾವು ಎಷ್ಟು ದಿವಸದಲ್ಲಿ ಈ problemನ್ನು ಪರಿಹಾರ ಮಾಡುತ್ತೇನೆಂದು ಹೇಳಿ. ಇಲ್ಲದಿದ್ದರೆ ನೆಮ್ಮದಿ ಕಾರ್ಡ್ ಯಾರ್ಯಾರಿಗಿದೆ ಅವರಿಗೆ ಅಕ್ಕಿ ಕೊಡುವುದಕ್ಕೆ ಅಲಾಟ್‌ಮೆಂಟ್ ಮಾಡಿ. ಹತ್ತು ಕೆ.ಜಿ. ಕೊಡಿ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಶಿವಕುಮಾರ್‌ರವರ ಕ್ಷೇತ್ರಕ್ಕೆ ನಾನು ಹೋಗಿದ್ದೆ. ಇವರು ಒಂದು cell ನ್ನು ನಿಮಗೆ parallel ಆಗಿ create ಮಾಡಿಬಿಟ್ಟಿದ್ದಾರೆ. ಯಾರ್ಯಾರು eligible ಇದ್ದಾರೆ, ineligible ಇದ್ದಾರೆ ಎಂದು. ನಾನು ಅವರನ್ನು ಕೇಳಿದೆ, ನಿಜವಾಗಿಯೂ he has done a very good work. Parallel ಆಗಿ identify ಮಾಡುವುದಕ್ಕೆ ಸರ್ಕಾರಕ್ಕೆ ಸಹಾಯ ಮಾಡುವುದಕ್ಕೆ, ಅರ್ಜಿಗಳನ್ನು ಕೊಡಿಸತಕ್ಕದ್ದು, help ಮಾಡತಕ್ಕದ್ದಕ್ಕೆ ಒಂದು ಟೀಮ್‌ನ್ನೇ ಮಾಡಿಬಿಟ್ಟಿದ್ದಾರೆ. ಅವರ ಅನುಭವಗಳನ್ನು ಕೇಳಿಬಿಟ್ಟರೆ ನಾನು ಹೇಳುತ್ತೇನೆ 25% ಅಲ್ಲಾ 30–40 ಪರ್ಸೆಂಟ್ of the eligible ನ್ನು

ineligible ಮಾಡಿ ಇಟ್ಟಿದ್ದಾರೆ. ಅವರ access ಇಲ್ಲದ ರೀತಿಯಲ್ಲಿ ಮಾಡಿದ್ದಾರೆ. ಅದರಲ್ಲಿ ಕುಂಟರು, ಕುರುಡರನ್ನು ಕೇಳುವವರೇ ಇಲ್ಲದ ಗತಿಯಾಗಿದೆ. ದಯಮಾಡಿ ಏನಾದರೂ ಹೊಸ ರೀತಿಯಲ್ಲಿ ಯೋಚನೆ ಮಾಡಿ. ತಾತ್ಕಾಲಿಕ ಪಡಿತರ ಕಾರ್ಡ್ ಎಂದು ನಾನು ಕೊಟ್ಟು ಮಾಡಿದ ಪಾಪ ಇದು. ಇದು ಈ ರೀತಿ ಆಗುತ್ತಿದೆ. ನನ್ನ ಉದ್ದೇಶ ಏನು ಇತ್ತು ಎಂದರೆ permanent card ನ್ನು ಮೂರು ತಿಂಗಳಿನಲ್ಲಿ ಕೊಡಬೇಕೆಂದು. ಅದು ಆಗಲಿಲ್ಲ. ಈಗಲೂ ಅದು ಆಗಿಲ್ಲ.

ಶ್ರೀ ಹೆಚ್. ಹಾಲಪ್ಪ : ಹಿರಿಯ ಸದಸ್ಯರುಗಳು ಪ್ರಶ್ನೆಯನ್ನು ಕೇಳಿದ್ದಾರೆ. ಉತ್ತರವನ್ನೂ ಅವರಿಬ್ಬರೇ ಹೇಳಿದ್ದಾರೆ. ಆದರೆ, ಇಷ್ಟೇ ದಿವಸದಲ್ಲಿ ಕೊಡುತ್ತೇನೆಂದು ಹೇಳುವುದಕ್ಕೆ ಕಷ್ಟವಿದೆ. ಏಕೆಂದರೆ, ಇದು ನಿರಂತರ ಪ್ರಕ್ರಿಯೆ. ಬಹಳ ವರ್ಷಗಳಿಂದ ದೊಡ್ಡ ದೊಡ್ಡ ಮಂತ್ರಿಗಳು, ಹಿರಿಯ ಸದಸ್ಯರುಗಳು ಮಾಡಿಕೊಂಡು ಬಂದಿದ್ದಾರೆ. ಮೂರು ಜನ ಮಂತ್ರಿಗಳು ಇಲ್ಲೇ ಇದ್ದಾರೆ. ಅವರು ಸಹ ಆ ಪ್ರಯತ್ನ ಮಾಡಿದ್ದಾರೆ, ಇದ್ದಿದ್ದರಲ್ಲಿ ನಾನು ಸ್ವಲ್ಪ ಜಾಸ್ತಿ ಕೆಲಸ ಮಾಡುವ ಪ್ರಯತ್ನವನ್ನು ಮಾಡಿದ್ದೇನೆ. ಯಾರ್ಯಾರು ಬಿಟ್ಟುಹೋಗಿದ್ದಾರೆ ಮುಂದಿನ ದಿವಸಗಳಲ್ಲಿ ಡಿ.ಸಿ.ಗಳಿಗೆ ಅಧಿಕಾರ ಕೊಟ್ಟು ಡಿ.ಸಿ.ಯವರು, ಜನಪ್ರತಿನಿಧಿಗಳು, ನಮ್ಮ ಶಾಸಕರು, ಎಂ.ಎಲ್.ಸಿ. ಯವರನ್ನು ಕೂರಿಸಿ ಕರೆದು ಏನು ಮಾಡಬಹುದು ಎಂದು ಅಲ್ಲೇ ಪರಿಹಾರ ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಯಾವ ಶಾಸಕರೂ ಬೇಡ. ಯಾರು ಅರ್ಹರಿದ್ದಾರೆ ಅವರಿಗೆ ಕೊಡಿ ಅಷ್ಟೆ. ಯಾವ ಎಂ.ಎಲ್.ಎ., ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಬೇಡ. ನೀವು ಏನು criteria fix ಮಾಡಿದ್ದೀರಿ ಎಷ್ಟು ಜಮೀನು, ಎಷ್ಟು ದುಡ್ಡು ಅದರ ಆಧಾರದ ಮೇಲೆ ಯಾರು ಅರ್ಹರಿದ್ದಾರೆ ಅವರಿಗೆ ಕೊಡಿಸಿಬಿಡಿ. ನಾವು ಯಾರೂ ಬೇಡ. ಬಡವರು ಯಾರಿಗೆ ಸಿಗಬೇಕೋ ಅವರಿಗೆ ಸಿಗಬೇಕು ಅಷ್ಟೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ನಾವೆಲ್ಲ ಅಲ್ಲಿಗೆ ಹೋದರೆ ತಾರಾತಮ್ಯವಾಗುವುದು. ನಾವು ಯಾರೂ ಬೇಡ. ಅವರು ಹೇಳಿದಂತೆ ಬಡವರಿಗೆ, ನಿಜವಾಗಿಯೂ ಯಾರು ಅರ್ಹರಿದ್ದಾರೆ ಅವರಿಗೆ ಕಾರ್ಡ್ ಸಿಗಲಿ. ಒಂದು ವೇಳೆ ನಾವು ಹೋದರೆ ನೀವು 40 ವರ್ಷದಿಂದ ಗೆದ್ದಿದ್ದೀರಿ

ನನಗೆ ಎರಡು ಕಾರ್ಡ್ ಕೊಡಿಯೆಂದು ಕೇಳುವವರ ಜಾಸ್ತಿಯಾಗುತ್ತಾರೆ. ಆದ್ದರಿಂದ ನಾವು ಯಾರೂ ಬೇಡ.

ಶ್ರೀ ಹೆಚ್.ಹಾಲಪ್ಪ : ಖಂಡಿತವಾಗಿ ಆ ಕೆಲಸವನ್ನು ಮುಂದೆ ಮಾಡುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್ : ಸಮಯವನ್ನು ಹೇಳಿ.

ಶ್ರೀ ಹೆಚ್. ಹಾಲಪ್ಪ : Time ನ್ನು ಹೇಳುವುದಕ್ಕೆ ಆಗುವುದಿಲ್ಲ. ನಿಮ್ಮ ಕೈಯಿಂದಲೇ ಆಗದಿರುವುದನ್ನು ನಾನು ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ತಾವು ಒಂದು ಪೈಲೆಟ್ ಪ್ರಾಜೆಕ್ಟ್ ಮಾಡಿ. ಕನಕಪುರ ತಾಲ್ಲೂಕನ್ನು ಒಂದು ಸಲ ತೆಗೆದುಕೊಂಡು Time ಕೊಡಿ. ಇಲ್ಲದಿದ್ದರೆ ನಿಮ್ಮಲ್ಲಿರುವವರಿಗೇ ಒಂದು ಕ್ಷೇತ್ರಕ್ಕೆ ಕೊಡಿ. You take up a pilot Project. ಯಾವುದಾದರೂ ಒಂದು ತಾಲ್ಲೂಕಿಗೆ ಕೊಡಿ. You know the difference.

ಹೆಚ್. ಹಾಲಪ್ಪ : 1–2 ತಾಲ್ಲೂಕುಗಳನ್ನು ಪೈಲೆಟ್ ಪ್ರಾಜೆಕ್ಟ್ ಆಗಿ ತೆಗೆದುಕೊಳ್ಳಬಹುದು. ತೆಗೆದುಕೊಳ್ಳೋಣ, ಒಳ್ಳೆಯ ಸಲಹೆ. ಆದರೆ, ಅಲ್ಲಿ ಮಾಡುವಾಗ ಮುಕ್ತವಾಗಿ ಬಿಡಬೇಕು. ಏನಾಯಿತು ಎಂದರೆ, ನಾವು 78 ಲಕ್ಷ ಕಾರ್ಡುನ್ನು ಕೊಟ್ಟಿದ್ದೆವು. ನಾವು ಮೆಮ್ಮದಿ ಕಾರ್ಡ್ ಸೇರಿ 1 ಕೋಟಿ 6 ಲಕ್ಷ 68 ಸಾವಿರದ 857 ಕಾರ್ಡ್ ಕೊಟ್ಟೆವು. ಇದು ಹೆಚ್ಚಾಗಿ ಹೋಯಿತು, ಗ್ರಾಮ ಸಭೆಗಳಿಗೆ ಹೋದರೆ ನಮಗೆ ಕಾರ್ಡ್ ಸಿಕ್ಕಿಲ್ಲ ಎಂದು ಐದಾರು ಜನರು ಹೇಳುತ್ತಾರೆ. ಆದರೆ, ಆ ಊರಿನಲ್ಲಿರುವ ಮನೆಗಳೆಷ್ಟು, ಕೊಟ್ಟಿರುವ ಕಾರ್ಡ್ ಎಷ್ಟು ಎಂದು ಕೇಳಿದರೆ ಮನೆಗಳಿಗಿಂತಾ ಹೆಚ್ಚು ಕಾರ್ಡ್‌ಗಳನ್ನು ಕೊಟ್ಟಿದ್ದೇವೆ. ಹೆಚ್ಚುವರಿ ಕಾರ್ಡುಗಳನ್ನು ತೆಗೆಯುವುದು ಹೇಗೆ? ನಾವು ತೆಗೆಯಿರಿ ಎಂದು ಹೇಳಿದೆವು. ಪ್ರಧಾನ ಕಾರ್ಯದರ್ಶಿಯವರಿಗೆ ಹೆಚ್ಚುವರಿಯನ್ನು ತೆಗೆಯಿರಿ ಯೆಂದು ನಮ್ಮ ಸಭೆಯಲ್ಲಿ ಹೇಳಿದೆವು. ಅವರು ಡಿ.ಸಿ. ಯವರಿಗೆ ಹೇಳಿದರು. ಡಿ.ಸಿ. ಯವರು ತಹಶೀಲ್ದಾರರಿಗೆ ಹೇಳಿದರು. ತಹಶೀಲ್ದಾರರು ವಿ.ಎ., ಆರ್.ಐ., ಗ್ರಾಮ ಪಂಚಾಯಿತಿ ಕಾರ್ಯದರ್ಶಿಯವರಿಗೆ ಮೀಟಿಂಗ್ ಮಾಡಿ ಹೇಳಿದರು. ಅವರು ಇಂತಿಂಥವರನ್ನು ತೆಗೆಯಬೇಕೆಂದು ಹೇಳಿದರು. ಇದು ರಾಜ್ಯಪಾಲರ ಕಾಲದಲ್ಲಿ ಆಗಿದ್ದು.

ಅವರು ಯಾರ ಮನೆಗೂ ಹೋಗಲೇ ಇಲ್ಲ. ಕೆಲವು ಮನೆಗೆ ಹೋದರು, ಗ್ರಾಮ ಪಂಚಾಯಿತಿಯಲ್ಲಿ ಕುಳಿತುಕೊಂಡು ಮಾಡಿದರು. ಅಲ್ಲಿ

ಒಬ್ಬ ಪಂಚಾಯಿತಿಯ ಸದಸ್ಯ ಇದ್ದ. "ನಾನು ಇಲ್ಲವೇ, ಬಾರಯ್ಯ ಕಾರ್ಯದರ್ಶಿ, ಬಾರಯ್ಯ ವಿ.ಎ." ಎಂದು ಹೇಳಿದ, "ಯಾರನ್ನು ಕೇಳಿ ಇವರನ್ನು ತೆಗೆಯುತ್ತೀಯಾ? ಅವರಿಗೆ ಒಂದು ನಾಲ್ಕು, ಇವರಿಗೆ ಒಂದು ನಾಲ್ಕು ಕೊಡು" ಎಂದು ಕೊಡಿಸಿ, ಈ ರೀತಿ ಆಗಿದೆ. ವಿ.ಎ., ಕಾರ್ಯದರ್ಶಿ ಗಳಿಗೆ ಪೂರ್ತಿಯಾಗಿ ಸ್ವಾತಂತ್ರ್ಯ ಇಲ್ಲ. ನೀವು ಹಿರಿಯರಿದ್ದೀರಿ ನಿಮಗೂ ಇದು ಗೊತ್ತಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅದಲ್ಲಾ ಮಾನ್ಯ ಸಚಿವರೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು ಮೊದಲು ಉತ್ತರ ಹೇಳಲಿ. ಉತ್ತರ ಬೇಡ ಎಂದರೆ ಮುಂದಿನ ಪ್ರಶ್ನೆಗೆ ಹೋಗೋಣ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಅವರು ಉತ್ತರ ಹೇಳುತ್ತಿದ್ದಾರೆ.

ಶ್ರೀ ಹೆಚ್. ಹಾಲಪ್ಪ : ಈ ವಿಚಾರದಲ್ಲಿ ಕೆ.ಎಂ. ಶಿವಲಿಂಗೇಗೌಡರು, ಸಿದ್ದು ಸವದಿಯವರು ಮತ್ತು ಅಂಗಾರರವರು ಬಹಳ ಪ್ರಯತ್ನ ಮಾಡಿದರು. ಕೇವಲ 311 ಕಾರ್ಡುಗಳು ಕೊಟ್ಟರೆ ಸಾಕು ಎಂದು ಅವರು ಮಾಡಿದ್ದಾರೆ. ಆ ರೀತಿ ಕನಕಪುರ, ನನ್ನ ಸೊರಬ ಸೇರಿಸಿ ಮೂರ್‍ನಾಕು ತೆಗೆದುಕೊಂಡು ಪೈಲೆಟ್ ಪ್ರಾಜೆಕ್ಟ್ ಮಾಡುತ್ತೇವೆ. ಆ ರೀತಿ ಮಾಡಿದ ಮೇಲೆ ತಮಗೂ ತಿಳಿಸುತ್ತೇವೆ. ಈ ವಿಚಾರದಲ್ಲಿ ಎಲ್ಲಾ ಶಾಸಕರಿಗೆ, ಸಚಿವರುಗಳಿಗೆ ಈ ರೀತಿ ಕೆಸಲಗಳು ಆಗುತ್ತಿದೆಯೆಂದು ನಾನು ಪತ್ರವನ್ನು ಬರೆದು ಆಗಿಂದಾಗ್ಗೆ ತಿಳಿಸಿದ್ದೇನೆ. ಪ್ರಯತ್ನವಂತೂ ಮಾಡಿದ್ದೇವೆ. ಮುಂದಿನ ದಿವಸಗಳಲ್ಲಿ ಡಿ.ಸಿ.ಗಳಿಗೆ ಅಧಿಕಾರ ಕೊಟ್ಟು ರಾಜಕೀಯ ಮಧ್ಯಪ್ರದೇಶ ಇಲ್ಲದಿದ್ದಂತೆ ವಿ.ಎ., ಆರ್.ಐ. ಗಳನ್ನು ಹೆಚ್ಚು ಸೇರಿಸಿಕೊಂಡು ಮಾಡುತ್ತೇವೆ. ಎಲ್ಲರ ಸಹಕಾರ ಬೇಕು. ಆದರೆ, ಇದು ನಿರಂತರವಾಗಿ ನಡೆಯುವಂಥದ್ದು. ಇದು ಒಂದು ದಿವಸದಲ್ಲಿ ಮುಗಿದು ಹೋಗುವುದಿಲ್ಲ.

(ಗೊಂದಲ)

ಶ್ರೀ ಪ್ರಕಾಶ್ ಬಬಣ್ಣ ಹುಕ್ಕೇರಿ : ನಮ್ಮ ಚಿಕ್ಕೋಡಿ-ಸದಲಗಾ ಕ್ಷೇತ್ರ ಗಡಿ ಭಾಗದಲ್ಲಿದೆ. ಮಾನ್ಯ ಸಚಿವರು ದಯವಿಟ್ಟು ಅದನ್ನೂ ಸೇರಿಸಿಕೊಳ್ಳಬೇಕು.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಪ್ರಕಾಶ್ ಹುಕ್ಕೇರಿಯವರ ಚಿಕ್ಕೋಡಿ–ಸದಲಗಾ ಕ್ಷೇತ್ರದ್ದು ಸೇರಿಸಿದರೆ, ಅಲ್ಲಿನ ಸಮಸ್ಯೆ ಎಂದಿಗೂ ಬಗೆಹರಿಯುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಹಾಲಪ್ಪ : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಕೇಂದ್ರ ಸರ್ಕಾರ ದವರು ಮೀಟಿಂಗ್‌ವೊಂದನ್ನು ಕರೆದಿದ್ದರು. ಸದರಿ ಮೀಟಿಂಗ್‌ಗೆ ನಾನೂ ಸಹ ಹೋಗಿದ್ದೆ, ನಮ್ಮ ಅಧಿಕಾರಿಗಳೂ ಸಹ ಬಂದಿದ್ದರು. ಇಡೀ ದೇಶದಲ್ಲೇ ಈ ಪ್ರಾಬ್ಲಂ ಇದೆ. ಪಶ್ಚಿಮ ಬಂಗಾಳ, ಗುಜರಾತ್ ಮತ್ತು ಕೇರಳ ಅಲ್ಲಿ ಮಾತ್ರ even today ಕೇಂದ್ರ ಸರ್ಕಾರ ಎಷ್ಟನ್ನು ನಿಗದಿ ಮಾಡಿದ್ದಾರೋ ಅಷ್ಟನ್ನೇ ಕೊಡುತ್ತಿದ್ದಾರೆ. ಬಾಕಿ ಎಲ್ಲಾ ರಾಜ್ಯಗಳಲ್ಲೂ ಕೂಡ ಈ ಸಮಸ್ಯೆ ಇದೆ. ಆ ರಾಜ್ಯಗಳಲ್ಲೂ ಸಹ ಒತ್ತಡ ಇದೆ. ತಮಿಳುನಾಡಿನಲ್ಲಿ ಎಲ್ಲರಿಗೂ ಅಕ್ಕಿ ಕೊಡುತ್ತಿದ್ದಾರೆಂದು ಕೇಳಲ್ಪಟ್ಟಿದ್ದೇನೆ. ಆಂಧ್ರದಲ್ಲಿ ಶೇಕಡ 90 ರಷ್ಟು ಇದೆ ಎಂದು ಅವರೇ ಮೀಟಿಂಗ್‌ನಲ್ಲಿ ಹೇಳಿದರು. ಶ್ರೀಮತಿ ಶೀಲಾ ದೀಕ್ಷತ್ ರವರು, 'ನಮ್ಮ ಕೈಯಲ್ಲಿ ಇದು ಆಗುವುದಿಲ್ಲ, ಸಬ್ಸಿಡಿ ದುಡ್ಡನ್ನು ಅವರಿಗೇ ಕೊಟ್ಟುಬಿಡೋಣ' ಎಂದು ಮೊನ್ನೆ Prime Minister ಇದ್ದಾಗ ಸಲಹೆ ಯೊಂದನ್ನು ಕೊಟ್ಟರು. ಆದರೆ ಬಂದಿದ್ದ ಬೇರೆ ಮುಖ್ಯಮಂತ್ರಿಗಳೆಲ್ಲಾ 'ಅದು ಆಗುವುದಿಲ್ಲ' ಎಂದರು. ಹೀಗೆ ಇದು ನನ್ನೊಬ್ಬನ ಸಮಸ್ಯೆಯಲ್ಲ, ಇದು ದೇಶವ್ಯಾಪ್ತಿಯ ಸಮಸ್ಯೆಯಾಗಿದೆ. ಪೈಲಟ್ ಪ್ರಾಜೆಕ್ಟ್ ತೆಗೆದುಕೊಳ್ಳಬೇಕೆಂದು ಸಲಹೆ ಕೊಟ್ಟಿದ್ದೀರಿ, ಅದು ಒಳ್ಳೆಯದು. ಆಸಕ್ತಿ ಇರತಕ್ಕ 4 ಕ್ಷೇತ್ರಗಳನ್ನು ತೆಗೆದುಕೊಂಡು ಇದನ್ನು ಮುಂದಿನ ದಿನಗಳಲ್ಲಿ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

(ಗೊಂದಲ)

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ನಮ್ಮದೊಂದು ಸೇರಿಸಿಕೊಳ್ಳಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಅಕ್ಕಿಸಂತೆ ಮಾಡುವ ಮೂಲಕ ಮಾನ್ಯ ಸಚಿವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆ ಗಳನ್ನು ಸಲ್ಲಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಇಲ್ಲಿ ಎಷ್ಟು ಸ್ವಾರ್ಥವಿದೆ ನೋಡಿ. ಇವರಿಗೆ favour ಮಾಡಿದ್ದರಿಂದಾಗಿ, ಮಾನ್ಯ ಸಚಿವರನ್ನು ಅವರು ಹೊಗಳುತ್ತಿದ್ದಾರೆ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 19ನೇ ಮಾರ್ಚ್ 2010ರ 9ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 101 ಪ್ರಶ್ನೆಗಳ ಪೈಕಿ 76 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2009ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕಪರಿಶೋಧನಾ (ವಾಣಿಜ್ಯ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

ವಿಷಯ : ಮೈಸೂರಿನ ಅರಣ್ಯ ಪ್ರದೇಶಗಳಲ್ಲಿ ಹಬ್ಬಿರುವ ಕಾಡ್ಗಿಚ್ಚನ್ನು ನಂದಿಸಲು ಕ್ರಮ ಕೈಗೊಳ್ಳುವ ಬಗ್ಗೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲಿ ಇತ್ತೀಚೆಗೆ ಕಾಡು ಪ್ರದೇಶಗಳಲ್ಲಿ, ಅದು ನಾಗರಹೊಳೆ ಇರಬಹುದು, ಚಾಮುಂಡಿ ಬೆಟ್ಟ ಇರಬಹುದು ಅಥವಾ ಬಿಳಿರಂಗನ ಬೆಟ್ಟ ಇರಬಹುದು, ವೀರ ಹೊಸಹಳ್ಳಿ ಅರಣ್ಯ ಪ್ರದೇಶ

ಇರಬಹುದು, ಇವೆಲ್ಲಾ ಕಡೆಗಳಲ್ಲಿ ಕಡಿಗೆ ಕಾಡ್ಗಿಚ್ಚು ಬಂದು ಬೆಂಕಿ ಅನಾಹುತದಿಂದ ಸಾಕಷ್ಟು ಕಾಡು ನಾಶವಾಗುತ್ತಿದೆ. ಈ ಬೆಂಕಿಯನ್ನು ನಂದಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆಯಿಂದ ಸರಿಯಾದಂತಹ ಕಾರ್ಯಕ್ರಮ ಆಗುತ್ತಿಲ್ಲ. ಈ ಕಾರಣದಿಂದ ಬಿಳಿಗಿರಿರಂಗನ ಬೆಟ್ಟದಲ್ಲಿ ಸುಮಾರು 2 ಸಾವಿರ ಎಕರೆ ಅರಣ್ಯ ಪ್ರದೇಶ ನಾಶವಾಗಿದೆ. ಇದರ ಬಗ್ಗೆ ಸರಿಯಾದ ಸಿಬ್ಬಂದಿ ವ್ಯವಸ್ಥೆಯಿಲ್ಲ. ಬೇಸಿಗೆ ಸಂದರ್ಭದಲ್ಲಿ ಅಲ್ಲಲ್ಲಿ ಒಣಗಿರುವಂತಹ ಮರಗಳ ಘರ್ಷಣೆಯಿಂದ ಬೆಂಕಿ ಉದ್ಭವವಾಗುತ್ತದೆ. ಕೆಲವು ಕಡೆ ಇದೇ ಒಂದು ಸಂದರ್ಭವನ್ನು ಬಳಸಿಕೊಂಡು ಕಿಡಿಗೇಡಿಗಳು ಬೇರೆ ರೀತಿಯ, ಅವರ ಒಂದು ಕಳ್ಳ ಸಾಗಾಣಿಕೆ ಇರಬಹುದು, ಇನ್ನಾವುದೇ ರೀತಿಯ ವಿಚಾರಗಳನ್ನು ಇಟ್ಟುಕೊಂಡು ಆಗಾಗ ಪ್ರತಿ ವರ್ಷ ಈ ರೀತಿ ಕಾಡ್ಗಿಚ್ಚು ಆಗುವಂತಹ ಸಂದರ್ಭ ನಮ್ಮ ಭಾಗದಲ್ಲಿ ನಿರಂತ್ರವಾಗಿ ನಡೆಯುತ್ತಿದೆ. ಇದನ್ನು ತಡೆಗಟ್ಟುವಂತಹ ಪೂರ್ವಭಾವಿ ಸಿದ್ಧತೆಯನ್ನು ಇಲಾಖೆಯವರು ಏನೂ ಮಾಡಿಕೊಳ್ಳುವುದಿಲ್ಲ. ಆ ಕಾಡ್ಗಿಚ್ಚು ಆದಮೇಲೆ ಅವರು ಎಲ್ಲಾ ರೀತಿಯ ಪ್ರಯತ್ನಗಳನ್ನು ನಡೆಸುತ್ತಾರೆ. ನಾವು ಆ ಕ್ರಮ ತೆಗೆದುಕೊಂಡಿದ್ದೇವೆ, ಈ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳುತ್ತಾರೆ. ಇವರು ಹೋಗುವಷ್ಟರಲ್ಲಿ ಸಾವಿರಾರು ಎಕರೆ ಆ ಕಾಡು ನಾಶವಾಗುತ್ತದೆ. ಕಳೆದ ವಾರದಲ್ಲಿ 8–9 ಕಡೆ, ನಿಮ್ಮ ಮಡಿಕೇರಿಯಿಂದ ಹಿಡಿದು ನಮ್ಮ ಬಿಳಿಗಿರಿರಂಗನ ಬೆಟ್ಟದವರೆಗೆ ನಾನಾ ಕಡೆ ಈ ರೀತಿ ಕಾಡ್ಗಿಚ್ಚು ಆಗಿರುವಂತಹ ಪ್ರಕರಣವಾಗಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆಯೂ ಮಾಹಿತಿಯಿಲ್ಲ. ಈ ಬಗ್ಗೆ ಇಲಾಖೆಯವರನ್ನು ಕೇಳಿದರೂ ಕೂಡ ಯಾವುದೇ ರೀತಿಯಾದ ಉತ್ತರವನ್ನು ನಮಗೆ ಸಮರ್ಪಕವಾಗಿ ಕೊಡುತ್ತಿಲ್ಲ. ಇದರ ಬಗ್ಗೆ ಸರ್ಕಾರ ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಹೆಚ್.ಎಸ್. ಮಹಾದೇವ ಪ್ರಸಾದ್‌ರವರು ಇವತ್ತು ಶೂನ್ಯ ವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಪ್ರಸ್ತಾಪ ಮಾಡಿರುವಂತಹ ವಿಚಾರಕ್ಕೆ ಉತ್ತರ ಈ ರೀತಿ ಇದೆ.

ನಾಗರಹೊಳೆ ರಾಷ್ಟ್ರೀಯ ಉದ್ಯಾವನದಲ್ಲಿ ಬೆಂಕಿ ಬಿದ್ದ ಪ್ರಕರಣ : ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ವೀರನಹೊಸಹಳ್ಳಿ ವನ್ಯ ಜೀವಿ ವಲಯದಲ್ಲಿ 12,451 ಎಕರೆ ಅರಣ್ಯ ಪ್ರದೇಶವಿದ್ದು, ಇದರಲ್ಲಿ CPT 7 ಮತ್ತು 8ರ ದಟ್ಟಿಹಳ್ಳ ಅರಣ್ಯ ಪ್ರದೇಶದಲ್ಲಿ ದಿನಾಂಕ: 13.03.2010 ರಂದು ಅಂದಾಜು 10 ಎಕರೆಯಿಂದ 12 ಎಕರೆ ಅರಣ್ಯ ಪ್ರದೇಶಕ್ಕೆ ಬೆಂಕಿ ತಗುಲಿರುತ್ತದೆ. ಬೆಂಕಿ ಕಾಣಿಸಿಕೊಂಡ ತಕ್ಷಣ ಅರಣ್ಯ ಸಿಬ್ಬಂದಿ, ಬೆಂಕಿ ತಡೆ ಕಾವಲುಗಾರರು ಹಾಗೂ ಸುತ್ತಮುತ್ತಲ ಗ್ರಾಮಸ್ಥರ ಸಹಕಾರ ಪಡೆದು ಹೆಚ್ಚಿನ ಅರಣ್ಯ ಪ್ರದೇಶಕ್ಕೆ ಬೆಂಕಿ ಹರಡದಂತೆ ಬೆಂಕಿಯನ್ನು ನಂದಿಸಲಾಗಿರುತ್ತದೆ. ಸದರಿ ಪ್ರದೇಶವು ಹುಲ್ಲಿನಿಂದ ಕೂಡಿದ ಕುರುಚಲು ಪೊದೆಗಳ ಅರಣ್ಯ ಪ್ರದೇಶವಾಗಿದ್ದು, ವಿರಳವಾಗಿ ಗೆಜ್ಜಲು ಜಾತಿ ಪುನರ್ ಉತ್ಪತ್ತಿ ಗಿಡಗಳಿಂದ ಕೂಡಿದ್ದು, ನೆಲ ಬೆಕಿಯಿಂದ ಒಣ ಹುಲ್ಲು ಮತ್ತು ತರಗಲು ಮಾತ್ರ ಬೆಂಕಿಗೆ ಆಹುತಿಯಾಗಿರುತ್ತದೆ. ಇದರಿಂದ ಯಾವುದೇ ಪ್ರಾಣಿ ಸಂಕುಲಕ್ಕೆ ಹಾಗೂ ಬೆಲೆ ಬಾಳುವ ಮರಮುಟ್ಟುಗಳಿಗೆ ಹಾನಿ ಉಂಟಾಗಿರುವುದಿಲ್ಲ. ಸದರಿ ಪ್ರದೇಶವು ಜಿ.ಎಂ.ಹಳ್ಳಿ ಹಾಗೂ ಸೊಳ್ಳೆಪುರ ಗ್ರಾಮಗಳ ಕಾಡಂಚಿನ ಅರಣ್ಯ ಪ್ರದೇಶವಾಗಿದ್ದು, ಅಲ್ಲಿಯ ಕೆಲವು ದುಷ್ಕರ್ಮಿಗಳು ಕಾಡಿನೊಳಗೆ ಅಕ್ರಮ ಚಟುವಟಿಕೆ ನಡೆಸುವ ಉದ್ದೇಶದಿಂದ ಕಾಡಿಗೆ ಬೆಂಕಿ ಹಾಕಿರುವ ಸಂಭವವಿರುತ್ತದೆ. ಈ ಬಗ್ಗೆ ಅರಣ್ಯ ಮೊಕದ್ದಮೆ ಸಂಖ್ಯೆ : 9/2009–10 ರಲಿ ದಾಖಲಿಸಿದ್ದು, ದುಷ್ಕರ್ಮಿಗಳನ್ನು ಪತ್ತೆ ಹಚ್ಚಲು ತನಿಖೆ ನಡೆಸಲಾಗುತ್ತಿದೆ. ಹಾಲಿ ಸಿಬ್ಬಂದಿಯಿಂದ ರಕ್ಷಣಾ ಕಾರ್ಯ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದು, ಬೆಂಕಿ ರಕ್ಷಣೆಗಾಗಿ 40 ಜನ ಹಂಗಾಮಿ ಬೆಂಕಿ ತಡೆ ಕಾವಲುಗಾರರನ್ನು ನೇಮಿಸಿಕೊಂಡು ಹಾಗೂ 140 ಕಿ.ಮೀ. ಉದ್ದದ ಬೆಂಕಿ ರೇಖೆಗಳನ್ನು ನಿರ್ವಹಣೆ ಮಾಡಿ, ಬೆಂಕಿಯಿಂದ ಕಾಡನ್ನು ರಕ್ಷಿಸುವ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ.

ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಬೆಂಕಿ ಬಿದ್ದ ಪ್ರಕರಣ : ಚಮುಂಡಿ ಬೆಟ್ಟದಲ್ಲಿ ದಿನಾಂಕ: 15.03.2010 ರಂದು ಅಪರಾಹ್ನ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡು ಗಾಳಿಯಿಂದಾಗಿ ಸುಮಾರು 4 ಎಕರೆ ಪ್ರದೇಶಕ್ಕೆ ಹರಡಿ ಹುಲ್ಲು ಸುಟ್ಟು ಹೋಗಿರುತ್ತದೆ. ಇದು ನೆಲ ಬೆಂಕಿಯಾದ್ದರಿಂದ ಮರಗಿಡಗಳು, ವನ್ಯ ಸಂಪತ್ತಿಗೆ ಮತ್ತು ವನ್ಯ ಪ್ರಾಣಿಗಳಿಗೆ ಯಾವುದೇ ಹಾನಿ ಉಂಟಾಗಿರುವುದಿಲ್ಲ. ಸ್ಥಳದಲ್ಲಿ ಗಸ್ತಿನಲ್ಲಿದ್ದ ಸಿಬ್ಬಂದಿಗಳು ತಕ್ಷಣ ಬೆಂಕಿ ನಂದಿಸಲು ಕಾರ್ಯ ಪ್ರವೃತ್ತರಾಗಿ ಬೆಂಕಿಯನ್ನು ನಂದಿಸಿರುತ್ತಾರೆ.

ಆಕಸ್ಮಿಕವಾಗಿ ಬಿದ್ದ ಬೆಂಕಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ತನಿಖೆ ಮಾಡಲಾಗಿ, ನಿಖರವದ ಕಾರಣ ತಿಳಿದು ಬಂದಿರುವುದಿಲ್ಲ. ಅದರೂ ಸಹ ಪ್ರವಾಸಿಗರು ಅಥವಾ ಕಿಡಿಗೇಡಿಗಳು ಬೀಡಿ ಸಿಗರೇಟು ಸೇದಿ ಬಿಸಾಕಿದ ತುಂಡಿನಿಂದ ಬೆಂಕಿ ಬಿದ್ದಿರಬಹುದು ಎಂದು ತಿಳಿಯಲಾಗಿದೆ.

ಬಿಳಿಗಿರಿರಂಗನ ಬೆಟ್ಟದಲ್ಲಿ ಬೆಂಕಿ ಬಿದ್ದ ಪ್ರಕರಣ : ಬಿಳಿಗಿರಿರಂಗಸ್ವಾಮಿ ದೇವಸ್ಥಾನದ ವನ್ಯಧಾಮ ಅಂದರೆ BRT Sanctuary ಪ್ರದೇಶದ ಒಟ್ಟು ವ್ಯಾಪ್ತಿ 540 ಚ.ಕಿ.ಮೀ. ಇರುತ್ತದೆ. ಸದರಿ ವನ್ಯಧಾಮದಲ್ಲಿ ಆನೆ, ಹುಲಿ, ಚಿರತೆ, ಕಾಡೆಮ್ಮೆ ಇತ್ಯಾದಿ ಪ್ರಮುಖ ವನ್ಯಪ್ರಾಣಿಗಳು ಇರುತ್ತವೆ. ಈ ವನ್ಯಧಾಮವು ಚಾಮರಾಜನಗರ ಜಿಲ್ಲೆಯಲ್ಲಿ ಇರುತ್ತದೆ. BRT ವನ್ಯಧಾಮದಲ್ಲಿ ಬೆಂಕಿ ತಡೆ ಕ್ರಮಗಳಾದ ಬೆಂಕಿ ರೇಖೆಗಳು (fire lines) ನಿರ್ಮಾಣ ಮಾಡಲಾಗಿದೆ ಹಾಗೂ ಬೆಂಕಿ ತಡೆಗಾಗಿ ಈ ಬೇಸಿಗೆ ಕಾಲದಲ್ಲಿ 75 ಜನ ಕಾವಲುಗಾರರನ್ನು ನೇಮಿಸಿಕೊಳ್ಳಲಾಗಿದೆ. ದಿನಾಂಕ: 09.03.2010 ರಂದು ಕೆಲವು ಕಿಡಿಗೇಡಿಗಳು ಯಳಂದೂರು ವನ್ಯಜೀವಿ ವಲಯದ ಅರಣ್ಯ ಪ್ರದೇಶದಲ್ಲಿ 12 ಕಡೆಗಳಲ್ಲಿ ಅಂದರೆ 12 ಬೇರೆ ಬೇರೆ ಜಾಗಗಳಲ್ಲಿ ಬೆಂಕಿಯನ್ನು ಹಚ್ಚಿದ್ದು, ಅಂದೇ ರಾತ್ರಿ ಸಂಪೂರ್ಣವಾಗಿ ಬೆಂಕಿಯನ್ನು ನಂದಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಪ್ರಕರಣದಲ್ಲಿ ನೆಲ ಬೆಂಕಿ, ground fire, ಅಂದಾಜು 250 ಎಕರೆ ಅರಣ್ಯ ಪ್ರದೇಶದಲ್ಲ ಹುಲ್ಲು, ಲಾಂಟಾನಾ ಇತ್ಯಾದಿ ಸಸ್ಯಗಳು ನಾಶವಾಗಿದ್ದು, ಯಾವುದೇ ಪ್ರಮುಖ ವನ್ಯಪ್ರಾಣಿಗಳು ಸತ್ತಿರುವುದಿಲ್ಲ. ದಿನಾಂಕ: 11.03.2010ರ ಬೆಳಿಗ್ಗೆ ಪುನಚೂರು ವನ್ಯಜೀವಿ ವಲಯದ ನಾಲ್ಕು ಕಡೆಗಳಲ್ಲಿ ಅಂದರೆ ನಾಲ್ಕು ಬೇರೆ ಬೇರೆ ಪ್ರದೇಶಗಳಲ್ಲಿ ಮತ್ತೆ ಕೆಲವು ಕಿಡಿಗೇಡಿಗಳು ಬೆಂಕಿ ಹಚ್ಚಿದ್ದು, ಸದರಿ ಪ್ರದೇಶಗಳಲ್ಲಿ ಸಂಪೂರ್ಣವಾಗಿ ಬೆಂಕಿಯನ್ನು ನಂದಿಸಲಾಗಿದೆ. ಈ ಪ್ರಕರಣದಲ್ಲಿಯೂ ಸಹ ನೆಲ ಬೆಂಕಿಯಿಂದ ಅಂದಾಜು 100 ಎಕರೆ ಅರಣ್ಯ ಪ್ರದೇಶದಲ್ಲಿ ಹುಲ್ಲು, ಲಾಂಟಾನಾ ಇತ್ಯಾದಿ ಸಸ್ಯಗಳು ನಾಶವಾಗಿದ್ದು, ಯಾವುದೇ ಪ್ರಮುಖ ವನ್ಯಪ್ರಾಣಿಗಳು ಸತ್ತಿರುವುದಿಲ್ಲ. BRT ವನ್ಯಧಾಮದ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಬೆಂಕಿ ತಡೆಗೆ ಶ್ರಮಿಸುತ್ತಿದ್ದು, ಹೆಚ್ಚಿನ ಅನಾಹುತ ಆಗದಂತೆ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್ : ಏನೊಂದು ಭಾವನೆಯನ್ನಿಟ್ಟುಕೊಂಡು ತಾವೇನು ಹೇಳಿದ್ದೀರಿ, ಅದಕ್ಕೆ ಪೂರಕವಾಗಿ ಸರ್ಕಾರ ಇನ್ನಷ್ಟು ಎಚ್ಚರಿಕೆಯ ಕ್ರಮವನ್ನು ವಹಿಸುತ್ತದೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಮಾನ್ಯ ಸಚಿವರು ಕೊಟ್ಟಂಥ ಉತ್ತರದಲ್ಲಿ ವಾಸ್ತವ ವಿಚಾರವನ್ನು ತಿಳಿಸಿದ್ದಾರೆ, ಇಲ್ಲಿರುವ ಸಮಸ್ಯೆ ಏನೆಂದರೆ, ಕೆಳಹಂತದಲ್ಲಿ ಅರಣ್ಯ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇದೆ. ವಾಚರ್‌ಗಳಿರಬಹುದು, ಗಾರ್ಡ್‌ಗಳು ಇರಬಹುದು, ಅವರು ಬಹಳಷ್ಟು ಸಂಖ್ಯೆಯಲ್ಲಿ ಇಲ್ಲ., ಈಗ ಚಾಮುಂಡಿ ಬೆಟ್ಟದಲ್ಲಿ 5 ಜನವಿರುವ ಕಡೆ ಒಬ್ಬರಿದ್ದಾರೆ ಇಬ್ಬರು ಕಾಯಿಲೆ ಎಂದು ರಜೆ ಹೋಗಿದ್ದಾರೆ. ನಮ್ಮ ಬಂಡೀಪುರವಿರಬಹುದು, ಬಿಆರ್‌ಟಿ ಇರಬಹುದು, ಅಲ್ಲಿಂತು 20% ಈ ವಾಚರ್ ಸಿಬ್ಬಂದಿಗಳಿಲ್ಲ. ಇದರಿಂದ ಕಾಡುಪ್ರಾಣಿಗಳಿಗೆ ಅನಾಹುತವಾಗದೆ ಇರಬಹುದು, ಕಾಡಿನಲ್ಲಿ ಬೆಳೆದಿರುವ ಕುರ್ಚಲ ಗಿಡವಿರಬಹುದು, ಬೇರೆ ಗಿಡಮರಗಳಂತೂ ಸಾಕಷ್ಟು ನಾಶವಾಗಿವೆ. ಮತ್ತೆ ಮಳೆಯಾಗಿ ಮತ್ತೆ ಅವು ಬೆಳೆಯಬೇಕಾದರೆ ಇನ್ನು 4–6 ವರ್ಷ ಕಾಲಾವಕಾಶ ಬೇಕಾಗುತ್ತದೆ. ಈ ತರಹದ ಕಾಡ್ಗಿಚ್ಚನ್ನು ತಡೆಗಟ್ಟುವುದಕ್ಕೆ ತರಬೇತಿ ಇಲ್ಲ. ಅರಣ್ಯ ಇಲಾಖೆಯಲ್ಲಿ ಬೇರೆ ಬೇರೆ ಕೆಲಸಕ್ಕೆ ಅರಣ್ಯ ಸಿಬ್ಬಂದಿಗೆ ತರಬೇತಿ ಕೊಡುತ್ತಾರೆ, ಈ ಕಾಡ್ಗಿಚ್ಚು ಬಂದಂಥ ಸಂದರ್ಭದಲ್ಲಿ, ಈ ಬೇಸಿಗೆ ಕಾಲದಲ್ಲಿ ಅದನ್ನು ಯಾವ ರೀತಿಯಾಗಿ ತಡೆಗಟ್ಟಬೇಕೆನ್ನುವುದಕ್ಕೆ ಒಂದು ವ್ಯವಸ್ಥಿತವಾದ ಕಾರ್ಯಕ್ರಮ ಇಲಾಖೆಯಲ್ಲಿ ಇಲ್ಲದಿರುವುದರಿಂದ, ಇದು ಈ ವರ್ಷ ಮಾತ್ರವಾಗಿರುವುದಲ್ಲ, ಪ್ರತಿ ಬೇಸಿಗೆ ಸಂದರ್ಭದಲ್ಲು ತಮಗೆ ಗೊತ್ತಿರುವಂತೆ ಆಗುತ್ತಿರುತ್ತದೆ. ಅಂಥದ್ದಕ್ಕೆ ಪೂರ್ವಭಾವಿಯಾಗಿ ಸಿದ್ದತೆ ಮಾಡಿಕೊಳ್ಳುವಂಥ ಒಂದು ಕಾರ್ಯಕ್ರಮವಿರಬೇಕು, ಅದಕ್ಕೆ ಸಾಕಷ್ಟು ಅನುದಾನವನ್ನು ಇಲಾಖೆಯಲ್ಲಿ ಒದಗಿಸಬೇಕು. ಇದಕ್ಕೆ ಯಾವುದೇ ರೀತಿಯ ಅನುದಾನದ ವ್ಯವಸ್ಥೆ ಇಲ್ಲದಿರುವುದರಿಂದ, ಅದು ಬಂದಾಗ ಅಲ್ಲಿಗೆ ಒಂದಷ್ಟು ಜನ ಹೋಗುತ್ತಾರೆ, ತಡೆಗಟ್ಟುವುದಕ್ಕೆ ನೀರಿನ ವ್ಯವಸ್ಥೆ ಇರುವುದಿಲ್ಲ, ಅದನ್ನು ಯಾವರೀತಿ ತಡೆಗಟ್ಟಬೇಕೆನ್ನುವುದಕ್ಕೆ ಕಾರ್ಯಕ್ರಮವಿರುವುದಿಲ್ಲ, ಸುಮ್ಮನೆ ನೋಡಿಕೊಂಡು ಬರುತ್ತಾರೆ, ಗಂಭೀರವಾಗಿ ಸರ್ಕಾರ ಒಂದು ಕಾರ್ಯಕ್ರಮವನ್ನು ರೂಪಿಸಬೇಕು.

ಅಧ್ಯಕ್ಷರು : ಈಗ ಶಾಸನ ರಚನೆ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ.ರೇವಣ್ಣ : ಸರ್, ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದು.

ಅಧ್ಯಕ್ಷರು : ನಿಲುವಳಿ ಸೂಚನೆ ವಿಷಯ ಬಂದಿದೆ, ಮತ್ತೆ ಪುನಃ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಎಲ್ಲಿದೆ? ನಿಮಗೆ ಬರವಣಿಗೆಯಲ್ಲಿ ತಿಳಿಸಲಾಗಿದೆ, ಇದಕ್ಕೆ ನಾನು ಅನುಮತಿಯನ್ನು ನಿರಾಕರಿಸಲಾಗಿದೆ..

(ಗೊಂದಲ)

ಶ್ರೀ ಎಂ.ಟಿ.ಕೃಷ್ಣಪ್ಪ : ಆಡಳಿತ ಪಕ್ಷದವರೇ ಚರ್ಚೆಯಾಗಲೆಂದು ಹೇಳಿದ್ದೀರಿ, ತಾವು ಏತಕ್ಕೆ ನಿರಾಕರಿಸುತ್ತೀರಿ?

ಅಧ್ಯಕ್ಷರು : ಆಡಳಿತಪಕ್ಷ ಈ ಪಕ್ಷವೆಂದಲ್ಲ, ಅವರೇನು ಕೇಳಿದ್ದಾರೆ, ಅದಕ್ಕೆ ಅನುಮತಿಯನ್ನು ರೈಟಿಂಗ್‌ನಲ್ಲಿ ಕೊಟ್ಟಾಗಿದೆ, ಇನೇನು ಪ್ರಸ್ತಾಪ ಮಾಡುವುದು? ಅಜೆಂಡಾದಲ್ಲಿ ಆ ವಿಷಯವಿದೆ, ಚರ್ಚೆಯನ್ನು ನೀವೇ ಪ್ರಸ್ತಾಪ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ : ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ..(ಗೊಂದಲ)

ಅಧ್ಯಕ್ಷರು : ನಿಲುವಳಿ ಸೂಚನೆಗೆ ಅವಕಾಶವಿಲ್ಲವೆಂದು ನಮಗೆ ಬರವಣಿಗೆಯಲ್ಲಿ ಕೊಟ್ಟಿದ್ದೇವಲ್ಲ, ಬರವಣಿಗೆಯಲ್ಲಿ ತಿಳಿಸಿದ ಮೇಲೆ ಎಲ್ಲಿದೆ ಅವಕಾಶ? (ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಅಜೆಂಡಾದಲ್ಲಿ ಅದೇ ಸಬ್ಜೆಕ್ಟ್ ಇದ್ದೆ ನೋಡಿ, ನಿಯಮ 69ರ ಅಡಿ ಸಾರ್ವಜನಿಕ ಮಹತ್ವದ ಜರೂರು ವಿಯಷದ ಬಗ್ಗೆ ಅಲ್ಪಕಾಲಾವಧಿ ಚರ್ಚೆ, ದಿ:18.3.2010 ರಂದು ಸದನದಲ್ಲಿ ಪ್ರಸ್ತಾಪವಾದಂತೆ ಬೆಂಗಳೂರು ಮೈಸೂರು ಕಾರಿಡಾರ್ ನೈಸ್ ಯೋಜನೆ ಬಗ್ಗೆ ಚರ್ಚೆ ಹಾಗೂ ಸರ್ಕಾರದ ಉತ್ತರ ಎಂದು ಇದೆ..

(ಗೊಂದಲ)

ಅಧ್ಯಕ್ಷರು : ಮತ್ತೆ ಏತಕ್ಕೆ ಅದನ್ನು ಪ್ರಸ್ತಾಪ ಮಾಡುತ್ತೀರಿ, ನೀವು ಚರ್ಚೆಯಲ್ಲಿ ಪ್ರಸ್ತಾಪ ಮಾಡಿ, ಮತ್ತೆ ನಿಮ್ಮ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಬರವಣಿಗೆಯಲ್ಲಿ ತಿಳಿಸಲಾಗಿದೆ, ಪ್ಲೀಸ್ ಅವಕಾಶವಿಲ್ಲ, ತಾವು ಕುಳಿತುಕೊಳ್ಳಿ, ತಾವು ಹಿರಿಯ ಸದಸ್ಯರೆ ಹೀಗೆ ಮಾಡಿದರೆ ಹೇಗೆ?

ಶ್ರೀ ಹೆಚ್.ಡಿ. ರೇವಣ್ಣ : ನಾನು ನಿಮ್ಮನ್ನು ಇದನ್ನು ಪುನರ್ ಪರಿಶೀಲನೆ ಮಾಡಿ ಎಂದು ಕೇಳುತ್ತಿದ್ದೇನೆ.. ಈ ರಾಜ್ಯದ 33 ಕೋಟಿ ಹಣ ಹೋಗುತ್ತಿದೆ, ನಮಗೆ ಅವಕಾಶ ಕೊಡದಿದ್ದರೆ ನಾವು ಬಾವಿಯಲ್ಲಿ ಧರಣಿ ಕೂರಬೇಕಾಗುತ್ತದೆ ಸರ್..

(ಗೊಂದಲ)

ಅಧ್ಯಕ್ಷರು : ಅದನ್ನು ನಿನ್ನೆ ಪ್ರಸ್ತಾಪ ಮಾಡಿ ಎಂದು ಹೇಳಿದೆನಲ್ಲಾ...

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಅದು 69 ನಲ್ಲಿರುವಾಗ ಅದನ್ನು ನಿಲುವಳಿ ಸೂಚನೆ ಎಂದು ಹೇಳುತ್ತೀರಾ? ಅಂದರೆ ಇವರಿಗೆ ಸದನದಲ್ಲಿ ಕಲಾಪ ನಡೆಸುವುದಕ್ಕೆ ಇಷ್ಟವಿಲ್ಲ..

(ಗೊಂದಲ)

ಅಧ್ಯಕ್ಷರು : ಸಬ್ಜೆಕ್ಟ್ ಇದೆಯಲ್ಲಾ, ನಿನ್ನೆ ಅವರು ಹೇಳಿ ಹಾಕಿಸಿದ್ದು, ನಿನ್ನೆ ತಾವು ಹೇಳಿದ ಸಲಹೆ ಮೇರೆಗೆ ಇದನ್ನು ತೆಗೆದುಕೊಂಡಿದ್ದೇವೆ, ತಾವೇನು ಹೇಳಬೇಕೊ ಅದನ್ನು ಚರ್ಚೆಯಲ್ಲಿ ಹೇಳಿ, ತಾವೆ ಚರ್ಚೆ ಪ್ರಾರಂಭ ಮಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನನಗೆ ಹೇಳುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : 69ರ ಅಡಿಯಲ್ಲಿರುವಾಗ 60ರ ಅಡಿಯಲ್ಲಿ ಹೇಗೆ ತರುತ್ತೀರಿ?

(ಗೊಂದಲ)

ಅಧ್ಯಕ್ಷರು : ನಿಯಮ ಬಿಟ್ಟು ಎಲ್ಲವನ್ನು ಮಾಡಬೇಕೆಂದರೆ ಹೇಗೆ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಅಧ್ಯಕ್ಷರೆ, ನಾನು ಹೇಳಿದಂತೆ ಸದನದ ಕಲಾಪ ನಡೆಯಬೇಕೆಂದು ಹೇಳುವುದು ಸರಿಯಾದ ಪರಿಪಾಠವಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ದಯವಿಟ್ಟು ಎರಡು ನಿಮಿಷ ಮಾತನಾಡುವುದಕ್ಕೆ ನನಗೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ನಿನ್ನೆ ನಿಮ್ಮ ಸಲಹೆ ಮೇರೆಗೆ ಈ ವಿಷಯವನ್ನು ತೆಗೆದುಕೊಂಡಿದ್ದು, ಇದು ಸರಿಯಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಆಮೇಲೆ ಮಾತನಾಡಲಿ ಯಾರು ಬೇಡವೆಂದು ಹೇಳಿದರು?

(ಗೊಂದಲ)

ಅಧ್ಯಕ್ಷರು : ಈಗ ನಿನ್ನೆ ದಿವಸವೆ ರೇವಣ್ಣನವರೆ ಪ್ರಸ್ತಾಪ ಮಾಡಿ, ಈ ವಿಚಾರವನ್ನು ನಾಳೆಯೆ ತೆಗೆದುಕೊಳ್ಳುವ ಸಬ್ಜೆಕ್ಟ್‌ನಲ್ಲಿ ಬಂದಿದೆ, ಮತ್ತೆ ನಿಲುವಳಿ ಸೂಚನೆಗೆ ಎಲ್ಲಿದೆ ಅವಕಾಶ, ತಿರಸ್ಕಾರ ಮಾಡಿದ ಮೇಲು ಮತ್ತೆ ಮತ್ತೆ ತಾವು ಹಿರಿಯ ಸದಸ್ಯರು ಇದನ್ನು ಮಾಡಬಾರದು, ನಾನು ವಿನಂತಿ ಮಾಡುತ್ತೇನೆ ಸಹಕರಿಸಿ, ಸದನವನ್ನು ನಡೆಸೋಣ, ಮತ್ತೆ ಪ್ರಸ್ತಾಪ ಮಾಡಬೇಡಿ, ಇದು ಸರಿಯಲ್ಲ, ತಾವು ಇತರರಿಗೆ ಮಾರ್ಗದರ್ಶಕರಾಗಬೇಕು, ಚರ್ಚೆ ಪ್ರಾರಂಭ ಮಾಡುವವರೆ ತಾವು.

(ಗೊಂದಲ)

ಶ್ರೀ ತನ್ವೀರ್ ಸೇಠ್ : ಅಧ್ಯಕ್ಷರೆ, ಚರ್ಚೆ ಶುರುವಾಗಲಿ; ವಿಧೇಯಕಗಳನ್ನು ಆಮೇಲೆ ಮಾಡಿಕೊಳ್ಳೋಣ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನನಗೆ ಚರ್ಚೆ ಮಾಡಲು ಅವಕಾಶ ಕೊಡಿ, ಪರಿಶೀಲನೆ ಮಾಡುವುದಕ್ಕೆ ಅವಕಾಶ ಕೊಡಿ ಸರ್.

(ಗೊಂದಲ)

ಅಧ್ಯಕ್ಷರು : ನಿನ್ನೆ ನೀವು ಪ್ರಸ್ತಾಪ ಮಾಡಿ, ಚರ್ಚೆಗೆ ಅವಕಾಶ ನಿನ್ನೆಯೇ ನಿಗದಿಯಾಗಿದೆ, ತಾವೇ ಚರ್ಚೆಯನ್ನು ಪ್ರಾರಂಭ ಮಾಡುತ್ತೀರಿ, ಮತ್ತೆ ಇದಕ್ಕಿಂತ ಇನ್ನೇನು ಕೊಡಬೇಕು? ಸದನವನ್ನು ಹೀಗೇ ನಡೆಸಬೇಕು, ಹೀಗೇ ಆಗಬೇಕೆಂದು ತಾವು ನಿರ್ದೇಶನ ಕೊಡುವುದಾದರೆ ಈ ರೂಲ್ಸ್ ಎಲ್ಲಾ ಏತಕ್ಕೆ? ಇದು ಸರಿಯಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಅಧ್ಯಕ್ಷರೆ, ಇವತ್ತಿನ ಕಾರ್ಯಕಲಾಪದ ಪಟ್ಟಿಯಂತೆ ಶಾಸನ ರಚನೆಯನ್ನು ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು : ಸುರೇಶ್‌ಕುಮಾರ್‌ರವರೆ, ವಿಧೇಯಕವನ್ನು ಮಂಡಿಸುವುದು.

4. ಶಾಸನ ರಚನೆ :

(ಅ) ವಿಧೇಯಕ ಮಂಡನೆ.

(II) ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2010 ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಸ್. ಸುರೇಶ್‌ಕುಮಾರ್ (ಕಂದಾಯ ಸಚಿವರ ಪರವಾಗಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, 2010ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ II

(ಆ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(I) ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ವಿಧೇಯಕ, 2010
ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್ ಕುಮಾರ್ (ಮುಖ್ಯಮಂತ್ರಿಯವರ ಪರವಾಗಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2010, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು " ಪ್ರಸ್ತಾವ ಏನೆಂದರೆ, 2010ರ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ವಿಧೇಯಕ ಪರ್ಯಾಲೋಚಿಸುವುದು.

O.32 F-12

(11-40 AM)

ಅಧ್ಯಕ್ಷರು : ಮಾನ್ಯ ಮುಖ್ಯ ಮಂತ್ರಿಗಳು ಬಂದ ತಕ್ಷಣ ತೆಗೆದುಕೊಳ್ಳುತ್ತೇನೆ. ನೀವು ಹೇಳಿದ ಹಾಗೆ ಎಲ್ಲಾ ನಡೆಯಬೇಕೆಂದರೆ ಆಗುವುದಿಲ್ಲ. ನೀವು ಹೇಳಿದ ಹಾಗೆ ಸದನ ನಡೆಸಬೇಕಾ? This is too much. ಮಾನ್ಯ ಮುಖ್ಯಮಂತ್ರಿಗಳು ಬರಲಿ ಅವರು ಉತ್ತರ ಕೊಡಬೇಕಾಗಿದೆ. ವಿಧಾನ ಪರಿಷತ್ತಿನಲ್ಲಿ ಬಜೆಟ್ ಇದೆ ಅದು ಆದ ತಕ್ಷಣ ಬರುತ್ತಾರೆ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಸುಮಾರು 52 ಗಡಿ ತಾಲ್ಲೂಕುಗಳು ನಮ್ಮ ಬೇರೆ ಬೇರೆ ನೆರೆ ರಾಜ್ಯಗಳ ಗಡಿಯಲ್ಲಿ ಬರುತ್ತವೆ. ಈ ಗಡಿ ಪ್ರದೇಶಗಳಲ್ಲಿ ಕನ್ನಡ ಭಾಷೆ, ಸಂಸ್ಕೃತಿ, ಶಿಕ್ಷಣ. ಪರಿಸರ ಈ ಎಲ್ಲಾ ಕ್ಷೇತ್ರಗಳಲ್ಲಿ ಗಡಿ ಪ್ರದೇಶದ ಜನರು ಅಭಿವೃದ್ಧಿ ಹೊಂದಬೇಕು. ಜೊತೆಗೆ ಅವರು ನೆರೆ ರಾಜ್ಯದ ಭಾಷೆ, ಸಂಸ್ಕೃತಿ ಪ್ರಭಾವಕ್ಕೆ ಸಿಲುಕಿ ಕನ್ನಡದ ನಮ್ಮ ಪರಿಸರದಿಂದ ದೂರ ಸರಿಯದಂತೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಶೈಕ್ಷಣಿಕವಾಗಿ ನಾವು ನೋಡಿಕೊಳ್ಳಬೇಕು. ಆ ದೃಷ್ಟಿಯಿಂದ ಗಡಿ ಪ್ರದೇಶದ ಅಭಿವೃದ್ಧಿ ಆಗಬೇಕು. ಈ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರ ಏನಿದೆ, ಇವರು ಬೇರೆ ಬೇರೆ ಕ್ಷೇತ್ರದ ಇಲಾಖೆಗಳ ಮತ್ತು ಸಂಸ್ಥೆಗಳ ಜೊತೆ ಸಂಪರ್ಕ ಬೆಳೆಸಿಕೊಂಡು ಆ ಇಲಾಖೆಗಳ ಮೂಲಕ ಕಾರ್ಯಕ್ರಮಗಳು ಅನುಷ್ಠಾನಗೊಳಿಸುವಂತೆ ಮಾಡಬೇಕಾದುದು ಮೂಲ ಉದ್ದೇಶ. ಸುಮಾರು 52 ತಾಲ್ಲೂಕುಗಳು ಬರುತ್ತವೆ. 36 ತಾಲ್ಲೂಕುಗಳು ಉತ್ತರ ಕನ್ನಡ, ಬಿಜಾಪುರ, ಚಾಮರಾಜನಗರ, ಕೊಡಗು ದಕ್ಷಿಣ ಕನ್ನಡ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ರಾಮನಗರ ಹಾಗೂ ಬೆಂಗಳೂರು ಇಷ್ಟು ತಾಲ್ಲೂಕುಗಳಲ್ಲಿ ಇಷ್ಟು ಜಿಲ್ಲೆಗಳಲ್ಲಿ ಕೂಡ ಸುಮಾರು 36 ತಾಲ್ಲೂಕುಗಳು ಬರುತ್ತವೆ. ಈ ಎಲ್ಲಾ ಗಡಿ ಪ್ರದೇಶಗಳಲ್ಲಿ ಕನ್ನಡದ ಸೊಗಡು ಇರಬೇಕು, ಕನ್ನಡದ ಸಂಸ್ಕೃತಿ ಉಳಿಸಬೇಕೆಂಬ ಉದ್ದೇಶಕ್ಕೋಸ್ಕರ ಮತ್ತು ಅಲ್ಲಿರುವ ಅಭಿವೃದ್ಧಿ ಕಾರ್ಯಗಳು ಚೆನ್ನಾಗಿ ಆಗಬೇಕೆನ್ನುವುದಕ್ಕೋಸ್ಕರ ಒಂದು ಪ್ರಾಧಿಕಾರವನ್ನು ಮಾಡುತ್ತಿದ್ದೇವೆ. ದಯವಿಟ್ಟು ಸಭೆ ಇದಕ್ಕೆ ಅನುಮೋದನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : (ಸಿರಾ) ಮಾನ್ಯ ಅಧ್ಯಕ್ಷರೆ, Border Area Development Fund ಎನ್ನತಕ್ಕಂತಹ Fund ಕೂಡ ಇದೆ. ಆ Fund ನಲ್ಲಿ ಏನಾದರೂ ಗಡಿ ಪ್ರದೇಶದ ಅಭಿವೃದ್ಧಿ ಕಾರ್ಯಗಳಿಗೆ ತೆಗೆದುಕೊಂಡಿದ್ದಾರಾ ಎಂದು ಅವಲೋಕನ ಮಾಡಿ ನೋಡಿದರೆ, ಏನೂ ಆಗಿಲ್ಲ. ಎಷ್ಟು ಬರುತ್ತದೆ, ನಮ್ಮ ತಾಲ್ಲೂಕು ಒಂದು ಇದೆ. 52 ತಾಲ್ಲೂಕುಗಳಿಗೆ ನೀವು ಇವತ್ತು grant ಕೊಡುತ್ತಿದ್ದೀರಿ. ಒಂದು ಲಕ್ಷ ರೂ. ಬಂದರೆ, ಹೆಚ್ಚು, ಎರಡು ಲಕ್ಷ ರೂ. ಬಂದರೆ ಹೆಚ್ಚು, ಮೂರು ಲಕ್ಷ ರೂ. ಬಂದರೆ ಹೆಚ್ಚು. ದುಡ್ಡು ಕೊಡುವುದು ಇಷ್ಟು ಆಗಿ, ನೀವು ಅಥಾರಿಟಿ ಮಾಡಿ ನಮ್ಮ ಹಿರಿಯ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡುವುದಕ್ಕೆ, ಅವರನ್ನು elevate ಮಾಡುವುದಕ್ಕೆ ಮಾತ್ರ ಬಿಲ್ ತರುವುದಾದರೆ ಪ್ರಯೋಜನ ಆಗುವುದಿಲ್ಲ. ನಿಮ್ಮ ಉದ್ದೇಶ ಒಳ್ಳೆಯದು ನಾನು Welcome ಮಾಡುತ್ತೇನೆ. ಆದರೆ ನಿಮ್ಮ ಉದ್ದೇಶವನ್ನು ಸಾಬೀತು ಮಾಡಬೇಕಾದಾಗ ಅದು ಅನುಷ್ಠಾನ ಮಾಡಬೇಕಾದಾಗ ಹೆಚ್ಚು ಹಣವನ್ನು ಕೊಡಬೇಕು. ಹೆಚ್ಚು ಹಣವನ್ನು ಕೊಟ್ಟಾಗ ಮಾತ್ರ ಇದು ಸಾಧ್ಯವಾಗುತ್ತದೆ. ಈ ಗಡಿ ಪ್ರದೇಶದಲ್ಲಿರುವ 52 ತಾಲ್ಲೂಕುಗಳ ಸುತ್ತಮುತ್ತಲಿರುವವರು ಕನ್ನಡ ಭಾಷೆಯನ್ನು ಮಾತನಾಡುವವರು, ಅವರು ಬೇರೆ ರಾಜ್ಯದಲ್ಲಿದ್ದರೂ ಕೂಡ ನಮ್ಮ ರಾಜ್ಯದ ಕನ್ನಡ ಶಾಲೆಗಳಿಗೆ ಹೆಚ್ಚು ಬರುತ್ತಿದ್ದಾರೆ. ಹಾಗಾಗಿ ನಾವು ಎಷ್ಟೋ ಸಾರಿ ಹೇಳುತ್ತೇವೆ. ಗಡಿ ಪ್ರದೇಶದಲ್ಲಿ ಶಾಲೆಗಳನ್ನು, ಹೈಸ್ಕೂಲ್ ಗಳನ್ನು ಹಾಗೂ ಕಾಲೇಜುಗಳನ್ನು ಹೆಚ್ಚಿಗೆ ಮಾಡಿ ಎಂದರೆ ಸರ್ಕಾರಕ್ಕೆ ಅದನ್ನು ಮಾಡುವುದಕ್ಕಾಗುವುದಿಲ್ಲ. ಉದ್ದೇಶ ಒಳ್ಳೆಯದಿದೆ. ಆದರೆ ಅದು ತತ್ವಶಃ ಅನುಷ್ಠಾನ ಆಗಬೇಕಾದಾಗ ಹೆಚ್ಚು ಹಣವನ್ನು ಕೊಡಬೇಕೆನ್ನುವುದು ಬಹಳ ಮುಖ್ಯವಾದ ವಿಷಯ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ತಾವು ಏನು ಹೇಳಿದ್ದೀರಿ, ಆ ಸದುದ್ದೇಶದಿಂದ ಗಡಿ ಪ್ರದೇಶದಲ್ಲಿ ನಿಜವಾಗಿ ಅಭಿವೃದ್ಧಿ ಆಗಬೇಕು, ಜೊತೆಗೆ ಕೇಂದ್ರ ಸರ್ಕಾರದಿಂದ ನಮಗೇನು ಧನ ಸಹಾಯ ಬರುತ್ತದೆ ಅದನ್ನು ಸದುಪಯೋಗ ಮಾಡಬೇಕೆನ್ನುವ ಉದ್ದೇಶದಿಂದ ಈ ಪ್ರಾಧಿಕಾರ ತಂದಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ಕೇಂದ್ರ ಸರ್ಕಾರ ಮಾಡತಕ್ಕಂಥದ್ದು Backward Area Development Fund ಎಂದು. ನಾನು ನಿಜವಾಗಿ ಹೇಳಬೇಕೆಂದರೆ, Backward Area Development Fund ನಲ್ಲಿ ಗಡಿ

ಪ್ರದೇಶಕ್ಕೆ ಅಲ್ಲ ಬೇರೆ ಕಡೆಗೂ ಬರುತ್ತದೆ. ಆದರೆ ಬಹುತೇಕ ಗಡಿ ಪ್ರದೇಶದ ತಾಲ್ಲೂಕುಗಳೇನಿವೆ, Backward Area ದಲ್ಲೇ ಬರುತ್ತವೆ. ದಯಮಾಡಿ source ಮಾಡುವುದಕ್ಕೆ ಅಥಾರಿಟಿ ಮಾಡಿದಾಗ ಹೆಚ್ಚು ಹೆಚ್ಚು scope ಇರುತ್ತದೆ. ಹೆಚ್ಚು ಹಣವನ್ನು ತರುವುದಕ್ಕೆ ಅವಕಾಶವಿರುತ್ತದೆ. ಆದರೆ ಒಂದು ನಿಮ್ಮ ಉದ್ದೇಶ ಸಾಧನೆ ಆಗಬೇಕೆಂದರೆ, ನೆರೆ ಭಾಗದಲ್ಲಿ ಹಾಗೂ ನೆರೆ ರಾಜ್ಯದಲ್ಲಿ ಇರತಕ್ಕಂತಹ ಕನ್ನಡಿಗರು ನಾವು ಕನ್ನಡವನ್ನು ಕಲಿತೆವು, ಕನ್ನಡದಿಂದ ಸಹಾಯವಾಯಿತು, ಪ್ರಾಧಿಕಾರದಿಂದ ಸಹಾಯವಾಯಿತು ಎನ್ನತಕ್ಕಂತಹ ಭಾವನೆ ಬರತಕ್ಕಂತಹ ರೀತಿಯಲ್ಲಿ ಇದು ಆಗಬೇಕಾಗುತ್ತದೆ. ದುಡ್ಡು ಕೊಡದೆ, ನೀವು 'ಹೊಟ್ಟೆಗೆ ಹಿಟ್ಟು ಇಲ್ಲ, ಜುಟ್ಟಿಗೆ ಮಲ್ಲಿಗೆ ಹೂವು' ಎಂದು ಮಾಡಿದರೆ ಅದು ಪ್ರಯೋಜನವಾಗುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಗಡಿ ಪ್ರದೇಶದ ಒಬ್ಬ ಹೋರಾಟ ಗಾರರನ್ನೇ ಅದರ ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಕಳಕಳಿ ಇದೆ, ನಾವು ಮಾಡಿಸುತ್ತೇವೆ. ತಮ್ಮ ಉದ್ದೇಶ ಹಾಗೂ ಭಾವನೆಗಳನ್ನು ನಾವು ಅರ್ಥ ಮಾಡಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಅದನ್ನು ನಾವು ಸ್ವಾಗತ ಮಾಡುತ್ತೇವೆ. ಇಲ್ಲಿಯವರೆಗೆ ನಡೆದುಕೊಂಡು ಬಂದಿರುವುದು ನೋಡಿದರೆ ಖಂಡಿತ ನನಗೆ ವಿಶ್ವಾಸ ಇಲ್ಲ. ಇದನ್ನು ಹೇಗೆ ನಂಬುವುದು? ಅವರಿಗೆ ಸ್ಥಾನಮಾನ ಕೊಡುವುದಕ್ಕೋಸ್ಕರ ಮಾಡುತ್ತಿದ್ದೀರಿ ಎನ್ನತಕ್ಕಂತಹ ಭಾವನೆ ಬರುತ್ತದೆ.

ಶ್ರೀ ಸಿದ್ದರಾಮಯ್ಯ : (ವರುಣ) ಮಾನ್ಯ ಅಧ್ಯಕ್ಷರೆ, ಗಡಿ ಪ್ರದೇಶದ ಅಭಿವೃದ್ಧಿಗೋಸ್ಕರ ಮಾಡುತ್ತಿರತಕ್ಕಂತಹ ಅಥಾರಿಟಿ. ಅದರಲ್ಲಿ ಸುಮಾರು 52 ತಾಲ್ಲೂಕುಗಳು ಬರುತ್ತವೆ. ಆಂಧ್ರ, ಮಹಾರಾಷ್ಟ್ರ, ತಮಿಳುನಾಡು, ಕೇರಳ ಹಾಗೂ ಗೋವ ಈ ಎಲ್ಲಾ ರಾಜ್ಯಗಳ ಬಾರ್ಡರ್‌ನಲ್ಲಿ ಬರತಕ್ಕಂತಹ ಪ್ರದೇಶದಲ್ಲಿ 52 ತಾಲ್ಲೂಕುಗಳು ಬರುತ್ತವೆ. ಬಾರ್ಡರ್‌ನಲ್ಲಿರತಕ್ಕಂತಹ ಕನ್ನಡಿಗರು, ಈ ಕಡೆ ಇರಬಹುದು, ಬೇರೆ ಪಕ್ಕದ ಗಡಿ ರಾಜ್ಯಗಳಲ್ಲಿರ ಬಹುದು, ಎಲ್ಲಾ ಕನ್ನಡಿಗರಿಗೂ ಅಷ್ಟೇ ಆಗಬೇಕು. ಪಕ್ಕದ ಗಡಿ ರಾಜ್ಯಗಳಲ್ಲಿರ ತಕ್ಕಂತಹ ಕನ್ನಡಿಗರೂ ಅದು ಅನುಕೂಲವಾಗಬೇಕು. ಗಡಿನಾಡ ಕನ್ನಡಿಗರು, ಉದ್ದೇಶ ಏನೋ ಚೆನ್ನಾಗಿದೆ. ಬಾರ್ಡರ್‌ನಲ್ಲಿರತಕ್ಕಂತಹ ಕನ್ನಡಿಗರನ್ನು ಅಭಿವೃದ್ಧಿ ಪಡಿಸಲಿಕ್ಕೆ, ಅಲ್ಲಿಯ ಭಾಷೆ ಸಂಸ್ಕೃತಿ, ಅಲ್ಲಿರತಕ್ಕಂತಹ ಜನರಿಗೆ ಶಿಕ್ಷಣ ಕೊಡತಕ್ಕಂಥದ್ದು, ಆರ್ಥಿಕ ಚಟುವಟಿಕೆಗಳು, ಅಲ್ಲಿರತಕ್ಕಂತಹವರಿಗೆ

ಉದ್ಯೋಗ ಸೃಷ್ಟಿ ಮಾಡಲಿಕ್ಕೆ ಬೇಕಾದುದು ಇವೆಲ್ಲ ಮಾಡಬೇಕಾದುದು ಅಗತ್ಯ ಇದೆ. ನಾನೂ 1983–84ನೇ ಇಸವಿಯಲ್ಲಿ ಕನ್ನಡ ಕಾವಲು ಸಮಿತಿಯ ಅಧ್ಯಕ್ಷನಾಗಿದ್ದಾಗ ಬಾರ್ಡ್‌ರ್ ಏರಿಯಾಗಳಿಗೆ ನನಗೆ ಕರೆದುಕೊಂಡು ಹೋಗುತ್ತಿದ್ದರು. ಬಹಳ ಜನ ನಮ್ಮ ಗಡಿನಾಡು ಕನ್ನಡಿಗರ ಪರಿಸ್ಥಿತಿ ಬಹಳ ಕೆಟ್ಟದಾಗಿದೆ. ಅನೇಕ ಕಡೆಗಳಲ್ಲಿ ಕನ್ನಡ ಶಾಲೆಗಳಿಲ್ಲ. ಶಿಕ್ಷಣ, ಉದ್ಯೋಗ, ಭಾಷೆ, ಸಂಸ್ಕೃತಿ ಮತ್ತು infrastructure development ಇಷ್ಟು ಆ ಭಾಗಗಳಲ್ಲಿ ಆಗತಕ್ಕಂಥದ್ದು ಆಗಬೇಕು. ಈಗ ಅನೇಕ ಅಥಾರಿಟಿಗಳನ್ನು ಮಾಡುತ್ತೇವೆ. ಬೋರ್ಡ್‌ಗಳು ಕಾರ್ಪೊರೇಷನ್‌ಗಳು ಇವೆ, ಅವಕ್ಕೆ ಹಣ ಇಲ್ಲದೆ, ಅಭಿವೃದ್ಧಿ ಮಾಡುವುದಕ್ಕೆ ಆಗದೆ, ಬಿಳಿ ಆನೆಗಳ ತರಹ ಇರುತ್ತವೆ. ಸರ್ಕಾರಕ್ಕೆ Exchequer ಮೇಲೆ They are only going to be a burden on the exchequer of the State. ಹಾಗಾಗಬಾರದು. ನಂಜುಂಡಪ್ಪನವರ ವರದಿ ಇದೆ, ಬಯಲು ಸೀಮೆ ಅಭಿವೃದ್ಧಿ ಮಂಡಳಿ ಸಭೆ ಇದೆ, ಗಡಿನಾಡು ಸಮಿತಿ ಮಾಡಿ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಅಧ್ಯಕ್ಷರನ್ನಾಗಿ ಮಾಡಿದ್ದರು. ಅವರು ಅಲ್ಲಿ ಏನೂ ಕೆಲಸ ಮಾಡುವುದಕ್ಕೆ ಆಗದೇ ಬಿಟ್ಟು ಬಿಟ್ಟರು. ಕಾಸು ಇಲ್ಲ, ಕರಿಮಣಿ ಇಲ್ಲ, ಕಾರಿನಲ್ಲಿ ತಿರುಗಾಡುವುದಕ್ಕೆ ಪೆಟ್ರೋಲ್‌ಗೆ ದುಡ್ಡು ಇಲ್ಲವೆಂದು ಬಿಟ್ಟು ಬಿಟ್ಟರು. ಬಯಲು ಸೀಮೆಯಲ್ಲೂ ಕೂಡ ಹಣ ಇಲ್ಲ. ನಂಜುಂಡಪ್ಪ ವರದಿಯಲ್ಲೂ ಕೂಡ ನಾವು 2478 ಕೋಟಿ ಖರ್ಚು ಮಾಡುತ್ತೇವೆಂದು ಹೇಳಿ ಅರ್ಧ ದುಡ್ಡೂ ಬಿಡುಗಡೆ ಮಾಡಿಲ್ಲ. ಛೇರ್ಮನ್ ನಮೋಷಿಯವರು ಪ್ರೆಸ್‌ನವರ ಮುಂದೆ ಅಳಲು ತೋಡಿಕೊಳ್ಳುತ್ತಿದ್ದರು. ಬಹಳ ಜನ ಛೇರ್ಮನ್‌ಗಳನ್ನು ಮಾಡಿ, it is only a burden on the Exchequer ಹೊರತು, What is the turnout ಎಂದರೆ ಅವರಿಂದ ಏನೂ ಇರುವುದಿಲ್ಲ. ಅವರು ಏನು ಕೆಲಸ ಮಾಡಿದರು ಎಂದರೆ, ಏನೂ ಇರುವುದಿಲ್ಲ. only onon plan expenditure, non developmental expenditure ಜಾಸ್ತಿಯಾಗುತ್ತದೆ, wasteful expenditure ಜಾಸ್ತಿಯಾಗುತ್ತದೆ. ಆ ಭಾಗದ ಜನರ ಸಮಾಧಾನಕ್ಕಾಗಿ ನಾವು ಒಂದು ಕಾನೂನು ಮಾಡಿದ್ದೇವೆ. ನಿಮ್ಮ ಸರ್ವತೋಮುಖ ಅಭಿವೃದ್ಧಿ ಮಾಡುತ್ತೇವೆಂದು ಹೇಳಿರುವುದರಿಂದ ಮೂಗಿಗೆ ತುಪ್ಪ ಸವರುವ ಕೆಲಸ ಆಗಬಾರದು. What I want to suggest is, ಅಲ್ಲಿ ಮಾಡಿದ ಮೇಲೆ ಅದಕ್ಕೆ ಬೇಕಾದಂಥ ಹಣ ಒದಗಿಸತಕ್ಕಂಥ ಅನುದಾನ ಕೊಡತಕ್ಕಂಥ ಕೆಲಸವೂ

ಕೂಡ ಆಗುತ್ತದೆ. ಇಲ್ಲದೇ ಹೋದರೆ ಕಾನೂನು ಮಾಡಿ ಏನು ಪ್ರಯೋಜನ ವಾಗುತ್ತದೆ? ಅನೇಕ ಬೋರ್ಡ್ ಕಾರ್ಪೋರೇಶನ್‌ಗಳಲ್ಲಿದ್ದಂಥ ರೀತಿಯಲ್ಲಿ ಇದು ಒಂದಾಗುತ್ತದಷ್ಟೆ. So, ಆ ತರ ಆಗಬಾರದು. ಇನ್ನು specific ಆಗಿ Fund ಬಗ್ಗೆ ಹೇಳುತ್ತೀರಲ್ಲ ಅಲ್ಲಿ Grant by State Government ಎಂದು ಹೇಳಿ "The State Government may every year make a grant to the Authority, a sum equivalent to the administrative expenses of the Authority" ಎಂದು ಹೇಳುತ್ತೀರಿ. Other developmental activities ಎಂದು ಹೇಳಬೇಕೋ? ಬೇಡವೋ? For all round development activities of the people living in the Border Area ಎಂದು ಯಾವ ತರಹ ಬರಬೇಕೋ ಅದನ್ನು ನೋಡಿ ಆ ರೀತಿ ಮಾಡಿ ನಂತರ ಹೇಳಬೇಕು. ಸುರೇಶ್ ಕುಮಾರ್ ಸೆಕ್ಷನ್ 22 ನಲ್ಲಿರುವುದನ್ನು ನೋಡಿ. There shall be a Fund called the 'Border Area Development Fund'. All grants, subversions, donations and gifts made by the Central Government, State Government ಸೆಕ್ಷನ್ 21 ರಲ್ಲಿ ಇದೆ. Grant by the State Government: "The State Government may every year make a grant to the Authority a sum equivalent to the administrative expenses." Why you are making this specific provision? "The State Government may, keeping in view the projects and programmes of the Authority make financial allocations to the authority in the annual budget of the State." Why this separate provision?

ಶ್ರೀ ಎಸ್. ಸುರೇಶ್ ಕುಮಾರ್ : ಸೆಕ್ಷನ್ 21 ರಲ್ಲಿದೆ.

ಶ್ರೀ ಸಿದ್ದರಾಮಯ್ಯ : ಅಲ್ಲಿ ಅಲೋಕೇಶನ್ ಹಾಕಬೇಕು ಎಂದು ಹೇಳಲಾಗಿದೆ. ಆದರೆ ಇಲ್ಲಿ why this provision is required? ಸಂಬಳ ಸಾರಿಗೆಗೆ fund ಅನ್ನು State Government ಕೊಡಬೇಕೆಂದು ಏಕೆ ಹೇಳಲಾಗಿದೆ. I think it can be omitted.

ಶ್ರೀ ಎಸ್. ಸುರೇಶ್ ಕುಮಾರ್ : Redundant ಆಗುತ್ತದೆ.

ಶ್ರೀ ಸಿದ್ದರಾಮಯ್ಯ : Redundant ಆಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಸ್ಯಾಲರಿಯದು ಬೇಕಾಗುವುದಿಲ್ಲವೆ ಸಾರ್.

ಶ್ರೀ ಸಿದ್ದರಾಮಯ್ಯ : ಸ್ಯಾಲರಿ ಫಂಡ್‌ನಲ್ಲಿಯೇ ಬರುತ್ತದಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಇಲ್ಲ, ಇಲ್ಲ, ಫಂಡ್‌ನಲ್ಲಿ. . . .

ಶ್ರೀ ಸಿದ್ದರಾಮಯ್ಯ : ಇದನ್ನು ಸೆಪರೇಟ್ ಮಾಡಿದರೆ, ಕೊನೆಗೆ ಜನಗಳಿಗೆ ಮೆಸೇಜ್ ಏನು ಹೋಗುತ್ತದೆಂದರೆ ಕೇವಲ ಸಂಬಳವನ್ನು ಕೊಡುವುದಕ್ಕೆ ಹೀಗೆ ಮಾಡಿದ್ದಾರೆಂದು.

ಶ್ರೀ ಎಸ್. ಸುರೇಶ್ ಕುಮಾರ್: ಸೆಕ್ಷನ್ 15 ರಲ್ಲಿ ನಮ್ಮ ಉದ್ದೇಶ ಗಳೆಲ್ಲವನ್ನೂ ಹೇಳಲಾಗಿದೆ. ಪ್ರಾಧಿಕಾರದ ಪ್ರಕಾರ್ಯಗಳು ಎಂದು ಹೇಳಿದ್ದೇವೆ.

ಶ್ರೀ ಸಿದ್ದರಾಮಯ್ಯ : ಅದನ್ನು ಹೇಳಿದ್ದೀರಿ. ಆದರೆ I want to know what is the purpose of this Section?

ಶ್ರೀ ಎಸ್. ಸುರೇಶ್ ಕುಮಾರ್ : ಇದರಲ್ಲಿ ಎರಡು components ಇದೆ. ಒಂದು, ಅಲ್ಲಿ Administrative expenditure. ಇನ್ನೊಂದು ಇವರಿಗೇನು Responsibilities ಕೊಟ್ಟಿದ್ದೇವಲ್ಲ ಅಂದರೆ ಗಡಿನಾಡ ಪ್ರದೇಶಗಳ ಅಭಿವೃದ್ಧಿಗೋಸ್ಕರ.

ಶ್ರೀ ಸಿದ್ದರಾಮಯ್ಯ : ಸ್ವಲ್ಪ ಇದನ್ನು ನೋಡಿ ಮಾಡಿ. ಏಕೆಂದರೆ ಈ ತರಹದ್ದೊಂದು ಬೇಕಾಗಿಲ್ಲ.

ಶ್ರೀ ಸುರೇಶ್ ಕುಮಾರ್ : ಸೆಕ್ಷನ್ 22 ಬೇಕಾಗಿಲ್ಲವೆಂದು ನಿಮ್ಮ ಅಭಿಪ್ರಾಯವೆ?

ಶ್ರೀ ಸಿದ್ದರಾಮಯ್ಯ : ನನ್ನ ಪ್ರಕಾರ ಬೇಕಾಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ನೀವು ಸೆಕ್ಷನ್ 21 ರಲ್ಲಿ Annual Budget of the State ಎಂದು ಹೇಳಿದರೆ ಇದು ಏಕೆ ಬೇಕು? ಸಂಬಳಕ್ಕೆ ಬೇರೆ, ಇನ್ನೊಂದಕ್ಕೆ ಬೇರೆ.

ಶ್ರೀ ಎಸ್. ಸುರೇಶ್ ಕುಮಾರ್ : ಜಯಚಂದ್ರರವರೆ, ಸೆಕ್ಷನ್ 21 ರಲ್ಲಿ ಪ್ರಾಧಿಕಾರ ಕೈಗೊಳ್ಳುವ ಯೋಜನೆಗಳಿಗೆ ಬೇಕು. ಅವರು ಶೀಕ್ಷಣಕ್ಕೆ, ಸಂಸ್ಕೃತಿಗೆ ಎಂದು ಏನು ವಿವರಿಸಿದರೋ ಅಲ್ಲಿ ಅಭಿವೃದ್ಧಿ ನೋಡಿಕೊಳ್ಳು ವುದಕ್ಕೆ, ಉಸ್ತುವಾರಿ ನೋಡಿಕೊಳ್ಳುವುದಕ್ಕೆ, ಹೊಸದಾಗಿ ಕ್ರಿಯಾ ಯೋಜನೆ

ಮಾಡುವುದಕ್ಕೆ ಸೆಕ್ಷನ್ 21 ರಲ್ಲಿದೆ. ಆದರೆ ಸೆಕ್ಷನ್ 22 purely administrative matter.

ಶ್ರೀ ಟಿ.ಬಿ. ಜಯಚಂದ್ರ : Financial allocation ಎಂದರೆ it includes all.

ಶ್ರೀ ಸಿದ್ದರಾಮಯ್ಯ : Financial allocation ಎಂದರೆ ಹೇಳಿದರೆ it includes salaries and administrative expenses. ಅದಕ್ಕೇ ಬೇರೆ, ಇದಕ್ಕೇ ಬೇರೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಸ್ವಲ್ಪ ನೀವು ನೋಡಿ. ನಮ್ಮ ಸಜೆಶನ್ ಆ ರೀತಿ ಇದೆ. ಆದರೆ ಯಾವುದೇ ಕಾರಣದಿಂದ ಕೂಡ . . .

ಶ್ರೀ ಎಸ್. ಸುರೇಶ್ ಕುಮಾರ್ : ಈಗ ಒಂದು ಕೆಲಸ ಮಾಡೋಣ. ಸೆಕ್ಷನ್ 21 ರಲ್ಲಿಯೇ ಸೆಕ್ಷನ್ 22 ರದ್ದನ್ನೂ ಕೂಡ ಆಡಳಿತಾತ್ಮಕ ವೆಚ್ಚಗಳು ಎಂದು ನಾವು ಸೇರಿಸಿಬಿಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : Administrative expenses ಎಂದು ಹೇಳುವುದರ ಜೊತೆಗೆ ಇನ್ನೊಂದು ಕ್ಲಾರಿಫಿಕೇಶನ್‌ನ್ನು ನಿಮ್ಮ ಮಂತ್ರಿಗಳಿಗೆ ಕೇಳುವುದೇನೆಂದರೆ, ಈಗ suppose ನೆರೆ ರಾಜ್ಯಗಳಲ್ಲಿ ಕನ್ನಡಿಗರೇ ಜಾಸ್ತಿ ಇರುತ್ತಾರೆ. ಅವರು ಅಲ್ಲಿ ಲೈಬ್ರರಿ ಮಾಡಿ, ಸ್ಕೂಲ್ ಮಾಡಿ ಎಂದು ಕೇಳುತ್ತಾರೆ. ಆಗ ಆ Actions ಅನ್ನು ನೀವು ತೆಗೆದುಕೊಳ್ಳುವುದಕ್ಕೆ ಬರುತ್ತದೆಯೆ? ಅದನ್ನೂ ಕೂಡ ನೀವು ಏಕೆ ಸೇರಿಸಬಾರದು? ಈಗೇನಾಗಿದೆ ಯೆಂದರೆ ನಮ್ಮ ಬಾರ್ಡ್‌ರ್‌ಗಳಲ್ಲಿ ಕನ್ನಡ ಶಾಲೆಗಳನ್ನು ಆಂಧ್ರದವರು ಮುಚ್ಚಿಬಿಟ್ಟಿದ್ದಾರೆ. ಅಲ್ಲಿ ಕನ್ನಡ ಶಾಲೆಗಳನ್ನು ತೆರೆಯಿರಿ ಎಂದು ಅಲ್ಲಿಗೆ ಹೋದಾಗಲೆಲ್ಲಾ ಮೆಮೊರಾಂಡಮ್ ಕೊಡುತ್ತಾರೆ. ಅಂಥ ಸಂದರ್ಭದಲ್ಲಿ...

ಶ್ರೀ ಎಸ್. ಸುರೇಶ್ ಕುಮಾರ್ : ಆ ಬಗ್ಗೆ ಇದೆ. ಸೆಕ್ಷನ್ 15 (2) ನಲ್ಲಿ ರಾಜ್ಯದ ಹೊರ ಭಾಗದ ಗಡಿಯಲ್ಲಿ ಅವಶ್ಯವಿರುವಷ್ಟು ಕನ್ನಡ ಶಾಲೆಗಳನ್ನು ತೆರೆಯಲು ಸಹಾಯ ಒದಗಿಸುವುದು. ನೆರೆ ರಾಜ್ಯದವರು ಕನ್ನಡ ಶಾಲೆಗಳನ್ನು ಮುಚ್ಚಿರುವಂಥ ಗ್ರಾಮಗಳಲ್ಲಿ ಕನ್ನಡಗರಿಗೆ ಕನ್ನಡ ಮಾಧ್ಯಮದ ಮೂಲಕ ಶಿಕ್ಷಣ ನೀಡಲು ಕನ್ನಡ ಮಾಧ್ಯಮದ ಶಾಲೆಗಳನ್ನು ತೆರೆಯುವುದು, ಶಾಲಾ ಕಟ್ಟಡ ನಿರ್ಮಾಣ ಮಾಡುವುದು ಎಂದು ಇದೆ.

ಶ್ರೀ ಟಿ.ಬಿ. ಜಯಚಂದ್ರ : ಥ್ಯಾಂಕ್ ಯು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವಿಧೇಯಕವನ್ನು ತಿದ್ದುಪಡಿ ಆಗಿರುವಂತೆ ಅಂಗೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2010 ನೇ ಸಾಲಿನ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವಿಧೇಯಕವು ತಿದ್ದುಪಡಿಯೂ ಸೇರಿದಂತೆ ವಿಧೇಯಕವನ್ನು ಪರ್ಯಾಲೋಚಿಸುವುದು:

ಪ್ರಸ್ತಾವ ಅಂಗೀಕರಿಸ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 20 ರವರೆಗೆ,

ಅಧ್ಯಕ್ಷರು : "ಖಂಡ 2 ರಿಂದ 20 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ಖಂಡ 2 ರಿಂದ 20 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 21 ಕ್ಕೆ ತಿದ್ದುಪಡಿ

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಖಂಡ 21 ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.;

" "

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 22 ರಿಂದ 27

ಅಧ್ಯಕ್ಷರು : "ಖಂಡ 22 ರಿಂದ 27 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ಖಂಡ 22 ರಿಂದ 27 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2010 ರ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಖಂಡ 21 ಕ್ಕೆ ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2010ರ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಖಂಡ 21ಕ್ಕೆ ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

II ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೆ, 2009 ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ವಿಧೇಯಕಯದ ಬಗ್ಗೆ ವಿವರಿಸಿ.

ಶ್ರೀ ಶಿವರಾಜ್ ಎಸ್. ತಂಗಡಗಿ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ತಂದಿರುವ ಕಾರಣವೇನೆಂದರೆ, ಎ.ಪಿ.ಎಂ.ಸಿ. ಯಲ್ಲಿರುವಂಥ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇವತ್ತು ಬಹಳ ಒತ್ತಡದಲ್ಲಿ ಕೆಲಸ ಮಾಡಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ ಅವರು ಅಧ್ಯಕ್ಷರಾದ ಮೇಲೆ ಕನಿಷ್ಟ ಒಂದು ತಿಂಗಳೊಳಗೆ ಮತ್ತೆ ಅವರ ಮೇಲೆ ಅವಿಶ್ವಾಸ ತರುವಂಥ ವ್ಯವಸ್ಥೆ ಆಗಿರುವುದರಿಂದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಕನಿಷ್ಠ ಈಗೇನು ಜಿಲ್ಲಾ ಪಂಚಾಯಿತಿ ಮಾದರಿಯೊಳಗೆ ಮತ್ತು ಸ್ಥಳೀಯ ಸಂಸ್ಥೆಗಳ ಮಾದರಿಯೊಳಗೆ 6 ತಿಂಗಳವರೆಗೆ ಅವರ ಮೇಲೆ ಅವಿಶ್ವಾಸವನ್ನು ತರಬಾರದು ಮತ್ತು ಇದರ ಜೊತೆಗೆ ನಾವು ಈ ಹಿಂದೆ Simple majority ಎಂದು ಏನಿತ್ತೋ ಆ Simple majority ಯನ್ನು ತೆಗೆದು ಕನಿಷ್ಠ 2/3 majority ಯನ್ನು ಮಾಡಬೇಕು. ಈ ರೀತಿ 2/3 majority ಮಾಡಿದರೆ ಇವತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಯಾವುದೇ ಒತ್ತಡ ಇಲ್ಲದಂತೆ ಕೆಲಸ ಮಾಡಲು ಸಾಧ್ಯವಾಗುತ್ತದೆ. ಏಕೆಂದರೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಮೇಲೆ ಅವರ ಮೇಲೆ 15 ದಿವಸದೊಳಗೆ ಅಥವಾ ಒಂದು ತಿಂಗಳೊಳಗೆ ಅವಿಶ್ವಾಸವನ್ನು ತಂದು ಅವರನ್ನು ಇಳಿಸುವಂಥ ವ್ಯವಸ್ಥೆ ಈಗ ಹಾಲಿ ಇದೆ. ಅದಕ್ಕಾಗಿ ಅದರ ಜೊತೆಗೆ ಎಲ್ಲರಿಗೂ ವ್ಯವಸ್ಥೆಯನ್ನೂ ಕೊಟ್ಟಂತಾಗಿರಬೇಕು. ಆ ದೃಷ್ಟಿಕೋನವನ್ನಿಟ್ಟುಕೊಂಡು 20, 20 ತಿಂಗಳಂತೆ, ಅಂದರೆ 5 ವರ್ಷದಲ್ಲಿ 3 ಪೀರಿಯಡ್‌ಗಳ ಅವಧಿಯನ್ನು ಮಾಡಿ ಆ ಆರು ತಿಂಗಳವರೆವಿಗೂ ಅವರು

ಹೇಳಿದ್ದನ್ನು ಮಾಡುವುದು ಮತ್ತು ಅದರ ಜೊತೆಗೆ ನಾವು ಕನಿಷ್ಠ 2/3 majority ಇದ್ದರೆ ಮಾತ್ರ ಅವಿಶ್ವಾಸವನ್ನು ತರಬೇಕು ಎನ್ನುವ ನಿಟ್ಟಿನಲ್ಲಿ ಬಿಲ್ಲನ್ನು ತರುವಂಥದ್ದು. ಇದು ಬಹಳ ಸಿಂಪಲ್ ಆಗಿರುವಂಥ ಬಿಲ್ ಆಗಿದೆ. ಈಗಿರುವ ಹಾಲಿ ವ್ಯವಸ್ಥೆಯಲ್ಲಿ ನಮ್ಮ ಎ.ಪಿ.ಎಂ.ಸಿ.ಯೊಳಗೆ ಅಭಿವೃದ್ಧಿ ಕೆಲಸವನ್ನು ಮಾಡಲು ಸಾಧ್ಯವಿಲ್ಲದಂತಹ ಸ್ಥಿತಿಯಿದೆ. ಅದಕ್ಕಾಗಿ ಈ ಬಿಲ್ಲನ್ನು ತಂದಿದ್ದೇನೆ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ಮಾನ್ಯ ಅಧ್ಯಕ್ಷರೇ, ಈಗ ತಾವು ಅಧ್ಯಕ್ಷ ಸ್ಥಾನಕ್ಕೆ ಧಕ್ಕೆ ಬರುವುದರಿಂದ, ಆಡಳಿತವನ್ನು ಸುಗಮವಾಗಿ ಮಾಡುವುದಕ್ಕೆ ಆಗುತ್ತಿಲ್ಲವೆಂದು ಹೇಳುತ್ತಿದ್ದಿರಿ. ಅದಕ್ಕೆ ತಾವು ಒಂದು ಕೆಲಸ ಮಾಡಬೇಕು. Once elected, it is for a period of 20 months ಎಂದು ಏಕೆ ತರಬಾರದು. ಅದನ್ನು ಏಕೆ ಮಧ್ಯೆ ಮತ್ತೇ ತರುತ್ತೀರಿ? ಅಲ್ಲಿ ಏಕೆ ನೀವು ಅವಕಾಶ ಕೊಡುತ್ತೀರಿ? ಆರು ತಿಂಗಳಾದ ಮೇಲೆ ಪುನಃ ಅವನ ಮೇಲೆ ಅವಿಶ್ವಾಸ ತರುವುದಾದರೆ ಹೇಗಿದ್ದರೂ uncertainty ಇರುತ್ತದೆ. ತಾವು ಮಾಡುವುದಿದ್ದರೆ for a period of 20 months ಎಂದು ಮಾಡಿ. ಆಗ ನಿಮಗೆ ಅದು ಅನುಕೂಲವಾಗುತ್ತದೆ. ಇಲ್ಲದಿದ್ದರೆ ಆರು ತಿಂಗಳವರೆಗೂ ಕಾಯುತ್ತಾರೆ. ಈಗ ಏನಾಗಿದೆ ಎಂದರೆ ಪ್ರತಿಯೊಂದು ಸಂಘಸಂಸ್ಥೆಗಳಲ್ಲಿ ಕೂಡ ಅಧ್ಯಕ್ಷರನ್ನು ಭಯದಲ್ಲಿಡುವುದು ಇದೊಂದು ಪರಿಪಾಠವಾಗಿದೆ. ಅನ್ಯಾಯದ ಕೆಲಸ ಹೇಳಲಿ, ನ್ಯಾಯದ ಕೆಲಸ ಹೇಳಲಿ ಅವನು ಮಾಡುತ್ತಿರಬೇಕು, ಅವರು ಹೇಳಿದ ಮಾತನ್ನು ಅಧ್ಯಕ್ಷರು ಕೇಳದಿದ್ದರೆ, ಅವನು ಕೆಲಸವನ್ನು ಬಂದ್ ಮಾಡಿದ ದಿವಸ ಅವನನ್ನು ಕುರ್ಚಿಯಿಂದ ಕೆಳಗಿಳಿಸುವ ಕೆಲಸ ಪ್ರಾರಂಭವಾಗುತ್ತದೆ. ಇದು ಎಲ್ಲಾ ಕಡೆ ನಡೆಯುತ್ತಿದೆ, ಅದು ನಿಮಗೂ ಗೊತ್ತಿದೆ. ಅದಕ್ಕೆ 20 ತಿಂಗಳವರೆಗೆ ಮಾಡಿ, ಅದಕ್ಕೆ ಏಕೆ amendment ತರುವಂತಹ ಪ್ರಯತ್ನವನ್ನು ಮಾಡುತ್ತೀರಿ.

ಡಾ: ಹೆಚ್.ಸಿ. ಮಹದೇವಪ್ಪ : Once elected 20 months ಎಂದು ಮಾಡುವುದರ ಜೊತೆಗೆ roster ಅಳವಡಿಸಿ ಬಿಲ್‌ನಲ್ಲಿ incorporate ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, 20 ತಿಂಗಳು ಮಾಡುತ್ತಿರುವುದು ಸ್ವಾಗತಾರ್ಹ. ಇದರಲ್ಲಿ ಎಸ್‌ಸಿ:ಎಸ್‌ಟಿ ಸೇರಿಸಬೇಕಾಗುತ್ತದೆ.

ಶ್ರೀ ವೈ. ಸಂಪಂಗಿ : ಮಾನ್ಯ ಅಧ್ಯಕ್ಷರೇ, ಶೋಷಿತ ಜನಾಂಗಕ್ಕೆ ಅವಕಾಶ ಸಿಗುವಂತೆ ತಿದ್ದುಪಡಿಯನ್ನು ತಂದು ಸಾಮಾಜಿಕ ನ್ಯಾಯ ಸಿಗುವ ಹಾಗೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, 20 ತಿಂಗಳು ತಂದಿರುವುದು ಸ್ವಾಗತಾರ್ಹ, ಅದರಲ್ಲಿ ಎಸ್‌ಸಿ: ಎಸ್‌ಟಿ ಜನಾಂಗವನ್ನು ಕೂಡ ಸೇರಿಸಿದರೆ ಅನುಕೂಲವಾಗುತ್ತದೆಂದು ಈ ಸದನದ ಮುಖಾಂತರ ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೇ, ಈ ಬಿಲ್‌ನ್ನು ತರುವುದರ ಮೂಲಕ ಅಧ್ಯಕ್ಷರಿಗೆ ಒತ್ತಡ ಕಡಿಮೆಯಾಗಬೇಕೆಂದು ಹೇಳಿದ್ದೀರಿ. ನೀವು 20 ತಿಂಗಳು ಅವಧಿಯನ್ನು ಮಾಡುವುದರಿಂದ ಯಾರೂ ಕೂಡ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. 20 ತಿಂಗಳು ಎಂದ ತಕ್ಷಣ ಮುಂದೆ ನನ್ನ ಅಧಿಕಾರ ಏನಿಲ್ಲವೆಂದು ಕೂಡಲೇ ಯಾರೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಯಾರು effective ಆಗಿದ್ದು, ಕೆಲಸ ಮಾಡುವವರಿಗೂ ಕೂಡ ಅವಕಾಶವಿಲ್ಲದ ಹಾಗೆ ಆಗುತ್ತದೆ. ಒಳ್ಳೆಯವರಿದ್ದರೂ ಕೂಡ ಕೆಲಸ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. 20 ತಿಂಗಳಿನಲ್ಲಿ ಏನು ಕೆಲಸ ಮಾಡುವದಕ್ಕಾಗುತ್ತದೆ? ಹತ್ತು ತಿಂಗಳು ನೋಡುವುದರಲ್ಲಿ ಹೋಗುತ್ತದೆ, ಇನ್ನೊಂದು ಹತ್ತು ತಿಂಗಳಲ್ಲಿ ಅವನು ಹೋಗುತ್ತೇನೆಂದರೆ ಯಾವ ಅಧಿಕಾರಿ ಕೂಡ ಅಧ್ಯಕ್ಷನ ಮಾತು ಕೇಳುವುದಿಲ್ಲ. ಅದಕ್ಕೆ 20 ತಿಂಗಳು ಮಾಡುವುದಕ್ಕೆ ಹೋಗಬೇಡಿ. ನೀವು ಕನಿಷ್ಟ ಪಕ್ಷ 30 ತಿಂಗಳಾದರೂ ಮಾಡಿ. ನೀವು ಮೂರು ಅವಧಿ ಮಾಡುವುದಕ್ಕಿಂತ ಎರಡು ಅವಧಿ ಮಾಡಿ. ಇಲ್ಲದಿದ್ದರೆ ಅವನು ಕುಳಿತು 15-20 ತಿಂಗಳಲ್ಲಿ ಕೆಲಸ ನೋಡುವುದಕ್ಕಾಗುವುದಿಲ್ಲ. ಇನ್ನು ನನ್ನ period ಮುಗಿಯಿತು ಎಂದರೆ ಕೆಲಸ ಮಾಡುವುದಕ್ಕೂ ಆಗುವುದಿಲ್ಲ. ನೀವು ಅವಧಿಯನ್ನು ಅಷ್ಟು ಕಡಿಮೆ ಮಾಡುವುದು ಅಷ್ಟು ಸರಿಯಲ್ಲ. ನೀವು ಯಾರಿಗೆ ಕೊಡಿ, ಒಂದು ಅವಧಿಗೆ ಪೂರ್ಣವಾಗಿ ಇಡುವುದು ಒಳ್ಳೆಯದು. ಒಂದು ಅಧಿಗೆ ಕೊಟ್ಟರೆ ಒಳ್ಳೆಯ ಕೆಲಸ ಮಾಡುವವರು ಅಲ್ಲಿದ್ದರೆ ಕೆಲಸ ಮಾಡುವುದಕ್ಕೆ ಅವಕಾಶ ಸಿಗುತ್ತದೆ. ನೀವು ಈ ರೀತಿ 20 ತಿಂಗಳಿಗೆ ಒಂದು ಅವಧಿ, 10 ತಿಂಗಳಿಗೆ ಒಂದು ಅವಧಿ ಎಂದು ಮಾಡುತ್ತಾ ಹೋಗಿ ಎಲ್ಲರನ್ನೂ satisfy ಮಾಡುತ್ತೇವೆಂದರೆ ಆ ಸಂಘ ಸಂಸ್ಥೆಗಳು ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ಮಾಡಿರುವುದೆಲ್ಲ ಏನಾಗಿದೆ ಎಂದು ನಾವು

ನೋಡಿದ್ದೇವೆ. ಹಿಂದೆ ಐದ್ಯೆದು ವರ್ಷ ಮಾಡಿದಾಗ ಕೆಲಸ ಏನು ಆಗಿದ್ದವು, ಈಗ ನೀವು ಎಲ್ಲರಿಗೂ ಅವಕಾಶ ಸಿಗಲಿ ಎಂದು 20 ತಿಂಗಳು ಮಾಡಿ ಹಂಚುವುದಾದರೆ ಇದಕ್ಕೆ ಅರ್ಥವಿಲ್ಲದ ಹಾಗೆ ಆಗುತ್ತದೆ. ದಯವಿಟ್ಟು 20 ತಿಂಗಳು 30 ತಿಂಗಳು ಅವಧಿ ಮಾಡುತ್ತೇವೆನ್ನುವುದಕ್ಕಿಂತ ನೀವು ಐದು ವರ್ಷದ ಅವಧಿ ಕೊಡಿ. ಆರು ತಿಂಗಳವರೆಗೆ no confidence motion ತರಬಾರದು ಎಂದು ಇದೆಯಲ್ಲ, ಅದಕ್ಕೆ ಬೇಕಾದರೆ ಕನಿಷ್ಟ ಆರು ತಿಂಗಳವರೆಗೆ no confidence motion ಎಂದು amendment ಮಾಡಿ. ಆದರೆ ನೀವು period ಅನ್ನು ಕಡಿಮೆ ಮಾಡಬೇಡಿ. ಏಕೆ ಅವಧಿಯನ್ನು ಕಡಿಮೆ ಮಾಡಬೇಕು? ಒಳ್ಳೆಯವರಿದ್ದರೆ ಕೆಲಸ ಮಾಡಲಿ. ಒಳ್ಳೆಯವರನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ. ನೀವು ಇಲ್ಲವೆಂದರೆ 30 ತಿಂಗಳಿಗೆ ಒಂದು ಅವಧಿಯಂತೆ ಎರಡು ಅವಧಿ ಮಾಡಿ. ನೀವು 2/3rd majority ಪ್ರಕಾರ Simple majority ತೆಗೆದು ಮಾಡಬೇಕೆಂದು ಇಟ್ಟಿದ್ದೀರಲ್ಲ, ಅದನ್ನು ಒಪ್ಪಿಕೊಳ್ಳುತ್ತೇನೆ. No confidence motion move ಮಾಡುವಾಗ 2/3 rd majority. ಒಳಗಡೆ ಹೋದಮೇಲೆ ಆಗುವುದಕ್ಕೆ 50:50 majority ಇಟ್ಟಿದ್ದೀರಿ. ಅಲ್ಲಿ 2/3 rd majority ಇಲ್ಲ. ನೀವು ಅವನ ಮೇಲೆ No confidence motion introduce ಮಾಡುವುದಕ್ಕೆ 2/3 rd majority ಎಂದು ಹೇಳುತ್ತೀರಿ, ಆದರೆ ಒಳಗೆ Simply majority. ಶೇಕಡ 50 ಕಡಿಮೆ ಇಲ್ಲದ ಎಂಬ ಪದಗಳನ್ನು ಉಪಯೋಗಿಸತಕ್ಕದ್ದು ಎಂದು ಹೇಳುತ್ತೀರಿ. ಅದರ ಬಗ್ಗೆ ಕೂಡ ನೀವು ಇನ್ನೊಂದು ಬಾರಿ ಯೋಚನೆ ಮಾಡಿ. ಅವಧಿಯನ್ನು ಹಂಚುವಾಗ ನೀನು 20 ತಿಂಗಳು ನೀನು 20 ತಿಂಗಳು ಎಂದು ಮಾಡಿದಾಗ ನೀವು ಹೇಳಿದ System ಗೆ ಬಂದುಬಿಟ್ಟಿದೆ. ಮತ್ತೇ ನೀವು 20 ತಿಂಗಳು ಇಟ್ಟರೆ ಅಲ್ಲಿ ಹತ್ತತ್ತು ತಿಂಗಳು ಮಾಡಿಕೊಳ್ಳುತ್ತಾರೆ. ಈಗ ನೀವು ಇಟ್ಟಿದ್ದೀರಲ್ಲ ಯಾರೂ ಕೂಡ ಐದು ವರ್ಷದವರೆಗೆ ಬಿಟ್ಟಿಲ್ಲ. ಅಲ್ಲಿ ಜಗಳವಾದ ಕೂಡಲೇ ನೀವು 20 ತಿಂಗಳು ಮಾಡಿ ನಾವು 20 ತಿಂಗಳು ಮಾಡುತ್ತೇವೆ ಎಂದು ಹೇಳುತ್ತಾರೆ. ನೀವು 20 ತಿಂಗಳು ಅವಧಿಯನ್ನು ಇಟ್ಟರೆ ಅವರು ಹತ್ತತ್ತು ತಿಂಗಳು ಮಾಡಿಕೊಳ್ಳುತ್ತಾರೆ. ಅದರಿಂದ ಏನೂ ಸಾಧನೆ ಮಾಡುವುದಕ್ಕೆ ಆಗುವುದಿಲ್ಲ, ಅದರಿಂದ ಸಂಸ್ಥೆ

ಕೂಡ ಬೆಳೆಯುವುದಿಲ್ಲ. ಇದರೆ ಬಗ್ಗೆ ತಾವು ಇನ್ನೊಂದು ಸಾರಿ ಯೋಚನೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಪ್ರಮುಖವಾಗಿ ಎರಡು ತಿದ್ದುಪಡಿ ಮಾಡುವುದಕ್ಕೆ ತೆಗೆದುಕೊಂಡು ಬಂದಿದ್ದಾರೆ. ಒಂದು no confidence motion ಬಗ್ಗೆ ಹೇಳುವುದಾದರೆ ಅವಿಶ್ವಾಸ ನಿರ್ಣಯ ಮಂಡನೆ ಮಾಡುವುದಕ್ಕೆ notice ಕೊಡುವುದಕ್ಕೆ 2/3 rd majority ಇತ್ತು ಎಂದು ಅನಿಸುತ್ತದೆ ಅಲ್ಲವೇ? It is not very clear in this. No Confidence motion notice ಕೊಡುವುದಕ್ಕೆ total members ನಲ್ಲಿ 2/3 rd majority ಇರಬೇಕು ಎಂದು ಇತ್ತು. ಈಗ ಅದನ್ನು ಅರ್ಧ ಮಾಡುತ್ತೇವೆ ಎಂದರೆ not less than 50% ಎಂದು ಹೇಳುತ್ತಾರೆ. ಈಗ 2/3 rd ಮಾಡುತ್ತಿದ್ದೀರಲ್ಲವೇ? By not less than 1/3rd, the words" by not less than 50% shall be substituted." ಹಿಂದೆ ಯಾರಾದರೂ motion move ಮಾಡಿ ಚರ್ಚೆಗೆ ಬಂದಾಗ, ಇರುವುದರಲ್ಲಿಯೇ ಯಾರು 50% ಇರುತ್ತಾರೆ, ಅದರಲ್ಲಿ ಅರ್ಧಕ್ಕಿಂತ ಜಾಸ್ತಿ ಇದ್ದವರು ಪಾಸಾಗುತ್ತಿದ್ದರು, ಆದರೆ ಈಗ 2/3 rd of the total members ಎಂದು ಮಾಡಿದ್ದಾರೆ. ಹೋಗಲಿ, ಅವರೇನಾದರೂ ಮಾಡಿಕೊಳ್ಳಲಿ. ಆದರೆ ಇನ್ನೊಂದು ವಿಚಾರವೇನೆಂದರೆ ಇವರು ಈಗ ಹೇಗೂ ಐದು ವರ್ಷದ ಅವಧಿಯನ್ನು 20 ತಿಂಗಳಿಗೆ ಒಂದು ಅವಧಿಯಂತೆ ಜಿಲ್ಲಾ ಪಂಚಾಯಿತಿಯಲ್ಲಿ ಮಾಡಿರುವಂತೆ ಮಾಡುತ್ತೇವೆಂದು ತಂದಿದ್ದಾರೆ. ಈಗ ಎಲ್ಲರಿಗೂ ಅನುಭವಗಳಾಗಿವೆ, ಕಷ್ಟವಿದೆ. 20 ತಿಂಗಳಾದ ತಕ್ಷಣ ಅಧ್ಯಕ್ಷರನ್ನು ಬದಲಾವಣೆ ಮಾಡಬೇಕಾದರೆ ಎಲ್ಲಾ ಪಕ್ಷದವರಿಗೂ ತೊಂದರೆ ಗಳಾಗಿವೆ. ನಾನು ಏನು ಹೇಳುತ್ತೇನೆಂದರೆ ಇದು ಅಷ್ಟು ಒಳ್ಳೆಯದಾಗು ವುದಿಲ್ಲ. ನನ್ನ ಪ್ರಕಾರ ಮುಂದೆ ತಿದ್ದುಪಡಿಯನ್ನು ತೆಗೆದುಕೊಂಡು ಬಂದಾಗ ಜಿಲ್ಲಾಪಂಚಾಯಿತಿಗಳಿಗೆ ಮತ್ತು ಕಾರ್ಪೋರೇಷನ್‌ಗಳಿಗೆ ನೇರವಾಗಿ ಚುನಾವಣೆ ಮಾಡಬೇಕು, ಇಲ್ಲದಿದ್ದರೆ ಕುದುರೆ ವ್ಯಾಪಾರ ಬಹಳ ನಡೆಯುತ್ತಿದೆ. ಆಪರೇಷನ್ ಕಮಲ ಪ್ರಾರಂಭವಾದ ಮೇಲಂತೂ ಮಾನ್ಯ ಬಚ್ಚೇಗೌಡರೇ ಬಹಳ ಕಷ್ಟ. ನಿಮ್ಮ ಕ್ಷೇತ್ರದಲ್ಲಿ ಅನುಭವ ಆಗಿರಬೇಕು. ಈಗ ಆಪರೇಷನ್ ಪ್ರಾರಂಭವಾಗಿ ಈಗ ಮೆಂಬರ್‌ಗಳನ್ನು ಹಿಡಿದುಕೊಳ್ಳುವುದೇ ಕಷ್ಟವಾಗಿಬಿಟ್ಟಿದೆ. ಇದು ಪ್ರತಿ 20 ತಿಂಗಳಿಗೊಮ್ಮೆ ಒಂದು ಬಾರಿ ತಲೆನೋವಿನ ಕೆಲಸ. ಇದನ್ನು ತರದಿದ್ದರೆ ಒಳ್ಳೆಯದು, ಐದು ವರ್ಷ ಇರಲಿ

ಬಿಡಿ, ನಿಮಗೆ ಐದು ವರ್ಷವಿದ್ದರೆ ತೊಂದರೆ ಏನು? What is the purpose behind this? Are you going to do social justice here? ನೀವು 20–20 ತಿಂಗಳು ತರುವುದರ intention ಏನು? ಏಕೆ ತರುತ್ತಿದ್ದೀರಿ? ಅದನ್ನು ಸ್ವಲ್ಪ ಬಿಡಿಸಿ ಹೇಳುತ್ತೀರಾ? ನೀವು ಒಂದು ವೇಳೆ 20 ತಿಂಗಳ ಅವಧಿಯನ್ನು ತಂದಮೇಲೆ ಎಲ್ಲರಿಗೂ ಸಿಗಬೇಕು, ಅದರಿಂದ Social justice ಆಗಬೇಕೆಂದರೆ ಹಿಂದುಳಿದವರಿಗೆ ಜಿಲ್ಲಾಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯಲ್ಲಿರುವ ರೀತಿಯಲ್ಲಿ ಮೀಸಲಾತಿಯನ್ನು ತೆಗೆದು ಕೊಂಡು ಬನ್ನಿ. ಎಲ್ಲರಿಗೂ rotation ಆಗುತ್ತದೆ, ಅನುಕೂಲವಾಗುತ್ತದೆ, ಎಲ್ಲರಿಗೂ ಸಿಗುತ್ತದೆ. ಅದು ಏನೂ ಮಾಡದೇ ಇದನ್ನು ತೆಗೆದುಕೊಂಡು ಬರುವುದರಿಂದ ಏನು ಪ್ರಯೋಜನವಾಗುತ್ತದೆ? It is of no use. We can't provide social justice. ಅದರಲ್ಲಿ scheduled caste ನವರು ಇರುವುದಿಲ್ಲ, ಮಹಿಳೆಯರು ಇರುವುದಿಲ್ಲ, backward classes ನವರು ಇರುವುದಿಲ್ಲ. ಈಗ ಇದರಲ್ಲಿ ಮಾಡಿ. ಪಾರ್ಲಿಮೆಂಟ್‌ನಲ್ಲಿ ಮಹಿಳಾ ಮಸೂದೆ....

ಶ್ರೀ ಎಸ್.ಎ. ರವೀಂದ್ರನಾಥ್ : APMC ನಲ್ಲಿ ಮಹಿಳೆಯರು ಮತ್ತು ಎಸ್‌ಸಿ ಇರುತ್ತಾರೆ. ಮೊದಲು ಇರಲಿಲ್ಲ.

ಶ್ರೀ ಸಿದ್ಧರಾಮಯ್ಯ : ಒಬ್ಬೊಬ್ಬರು ಇರುತ್ತಾರೆ, ಬೇರೆಯವರಿಗೆ ಅಷ್ಟೊಂದು representation ಏಕೆ? ಒಬ್ಬೊಬ್ಬರು ಇದ್ದರೆ ಸಾಕೇ? Constitution ನಲ್ಲಿ Adequate representation to all sections of the society irrespective of the caste, creed and sex ಎಂದು ಹೇಳಿದರು. ಅದನ್ನು ಮಾಡಿ. ಈಗ ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್, ಮುನ್ಸಿಪಾಲಿಟಿ, ಕಾರ್ಪೋರೇಷನ್‌ನಲ್ಲಿ ಮಾಡಿದ್ದೇವಲ್ಲ. Why can't you bring that proposal? You bring the amendment.

ಶ್ರೀ ಶಿವರಾಜ್ ಎಸ್. ತಂಗಡಗಿ : ಮಾನ್ಯ ಅಪ್ಪಾಜಿ ನಾಡಗೌಡರು ಒಂದು ಸಲಹೆಯನ್ನು ಕೊಟ್ಟರು. 20 ತಿಂಗಳ ಅವಧಿಗೆ ಖಾಯಂ ಆಗಿ ಒಬ್ಬರು ಅಧ್ಯಕ್ಷರಾಗಿ ಇರಬೇಕು, ನೀವು ಏಕೆ ಆರು ತಿಂಗಳ ಅವಧಿಗೆ ತರಬೇಕೆಂದಿದ್ದೀರಿ ಎಂದು ಕೇಳಿದರು. ಆರು ತಿಂಗಳ ಅವಧಿಗೆ

ತರಲಿಲ್ಲವೆಂದರೆ ಅಧ್ಯಕ್ಷನಿಗೆ ನನ್ನನ್ನು 20 ತಿಂಗಳವರೆಗೂ ಯಾರೂ ತೆಗೆಯುವುದಕ್ಕೆ ಆಗುವುದಿಲ್ಲವೆಂದು ಹೆದರಿಕೆ ಇರುವುದಿಲ್ಲ.

(12-10 PM)

ಶ್ರೀ ಸಿದ್ದರಾಮಯ್ಯ : No Confidence motion ಗೆ ಅವಕಾಶವಿದೆಯಲ್ಲಾ, if there is misconduct and if he is corrupt ಅದಕ್ಕೋಸ್ಕರ no confidence motion ಇದೆಯಲ್ಲಾ.

ಶ್ರೀ ಶಿವರಾಜ ಎಸ್. ತಂಗಡಗಿ : ಮಾನ್ಯ ಅಪ್ಪಾಜಿ ನಾಡಗೌಡರು ಹೇಳಿದ್ದು.

ಶ್ರೀ ಪ್ರಕಾಶ್ ಹುಕ್ಕೇರಿ : ಎರಡನ್ನೂ ಅವರೇ ಹೇಳುತ್ತಿದ್ದಾರೆ, ಅಧ್ಯಕ್ಷರು ಆದ ಕೂಡಲೇ ತೆಗೆಯುತ್ತಾರೆಂದು ಅವರೇ ಹೇಳುತ್ತಿದ್ದಾರೆ. ಆ ಕಡೆಯೂ ನೀವೇ ಹೇಳುತ್ತೀರಿ, ಈ ಕಡೆಯೂ ನೀವೇ ಹೇಳುತ್ತೀರಿ.

ಅಧ್ಯಕ್ಷರು : ಮಾನ್ಯ ಮಂತ್ರಿಯವರು ಉತ್ತರವನ್ನು ಹೇಳಲಿ.

ಶ್ರೀ ಶಿವರಾಜ ಎಸ್. ತಂಗಡಗಿ : ತಾವು ನಾನು ಮಾತನಾಡು ವುದನ್ನು ಪೂರ್ತಿ ಕೇಳಿದರೆ ಒಳ್ಳೆಯದು.

ಅಧ್ಯಕ್ಷರು : ಮಂತ್ರಿಗಳು ಉತ್ತರ ಕೊಟ್ಟಮೇಲೆ ನೀವು ಮಾತನಾಡಿ.

ಶ್ರೀ ಶಿವರಾಜ ಎಸ್. ತಂಗಡಗಿ : ಮಾನ್ಯ ಅಧ್ಯಕ್ಷರೆ, ಕೆಲವೊಮ್ಮೆ ಸದಸ್ಯರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ತಪ್ಪು ಏನಾದರೂ ಮಾಡಿದರೆ, ಅವರಿಗೆ ಹೆದರಿಕೆ ಇಲ್ಲದ ಹಾಗೆ ಆಗುತ್ತದೆ. ಅದಕ್ಕೋಸ್ಕರ 6 ತಿಂಗಳು ಆದಮೇಲೆ ಅವರು ತಪ್ಪು ಮಾಡಿದರೆ no confidence motion ತರುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಒಂದು ನಿಮಿಷ, MLA ಯನ್ನು ತೆಗೆಯಬಹುದಾ? MLA ಗಳು ಎಲ್ಲರೂ ಸರಿಯಾಗಿ ಇದ್ದೇವಾ? No, no this is wrong. ಈ concept ಅರಿ ಇಲ್ಲ. ಚುನಾಯಿತ ಪ್ರತಿನಿಧಿಗಳ ಯಾವುದೇ ಸ್ಥಾನದಲ್ಲಿರಲಿ, ಅವರ ಬಗ್ಗೆ ಅಷ್ಟು ಹಗುರವಾಗಿ ದಯವಿಟ್ಟು ನಾವು ಮಾತನಾಡಬಾರದು. This is not the way.

ಶ್ರೀ ಶಿವರಾಜ ಎಸ್. ತಂಗಡಗಿ : ನಾನು ಮಾತನಾಡುವುದನ್ನು ಪೂರ್ತಿ ನೀವು ಕೇಳಿ. ಆ ದೃಷ್ಟಿಕೋನವೂ ಇರಬಹುದು, ಅದರ ಜೊತೆಗೆ 6 ತಿಂಗಳು ಆದಮೇಲೆ no confidence motion ಮಾಡುವುದಕ್ಕೆ ಅವಕಾಶ ಕೊಡುವಂಥದ್ದು ಒಂದು. ನಾವು ಅದನ್ನು ಈಗಾಗಲೇ ಜಿಲ್ಲಾ ಪಂಚಾಯಿತಿ

O.32 F-14

ಮತ್ತು ತಾಲ್ಲೂಕು ಪಂಚಾಯಿತಿಯಲ್ಲಿ ಆ ಕಾಯಿದೆ ಇರುವುದರಿಂದ, ಆ ಕಾಯಿದೆಗೆ ಅನುಗುಣವಾಗಿ ಈ ಬಿಲ್ ಅನ್ನು ತಂದಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ನನಗೆ ಒಂದು ಒಳ್ಳೆಯ ಸಲಹೆಯನ್ನು ಕೊಟ್ಟರು ಅದು ಏನೆಂದರೆ ತಿದ್ದುಪಡಿ ಜೊತೆಗೆ ಮೀಸಲಾತಿಯನ್ನು ತರಬೇಕೆನ್ನುವಂಥದ್ದು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಮಂತ್ರಿಯವರೆ, ಮೀಸಲಾತಿಯನ್ನು ತರುವುದಕ್ಕೆ ಮನಸ್ಸು ಇದೆಯಾ?

ಶ್ರೀ ಶಿವರಾಜ ಎಸ್. ತಂಗಡಗಿ : ಅದಕ್ಕೆ ನನಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಮಾನ್ಯ ಮಂತ್ರಿಯವರು ಮಾತನಾಡಲಿ.

ಶ್ರೀ ಶಿವರಾಜ ಎಸ್. ತಂಗಡಗಿ : ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ನಿಜವಾಗಿಯೂ ನಮ್ಮ ಸರ್ಕಾರವೂ ಸಾಮಾಜಿಕ ನ್ಯಾಯದ ಬಗ್ಗೆ ಚಿಂತನೆ ಮಾಡುತ್ತಿದೆ, ಸಾಮಾಜಿಕ ನ್ಯಾಯ ತರಬೇಕು. APMC ಯಲ್ಲಿ ಸಾಮಾಜಿಕ ನ್ಯಾಯವನ್ನು ತರಬೇಕೆಂಬ ದೃಷ್ಟಿಕೋನವನ್ನು ಇಟ್ಟುಕೊಂಡು ಈಗಾಗಲೇ ಮೀಸಲಾತಿಯ ಬಗ್ಗೆಯೂ ನಮ್ಮ ಸರ್ಕಾರ ಚಿಂತನೆ ಮಾಡಿದೆ. ನಾವು ಆ ದೃಷ್ಟಿಕೋನವನ್ನು ಇಟ್ಟುಕೊಂಡು 20–20 ತಿಂಗಳ ತಿದ್ದುಪಡಿಯನ್ನು ತಂದಿದ್ದೇವೆ. ಅದರ ಜೊತೆಗೆ ಏಕೆ 20 ತಿಂಗಳು ತಿದ್ದುಪಡಿಯನ್ನು ತಂದಮೇಲೆ.. ..

ಶ್ರೀ ಟಿ.ಬಿ. ಜಯಚಂದ್ರ : ಒಂದು ಕೆಲಸ ಮಾಡಿ, ಮೂರು term ಆಗುತ್ತದೆ. ಪರಿಶಿಷ್ಟ ಜಾತಿಗೆ ಒಂದು ಮಾಡಿ, ಒಂದು ladies ಗೆ ಮಾಡಿ, ಆ ರೀತಿ roaster ಮಾಡಿ.

ಅಧ್ಯಕ್ಷರು : ಅವರು ಮಾತನಾಡಿ ಮುಗಿಸಲಿ, ಆಮೇಲೆ ನೀವು ಕೇಳಿ.

ಶ್ರೀ ಶಿವರಾಜ ಎಸ್. ತಂಗಡಗಿ : ನಾನು ಆ ವಿಚಾರಕ್ಕೆ ಸ್ಥಳೀಯ ಸಂಸ್ಥೆಯಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತಿಯಲ್ಲಿ ಯಾವ ರೀತಿ ಇದೆ. ಆ ರೀತಿ ಕಾಯಿದೆಗೆ ತಿದ್ದುಪಡಿ ತರುವ ದೃಷ್ಟಿಕೋನ ಇಟ್ಟುಕೊಂಡು ಇದನ್ನು 20–20 ತಿಂಗಳು ಮಾಡಿದ್ದು. ಇದರ ಜೊತೆಗೆ ಮಾನ್ಯ ನಾಡಗೌಡರು ಇದು 5 ವರ್ಷಗಳು ಪೂರ್ತಿ ಇರಬೇಕು, ಇಲ್ಲವೆಂದರೆ ಎರಡೂವರೆ ವರ್ಷ ಇರಬೇಕು, ಅಂದರೆ ಸಹಜವಾಗಿ ಸದಸ್ಯರಾಗಿರುವವರಿಗೆ ಅಧ್ಯಕ್ಷರು, ಉಪಾಧ್ಯಕ್ಷರು ಆಗಬೇಕೆಂಬ ಆಸೆ ಇರುವಂಥದ್ದು ಸಹಜ. ಅದೇ ರೀತಿಯಲ್ಲಿ ಇಟ್ಟುಕೊಂಡು ಜಿಲ್ಲಾ

ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ನಲ್ಲೂ ತಂದಿದ್ದು. ಆ ಮಾದರಿಯಲ್ಲೇ ನಮ್ಮ APMC ಯಲ್ಲೂ ತರಬೇಕೆಂಬ ದೃಷ್ಟಿಕೋನವನ್ನು ಇಟ್ಟುಕೊಂಡು ಇವತ್ತು 20–20 ತಿಂಗಳು ತಂದಿರುವಂಥದ್ದು. ಇದರ ಜೊತೆಗೆ notice ಕೊಡುವುದಕ್ಕೆ ಹಿಂದೆ 1/3rd ಇತ್ತು. ಆದರೆ ಅಧ್ಯಕ್ಷರು, ಉಪಾಧ್ಯಕ್ಷರು ಮಾಡುವುದಕ್ಕೆ 50 ಇತ್ತು. ಇದಕ್ಕೆ ಅದನ್ನು change ಮಾಡಿ 2/3rd ಅಂದರೆ ಸಹಜವಾಗಿ ಅಧ್ಯಕ್ಷರನ್ನು ಇಳಿಸುವುದಕ್ಕೆ ಆಗುವುದಿಲ್ಲ, ಸಹಜವಾಗಿ ಎಲ್ಲಾ ಸದಸ್ಯರು ಸೇರಿದರೆ ಮಾತ್ರ ಇಳಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ತಿಳಿದುಕೊಂಡು ಈ ಬಿಲ್ ಅನ್ನು ತಂದಿದ್ದೇವೆ.

ಶ್ರೀ ಸಿದ್ಧರಾಮಯ್ಯ : ಇವರು ಬರೀ ಚಿಂತನೆಯಲ್ಲಿದ್ದೇವೆಂದು ಹೇಳುತ್ತಾರೆ. ನೀವು ಅಧಿಕಾರದಲ್ಲಿ ಇಲ್ಲದೇ ಇರುವಾಗ ಚಿಂತನೆ, ಅಧಿಕಾರದಲ್ಲಿ ಇರುವಾಗ ಚಿಂತನೆಯನ್ನು ಕಾರ್ಯಗತ ಮಾಡಬೇಕು. ಮಾನ್ಯ ಮಂತ್ರಿಗಳು I think ನೀವು social justice ಪರ ಇರುವವರು. ನಾವು ನಮ್ಮ ಕಾಲದಲ್ಲೇ 20–20 ತಿಂಗಳುಗಳನ್ನು ಮಾಡಿದ್ದೆವು. ನಾವು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಏಕೆ ಮಾಡಿದೆವೆಂದರೆ, ಎಲ್ಲರಿಗೂ ಅವಕಾಶ ಸಿಗಲಿ, reservation ಮಾಡಿದ್ದೇವೆ, ಎನ್ನುವ ಕಾರಣಕ್ಕೋಸ್ಕರವಾಗಿ ಅದನ್ನು ನಾವು ಮಾಡಿದೆವು. ಈಗ reservation ಇಲ್ಲದೇ 20–20 ತಿಂಗಳು ಮಾಡಿದರೆ ಏನು ಉಪಯೋಗವಿಲ್ಲ. ಆ ಕಾರಣಕ್ಕೋಸ್ಕರವಾಗಿ ಈಗ ಹೇಗೂ ನೀವು ತಿದ್ದುಪಡಿಯನ್ನು ತಂದಿದ್ದೀರಿ. ಇದರ ಜೊತೆಯಲ್ಲೆ ಆ ತಿದ್ದುಪಡಿಯನ್ನು ತಂದು ಬಿಡಿ, ಒಟ್ಟಿಗೆ ಚರ್ಚೆ ಮಾಡಿ pass ಮಾಡೋಣ. ದಯವಿಟ್ಟು ಅದನ್ನು ಮಾಡಿ. Backward class ನವರಿಗೆ, scheduled caste ನವರಿಗೆ, ಮಹಿಳೆಯರಿಗೆ, ಎಲ್ಲರಿಗೂ ಅನುಕೂಲವಾಗುತ್ತದೆ. ತಾವು ದಯವಿಟ್ಟು ಮೀಸಲಾತಿ ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಮುನಿಸಿಪಾಲಿಟಿಗಳಲ್ಲಿ ಏನೇನು ಮಾಡಿದ್ದೇವೆಂದರೆ Backward class, Minorities ನವರಿಗೆ 26.4%, 6.6.% Major community ಯಲ್ಲಿ weaker sectionಗೆ 12,000 ರೂಪಾಯಿಗಳಿಗಿಂತ ಕಡಿಮೆ ಆದಾಯವಿರುವ ವರೆಂದು ಮಾಡಿದ್ದಾರೆ. ಒಟ್ಟು 33% + 18% scheduled caste ಗೆ ಅಲ್ಲಿ

51% reservation ಇದೆ. ನೀವು ಇದನ್ನು ಮಾಡಿ, at least social justice ಕೂಡ ಆಗುತ್ತದೆ. ಇದರಿಂದ ಎಲ್ಲರಿಗೂ ಸಿಗುತ್ತದೆ. ನೀವು 20 ತಿಂಗಳು ಮಾಡಿಕೊಂಡು ಬರುತ್ತೇವೆಂದರೆ ಇದರಿಂದ ಯಾವ ಉದ್ದೇಶವೂ ಸಫಲವಾಗುವುದಿಲ್ಲ. ನೀವು ಹೇಳುವಂಥ ಉದ್ದೇಶವೂ ಸಫಲವಾಗುವುದಿಲ್ಲ. ಇದರಿಂದ social justice ಆಗುವುದಿಲ್ಲ, ಇಲ್ಲಿ ಯಾರು ಬಲಾಢ್ಯರು ಇರುತ್ತಾರೋ ಅವರು ಆಗುತ್ತಾರೆ. ಯಾರು ಮೆಂಬರ್‌ಗಳನ್ನು ದುಡ್ಡು ಕೊಟ್ಟು ಹೊತ್ತುಕೊಂಡು ಹೋಗುತ್ತಾರೋ ಅವರು ಆಗುತ್ತಾರೆ. ಇವರು ಎಲ್ಲಿ ಆಗುತ್ತಾರೆ? ಇವರೆಲ್ಲಾ ಆಗುವುದಿಲ್ಲ. ಅದಕ್ಕೆ ನನ್ನ suggestion ಏನೆಂದರೆ, ಈ ತಿದ್ದುಪಡಿಯ ಜೊತೆಯಲ್ಲಿ ಮೀಸಲಾಥಿ ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ. As provided in the Panchayat Institution and Local bodies ಇಲ್ಲಿಗೂ ತೆಗೆದುಕೊಂಡು ಬಂದರೆ ಬಹಳ ಅನುಕೂಲ ವಾಗುತ್ತದೆ. ಎಲ್ಲರಿಗೂ ಸಾಮಾಜಿಕ ನ್ಯಾಯ ಸಿಕ್ಕ ಹಾಗೆ ಆಗುತ್ತದೆ. ಅದನ್ನು ದಯವಿಟ್ಟು ಮಾಡಬೇಕೆಂದು ನನ್ನ ಸಲಹೆ, ತಾವು ಇದನ್ನು ವಾಪಸ್ಸು ತೆಗೆದುಕೊಳ್ಳಿ, ಇದರಿಂದ ಏನು ಉಪಯೋಗವಾಗುವುದಿಲ್ಲ. I hope that you are also committed to social justice.

ಶ್ರೀ ಶಿವರಾಜ ಎಸ್. ತಂಗಡಗಿ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಈಗ ಇದನ್ನು 20–20 ತಿಂಗಳು ತಂದು ಮುಂದಿನ ಅಧಿವೇಶನದೊಳಗೆ..

ಶ್ರೀ ಸಿದ್ಧರಾಮಯ್ಯ : ಮುಂದೆ ಏನು ಬೇಡ, ಮುಂದೆ ಆಗುವುದಿಲ್ಲ.

ಶ್ರೀ ಶಿವರಾಜ ಎಸ್. ತಂಗಡಗಿ : ಈಗ ಇದರ ಪ್ರಕ್ರಿಯೆ ಪ್ರಾರಂಭವಾಗಲಿ.. ..

ಡಾ: ಹೆಚ್.ಸಿ. ಮಹದೇವಪ್ಪ : ನೀವು ಈಗ bill ಅನ್ನು introduce ಮಾಡುತ್ತಿದ್ದೀರಿ, ಅಲ್ಲಿ ಒಂದು stability ಬರಲಿ, ಸಹಕಾರ ಕ್ಷೇತ್ರದಲ್ಲಿ ಆಡಳಿತ ಮಾಡುವುದಕ್ಕೆ ok, we will welcome it. ಈಗ ಇರುವ form ನ ನೀವು ಭದ್ರತೆ ಮಾಡುವಾಗ ಸಮಾಜದ ಎಲ್ಲಾ ವರ್ಗಗಳ ಜನರು ಆಡಳಿತದಲ್ಲಿ ಭಾಗಿಯಾಗಬೇಕು, ಪಾಲುದಾರರಾಗಬೇಕೆಂಬ ಉದ್ದೇಶ ದಿಂದಲೇ ಸಂವಿಧಾನದಲ್ಲಿ ಎಲ್ಲರಿಗೂ ಸಮಾನವಾದಂಥ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಆ ಹಿನ್ನಲೆಯಲ್ಲಿ ಈ ಬಿಲ್ ಏನು ಇದೆ, ಇದರ ಜೊತೆಗೆ ನೀವು ಮೀಸಲಾತಿಯನ್ನು, roaster system ಅನ್ನು ಮಹಿಳೆಯರು ಮತ್ತು

SC/ST ಮತ್ತು Backward class ಗೆ compulsory incorporate ಮಾಡಿ ತಂದರೆ ಇದಕ್ಕೆ ಒಂದು ಅರ್ಥವಿದೆ. ಅದಕ್ಕೆ ಒಂದು ಬೆಲೆ ಬರುತ್ತದೆ, ಆಡಳಿತದಲ್ಲಿ ಎಲ್ಲಾ ಜನರಿಗೂ ಪಾಲುದಾರಿಕೆಯನ್ನು ಕೊಟ್ಟ ಹಾಗೆ ಆಗುತ್ತದೆ. ಅದು ನಮ್ಮ ಸಂವಿಧಾನದ ಮೂಲ ಆಶಯವಾಗಿದೆ. ಅದನ್ನು ಮಾಡಬೇಕೆಂದು ನಾವು ತಮಗೆ ಮನವಿ ಮಾಡುತ್ತಿದ್ದೇವೆ.

ಶ್ರೀ ಶಿವರಾಜ ಎಸ್. ತಂಗಡಗಿ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರು ಹೇಳಿದ ಹಾಗೆ ಸಾಮಾಜಿಕ ನ್ಯಾಯವನ್ನು ಕಾಪಾಡುವುದಕ್ಕೆ ನಮ್ಮ ಸರ್ಕಾರವೂ ಬದ್ಧವಾಗಿದೆ. ಅದರ ಜೊತೆಗೆ ನಾವು 20–20 ತಿಂಗು ಮಾಡಿದ್ದೆ, ಜಿಲ್ಲಾ ಪಂಚಾಯತ್ ಮಾದರಿಯೊಳಗೆ ಅದು SC ಇರಬಹುದು, ST ಇರಬಹುದು ಮತ್ತು ಮಹಿಳೆಯರು ಇರಬಹುದು. ಇದನ್ನು ಯಾವ ರೀತಿ ಜಿಲ್ಲಾ ಪಂಚಾಯತಿಯಲ್ಲಿ ಯಾವ ಮಾದರಿಯಲ್ಲಿ ಇದೆ, ಅದೇ ರೀತಿಯಲ್ಲೆ ನಮ್ಮ APMC ಕಾಯಿದೆಯನ್ನು ತಿದ್ದುಪಡಿ ತರುತ್ತೇವೆ. ಆದರೆ ಈ 20–20 ತಿಂಗಳುಗಳಿಗೆ ತಾವು ಒಪ್ಪಿಗೆಯನ್ನು ಕೊಟ್ಟರೆ, ಮುಂದಿನ ಅಧಿವೇಶನದೊಳಗೆ.. ..

ಶ್ರೀ ವೆಂಕಟರಾವ್ ನಾಡಗೌಡ : ಇದನ್ನು ವಾಪಸ್ಸು ತೆಗೆದುಕೊಂಡು ಮತ್ತೊಮ್ಮೆ ಸಮಗ್ರವಾಗಿ ತೆಗೆದುಕೊಂಡು ಬನ್ನಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ತಾವು ಮಾಡುವುದನ್ನು ಮಾಡುತ್ತೀರಿ, ಒಂದೇ ಸಾರಿ ಮಾಡಿ.

ಶ್ರೀ ವೆಂಕಟರಾವ್ ನಾಡಗೌಡ : ದಯವಿಟ್ಟು repeal ಮಾಡಿ, 20–20 ತಿಂಗಳ ಬದಲು 30 ತಿಂಗಳು ಮಾಡಿ.

ಶ್ರೀ ಶಿವರಾಜ ಎಸ್. ತಂಗಡಗಿ : ನಾವು ಅದರ ಜೊತೆಗೆ ತರುವ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು : ಅಯಿತು, ಅವರು reservation ಗೆ roaster ಅನ್ನು ನೋಡಬೇಕಲ್ಲಾ, ಮಾನ್ಯ ಮಂತ್ರಿಗಳು ನೋಡಿ ಮಾಡುತ್ತೇವೆಂದು ಹೇಳಿದ್ದಾರೆ.

Sri. SIDDARAMAIAH : It is already there in the Panchayat Raj Institutions and Municipalities. You are aware of it. It is functioning very well.

ಅಧ್ಯಕ್ಷರು : ಅದು ಮಾಡಬೇಕು, ಮಾಡಬೇಕೆಂದರೆ it requires some time.

ಡಾ: ಹೆಚ್.ಸಿ.ಮಹದೇವಪ್ಪ : Local bodies ನಲ್ಲಿ ಸಂವಿಧಾನಕ್ಕೆ ತಿದ್ದುಪಡಿಯನ್ನು ತಂದು, ಈಗಾಗಲೇ incorporate ಮಾಡಿರುವುದರಿಂದ it is very easy tro adopt.

ಶ್ರೀ ಶಿವರಾಜ ಎಸ್ ತಂಗಡಗಿ : ಜಿಲ್ಲಾ ಪಂಚಾಯತಿ ಮಾದರಿ.. ..

ಡಾ: ಹೆಚ್.ಸಿ. ಮಹದೇವಪ್ಪ : ಅದೇ ರೀತಿ ಈಗಲೂ ನೀವು adopt ಮಾಡಿ.

ಅಧ್ಯಕ್ಷರು : ಮಾಡುತ್ತೇನೆಂದು ಹೇಳಿದ್ದಾರಲ್ಲಾ, assurance ಕೊಟ್ಟಿದ್ದಾರೆ.

ಶ್ರೀ ಕಾಕ ಸಾಹೇಬ್ ಪಾಂಡುರಂಗ ಪಾಟೀಲ್ : ಮಾನ್ಯ ಅಧ್ಯಕ್ಷರೆ, Agricultural Produce Marketing Committee ಗೆ ತಿದ್ದುಪಡಿ ಅವಶ್ಯವಿದೆ. ಅದನ್ನು ನಾವು ಒಪ್ಪುತ್ತೇವೆ. ಆದರೂ ಕೂಡ basically ನಮ್ಮ constituency ಏನು ಇವೆ. ರೈತರ ಪ್ರತಿನಿಧಿ ಎಂದು ಜಿಲ್ಲಾ ಪಂಚಾಯಿತಿ ಮತಕ್ಷೇತ್ರವಾಗಿ, ರೈತರ ಯಾರ ಹೆಸರಿನ ಮೇಲೆ ಪಹಣಿ ಇರುತ್ತದೆ. ಅವರಿಗೆಲ್ಲಾ ನಾವು ಮತದಾನದ ಅಧಿಕಾರವನ್ನು ಕೊಟ್ಟಿದ್ದೇವೆ. ಮಹಾರಾಷ್ಟ್ರದಲ್ಲಿ ಕಳೆದ 2 ವರ್ಷಗಳ ಹಿಂದೆ ಅಲ್ಲಿ ಒಂದು ತಿದ್ದುಪಡಿಯನ್ನು ತಂದು, ಆ Market Committee jurisdiction ನಲ್ಲಿ ಎಷ್ಟು ಜನ ಗ್ರಾಮ ಪಂಚಾಯಿತಿಯ ಸದಸ್ಯರು ಇದ್ದಾರೋ, ಅವರಿಂದ ಕೆಲವು ಜನ ಮತ್ತೆ VSS, GSS ಕಡೆಯಿಂದ ಕೆಲವು ಜನರು, ಈ ಪ್ರಕಾರ ಮಾಡಿದರೆ 30% ಮೀಸಲಾತಿ ಮಾಡಬಹುದು. ಈಗ ಏನು ಇದೆಯೆಂದರೆ 11 seat ನಲ್ಲಿ ಒಂದು ಮಹಿಳಾ ಮತ್ತು ಒಂದು SC/ST ಇದೆ. ಆದುದರಿಂದ ಈ roaster ತರುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕೆ ಈ ರೀತಿ ತಂದರೆ 5 ಜನ direct ಕೃಷಿಕರು, 5 ಜನ ಸರ್ಕಾರದವರು ಇಂಥ ಒಂದು ವ್ಯಾಪಕವಾದ ತಿದ್ದುಪಡಿಯನ್ನು ತರಬೇಕು, ಈಗ ಇದನ್ನು ತರಬಾರದೆಂಬ ವಿಷಯವನ್ನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ಸಿದ್ಧರಾಮಯ್ಯ : ಅವರು ಉತ್ತರ ಹೇಳಲಿ.

ಅಧ್ಯಕ್ಷರು : ಹೇಳಿದರಲ್ಲ.

ಶ್ರೀ ಶಿವರಾಜ್ ಎಸ್ ತಂಗಡಗಿ : ಒಪ್ಪಿಕೊಳ್ಳುತ್ತೇನೆ ಎಂದು ಹೇಳಿದೆನಲ್ಲ.

ಅಧ್ಯಕ್ಷರು : ಆಯಿತು, ಮುಂದಿನ ದಿನಗಳಲ್ಲಿ ತರುತ್ತೇನೆ ಎಂದು ಇನ್ನೊಂದು ಸಾರಿ ಹೇಳಿಬಿಡಿ.

ಶ್ರೀ ಶಿವರಾಜ್ ಎಸ್. ತಂಗಡಗಿ : ಜಿಲ್ಲಾ ಪಂಚಾಯಿತಿ ಮಾದರಿಯಲ್ಲಿ ನಾವು ತರುವಂಥ ಕೆಲಸವನ್ನು ಮಾಡುತ್ತೇವೆ.

ಶ್ರೀ ಎಸ್. ಸುರೇಶ್‌ಕುಮಾರ್ : ಅವರು ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ. He has agreed. ಈಗ Bill pass ಮಾಡಿ ಕೊಡಿ.

ಶ್ರೀ ಸಿದ್ದರಾಮಯ್ಯ : 5 ವರ್ಷ ಎಂದು ಇದ್ದುದನ್ನು 20–20–20 ತಿಂಗಳೆಂದು ಮೂರು term ಮಾಡುತ್ತಿದ್ದೀರಿ. ಏಕೆ ಇದನ್ನು ಮಾಡುತ್ತಿದ್ದೀರಿ? ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳಲ್ಲಿ reservation ಇರುವುದರಿಂದ ಅಲ್ಲಿ ಎಲ್ಲರಿಗೂ ಸಿಗಲಿ ಎನ್ನುವ ಕಾರಣಕ್ಕೋಸ್ಕರ ಮಾಡಲಾಗಿದೆ. B.C.M.-A, B.C.M.-B, Scheduled Caste, Scheduled Tribes ಇವರಿಗೆಲ್ಲ ಅವಕಾಶ ಸಿಕ್ಕಲಿ ಎನ್ನುವ ಕಾರಣದಿಂದ ಅಲ್ಲಿ ಮಾಡಲಾಗಿದೆ. ಆದರೆ, ಇಲ್ಲಿ ಇದರ ಹಿಂದೆ ಇರತಕ್ಕಂಥ ಉದ್ದೇಶವೇನು? ಅಲ್ಲಿಯವವರಿಗೇ ಮಾಡಿಕೊಡುತ್ತಿದ್ದೀರಿ. No purpose is served. Social justice is not going to be served. ಕಟ್ಟಾಸುಬ್ರಹ್ಮಣ್ಯರವರೇ, you are also coming under social justice category. ಮಿನಿಸ್ಟರ್ ಆದ ತಕ್ಷಣ ನೀವು ಅದನ್ನು ಬೇಡವೆಂದರೆ ಹೇಗೆ? ಹಾಗಿದ್ದರೆ, ಇದನ್ನು ವಾಪಸ್ಸು ತೆಗೆದುಕೊಂಡು social justice ಸಿಗುವ ಹಾಗೆ ಸೇರಿಸಿ ಮತ್ತೆ ತೆಗೆದುಕೊಂಡು ಬನ್ನಿ ಎಂದು ಹೇಳಿ.

Dr. H.C. Mahadevapp : You have become Minister under social justice quota.

ಶ್ರೀ ಸಿದ್ದರಾಮಯ್ಯ : ಹೀಗಾದರೆ ಆಮೇಲೆ ಬಯ್ಯಿಸಿಕೊಳ್ಳುವವರು ನೀವೇ ನೋಡಿ. Bill move ಮಾಡಿ, ಅದನ್ನು ಮಾಡಲಿಲ್ಲ ಎಂದು ಅನ್ನಿಸಿಕೊಳ್ಳುತ್ತೀರಿ. ನಿಮಗೆ ಇದೊಂದು ಅವಕಾಶ ಸಿಕ್ಕಿದೆ, ಮಾಡಿ.

SRI KATTA SUBRAHMANYA NAIDU : He is bringing another amendment.

Sri Siddaramaiah : This is the opportunity given to you. You avail this opportunity, make use of this opportunity. Do justice.

ಶ್ರೀ ಅರವಿಂದ ಲಿಂಬಾವಳಿ : ಮಾಡುತ್ತೇವೆ ಎಂದು ಹೇಳಿದ್ದಾರಲ್ಲ.

ಅಧ್ಯಕ್ಷರು : ಆಯಿತು, ಅವರು ಹೇಳಲಿ. ನೀವು ಹೇಳಿ.

ಶ್ರೀ ಸಿದ್ದರಾಮಯ್ಯ : ನಾವು ನಿಮಗೆ support ಮಾಡುತ್ತೇವೆ, ನೀವು ಮಾಡಿ. ಏನಾಗುತ್ತದೋ ನೋಡೋಣ.

ಶ್ರೀ ಶಿವರಾಜ್ ಎಸ್ ತಂಗಡಗಿ : ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, social justice ತರಲಿಕ್ಕೇ ಈಗ ನಾವು ಅದನ್ನು ಮಾಡುತ್ತಿರುವುದು. ಅದನ್ನು ನಾವು ಒಪ್ಪಿಕೊಂಡಿದ್ದೇವೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಅವರು ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ, amendment ಮಾಡುತ್ತೇವೆ ಎಂದು ಹೇಳಿದ್ದಾರೆ. ಆದ್ದರಿಂದ ಈಗ ಈ ಬಿಲ್ ಅನ್ನು ಒಪ್ಪಿಕೊಳ್ಳಿ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ;

"2009ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 5 ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 5ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಶಿವರಾಜ್ ಎಸ್ ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ;

"2009ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

* * * * * *

III ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಹಾಗೂ ಇತರೆ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಹಾಗೂ ಇತರೆ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರು ಜಲ ಮಂಡಳಿಯು 1964 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, 1966 ಮತ್ತು 1984 ರಲ್ಲಿ ಕೆಲವು ತಿದ್ದುಪಡಿಗಳಾಗಿವೆ. ನಂತರ, ಬೆಂಗಳೂರಿನ ವಿಸ್ತಾರ ಬಹಳಷ್ಟು ಜಾಸ್ತಿಯಾಗಿದೆ ಮತ್ತು ಇಲ್ಲಿ ಬಹು ಅಂತಸ್ತಿನ ಕಟ್ಟಡಗಳು ಬಹಳಷ್ಟು ಬಂದಿವೆ. ಆವತ್ತಿನ ಕಾನೂನಿನಲ್ಲಿ ನಾವು ಕೆಲವು ಶುಲ್ಕವನ್ನು ವಿಧಿಸುವುದಕ್ಕೆ ಮತ್ತು ನೀರನ್ನು ಕಳ್ಳತನ ಮಾಡುವವರಿಗೆ ಜುಲ್ಮಾನೆ ಹಾಕುವುದಕ್ಕೆ ಕಡಿಮೆ ಪ್ರಮಾಣದಲ್ಲಿ ಅಂದರೆ ಒಂದು ದಿವಸಕ್ಕೆ ಐದು ರೂಪಾಯಿ ಎಂದು ಇತ್ತು. ಅದನ್ನು ಹೆಚ್ಚಿಸಬೇಕು, ನೀರನ್ನು ಕದಿಯುವವರಿಗೆ ಶಿಕ್ಷೆಯಾಗಬೇಕು ಮತ್ತು ಇದರಲ್ಲಿ ಶಾಮೀಲಾಗುವ ಅಧಿಕಾರಿಗಳ ಮೇಲೆ ಕೂಡ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ. ಬಹು ಅಂತಸ್ತಿನ ಕಟ್ಟಡಗಳ ಮೇಲೆ pro-rata charges ಹಾಕಲಿಕ್ಕೆ ನಮಗೆ ಅಧಿಕಾರ ಇರಲಿಲ್ಲ. ಅದ್ನನು ನಾವು ಈ ಕಾನೂನಿನ ತಿದ್ದುಪಡಿಯಲ್ಲಿ ತಂದಿದ್ದೇವೆ. ಅದಲ್ಲದೇ, ಯಾರು ಅಕ್ರಮವಾಗಿ ಕಟ್ಟಡಗಳಿಗೆ ನೀರಿನ ಸಂಪರ್ಕ ತೆಗೆದು ಕೊಂಡಿರುತ್ತಾರೆ, ಅವರಿಗೆ sanitary connection cut ಮಾಡುವುದಕ್ಕೆ ಕೂಡ ನಮಗೆ ಅಧಿಕಾರ ಇರಲಿಲ್ಲ. ಅದನ್ನೂ ಕೂಡ ಈ ತಿದ್ದುಪಡಿಯಲ್ಲಿ ತಂದಿದ್ದೇವೆ. ಅದಲ್ಲದೇ, ನೀರಿನ ಕೊಳವೆಗಳ ಮೇಲೆ ಕೆಲವರು ಕಟ್ಟಡಗಳನ್ನು ಕಟ್ಟಿದ್ದಾರೆ. ಅದನ್ನು ನಿಯಂತ್ರಣ ಮಾಡಿ ಕೊಳವೆಗಳ ಪಕ್ಕದಲ್ಲಿ ಒಂದು

ಮೀಟರ್ ಬಿಟ್ಟು ಕಟ್ಟಡವನ್ನು ಕಟ್ಟಬೇಕು ಮತ್ತು ಕೆಳವೆಗಳ ಪಕ್ಕದಲ್ಲಿ ಒಂದು ಮೀಟರ್ ಬಿಟ್ಟು ಕಟ್ಟವನ್ನು ಕಟ್ಟಬೇಕು ಮತ್ತು ಕೆಳವೆಗಳ ಮೇಲೆ ಕಟ್ಟಿರುವ ಕಟ್ಟಡಗಳನ್ನು ಕೂಡಲೇ ತೆಗೆಯಬೇಕು ಎನ್ನುವುದರ ಬಗ್ಗೆ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಅದಲ್ಲದೇ, ಇವತ್ತು ಕೆಲವು ಭಾಗಗಳಲ್ಲಿ ಬೋರ್‌ವೆಲ್ ಮುಖಾಂತರ ನೀರನ್ನು ತೆಗೆದು ಅದನ್ನು tanker ಮೂಲಕ ಅನಧಿಕೃತವಾಗಿ ಸರಬರಾಜು ಮಾಡುತ್ತಿದ್ದಾರೆ. ಅದನ್ನು ನಿಯಂತ್ರಿಸಲು ಈಗ ನಮಗೆ ಅಧೀಕಾರ ಇಲ್ಲ. ನಾವು ಆ ಅಧಿಕಾರವನ್ನು ಪಡದುಕೊಂಡು, ಸ್ವಚ್ಛವಾದ ನೀರನ್ನು ಜನರಿಗೆ ಕೊಡಬೇಕು ಮತ್ತು ಅಂತರ್ಜಲವನ್ನು ಕಾಪಾಡಬೇಕು ಎನ್ನುವ ಉದ್ದೇಶದಿಂದ ಇದನ್ನು ತಂದಿದ್ದೇವೆ. ಮತ್ತು ಮಳೆ ಕೊಯ್ಲು ಪದ್ಧತಿಗೆ ನಾವು ಈಗಾಗಲೇ ಒಂದು ಕಾನೂನನ್ನು ಮಾಡಿದ್ದೇವೆ. ಅದನ್ನೂ ಕೂಡ ಮತ್ತೊಂದು ಸಾರಿ ಇದರಲ್ಲಿ ಸೇರಿಸಿ ಈ ಒಂದು ತಿದ್ದುಪಡಿ ವಿಧೇಯಕವನ್ನು ತಂದಿದ್ದೇವೆ. ಹಿಂದೆ, ಒಬ್ಬರು Chief Engineer-Water Supply, ಮತ್ತೊಬ್ಬರು Chief Engineer-Sanitary ಎಂದು ಇದ್ದರು. ಅದನ್ನು ತಿದ್ದುಪಡಿ ಮಾಡಿ Engineer-in-Chief ಎಂದು ಮಾಡುವುದಕ್ಕೆ ಹಾಗೂ administration ನಲ್ಲಿ ಕೆಲವು reforms ಮಾಡಿಕೊಳ್ಳುವುದಕ್ಕೆ ಈ ತಿದ್ದುಪಡಿಯನ್ನು ತಂದಿದ್ದೇವೆ. ಅನೇಕ ರೀತಿಯಲ್ಲಿ ಅವ್ಯವಸ್ಥೆಗಳು ನಡೆಯುತ್ತಿದ್ದಂಥ ಕಾಲದಲ್ಲಿ ಅದನ್ನು ತಡೆಯಲು ನಮಗೆ ಅಧಿಕಾರ ಇಲ್ಲದೇ ಇದ್ದ ಕಾರಣಕ್ಕಾಗಿ, ಆ ಅಧಿಕಾರಗಳನ್ನು ಪಡೆಯಲು ನಾವು ಆ ಮಾರ್ಪಾಡು ಗಳನ್ನು ತಂದಿದ್ದೇವೆ. ಈ ವಿಧೇಯಕವನ್ನು ಸಭೆ ಪರ್ಯಾಲೋಚಿಸಿ, ಅಂಗೀಕರಿಸಬೇಕು ಎಂದು ನಾನು ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಇದನ್ನು ಇವರೊಬ್ಬರೇ ತಂದರೆ ಆಗುವುದಿಲ್ಲ. Local bodies ಎಲ್ಲವೂ ಸೇರಿ you should come out with a proper master plan on this. Local bodies, Corporations, Municipalities ನಿಮಗೆ co-operation ಕೊಡದಿದ್ದರೆ ಈ ಬಿಲ್‌ಗೆ ಏನೂ ಬೆಲೆ ಇರುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ತಾವು ಹೇಳುವುದು ಸರಿ. B.W.S.S.B. ವ್ಯಾಪ್ತಿಯಲ್ಲಿ. .

ಶ್ರೀ ಡಿ.ಕೆ. ಶಿವಕುಮಾರ್ : ಅವರೊಬ್ಬರಿಗೆ independent power, urban local bodies ಗೆ ಒಂದು power ಎನ್ನುವ ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಹಾಗೆ ಮಾಡುವುದಕ್ಕಾಗುವುದಿಲ್ಲ. B.W.S.S.B. is the sole authority to supply water unlike other places. ಇಲ್ಲಿ ನಮಗೆ ಸಮಸ್ಯೆ ಏನಾಗುತ್ತಿದೆ ಎಂದರೆ, unaccounted water ಮತ್ತು ಸೋರುವಿಕೆ. ಅವರು ಹೇಳಿದ ಹಾಗೆ ಈಗ ನಮ್ಮ ಹತ್ತಿರ ಅಧೀಕಾರ ಇಲ್ಲ. ಬಹಳ ದುರಂತ ಎಂದರೆ, ಬೆಂಗಳೂರು ನಗರದ ನಾಗರೀಕರಿಗೆ ನೀರಿನ ದರ ಗೊತ್ತು, ಆದರೆ ನೀರಿನ ಬೆಲೆ ಗೊತ್ತಿಲ್ಲ. They don't know the value of water. Value of water ಅವರಗೆ ಗೊತ್ತಾಗಬೇಕು ಎಂದರೆ ಸ್ವಲ್ಪವಾದರೂ ಕೂಡ corrot and stick ಎರಡೂ ಇರಬೇಕು. ಒಂದು incentive, ಇನ್ನೊಂದು disincentive. ಅದಕ್ಕೋಸ್ಕರ ಈ ಬಿಲ್ ತಂದಿದ್ದೇವೆ. ಬೇರೆ ಕಡೆಗಳಿಗೂ ಅನ್ವಯವಾಗುವಂತೆ, Karnataka Urban Water Supply ನಲ್ಲೂ ಕೂಡ ಇದೇ ರೀತಿಯ ಬಿಲ್ ತರುವುದಕ್ಕೆ ನಾವು move ಮಾಡುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್ : Regulatory authority ಅಂದರೆ corporations ಇರುವ Powers, Local bodies ಗೆ ಇರುವ powers ಅನ್ನು ಕೂಡ ತೆಗೆದುಕೊಂಡು ನೀವು control ಮಾಡಿದರೆ ಮಾತ್ರ ಸಾಧ್ಯ ಇಲ್ಲದಿದ್ದರೆ ನಿಮ್ಮ BWSSB ಲೆಕ್ಕಕ್ಕೆ ಇಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಶಿವಕುಮಾರ್ ರವರು ಹೇಳಿದ ಹಾಗೆ ಇದು Bangalore Municipal Corporation Act 1949 ಗೆ ಅನುಗುಣವಾಗಿ ನಾವು ಇದೊಂದು ನಮ್ಮ BWSSB Act ಇತ್ತು. ಅದಾದಮೇಲೆ ಅದನ್ನು Corporation Act ಗೆ ಬದಲಾವಣೆ ಮಾಡಿ 1976 Act ಅನ್ನು ತಿದ್ದುಪಡಿ ಮಾಡಿಕೊಂಡಿದ್ದೆವು. ಅದರಂತೆ ಈಗ ಮಾನ್ಯ ಸುರೇಶ್‌ಕುಮಾರ್‌ರವರು ಏನು ಹೇಳಿದ್ದಾರೆ, ತಾವು ಹೇಳಿದ್ದು ಅಕ್ಷರಶಃ ಸರಿ ಇದೆ.

ಶ್ರೀ ಡಿ.ಕೆ. ಶಿವಕುಮಾರ್ : Local bodies, Corporators, MLA ಗಳು interfere ಆಗದಿದ್ದ ಹಾಗೆ ನೀವು separate ಆಗಿ Power ಇಟ್ಟುಕೊಳ್ಳಿ, ಆಗ ಏನಾದರೂ Control ಗೆ ಬರುತ್ತದೆ. ನೀವು ಅಲ್ಲಿ ಅವರಿಗೂ power ಕೊಟ್ಟುಬಿಟ್ಟು ಪುನಃ ನೀವೂ ಮಾಡುತ್ತೇವೆಂದರೆ ನಿಮ್ಮನ್ನು ಯಾರೂ care ಮಾಡುವವರಿರುವುದಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ತಾವು ಹೇಳಿರುವುದು ಸರಿ ಇದೆ. ಇದರ ಜೊತೆಗೆ ಕಾನೂನು ಸಚಿವರು ಈಗ ಹೇಳಿದರು. ಇದರ ಬಗ್ಗೆ ನಾವು ಸಾಕಷ್ಟು ದೀರ್ಘವಾಗಿ ಚರ್ಚೆ ಮಾಡಿದ್ದೇವೆ. ಖಂಡಿತವಾಗಿ ತಾವು ಹೇಳಿದ ಸಲಹೆಯನ್ನು ನಾವು ಅಲ್ಲಿ Municipality Act ಗೂ ಸಹ ತಿದ್ದುಪಡಿ ತರುತ್ತೇವೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಹಾಗೂ ಇತರ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 33ರವರೆಗೆ

ಅಧ್ಯಕ್ಷರು " "ಖಂಡ 2ರಿಂದ 33ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 33ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಯನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಹಾಗೂ ಇತರೆ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಹಾಗೂ ಇತರ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

IV ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರ ಮಹಾನಗರವಾಗಿ ಬೆಳೆಯುತ್ತಿರುವಂಥ ಸಂದರ್ಭದಲ್ಲಿ ಇಂದಿರಾ ಗಾಂಧಿ ಸಂಗೀತ ಕಾರಂಜಿ ಉದ್ಯಾನವನದಲ್ಲಿ 1223 ಚದರ ಮೀಟರುಗಳ ರಸ್ತೆಗಳ ಅಗಲೀಕರಣದ ಉದ್ದೇಶಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ, ಮತ್ತು ಲಾಲ್‌ಬಾಗ್ ಉದ್ಯಾನವನದ ಪಶ್ಚಿಮ ದ್ವಾರದ, ಪಶ್ಚಿಮ ಭಾಗದ ಕಡೆಗಿನ (ಪ್ರಸ್ತುತ ಆರ್.ವಿ. ರಸ್ತೆ ಎಂದು ಕರೆಯಲಾಗುತ್ತಿರುವ) ಕಾಂಪೌಂಡು ಗೋಡೆಯ ಉದ್ದಕ್ಕೂ 1135.18 ಚದರ ಮೀಟರುಗಳನ್ನು ಬೆಂಗಳೂರು ಮೆಟ್ರೋ ರೈಲು ಕಾರ್ಪೊರೇಷನ್ ಲಿಮಿಟೆಡ್‌ಗೆ ಬೆಂಗಳೂರಿನ ಮೆಟ್ರೊ ರೈಲು ಯೋಜನೆಯಲ್ಲಿ ಮೇಲು ನಿಲ್ದಾಣವನ್ನು ನಿರ್ಮಿಸುವ ಉದ್ದೇಶಕ್ಕಾಗಿ ತಿದ್ದುಪಡಿಯನ್ನು ತರುತ್ತಿದ್ದೇವೆ. ಮಾನ್ಯ ಸಭೆಯು ಇದನ್ನು ಅನುಮೋದಿಸಬೇಕೆಂದು ತಮ್ಮ ಮುಖೇನ ಮಾನ್ಯ ಸದಸ್ಯರಲ್ಲಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ನೇ ಸಾಲಿನ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು : ಖಂಡ 1 ಮತ್ತು 2ಕ್ಕೆ ಮಾನ್ಯ ತೋಟಗಾರಿಕಾ ಸಚಿವರು ತಿದ್ದುಪಡಿಯನ್ನು ಸೂಚಿಸಿದ್ದಾರೆ. ಅವರು ತಿದ್ದುಪಡಿಯನ್ನು ಮಂಡಿಸಬೇಕು.

ಖಂಡ 1 ಮತ್ತು 2ಕ್ಕೆ ತಿದ್ದುಪಡಿ:

ಶ್ರೀ ಉಮೇಶ್ ವಿ. ಕತ್ತಿ (ತೋಟಗರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಸದರಿ ವಿಧೇಯಕದ 1ನೇ ಖಂಡದಲ್ಲಿ 2ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"5ನೇ ಪ್ರಕರಣದಲ್ಲಿ, ಸೇರಿಸಲು ಉದ್ದೇಶಿಸಿರುವ (ಸಿ) ಮತ್ತು (ಡಿ) ಖಂಡಗಳನ್ನು ಹೊರತುಪಡಿಸಿ 2ನೇ ಮತ್ತು 3ನೇ ಖಂಡಗಳು 2008ರ ನವೆಂಬರ್ 22ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಮತ್ತು 5ನೇ ಪ್ರಕರಣದ (ಸಿ) ಮತ್ತು (ಡಿ) ಖಂಡಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು"

ಹಾಗೂ

ಸದರಿ ವಿಧೇಯಕ 2ನೇ ಖಂಡದಲ್ಲಿ (ಸೇರಿಸಲು ಉದ್ದೇಶಿಸಿರುವ 5ನೇ ಪ್ರಕರಣದಲ್ಲಿ) (ಬಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಸಿ) ವಿಧಾನಸೌಧ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ಮಧ್ಯದಲ್ಲಿರುವ ಪೂರ್ವಕ್ಕೆ ಸರ್ವೆ ನಂ.1284ರ ಉದ್ಯಾನವನದ ಪ್ರದೇಶ ಪಶ್ಚಿಮಕ್ಕೆ ಸರ್ವೆ ನಂ. 570: ಉತ್ತರಕ್ಕೆ ನರ್ಸರಿಗೆ ಸಂಪರ್ಕ ಕಲ್ಪಿಸುವ ಸರ್ವೆ ನಂ. 1284ರ ಉದ್ಯಾನವನದ ಪ್ರದೇಶ ಮತ್ತು ದಕ್ಷಿಣಕ್ಕೆ ಉಚ್ಚ ನ್ಯಾಯಾಲಯದ ಮುಂಭಾಗದಲ್ಲಿರುವ ಉದ್ಯಾನವನದ ಪ್ರದೇಶ, ಈ ಮಧ್ಯದಲ್ಲಿರುವ ಕಬ್ಬನ್ ಉದ್ಯಾನವನದ 2126.71 ಚದರ ಮೀಟರ್‌ಗಳ ಪ್ರದೇಶ;

(ಡಿ) ಪೂರ್ವಕ್ಕೆ ಸರ್ವೆ ನಂ.1284 ರಲ್ಲಿರುವ ಕರ್ನಾಟಕ ಉಚ್ಚ ನ್ಯಾಯಾಲಯ; ಪಶ್ಚಿಮಕ್ಕೆ ಸರ್ವೆ ನಂ. 1284ರಲ್ಲಿರುವ ವಿಧಾನಸೌಧ ಮತ್ತು ಹೈಕೋರ್ಟ್‌ನ ಮಧ್ಯದಲ್ಲಿರುವ ಕಬ್ಬನ್ ಉದ್ಯಾನವನದ ಪ್ರದೇಶ; ಉತ್ತರಕ್ಕೆ ಪ್ರಧಾನ ಅಂಚೆ ಕಛೇರಿ ಮತ್ತು ದಕ್ಷಿಣಕ್ಕೆ ಸರ್ವೆ ನಂ. 1284ರಲ್ಲಿಯ ಕಬ್ಬನ್ ಉದ್ಯಾನವನದ ಪ್ರದೇಶ ಈ ಮಧ್ಯದಲ್ಲಿರುವ ಕಬ್ಬನ್ ಉದ್ಯಾನವನದ 11,160 ಚದರ ಮೀಟರ್‌ಗಳ ಪ್ರದೇಶ."

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಸದರಿ ವಿಧೇಯಕದ 1ನೇ ಖಂಡದಲ್ಲಿ 2ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"5ನೇ ಪ್ರಕರಣದಲ್ಲಿ, ಸೇರಿಸಲು ಉದ್ದೇಶಿಸಿರುವ (ಸಿ) ಮತ್ತು (ಡಿ) ಖಂಡಗಳನ್ನು ಹೊರತುಪಡಿಸಿ 2ನೇ ಮತ್ತು 3ನೇ ಖಂಡಗಳು 2008ರ ನವೆಂಬರ್ 22ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಮತ್ತು 5ನೇ ಪ್ರಕರಣದ (ಸಿ) ಮತ್ತು (ಡಿ) ಖಂಡಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು"

ಹಾಗೂ

ಸದರಿ ವಿಧೇಯಕ 2ನೇ ಖಂಡದಲ್ಲಿ (ಸೇರಿಸಲು ಉದ್ದೇಶಿಸಿರುವ 5ನೇ ಪ್ರಕರಣದಲ್ಲಿ) (ಬಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಸಿ) ವಿಧಾನಸೌಧ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ಮಧ್ಯದಲ್ಲಿರುವ ಪೂರ್ವಕ್ಕೆ ಸರ್ವೆ ನಂ. 1284ರ ಉದ್ಯಾನವನದ ಪ್ರದೇಶ ಪಶ್ಚಿಮಕ್ಕೆ ಸರ್ವೆ ನಂ.570: ಉತ್ತರಕ್ಕೆ ನರ್ಸರಿಗೆ ಸಂಪರ್ಕ ಕಲ್ಪಿಸುವ ಸರ್ವೆ ನಂ. 1284ರ ಉದ್ಯಾನವನದ ಪ್ರದೇಶ ಮತ್ತು ದಕ್ಷಿಣಕ್ಕೆ ಉಚ್ಚ ನ್ಯಾಯಾಲಯದ ಮುಂಭಾಗದಲ್ಲಿರುವ ಉದ್ಯಾನವನದ ಪ್ರದೇಶ, ಈ ಮಧ್ಯದಲ್ಲಿರುವ ಕಬ್ಬನ್ ಉದ್ಯಾನವನದ 2126.71 ಚದರ ಮೀಟರ್‌ಗಳ ಪ್ರದೇಶ;

(ಡಿ) ಪೂರ್ವಕ್ಕೆ ಸರ್ವೆ ನಂ.1284 ರಲ್ಲಿರುವ ಕರ್ನಾಟಕ ಉಚ್ಚ ನ್ಯಾಯಾಲಯ; ಪಶ್ಚಿಮಕ್ಕೆ ಸರ್ವೆ ನಂ. 1284 ರಲ್ಲಿರುವ ವಿಧಾನಸೌಧ ಮತ್ತು ಹೈಕೋರ್ಟ್‌ನ ಮಧ್ಯದಲ್ಲಿರುವ ಕಬ್ಬನ್ ಉದ್ಯಾನವನದ ಪ್ರದೇಶ; ಉತ್ತರಕ್ಕೆ ಪ್ರಧಾನ ಅಂಚೆ ಕಛೇರಿ ಮತ್ತು ದಕ್ಷಿಣಕ್ಕೆ ಸರ್ವೆ ನಂ. 1284ರಲ್ಲಿಯ ಕಬ್ಬನ್ ಉದ್ಯಾನವನದ ಪ್ರದೇಶ ಈ ಮಧ್ಯದಲ್ಲಿರುವ ಕಬ್ಬನ್ ಉದ್ಯಾನವನದ 11,160 ಚದರ ಮೀಟರ್‌ಗಳ ಪ್ರದೇಶ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 :

ಅಧ್ಯಕ್ಷರು : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟಿತು

(ತಿದ್ದುಪಡಿಯಾದ 2ನೇ ಖಂಡವು ವಿಧೇಯಕದ ಅಂಗವಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ತಿದ್ದುಪಡಿಯಾದ ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ತಿದ್ದುಪಡಿಯಾದ ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸ ಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2009ನೇ ಸಾಲಿನ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದುಪಡಿ) ವಿಧೇಯಕವನ್ನು ತಿದ್ದುಪಡಿಯೊಂದಿಗೆ ಅಂಗೀಕ ರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

V. ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂಪಿ.ರೇಣುಕಾರ್ಯ (ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಅಬಕಾರಿ ಅಧಿನಿಯಮ 1965ರ ಕಲಂ 67ರ ವ್ಯಾಪ್ತಿಯಲ್ಲಿ ರಾಜ್ಯ ಸರ್ಕಾರದ ಕೆಲವು ಪ್ರವರ್ಗಗಳಿವೆ ಅಂದರೆ, ಸೇನಾ ಬಲ, ವೈದ್ಯಕೀಯ

ಹಾಗೂ ವೈಜ್ಞಾನಿಕ ಉಪಯೋಗಕ್ಕಾಗಿ ಮಾರಾಟ ಮಾಡಲಾಗುವ ಮದ್ಯದ ಮೇಲಿನ ಅಬಕಾರಿ ಸುಂಕವನ್ನು ಉತ್ತರಾನ್ವಯವಾಗಿ ಅಥವಾ ಪೂರ್ವಾನ್ವಯವಾಗಿ ವಿನಾಯಿತಿ ಕೊಡುವುದಕ್ಕೆ ಅಥವಾ ಕಡಿಮೆ ಮಾಡುವುದಕ್ಕೆ ಅಧಿಕಾರ ನೀಡಲಾಗಿದೆ. ಭಾರತ ಸರ್ಕಾರದ ವಿದೇಶಾಂಗ ಮಂತ್ರಾಲಯದ ಮಾರ್ಗಸೂಚಿಯನ್ವಯ ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಜರ್ಮನಿ, ಜಪಾನ್, ಫ್ರಾನ್ಸ್ ದೇಶಗಳ ರಾಜತಾಂತ್ರಿಕ ಕೇರಿಗಳು, ಬ್ರಿಟನ್ ಮತ್ತು Switzerland ದೇಶಗಳ Deputy Commissioner ಗಳ ಕಛೇರಿಗಳು, Ireland, Maldives, Finland and Spain ದೇಶಗಳ ವಾಣಿಜ್ಯ ದೂತ ಕಛೇರಿಗಳೂ, ರಾಜತಾಂತ್ರಿಕ ಕಛೇರಿಗಳು ಸ್ಥಾಪಿತಗೊಂಡು ಕಳೆದ ಒಂದು ವರ್ಷದಿಂದ ಕಾರ್ಯನಿರ್ವಹಿಸುತ್ತಿವೆ. ಈ ರಾಜತಾಂತ್ರಿಕ ಪ್ರತಿನಿಧಿಗಳ ಕಛೇರಿಗಳ ಉಪಯೋಗಕ್ಕಾಗಿ ಮದ್ಯದ ಮೇಲೆ ಅಬಕಾರಿ ಸುಂಕ ವಿಧಿಸುವುದರಿಂದ ವಿನಾಯಿತಿ ನೀಡುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಪ್ರಸ್ತಾಪಿಸಿರುತ್ತದೆ. ಸದರಿ ವಿದೇಶಿ ವಾಣಿಜ್ಯ ದೂತ ಪ್ರತಿನಿಧಿಗಳ ಸದ್ಬಳಕೆಗಾಗಿ ಮಾರಾಟವಾಗುವ ಮದ್ಯದ ಮೇಲೆ ಅಬಕಾರಿ ಸುಂಕಕ್ಕೆ ವಿನಾಯಿತಿ ನೀಡುವುದು ಅಥವಾ ಕಡಿಮೆ ಮಾಡುವುದು ಸರ್ಕಾರದ ಗೌರವದ ಸಂಕೇತವಾಗಿರುತ್ತದೆ. ಭಾರತ ಮತ್ತು ಇತರ ದೇಶಗಳ ನಡುವಿನ ಸಂಬಂಧ ಸುಧಾರಿಸುವ ನಿಟ್ಟಿನಲ್ಲಿ ಉತ್ತಮವೆಂಬುದು ನನ್ನ ಅಭಿಪ್ರಾಯ. ಪ್ರಸ್ತುತ ಸೇನಾ ಬಲಗಳಿಗೆ ಸಶಸ್ತ್ರ ಪಡೆಗಳಿಗೆ ಸರಬರಾಜು ಮಾಡುವ ಮದ್ಯಕೆ ವಿಧಿಸುವ ಅಬಕಾರಿ ಸುಂಕದ ದರದಲ್ಲಿ ವಾಣಿಜ್ಯ ದೂತ ಹಾಗೂ ರಾಜತಾಂತ್ರಿಕ ಪ್ರತಿನಿಧಿಗಳಿಗೆ ವಿಸ್ತರಿಸುವ ಸಂಬಂಧ ಕರ್ನಾಟಕ ಅಬಕಾರಿ ಅಧಿನಿಯಮ, 1965ರ 67(1)(i) ನೇ ಪ್ರಕರಣದ ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

(12-40 PM)

ಈ ವಿಧೇಯಕದಿಂದ ವಾರ್ಷಿಕ ರೂ.48,33,000 ರಾಜಸ್ವದ ಕೊರತೆ ಉಂಟಾದರೂ ರಾಜ ತಾಂತ್ರಿಕ ಸಂಬಂಧವನ್ನು ಬಲಪಡಿಸುವ ದೃಷ್ಟಿಯಿಂದ ಈ ವಿಧೇಯಕ ಅಗತ್ಯವೆಂದು ಭಾವಿಸಿ ಮಂಡಿಸಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ಈ ಬಿಲ್ ತಂದಿರುವುದು ನೋಡಿದರೆ, ನಮ್ಮ ದೇಶದ drinks ಅನ್ನು Consulate ನವರೂ ಕುಡಿಯುತ್ತಾರೆಂದು ರೇಣುಕಾಚಾರ್ಯರವರಿಗೆ ಖುಷಿ. IMFL ಅನ್ನು Consulate ನವರೂ

ಕುಡಿಯುತ್ತಾರೆಂದು ಅವರಿಗೆ ಖುಷಿ. Exempt or reduce either prospectively or restrospectively ಅದರರ್ಥವೇನು? Prospectively ಎನ್ನುವುದಾದರೆ ಒಪ್ಪಿಕೊಳ್ಳುತ್ತೇನೆ. Retrospectively ಎಂದರೆ ನೀವು ಯಾರಿಗೋ ಸಹಾಯ ಮಾಡುವುದಕ್ಕಿರಬೇಕು. ಇದು ಮಾತ್ರ ಒಪ್ಪುವುದಕ್ಕಾಗುವುದಿಲ್ಲ. It should be prospectively only ಯಾರಿಗೋ Supply ಮಾಡುವುದಕ್ಕೆ, ಏನೋ ಮಾಡಿಕೊಂಡಿರುತ್ತಾರೆ. ಅದಕ್ಕೋಸ್ಕರ ಈ ಬಿಲ್ ತಂದಿರುತ್ತಾರೆ. ದಯಮಾಡಿ, Prospective ಇರಲಿ retrospective ಬೇಡ. ನೀವು ಹಿಂದೆಲ್ಲ ಮಾಡಿದ್ದನ್ನು ವಸೂಲಿ ಮಾಡಿ. ಇದೆಲ್ಲ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಜಯಚಂದ್ರರವರು ಹೇಳಿದ್ದನ್ನು ಸಂಪೂರ್ಣ ಒಪ್ಪಿಕೊಳ್ಳುತ್ತೇವೆ. Only it will come to effect prospectively.

ಶ್ರೀ ಬಿ.ಸಿ. ಪಾಟೀಲ್ : ರಾಜ ತಾಂತ್ರಿಕರು ಎಂದರೆ ಯಾರೆಂಬುದನ್ನು explain ಮಾಡಬೇಕು.

ಅಧ್ಯಕ್ಷರು : ಅದನ್ನು correction ಮಾಡಿ ಒಪ್ಪುತ್ತಾರೆ.

ಶ್ರೀ ಟಿ.ಬಿ.ಜಯಚಂದ್ರ : ಏನು correction ಮಾಡುತ್ತೀರಿ, ಅದನ್ನು ಇಲ್ಲಿ move ಮಾಡಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ : ನೀವು ಎಲ್ಲವನ್ನೂ ಇಲ್ಲಿ ಒಪ್ಪಿಕೊಂಡ ಮೇಲೆ ಅದನ್ನು amendment ಮಾಡದಿದ್ದರೆ ಕಷ್ಟ. Amendment move ಮಾಡಿ ಆಮೇಲೆ ಬಿಲ್ ತಂದರೆ ಒಪ್ಪಬಹುದು. Move ಮಾಡದೆ ಅದು ಹಾಗೆಯೇ ಉಳಿದರೆ ಹೇಗೆ?

ಶ್ರೀ ಎಸ್. ಸುರೇಶ್ ಕುಮಾರ್ : ನಮ್ಮ ತಿದ್ದುಪಡಿಯಲ್ಲಿ ಎಲ್ಲಿಯೂ ಕೂಡ retrospectively ಎಂದಿಲ್ಲ. Objection and reasons ನಲ್ಲಿ ಮಾತ್ರ ಹಾಕಲಾಗಿದೆ. I assure you, it will be effective prospectively.

ಶ್ರೀ ಟಿ.ಬಿ. ಜಯಚಂದ್ರ : ಒಂದು ಸಾರಿ ಇಲ್ಲಿ ಪಾಸ್ ಆದಮೇಲೆ ಅದನ್ನು ಹಾಗೆಯೇ ಬಿಟ್ಟಿರುವುದು ಈ ಸದನದಲ್ಲಿ ನಿದರ್ಶನ ಇಲ್ಲವೇ?

ನೀವು ಚರ್ಚೆ ಮಾಡುವುದೇ ಒಂದು, assurance ಕೊಡುವುದೇ ಒಂದು, ರಾಜ್ಯಪಾಲರಿಗೆ ಕಳುಹಿಸುವುದೇ ಮತ್ತೊಂದು.

ಶ್ರೀ ಎಸ್. ಸುರೇಶ್ ಕುಮಾರ್ : ನೀವು ಸಲಹೆ ಕೊಟ್ಟಿದ್ದೀರಿ. ಆ ತಿದ್ದುಪಡಿಯೊಂದಿಗೇ ಇದು Councilಗೆ ಹೋಗುತ್ತದೆ. No retrospective, only Prospective.

ಶ್ರೀ ಸಿದ್ದರಾಮಯ್ಯ : ನಂಬಬಹುದೇ? ನನ್ನದೊಂದು ಸಲಹೆ ಏನೆಂದರೆ, what is the cause of action to bring this amendment? Why it is required? Givernment of India ಗೇನಾದರೂ ಬರೆದಿದ್ದೀರಾ? ಅಥವಾ ಆ ದೇಶದವರೆಲ್ಲಾ ಬರೆದಿದ್ದಾರೆಯೇ? Embassy ಯವರು ಬರೆದಿದ್ದರೆ ಅದರ ಕಾಪಿ ಕೊಡಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಾರ್ತಾ, ಪ್ರಚಾರ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) : ಅನೇಕ ಬೇರೆ ಬೇರೆ ದೇಶಗಳಿಂದ ಬಂದಿರುವಂಥ ambassadors, ಕೆಲವು Officers ರಿಂದ request ಬಂದಿದೆ. Their Privilege and they have requested. ಈಗ ರಾಜತಾಂತ್ರಿಕ ಎಂದೇನು ಹೇಳಿದ್ದೇವೆ, embassy offices ಇವೆ.

ಶ್ರೀ ಸಿದ್ದರಾಮಯ್ಯ : ಇವತ್ತಿನವರೆಗೆ ಅವರಿಗೆ ಹೊಸದಾಗಿ ಏನೂ Privileges ಬಂದಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಅವರು ಹೊಸದಾಗಿ request ಮಾಡಿಕೊಂಡಿದ್ದಾರೆ. It is a privilege and request has been made.

ಡಾ: ವಿ.ಎಸ್. ಆಚಾರ್ಯ : Privilege ಎನ್ನುವುದು ಬಿಟ್ಟುಹೋಗಿತ್ತು.

ಶ್ರೀ ಸಿದ್ದರಾಮಯ್ಯ : Excise Act ನಿನ್ನೆ ಮೊನ್ನೆ ಬಂದದ್ದಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಕರ್ನಾಟಕದಲ್ಲಿ ಅವರು ಯಾರೂ ಕೇಳಿಲ್ಲ. ಈಗ ಹೊಸದಾಗಿ ಆ consulate ಕಛೇರಿಯಲ್ಲಿ ಬೇರೆ ಬೇರೆ ಕಡೆ ತೆರೆದಿದ್ದಾರೆ. ಬೇರೆ ಬೇರೆ ವಿಚಾರದಲ್ಲಿ ಅವರೂ ಕೂಡ ಭೇಟಿ ಮಾಡುತ್ತಾರೆ. ಆ Consulates ನಲ್ಲಿರುವ, embassy ಯಿಂದ ಬಂದಂಥವರಿಗೆ ವಿನಾಯಿತಿಯಷ್ಟೆ.

Dr. V.S. ACHARYA : Cause of action has come before the establishment of this consulate.

Sri S. Suresh Kumar : Now, before the establishment of the consulate.

Sri Katta Subrahmanya Naidu : Because of their request also.

ಶ್ರೀ ಎಂ.ಪಿ. ರೇಣುಕಾಚಾರ್ಯ : ಈ ಬಗ್ಗೆ ಕೇಂದ್ರ ಸರ್ಕಾರದ ಸೂಚನೆ ಇದೆ.

ಶ್ರೀ ಸಿದ್ದರಾಮಯ್ಯ : It there any request?

ಶ್ರೀ ಎಂ.ಪಿ. ರೇಣುಕಾಚಾರ್ಯ : ಇದೆ.

ಶ್ರೀ ಸಿದ್ದರಾಮಯ್ಯ : ಅದನ್ನು ನಮಗೆ ತೋರಿಸಿ.

ಶ್ರೀ ಎಸ್. ಸುರೇಶ್ ಕುಮಾರ್ : Request ಇಲ್ಲದೆ ಮಾಡುವುದಕ್ಕೆ ನಮಗೇನು ಲಾಭವಿದೆ?

ಶ್ರೀ ಸಿದ್ದರಾಮಯ್ಯ : ನಿಮ್ಮ ಹತ್ತಿರ ಇಲ್ಲದಿರಬಹುದು, ಸಂಬಂಧಪಟ್ಟ ಮಂತ್ರಿಯವರ ಹತ್ತಿರ ಅವೆಲ್ಲ ಇರಲೇಬೇಕಲ್ಲವೇ?

ಶ್ರೀ ಎಂ.ಪಿ. ರೇಣುಕಾಚಾರ್ಯ : ನಂತರ ತಮಗೆ ಕಳುಹಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಅದನ್ನು ನೀವು ನೋಡಿದ್ದೀರೋ, ಅವರು ನೋಡಿದ್ದಾರೋ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಾನು ಮಂತ್ರಿಯಾಗಿದ್ದಾಗಲೇ ನೋಡಿದ್ದೇನೆ.

ಶ್ರೀ ಬಿ.ಸಿ. ಪಾಟೀಲ್ : ಅರೆ ಸೈನಿಕ (Para military) ಯವರಿಗೆಲ್ಲ ವಿನಾಯಿತಿ ಕೊಟ್ಟಿದ್ದೀರಿ. ಆ ತರಹ ಪೊಲೀಸ್ ನವರೂ ಕೂಡ 24 ಗಂಟೆ ಕೆಲಸ ಮಾಡುತ್ತಾರೆ. ಪೊಲೀಸ್ ಇಲಾಖೆಗೂ ಕೂಡ ತೆರಿಗೆ ವಿನಾಯಿತಿ ಕೊಟ್ಟು ಅನುಕೂಲ ಮಾಡಿಕೊಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಮಾಜಿ ಪೋಲೀಸ್‌ನವರ ಪರವಾಗಿ ನೀವೊಂದು Proposal ಕೊಡಿ.

ಅಧ್ಯಕ್ಷರು : ನೀವು Proposal ಕಳುಹಿಸಿಕೊಡಿ.

ಶ್ರೀ ಸಿ.ಟಿ. ರವಿ : ಅವರಿಗೆ ಎಲ್ಲವೂ seconds supply ಆಗುವುದರಿಂದ ಎಲ್ಲದಕ್ಕೂ ಪೂರ್ಣ ತೆರಿಗೆ ವಿನಾಯಿತಿ ಬಂದಿರುತ್ತದೆ. ಹಾಗಾಗಿ, ಮತ್ತೇಕೆ ಕಾಳಜಿ?

ಅಧ್ಯಕ್ಷರು : ಅವರು retired ಆದವರಿಗೆ ಕೇಳುತ್ತಿದ್ದಾರೆ. ನೀವು proposal ಕೊಡಿ.

ಶ್ರೀ ಸುನೀಲ್ ವಲ್ಲ್ಯಾಪುರೆ : ರವಿಯವರು seconds ಇದೆ ಎಂದು ಹೇಳುತ್ತಿದ್ದಾರೆ. ಆದುದರಿಂದ, ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಪಾಟೀಲ್‌ರವರೆ, ನೀವು Proposal ಕಳುಹಿಸಿಕೊಡಿ.

ಶ್ರೀ ಬಿ.ಸಿ. ಪಾಟೀಲ್ : ರಾಜತಾಂತ್ರಿಕ ಪ್ರತಿನಿಧಿಗಳೆಂದರೆ ಯಾರಾರು ಎನ್ನುವುದನ್ನು ಹೇಳಬೇಕು.

ಅಧ್ಯಕ್ಷರು : ಹೇಳಿದ್ದಾರೆ. It is very clear in the bill.

ಶ್ರೀ ಬಿ.ಸಿ. ಪಾಟೀಲ್ : MLAS, MPs. Ministers are included ಕೇವಲ ಅವರ ದೇಶದವರಿಗೇ ಏಕೆ ಮಾಡುತ್ತೀರಿ?

ಶ್ರೀ ಎಂ.ಪಿ. ರೇಣುಕಾಚಾರ್ಯ : ಅವರಿಂದ request ಬಂದಿದೆ. ನೀವು request ಮಾಡಿ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ:

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಯನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

VI ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕ, 2010

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2010ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 1987ರಲ್ಲಿ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ ಪಕ್ಷಾಂತರ ನಿಷೇಧ ಅಧಿನಿಯಮ ಎಂದು ಒಂದು Act ಇತ್ತು. ಅದರಲ್ಲಿ Divisionla Commissioners ಗೆ appeal hear ಮಾಡುವ Power ಇತ್ತು. ತಮಗೆ ಗೊತ್ತಿರುವ ಹಾಗೆ, ಈಗ Divisional Commissioner ಜಾಗಕ್ಕೆ Regional Commissioner ಬಂದಿದ್ದಾರೆ.

Divisional Commissioners ಬದಲು Regional Commissioners ಎಂದು nomenclature change ಮಾಡಬೇಕು. ಇದು ಮಾಡುವುದಕ್ಕಾಗದೇ ಇರುವುದರಿಂದ ಅನೇಕ ಸಂಗತಿಗಳು Pending ಇವೆ. High Court ಕೂಡ first ಇದನ್ನು amendment ಮಾಡಿ ಎಂದು direction ಕೊಟ್ಟಿದೆ. Instead of Divisional Commissioners, mention the name of Regional Commissioners. ಅದಕ್ಕಾಗಿ ಈ ಒಂದು very minor amendment ತಂದಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನೀವು ಈ ಪಕ್ಷಾಂತರ ನಿಷೇದ ಕಾಯಿದೆಯಡಿಯಲ್ಲಿ ಎಷ್ಟು ಕೇಸ್ ರಾಜ್ಯದಲ್ಲಿ ಇವೆ ಎನ್ನುವುದರ ಬಗ್ಗೆ ನೀವು ಸ್ವಲ್ಪ ವಿಮರ್ಶೆ ಮಾಡಬೇಕಾಗುತ್ತದೆ.

ಡಾ: ವಿ.ಎಸ್.ಆಚಾರ್ಯ : ಅದು ಕೇವಲ ಪಾರಿಭಾಷಿಕ ಶಬ್ದ ಮಾತ್ರ ಬದಲಾವಣೆ ಆಗಿದೆ.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ನೀವು ಹೇಳುತ್ತಿರುವುದು Prospective or retrospective?

ಶ್ರೀ ಟಿ.ಬಿ. ಜಯಚಂದ್ರ : ಇಲ್ಲ ಕೇಳಿ retrospective.

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : O.K.

ಶ್ರೀ ಟಿ.ಬಿ. ಜಯಚಂದ್ರ : ಏನಾಗಿದೆ ಎಂದರೆ, ನೀವು appeal powers ಅನ್ನು Divisional Commssioners ಬದಲು Regional

O.32 F-17

Commissioners ಗೆ ಕೊಟ್ಟಿದ್ದೀರಿ. ಅದನ್ನು ನಾವು ಒಪ್ಪುತ್ತೇವೆ. ಆದರೆ, ಉದಾಹರಣೆಗೆ Deputy Commissioners, ಈಗ ಈ ವಿಚಾರದಲ್ಲಿ appeal ನ್ನು ಯಾರು hear ಮಾಡುತ್ತಿರುವುದು? Deputy Commissioners ನಿಂದ ಮುಂದಕ್ಕೆ ಹೋಗುತ್ತದೆ. ದಯಮಾಡಿ ನೀವು powersನ್ನು ಯಾರಿಗೆ ಕೊಬೇಕೆಂದರೆ, Assitant Commissionersಗೆ ಕೊಡಬೇಕು. section 4 ಮೂಲ section ನಲ್ಲಿ ಏನು ಇದೆ ಎನ್ನುವುದು ಗೊತ್ತಿಲ್ಲ. Anti defection law ಏನಾದರೂ anti defection ಆಯಿತು ಎಂದರೆ 2 ವರ್ಷಗಳಾದೂ ಇದು ಇತ್ಯರ್ಥವಾಗುವುದಿಲ್ಲ. at least ಏನಾದರೂ ಮಾಡಿ ಇದು 15 days ನಲ್ಲಿ ಆಗಬೇಕು. ಈಗ cross voting ಮಾಡಿರುತ್ತಾನೆ. ಈ ಬಗ್ಗೆ records ಇರುತ್ತದೆ. ಅದಕ್ಯಾಕೆ Prove ಮಾಡಬೇಕು? ದಯಮಾಡಿ ನೀವು ಯಾವುದೇ ರೀತಿಯಲ್ಲಾದರೂ ಇದಕ್ಕೊಂದು ಶಿಸ್ತು ಬರಬೇಕು. cross voting ಆಗುವುದನ್ನು avoid ಮಾಡಬೇಕಾದರೆ ನೀವು ಇದನ್ನೆಲ್ಲಾ ತರಬೇಕಾಗುತ್ತದೆ. cross voting ಆಗಿದ್ದು record ಆಗಿರುತ್ತದೆ ಅಲ್ಲವೆ? Immediate 15 days ನಲ್ಲಿ ಮಾಡುವ ರೀತಿಯಲ್ಲಿ ಬಂದರೆ ಅದಕ್ಕೆ ಒಂದು ಶಿಸ್ತು ಬಂದ ಹಾಗೆ ಆಗುತ್ತದೆ. ಇಲ್ಲಾಂದ್ರೆ ಶಿಸ್ತು ಇಲ್ಲ, ಎಂತದೂ ಇಲ್ಲ. ಬರಿ ಬೆಳಗ್ಗೆ ಎದ್ದು Court ಗೆ ಅಲೆಯುವುದಾಗುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್ : ಈ defection ವಿಚಾರ ಏನು ಇದೆ ಇದಕ್ಕೆ ನೀವು ಒಂದು time bond programme ಈ Regional Commissioners ಗಳಿಗೆ ಇಂಥ ಕೇಸ್‌ನ್ನು ಇಷ್ಟು ದಿವಸಗಳಿಗೆ ತೀರ್ಮಾನಿಸಬೇಕು ಎನ್ನುವ proposal ತೆಗೆದುಕೊಂಡು ಬನ್ನಿ. ತಾವು ಇದರ ಬಗ್ಗೆ ಹೇಳುವಾಗ ಒಂದು ವಿಚಾರ ನಮಗೆ clarify ಮಾಡಬೇಕು. ಎಷ್ಟು ಜನ cmc ಯಲ್ಲಿ cross vote ಮಾಡುವುದಕ್ಕೆ ಅವಕಾಶವಿದೆ? ಅವನ membership ಉಳಿಸಿಕೊಳ್ಳಬೇಕಾದರೆ, if you can enlighten me, corporations, CMCS ನಲ್ಲಿ 50% 33% ಈ ಬಗ್ಗೆ ಹೇಳಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಈ ಬಗ್ಗೆ ಬೇಕಾದರೆ ಇನ್ನೊಂದು ಸಲ ಹೇಳುತ್ತೇನೆ. ದಯವಿಟ್ಟು ಇದು ಸಣ್ಣ ತಿದ್ದುಪಡಿಯಾಗಿರುವುದರಿಂದ ಇದನ್ನು ಪಾಸ್ ಮಾಡಿಕೊಡಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ನೀವು ಒಂದು amendment ತಂದಿದ್ದೀರಿ. Amendment ತರದೆ ಹೋಗಿದ್ದರೆ ಇವರ ಹೇಳುವ ವಿಚಾರಗಳೆಲ್ಲಾ ಪ್ರಸ್ತಾಪಿಸುವ ಅಗತ್ಯವಿರಲಿಲ್ಲ. ಉದಾಹರಣೆಗೆ ಹೇಳುತ್ತೇನೆ. ಹೂಣಸೂರು ವಿಚಾರದಲ್ಲಿ ಸುಮಾರು ಎರಡೂವರೆಗಳ ವರ್ಷಗಳಿಂದ pending ಇದೆ. ಇವರಗೆ ಏಕೆ ಅಧಿಕಾರ ಕೊಡಬೇಕು? ಅಧಿಕಾರ ಏಕೆ ಕೊಡುತ್ತೀರಿ? ಅದಕ್ಕೆ ಏನಾದರೊಂದು Summary proceedings ಮಾಡಿ disposal ಮಾಡುವುದಕ್ಕೆ ಆರು ತಿಂಗಳೊ ವರ್ಷವೋ ಮೂರು ತಿಂಗಳೊ ಮಾಡಿ. ಆರು ತಿಂಗಳಲ್ಲಿ ಮಾಡಿ.

ಶ್ರೀ ಡಿ.ಕೆ. ಶಿವಕುಮಾರ್ : ನಮ್ಮ Assembly Speaker ಮಾಡಿದಿರಲ್ಲಾ... ತೆಗೆದುಕೊಳ್ಳಲಿಲ್ಲ.

ಶ್ರೀ ಸಿದ್ದರಾಮಯ್ಯ : ಮೂರು ತಿಂಗಳು ಆರು ತಿಂಗಳು ಮಾಡುವುದರಿಂದ purpose is going to be served. Otherwise no purpose is going to be served. ಮಾಡಿರುವ ಉಪಯೋಗ ಏನು?

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಜಯಚಂದ್ರರವರು ಹೇಳಿದಂತೆ ಮೊದಲು ಶಿಸ್ತನ್ನು ತರೋಣ. ವ್ಯವಸ್ಥೆಯಲ್ಲಿ ಶಿಸ್ತನ್ನು ತರುವುದು ಬಹಳ ಅಗತ್ಯವಿದೆ. ಯಾರಿಗೂ ಕೂಡ ಅಂಕೆಯಿಲ್ಲ, ಭಯವಿಲ್ಲ, ಏನೂ ಕೂಡ ಆಗಿಲ್ಲ. ನಾವು ಕೂಡ nomenclature change ಮಾಡುವುದರಿಂದಾಗಲ್ಲ. ಅದಕ್ಕಾಗಿ ಒಂದು time limit ಇಟ್ಟು ಅದು Deputy Commissioners ಇರಬಹುದು, Regional Comissioners ಇರಬಹುದು, ಹುಣಸೂರು ಪ್ರಸಂಗ ಎಲ್ಲೂ ಕೂಡ ಮರುಕಳಿಸದಂತೆ ಆ time limit ನೊಳಗೆ ಮಾಡುವುದಕ್ಕೆ ನಾವು action ತೆಗೆದುಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ : Action ಅಲ್ಲ ಇದನ್ನು amendment ಮಾಡಬೇಕು. ಈಗ ಬೇಡವೆಂದರೂ ಮುಂದಿನ ಎರಡು ತಿಂಗಳಿನಲ್ಲಿ ತನ್ನಿ.

ಶ್ರೀ ಡಿ.ಕೆ. ಶಿವಕುಮಾರ್ : ಭಯ ಇರಲಿ ಸ್ವಾಮಿ ಅದಕ್ಕೆ ನೀವು amendment ಮಾಡಿ. ನಮ್ಮ ಪಾರ್ಟಿನಲ್ಲಿ ಗೆದ್ದು ಬಿಟ್ಟು ಅವರು ಆ ರೀತಿ ಮಾಡಿದರೆ ಯಾರನ್ನಾದರೂ ಹಿಡಿಯುವುದಕ್ಕೆ ಆಗುತ್ತದೆಯೆ? ಯಾರನ್ನೂ ಹಿಡಿಯುವುದಕ್ಕಾಗುತ್ತಿಲ್ಲ. Can you please bring an amendment on this?

ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇದ) (ತಿದ್ದುಪಡಿ) ವಿಧೇಯಕ 2010

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2010 ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇದ) (ತಿದ್ದುಪಡಿ) ವಿಧೇಯಕ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : "2010ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇದ) (ತಿದ್ದುಪಡಿ) ವಿಧೇಯಕ ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು : "ಖಂಡ 2 ಸೇರಿದಂತೆ ಈ ವೀಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 2 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇದ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2010 ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇದ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

VII ಕರ್ನಾಟಕ ಸಂಸ್ಕೃತಿ-ವೇದ ವಿಶ್ವವಿದ್ಯಾಲಯ ವಿಧೇಯಕ 2009
ಪರ್ಯಾಲೋಚನೆ ಪ್ರಸ್ತಾವ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2009 ರ ಕರ್ನಾಟಕ ಸಂಸ್ಕೃತಿ-ವೇದ ವಿಶ್ವವಿದ್ಯಾಲಯ ವಿಧೇಯ ಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಇದು ಎರಡು ಬಾರಿ ಸುದೀರ್ಘವಾಗಿ ಚರ್ಚೆಯಾಗಿದೆ. ಬೆಳಗಾಂ ನಲ್ಲಿ ಆಯಿತು. ಕಳೆದ ಸಲ ನೀವೇ ಮುಂದಕ್ಕೆ ಹಾಕಿ ಎಂದು ಹೇಳಿದಿರಿ. ಆದರೂ ಇನ್ನೊಮ್ಮೆ explain ಮಾಡುತ್ತೇನೆ. ತಾವು ಇದನ್ನು ಮುಂದೆ ಹಾಕುವುದಕ್ಕೆ ವಿನಂತಿ ಮಾಡಿದಿರಿ ಅದಕ್ಕೆ ನಾನು ಒಪ್ಪಿಕೊಂಡು ಇದನ್ನು ಮುಂದಕ್ಕೆ ಹಾಕಿದ್ದೆವು. ನಮ್ಮ ರಾಜ್ಯದಲ್ಲಿ ಸುಮಾರು 16 ಸಂಸ್ಕೃತ ಕಾಲೇಜುಗಳಿವೆ. 250 ಪಾಠಶಾಲೆಗಳಿವೆ. ಸಂಸ್ಕೃತ ವಿಷಯದಲ್ಲಿ, ತಮಗೆ ಗೊತ್ತಿರುವ ಹಾಗೆ ಬಿ.ಎಂ.ಶ್ರೀಕಂಠಯ್ಯನವರು, ಕನ್ನಡ ಭಾಷೆ ಪ್ರಬಲವಾ ಗುವುದಕ್ಕೆ ಸಂಸ್ಕೃತ ಕೂಡ ಬಹಳ ಪೂರಕ ಆಗಿದೆ ಎಂದು ಹೇಳಿದ್ದಾರೆ. ಆ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ನಮ್ಮ ಸಂಸ್ಕೃತ ಭಾಷೆ, ಸಾಹಿತ್ಯ, ಶಾಸ್ತ್ರ ಅಧ್ಯಯನ, ಅದಕ್ಕೆ ಕರ್ನಾಟಕ ತವರು ಮನೆ. ಈ ಹಿನ್ನೆಲೆಯಲ್ಲಿ ಈ ಒಂದು ವಿಶ್ವವಿದ್ಯಾನಿಲಯದ ಅವಶ್ಯಕತೆಯಿದೆ ಎನ್ನುವ ಭಾವನೆಯಿಂದ ಮತ್ತು ಪ್ರಾಚೀನ ಜ್ಞಾನ ಏನು ಇದೆ ಅದು ಆಧುನೀಕರಣಕ್ಕೆ transfer ಆಗಿ ಬರಬೇಕು. ಬರಬೇಕು ಎನ್ನುವುದಾದರೆ ಸಂಸ್ಕೃತದ ಬಗ್ಗೆ research ಗಳು ನಡೆಯಬೇಕು. ಅಲ್ಲಿ ಏನು ಹಿಂದೆ ಅಧ್ಯಯನ ಮಾಡಿದ್ದಾರೊ ಅದನ್ನು ತಿಳಿದುಕೊಳ್ಳುವಂತ ಕೆಲಸ ಆಗಬೇಕಾಗಿದೆ. ಆ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ

ಸಂಸ್ಕೃತ–ವೇದ ವಿಶ್ವವಿದ್ಯಾನಿಲಯ ಬೇಕು ಎನ್ನುವುದು ಬಹಳ ಜನರ ಆಗ್ರಹ ಕೂಡ ಇದೆ. ಕರ್ನಾಟಕದಲ್ಲಿ ನೂರಾರು ಖಾಸಗಿ ಸಂಸ್ಕೃತ ಸಂಸ್ಥೆಗಳಿವೆ. ಅವುಗಳು ಬಿಡಿ ಬಿಡಿಯಾಗಿ ಕೆಲಸ ಮಾಡುತ್ತಿವೆ. ಅವುಗಳನ್ನು ವ್ಯವಸ್ಥಿತವಾಗಿ ಒಂದು ಕೊಡೆಯ ಅಡಿಯಲ್ಲಿ ತರುವ ಹಿನ್ನೆಲೆಯಲ್ಲಿ ಈ ವಿಶ್ವವಿದ್ಯಾನಿಲಯ ಪೂರಕವಾಗುತ್ತದೆ. ಹೀಗಾಗಿ ಈ ವಿಶ್ವವಿದ್ಯಾನಿಲಯ ಬೇಕು ಎನ್ನುವುದು ಬಹಳ ಜನರ ಆಗ್ರಹವಾಗಿದೆ. ಈಗಾಗಲೇ ಮುಖ್ಯಮಂತ್ರಿಯವರು ವಿಶೇಷಾಧಿಕಾರಿಗಳನ್ನು ನೇಮಿಸಿದ್ದು ಈಗಾಗಲೇ ಕರ್ನಾಟಕದಲ್ಲಿ ಸುಮಾರು 20 ರಿಂದ 25 ಸಾವಿರ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅವರಿಗೆ ಬೇರೆ ರಾಜ್ಯಕ್ಕೆ ಹೆಚ್ಚಿನ ವಿಧ್ಯಾಭ್ಯಾಸಕ್ಕೆ ಹೋಗುವುದಾದರೆ, 12 ರಾಜ್ಯಗಳಲ್ಲಿ ಏನು ಸಂಸ್ಕೃತ ವಿಶ್ವವಿದ್ಯಾನಿಲಯಗಳಿವೆ. ಅಲ್ಲಿ ಇವರಿಗೆ admission ಸಿಗುವುದಿಲ್ಲ. ಏಕೆಂದರೆ, ಇಲ್ಲಿ SSLC Boardನ certificate ಅವರಿಗೆ ಕೊಡುತ್ತೇವೆ. ಹೀಗಾಗಿ ಉನ್ನತ ಮಟ್ಟದ ಅಧ್ಯಯನಕ್ಕೆ ಹೋಗುವಂಥ ನಮ್ಮ ವಿದ್ಯಾರ್ಥಿಗಳಿಗೆ ಅನುವು ಆಗಬೇಕೆಂಬುದು ಇದರ ಉದ್ದೇಶವಿದೆ. ವಿಶೇಷವಾಗಿ ಹೇಳುವುದಾದರೆ ಮಾನ್ಯ ಡಿ.ಕೆ.ಶಿವಕುಮಾರ್‌ರವರು ಇಲ್ಲಿ ಕುಳಿತ್ತಿದ್ದಾರೆ. ಅವರು ಸಂಸ್ಕೃತದ ಬಗ್ಗೆ ವಿಶೇಷವಾದ ಅಧ್ಯಯನ ಕೂಡ ಮಾಡಿದ್ದಾರೆ. ಭಾಷಣಗಳಲ್ಲಿ ಅವರು ಸಂಸ್ಕೃತದ ಶ್ಲೋಕಗಳನ್ನು ಹೇಳುವಂತ ಪ್ರತೀತಿಯನ್ನು ಇತ್ತೀಚಿಗೆ ಬೆಳೆಸಿಕೊಂಡಿದ್ದಾರೆ. ತುಂಬಾ ಚೆನ್ನಾಗಿ ಹೇಳುತ್ತಾರೆ. ಕಾರಣ ಏನೆಂದರೆ ಅಷ್ಟು ಅರ್ಥಗರ್ಭಿತವಾಗಿರತಕ್ಕಂಥ..

ಶ್ರೀ ಎಂ.ಬಿ.ಪಾಟೀಲ್ : ಅವರನ್ನು ನೀವು ಅದಕ್ಕೆ vice chancellor ಮಾಡಿ ಬಿಡಿ.

ಶ್ರೀ ಅರವಿಂದ ಲಿಂಬಾವಳಿ : ಅವರು ಒಪ್ಪುವುದಾದರೆ ಸರ್ಕಾರ ಒಪ್ಪುವುದಾದರೆ ನಾನು ಮಾಡಲಿಕ್ಕೆ ತಯಾರಿದ್ದೇನೆ. ನನ್ನದೇನೂ ಅಭ್ಯಂತ ರವಿಲ್ಲ. ಆ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯಬೇಕು ಅದಕ್ಕಾಗಿ ತಮ್ಮ ಮುಖಾಂತರ ಮಾನ್ಯ ಎಲ್ಲಾ ಸದಸ್ಯರಿಗೆ ಇದನ್ನು ಒಪ್ಪಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಏನಾದರೂ ಮಾಡಿ ವಿಶ್ವವಿದ್ಯಾಲಯಗಳನ್ನು ಎಲ್ಲರಗೂ ಕೊಡುವಂಥ ಪರಿಪಾಠ ಈ ಸರ್ಕಾರ ಮಾಡುತ್ತಿದೆ. ವಿಶ್ವವಿದ್ಯಾಲಯಗಳನ್ನು ಕೊಡುವಾಗ ಒಂದು ಗೊತ್ತುಗುರಿ, ನೀತಿ–ನಿಯಮ ಇರಬೇಕು. ಈ ಮಾತು ಏತಕ್ಕಾಗಿ ಹೇಳುತ್ತಿದ್ದೇನೆಂದರೆ,

ರಾಜ್ಯದಲ್ಲಿ ಸಂಸ್ಕೃತ ಪಾಠ ಶಾಲೆಗಳು ಈಗಾಗಲೇ ಸಾಕಷ್ಟಿವೆ. ಇದರಲ್ಲಿ ಮುಖ್ಯವಾಗಿ ನಮ್ಮ ಉದ್ದೇಶ ಏನೆಂದರೆ, ನಾವು ಪ್ರಾಚೀನತೆಯನ್ನು ಬಿಟ್ಟು ಮುಂದಿನ ದೃಷ್ಟಿ ಇಟ್ಟುಕೊಂಡು ಲೆಕ್ಕ ಹಾಕಿ Agriculture University and Horticulture University ಮಾಡುತ್ತೀರಿ. It is alright. ಏಕೆಂದರೆ ಇವುಗಳು ಜೀವನಕ್ಕೆ ಆಧಾರವಾಗಿರುವುದರಿಂದ ಇದರಲಿ ಲೋಪದೋಷಗಳು ಏನೇ ಇದ್ದರೂ ಸಹ ಇಂಥವುಗಳಿಗೆ ನಾವು ಪ್ರೋತ್ಸಾಹ ಮಾಡೋಣ. ಸಂಸ್ಕೃತ ವಿಶ್ವವಿದ್ಯಾಲಯ ಮಾಡತಕ್ಕಂಥ ಉದ್ದೇಶ ಏನು ಮತ್ತು ಯಾವ ಕಾರಣಕ್ಕಾಗಿ ಇದನ್ನು ತರಲಾಗುತ್ತಿದೆ ಎಂಬ ಮಾತನ್ನು ಸಹ ಹೇಳಿದ್ದೀರಿ. ಭಾರತ ದೇಶದದಲ್ಲಿರುವ ಎಲ್ಲಾ ಭಾಷೆಗಳಿಗೆ ಸಂಸ್ಕೃತ ಭಾಷೆ ಮೂಲವಾಗಿದೆ. ಇದು ಮಾತ್ರ ಭಾಷೆಯಾಗಿದೆ. ಈ ಭಾಷೆಗೆ ಪರಮಜ್ಞಾನ ಇದ್ದಾಗಲೂ ಕೂಡ ಅದು ಜನಜನಿತವಾಗಿ ಎಲ್ಲರಿಗೂ ಪ್ರಚಾರವಾಗಲಿಲ್ಲ.

ಡಾ: ವಿ.ಎಸ್. ಆಚಾರ್ಯ (ಗೃಹ ಇಲಾಖೆ ಸಚಿವರು) : ಮಾನ್ಯ ಅಧ್ಯಕ್ಷರೆ, ಸಂಸ್ಕೃತ ನಮ್ಮ ಇಡೀ ಜ್ಞಾನ ಭಂಡಾರಕ್ಕೆ ಕೀಲಿ ಕೈ ಇದ್ದಾಗೆ. ಕೀಲಿ ಕೈ ಬಿಸಾಡಿರುವುದರಿಂದ ಜ್ಞಾನ ಭಂಡಾರದ ಅರಿವೇ ನಮಗೆ ಗೊತ್ತಿಲ್ಲದಂತಾಗಿದೆ. ನಮಗೆ ಗೊತ್ತಿಲ್ಲದೆ ಇರತಕ್ಕಂಥದ್ದು ಗೊತ್ತಿಲ್ಲವೆಂದು ಹೇಳತಕ್ಕಂಥ ಒಂದು ಪ್ರವೃತ್ತಿ ಬಂದಿದೆ. ಕರ್ನಾಟಕದ ಮಕ್ಕಳು IT, BT ಅಥವಾ 21ನೇ ಶತಮಾನದ ಚಾಲೆಂಜಸ್‌ಗೆ ಇದನ್ನು equip ಮಾಡಿಕೊಳ್ಳುವುದಕ್ಕೆ ಈ ಒಂದು ಜ್ಞಾನ ಭಂಡಾರದ access ಬೇಕೆಂಬ ದೃಷ್ಟಿಯಿಂದ ಅದರ ಬಗ್ಗೆ ಒಂದು ವಿಶೇಷವಾದ ರಿಸರ್ಚ್ ಯೂನಿವರ್ಸಿಟಿ ಬೇಕೆಂಬುದರ ಬಗ್ಗೆ ಈ ಒಂದು ಪ್ರಸ್ತಾವನೆ ತರಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ನೀವು ಸಂಶೋಧನೆ ಮಾಡಿ ಭಾಷೆಯಲ್ಲಿರುವಂಥ ಶ್ರೀಮಂತಿಕೆ ಮತ್ತು ಸತ್ವವನ್ನು ಈಚೆಗೆ ತರಬೇಕೆಂದರೆ Directorate ಮಾಡಿ ಒಂದು Research Center ಮಾಡಿ. ಇದು ಬಹಳ ಮುಖ್ಯವಾಗಿ ಬೇಕಾಗುತ್ತದೆ. ಏಕೆಂದರೆ, ಕನ್ನಡದಲ್ಲಿ ಶಬ್ದದ ಕೊರತೆ ಇನ್ನೂ ಸಹ ಇದೆ. ನಮ್ಮದು ಅತ್ಯಂತ ಪ್ರಾಚೀನ ಭಾಷೆ ಆಗಿದ್ದರೂ ಕೂಡ ಇವತ್ತು ಕೂಡ ಎಷ್ಟೋ ಇಂಗ್ಲೀಷ್ ಭಾಷೆಯ ಪದಗಳನ್ನು ಬಳಕೆ ಮಾಡುತ್ತಿದ್ದೇವೆ. ಮತ್ತೆ ನಮ್ಮಲ್ಲಿರತಕ್ಕಂಥ ಎಷ್ಟೋ ಪದಗಳನ್ನು ನಿಜವಾಗಿಯೂ ಕೂಡ ಉಚ್ಚಾರಣೆ ಮಾಡತಕ್ಕಂಥದ್ದು ಅಷ್ಟೊಂದು ಸುಲಭವಾದಂಥದಲ್ಲ. ಪೊಲೀಸ್ ಸ್ಟೇಷನ್ ಪದವನ್ನು ಆರಕ್ಷಕ ಠಾಣೆ ಎಂದು ಹೇಳುವಂಥ ಪದಗಳ

ಉದಾಹರಣೆ ಕೊಡುತ್ತಿದ್ದೇನೆ. ಶಬ್ಧದ ಭಂಡಾರಗಳನ್ನು ಜಾಸ್ತಿ ಮಾಡತಕ್ಕಂಥದರ ಬಗ್ಗೆ ಸಂಸ್ಕೃತ ಭಾಷೆಯಲ್ಲಿ ಮೂಲವಾಗಿ ಇದನ್ನು ಕಂಡು ಹಿಡಿಯುವಂಥದ್ದರ ಬಗ್ಗೆ ಸಂಶೋಧನೆ ಆಗಬೇಕು. ಆದ್ದರಿಂದ Directorate ಮಾಡಿ ಒಂದು Research Center ಮಾಡಿ. ಆ ನಂತರ ಇದರ ಮೇಲೆ ಏನು ಲಾಭವಾಗುತ್ತದೆಂಬುದನ್ನು ನೋಡಿಕೊಂಡು ತದನಂತರ ಇದನ್ನು ತರುವಂಥದರ ಬಗ್ಗೆ ಯೋಚನೆ ಮಾಡಬಹುದು. ಇದರ ಬಗ್ಗೆ ಈಗ ಯೂನಿವರ್ಸಿಟಿ ತಂದ ತಕ್ಷಣ ಅಲ್ಲಿಗೆ ಯಾರೊಬ್ಬ ಅಧಿಕಾರಿಯನ್ನು ಹಾಕುತ್ತೀರಿ ಮತ್ತೆ ಒಬ್ಬ Vice Chancellor ಹಾಕುತ್ತೀರಿ. ಮತ್ತೆ ಅದಕ್ಕೆ ಜಾಗ ಮತ್ತು ಕಟ್ಟಡ ಬೇಕಾಗುತ್ತದೆ. ಇದು establish ಆಗಿ ಇದರ ಉದ್ದೇಶ ಸಾಧನೆ ಆಗಬೇಕಾದರೆ ಇನ್ನು 20 ವರ್ಷಗಳಾದರು ಬೇಕಾಗುತ್ತದೆ. What is the immediate need? ಆದ್ದರಿಂದ, ಅದು ಆಗುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ನನ್ನ ಸಲಹೆ ಏನೆಂದರೆ, In the best interest of the Kannada Language ನೀವೊಂದು Directorate ಮಾಡಿ ಅದಕ್ಕೊಂದು streamline ಮಾಡಿ ಸಂಶೋಧನೆಗೆ ಹೆಚ್ಚು ಒತ್ತು ಕೊಡುವಂಥ ಕೆಲಸ ಮಾಡಿ.

(ಈ ಹಂತದಲ್ಲಿ ಶ್ರೀ ಚಂದ್ರಕಾಂತ್ ಬೆಲ್ಲದ್ ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಚೈನಾ ಭಾಷೆ ಸುಮಾರು 2500 ವರ್ಷಗಳ ಇತಿಹಾಸ ಹೊಂದಿರುವಂಥ ಭಾಷೆಯಾಗಿದೆ. 2500 ವರ್ಷಗಳಾದರೂ ಕೂಡ ಆ ಭಾಷೆಯ ಮೇಲೆ ಇದುವರೆಗೂ ಕೂಡ ಸಂಶೋಧನೆ ನಡೆಯುತ್ತಿದೆ. ಆ ಪದಗಳನ್ನು ಯಥಾವತ್ತಾಗಿ ಉಳಿಸಿಕೊಳ್ಳಬೇಕೆಂಬ ರೀತಿಯಲ್ಲಿ ಸಂಶೋಧನೆ ಅಲ್ಲಿ ಆಗುತ್ತಿದೆ. ನಮ್ಮ ಎಲ್ಲಾ ಭಾಷೆಗಳಿಗೆ ಸಂಸ್ಕೃತ ಮೂಲ ಭಾಷೆಯಾಗಿರುವುದರಿಂದ ಇದರಲ್ಲಿ ಸಾಕಷ್ಟು ಪಾಠವನ್ನು ನಾವು ಕಲಿಯಬೇಕಾಗಿದೆ. ಆದ್ದರಿಂದ, ಒಂದು research wing ಅನ್ನು strengthen ಮಾಡುವುದರಿಂದ ಅದಕ್ಕೊಂದು ಅರ್ಥ ಬರುತ್ತದೆಂದು ಹೇಳುತ್ತೇನೆ. ಕೇವಲ ವಿಶ್ವವಿದ್ಯಾಲಯಗಳನ್ನು ಮಾಡುವುದರಿಂದ ಈ ಉದ್ದೇಶ ಸಾಧನೆಯಾಗುತ್ತದೆಂಬ ವಿಶ್ವಾಸ ನನಗಂತೂ ಉಳಿದಿಲ್ಲ. ಏಕೆಂದರೆ, ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏನಾಗುತ್ತಿದೆ ಎಂಬುದನ್ನು ನೋಡಿರುವ ಅನುಭವದ ಹಿನ್ನೆಲೆಯಲ್ಲಿ ಈ ಮಾತನ್ನು

ಹೇಳುತ್ತಿದ್ದೇನೆ. ಈ ಬಿಲ್ ಅನ್ನು ಸ್ವಾಗತ ಮಾಡೋಣ. ಸ್ವಾಗತ ಮಾಡಬಾರದೆಂದು ಹೇಳುವುದಿಲ್ಲ. ಆದರೆ, ನೀವು ಹಂತ ಹಂತವಾಗಿ ಈ ಕೆಲಸವನ್ನು ಮಾಡಬೇಕಾಗುತ್ತದೆಂಬುದು ನನ್ನ ಸಲಹೆಯಾಗಿದೆ.

ಡಾ: ಹೆಚ್.ಸಿ.ಮಹದೇವಪ್ಪ : ಸನ್ಮಾನ್ಯ ಅಧ್ಯಕ್ಷರೆ, ಬಿಜೆಪಿ ಸರ್ಕಾರ ಬಂದ ಮೇಲೆ ಒಂದೊಂದು ವಿಷಯಕ್ಕೆ ಒಬ್ಬೊಬ್ಬ ವ್ಯಕ್ತಿಗೆ ಒಂದೊಂದು ವಿಶ್ವವಿದ್ಯಾಲಯವನ್ನು ಕಾಯಿದೆ ಮುಖಾಂತರ ಮಂಜೂರು ಮಾಡತಕ್ಕಂಥ ಪರಿಪಾಠವನ್ನು ಮುಂದುವರಿಸಿಕೊಂಡು ಬರತಕ್ಕಂಥದು ಒಳ್ಳೆಯ ಆಡಳಿತದ ಲಕ್ಷಣವಲ್ಲ. ಕಳೆದ ನಾಲ್ಕಾರು ದಿನಗಳಿಂದ ಇಂಥ ಅನೇಕ ಘಟನಾವಳಿಗಳು ಈ ಮನೆಯಲ್ಲಿ ನಡೆದಿವೆ. ಶಾಸನ ಮಾಡುವುದು ಈ ಸದನದ ಮಾನ್ಯ ಸದಸ್ಯರ ಒಂದು ಹಕ್ಕು. ಆ ಒಂದು ಹಕ್ಕನ್ನು ನಾವು ಬಳಸಿಕೊಳ್ಳುವಾಗ ರಾಜ್ಯದ ಮತ್ತು ಸರ್ವಜನರ ಹಿತ ಇಲ್ಲಿ ಅಡಕವಾಗಿರಬೇಕು. ಸಂಸ್ಕೃತ ನಮ್ಮ ದೇಶದ ಪುರಾತನ ಭಾಷೆ. 18ನೇ ಶತಮಾನದಲ್ಲಿ Indo-Aryan and Latin and Greek ದೇಶಗಳ ಜೊತೆಗೆ ಈ ಭಾಷೆಯನ್ನು ಹೋಲಿಕೆ ಮಾಡಿದ್ದಾರೆ. 200 B.C. ನಲ್ಲಿ ಓದು ಬರಹ ಬಾರದೆ ಇರುವಂಥ ಕಾಲದಲ್ಲಿ ಬಾಯಿ ಮುಖಾಂತರ ಜ್ಞಾನವನ್ನು ಅಂದರೆ, ಈ ಸಂಸ್ಕೃತ ಭಾಷೆಯ ಮೂಲಕ ಹೇಳಿಕೊಡುತ್ತಿದ್ದರೆಂಬುದು ನಮಗೆ ಚರಿತ್ರೆಯಿಂದ ಗೊತ್ತಾಗಿದೆ. ಈ ಭಾಷೆಯನ್ನು ಕಲಿಯಬೇಡಿ ಎಂದು ಯಾರು ಹೇಳುತ್ತಿಲ್ಲ. ಆದರೆ, ಇದಕ್ಕೊಂದು ವಿಶ್ವವಿದ್ಯಾಲಯ ತೆಗೆಯಬೇಕೆಂಬ ಉದ್ದೇಶ ಸರಿಯಿಲ್ಲ. ನಮ್ಮ ದೇಶದಲ್ಲಿ ಸುಮಾರು 14 ರಿಂದ 15 ವಿಶ್ವವಿದ್ಯಾಲಯಗಳಿವೆ. ಈ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ಕಲಿಯುವುದಕ್ಕೆ ಒಂದು subject ಇದೆ. ಮೈಸೂರು, ಬೆಂಗಳೂರು, ಧಾರವಾಡ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಇತರೇ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿವೆ. 1991 Census ಪ್ರಕಾರ ಭಾರತ ದೇಶದಲ್ಲಿ ತುಂಬಾ ಚೆನ್ನಾಗಿ ಸಂಸ್ಕೃತ ಭಾಷೆ ಮಾತನಾಡುವವರ ಸಂಖ್ಯೆ 49, 736 ಇದೆ. ಇಡೀ ದೇಶದಲ್ಲಿ 49,736 ಜನ fluent ಆಗಿ ಸಂಸ್ಕೃತ ಭಾಷೆ ಮಾಡನಾಡುವವರು ಇರುವಾಗ ಕರ್ನಾಟಕ ರಾಜ್ಯದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಪ್ರಾರಂಭ ಮಾಡುತ್ತೇವೆಂದರೆ ಏನರ್ಥ?

ಶ್ರೀ ಬಿ.ಎನ್. ಬಚ್ಚೇಗೌಡ : ತಾವು ನೀಡುತ್ತಿರುವ ಮಾಹಿತಿ ತಪ್ಪಿದೆ.

ಡಾ: ಹೆಚ್.ಸಿ. ಮಹದೇವಪ್ಪ : ತಪ್ಪಿದ್ದರೆ ಸರಿಮಾಡಿಕೊಳ್ಳಿ. ಈ ಮಾಹಿತಿಯನ್ನು ನಾನು internet ಮೂಲಕ ಪಡೆದುಕೊಂಡಿದ್ದೇನೆ.

O.32 F-18

ನಮ್ಮಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ಭಾಷೆಗೆ ಅವಕಾಶ ಇರುವುದರಿಂದ ಮತ್ತು ನಮ್ಮ ಉಪನಾಯಕರಾದ ಶ್ರೀ ಜಯಚಂದ್ರರವರು ಸಲಹೆ ಮಾಡಿರುವ ಪ್ರಕಾರ ಸಂಸ್ಕೃತವನ್ನು ಅಭಿವೃದ್ಧಿಪಡಿಸುವುದಕ್ಕೆ ಮತ್ತು ಬಳಸುವುದಕ್ಕೋಸ್ಕರ ಒಂದು ಪ್ರತ್ಯೇಕವಾದ Directorate ಮಾಡಿ. ಈಗ ಸಂಸ್ಕೃತವನ್ನು ಒಳ್ಳೆಯ ಕಾರ್ಯಕ್ರಮಗಳಲ್ಲಿ ಅಂದರೆ, Sophisticated Programmes ಗೆ elited section ನವರು ಹೋದಾಗ ಮಂತ್ರ ಮತ್ತು ಘೋಷಣೆಗಳನ್ನು ಸಂಸ್ಕೃತದಲ್ಲಿ ಹೇಳುತ್ತಾರೆ. ನಮಗ್ಯಾರಿಗೂ ಇದು ಗೊತ್ತಾಗುವುದಿಲ್ಲ.

ಶ್ರೀ ಖಮರುಲ್ ಇಸ್ಲಾಮ್ : ತಾವು ಉರ್ದು ಯೂನಿವರ್ಸಿಟಿ ಮಾಡಿ. ಈಗಾಗಲೇ ಸಾಕಷ್ಟು ಸ್ಕೂಲ್ ಮತ್ತು ಕಾಲೇಜುಗಳಿವೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಬಹಳ ಜನ ಅಲ್ಪಸಂಖ್ಯಾತರು ಇರುವುದರಿಂದ ದಯವಿಟ್ಟು ಒಂದು ಉರ್ದು ವಿಶ್ವವಿದ್ಯಾಲಯವನ್ನು ಮಾನ್ಯ ಸಚಿವರು ದಯಮಾಡಿ ಕೊಡಬೇಕು.

ಡಾ: ಹೆಚ್.ಸಿ.ಮಹದೇವಪ್ಪ : ಒಂದು subject ಗೆ ಈ ರೀತಿಯಾದ ಒಂದು ನಿಲುವನ್ನು ಸರ್ಕಾರ ತೆಗೆದುಕೊಂಡರೆ ಆಡಳಿತದ ಮೇಲೆ ಮತ್ತು ರಾಜ್ಯಾಂಗದ ಮೇಲೆ ಪರಿಣಾಮ ಬೀರುತ್ತದೆ. ಒಂದೊಂದು ಜಾತಿಗೆ, ವಿಷಯಕ್ಕೆ ಒಂದೊಂದು ವಿಶ್ವವಿದ್ಯಾಲಯವನ್ನು ತೆಗೆಯುತ್ತಾ ಹೋದರೆ ನಮ್ಮ ಸಂವಿಧಾನ ಮೂಲ ಆಶಯಗಳಿಗೆ ಧಕ್ಕೆ ಬರುವ ರೀತಿಯಲ್ಲಿ ನಾವು ಎಲ್ಲಿಯೋ ಒಂದು ಕಡೆ ನಡೆದುಕೊಳ್ಳುತ್ತಿದ್ದೇವೆ ಎಂಬ ಅನುಮಾನ ನಮಗೆ ಬರುತ್ತಿದೆ. ಆದ್ದರಿಂದ, ಈ ಒಂದು ಹಿನ್ನೆಲೆಯಲ್ಲಿ ಸಂಶೋಧನೆ ಮಾಡುವುದಕ್ಕೆ ಮತ್ತು ಈ ಭಾಷೆಯನ್ನು ಹೆಚ್ಚು ಉಪಯುಕ್ತವಾಗಿ ಬಳಸಿ ಕೊಳ್ಳುವುದಕ್ಕೆ ಈಗಾಗಲೇ ಕಾಲೇಜುಗಳಲ್ಲಿ ಸಂಸ್ಕೃತ ಕಲಿಯುವುದಕ್ಕೆ ಅವಕಾಶ ಇರುವುದರಿಂದ ಹೆಚ್ಚು ಪ್ರೋತ್ಸಾಹವನ್ನು ಹಾಗೂ ಹೆಚ್ಚು ಸಂಶೋಧನೆ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು. ಮತ್ತೆ ಪ್ರತಿಯೊಂದು Subjectಗೆ ನಾವು ವಿಶ್ವವಿದ್ಯಾಲಯ ತೆಗೆಯುತ್ತೇವೆಂಬ ಪರಿಪಾಠವನ್ನು ಸರ್ಕಾರ ದಯಮಾಡಿ ನಿಲ್ಲಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

(1.10 PM)

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದವರು ಭಾರತಕ್ಕೆ Harvard University ಬರಬೇಕು Oxford University ಬರಬೇಕು, ಸಾಕಷ್ಟು Universities ಭಾರತದಲ್ಲಿ ಬರಬೇಕು. ಆ ಕ್ಷೇತ್ರದಲ್ಲಿ ಹೆಚ್ಚಾಗಿ ಪ್ರಗತಿಯಾಗಬೇಕು ಎನ್ನುವ ದೃಷ್ಟಿಯಿಂದ ಖಾಸಗಿ ಮಸೂದೆಯೊಂದನ್ನು ತಂದಿದ್ದಾರೆ. ಆ ರೀತಿಯಲ್ಲಿ ಅದನ್ನು UPA ಸರ್ಕಾರ ಒಪ್ಪಿಕೊಂಡಿರುವಾಗ ಇಲ್ಲಿ ಏಕೆ ವಿರೋಧ ಮಾಡುತ್ತೀರಿ?

ಡಾ: ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಬಹುತೇಕ ನಮ್ಮ ಭಾರತೀಯರು, ಇಲ್ಲಿನ ಸರ್ಕಾರದ ಸವಲತ್ತುಗಳನ್ನು ಬಳಸಿಕೊಂಡು ಓದಿಕೊಂಡು, IT, BT ಮಾಡಿಕೊಂಡು, IAM, IBM ಮಾಡಿಕೊಂಡು ಎಲ್ಲಾ foreign ನಲ್ಲಿದ್ದಾರೆ. ಈ ರೀತಿ ಪ್ರತಿಭಾ ಫಲಾಯನವಾದ ಮೇಲೆ ಇಲ್ಲಿ ನಮ್ಮ ದೇಶದ ನಮ್ಮ ರಾಜ್ಯದ ನಮ್ಮ ಜನರ ಬೆಳವಣಿಗೆಯ ಅಭಿವೃದ್ಧಿಯನ್ನು ಮಾಡುವುದಕ್ಕೆ ತೀರ್ಮಾನಗಳು ಇಲ್ಲದೆ ಇದ್ದರೆ ಏನು ಮಾಡಬೇಕು.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : ಆ ಪ್ರತಿಭೆನೇ ಇಲ್ಲಿ ಆಗಬೇಕೆಂದು ನಾವು ಹೇಳುತ್ತಿರುವುದು.

ಡಾ: ಹೆಚ್.ಸಿ. ಮಹದೇವಪ್ಪ : ಎಲ್ಲಾ Harvard University ಹೋಗುತ್ತಾರೆ. Oxford University ಬೇಕು ಎನ್ನುತ್ತಿದ್ದಾರೆ. Business Management ನ್ನು ಆಸ್ಟ್ರೇಲಿಯಾದವರು ಬಂದು ಕಲಿಯುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಪ್ರತಿಯೊಂದು ವ್ಯಕ್ತಿಗೆ ಎನ್ನುವ ಬದಲಾಗಿ ಪ್ರತಿಯೊಂದು ಜಾತಿಗೆ ಎಂದು ಹೇಳಿ ಬಿಟ್ಟಿದ್ದರೆ ಸರಿಯಾಗುತ್ತಿತ್ತು.

ಅಧ್ಯಕ್ಷರು : ಒಬ್ಬೊಬ್ಬರು ಮಾತನಾಡಿ. ಬಚ್ಚೇಗೌಡರೆ, ಆ ಮೇಲೆ ಮಾತನಾಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಖಮರುಲ್ ಇಸ್ಲಾಂರವರು ಉರ್ದು ವಿಶ್ವವಿದ್ಯಾನಿಲಯ ಮಾಡಬೇಕೆಂದರು ಅದನ್ನು ಮಾಡುತ್ತೇವೆ. 16.2% ಇದ್ದಾರೆ ಏಕೆ ಮಾಡಬಾರದು. ಅವರದ್ದು ಆಗಲಿ. ಮಾಡಿದರೆ ಏನು ತಪ್ಪು. ನಾವು ಅದನ್ನು ಪ್ರತಿಪಾದಿಸುತ್ತೇವೆ.

(ಗೊಂದಲ)

ಅಧ್ಯಕ್ಷರು : ಸಿ.ಟಿ. ರವಿಯವರೆ ನೀವು ಮಾತನಾಡಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಅನುಮಾನಗಳು ಏನು ಎಂದು ಹೇಳಿ. ವಿಶ್ವವಿದ್ಯಾನಿಲಯಗಳ ಧ್ಯೇಯೋದ್ದೇಶಗಳು ಎನ್ನುವಾಗ ಕರ್ನಾಟಕದಲ್ಲಿ ದೊರೆಯುವ ಸಂಸ್ಕೃತ ಸಾಹಿತ್ಯದ ವಿಶಿಷ್ಟ ಗುಣಲಕ್ಷಣಗಳಿಗೆ ವಿಶೇಷವಾದ ಒತ್ತನ್ನು ನೀಡಿ ವೇದ, ಆಗಮ, ಸಜಾತಿಯ ಸಾಹಿತ್ಯದ ಅಧ್ಯಯನದ ಸಾಂಪ್ರದಾಯಿಕ ಪದ್ಧತಿಯನ್ನು ಸಂರಕ್ಷಿಸುವುದು, ಪೋಷಿಸುವುದು, ಉತ್ತೇಜಿಸುವುದು. ಅದಕ್ಕೆ ನಿಮಗೆ ಗೊತ್ತಲ್ಲ? ಈ ಸಂಸ್ಕೃತ ಭಾಷೆಯಲ್ಲಿ ಏನಾಗುತ್ತದೆ. ಗಂಡ ಹೆಂಡತಿ ತಾಳಿಯನ್ನು ಕಟ್ಟಿಸಬೇಕಾದಾಗ ಮಂತ್ರ ಹೇಳುತ್ತಾರೆ. ಬಹಳ ಭಕ್ತಿಯಿಂದ ಹೇಳುತ್ತಾರೆ, ಏಕೆಂದರೆ ನಮಗೆ ಅದರ ಅರ್ಥ ಗೊತ್ತಿರುವುದಿಲ್ಲ. ಮಂತ್ರ ಬಹಳ ಹೇಳುತ್ತಾರೆ ಅದರ ಅರ್ಥ ನಮಗೆ ಗೊತ್ತಿರುವುದಿಲ್ಲ. ನಿನಗೆ ತಾಳಿ ಕಟ್ಟುವಂಥ ಸಂದರ್ಭದಲ್ಲಿ ನಿನಗೆ 100 ಜನ ಮಕ್ಕಳು ಆಗಲಿ, ನಿನಗೆ 100 ಕುದುರೆಗಳು ಬರಲಿ ಎಂದು. ಈಗ ಕುದುರೆ ಯಾರು ಕೇಳುತ್ತಾರೆ ಸ್ವಾಮಿ. ಮೋಟಾರ್ ಸೈಕಲ್ ಮತ್ತು ಕಾರ್ ಕೇಳುತ್ತಾರೆ. ಈ ಭಾಷೆಯನ್ನು ಕನ್ನಡಕ್ಕೆ ತರಿಸಿ.

ಶ್ರೀ ಅರವಿಂದ ಲಿಂಬಾವಳಿ : ಅವರು ಏನು ಹೇಳುತ್ತಾರೆನ್ನುವುದು ಗೊತ್ತಾಗಬೇಕಾದರೆ ಅಧ್ಯಯನವನ್ನಾದರೂ ಮಾಡಬೇಕಲ್ಲವೆ?

ಶ್ರೀ ಟಿ.ಬಿ. ಜಯಚಂದ್ರ : ಅದಕ್ಕೋಸ್ಕರ ವಿಶ್ವವಿದ್ಯಾನಿಲಯ ಬೇಕಾಗಿಲ್ಲ.

ಶ್ರೀ ಅರವಿಂದ ಲಿಂಬಾವಳಿ : ವಿಶ್ವವಿದ್ಯಾನಿಲಯ ಏಕೆ ಬೇಕಾಗಿಲ್ಲ? ನಿಮಗೆ ಅದರ ಅರ್ಥ ಮಾತ್ರ ಬೇಕಾಗಿರುವುದು...

ಶ್ರೀ ಟಿ.ಬಿ. ಜಯಚಂದ್ರ : ನಿಮಗೆ ಗ್ರಹಣ ಹೊಕ್ಕುಬಿಟ್ಟಿದೆ, ಆ ಭೂತ ಹೊಕ್ಕುಬಿಟ್ಟಿದೆ. ವಿಶ್ವವಿದ್ಯಾನಿಲಯ... ವಿಶ್ವವಿದ್ಯಾನಿಲಯ... ಎಂದು ಹೊಕ್ಕುಬಿಟ್ಟಿದೆ.

ಶ್ರೀ ಅರವಿಂದ ಲಿಂಬಾವಳಿ : ಸ್ಯಾಮ್ ಪಿತ್ರೋಡಾ ಎನ್ನುವವರ ಅಧ್ಯಕ್ಷತೆಯಲ್ಲಿ ಒಂದು National Knoweldge Commission ಆಗಿತ್ತು. ಅದರ ಪ್ರಕಾರ ನಮ್ಮ ದೇಶಕ್ಕೆ 1500 ವಿಶ್ವವಿದ್ಯಾನಿಲಯಗಳು ಬೇಕು ಎಂದು ಹೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಸ್ಯಾಮ್ ಪಿತ್ರೋಡಾರವರು ಅಪ್ಪಿತಪ್ಪಿಯೂ ಸಂಸ್ಕೃತ ವಿಶ್ವವಿದ್ಯಾನಿಲಯ ಬೇಕು ಎಂದು ಹೇಳಿಲ್ಲ. ನೀವು ಕೇಳಿ ಸ್ವಲ್ಪ ಹೇಳುತ್ತೇನೆ.

(ಗೊಂದಲ)

ಮೊದಲು ಹೇಳುವುದನ್ನು ಕೇಳಿಸಿಕೊಳ್ಳಿ, ಆಮೇಲೆ ಉತ್ತರ ಹೇಳಿ.

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡುವುದನ್ನು ಮುಗಿಸಲಿ.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : ನೀವು ಪೂರ್ವಾಗ್ರಹ ಪೀಡಿತರಾಗಿ ಇಲ್ಲಿ ಮಾತನಾಡುತ್ತಿದ್ದೀರಿ, ಆ ಉದ್ದೇಶ ಇದರಲ್ಲಿ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಖಗೋಳಶಾಸ್ತ್ರ, ಜೀವಶಾಸ್ತ್ರ, ರಸಾಯನಶಾಸ್ತ್ರ, ಮಾನವಿಕ ಶಾಸ್ತ್ರಗಳು, ಮಾಹಿತಿ ತಂತ್ರಜ್ಞಾನ, ಕಾನೂನು ಮತ್ತು ನ್ಯಾಯಶಾಸ್ತ್ರ, ಆಡಳಿತ, ಗಣಿತ, ಲೋಹಶಾಸ್ತ್ರ, ಪೌರಶಾಸ್ತ್ರ, ಭೌತಶಾಸ್ತ್ರ, ಸಾಮಾಜಿಕ ಜ್ಞಾನವನ್ನು ಅಳವಡಿಸಲು ಆಧುನಿಕ ವಿಜ್ಞಾನ, ತಾಂತ್ರಿಕ ಅಧ್ಯಯನ ನಡೆಸಲು ಸಮ್ಮೋಹನಗೊಳಿಸುವುದು ಎನ್ನುವ ಉದ್ದೇಶವನ್ನು ಹೇಳಿದ್ದೀರಿ. ನಮ್ಮಲ್ಲಿ ಸಂಸ್ಕೃತ ಭಾಷೆಯಲ್ಲಿರತಕ್ಕಂಥ ಎಷ್ಟೋ ಜ್ಞಾನ ಭಂಡಾರವನ್ನು ಜರ್ಮನಿಯವರು ತೆಗೆದುಕೊಂಡು ಹೋದರು ಎಂದು ಹೇಳುತ್ತಾರೆ. ಆಯುರ್ವೇದ ಯುನಾನಿ ಇವೆಲ್ಲವು ಕೂಡ ಭಾರತೀಯ ಸಂಸ್ಕೃತಿಯಲ್ಲಿರತಕ್ಕಂಥದ್ದು. ಆ ಸಂಸ್ಕೃತದಲ್ಲಿರತಕ್ಕಂಥದ್ದನ್ನು ಅವರು ಹೊತ್ತು ಕೊಂಡು ಹೋದರು ಎನ್ನತಕ್ಕಂಥ ಮಾತನ್ನು ಹೇಳುತ್ತೀರಿ. ಅಂಥ ವಿಚಾರದಲ್ಲಿ ರೀಸರ್ಚ್ ಮಾಡುವಂಥ ಕೆಲಸವನ್ನು ಮಾಡಿ. ದೊಡ್ಡ ವಿಶ್ವವಿದ್ಯಾನಿಲಯ ಮಾಡುತ್ತೇವೆ, ಅದಕ್ಕೆ ಒಬ್ಬರನ್ನು Vice Chancellor ಮಾಡುತ್ತೇವೆಂದು ಮಾಡಿಕೊಂಡು ಮನು ಸಂಪ್ರದಾಯಕ್ಕೆ ಹಿಂದಕ್ಕೆ ತೆಗೆದು ಕೊಂಡು ಹೋಗುವ ರೀತಿಯಲ್ಲಿ ಅದನ್ನು ಮಾಡುವುದಕ್ಕೆ ಹೋಗಬೇಡಿ. What is really needed? ವರ್ಣಾಶ್ರಮ ಧರ್ಮವನ್ನು ಪ್ರತಿಪಾದನೆ ಮಾಡತಕ್ಕಂಥ ರೀತಿಯಲ್ಲಿ ಹೋಗಬೇಡಿ. ಸಂಸ್ಕೃತ ಭಾಷೆ ಬೆಳೆಯುವುದಕ್ಕೆ ಕಾರಣವೇನು? ಅದನ್ನು ಅರ್ಥ ಮಾಡಿಕೊಂಡು ಭಾಷೆ ಬೆಳೆಯಬೇಕು. ಆ ಜ್ಞಾನದ ಭಂಡಾರ ಎಲ್ಲರಿಗೂ ಸಿಗಬೇಕು ಎನ್ನತಕ್ಕಂಥ ದೃಷ್ಟಿಯಲ್ಲಿ ಮುಂದಿನ ದೃಷ್ಟಿಯನ್ನು ಇಟ್ಟುಕೊಳ್ಳಿ, ಹಿಂದಿನ ದೃಷ್ಟಿಗೆ ಹೋಗಬೇಡಿ. ನೀವು ಅದನ್ನು ಸಾಂಪ್ರದಾಯಿಕ ಪದ್ಧತಿಗಳನ್ನು ಸಂರಕ್ಷಿಸುವುದು, ಪೋಷಿಸುವುದು, ಉತ್ತೇಜಿಸುವುದು ಇದು ಎಲ್ಲಾ ಏನರ್ಥ? ಈ ಶಬ್ದಗಳೆಲ್ಲವನ್ನು ಬಿಡಿ. ಅದರಲ್ಲಿರತಕ್ಕಂಥ ಸಾಹಿತ್ಯ ಮುಂದಕ್ಕೆ ತೆಗೆದುಕೊಂಡು ಹೋಗುವ ಬಗ್ಗೆ

ರೀಸರ್ಚ್ ಮಾಡಿ. That is very important. ಅದಕ್ಕೇನು ವಿಶ್ವವಿದ್ಯಾನಿಲಯ ಬೇಕಾಗಿಲ್ಲ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಸಂಸ್ಕೃತ ವಿಶ್ವವಿದ್ಯಾನಿಲಯ ಏಕೆ ಬೇಕೆಂದರೆ, ಇದನ್ನೆಲ್ಲಾ ಅಧ್ಯಯನ ಮಾಡಲಿಕ್ಕೆ ಬೇಕಾದ scholarಗಳು ತಯಾರಾಗಬೇಕು. ನಾವು ಬರಿ ಅಕ್ಷರಾಭ್ಯಾಸ ಮಾಡಿಸುವುದರಿಂದ ಪಂಡಿತರನ್ನು ತಯಾರು ಮಾಡುವುದಕ್ಕೆ scholar ಗಳನ್ನು ತಯಾರು ಮಾಡುವುದಕ್ಕೆ ಆಗುತ್ತೆ ಎಂದಿಲ್ಲ.

ಅಧ್ಯಕ್ಷರು : ಮಾನ್ಯ ಸಹಕಾರ ಮತ್ತು ತೋಟಗಾರಿಕೆ ಸಚಿವರು ತಮ್ಮ ಸ್ಥಳಗಳಲ್ಲಿ ಕುಳಿತುಕೊಂಡರೆ ಗಾಂಭೀರ್ಯತೆ ಇರುತ್ತದೆಂದು ನನ್ನ ಭಾವನೆ.

ಶ್ರೀ ಸಿ.ಟಿ. ರವಿ : ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಅವಕಾಶವಿದೆ. ನಮ್ಮ ಪಾರಂಪರಿಕ ಜ್ಞಾನ ಭಂಡಾರ ಅಡಗಿರುವಂಥದ್ದು.

ಅಧ್ಯಕ್ಷರು : ಮಾನ್ಯ ರೇಣುಕಾಚಾರ್ಯರವರು ತಮ್ಮ ಸ್ಥಾನದಲ್ಲಿ ಕುಳಿತುಕೊಂಡರೆ ಗಾಂಭೀರ್ಯತೆ ಇರುತ್ತದೆ. ಸಚಿವರುಗಳು ಹೀಗೆ ಮಾಡಿದರೆ ಹೇಗೆ?

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ನಮ್ಮ ಪಾರಂಪರಿಕ ಜ್ಞಾನ ಭಂಡಾರ ಅಡಗಿರುವುದು ಸಂಸ್ಕೃತ ಗ್ರಂಥಗಳಲ್ಲಿ. ಅದನ್ನು ಹೆಕ್ಕಿ ತೆಗೆದು ಅಧ್ಯಯನ ಮಾಡಿ ನಾವು ಭವಿಷ್ಯಕ್ಕೆ ಬಳಸಿಕೊಳ್ಳುವುದಕ್ಕೆ ಆಲೋಚನೆ ಮಾಡದಿದ್ದರೆ ನಮ್ಮ ಪಾರಂಪರಿಕ ಜ್ಞಾನ ಈಗಾಗಲೇ ಹೊರ ದೇಶದವರ ಸ್ವತ್ತಾಗಿರತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ. ಅರಿಶಿಣ ಅದರಲ್ಲಿರತಕ್ಕಂಥ ಔಷಧೀಯ ಗುಣಗಳನ್ನು patent ಮಾಡಿಸಿಕೊಂಡಿರುವುದು ಅಮೆರಿಕಾ ಕಂಪನಿ. ಏಕೆಂದರೆ ಅದು ನಮ್ಮ ಮೈಮರೆವಿನ ಪರಿಣಾಮ. ಇದನ್ನು ಪರಂಪರೆಯಿಂದ ಬಳಸಿರತಕ್ಕಂಥ ಒಂದು ಜ್ಞಾನ ಭಂಡಾರ ನಮ್ಮ ಹತ್ತಿರ ಇದೆ. ಆದರೆ ಅದನ್ನು ನಾವು ಸಮರ್ಥವಾಗಿ ಬಳಸಿಕೊಳ್ಳುವುದರಲ್ಲಿ ವಿಫಲರಾದೆವು. ಹಾಗೆ ಸಂಸ್ಕೃತದ ಗ್ರಂಥಗಳಲ್ಲಿ ನಾವು ಭವಿಷ್ಯಕ್ಕೆ ಬೇಕಾಗುವಂಥ ವರ್ತಮಾನಕ್ಕೆ ಬೇಕಾಗತಕ್ಕಂಥ ಜ್ಞಾನದ ಬಂಡಾರ ಏನಿದೆ? ಆದರೆ ಕೀಲಿ ಕೈಯನ್ನು ನಮ್ಮ ಡಾ: ವಿ.ಎಸ್. ಆಚಾರ್ಯರವರು ಹೇಳಿದ ರೀತಿಯಲ್ಲಿ ಕಳೆದುಕೊಂಡು ಬಿಟ್ಟಿದ್ದೇವೆ. ಆ ಕೀಲಿ ತೆಗೆದು ಆ ಜ್ಞಾನ ಭಂಡಾರವನ್ನು ಜನಸಾಮಾನ್ಯರಿಗೆ ದಕ್ಕಿಸಬೇಕು. ಇನ್ನೊಂದು ಮಾತನ್ನು ಡಾ:ಹೆಚ್.ಸಿ.ಮಹದೇವಪ್ಪನವರು ಸಂವಿಧಾನಕ್ಕೆ ವಿರೋಧವೆಂದು ಹೇಳಿದರು.

ಅವರು ಮರೆತಿದ್ದಾರೆ, ಸ್ವತಃ ಡಾ: ಬಿ.ಆರ್.ಅಂಬೇಡ್ಕರ್‌ರವರು ತಾವು ಸಂಸ್ಕೃತ ಅಧ್ಯಯನ ಮಾಡಲಿಕ್ಕೆ ಕರ್ನಾಟಕದ ಒಬ್ಬ ಸಂಸ್ಕೃತ ಪಂಡಿತರಾದ ನಮ್ಮ ಜಿಲ್ಲೆಯ ಎನ್.ಆರ್.ಪುರ ದವರು, ಅವರು ಮೂಲಕ ಸಂಸ್ಕೃತವನ್ನು ಕಲಿತರು. ಸಂಸ್ಕೃತವನ್ನು ಅಧ್ಯಯನ ಮಾಡಿದರು. ರಾಷ್ಟ್ರಭಾಷೆ ಸಂಸ್ಕೃತ ಅಥವಾ ಹಿಂದು ಆಗಬೇಕು ಎನ್ನುವ ಚರ್ಚೆಯಲ್ಲಿ ಸ್ವತಃ ಡಾ: ಅಂಬೇಡ್ಕರ್ ರವರು ತಮ್ಮ ಅಭಿಪ್ರಾಯ ವನ್ನು ಸಂಸ್ಕೃತ ಭಾಷೆಯ ಪರವಾಗಿ ವ್ಯಕ್ತಪಡಿಸಿದರು ಎನ್ನುವುದನ್ನು ಅವರು ಮರೆಯಬಾರದು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಡಾ: ಮಹದೇವಪ್ಪನವರೆ, ಮಧ್ಯದಲ್ಲಿ ಮಾತನಾಡುವುದು ಬೇಡ, ನೀವು ಆಮೇಲೆ ಮಾತನಾಡಿ. ನಿಮಗೆ ನಾನು ಅವಕಾಶವನ್ನು ಕೊಡುತ್ತೇನೆ. ಬಿಲ್ ಮೇಲೆ ಎಲ್ಲರಿಗೂ ಅವಕಾಶವನ್ನು ಕೊಡುತ್ತೇನೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, "ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು" ಒಂದು ಗಾದೆ ಮಾತು ಇದೆ. ಎಲ್ಲದರಲ್ಲೂ ತಪ್ಪು ಹುಡುಕುವಂತಹ ಮನೋಭಾವನೆಯನ್ನು ಬಿಟ್ಟು ಇದರಿಂದ ಆಗುವಂತಹ ಒಳಿತಿನ ಬಗ್ಗೆ ಯೋಚನೆಯನ್ನು ಮಾಡಬೇಕು. ಇವತ್ತು ಜರ್ಮನ್‌ನಲ್ಲಿ ನಮ್ಮ ಸಂಸ್ಕೃತಿಗೆ ಸಂಬಂಧವಿಲ್ಲದಿರುವಂತಹ ಅಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ತೆರೆದು ಅಲ್ಲಿಯ ವಿದ್ಯಾರ್ಥಿಗಳಿಗೆ ಅಲ್ಲಿ ಅಧ್ಯಯನ ಮಾಡುವಂತಹವರಿಗೆ ಸ್ಕಾಲರ್ ಶಿಪ್‌ನ್ನು ಕೊಡುತ್ತಾರೆ. ಇದಕ್ಕೆ ನಮ್ಮದೇಶದಲ್ಲಿ ಏತಕ್ಕಾಗಿ ವಿರೋಧ? ಈ ವಿರೋಧಿ ಮನೋಭಾವನೆಯನ್ನು ಪೂರ್ವಾಗ್ರಹಪೀಡಿತ ಮನೋಭಾವನೆ ಯಿಂದ ಹೊರಬಂದು ಇದರಿಂದ ಆಗುವಂತಹ ಒಳ್ಳೆಯದರ ಕಡೆಗೆ ಆಲೋಚನೆಯನ್ನು ಮಾಡೋಣ ಆ ಒಳ್ಳೆಯದರ ಕಡೆಗೆ ಆಲೋಚನೆಯನ್ನು ಮಾಡಬೇಕೆಂದರೆ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ತೆರೆಯುವಂತಹ ಸರ್ಕಾರದ ನಿಲುವು ಬಹಳ ಒಳ್ಳೆಯದು ಇದೆ. ಅದಕ್ಕೆ ಮುಕ್ತ ರೀತಿಯಲ್ಲಿ ಅವಕಾಶವನ್ನು ಮಾಡಿಕೊಡಬೇಕೆಂಬ ವಿನಂತಿಯನ್ನು ನಾನು ಮಾಡಿಕೊಳ್ಳು ವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಪುಟ್ಟೇಗೌಡರೆ ತಾವು ಮಾತನಾಡಿ. ಡಾ: ಮಹದೇವಪ್ಪನವರೆ, ನೀವು ಆಮೇಲೆ ಮಾತನಾಡಿ. ನಿಮಗೆ ಅವಕಾಶವನ್ನು ಕೊಡುತ್ತೇನೆ. ಅವರು ಹೇಳುವುದಕ್ಕೆ ನೀವು ಉತ್ತರವನ್ನು ಕೊಡುವುದು ಬೇಡ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ : ಅಧ್ಯಕ್ಷರೆ, ನಾವೆಲ್ಲರೂ ಕಲಿಯುವಂತಹ ಕಾಲಕ್ಕೆ 30 ರಿಂದ 35 ವರ್ಷಕ್ಕೆ ಮೈಸೂರು, ಧಾರವಾಡ, ಬೆಂಗಳೂರು ಎಂದು ಈ ರಾಜ್ಯದಲ್ಲಿ 3 ಯೂನಿವರ್ಸಿಟಿಗಳು ಕಾಣುತ್ತಿತ್ತು. ಇತ್ತೀಚೆಗೆ ಇಂಜಿನಿಯರಿಂಗ್ ಕಾಲೇಜು ಯೂನಿವರ್ಸಿಟಿ, ಮೆಡಿಕಲ್ ಕಾಲೇಜು ಯೂನಿವರ್ಸಿಟಿ, ಇನ್ಯಾರೋ ಜೆ.ಹೆಚ್.ಪಟೇಲ್‌ರವರು ಅಧಿಕಾರಕ್ಕೆ ಬಂದಾಗ ಅವರ ಕಾಲಕ್ಕೊಂದು ಯೂನಿವರ್ಸಿಟಿ, ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಅವರ ಕಾಲಕ್ಕೊಂದು ಯೂನಿವರ್ಸಿಟಿ, ಹೀಗೆ ಈಗ ಇವರು ಸಂಸ್ಕೃತ ಯೂನಿವರ್ಸಿಟಿಯನ್ನು ತೆರೆಯಬೇಕೆಂದು ಹೊರಟಿದ್ದಾರೆ. ಇದನ್ನು 5 ಕೋಟಿ ಜನರ interest ನಿಂದ ಮಾಡಿದರೆ ನನ್ನದೇನು ಆಕ್ಷೇಪಣೆ ಇಲ್ಲ. ಆ ಭಾಷೆಗೆ ನಾನು ವಿರೋಧಿಯು ಕೂಡ ಇಲ್ಲ. ಯಾವುದೋ ಒಂದು ಕಾಲಕ್ಕೆ ಸಂಸ್ಕೃತವನ್ನು ಕಲಿತರೆ, ಪಾಪ ಕೆಲವು ಜನಾಂಗ ಇದನ್ನು ಓದಬಾರದು, ಯಾರೋ ಹಿಂದುಳಿದವರು ಅಥವಾ ಶೂದ್ರರೋ ಓದಬಾರದು ಎಂದು ನಾವು ಕೇಳಿದ್ದೇವೆ. ಇವತ್ತು ಮಕ್ಕಳು ಸಂಸ್ಕೃತ ಕಲಿಯುವುದಕ್ಕೆ ಅವಕಾಶವಿದ್ದು, ಎಲ್ಲಾ ಕಡೆಯಲ್ಲಿಯೂ introduce ಮಾಡಿದ್ದಾರೆ. ಅದನ್ನು ಬಿಟ್ಟು ಇದನ್ನು ಯಾರೋ ಕೆಲವೇ ಜನರ interest ಗೋಸ್ಕರ ಅಥವಾ ಕೆಲವರನ್ನು ಯಾರನ್ನೋ ನೇಮಕ ಮಾಡುವುದಕ್ಕೋಸ್ಕರ ಒಂದು ಯೂನಿವರ್ಸಿಟಿಯನ್ನು ಮಾಡುತ್ತಾ ಕುಳಿತುಕೊಂಡರೆ ಇದಕ್ಕಿಂತ ಮಹತ್ತರವಾದಂತಹ ಕೆಲಸವಿದೆ. ಸಂಸ್ಕೃತವನ್ನು ಕಲಿಯುವುದರಿಂದ ಎಲ್ಲಾ ಜನರಿಗೂ ಕುಡಿಯುವ ನೀರು ಸಿಗುವುದಾದರೆ, ಅಥವಾ ಸಂಸ್ಕೃತವನ್ನು ಕಲಿಯುವುದರಿಂದ ವಿದ್ಯುತ್ ಸಿಕ್ಕುವುದಾದರೆ ದಯಮಾಡಿ ನಾವೆಲ್ಲರೂ ಇದಕ್ಕೆ ಒಪ್ಪಿಗೆಯನ್ನು ಕೊಡುತ್ತೇವೆ. ಸಂಸ್ಕೃತವನ್ನು ಕಲಿಯುವ ಬಗ್ಗೆ Primary School ನಲ್ಲಿ introduce ಮಾಡಿ. interest ಇರುವವರಿಗೆ introduce ಮಾಡಿ, ಅದನ್ನು ಅವರು ಕಲಿಯಲಿ ಸ್ವಾಮಿ, ಈಗ ಏನಾಗಿದೆ ಮಾನ್ಯ ಸದಸ್ಯರಾದ ಶ್ರೀ ಡಿ.ಕೆ. ಶಿವಕುಮಾರ್‌ರವರ ಬಾಯಿಯಲ್ಲಿಯೋ, ನಮ್ಮ ಮೈಸೂರು ಶಾಸಕರಾದ ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡರ ಬಾಯಿಯಲ್ಲಿಯೋ, ಇನ್ಯಾರೋ ಕೆಲವರ ಬಾಯಿಯಲ್ಲಿ ಅದು ಇರುವುದ ರಿಂದ ಆ ಸಂಸ್ಕೃತಕ್ಕೆ ಬಹಳ ಗೌರವ, ಪಾವಿತ್ರತೆ ಕಾಣುತ್ತದೆ. ಅದು ಎಲ್ಲರ ಬಾಯಿಯಲ್ಲಿಯೂ ಬಂದರೆ ಅದಕ್ಕೆ ಪಾವಿತ್ರತೆ ಕಡಿಮೆಯಾಗುತ್ತದೆಯೇನೋ

ಎನ್ನುವಂತಹ ಸಂಶಯ ಕೂಡ ನನಗಿದೆ. ಆ ಭಾಷೆಯ ಬಗ್ಗೆ ನಾವ್ಯಾರು ದ್ವೇಷಿಗಳಲ್ಲ, ಬಹಳ ನಿಜ, ಅದು ಒಂದು ಮೂಲತಃ ಜಗತ್ತಿನ ಸಂಸ್ಕೃತಿಯನ್ನು ಬಿಂಬಿಸುವಂತಹ ಭಾಷೆ ಇರಬಹುದು. ಅದನ್ನು ಕಲಿಸುವುದಕ್ಕೆ ಬೇರೆ ರೂಪವಿದೆ. ಅದಕ್ಕಾಗಿ ನೀವು ಒಂದು ಯೂನಿವರ್ಸಿಟಿಯನ್ನು ಮಾಡಿ ಅದಕ್ಕೆ ಒಂದಿಷ್ಟು ಬಂಡವಾಳವನ್ನು ಹಾಕಿ ಈಗ ಇರುವ ಯೂನಿವರ್ಸಿಟಿಯನ್ನು ಕೆಲವೊಂದಕ್ಕೆ ಕಿವಿ ಇದ್ದರೆ ಮೂಗು ಇಲ್ಲ, ಮೂಗು ಇದ್ದರೆ ಕಿವಿ ಇಲ್ಲದಂತೆ ಯೂನಿವರ್ಸಿಟಿಗಳು ಬಹಳ ಇದೆ ಸ್ವಾಮಿ. ಬಹಳ ಯೂನಿವರ್ಸಿಟಿಗಳಿಗೆ interest ಇಲ್ಲ ಸ್ವಾಮಿ. ಯೂನಿವರ್ಸಿಟಿಗಳಿಗೆ ಕಟ್ಟಡ ಇಲ್ಲ, ಲೆಕ್ಚರರ್ ಇಲ್ಲ. ಅಲ್ಲಿಗೆ ಸೇರಿಕೊಳ್ಳುವಂತಹ ಮಕ್ಕಳು ಇಲ್ಲದಿರುವಂತಹ ಯೂನಿವರ್ಸಿಟಿಗಳನ್ನು ನಾವು ಬಹಳ ನೋಡಿದ್ದೇವೆ. ಆ ಸ್ಥಿತಿಗೆ ತರುವುದಾದರೆ ದಯಮಾಡಿ ಇದನ್ನು ತರುವುದು ಬೇಡ. ನಿಮಗೆ ಸಂಸ್ಕೃತವನ್ನು ಕಲಿಸುವುದಾದರೆ ನೀವು ಎಲ್ಲಾ ಮಕ್ಕಳಿಗೂ ನೀಟಾಗಿ ಬೇಕಾದರೆ ಪ್ರೈಮರಿ ಸ್ಕೂಲ್‌ಗೆ ಇದನ್ನು introduce ಮಾಡಿ, ಹೈಸ್ಕೂಲ್‌ಗೆ ಬೇಕಾದರೂ ಮಾಡಿ ಅದನ್ನು ತಾವು ಅಗತ್ಯವಾಗಿ ಮಾಡಬಹುದು. ಅದನ್ನು ಬಿಟ್ಟು ಯಾರೋ ಕೆಲವೇ ಜನರ interest ಗೋಸ್ಕರ ಯೂನಿವರ್ಸಿಟಿಯನ್ನು ಮಾಡುತ್ತಾ ಹೋದರೆ ಅದು ಕೊನೆಗೆ ಯೂನಿವರ್ಸಿಟಿಗೆ ಇರುವಂತಹ ಗೌರವವು ಹಾಳಾಗುತ್ತದೆ. ದಯಮಾಡಿ ತಾವು ಇದರ ಬಗ್ಗೆ ಪರಿಶೀಲನೆ ಮಾಡಿ. ಸಂಸ್ಕೃತವನ್ನು ಕಲಿಸತಕ್ಕಂತಹ ಸಂಸ್ಥೆಗಳು ಹಲವಾರು ಇವೆ. ಪ್ರೈಮರಿ ಸ್ಕೂಲ್, ಹೈಸ್ಕೂಲ್‌ಗೆ ಬೇಕಾದರೆ ಇದನ್ನು introduce ಮಾಡಿ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಶಿವಕುಮಾರ್‌ರವರನ್ನು ಮಾತನಾಡುವುದಕ್ಕೆ ಕರೆದಿದ್ದೇನೆ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಮಾನ್ಯ ಸಭಾಧ್ಯಕ್ಷರೆ, ನಾನು ಎರಡು ನಿಮಿಷದಲ್ಲಿ ಮಾತನಾಡಿ ಬಿಡುತ್ತೇನೆ. ನಮ್ಮ ದೇಶ ಸಾಹಿತ್ಯ ಮತ್ತು ಸಂಸ್ಕೃತಿಯ ದೇಶ. ಕನ್ನಡ ನಾಡು, ಸಂಸ್ಕೃತಿಯ ಬೀಡು, ಕವಿಕೋಗಿಲೆಗಳ ಗೂಡು, ತನ್ನದೆ ಆಗಿರತಕ್ಕಂತಹ ವೈಯಕ್ತಿಕವಾಗಿರುವಂತಹ ಸಂಸ್ಕೃತಿಯನ್ನು ಹೊಂದಿರುವಂತಹ ನಾಡಾಗಿದೆ. "ಕಂಡಲ್ಲಿ ಗುಣಕ್ಕೆ ಕೈಮುಗಿದು ಕರೆಯುವ ದೈನ್ಯತೆಯ ನಾಡು, ನಮ್ಮ ಕನ್ನಡ ನಾಡು. "ಸಂಸ್ಕೃತ ವಿಶ್ವವಿದ್ಯಾನಿಲಯ

O.32 F-19

ಆಗಲೇಬೇಕು. ಸಂಸ್ಕೃತಿಯಿಂದ ಬರಿದಾದರೆ ನಮ್ಮ ದೇಶದಲ್ಲಿ ಇನ್ನೇನು ಉಳಿಯುವುದಿಲ್ಲ.

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರೆ ತಾವು ಆ ಕಡೆಗೆ ನೋಡಬೇಡಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಸಂಸ್ಕೃತವನ್ನೇ ನಾನು ಮಾತನಾಡುತ್ತಿರುವುದು, ನಾವು ಸಂಸ್ಕೃತವನ್ನೇ ಹೇಳೋಣ. ಸಂಸ್ಕೃತ ವಿಶ್ವವಿದ್ಯಾನಿಲಯವು ಆಗಲೇಬೇಕು. ಈ ನಾಡಿನ ಹಿರಿಮೆಗರಿಮೆಗೆ ಸುಂದರವಾಗಿ ಸಂಸ್ಕೃತವೇ ಬೇಕು, ಅದು ಆಗಲೇ ಬೇಕು, ನಾವು ಅದನ್ನು ಕಳೆದುಕೊಂಡರೆ ಈ ದೇಶದಲ್ಲಿ ಯಾರೂ ಕೂಡ ನೆಮ್ಮದಿಯಿಂದ ಬದುಕುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : Please, ಕುಳಿತುಕೊಳ್ಳಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಏಕೇ ಇವರೆಲ್ಲರೂ ಕೂಗಿಕೊಳ್ಳುತ್ತಿದ್ದಾರೆ. ಎಲ್ಲರೂ ಏಕೆ ನಮ್ಮನ್ನು ಕಂಡರೆ ಹೊಟ್ಟೆ ಉರಿ ಪಡುತ್ತಾರೆ. ಇರುವವರು ಓಲೆಯನ್ನು ಹಾಕಿಕೊಂಡರೆ, ಇಲ್ಲದೆ ಹೋದವರು ಕಿವಿಯನ್ನು ಕಟ್ಟು ಮಾಡಿಕೊಂಡಂತೆ ಆಡುತ್ತಿದ್ದಾರೆ. ನಾನು ಓದಿದ್ದೇನೆ, ತಿಳಿದುಕೊಂಡಿದ್ದೇನೆ. ನಾನು ಮಾತನಾಡುತ್ತೇನೆ,

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರೆ, ನೀವು ಅವರಿಗೆ ಉತ್ತರವನ್ನು ಕೊಡಬೇಡಿ. ಸಾಕು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಸುಮ್ಮನೇ ಈ ರೀತಿಯಾಗಿ ಕೂಗಾಡಿದರೆ ಹೇಗೆ?

ಅಧ್ಯಕ್ಷರು : ಸಾಕು. ನೀವು ಅಲ್ಲಿ ಕೇಳಬೇಡಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : "ಸರ್ವತ್ರಾ ದುರ್ಗಾಣಿ, ಸರ್ವೇ ಭದ್ರಾಣಿ, ಸರ್ವ ಸದ್ಬುದ್ಧಿಮಾಪ್ನೋತು, ಸರ್ವಸರ್ವತ್ರು" ಎಲ್ಲರೂ ಒಳ್ಳೆಯ ಮಾತನ್ನಾಡಬೇಕು, ಒಳ್ಳೆಯ ಬುದ್ದಿಯನ್ನು ಕಲಿಯಬೇಕು, ಎಲ್ಲರೂ ಚೆನ್ನಾಗಿರಬೇಕು, ಸಂಸ್ಕೃತ ಇರಲೇಬೇಕು, ನಮಸ್ಕಾರ.

ಅಧ್ಯಕ್ಷರು : ಆಯಿತು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಕುಮಾರ್‌ರವರು

ಮಾತನಾಡಿದರೆ, I have a got a serious objection. ಮನೆಯಲ್ಲಿ ಸಂಸ್ಕೃತ ಟೀಚರ್‌ನ್ನು ಇಟ್ಟುಕೊಂಡು ಸಂಸ್ಕೃತವನ್ನು ಕಲಿಯುತ್ತಿರುವವರು, ಸಂಸ್ಕೃತ ವಿಶ್ವವಿದ್ಯಾನಿಲಯದ ಪರವಾಗಿ ಮಾತನಾಡಬೇಕು. ತಾವು ಸಂಸ್ಕೃತ ಶ್ಲೋಕವನ್ನು ಹೇಳಿ ಮಾತನ್ನು ಪ್ರಾರಂಭಿಸಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ... ಅವರಿಗೆ ಒಂದು ಶ್ಲೋಕವನ್ನು ಹೇಳಬೇಕಂತೆ.

ಶ್ರೀ ವಿ. ಶ್ರೀನಿವಾಸಪ್ರಸಾದ್ : ಮಾನ್ಯ ಅಧ್ಯಕ್ಷರೆ, ಸಂಸ್ಕೃತದ ಹೆಸರಿನಲ್ಲಿ ಬಹಳ ಮೋಸವನ್ನು ಹೋಗುತ್ತಿದ್ದೆವು. Sanskrit ನಮಗಲ್ಲ ಅನ್ನತಕ್ಕಂತಹ ಒಂದು ಸಾರ್ವಭೌಮತ್ವ, ನಿಮ್ಮ supremacy ಗೋಸ್ಕರ ಇಟ್ಟುಕೊಂಡಿರುವುದು. ಡಾ: ಬಿ.ಆರ್. ಅಂಬೇಡ್ಕರ್‌ರವರು Sanskrit ಅನ್ನು ಕಲಿಯುತ್ತೇನೆಂದರೂ ಕೂಡ, just because he was an untouchable he was refused to learn Sanskrit language. ಪರ್ಷಿಯನ್ language ನ್ನು ಕಲಿತರು. ಅದು ಬೇಕು ನಮಗೆ, ನೀವು ಸಂಸ್ಕೃತದ ಹೆಸರಿನಲ್ಲಿ ಬಹಳ ಮೋಸ ಹೋಗುತ್ತಿದ್ದೀರಿ, ಅದಕ್ಕಾಗಿ ನಮ್ಮ ಜಯಚಂದ್ರರವರು ಸಹ ಹೇಳಿದರು. ತಮ್ಮದು ಯಾವುದೇ ವಿಧಿವಿಧಾನಗಳಲ್ಲಿಯೂ ಕೂಡ ತಾವು ಸಂಸ್ಕೃತ ಶ್ಲೋಕಗಳನ್ನು ಹೇಳುವುದು ನಮಗೆ ಅರ್ಥವಾಗುತ್ತಿರಲಿಲ್ಲ. ಇದೊಂದು dead language ಎಂದು ಹೇಳಿಲ್ಲ ಅವರು. ಆದರೆ Sanskrit ಬೇಕು, ಅದಕ್ಕೋಸ್ಕರ ಒಂದು ಯೂನಿವರ್ಸಿಟಿ ಬೇಕಾಗಿತ್ತೆ ಎನ್ನುವಂತಹ ಪ್ರಶ್ನೆ ಇಲ್ಲಿ ಬಂದಿದೆಯೇ ಹೊರತು Sanskrit ಬೇಡವೆಂದು ಅಲ್ಲ. ಇದು ನಮಗೂ ಕೂಡ ಬೇಕಾಗಿದೆ. ನೀವು ಏನೇನು ಐದು ಸಾವಿರ ವರ್ಷಗಳಿಂದ ಹೇಳಿಕೊಂಡು ಏನಾಗಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಒಂದು ಅವಕಾಶ ನಮಗೆ ಸಿಕ್ಕಿದೆ. ನಾವೆಲ್ಲರೂ ಕೂಡ Sanskrit ನ್ನು ಕಲಿಯ ಬೇಕಾಗಿದೆ. Sanskritನ್ನು ಕಲಿಯುವುದಕ್ಕೋಸ್ಕರ ಅದಕ್ಕೆ ಒಂದು Directorate ಬೇಕು, ಅದಕ್ಕೆ ಬೇಕಾದ ಯಾವುದೇ ರೀತಿಯಾದಂತಹ infrastructure ನ್ನು ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು ಅದನ್ನು ಕೊಡಿ. ಅದಕ್ಕೋಸ್ಕರ ಒಂದು ಯೂನವರ್ಸಿಟಿಯೇ ಬೇಕಾಗಿ ದೆಯೇ? ಯಾವುದೋ ಜರ್ಮನ್‌ದು ಹೇಳುತ್ತಾರೆ, ಯಾವುದೋ ಕಾಲದಲ್ಲಿ Sanskrit ಇತ್ತು. ಈಗ ಅದು ಆಗುತ್ತದೆಯೇ? ಅದು ಸಾಧ್ಯವಿಲ್ಲ, ನಮ್ಮ

ಬಚ್ಚೇಗೌಡರು ಏನೋ ಹೇಳುತ್ತಿದ್ದರು. Don't compare Foreign University with Sanskrit University. ಅದೆಲ್ಲಿ, ಇದೆಲ್ಲಿ ಇರತಕ್ಕಂತಹ ಒಂದು ಭಾಷೆಗೆ ಇವತ್ತು ವಿದೇಶಿ ವಿಶ್ವವಿದ್ಯಾನಿಲಯಗಳು ಏತಕ್ಕಾಗಿ ಬರುತ್ತಿದೆ? We are in the 21st century. ಮನುಷ್ಯ ಆಶ್ಚರ್ಯ ಪಡುವಂತಹ ಯುಗ ಇದು. ವೈಜ್ಞಾನಿಕವಾಗಿರುವಂತಹದ್ದು ಇದೆ, ನಾವೇ ಆಶ್ಚರ್ಯವನ್ನು ಪಡುತ್ತೇವೆ. ದಿನೇ ದಿನೇ ನಮ್ಮ ಸಂಶೋಧನೆಗಳು ನಮ್ಮ ಮುಂದೇ ಪ್ರಶ್ನೆ ಬಂದಿದೆ, ನಮಗೆ ಇಂತಹ ಅದ್ಭುತವಾದಂತಹ ಬುದ್ಧಿಶಕ್ತಿ ಇದೆಯೇ ಎನ್ನುವಂತಹದ್ದು, ಅದನ್ನೇ Knowledge Commission ಮುಖಾಂತರ ಏನಾಗಬೇಕೆಂದು ಮಾಡುತ್ತಿದ್ದೇವೆ. Not with Sanskrit. ಒಂದು ಭಾಷೆಯನ್ನು ತೆಗೆದುಕೊಂಡು ಒಂದು ವಿಶ್ವವಿದ್ಯಾನಿಲಯವನ್ನು ಮಾಡುತ್ತೇನೆ ಎನ್ನುವಂತಹ ಮಟ್ಟಕ್ಕೆ ಹೋಗುವಂತಹದ್ದು ಇದೆಯಲ್ಲಾ ಇದು ಸರಿಯಲ್ಲ, ಇದು ಬೇಡವೆಂದು ನಾವು ಇಲ್ಲಿ ಹೇಳುತ್ತಿರುವುದು.

ಅಧ್ಯಕ್ಷರು : ಮಾನ್ಯ ಶಿವಕುಮಾರ್‌ರವರೆ ತಾವು ಮಾತನಾಡಿ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಬಹಳ ಬಿಸಿಯಾಗಿ ಚರ್ಚೆಯು ಪ್ರಾರಂಭವಾಗುತ್ತದೆ. ನಾವು ನಮ್ಮ ತಾಯಿಯನ್ನು ನೆನೆಸಿಕೊಳ್ಳುತ್ತೇವೆ. "ಅಮ್ಮನ ನೆನಪು, ಪ್ರೀತಿಯ ಮೂಲ, ಗುರುವಿನ ನೆನಪು ಜ್ಞಾನದ ಮೂಲ, ದೇವರ ನೆನಪು ಭಕ್ತಿಯ ಮೂಲ, ಈ ಮೂರರ ನೆನಪು ಮನುಷ್ಯತ್ವದ ಮೂಲ, ಭಾಷೆಯ ನೆಲವು ಸಂಸ್ಕೃತಿಯ ಮೂಲ", ಸಂಸ್ಕೃತವಲ್ಲ ಹಾಗೆಯೇ ನಮ್ಮ ಸಂಸ್ಕೃತಿಯನ್ನು ಉಳಿಸಿ ಕೊಳ್ಳುವುದಕ್ಕೆ ಒಂದು ಕಡೆಯಲ್ಲಿ ಪ್ರಯತ್ನದಲ್ಲಿ ನಾವು ಇದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಸಿ.ಸಿ. ಪಾಟೀಲ್‌ರವರು ಒಂದು ಶ್ಲೋಕವನ್ನು ಹೇಳಿ ಎಂದು ಹೇಳಿದರು. ಇದಕ್ಕೆ add ಮಾಡಬೇಕು, ಇದಕ್ಕೆ ಒಂದು ಗಂಭೀರತೆಯು ಬರಲಿ ಎಂದು ಹೇಳಿದರು. ಭೀಷ್ಮನು ಧರ್ಮರಾಯನಿಗೆ ಒಂದು ಮಾತನ್ನು ಹೇಳುತ್ತಾನೆ. ಏನು ಹೇಳುತ್ತಾನೆಂದರೆ,... ಬೇಕಾದರೆ ಅದನ್ನು ಬರೆದುಕೊಳ್ಳಿ.

ಋಣೈ ಚತ್ರು ಸಂಯುಕ್ತ ಜಾಯಂತೆ ಮಾನವ ಭುವಿ, ಪಿತ್ರು ದೇವರ್ಷಿಮನುಜಯಿ

ತೇಜ್ಯಂ ವೇದಸ್ಯ ಧರ್ಮತಾ" ಎಂದರೆ ಮನುಷ್ಯನು ಹುಟ್ಟುವಾಗ ನಾಲ್ಕು ಋಣಗಳಿಂದ ಹುಟ್ಟುತ್ತಾನಂತೆ. ತಂದೆತಾಯಿಯ ಋಣ, ಒಂದು ದೇವರ ಋಣ, ಒಂದು ಗುರುವಿನ ಋಣ, ಮತ್ತೊಂದು ಸಮಾಜದ ಋಣ"

ಈ ಋಣವನ್ನು ತೀರಿಸಬೇಕಾದರೆ ಧರ್ಮದಿಂದ ತೀರಿಸಬೇಕಂತೆ, ಇವತ್ತು ನಮ್ಮ ಸ್ನೇಹಿತರು ಈ ಋಣವನ್ನು ತೀರಿಸಬೇಕು ನಾವೆಲ್ಲಾ ಬಿಜೆಪಿದು ಕೇಸರಿಕರಣ ಆಗಬಾರದು, ಈಗ ತಾವೇನು ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುತ್ತಿದ್ದೀರಿ, ಇದು Saffronization ಆಗಬಾರದು. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ನೀವು ಬರಿ ಸಂಸ್ಕೃತ, ವಿಶ್ವವಿದ್ಯಾನಿಲಯವನ್ನು ಮಾಡಿದರೆ ನನ್ನದು ವೈಯಕ್ತಿಕವಾಗಿ ಏನು ವಿರೋಧವಿಲ್ಲ. ಇಲ್ಲಿ ತಾವೇನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರೆಂದರೆ, ಸಂಸ್ಕೃತ ವೇದ ವಿಶ್ವವಿದ್ಯಾನಿಲಯವೆಂದು ಪ್ರಾರಂಭ ಮಾಡುತ್ತಿದ್ದೀರಿ. ಸಂಸ್ಕೃತಕ್ಕೂ ವೇದಕ್ಕೂ ಬಹಳ ವ್ಯತ್ಯಾಸವಿದೆ. ಇದರಲ್ಲಿ ಬೇಕಾದಷ್ಟು sub caste ಗಳು ಇದೆ. ಒಕ್ಕಲಿಗರಲ್ಲಿ, ನಾವು ಕುಂಚಟಿಗರು, ಗಂಗಟಕಾರರು, ಇದರಲ್ಲಿಯೂ ಕೂಡ ವೇದ ಸಂಸ್ಕೃತಕ್ಕೂ ಕೂಡ ಬೇಕಾದಷ್ಟು ಇದೆ. ವೀರಶೈವರಲ್ಲಿ ಬಣಜಿಗರು, ಪದ್ಮಶಾಲಿಗಳು, ಬೇರೆ ಬೇರೆ ಇದೆಯಲ್ಲಾ, ಹಾಗೆಯೇ ನಿಮ್ಮ ಬ್ರಾಹ್ಮಣರಲ್ಲಿ ಮಾಧ್ವರು, ಗೌಡರು, ಏನೆಲ್ಲಾ ಇದೆಯಲ್ಲ ಇಲ್ಲಿ ಒಂದು subject ಗೆ ಇದು ಇಲ್ಲಿ ಆಗಬಾರದು. Let this be a Sanskrit University. It is not a Sanskrit University. ಇದು ಸಂಸ್ಕೃತ-ವೇದ ವಿಶ್ವವಿದ್ಯಾನಿಲಯ, ಇದೊಂದು ವೇದಕ್ಕೆ ಮಾತ್ರ ಬಹಳ ಸೀಮಿತವಾಗಿರುತ್ತದೆ. ನಾವೆಲ್ಲರೂ ಇದ್ದೇವೆಂದು ನೀವು ಈ ಬಗ್ಗೆ ಆಮೇಲೆ ಸೇರಿಸಿಕೊಳ್ಳಬಹುದು. ಇದಕ್ಕೆ ಎಲ್ಲಿ pressure ಬಂದಿದೆಯೋ, ಏನು ಬಂದಿದೆಯೋ ಇದರ ಮೂಲ ನನಗೆ ಗೊತ್ತಿದೆ. ಎಲ್ಲಿಂದ ಬಂತು? ಎಲ್ಲಿಂದ ಹುಟ್ಟಿಕೊಂಡಿತು, ಅದರಿಂದ ನಾನು ತಮ್ಮ ಮುಖಾಂತರ ಅವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ನಿನ್ನೆಯ ದಿನ ತಂದರಲ್ಲಾ, ಒಬ್ಬ ಎಸ್‌ಟಿಗೆ, ಎಸ್‌ಟಿಯವರೆಂದು ಹೇಳಿ ಒಂದು ಯೂನಿವರ್ಸಿಟಿಯನ್ನು ಕೊಡುವುದಕ್ಕೆ ಹೋಗುವುದು. ನಾನು ಮಿನಿಸ್ಟರ್ ರವರಿಗೆ ಏನು ಬೇಡವೆಂದು ಹೇಳಿದೆ. ಎಸ್‌ಟಿಯವರಿಗೊಂದು ಯೂನಿವರ್ಸಿಟಿಯನ್ನು ತೆಗೆಯುವುದಾ? 25% ಇರುವಂತಹ ಎಸ್‌ಟಿಯವರಿಗೆ ಒಂದು ಸೀಟು ಕೊಡುವುದಕ್ಕೋಸ್ಕರ ಒಂದು reservation ಮಾಡುತ್ತಿದ್ದಾರೆ. ಇದನ್ನು ಅವರು ಒಪ್ಪಿಕೊಳ್ಳುತ್ತಾರೆಯೇ? ಅದು ಆಗದೆ ಇರುವಂತಹದ್ದು. ಇದು ಬರಿ ವೇದಕ್ಕೆ ಮಾತ್ರ ಆಗಬಾರದು, ಸಂಸ್ಕೃತ ಅಂದರೆ, ಕನ್ನಡ ಭಾಷೆ ಅಂದರೆ ಇದರಲ್ಲಿ ಬೇಕಾದಷ್ಟು ಇರುತ್ತದೆ. ಇಂಗ್ಲೀಷ್‌ನಲ್ಲಿಯೂ ಅಷ್ಟೇ, ಅದಕ್ಕೊಂದು ದೊಡ್ಡ broader outlook ಇರಬೇಕು. ಒಂದು ಸೆಕ್ಷನ್‌ಗೆ ಮಾತ್ರ ವೇದ

ಎನ್ನುವುದು ಇದೆಯಲ್ಲಾ, It is a section in Sanskrit. ನನಗೂ ಅಲ್ಪಸ್ವಲ್ಪ ಗೊತ್ತಿದೆ, ಏಕೆಂದರೆ ನಾನು graduate ಆಗಿದ್ದು at the age of 47. ನಾನು Agriculture by birth, Business is my Profession, but Education is my choice. Till today, ನಾನು ಇಲ್ಲಿ ಮಂತ್ರಿಯೂ ಸಹ ಆಗಿರಬಹುದು, ನಾನು ವಿಧಾನಸೌಧದ ಎದುರು ನಿಂತು ಕ್ಯಾಬಿನೆಟ್ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿರಬಹುದು. ಅದಕ್ಕಿಂತ ನಾನು ಒಬ್ಬ graduate ಆದಾಗ ಆದ ಸಂತೋಷ ಹಾಗೂ ಅದಕ್ಕಿಂತ ದೊಡ್ಡ ಸಂತೋಷ ನಾನು ಮೈಸೂರಿನಲ್ಲಿ ಹೋಗಿ ಡಿಗ್ರಿ ತೆಗೆದುಕೊಂಡಾಗ ಆಯಿತು. ಆದ್ದರಿಂದ education ಬಗ್ಗೆ ಹೆಚ್ಚಿಗೆ ಕಾಳಜಿಕೊಡಬೇಕು. ಈ ದೇಶ, ಈ ಪ್ರಪಂಚದಲ್ಲಿ ಏನಾದರೂ ಒಂದು ಬದಲಾವಣೆಯಾಗಬೇಕಾದರೆ ನಮ್ಮಲ್ಲಿ ಮೂಲಭೂತವಾಗಿ education ಇರಬೇಕು. ಏಕೆಂದರೆ, They can select any type of language whatever they want. ಇದು ತಾಯಿ ಭಾಷೆ, ಇದನ್ನು Subject ಮಾಡುವುದಕ್ಕೆ ಹೋಗಬೇಡಿ. ಇದನ್ನು Saffronization ಮಾಡುವುದಕ್ಕೆ ಹೋಗಬೇಡಿ. ಇದು ಮೂಲ ಇದು ನಮ್ಮನ್ನು ಕಾಡಿಸುತ್ತಿದೆ. ಈ ಸಂದರ್ಭದಲ್ಲಿ ಮಾನ್ಯ ಜಯಚಂದ್ರರವರು ಒಂದು ಮಾತನ್ನು ಹೇಳಿದರು. ನಾನು ಚಿಕ್ಕಮಗಳೂರಿಗೆ ಹೋದಂತಹ ಸಂದರ್ಭದಲ್ಲಿ ಹಿರೇಮಗಳೂರು ಕಣ್ಣನ್ ಅವರ ಬಳಿ ಹೋದೆ. ನನಗೆ ಅರ್ಥವಾಯಿತು. ಅವತ್ತು ಆದಮೇಲೆ ಈ ಸಂದರ್ಭದಲ್ಲಿ ಅವರು ಪ್ರತಿಯೊಂದಕ್ಕೂ ಕೂಡ ಎಲ್ಲಾ ಕನ್ನಡಕ್ಕೆ ತರ್ಜುಮೆ ಮಾಡಿ ಸಾಮಾನ್ಯ ಜನರು ಹೇಗೆ ಪೂಜೆ ಮಾಡಬೇಕು, ತಾವು ಈ ಸಂದರ್ಭದಲ್ಲಿ ನಮ್ಮಲ್ಲಿರುವಂತಹ ಎಲ್ಲಾ ಪುರೋಹಿತರಿಗೆ, ಹಳ್ಳಿಗಳಲ್ಲಿರುವಂತಹ ಪೂಜಾರರುಗಳಿಗೆ, ಮಾರಮ್ಮನಿರು ವಂತಹ ದೇವಸ್ಥಾನಗಳಿಗೆ, ಬೇರೆ ಬೇರೆ ಪಟಾಲದಮ್ಮನ ದೇವಸ್ಥಾನ, ಕಬ್ಬಾಳಮ್ಮನ ದೇವಸ್ಥಾನ, ಅಲ್ಲಿರುವಂತಹ ಪೂಜಾರರುಗಳನ್ನು ಕರೆಸಿ ನಿಮ್ಮ ಸಂಸ್ಕೃತಿ ಏನು, ಯಾವ ರೀತಿ ನೀವು ಪೂಜೆ ಮಾಡಬೇಕು..., ಪಾಪ ಅವರಿಗೇನೂ ಸಂಸ್ಕೃತಿ ಗೊತ್ತಿಲ್ಲ. ಎಲ್ಲಿಯೋ ಕೆಲವೊಂದು ವರ್ಗದವರಿಗೆ ಮಾತ್ರ ಈ ಒಂದು ಭಾಷೆಯ ಮೇಲೆ ಹಿಡಿತವಿದೆ. ಆದ್ದರಿಂದ, ಎಲ್ಲಾ ಜನರು ಕೂಡ ಈ ಸಂಸ್ಕೃತಿಯನ್ನು ಉಳಿಸುವುದಕ್ಕೋಸ್ಕರ ಪೂಜೆ ಯಾವ ರೀತಿ ಮಾಡಬೇಕು, ಅವರು ಮಾಡುವಂತಹ ಆಚಾರ-ವಿಚಾರಗಳನ್ನು ಪ್ರಚಾರ ಮಾಡುವುದಕ್ಕೋಸ್ಕರ ಆ ಭಾಷೆಯ ವಿಚಾರವೇನು, ಸಾರಾಂಶವೇನು ಇದೆ

ಎಂದು ನೋಡುವುದಕ್ಕೋಸ್ಕರ ಈ ಬಗ್ಗೆ ತಾವು ಒಂದು ಚಿಂತನೆಯನ್ನು ಮಾಡಬೇಕು. ಏತೆಂದರೆ, ಕನ್ನಡದಲ್ಲಿ ಕೂಡ ಮದುವೆ ಮಾಡಿಸುವುದು ಇರಬಹುದು, ಬೇರೆ ಯಾವುದೇ ಪುರೋಹಿತ್ಯ ಮಾಡುವಂತಹ ಸಂದರ್ಭದಲ್ಲಿ ಈ ಭಾಷೆಯ ವಿಚಾರವನ್ನು ಜನರಿಗೆ ತಲುಪಿಸುವುದಕ್ಕೆ ತಾವು ಏನಾದರೂ ಒಂದು ಕಾರ್ಯಕ್ರಮವನ್ನು ರೂಪಿಸಬೇಕು ಎಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಕೇಳಿಕೊಂಡು ಈ ವೇದ ವಿಶ್ವವಿದ್ಯಾನಿಲಯವನ್ನು ತೆಗೆದುಹಾಕಿ ಸಂಸ್ಕೃತ ವಿಶ್ವವಿದ್ಯಾನಿಲಯ ವಿಧೇಯಕದ ಮಂಡನೆಗೆ ತಿದ್ದುಪಡಿಗೆ ಅವಕಾಶ ಮಾಡಿಕೊಟ್ಟು, ಇದನ್ನು ಒಂದು ಸೆಕ್ಷನ್‌ಗೆ ಆಗುವಂತೆ ತಾವು ಅವಕಾಶವನ್ನು ಮಾಡಿಕೊಡಬಾರದು, Veda is a part of life. ನಾನು ಇಲ್ಲವೆಂದು ಹೇಳುವುದಿಲ್ಲ. ವಿವಿಧ ರೀತಿಯಲ್ಲಿ ಅವರು ಪ್ರಯತ್ನ ಗಳನ್ನು ಮಾಡುತ್ತಿದ್ದಾರೆ. ಆದರೆ, ಒಟ್ಟಾರೆ ನಾವು ಭಾಷೆಯನ್ನು ಬೇರೆ ಬೇರೆ ಮಾಡುವುದು ಬೇಡ ಅನ್ನುವುದನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಡಾ: ಎ.ಬಿ. ಮಾಲಕರೆಡ್ಡಿ (ಯಾದಗಿರಿ) : ಮಾನ್ಯ ಅಧ್ಯಕ್ಷರೆ, ಸಂಸ್ಕೃತ ವಿಶ್ವವಿದ್ಯಾನಿಲಯದ ಬಗ್ಗೆ ಚರ್ಚೆ ನಡೆದಿದೆ. ಸ್ಥಾಪನೆ ಮಾಡಬೇಕೋ ಅಥವಾ ಬೇಡವೋ ಎಂಬ ಬಗ್ಗೆ ಚರ್ಚೆ ನಡೆದಿದೆ. ಈ ಭಾಗದ ಸದಸ್ಯರು ಇದರ ಅವಶ್ಯಕತೆಯಿಲ್ಲ, ವಿಶ್ವವಿದ್ಯಾನಿಲಯದ ಅವಶ್ಯಕತೆಯನ್ನು ಎಂದು ಹೇಳುತ್ತಾರೆ. ಸಂಸ್ಕೃತ ಕಲಿಯುವಂತಹ ಅವಶ್ಯಕತೆ ಇದೆ. ಆದರೆ, ವಿಶ್ವವಿದ್ಯಾನಿಲಯದ ಅವಶ್ಯಕತೆ ಇಲ್ಲ. ಏಕೆಂದರೆ, ವಿಶ್ವವಿದ್ಯಾನಿಲಯದ concept ಬೇರೆ. ವಿಶ್ವವಿದ್ಯಾನಿಲಯದ concept ಬಿಟ್ಟು ಬೇರೆ ಇನ್ನು ಏನೇನೋ ಮಾಡುತ್ತಿದ್ದೇವೆ. ಆದರೆ, ಅದನ್ನು deviate ಮಾಡುತ್ತೇವೆ. ಏಕೆ ಮಾಡುತ್ತೇವೆ ಎನ್ನುವುದಕ್ಕೂ ಕೂಡ ಕೆಲವು ಕಾರಣಗಳಿವೆ. ವಿಶ್ವವಿದ್ಯಾ ನಿಲಯದ ಪರಿಕಲ್ಪನೆ ಏನು? ಇಡೀ ಜಗತ್ತಿನಲ್ಲಿರತಕ್ಕಂತಹ ಎಲ್ಲಾ ತರಹದ ವಿದ್ಯೆ, ಎಲ್ಲಾ ಶಾಖೆಗಳ ವಿದ್ಯೆ under one roof, ಒಂದೇ ಸಂಸ್ಥೆಯಲ್ಲಿ ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಕಲಿಸುವಂತಹ ಒಂದು ವ್ಯವಸ್ಥೆ. ಅದಕ್ಕೆ ವಿಶ್ವವಿದ್ಯಾನಿಲಯವೆಂದು ಕರೆಯುತ್ತಾರೆ. ವಿಶ್ವದಲ್ಲಿರತಕ್ಕಂತಹ ಎಲ್ಲಾ ವಿದ್ಯೆಗಳನ್ನು knowledge ಅನ್ನು ಒಂದೇ ಸಂಸ್ಥೆಯಲ್ಲಿ ಮಕ್ಕಳಿಗೆ ಕೊಡಬೇಕು. ಅನೇಕ ವಿದ್ಯೆಗಳು overlap ಆಗುತ್ತಿತ್ತು. ಮೊದಲು ಅರಿಸ್ಟಾಟಲ್, ಪ್ಲೂಟೋ ಇದ್ದಾಗ Science subejct ಏನಿದೆ ಅದನ್ನು

philisophy ಯಲ್ಲಿಯೇ ಕಲಿಸುತ್ತಿದ್ದರು. ಆಮೇಲೆ ಕೆಲವು ಸಲ ಬೇರೆ ಬೇರೆಯಾಗಿ Science ನಲ್ಲಿ ಕೂಡ ಬೇರೆ ಬೇರೆ ಆದವು. Science ನಲ್ಲಿ Botany, Zoology, Biology, ಏಕೆ ಆಯಿತು ಹೇಳಿ? ಜ್ಞಾನದ ವಿಸ್ತಾರವಾದಂತೆಲ್ಲಾ ಬೇರೆ ಬೇರೆಯಾಗಿ separate ಆದವು. ಅದರಂತೆ ವಿಶ್ವವಿದ್ಯಾನಿಲಯದ ಪರಿಕಲ್ಪನೆ ಏನು ಎಂದರೆ ಅಲ್ಲಿ ದೇಶದಲ್ಲಿರತಕ್ಕಂತಹ, ನಾಡಿನಲ್ಲಿರತಕ್ಕಂತಹ ಎಲ್ಲಾ ಅಖಂಡ ಪಂಡಿತರು ಒಂದು ಕಡೆ ಸೇರಿ ಅವರ ವಿಚಾರ ವಿನಿಮಯದಿಂದ, ಅವರ ಬೋಧನೆಯಿಂದ ಮಕ್ಕಳಿಗೆ, ವಿದ್ಯಾರ್ಥಿ ಗಳಿಗೆ ಅದರ ಪ್ರಯೋಜನ ದೊರೆಯಲಿ ಎಂಬ ಕಾರಣದಿಂದ ಒಂದು ಉನ್ನತ ಸಂಸ್ಥೆಯನ್ನು ನಾವು ಕಲ್ಪನೆ ಮಾಡಿ ವಿಶ್ವವಿದ್ಯಾನಿಲಯ ಎಂದು ತಿಳಿದುಕೊಂಡು ನಾವು ಸ್ಥಾಪನೆ ಮಾಡಿದ್ದೇವೆ. ಇತ್ತೀಚಿನ ದಿನಗಳಲ್ಲಿ, ನನ್ನ ಜೀವಮಾನದಲ್ಲಿ ನಾನು ಕೂಡ ವಿಶ್ವವಿದ್ಯಾನಿಲಯದ ಅನೇಕ ಅಂಗ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದೇನೆ. ಈಗ ಮೆಡಿಕಲ್ University ಮಾಡಿದ್ದೇವೆ. ತಾಂತ್ರಿಕ ವಿಶ್ವವಿದ್ಯಾನಿಲಯಗಳನ್ನು ಮಾಡಿದ್ದೇವೆ. ಏಕೆ ಮಾಡಿದ್ದೇವೆ ಎಂದರೆ, ನಾನು ಹೇಳಿದ ಕಲ್ಪನೆಗೆ ಸ್ವಲ್ಪ deviation ಆಯಿತು. ಏಕೆ ಆಯಿತು ಎಂದರೆ, top heavy administration, unwieldy administration. ಈಗ ಮೆಡಿಕಲ್ ಕಾಲೇಜಿನಲ್ಲಿ, ವಿಶ್ವವಿದ್ಯಾನಿಲಯದಲ್ಲಿ ಅನೇಕ subjects, ಅನೇಕ ಮೆಡಿಕಲ್ ಕಾಲೇಜುಗಳು, ಕರ್ನಾಟಕದಲ್ಲಿ 28 ಮೆಡಿಕಲ್ ಕಾಲೇಜುಗಳಿವೆ, ಅದರಲ್ಲಿ 12 ಸರ್ಕಾರಿ ಮೆಡಿಕಲ್ ಕಾಲೇಜುಗಳಿವೆ. ಅಲ್ಲಿ ಆಡಳಿತಾತ್ಮಕ ವಿಷಯದಲ್ಲಿ ವಿಪರೀತ ಗೊಂದಲ ನಿರ್ಮಾಣ ಆಗುವುದಕ್ಕೆ ಆಯಿತು, ಕಂಟ್ರೋಲ್ ತಪ್ಪಿತು. ಅದಕ್ಕಾಗಿ separate Medical University ಮಾಡಿದರು. ಈಗ ಕನ್ನಡ ವಿಶ್ವವಿದ್ಯಾನಿಲಯವನ್ನು ಮಾಡಿದ್ದೇವೆ. ಕನ್ನಡ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡತಕ್ಕಂತಹ ಕಲ್ಪನೆ ಬೇರೆ. ಕೇವಲ ಕನ್ನಡ ಕಲಿಸತಕ್ಕಂತಹದ್ದಲ್ಲ. ಇಡೀ ಕರ್ನಾಟಕದ ಇತಿಹಾಸ, ಕರ್ನಾಟಕ ಕಲಾಕ್ಷೇತ್ರದಲ್ಲಿ, music, ಜನಪದ ಕ್ಷೇತ್ರದಲ್ಲಿ, ಜನಪದ ಸಾಹಿತ್ಯದಲ್ಲಿ, ಕರ್ನಾಟಕ ರಾಜ್ಯದಲ್ಲಿ ಇಂತಹ ಎಲ್ಲಾ ಸಂಸ್ಕೃತಿ ಬಗ್ಗೆ ಅಧ್ಯಯನವಾಗಲಿ ಎಂಬ ಕಾರಣದಿಂದ ಅದನ್ನು ಮಾಡಲಾಯಿತು. ಈಗ ಸಂಸ್ಕೃತ ವಿಶ್ವವಿದ್ಯಾನಿಲಯದ ಅವಶ್ಯಕತೆ ಏನಿದೆ? ಒಂದು ವಿಶ್ವವಿದ್ಯಾನಿಲಯ ಎಂದ ಮೇಲೆ ಅದರ ಪರಿಕರಗಳು, regalia, ವೈಭವ, ಅದರ ಸೆನೆಟ್,

ಸಿಂಡಿಕೇಟ್, ಅಕಾಡೆಮಿಕ್, ಕೌನ್ಸಿಲ್, ಈ ಪುಸ್ತಕ ನೋಡಿ. ಇಷ್ಟು ದಪ್ಪ ಇದೆ. ಕರ್ನಾಟಕದಲ್ಲಿ ಇದ್ದಂತಹ ಹಳೆಯ ವಿಶ್ವವಿದ್ಯಾನಿಲಯ ಎಂದರೆ ಮೈಸೂರು ವಿಶ್ವವಿದ್ಯಾನಿಲಯ. ಆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಯಾವ್ಯಾವ ಅಂಗ ಸಂಸ್ಥೆಗಳಿವೆ, ಯಾವ್ಯಾವ ಪರಿಕರಗಳಿವೆ, ಎಲ್ಲವನ್ನೂ ಇದರಲ್ಲಿ ಸೇರಿಸಿದ್ದೇವೆ. Heavy administration, administration structure ಗೆ ಏನು ಹಣ ಖರ್ಚಾಗುತ್ತದೆ, academic captivity ಗೆ ಎಷ್ಟು ಹಣ ಖರ್ಚಾಗುತ್ತದೆ ಅದಕ್ಕಿಂತ ಹೆಚ್ಚಿಗೆ administration ಗೆ ಖರ್ಚಾಗುತ್ತಿದೆ. Horticulture University ಆಯಿತು, Agriculture University ಆಯಿತು, Agriculture University ಯಲ್ಲಿ Horticulture University ಬಂತು. ನಂತರ Veterinary University ಎಂದು ಬಂತು. ನಮ್ಮಲ್ಲಿ ಹಣದ ಕೊರತೆಯಿದೆ. ಆ ಹಣವನ್ನು ಉರ್ದು Universtiy ಯಲ್ಲಿ ಈಗಾಗಲೇ ನಮ್ಮ ಡಾ: ಮಹದೇವಪ್ಪನವರು ಹೇಳಿದ್ದಾರೆ. ಮೈಸೂರು Univeristy ಯಲ್ಲಿ ಸಂಸ್ಕೃತ ಕಲಿಸುತ್ತಾರೆ, ಬೆಂಗಳೂರು University ಯಲ್ಲಿ ಸಂಸ್ಕೃತ ಕಲಿಸುತ್ತಾರೆ. ಗುಲ್ಬರ್ಗಾ University ಯಲ್ಲಿ ಕಲಿಸುತ್ತಾರೆ. ಎಲ್ಲಾ University ಗಳಲ್ಲಿ ಒಂದು department ನಲ್ಲಿ ಕಲಿಸುತ್ತಾರೆ. ಈ ಎಲ್ಲಾ University ಗಳಲ್ಲಿ ದೊರೆಯದೇ ಇರತಕ್ಕಂತಹ ಸಂಸ್ಕೃತವನ್ನು ಈ ಹೊಸ ವಿಶ್ವವಿದ್ಯಾನಿಲಯ ಏನು ಕಲಿಸುತ್ತದೆ ಎನ್ನುವುದಕ್ಕೆ ಸ್ಪಷ್ಟೀಕರಣ ಕೊಡಬೇಕು. ಸಂಸ್ಕೃತಕ್ಕೆ ಏಕೆ ಬೆಲೆ ಬಂತು? ಅದರಲ್ಲಿ ನಾಲ್ಕು ವೇದಗಳು ಸೃಜನೆ ಆಗುತ್ತವೆ ಎಂಬ ದೃಷ್ಟಿಯಿಂದ ಸಂಸ್ಕೃತಕ್ಕೆ ಬೆಲೆ ಬಂತು. ಯಜುರ್ವೇದ, ಋಗ್ವೇದ, ಸಾಮವೇದ ಮತ್ತು ಅಥರ್ವಣವೇದ. ಅಥರ್ವಣವೇದದಲ್ಲಿ ಪ್ರಾಪಂಚಿಕ ವಿದ್ಯೆ ಎಲ್ಲಾ ಬರುತ್ತದೆ ಮತ್ತು ಪುರಾತನ ಕಾಲದಲ್ಲಿ, ಯಾವಾಗ ವಿಜ್ಞಾನ ಅಷ್ಟೊಂದು ವಿಕಾಸ ಆಗಿರಲಿಲ್ಲ ಅಂತಹ ಕಾಲದಲ್ಲಿ ಅದು ಬರಬೇಕಿತ್ತು. ಇರಲಿ, ನಮ್ಮ ಇತಿಹಾಸ, ನಮ್ಮ ಸಂಸ್ಕೃತಿ, ನಮ್ಮ ಪಾರಂಪರಿಕ ಜ್ಞಾನವನ್ನು ನಾವು ತಿಳಿದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಒಳ್ಳೆಯದು. ಆದರೆ, ಇದರಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವುದಕ್ಕೆ ಹಣ ಎಷ್ಟು ಖರ್ಚು ಮಾಡುತ್ತಿದ್ದೀರಿ? ವಿದ್ಯೆಯ ಸಲುವಾಗಿ ಸ್ಥಾಪನೆ ಮಾಡುತ್ತಿದ್ದೀರಿ. ವಿದ್ಯೆಗೆ ನಾವು 1/4th ಖರ್ಚು ಮಾಡುತ್ತಿದ್ದೇವೆ. 3/4th ಈ ಎಲ್ಲಾ administration ಗೆ, building ಗಳಿಗೆ ಖರ್ಚು ಮಾಡುತ್ತಿದ್ದೇವೆ. ಇದು

ಸಾಧನೆ. ಬೇರೆ ಕ್ಷೇತ್ರಗಳಲ್ಲಿ ನಮ್ಮಲ್ಲಿ ಸಾಕಷ್ಟು funds ಇಲ್ಲದೇ ಅನಾನುಕೂಲತೆ ಇದೆ, ಕೊರತೆ ಇದೆ. ಯಾವುದೇ ಒಂದು ಸಂಸ್ಥೆಯಾದ ಕೂಡಲೇ TA, DA ಸಲುವಾಗಿ ಒಂದು ಮೀಟಿಂಗ್ ಮಾಡುತ್ತಾರೆ. TA, DA ಗೆ ಇನ್ನೊಂದು ಒಂದು ಶಾಖೆಯನ್ನು ತಯಾರು ಮಾಡುತ್ತೇವೆ. ಅದರ ಬದಲು ಅಲ್ಲಿ ಕೆಲಸ ಮಾಡತಕ್ಕಂತಹ ಸಿಬ್ಬಂದಿ ವರ್ಗದವರಿಗೆ ಉತ್ತಮವಾದ ವ್ಯವಸ್ಥೆಯನ್ನು ಒದಗಿಸಿಕೊಡುತ್ತಿಲ್ಲ, ಉತ್ತಮವಾದ Library ಇಲ್ಲ, ಒಂದು Library ಗೆ ಹೊಸ ಪುಸ್ತಕಗಳನ್ನು ಕೊಡುವುದಕ್ಕೆ ನಮಗೆ ಸಾಧ್ಯವಿಲ್ಲ. ಮೆಡಿಕಲ್ ಕಾಲೇಜಿನಲ್ಲಿ ನಾನು Health Minister ಆಗಿದ್ದಾಗ, Medical Education Minister ಆಗಿದ್ದಾಗ ಹೊಸ ಹೊಸ Journal ಗಳನ್ನು research ಮಾಡುವುದಕ್ಕೆ PG students ಬೇಕಾಗುತ್ತವೆ. ಹೊಸ ಹೊಸ Journal ಗಳನ್ನು purchase ಮಾಡುವುದಕ್ಕೆ ನಮ್ಮಲ್ಲಿ ಹಣ ಕೊಡುತ್ತಿರಲಿಲ್ಲ. Text book ಗಳನ್ನು ಕೊಂಡುಕೊಳ್ಳುವುದಕ್ಕಿಂತಲೂ Journal ಗಳನ್ನು ಕೊಂಡು ಕೊಳ್ಳುವುದಕ್ಕೆ ಹೆಚ್ಚು ಹಣ ಬೇಕು. ಆ ಹಣವನ್ನು ನಾವು ಕೊಡುತ್ತಿಲ್ಲ. ಆದರೆ, ಮತ್ತೆ ಹೊಸ ಹೊಸ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದು. ಇದು ಎಂತಹ ವಿಪರ್ಯಾಸ. ಕರ್ನಾಟಕ ರಾಜ್ಯದ ಅಸೆಂಬ್ಲಿಯಲ್ಲಿ ವಿಚಾರ ಮಾಡುವುದಕ್ಕೆ ಯಾರೂ ಇಲ್ಲವೇ? We are using the wood for the tree. ಇನ್ನು ಅದೆಲ್ಲವನ್ನೂ ನೋಡಿದರೆ ಎಷ್ಟು ಸೌಂದರ್ಯವಾಗಿ ಕಾಣುತ್ತದೆ. ಅದೇ ಒಂದು ಗಿಡವನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ, that we are losing. ವಿಶ್ವವಿದ್ಯಾನಿಲಯದ ಪರಿಕಲ್ಪನೆಗೆ ದಯಮಾಡಿ ತಾವು ಪೆಟ್ಟು ಕೊಡಬೇಡಿ. ಇದನ್ನು ಇಲ್ಲಿಗೇ ಮುಗಿಸಿ. ಈ ರೂಪದಲ್ಲಿ ಎಷ್ಟು ಕೋಟಿ ಹಣ ಖರ್ಚಾಗುತ್ತದೆ? ಅದರ ಬದಲು ಈ ಒಂದು ಸಂಸ್ಕೃತವನ್ನು ಕಲಿಸುವಂತಹ ವಿಶ್ವವಿದ್ಯಾನಿಲಯಗಳಿಗೆ ಹಣವನ್ನು ಕೊಡಿ. ಅವುಗಳನ್ನು ಬೆಳೆಸಿ. ಅವುಗಳಲ್ಲಿ ಇರಲಾರದಂತಹ ವಿದ್ಯೆ ಹೊಸ ಸಂಸ್ಕೃತ ವಿಶ್ವವಿದ್ಯಾನಿಲಯದಲ್ಲಿ ಏನನ್ನೂ ಕಲಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಅದು ಸೀಮಿತವಾದ ವಿದ್ಯೆ. ಯಾವ ರೀತಿ ಲ್ಯಾಟೀನ್, ಗ್ರೀಕ್ ಅನ್ನು ಬಿಟ್ಟರು, ಏಕೆಂದರೆ, ಅದರಲ್ಲಿ ಹೊಸದಾಗಿ ಕಲಿಸತಕ್ಕಂತಹದ್ದು ಏನೂ ಸಹ ಆ ಭಾಷೆಗಳಲ್ಲಿ ಇಲ್ಲ. ಸಂಸ್ಕೃತ ಕೂಡ ಲ್ಯಾಟೀನ್, ಗ್ರೀಕ್‌ಗಳ ರೀತಿಯಲ್ಲಿ ಒಂದು ಹಳೆಯ ಭಾಷೆ.

(1 - 40 PM)

ಸಂಸ್ಕೃತ ಕೂಡ ಲ್ಯಾಟಿನ್ ಮತ್ತು ಗ್ರಿಕ್ ಭಾಷೆಗಳಂತೆ ಹಳೆ ಭಾಷೆ. ಅಲ್ಲಿ ಏನು ವಿದ್ಯೆ ಇದೆ ಅದನ್ನೆಲ್ಲಾ ಹೊರಗೆ ಹಾಕಿದ್ದಾರೆ. ರಾಮ ಕೃಷ್ಣಪರಮಹಂಸ ಮಿಷನ್ ಅವರು ಹೊರಗೆ ಹಾಕಿದ್ದಾರೆ. ನಿಮ್ಮ ವಿಶ್ವವಿದ್ಯಾ ನಿಲಯಗಳಿಗಿಂತಲೂ ಅವರು ಅತ್ಯಂತ ಉತ್ತಮವಾದಂಥ ಕೆಲಸವನ್ನು ಮಾಡಿದ್ದಾರೆ. ಸಂಸ್ಕೃತ ವಿಶ್ವವಿದ್ಯಾನಿಲಯದ ಶಾಖೆಗಳು ಏನಿವೆ ಅಲ್ಲಿ ಹೋಗಿ ಕಲಿಯಿರಿ ಎಂದು ಅವರಿಗೆ ಹೇಳಿ. ಯಾವ ವಿಶ್ವವಿದ್ಯಾನಿಲಯಕ್ಕೆ ಸಂಬಂಧ ಪಟ್ಟಂತೆ ಪ್ರಿಂಟ್ ಮಾಡಿಲ್ಲ. ಅಂಥವುಗಳನ್ನು ,ಅವರು ಸಂಗ್ರಹ ಮಾಡಿ ಇಟ್ಟಿದ್ದಾರೆ. ಅದಕ್ಕೆ ದಯಮಾಡಿ ವಿಶ್ವವಿದ್ಯಾನಿಲಯ ಬೇಡ. ಸಂಸ್ಕೃತ ಭಾಷೆಯನ್ನು ಕಲಿಯುವುದಕ್ಕೆ ನಾವು ಪ್ರೋತ್ಸಾಹ ಕೊಡೋಣ. ಧನ್ಯವಾದಗಳು.

ಶ್ರೀ ಹೆಚ್. ಡಿ. ರೇವಣ್ಣ (ಹೊಳೇನರಸೀಪುರ) : ಮಾನ್ಯ ಅಧ್ಯಕ್ಷರೆ, ನಾವು ಮಾನ್ಯ ಶಂಕರಲಿಂಗೇಗೌಡರು ಹೇಳಿದ್ದನ್ನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಏನು ಇವತ್ತು ಸಂಸ್ಕೃತ ವೇದ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಬಿಲ್ ಅನ್ನು ತಂದಿದ್ದಾರೆ ಅದಕ್ಕೆ ನಾವೇನೂ ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ, ಇವತ್ತು ವಿಶ್ವವಿದ್ಯಾನಿಲಯವನ್ನು ತೆರೆಯುವುದು ಸೂಕ್ತ ಎನ್ನುವುದು ನನ್ನ ಭಾವನೆ ಇದೆ. ಆದರೆ, ಎಲ್ಲಾ ಬೆಂಗಳೂರಿನಲ್ಲೇ ತೆರೆಯುವುದಕ್ಕೆ ಹೋಗಬೇಡಿ. ವಿಶ್ವವಿದ್ಯಾನಿಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದಕ್ಕೆ ಎಲ್ಲಾ ಪ್ರಾರಂಭಿಕ ಕ್ರಮಗಳನ್ನು ಸಮನ್ವಯ ಕಾರ್ಯಗಳನ್ನು ಮಾಡಲಾಗಿದೆ ಎಂದು ಹೇಳುತ್ತಿದ್ದೀರಿ. ಬೆಂಗಳೂರಿಗೇ ಎಲ್ಲಾ ವಿಶ್ವವಿದ್ಯಾನಿಲಯಗಳನ್ನು ತರುವ ಬದಲು ಮೇಲುಕೋಟೆಯಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳಿವೆ. ಇವತ್ತು ಅಲ್ಲಿ ವಿಧಾನಸಭಾ ಕ್ಷೇತ್ರ ಇದೆ. ಅಲ್ಲೇ ವಿಶ್ವವಿದ್ಯಾನಿಲಯವನ್ನು ಮಾಡುವುದು ಸೂಕ್ತ ಎಂದು ನನ್ನ ಭಾವನೆ ಇದೆ. ನಾವೇನೂ ಇದಕ್ಕೆ ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಹಿಂದೆ ಮಾನ್ಯ ಕುಮಾರ ಸ್ವಾಮಿ ಅವರ ಸರ್ಕಾರ ಇದ್ದಾಗಲೂ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಮಾಡಬೇಕೆನ್ನುವ ಪ್ರಸ್ತಾವನೆ ಬಂದಿತ್ತು. ತಮಗೆ ಗೊತ್ತಿದೆ. ಹಲವಾರು ಬಾರಿ ವಿಧಾನ ಸಭೆಯಲ್ಲಿ ಚರ್ಚೆಯಾಗಿರುವುದೂ ಇದೆ. ಇದಕ್ಕೆ ನಾವೇನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಇದು ಕೇಸರಿ-ಪಾಸರಿ ಎನ್ನುವುದನ್ನು ತೆಗೆದು ಹಾಕಿ ಸಮಾಜದಲ್ಲಿ ಎಲ್ಲರಿಗೂ ಒಂದು ಅವಕಾಶವನ್ನು ಮಾಡಿಕೊಡಬೇಕು ಎನ್ನುವ ದೃಷ್ಟಿಯಲ್ಲಿ

ಮಾಡಿದ್ದಾರೆ. ಇದರಲ್ಲಿ ತಪ್ಪೇನೂ ಇಲ್ಲ. ಆದರೆ ಮೇಲುಕೋಟೆಯಲ್ಲಿ ಎಲ್ಲಾ ಮೂಲಭೂತ ಸೌಕರ್ಯ ಇದೆ ಬೆಂಗಳೂರಿನಲ್ಲಿ ಇದನ್ನು ಮಾಡುವುದು ಬೇಡ. ದಯಮಾಡಿ ಇದಕ್ಕೆ ರಾಜಕೀಯ ಬೆರೆಸುವುದಕ್ಕೆ ಹೋಗಬೇಡಿ. ಇದನ್ನು ಮೇಲುಕೋಟೆಯಲ್ಲಿ ಸ್ಥಾಪನೆ ಮಾಡುವುದು ಸೂಕ್ತ ಎಂದ ಹೇಳಿ ಇದಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಡಾ. ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ) : ಮಾನ್ಯ ಸದಸ್ಯರಾದ ರವಿಯವರು ನಾನು ಸಂವಿಧಾನ ಬಾಹಿರ ಎಂದು ಹೇಳಿದೆ ಎಂದು ಹೇಳಿದರು. ನಾನು ಸಂವಿಧಾನ ಬಾಹಿರ ಎಂದು ಹೇಳಲೇ ಇಲ್ಲ. ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಈ ತರಹ ವಿಶ್ವವಿದ್ಯಾನಿಲಯ ಗಳನ್ನು ತೆರೆಯುತ್ತಿದ್ದಾರೆ ಎಂದು ಹೇಳಿದೆನೆ ಹೊರತು, ಸಂಸ್ಕೃತ ಭಾಷೆ ಸಂವಿಧಾನಕ್ಕೆ ಬಾಹಿರ ಎಂದು ಹೇಳಲಿಲ್ಲ. ಸ್ವತಃ ಡಾ. ಬಿ.ಆರ್. ಅಂಬೇಡ್ಕರ್ ರವರೆ ಸಂಸ್ಕೃತವನ್ನು ಚಿಕ್ಕಮಗಳೂರಿನ ಉಪಾಧ್ಯಾಯರ ಮೂಲಕ ಕಲಿತು ಸಂಸ್ಕೃತ ರಾಷ್ಟ್ರೀಯ ಭಾಷೆಯಾಗಬೇಕೆಂದು ಬಯಸಿದ್ದರು. ಆದರೆ, ನೀವು ಸಂಸ್ಕೃತದ ಇತಿಹಾಸವನ್ನು ನೋಡಿದಾಗ, ಆರ್ಯರು ಮತ್ತು ದ್ರಾವಿಡರ ನಡುವೆ ಇದ್ದಂಥ ವ್ಯತ್ಯಾಸಗಳು racial supremacy ಇವೆಲ್ಲವನ್ನೂ ನೀವು ನೋಡಿದಾಗ ಇದು ಯಾವ ಕಡೆ ಹೋಗುತ್ತಿದೆ ಎನ್ನುವುದಕ್ಕೆ ಚರಿತ್ರೆಯನ್ನು ನೋಡಬೇಕು. ಅ ಹಿನ್ನೆಲೆಯಲ್ಲಿ ನಾನು ಮಾತನಾಡಿದೆ. ವಿಶ್ವವಿದ್ಯಾನಿಲಯದ ಪರಿಕಲ್ಪನೆಯನ್ನು ಪ್ರೊ.ಎ.ಬಿ. ಮಾಲಕರೆಡ್ಡಿ ಅವರು ಹೇಳಿದ ಮೇಲೆ, ಪದೇ ಪದೇ ಒಂದೊಂದು Subject ಗೆ ವಿಶ್ವವಿದ್ಯಾನಿಲಯವನ್ನು ತೆಗೆದುಕೊಂಡು ಬಂದು ಆ ಪರಿಕಲ್ಪನೆಗೆ ಧಕ್ಕೆಯನ್ನುಂಟು ಮಾಡಿ ಇಡೀ ವಿಶ್ವವಿದ್ಯಾನಿಲಯದ ವ್ಯವಸ್ಥೆಯೇ ಕುಸಿದು ಹೋಗುವ ರೀತಿಯಲ್ಲಿ ಈ ಸರ್ಕಾರ ಮಾಡಬಾರದು ಎನ್ನುವುದು ನಮ್ಮ ಅನಿಸಿಕೆ. ಆದ್ದರಿಂದ ಇದಕ್ಕೆ ನಮ್ಮದು ತೀವ್ರ ವಿರೋಧ ಇದೆ. ದಯಮಾಡಿ ಸರ್ಕಾರ ಇಂತಹ ನಿರ್ಣಯವನ್ನು ಮಾಡಬಾರದು.

ಶ್ರೀ ಸಿ.ಎಸ್. ಪುಟ್ಟರಾಜು (ಮೇಲುಕೋಟೆ) : ನಮ್ಮ ನಾಯಕರದಂಥ ಮಾನ್ಯ ರೇವಣ್ಣನವರು ಮಾತನಾಡಿದ ಹಾಗೆ ಬಹುತೇಕ 4–5 ರಾಜ್ಯಪಲರು ಬಂದು ಅಲ್ಲಿ ವಾಸ್ತವ್ಯ ಮಾಡಿ, ಮೇಲುಕೋಟೆಯಲ್ಲಿ Sanskrit Academy ಏನು ನಡೆಯುತ್ತಿದೆ, ಮುಂದೆ ವಿಶ್ವವಿದ್ಯಾನಿಲಯ ಆಗುವಂಥ ಸಂದರ್ಭದಲ್ಲಿ ಅದೇ ಸೂಕ್ತವಾದ ಸ್ಥಳ ಎನ್ನತಕ್ಕಂಥದ್ದನ್ನೂ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದು ಆಗಲೇ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ

ಬಂದಿದೆ. ಇವತ್ತು ಬೆಂಗಳೂರಿನಲ್ಲಿ ಇರುವಂಥ ವ್ಯವಸ್ಥೆಯನ್ನೇ ಸರಿಪಡಿಸಿ ಕೊಂಡು ಓಡಾಡುವುದಕ್ಕೆ ಬಹಳ ಕಷ್ಟವಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಈಗಾಗಲೇ ಬಹಳ ಚೆನ್ನಾಗಿ ಪ್ರಶಂಸೆಗೆ ಒಳಗಾಗಿ ನಮ್ಮ Melkote Sanskrit Academy ಕೆಲಸ ಮಾಡುತ್ತಿರುವುದು ಎಲ್ಲರಿಗೂ ತಿಳಿದಿದೆ. ಮೇಲುಕೋಟೆಯಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳಿವೆ. ನಾಳೆ ಬೆಳಗ್ಗೆಯೇ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುತ್ತೇವೆ ಎಂದರೆ ಪ್ರಾರಂಭ ಮಾಡಬಹುದು ಆ ಮಟ್ಟದಲ್ಲಿ ಕಟ್ಟಡ ಇದೆ, ಜಾಗ ಇದೆ, ಕುಡಿಯುವ ನೀರಿನ ವ್ಯವಸ್ಥೆ ಇದೆ. ಎಲ್ಲಾ ಮೂಲಭೂತ ಸೌಕರ್ಯಗಳು ಇರತಕ್ಕಂಥ ಹಿನ್ನಲೆಯಲ್ಲಿ, ಅದಕ್ಕೂ ಸಾಲದಂತೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮೇಲುಕೋಟೆಯ ಪಕ್ಕದ ಬೂಕನಕೆರೆ ಊರಿನವರು. ಅದರ ಹಿನ್ನಲೆಯಲ್ಲಿ ಅಲ್ಲಿ ಆಗತಕ್ಕಂಥದ್ದೇ ಸೂಕ್ತ ಎಂದು ಬಹುತೇಕ ಎಲ್ಲರ ಅಭಿಪ್ರಾಯವಾಗಿದೆ. ದಯಮಾಡಿ ಸರ್ಕಾರ ಇದನು ಮಾಡುವಂಥ ಸಂದರ್ಭ ಬಂದಾಗ ಅಲ್ಲೇ ಮಾಡಬೇಕೆಂದು ಆ ಕ್ಷೇತ್ರದ ಶಾಸಕನಾಗಿ ಈ ಸದನದ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಡಿ. ಎನ್. ಜೀವರಾಜ್ (ಸರ್ಕಾರದ ಮುಖ್ಯ ಸಂಚೇತಕರು) : ಅವರು ಹೇಳಿದ್ದೆಲ್ಲಾ ಸರಿಯಿದೆ. ಮೇಲುಕೋಟೆಯಲ್ಲಿಯೇ ಮಾಡುವುದಾದರೆ ಶೃಂಗೇರಿಯಲ್ಲಿ ಮಾಡಬಹುದು.

ಶ್ರೀ ಶ್ರೀಕಾಂತ್ ಕುಲಕರ್ಣಿ (ಜಮಖಂಡಿ) : ಮಾನ್ಯ ಅಧ್ಯಕ್ಷರೆ, ಭಾರತ ದೇಶ ಅತ್ಯಂತ ಪ್ರಾಚೀನವಾದಂಥ ದೇಶ. ನಮ್ಮ ಇತಿಹಾಸ ಹೇಳುವ ಆಗೆ, ಸಂಸ್ಕೃತ ಭಾಷೆ ಕೂಡ ಅಷ್ಟೇ ಪ್ರಾಚೀನವಾದದ್ದು. ಇವತ್ತು ಕರ್ನಾಟಕದಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡತಕ್ಕಂಥ ಒಂದು ಪ್ರಯತ್ನ ಸರ್ಕಾರ ಮಾಡಿದ್ದು ಸ್ವಾಗತಾರ್ಹ ಮತ್ತು ಇದು ವಿಳಂಬ ಆಯಿತು ಎಂದು ನನಗೆ ಅನಿಸುತ್ತದೆ. ಸಂಸ್ಕೃತ ಭಾಷೆ, ನಮ್ಮ ಸಂಸ್ಕೃತಿ, ನಮ್ಮ ವಿಚಾರ, ನಮ್ಮ ಜೀವನದ ಮೌಲ್ಯಗಳನ್ನು ಇಡೀ ಜಗತ್ತಿಗೇ ಹೇಳುವಂಥ ಒಂದು ವಿಶೇಷವಾದಂಥ ಭಾಷೆ. ಸಂಸ್ಕೃತ ಭಾಷೆಯಲ್ಲಿ ನಮ್ಮ ಆಧ್ಯಾತ್ಮ, ಪರಂಪರೆ, ನಮ್ಮ ಜೀವನದ ಮೌಲ್ಯಗಳಲ್ಲಿ ಯಾವಾಗಲೂ ಸ್ವಾರ್ಥದ ಬಗ್ಗೆ ಯೋಚನೆ ಮಾಡಿಲ್ಲ. "ಸರ್ವೆ ಜನಾ ಸುಖಿನೋ ಭವಂತು ಸರ್ವೆ ಸಂತು ನಿರಾಮಯಾಃ, ಸರ್ವೆ ಭದ್ರಾಣಿ ಪಶ್ಯಂತು ಮಾ ಕಚ್ಚಿತ್ ದುಃಖ ಭಾಗ್ಗವೇತ್" ಎಂದು ಉನ್ನತವಾದಂಥ ವಿಚಾರವನ್ನು ಜಗತ್ತಿಗೆ ಹೇಳಿದಂಥ ಒಂದು ಸಂಸ್ಕೃತ ನಮ್ಮದು. ಹೀಗಾಗಿ ಈ ಸಂಸ್ಕೃತ ಭಾಷೆ ನಮ್ಮ ದೇಶದ

ಹಿರಿಮೆಯನ್ನು, ಗರಿಮೆಯನ್ನು ಜಗತ್ತಿಗೇ ತಿಳಿಸುವಂಥ ಭಾಷೆ. ಮಾನವೀಯತೆಗೆ ಮಾಂಗಲ್ಯವನ್ನು ಕಟ್ಟತಕ್ಕಂಥ ವಿಚಾರವನ್ನು ತಿಳಿಸುವಂಥ ಭಾಷೆ. ಅನೇಕ ವಿದೇಶಿಯವರು ಭಾರತ ದೇಶಕ್ಕೆ ಬಂದು ಸಂಸ್ಕೃತವನ್ನು ಕಲಿಯಬೇಕೆನ್ನುವ ಅಭಿಲಾಷೆಯನ್ನು ವ್ಯಕ್ತಪಡಿಸಿರುವುದನ್ನು ನಾವು ಪತ್ರಿಕೆಯಲ್ಲಿ ಓದುತ್ತೇವೆ. ಆದರೆ, ನಮ್ಮ ಈ ಪ್ರಾಚೀನ ಭಾಷೆಗೆ ಅದನ್ನು ಅರ್ಥ ಮಾಡಿಕೊಂಡು, ನಮ್ಮ ಮುಂದಿನ ಪೀಳಿಗೆಗೆ ಅದನ್ನು ತಿಳಿದುಕೊಂಡು ತಮ್ಮ ಜೀವನದಲ್ಲಿ ವಿಶೇಷವಾದಂಥದ್ದನ್ನು ಏನಾದರೂ ಸಾಧನೆ ಮಾಡಬೇಕೆಂದರೆ ಕರ್ನಾಟಕದಲ್ಲಿ ಈ ಸಂಸ್ಕೃತ ವಿಶ್ವವಿದ್ಯಾನಿಲಯ ಅವಶ್ಯವೆಂದು ಹೇಳಿ, ಸರ್ಕಾರ ತಂದಿರುವಂಥ ಈ ಒಂದು ಸಂಸ್ಕೃತ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ನನ್ನ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಎ.ಎಸ್. ಪಾಟೀಲ್ (ದೇವರಹಿಪ್ಪರಗಿ) : ಸನ್ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಸುಮಾರು 10 ವರ್ಷಗಳ ಕಾಲ ಸಂಸ್ಕೃತವನ್ನು ಅಧ್ಯಾಯನ ಮಾಡಿದ್ದೇನೆ. ಸಂಸ್ಕೃತ ಭಾಷೆ ಪ್ರಾಚೀನ ಭಾಷೆ. ಸಂಸ್ಕೃತ ನಮ್ಮ ದೇಶದ ಬಹಳ ಒಂದು ಪ್ರಾಚೀನವಾದಂಥ ಸಂಸ್ಕೃತಿಯನ್ನು, ಇತಿಹಾಸವನ್ನು ಬಿಂಬಿಸತಕ್ಕ ಭಾಷೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಈ ಭಾಷೆ ಮೊದಲು ಕೇವಲ ಕೆಲವರ ಸ್ವತ್ತಾಗಿತ್ತು ಅಷ್ಟೆ. ಯಾವಾಗ ಬಸವಣ್ಣನವರ ಕಾಲದಿಂದ ಕರ್ನಾಟಕದಲ್ಲಿ ಸಾಮಾಜಿಕ ಕ್ರಾಂತಿ ಬಂದ ಮೇಲೆ ಬಹುಶಃ ಸಂಸ್ಕೃತ ಭಾಷೆಯನ್ನು ಓದುವುದಕ್ಕೆ, ಇನ್ನೊಂದು ಜನಾಂಗಕ್ಕೆ ಅವಕಾಶ ಸಿಕ್ಕಿತು. ಅಲ್ಲಿಯವರೆಗೆ ಕೆಲವರ ಕಪಿ ಮುಷ್ಟಿಯಲ್ಲಿ ಮಾತ್ರ ಈ ಭಾಷೆ ಇತ್ತು. ಆದರೆ ಇವತ್ತು ಭಾಷೆಯ ಮೇಲೆ ಸಂಶೋಧನೆ ಮಾಡುವುದಕ್ಕೆ ವಿಶ್ವವಿದ್ಯಾನಿಲಯಗಳ ಅವಶ್ಯಕತೆ ಇಲ್ಲ. ಬಹುಶಃ ಸಂಸ್ಕೃತವನ್ನು ಕಲಿಯುವುದಕ್ಕೆ ಸಾಕಷ್ಟು ಅವಕಾಶಗಳು ಕರ್ನಾಟಕದಲ್ಲಿ ಇದೆ, ವಿಶ್ವವಿದ್ಯಾನಿಲಯದ ಮಟ್ಟದಲ್ಲಿಯೂ ಇದೆ, ಡಿಗ್ರಿ ಮಟ್ಟದಲ್ಲಿಯೂ ಇದೆ ಮತ್ತು ಪ್ರಾಥಮಿಕ ಶಾಲೆಗಳಿಂದ ಹೈಸ್ಕೂಲ್‌ವರೆಗೂ ಕಲಿಯುವುದಕ್ಕೆ ಇವತ್ತು ಅನೇಕ ಅವಕಾಶ ಇರಬೇಕಾದರೆ, ಬಹುಶಃ ಕೇವಲ ಒಂದು ಭಾಷೆಯನ್ನು ಸಂಶೋಧನೆ ಮಾಡುವ ಅವಶ್ಯಕತೆ ನಮಗೆ ಇಲ್ಲ. ಏಕೆಂದರೆ ನಾವು ಈಗಾಗಲೇ ಸಂಸ್ಕೃತ ಭಾಷೆಯನ್ನು ಕರ್ನಾಟಕದ ಎಲ್ಲಾ ಕಾಲೇಜುಗಳಲ್ಲಿ ಕಲಿಯುವುದಕ್ಕೆ ಮುಕ್ತವಾದಂಥ ಅವಕಾಶ ಇರುವುದರಿಂದ ವಿಶ್ವವಿದ್ಯಾನಿಲಯದ ಸ್ಥಾಪನೆಯ ಅವಶ್ಯಕತೆ ಇಲ್ಲ ಎನ್ನುವ ನನ್ನ ಭಾವನೆಯನ್ನು ವ್ಯಕ್ತಪಡಿಸುತ್ತೇನೆ.

ಡಾ. ವಿ.ಎಸ್. ಆಚಾರ್ಯ (ಗೃಹ ಮತ್ತು ಮುಜರಾಯಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಕುಮಾರ್ ಅವರ ಮಾತಿನಿಂದ ಮತ್ತು ಇತರ ಅನೇಕ ಗೌರವಾನ್ವಿತ ಸದಸ್ಯರ ಮಾತು ಕೇಳಿದ ಮೇಲೆ ಇದರ ಬಗ್ಗೆ ಐದು ನಿಮಿಷ ಮಾತನಾಡುತ್ತೇನೆ. ನಮ್ಮ ಕರ್ನಾಟಕ ಇವತ್ತು ಒಂದು 'ಜ್ಞಾನಾಧಾರಿತ' (Knowledge State), 'ಜ್ಞಾನಭರಿತ ರಾಜ್ಯ' ಎಂಬ ಕೀರ್ತಿಗೆ ಪಾತ್ರವಾಗಿದೆ. ಅಂಥದ್ದರಲ್ಲಿ ಎಲ್ಲಾ ಭಾಷೆಗಳು ಎಲ್ಲಾ ಜ್ಞಾನದ ಉಗಮ ಎಂದು ನಂಬಿಕೊಂಡು ಬಂದಿರುವಂತಹ ಭಾರತೀಯ ಒಂದು ಸ್ವಂತ ವಿಶೇಷತೆ ಸಂಸ್ಕೃತ ಭಾಷೆಯಲ್ಲಿ ಇರುವುದು ನಮಗೆಲ್ಲಾ ತಿಳಿದಿದೆ.

ಆ ಭಾಷೆಯಲ್ಲಿ ಮಾನ್ಯ ಶಿವಕುಮಾರ್‌ರವರು ಹೇಳಿದ ಹಾಗೆ ಬರೀ ವೇದ ವೇದಾಂತ ಮಾತ್ರ ಅಲ್ಲ. ಅದು ಒಂದು ಸಣ್ಣ ಭಾಗ. ಸಾಹಿತ್ಯ, ವ್ಯೋಮ, ವೈದ್ಯ, ಲೋಹ, ರಸಾಯನ, ಗಣಿತ ಜ್ಞಾನದ ಒಂದೊಂದು ಮಗ್ಗುಲನ್ನು ನೋಡಿದರೂ, ವಿಶೇಷವಾದಂತಹ ಜ್ಞಾನ ಅದರಲ್ಲಿ ಇದೆ. ಇವತ್ತು definitions change ಆಗುವಂತಹ ಒಂದು ಕಾಲ ಘಟ್ಟದಲ್ಲಿ ನಾವಿದ್ದೇವೆ. Time is so fast changing that definitions are getting changed. ಅಂಥದ್ದರಲ್ಲಿ ನಾನು ಒಬ್ಬ ಡಾಕ್ಟರ್, ನಾನು 50 ವರ್ಷಗಳ ಹಿಂದೆ ಕಲಿತವನು. Mentally fit, physically fit ಎನ್ನುವಂತಹ ಸರ್ಟಿಫೀಕೇಟ್ ಕೊಟ್ಟುಬಿಡುತ್ತೇವೆ. ಆದರೆ ಈಗ ಹಾಗಲ್ಲ, ಮೂರನೇ ಆಯಾಮ ಬಂದಿದೆ, Social well being 1980-82ನೇ ಇಸವಿ ಸಂದರ್ಭದಲ್ಲಿ ಬಂದಿತು. ಅದು ನಮ್ಮ Community medicine ಪುಸ್ತಕಕ್ಕೆ ಬರುವಾಗ ಅವರೆಲ್ಲ ಅಲ್ಲಿ ಹೋಗಿ UNESCO ಮತ್ತು WHO ದವರು ಹೇಳಿ ಬಂದಿತು. ಐದು ವರ್ಷಗಳ ಮೇಲೆ ಅಂದರೆ ಈಗ ಸುಮಾರು 30 ವರ್ಷಗಳ ಹಿಂದೆ ನಾಲ್ಕನೇ dimension ಬಂದಿತು. Spiritual well being, ಆದ್ಯಾತ್ಮಿಕ ಸ್ವಾಸ್ಥ್ಯ ಎಂದು. ಈ Social well being and spiritual well being ಎಂದು ಬಂದ ಮೇಲೆ ಅಡಿಯಲ್ಲಿ astick ಹಾಕಿ foot note ಬರೆದರು. 'This was in vogue in ancient India as depicted by Charaka and Sushrutha' ಎಂದು. ಇವತ್ತು ವೈಜ್ಞಾನಿಕವಾಗಿ ಮುಂದೆ ಹೋಗಿದ್ದೇವೆಂದು ಹೇಳುವವರೂ ಸಹ ಅವರು ನಮ್ಮ ಬುಡಕ್ಕೆ ಹೋಗುವಾಗ ಭಾರತೀಯ ಮೂಲದ ಜ್ಞಾನವನ್ನು ಅರಸಿಕೊಂಡು ಇದು

ನಿತ್ಯ ಸತ್ಯ ಎಂದು ಹೇಳುವಂತಹ ಮಟ್ಟಕ್ಕೆ ಬಂದಿದ್ದಾರೆ. ಅಂಥದ್ದರಲ್ಲಿ ನೀವು ಬಹಳ ತಿಳಿದವರು ಹಾಗೆಲ್ಲಾ ಮಾಡಬಾರದು. ನಮಗೆ ಗೊತ್ತಿಲ್ಲದೆ ಇದ್ದದ್ದು ಇಲ್ಲವೇ ಇಲ್ಲವೆಂದು ಹೇಳುವಂತಹ ವಾದ ಮಾಡಬಾರದು. ನಾನು ಆಗಲೇ ಹೇಳಿದ ಹಾಗೆ ಸಂಸ್ಕೃತ ಜ್ಞಾನ ಭಂಡಾರದ ಕೀಲಿ ಕೈ. ಈ ಶಬ್ದ ನನ್ನದಲ್ಲ. 12 ವರ್ಷಗಳ ಹಿಂದೆ ನಮ್ಮ ಮಣಿಪಾಲದ ಬ್ರಹ್ಮಾ ಎಂದು ಹೇಳುವಂತಹ ನಾವೆಲ್ಲಾ ಗೌರವಿಸುವಂತಹ ಡಾ: T.M.A. ಪೈ ರವರ ಶತಮಾನೋತ್ಸವ ಅಚರಣೆಗೆ ಭಾರತ ಸರ್ಕಾರದ Human resources Development Minister ಬಂದಿದ್ದರು. ಅವರು ಆ ಸಂದರ್ಭದಲ್ಲಿ ಒಂದು ಗಂಟೆ ಕಾಲ ನಿರರ್ಗಳವಾದ ಭಾಷಣ ಮಾಡಿದರು. ಅದು ಕೊನೆಗೆ ಒಂದು ಪುಸ್ತಕವೂ ಆಯಿತು. ಅದರಲ್ಲಿ ನಿಜವಾಗಿಯೂ ಅತ್ಯಮೂಲ್ಯವಾದ ವಿಷಯಗಳು ಇವೆ.

ಒಂದು ವಿಷಯ ಹೇಳಿದರು ಎಲ್ಲಾ ಅತ್ಯಾಧುನಿಕ ವಿಷಯಗಳು ಮುಂಚೆ ಗೊತ್ತಿದ್ದವು. ಒಂದು ಕಾಲದಲ್ಲಿ ಇಡೀ ಜಗತ್ತು ಕಣ್ಣು ತೆರೆದಿದ್ದಾಗ ಭಾರತ ಗುರುಸ್ಥಾನದಲ್ಲಿತ್ತು. ಆದರೆ ನಾವು ಮರೆತು ಬಿಟ್ಟಿದ್ದೇವೆ. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಒಬ್ಬ ಒಂದು ಪೆಟ್ಟಿಗೆ ಮೇಲೆ ಕೂತಿದ್ದಾನೆ, ಆ ಪೆಟ್ಟಿಗೆ ಮೇಲೆ ಕೂತು ರೋ ಎಂದು ಅಳುತ್ತಿದ್ದಾನೆ, ರಾತ್ರಿಗೆ ಊಟಕ್ಕೆ ಏನು, ನಾಳೆಗೆ ಊಟಕ್ಕೆ ಏನು ಎಂದು ಬಡತನದ ಬಗ್ಗೆ ಅಳುತ್ತಿದ್ದಾನೆ, but the fellow does not know what is there inside. ಆ ಪೆಟ್ಟಿಗೆ ಯಾವುದರ ಮೇಲೆ ಕುಳಿತಿದ್ದಾನೆ ಅದರೊಳಗೆ ಏನಿದೆ ಎಂದು ಗೊತ್ತಿಲ್ಲ. ಏಕೆಂದರೆ ಪೆಟ್ಟಿಗೆ ಬಾಗಿಲು ತೆಗೆಯುವಂತಹ ಸಂದರ್ಭ ಅವನಿಗೂ ಬರಲಿಲ್ಲ, ಅವನ ತಂದೆಗೂ ಬರಲಿಲ್ಲ, ಬಹುಶಃ ಅಜ್ಜನಿಗೂ ಬರಲಿಲ್ಲ. ಏಕೆಂದರೆ ಪೆಟ್ಟಿಗೆ ಕೀಲಿ ಕೈ ಬಿಸಾಡಿ ಹೋಗಿದೆ, ಆದರೆ ಆ ಪೆಟ್ಟಿಗೆ ಒಳಗೆ ಬೆಳ್ಳಿ, ಬಂಗಾರ, ವಜ್ರ, ವೈಡೂರ್ಯ, ಎಲ್ಲಾ ಇದೆ, ಅಂತಹ ಸಂಸ್ಕೃತದ ಜ್ಞಾನ ಭಂಡಾರ ಇವತ್ತು ಜಗತ್ತಿನ ಇಡೀ ಜ್ಞಾನದ ಉಗಮ ಎಂದು ಹೇಳುವಂತಹ ಜ್ಞಾನ ಭಂಡಾರದ ಬೀಗದ ಕೈ ನಮ್ಮ ಮಕ್ಕಳಿಗೆ ಇಲ್ಲದೆ ಇದ್ದುದರಿಂದ ನಮ್ಮ ಇಡೀ ವ್ಯವಸ್ಥೆ ಜ್ಞಾನದಿಂದ ವಂಚಿತವಾಗಿದೆ ಎನ್ನುವಂತಹ ಮಾತನ್ನು ಹೇಳಿದರು. ಮಾನ್ಯ ವೀರೇಂದ್ರ ಹೆಗ್ಗಡೆಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅವರು ಹೇಳಿದರು, ಇಂತಹ ಒಂದು ಮಾತು ಭಾರತ ಸರ್ಕಾರ. . . .

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ತಾವು ಅದನ್ನು ಒಬ್ಬರ ಸ್ವತ್ತಾಗಿ ತೆಗೆದು ಇಟ್ಟುಕೊಂಡಿದ್ದಿರಿ.

ಅಧ್ಯಕ್ಷರು : ಅವರು ಮುಗಿಸಲಿ, ತಾವು ಹಿರಿಯ ಸದಸ್ಯರಿದ್ದೀರಿ. It is not fair. ಮಾನ್ಯ ಶ್ರೀನಿವಾಸ್‌ಪ್ರಸಾದ್‌ರವರು ತಾವು ಹಿರಿಯ ಸದಸ್ಯರಿದ್ದೀರಿ. ಕೊನೇ ಪಕ್ಷ ಅನುಮತಿ ಕೇಳಿ ಮಾತನಾಡಬೇಕು. ತಾವು ಹಿರಿತ ಸದಸ್ಯರಾಗಿ ಮಧ್ಯೆ ಮಧ್ಯೆ interfere ಆಗುತ್ತೀರಿ? ತಾವು ಮಾತನಾಡಿದ್ದೀರಿ. He has got every right to defend.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಅವರು ಹೇಳಿದ್ದಕ್ಕೂ ಸಮಾಧಾನ ಹೇಳುತ್ತೇನೆ. ನಾನು ಹೇಳುತ್ತಿದ್ದೆ, ಅವರ ಮಾತು ಕೇಳಿ ನಮ್ಮೆಲ್ಲರ ಪರವಾಗಿ ಹೆಗಡೆಯವರು ಹೇಳಿದರು, ಇಂತಹ ಒಬ್ಬ ಭಾರತ ದೇಶದ ಶಿಕ್ಷಣ ಸಚಿವರ ಈ ಮಾತನ್ನು ಕೇಳಬೇಕಾದರೆ ದೇಶ 50 ವರ್ಷ ಕಾಯಬೇಕಾಯಿತು ಎಂದು ಹೇಳುವಂತಹ ಮಾತನ್ನು ಹೇಳಿದರು. ತಾವು ಒಂದು ವರ್ಗಕ್ಕೆ ಏಕೆ ಇಟ್ಟಿದ್ದೀರಿ ಎಂದು ಹೇಳಿದಿರಿ, ಸಂಸ್ಕೃತ ಭಾಷೆಯಲ್ಲಿ ಇಲ್ಲಿಯವರೆಗೆ ಅತ್ಯಾಧುನಿಕ ಸಾಹಿತ್ಯ ಮಾಡಿದಂತಹ ವ್ಯಾಸ, ಕಾಳಿದಾಸ, ವಾಲ್ಮೀಖಿ ಇವರು ಯಾರೂ ಬ್ರಾಹ್ಮಣರೂ ಅಲ್ಲ, ಅಥವಾ ನೀವು ಎಣಿಸಿರತಕ್ಕಂತಹ ಮೇಲ್ವರ್ಗದವರೂ ಅಲ್ಲ. ಇವರೆಲ್ಲಾ ಯಾರೆಂದು ತಮಗೂ ಗೊತ್ತಿದೆ. ಅದೇ ರೀತಿ ಇನ್ನೂ ಅನೇಕ ಜನ ಇದ್ದಾರೆ. ಹಾಗಾಗಿ ನನ್ನ ವಿನಂತಿ, ನಾನು ಹಳೇ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದಂತಹ ಕರ್ನಾಟಕದ ಭಾಗದಿಂದ ನಾನು ಬಂದವನು. ತಾವು ಇಷ್ಟು ಮಾತನಾಡುವಾಗ ನಾನು interfere ಮಾಡಲಿಲ್ಲ. ಮದ್ರಾಸ್ ಪ್ರಾಂತ್ಯದಲ್ಲಿ ನಾವಿದ್ದಾಗ ನಮ್ಮ ಜಿಲ್ಲೆಯಿಂದ ಮೂರು full pledged ಸಂಸ್ಕೃತ ಮಹಾ ವಿದ್ಯಾಲಯ ಕಾಲೇಜುಗಳಿದ್ದವು. ಉಡುಪಿಯಲ್ಲಿತ್ತು, ಕಾರ್ಕಳದಲ್ಲಿತ್ತು, ಪೆರಡಾಲದಲ್ಲಿತ್ತು. ಆ ಕಾಲೇಜಿನಲ್ಲಿ Post Graduationವರೆಗೆ ಇದ್ದು, ಮದ್ರಾಸ್ ವಿಶ್ವವಿದ್ಯಾನಿಲಯಕ್ಕೆ ಸೇರಿಕೊಂಡು ಇತ್ತು. ಅಲ್ಲಿ ತಯಾರಾದಂತಹ ವಿದ್ವಾಂಸರು ಇಡೀ ಕರ್ನಾಟಕದ ಭಾಷೆಗೆ ವಿದ್ವಾಂಸರಾಗಿ ನೇತೃತ್ವನ್ನು ಕೊಟ್ಟಂತಹವರು. ಇವತ್ತು ಆ ಕಾಲೇಜು ನಾವು ಇಲ್ಲಿ middle class ಗೆ ಬಂದ ಮೇಲೆ ನಮಗೆ ಮೊದಲೇ ಹೇಳಿದರು, ನಾವು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೋಗುತ್ತೇವೆಂದು ಇದ್ದೆವು, ಅವರು ಅವಕಾಶ ಕೊಡಲಿಲ್ಲ. ಆ ಮೇಲೆ ಸೆಕೆಂಡರಿ ಸ್ಕೂಲ್‌ಗೆ ಬಂದೆವು, Post Graduation ಇದ್ದದ್ದು ಸ್ನಾತಕೋತರ ಅಧ್ಯಯನ ಮಾಡುತ್ತಿರುವ ಒಂದು ಕಾಲೇಜಿನ ಒಂದು ಹಂತ ಇಲ್ಲಿಯ ಸೆಕೆಂಡರಿ ಸ್ಕೂಲ್‌ಗೆ ಬಂದಿತು. ಅಲ್ಲಿ ನಾನು ವಿಷಾದದಿಂದ ಹೇಳುತ್ತೇನೆ.

O.32 F-21

ಬಹು ವರ್ಷ ತೀರಾ ಇತ್ತೀಚಿನವರೆಗೆ ಸಂಸ್ಕೃತ ಎಲ್ಲಿತ್ತು ಎಂದರೆ, Urdu and other minorities languages ಅನ್ನು ಒಬ್ಬ Director ಅಡಿಯಲ್ಲಿ Secondary Education ನಲ್ಲಿತ್ತು. ಅಂದರೆ ನಮ್ಮ ಕಣ್ಣೆದುರಿನಲ್ಲಿ ಯಾವ ರೀತಿ ಅದರ ಅಧ್ಯಯನ ಆಯಿತು ಎಂದು. ಮಹಾರಾಷ್ಟ್ರದ ಮುಂಬೈ ಪ್ರಾಂತ್ಯದಿಂದ ಬಂದಿರತಕ್ಕಂತಹವರು ಸಾಕಷ್ಟು ಜನ ಇದ್ದಾರೆ. ಹೈಸ್ಕೂಲ್‌ನ ವರೆಗೆ ಸಂಸ್ಕೃತ ಅಲ್ಲಿ ಕಡ್ಡಾಯವಾಗಿ ಕಲಿಸಲಾಗುತ್ತಿತ್ತು. ನಮ್ಮ ಅಣ್ಣನೇ ಭಟ್ಕಳದಲ್ಲಿ ಯಾಹ್ಯಾ ಸಾಹೇಬರ ಹೈಸ್ಕೂಲ್‌ನಲ್ಲಿ 35 ವರ್ಷ ಸಂಸ್ಕೃತ ವಿದ್ವಾಂಸರಾಗಿ ಅಲ್ಲಿ ಪಾಠ ಮಾಡುತ್ತಿದ್ದರು. ಭಾಷೆ ಬಗ್ಗೆ ತಮಗೆ allergy ಇರಬಾರದು. ಇವತ್ತು ನಾನು ವಿನಂತಿ ಮಾಡುತ್ತಿರುವುದು ಮಾನ್ಯ ಶಿವಕುಮಾರ್‌ರವರು ಹೇಳಿದರು, ಸಂಸ್ಕೃತ ವೇದಾಂತ ಇದೆ, ಇದು ವೇದ ಮಾತ್ರ ಅಲ್ಲ, ಇವತ್ತು ಅನೇಕ ಜ್ಞಾನದ ಭಂಡಾರಗಳು ಇರತಕ್ಕಂತಹ ಸಂದರ್ಭದಲ್ಲಿ ಇಲ್ಲಿ ಎರಡು ಪ್ರಶ್ನೆಗಳು ಬಂದವು.

ಶ್ರೀ ಸಿದ್ದರಾಮಯ್ಯ : ನೀವೇ ಉತ್ತರ ಕೊಟ್ಟರೆ ಹೇಗೆ? ನಾವೂ ಮಾತನಾಡುವವರೆಗೆ ಇರಲಿ, ಇವರೇ ಉತ್ತರ ಕೊಡುತ್ತಿದ್ದಾರೆ.

ಡಾ: ವಿ.ಎಸ್. ಆಚಾರ್ಯ : ಇಲ್ಲ ನಾನು ಉತ್ತರ ಕೊಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ನೀವೆಲ್ಲಾ ಇಲ್ಲಿ ಅವರಿಗೆ ವಕಾಲತ್ ಕೊಟ್ಟು ಕುಳಿತಿದ್ದೀರಿ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಿದ್ದರಾಮಯ್ಯರವರೇ, ಮಾನ್ಯ ಅರವಿಂದ ಲಿಂಬಾವಳಿರವರೇ ಉತ್ತರ ಕೊಡುತ್ತಾರೆ. ಮಾನ್ಯ ಡಿ.ಕೆ. ಶಿವಕುಮಾರ್‌ರವರು ಹಾಗೂ ಮಾನ್ಯ ಶ್ರೀನಿವಾಸಪ್ರಸಾದ್‌ರವರು ಏನು ಕೇಳಿದರು ಅದಕ್ಕೆ ಅವರು clarification ಕೊಡುತ್ತಾರೆ. It is legislation ಎಲ್ಲರೂ participate ಮಾಡಬಹುದಲ್ಲ. ಮಾನ್ಯ ಶ್ರೀನಿವಾಸಪ್ರಸಾದ್‌ರವರೇ, Law ನಲ್ಲಿ 'interpretation of statutes' ಎಂದು ಒಂದು ಇದೆ. ಈ ಸದನದಲ್ಲಿ 'misinterpretation of opinions' ಎಂದು ಇದೆ.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಭಾಷೆ ಬಗ್ಗೆ ಬಹಳ ಅಭಿಮಾನವೂ ಇರಬಾರದು, ದುರಭಿಮಾನವೂ ಇರಬಾರದು, ಸ್ವಾಭಿಮಾನ ಬೇಕು. ಕನ್ನಡ ಸಹಿತ ಅನೇಕ ಭಾಷೆಗಳ ವಿಕಸನಕ್ಕೆ ಮೌಲ್ಯವರ್ಧನೆಗೆ ಸಂಸ್ಕೃತ ಎಷ್ಟು ನೆರವಾಗಿದೆ ಎಂದು ಹೇಳುವಂಥದ್ದು ನಮಗೆ ಗೊತ್ತು. ನಾವು ಅದರ ಫಲಾನುಭವಿಗಳು. ಕೊಂಕಣಿಯಲ್ಲಿದೆ, ಮಲಯಾಳಂನಲ್ಲಿದೆ, ಸಂಸ್ಕೃತ

ಭೂಷಿತವಾಗಿರುವುದು ಇದೆ. ನಿರ್ದೇಶನಾಲಯ ಆಡಳಿತ ವ್ಯವಸ್ಥೆಯ ಒಂದು ಹಂತ ಅದು, ಅದು ಬೇರೆ. ಆದರೆ ವಿಶ್ವವಿದ್ಯಾನಿಲಯ ಎಂದರೆ, it gives scope wide research, study ಎಲ್ಲಾ ದೃಷ್ಟಿಯಿಂದ ಹಾಗಾಗಿ ನಾವು ಸಂಸ್ಕೃತ ವಿಶ್ವವಿದ್ಯಾನಿಲಯ ಮಾಡುವಂಥದ್ದು ಬಹಳ ಸೂಕ್ತವಾದ ಒಂದು ನಿರ್ಣಯ.

ಡಾ: ಹೆಚ್.ಸಿ. ಮಹಾದೇವಪ್ಪ : ತಾವು ಇವತ್ತು ತಿಳಿದುಕೊಂಡಿದ್ದೀರಿ. ಸರಿಯಾದ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಲ್ಲದೆ, ನೀವು ವಿಶ್ವವಿದ್ಯಾನಿಲಯ ಮಾಡುವುದು ನಿಮಗೆ ಶೋಭೆ ತರುವುದಿಲ್ಲ. ಏಕೆಂದರೆ, you are a learned man. ನಮ್ಮ apprehension ಎಲ್ಲಿದೆ ಎಂದರೆ, this Government wants to control the masses through language and religions. You want to supress the entire state.

ಡಾ ವಿ.ಎಸ್. ಆಚಾರ್ಯ : ಅದರ ಬಗ್ಗೆ ಪೂರ್ವ ತಯಾರಿ ಮಾಡಲಿಕ್ಕೆ ಒಬ್ಬರನ್ನು ನೇಮಕ ಮಾಡಿದವರೇ ಮಲ್ಲೇಪುರ ವೆಂಕಟೇಶ್ ಎಂದು ಅವರು ಯಾವ ವರ್ಗದ ಪರ ಎಂದು ನೀವು ನಿಂತು ಮಾತನಾಡುತ್ತಿದ್ದೀರಿ, ಆ ವರ್ಗದಿಂದಲೇ ಬಂದಿರತಕ್ಕಂತಹವರು.

ಡಾ: ಹೆಚ್.ಸಿ. ಮಹಾದೇವಪ್ಪ : Language ಗೆ ಒಂದರಂತೆ ವಿಶ್ವವಿದ್ಯಾನಿಲಯ ತೆಗೆಯುತ್ತೀರಾ?

ಡಾ: ವಿ.ಎಸ್. ಆಚಾರ್ಯ : ಪಕ್ಕದಲ್ಲಿಯೇ ನಿಮ್ಮ ಸ್ನೇಹಿತರಿದ್ದಾರೆ, ಅವರು ಉರ್ದು ವಿಶ್ವವಿದ್ಯಾನಿಲಯ ಬೇಕೆಂದು ಹೇಳುತ್ತಿದ್ದಾರೆ. ನಾನು ಅದಕ್ಕೆ ವಿರೋಧ ಏನೂ ಮಾತನಾಡಲಿಲ್ಲ. Let us have open mind. ನಾನು ತಮ್ಮ ಹತ್ತಿರ ಇಷ್ಟೇ ಕೇಳತಕ್ಕದ್ದು, ನಮ್ಮ ಹಿಂದಿನ ಕಾಲದಿಂದ ಜ್ಞಾನ ವಿಜ್ಞಾನ ಅಥವಾ ತಿಳುವಳಿಕೆ ಎಲ್ಲಿಂದಲೇ ಬರಲಿ ನಮ್ಮ ಕಿಟಕಿ ಬಾಗಿಲನ್ನು ತೆರೆದು ಇಡುವ ಎಂದು ಹೇಳುವುದಿದೆ. ಆದ್ದರಿಂದ ವೇದವೆಂದು ಹೇಳುವುದನ್ನು delete ಮಾಡು ವುದಕ್ಕೆ ಏನೂ ಆತಂಕ ಇಲ್ಲ. ನೀವು ಹೇಳಿರುವುದು ಸರಿಯಗಿದೆ, ನಿಮ್ಮ ಪರವಾಗಿಯೇ ನಾನು ಮಾತನಾಡಲು ಹೊರಟಿದ್ದೇನೆ. ಬರೇ ವೇದಾಂತ ಎಂದರೆ ಅದೊಂದೇ ಅಲ್ಲ. ಇಡೀ ಜ್ಞಾನ ಭಂಡಾರ it has very broad spectrum. ಆದ್ದರಿಂದ ಅದನ್ನು ನಾವು ಮಾಡಿರುವುದು ಸೂಕ್ತವಾಗಿದೆ.

ಶ್ರೀ ಡಿ.ಕೆ. ಶಿವಕುಮರ್ : ತಾವು ಈ ಹಿಂದೆ ಮೆಡಿಕಲ್ ಎಜ್ಯುಕೇಷನ್ ಸಚಿವರಾಗಿದ್ದೀರಿ. ಮೆಡಿಕಲ್ ಎಜ್ಯುಕೇಷನ್ ಒಂದು. ಅದನ್ನು ಬಿಟ್ಟು ಡೆಂಟಲ್‌ಗೆ ಒಂದು, ನರ್ಸಿಂಗ್‌ಗೆ ಒಂದು, ಯುನಾನಿಗೆ ಒಂದು, ಆಯುರ್ವೇದಕ್ಕೆ ಒಂದನ್ನು ಮಾಡಲು ಆಗುತ್ತದೆಯೇ? ಹಾಗೆಯೇ ಸಂಸ್ಕೃತದಲ್ಲೂ ಕೂಡ ವೇದ astrology ಇದೆ. There are lots of other things.

Dr. V.S. Acharya : These are days of Specialization and super specialization.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರು, ಈ ಸರ್ಕಾರ ಏನು ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುತ್ತೇವೆಂದು ಸಂಸ್ಕೃತ ವೇದ ವಿಶ್ವವಿದ್ಯಾಲಯ ವಿಧೇಯಕವನ್ನು ತಂದಿದ್ದಾರೆ. ಇದರ ಬಗ್ಗೆ ಕಳೆದ ಮೂರ್‍ನಾಕು ತಿಂಗಳಿನಿಂದ ಹೊರಗಡೆ ಯಲ್ಲಾ ಚರ್ಚೆ ನಡೆದಿದೆ. ವಿದ್ವಾಂಶರುಗಳು ಸಹ ಚರ್ಚೆಯಲ್ಲಿ ಭಾಗವಹಿಸಿ ಪತ್ರಿಕೆಗಳಿಗೆ ಲೇಖನಗಳನ್ನೂ ಬರೆದಿದ್ದಾರೆ. ಪರವಾಗಿಯೂ ಬರೆದಿದ್ದಾರೆ, ವಿರೋಧವಾಗಿಯೂ ಬರೆದಿದ್ದಾರೆ. ಬಹುಶಃ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಸುಮಾರು 20–30 ದಿವಸಗಳ ಕಾಲ ಪರ ವಿರೋಧವಾದಂಥ ಲೇಖನಗಳೇ ಬಂತು. ಅದರಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಬೇಕು ಎಂದು ಕೆಲವರು ವಾದ ಮಾಡಿದ್ದಾರೆ. ಕೆಲವರು ಬೇಕಾಗಿಲ್ಲವೆಂದು ವಾದ ಮಾಡಿದ್ದಾರೆ. ಅನೇಕ ಜನ ಕನ್ನಡ ನಾಡಿನ ಸಾಹಿತಿಗಳು ಸಂಸ್ಕೃತ ಭಾಷೆ, ವಿ.ವಿ. ಬೇಡ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿ ಸರ್ಕಾರಕ್ಕೂ ತಿಳಿಸಿದ್ದಾರೆ. ಇವರು ಮೊದಲು ಸಂಸ್ಕೃತ ಮಾಡುತ್ತೇವೆಂದು ಘೋಷಣೆ ಮಾಡಿದರು. ಅನಂತರ ಈಗ ಸಂಸ್ಕೃತ, ವೇದ ವಿಶ್ವವಿದ್ಯಾನಿಲಯ ಎಂದು ಮಾಡಿದ್ದಾರೆ. ಸಂಸ್ಕೃತ ಬೇರೆ ಭಾಷೆ, ವೇದ ಬೇರೆ ಭಾಷೆಯೇ? ಸಂಸ್ಕೃತ ಇಲ್ಲದೆ ವೇದ ಇಲ್ಲ ವೇದ ಇಲ್ಲದೆಯೇ ಸಂಸ್ಕೃತ ಇಲ್ಲ. ಸಂಸ್ಕೃತ ಎಂದರೆಯೇ ವೇದ. ವೇದಗಳು ಸಮಾಜದಲ್ಲಿ ಏನು ಮಾಡಿದ್ದಾವೆ? ಬಹುಸಂಖ್ಯಾತ ಜನರನ್ನು ಅಕ್ಷರ ಸಂಸ್ಕೃತಿಯಿಂದ ಸಂಸ್ಕೃತ ಭಾಷೆಯಿಂದ ದೂರ ಇಟ್ಟಿದ್ದಂಥವು. ಅದರ ಪರಿಣಾಮವೇ ಇವತ್ತು ನಮ್ಮ ದೇಶದಲ್ಲಿ ಜಾತಿ ವ್ಯವಸ್ಥೆ, ವರ್ಗದ ವ್ಯವಸ್ಥೆ, ಸಾಮಾಜಿಕ, ಆರ್ಥಿಕ ಅಸಮಾನತೆಯನ್ನು ಇವತ್ತಿಗೂ ಪರಿಹಾರ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಬ್ರಿಟಿಷರು ಬರುವುದಕ್ಕಿಂತಾ ಮೊದಲು ಬಹುಸಂಖ್ಯಾತ ವರ್ಗದವರಿಗೆ, ಶೂದ್ರವರ್ಗದ

ಜನರಿಗ್ಯಾರಿಗೂ ಅಕ್ಷರ ಸಂಸ್ಕೃತಿ ಇರಲಿಲ್ಲ. ಶೂದ್ರರಿಗೆ ಅಕ್ಷರವನ್ನು ಕಲಿಯುವುದಕ್ಕೆ ಅವಕಾಶವೇ ಇರಲಿಲ್ಲ. ನಿಮಗಷ್ಟೇ ಇತ್ತು. ಪುರೋಹಿತಶಾಹಿ ವರ್ಗದವರಿಗೆ ಇತ್ತು. ಪುರೋಹಿತಶಾಹಿ ಎಂದರೆ ಅದು ಒಂದು ಜಾತಿಯಲ್ಲ. ಅದು ಬ್ರಾಹ್ಮಣರು ಎಂದು ನಾನು ಹೇಳುವುದಿಲ್ಲ. ಅದು ಒಂದು ಸಮುದಾಯ. ಪ್ರತಿಗಾಮಿ ಸಿದ್ಧಾಂತವನ್ನು ಪ್ರತಿಪಾದನೆ ಮಾಡಿದಂಥ ಒಂದು ವರ್ಗ. ವೈಚಾರಿಕ ದಿವಾಳಿತನದಿಂದ ಕೂಡಿದ್ದಂಥ ಸಾಮಾಜಿಕ ಅಸಮಾನತೆ ವ್ಯವಸ್ಥೆಯನ್ನು ಪ್ರತಿಪಾದನೆ ಮಾಡಿದಂಥ ಆ ಒಂದು ಸಿದ್ಧಾಂತವನ್ನೇ ನಾವು ಪುರೋಹಿತಶಾಹಿ ಪ್ರತಿಗಾಮಿ ಸಿದ್ಧಾಂತವೆಂದು ಕರೆಯುತ್ತೇವೆ. ಆ ಸಿದ್ಧಾಂತ ವನ್ನು ಪೋಷಣೆ ಮಾಡಿದ್ದು, ಬೆಳೆಸಿದ್ದು ನಮ್ಮ ವೇದಗಳೇ. ಅದಕ್ಕೆ ರಾಜಾರಾಂ ಮೋಹನ್ ರಾಯ್‌ರವರು ಸತಿ ಪದ್ಧತಿಯನ್ನು ವಿರೋಧ ಮಾಡಿದವರು, modern India ಬಗ್ಗೆ ಪ್ರತಿಪಾದನೆ ಮಾಡಿದವರು, ಇದನ್ನು ನಾನು ಹೇಳಿದ್ದಲ್ಲ, ಅವರು ಸಂಸ್ಕೃತಾಭಿಮಾನಿಗಳಿಂದ ದೇಶ ಈವರೆಗೆ ಸಾಧಿಸಿದ ವೈಚಾರಿಕ ದಿವಾಳಿತನ, ಸಾಮಾಜಿಕ ಅಸಮಾನಕ್ಕೆ, ರಾಜಕೀಯ ಅನೈಕಮತ್ಯ ಮುಂತಾದ ಪಿಡುಗುಗಳನ್ನು ಹತ್ತಿಕ್ಕಲು English ಭಾಷೆಯ ಕಲಿಕೆ, English ಸಾಹಿತ್ಯ ಅಧ್ಯಯನ, ವಿಜ್ಞಾನದಲ್ಲಿ ಶಿಕ್ಷಣ, ಕೃಷಿ ಸಾಹಿತ್ಯ ಮೌಲ್ಯಗಳ ಅರಿವು ಇತ್ಯಾದಿಗಳ ಅಗತ್ಯವೆಂದು ರಾಯ್‌ರವರು ವಾದಿಸಿದರು. ಸಂಸ್ಕೃತಕ್ಕೆ ಸರ್ಕಾರದ ಪುರಸ್ಕಾರ ಬೇಡವೆಂದರಲ್ಲದೆ, English ಶಿಕ್ಷಣ ಅಭಿಯಾನ ಕೈಗೊಂಡು ಈ ನಿಟ್ಟಿನಲ್ಲಿ British ಸರ್ಕಾರವನ್ನು ಒಪ್ಪಿಸಿದರು. ಸಂಪ್ರದಾಯವಾದಿಗಳು, ಅವರ ಜೀವಕ್ಕೆ ಒಡ್ಡಿದ ಬೆದರಿಕೆಯನ್ನೂ ಲೆಕ್ಕಿಸದೇ ಶ್ರಮಿಸಿ ತಮ್ಮ ಗುರಿ ಸಾಧಿಸಿದರು". ಇದು ರಾಜಾರಾಂ ಮೋಹನ್ ರಾಯರು ಹೇಳಿರುವ ವಿಚಾರ. ಸಂಸ್ಕೃತ ಕಲಿಯುವುದಕ್ಕೆ ನಮ್ಮ ವಿರೋಧವಿಲ್ಲ. I am not against Sanskrit. ಯಾರಿಗೋಸ್ಕರ ಈ ವೇದ ಮತ್ತು ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತಿದ್ದೀರಿ? ಕಾಲೇಜುಗಳಿಲ್ಲವೇ? ಬೇಕಾದವರು ಎಲ್ಲರೂ ಕಲಿಯಲಿ. ಸಂಸ್ಕೃತವನ್ನು ಪ್ರಥಮ ಭಾಷೆಯನ್ನಾಗಿ ಮಾಡಬೇಕೆಂದು ಗೋಕಾಕ್ ಸಮಿತಿಯವರು ಗುಂಡೂರಾವ್‌ರವರ ಕಾಲದಲ್ಲಿ ಒಂದು ವರದಿಯನ್ನು ಕೊಟ್ಟರು. ಆಗ ಇಡೀ ರಾಜ್ಯದಲ್ಲಿ ದೊಡ್ಡ ಚಳವಳಿ ಯಾಯಿತು. ಆಗ ಕನ್ನಡವೊಂದೇ ಪ್ರಥಮ ಭಾಷೆಯಾಗಬೇಕೆಂದು ಗೋಕಾಕ್ ಸಮಿತಿಯವರು ವರದಿ ಕೊಟ್ಟರು. ಆಮೇಲೆ, High Court ಗೆ ಹೋದರು.

ಆಗ ಅಲ್ಪಸಂಖ್ಯಾತರ ಭಾಷೆಗಳಿಗೂ ಕೂಡ ಪ್ರಾತಿನಿಧ್ಯ ಇರಬೇಕೆಂದು ತೀರ್ಪು ಕೊಟ್ಟರು.

(2-10 PM)

ಆಮೇಲೆ ಅಲ್ಲಿಂದ ಈಚೆಗೆ ಬೇರೆ ತರಹ ಆಗಿದೆ. It is a different thing. ಮಾನ್ಯ ಅಧ್ಯಕ್ಷರೆ, ನಾನೇನು ಹೇಳುತ್ತಿದ್ದೇನೆ ಎಂದರೆ, Sanskrit ಅನ್ನು ಈಗಾಗಲೇ, ಅವರೇ ಹೇಳಿದ ಹಾಗೆ, ಕರ್ನಾಟಕದಲ್ಲಿ ಸುಮಾರು ಕಾಲೇಜುಗಳಲ್ಲಿ ಕಲಿಸುತ್ತಿದ್ದಾರೆ. ಆ ಕಾಲೇಜುಗಳ ಜೊತೆಗೆ 7 ಯೂನಿವರ್ಸಿಟಿಗಳಲ್ಲೂ ಕೂಡ ಸಂಸ್ಕೃತ ಅಧ್ಯಯನ ಕೇಂದ್ರಗಳಿವೆ. We are spending lot of money on that. All the teaching staff put together will be more than the number of students. ಎಲ್ಲಾ ಕಾಲೇಜ್‌ಗಳಲ್ಲಿ ಇರತಕ್ಕಂಥ ಸಂಸ್ಕೃತ ವಿಭಾಗಗಳಲ್ಲಿ ವಿದ್ಯಾರ್ಥಿಗಳಿಗಿಂತ ಬೋಧಕರೇ ಜಾಸ್ತಿ ಇದ್ದಾರೆ. ನೀವು ಇವತ್ತೇ ಕೇಳಿಬಿಟ್ಟು ಹೇಳಿ. Bangalore University ಯಲ್ಲಿ how many professors and lecturers are there? How many students are there? Likewise ask in Mysore University, ask in Karnataka University, ask in Tumkur University, ask in Gulbarga University. ನೀವು ಎಲ್ಲಾ ಕಡೆಯೂ ಕೇಳಿ. There are more number of teachers than the students. ಅಂದರೆ ಇದು ಬಹುಸಂಖ್ಯಾತರು ಕಲಿಯುವ ಭಾಷೆಯೇ? ಬಹುಸಂಖ್ಯಾತರಿಗೆ ಇದರಿಂದ ಉಪಯೋಗವಾಗುತ್ತದೆ, ಎಲ್ಲಾ ಬಳಕೆದಾರರ ಭಾಷೆ ಇದು ಎನ್ನುವಂತಾದ್ದು ಆಗಿದ್ದರೆ, lot of students would have joined. Why students are not joining? ಅಲ್ಲಿ ಸಂಸ್ಕೃತ ಅಧ್ಯಯನ ವಿಭಾಗ ಇದೆಯಲ್ಲಾ, ಏಕೆ ಅಲ್ಲಿಗೆ ಹೋಗುತ್ತಿಲ್ಲ? ಈ ರೀತಿ ಇರುವಾಗ, Why do you want a University? ಏಕೆ ಬೇಕು ಯೂನಿವರ್ಸಿಟಿ? ಸಂಸ್ಕೃತ ಕಲಿಯುವವರು, ಆಸಕ್ತಿ ಇರುವವರು, ಸಂಶೋಧನೆ ಮಾಡುವವರು, ಜ್ಞಾನ ಹೆಚ್ಚಿಸಿಕೊಳ್ಳುವವರು, ಅದನ್ನು ಕಲಿಯಲಿ. I don't say Sanskrit is a dead language. ಇದೊಂದು ಪ್ರಾಚೀನ ಭಾಷೆಯೆಂದೂ ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಬಚ್ಚೇಗೌಡರೆ, ಇದಕ್ಕಿಂತ ಪ್ರಾಚೀನವಾಗಿರುವ ಮೂಲ ದ್ರಾವಿಡ ಭಾಷೆಗಳಿವೆ. ಪ್ರಾಕೃತ ಭಾಷೆ ಯಾವುದು? ಪಾಲಿ ಭಾಷೆ ಯಾವುದು? ಪ್ರಾಕೃತ ಭಾಷೆ, ಅದೊಂದು ದೊಡ್ಡ ಸಮೃದ್ಧವಾದಂತಹ ಭಾಷೆ. ಬುದ್ಧ ಪಾಲಿ ಭಾಷೆಯಲ್ಲೇ

ಹೇಳಿದ್ದು. ಪ್ರಾಕೃತ ಭಾಷೆ, ಪಾಲಿ ಭಾಷೆ are more loder than Sanskrit. ಸಂಸ್ಕೃತದ ಬಗ್ಗೆ ಭ್ರಮೆ ಬೆಳೆಸಿಕೊಂಡಿರುವವರು ಮಾನ್ಯ ಕುವೆಂಪುರವರು ಹೇಳಿದ್ದನ್ನು ಕೇಳಬೇಕು. ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದಾಗ 'ತಮಿಳು ಪಾಠಗಳು' ಎಂಬ ಗ್ರಂಥಕ್ಕೆ ಅವರೇ ಮುನ್ನುಡಿ ಬರೆದಿದ್ದಾರೆ. ರಾಷ್ಟ್ರಕವಿ ಕುವೆಂಪುರವರು 'ಭಾರತೀಯ ಭಾಷೆಗಳಿಂದ ಮುಖ್ಯವಾಗಿ ದ್ರಾವಿಡ ಭಾಷೆಗಳಿಂದ ಸಂಸ್ಕೃತ ಶಬ್ದಗಳನ್ನು ಆಯ್ದುಕೊಂಡಿದೆ ಎಂದೂ, ಶಬ್ದಗಳ ವಿನಿಮಯ ಏಕಮುಖವಾದುದಲ್ಲವೆಂದೂ, ದ್ರಾವಿಡ ಭಾಷೆಗಳು ಸಂಸ್ಕೃತ ಭಾಷೆಗಿಂತ ಪ್ರಾಚೀನವಾದುದು' ಎಂದು ವಿಶ್ಲೇಷಿಸಿದ್ದಾರೆ. ನಾನು ಹೇಳಿರುವುದಲ್ಲ ಇದು. ಇದು ಮಾನ್ಯ ಕುವೆಂಪುರವರು ಹೇಳಿರುವುದು. ಅವರು Mysore University Vice Chancellor ಆಗಿದ್ದಾಗ ಈ ರೀತಿ ಹೇಳಿದ್ದರು. 'ತಮಿಳು ಪಾಠಗಳು' ಎನ್ನುವ ಪುಸ್ತಕಕ್ಕೆ ಮುನ್ನುಡಿ ಬರೆಯುತ್ತಾ, ಈ ತರಹ ಅಭಿಪ್ರಾಯವನ್ನು ಅವರು ವ್ಯಕ್ತ ಮಾಡಿದ್ದಾರೆ. ಆದ್ದರಿಂದ ದ್ರಾವಿಡ ಭಾಷೆಗಳು ಸಂಸ್ಕೃತ ಭಾಷೆಗಿಂತ ಪುರಾತನವಾದಂತಹ ಭಾಷೆಗಳು, ಪ್ರಾಚೀನವಾದಂತಹ ಭಾಷೆಗಳು ಎನ್ನುವುದನ್ನು ಕುವೆಂಪುರವರು ಹೇಳಿದ್ದಾರೆ. ಅದನ್ನೇಕೆ ನಾವು ಬಿಟ್ಟುಬಿಟ್ಟೆವು? ಅದಕ್ಕೂ ಕೂಡ 'ಪ್ರಾಕೃತ ಯೂನಿವರ್ಸಿಟಿ' ಎಂದು ಮಾಡೋಣ. 'ಪಾಲಿ ಭಾಷೆ ಯೂನಿವರ್ಸಿಟಿ' ಎಂದು ಒಂದು ಮಾಡೋಣ. ಬುದ್ಧ ಆ ಭಾಷೆಯಲ್ಲೇ ಎಲ್ಲವನ್ನೂ ಹೇಳಿದ್ದು. ಬುದ್ಧ ಪಾಲಿ ಭಾಷೆಯಲ್ಲೇ 'ಈ ಜಾತಿ ವ್ಯವಸ್ಥೆ ಹೋಗಬೇಕು, ಈ ವರ್ಗ ವ್ಯವಸ್ಥೆ ಹೋಗಬೇಕು, ಶ್ರೇಣಿಕೃತ ಸಮಾಜ ಹೋಗಬೇಕು' ಎಂದು ಹೇಳಿದ್ದಾನೆ. Why can't you give importance to that language? ಅದನ್ನೇಕೆ ಬಿಟ್ಟಿದ್ದೀರಿ? ಮೊದಲು ಅದಕ್ಕೆ ಮಾಡಿ. ಆ ಯೂನಿವರ್ಸಿಟಿ ತೆಗೆದುಕೊಂಡು ಬನ್ನಿ. 'ಪ್ರಾಕೃತ ಸಾಹಿತ್ಯ ಯೂನಿವರ್ಸಿಟಿ' ಎಂದು ಒಂದನ್ನು ತೆಗೆದುಕೊಂಡು ಬನ್ನಿ. 'ಪಾಲಿ ಸಾಹಿತ್ಯ ಯೂನಿವರ್ಸಿಟಿ' ಎಂದು ಒಂದನ್ನು ತೆಗೆದುಕೊಂಡು ಬನ್ನಿ. ಇದಕ್ಕಿಂತ rich languages, Indian languages, ದ್ರಾವಿಡರ ಭಾಷೆಗಳು Why are you very Particular about Sanskrit? Ancient languages. ....

ಶ್ರೀ ಗೋಪಾಲ ಭಂಡಾರಿ : ದ್ರಾವಿಡ ಭಾಷೆಯಾಗಿ ತುಳು ಭಾಷೆ ಸಹ ಇದೆ.

ಶ್ರೀ ಸಿದ್ದರಾಮಯ್ಯ : ತುಳು ಭಾಷೆ ಸಹ ಇದೆ, ಇರಲಿ. ಬುದ್ಧನ ಕಾಲದಲ್ಲೇ ಪಾಲಿ ಭಾಷೆಯಲ್ಲಿ ಬುದ್ಧ ತನ್ನ ವಿಚಾರಗಳನ್ನು ಜನರಿಗೆ ತಿಳಿಸತಕ್ಕ ಕೆಲಸ ಮಾಡಿದ್ದಾನೆ. ಅದು ಅವತ್ತು ಜನರ ಭಾಷೆಯಾಗಿತ್ತು. ಸಂಸ್ಕೃತ ಯಾವತ್ತೂ ಕೂಡ ಜನ ಸಾಮಾನ್ಯರ ಭಾಷೆ ಆಗಿರಲಿಲ್ಲ. ಕೆಲವು ಪ್ರತಿಷ್ಠಿತ ಜನರ ಭಾಷೆ ಅಷ್ಟೇ ಆಗಿತ್ತು. ಇವತ್ತು ನನಗೇನೂ ಗೊತ್ತಿಲ್ಲ. ನಾನು ಲಾ ಓದಿಕೊಂಡು ಬಂದಿದ್ದೇನೆ. ನನಗೇನೂ ಹೈಸ್ಕೂಲ್ ಅಥವಾ ಕಾಲೇಜುಗಳಲ್ಲಿ ಕಲಿಸಿ ಕೊಟ್ಟಿಲ್ಲ. You mean to say that I am inferior merely because I have not learnt Sanskrit. So, ನಾನೇನು ಹೇಳುತ್ತಿದ್ದೇನೆ ಎಂದರೆ, ಹಾಗಾದರೆ, ನಮ್ಮ ಸಾಮಾನ್ಯ ಜನರಿಗೆ, ಬಹುಸಂಖ್ಯಾತ ವರ್ಗದ ಜನರಿಗೆ, ಬಹು ಸಂಸ್ಕೃತಿಗೆ ಒಳಪಡತಕ್ಕಂಥ ಜನರಿಗಾಗಿ 'ಜಾನಪದ ಯೂನಿವರ್ಸಿಟಿ' ಈಗ ಎಲ್ಲಿದೆ ಜಾನಪದ ಯೂನಿವರ್ಸಿಟಿ?

ಶ್ರೀ ಸಿ.ಟಿ. ರವಿ : ಇದು ಮೊದಲು ಆಗಲಿ. ಈಗ ಬಹಳಷ್ಟು ಜನರಿಗೆ ಜ್ಞಾನೋದಯವಾಗಿದೆ. ತಾವು ಅಧಿಕಾರದಲ್ಲಿದ್ದಾಗ ಮಾಡಲಿಲ್ಲ. ಜಾನಪದ ಯೂನಿವರ್ಸಿಟಿ ಸಹ ಆಗಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಜಾನಪದ ಯೂನಿವರ್ಸಿಟಿ ಮಾಡಿ. It includes majority of the people in the society. ಇದೇ ನನ್ನ ಸಲಹೆ. ಅದಕ್ಕೆ ಮಾಡಿ, instead of this, my suggestion is ವಚನ ಸಾಹಿತ್ಯಕ್ಕೊಂದು ಯೂನಿವರ್ಸಿಟಿ ಮಾಡಿ.

Sri B.N. Bache Gowda : It shows you aversion.

ಶ್ರೀ ಸಿದ್ದರಾಮಯ್ಯ : ನಾನು aversion ಎಂದು ಅಲ್ಲ. ಮಾನ್ಯ ಬಚ್ಚೇಗೌಡರೆ, I love Sanskrit. Iam not targeting Sanskrit. ಯೂನಿವರ್ಸಿಟಿ ಬೇಡ ಎನ್ನುವುದಷ್ಟೇ ನನ್ನ ವಾದ ಹೊರತು ಬೇರೇನೂ ಅಲ್ಲ. ಸಂಸ್ಕೃತ ಬೇಡ ಎಂದು ನಾನು ಎಲ್ಲಿ ಹೇಳಿದ್ದೇನೆ? ಮಾನ್ಯ ಬಚ್ಚೇಗೌಡರೆ, ನಾನು ಆ ರೀತಿ ಸಂಸ್ಕೃತ ಬೇಡ ಎಂದು ಹೇಳಿದ್ದೇನೆಯೇ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಮಾನ್ಯ ಸುರೇಶ್‌ಕುಮಾರ್‌ರವರೆ, ಬಜೆಟ್‌ನಲ್ಲಿ ಪಾಲಿ ಭಾಷೆ ಅಧ್ಯಯನಕ್ಕಾಗಿ ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ವಿಶೇಷ ಪೀಠ ಸ್ಥಾಪಿಸಲು 2 ಕೋಟಿ ರೂ. ನೀಡಲಾಗುವುದು ಎಂದು ನೀವು

ಘೋಷಿಸಿದ್ದೀರಿ. ಅದೇ ರೀತಿಯಲ್ಲಿ ಸಂಸ್ಕೃತ ಭಾಷೆಗೂ ಕೂಡ 10 ಕೋಟಿ ರೂ.ಗಳನ್ನು ಕೊಡಿ. ಎರಡೂವರೆ ಸಾವಿರ ವರ್ಷಗಳಿಂದ ಆಡು ಭಾಷೆಯಾಗಿರುವ ಪಾಲಿ ಭಾಷೆಯಲ್ಲಿ ಬುದ್ಧನ ಎಂತಹ ಚಿಂತನೆಗಳಿವೆ, ಮಾನವೀಯ ನೆಲೆಗಟ್ಟಿನ ಮೇಲೆ ನಿಲ್ಲತಕ್ಕಂಥ ಸಂದೇಶ, ವಿಚಾರಗಳು ಎಷ್ಟು ಸ್ಫೂರ್ತಿದಾಯಕವಾಗಿದೆ, ಅದಕ್ಕೊಂದು ಯೂನಿವರ್ಸಿಟಿಯನ್ನು ಮಾಡಬಹುದಲ್ಲವೇ? ಪಾಲಿ ಭಾಷೆಯನ್ನು ಕಲಿಯುವುದಕ್ಕೋಸ್ಕರ ಬಜೆಟ್‌ನಲ್ಲಿ 2 ಕೋಟಿ ರೂ.ಗಳನ್ನು ಅವಕಾಶ ಮಾಡಿಕೊಟ್ಟಿದ್ದೀರಿ. Sanskrit ಗೂ 5 ಕೋಟಿ ರೂ.ಗಳನ್ನು ಮಾಡಿಕೊಳ್ಳಿ. ಈ ಭಾಷೆ ಕಲಿಯುವುದಕ್ಕೋಸ್ಕರ, ಭಾಷೆ ಬಗ್ಗೆ ಸಂಶೋಧನೆ ವಿಚಾರಗಳು ಬರುವುದಕ್ಕೋಸ್ಕರ ಆ ಹಣ ಕೊಡಿ. ಯಾರು ಬೇಡ ಎನ್ನುತ್ತಾರೆ? ಅದಕ್ಕೋಸ್ಕರ ಪ್ರತ್ಯೇಕವಾದ ಯೂನಿವರ್ಸಿಟಿ ಏಕೆ ಬೇಕು? ಮಾನ್ಯ ಸುರೇಶ್‌ಕುಮಾರ್‌ರವರೆ, ನಾನು ನಿಮಗೆ ರಾಜಕೀಯವಾಗಿ ಕೂಡ ಎಚ್ಚರಿಕೆಯೊಂದನ್ನು ಕೊಡುತ್ತಿದ್ದೇನೆ. ಕರ್ನಾಟಕದಲ್ಲಿ ಮಾನ್ಯ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ನಡೆದಂತಹ ವಿಚಾರಗಳನ್ನು ನೀವು ತಿಳಿದುಕೊಳ್ಳಬೇಕು. ಅವರಿಗೆ ಸಂಸ್ಕೃತ ವಿದ್ವಾಂಸರು ಸನ್ಮಾನ ಮಾಡಿ, ಸಂಸ್ಕೃತಕ್ಕೆ ಪ್ರಥಮ ಸ್ಥಾನವನ್ನು ಕೊಡಬೇಕು ಎಂದು ಹೇಳಿದರು. ಮಾನ್ಯ ಗುಂಡೂರಾಯರು ಅದನ್ನು ಒಪ್ಪಿದರೋ, ಬಿಟ್ಟರೋ? ಆ ಪ್ರಶ್ನೆ ಬಂದಂತಹ ಸಂದರ್ಭದಲ್ಲಿ ನಡೆದದ್ದು ತಮಗೆ ಗೊತ್ತಿದೆ. ಕರ್ನಾಟಕ ಜನತೆ Sanskrit ಅನ್ನು ಪ್ರಥಮ ಭಾಷೆಯಾಗಿ ಒಪ್ಪಲಿಲ್ಲ. ದೊಡ್ಡ ಆಂದೋಲನ, ಗಲಾಟೆಗಳಾಯಿತು. ಮಾನ್ಯ ಗೋಕಾಕ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚನೆ ಮಾಡಿದರು. Sanskrit ಪ್ರಥಮ ಭಾಷೆಯಾಗಿ ಇರಬೇಕೋ? ಬೇಡವೋ ಎನ್ನತಕ್ಕಂಥ ಚಳವಳಿ ನಡೆಯಿತು. ಇಡೀ ಕರ್ನಾಟಕದಾದ್ಯಂತ ಎಲ್ಲೆಲ್ಲಿ ಮಾನ್ಯ ಗೋಕಾಕ್‌ರವರು ಹೋದರೋ, ಅಲ್ಲಿ ಅವರನ್ನು ಘೇರಾವ್ ಮಾಡಿದರು. ಸಂಘ ಸಂಸ್ಥೆಗಳೆಲ್ಲವೂ ಕೂಡ ಅವರಿಗೆ ಮನವಿಯನ್ನು ಕೊಟ್ಟು, ಪ್ರಥಮ ಭಾಷೆ ಕನ್ನಡವೇ ಆಗಬೇಕು, Sanskrit ಆಗಕೂಡದು ಎಂದರು. ಕನ್ನಡ ಪ್ರಥಮ ಭಾಷೆ ಆಗಬೇಕು, Sanskrit ಬೇಡ ಎಂಬ ತೀರ್ಮಾನವಾಗಿ ಮಾನ್ಯ ಗೋಕಾಕ್‌ರ ವರದಿ ಅನುಷ್ಠಾನವಾಗಿರುವುದು ನಿಮಗೆ ಗೊತ್ತಿದೆ. ಡಾ: ರಾಜ್‌ಕುಮಾರ್ ಅಂತಹವರೂ ಕೂಡ ಚಳವಳಿಯ ಮುಂಚೂಣಿಯಲ್ಲಿ ನಿಂತು ಎಂತಹ ಹೋರಾಟವಾಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಪ್ರಥಮ ಭಾಷೆ Sanskrit ಬೇಡ, ಕನ್ನಡ ಬೇಕು ಎನ್ನತಕ್ಕಂಥ ಚಳವಳಿಯ

O.32 F-22

ಹಿನ್ನೆಲೆಯಲ್ಲಿ ಮೊಟ್ಟ ಮೊದಲಿಗೆ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ತನ್ನ ಅಧಿಕಾರವನ್ನು ಕಳೆದುಕೊಳ್ಳಬೇಕಾಯಿತು. ನಿಮಗೆ ಎಚ್ಚರಿಕೆ ಕೊಡುತ್ತಿದ್ದೇನೆ, ಜನ ಇದನ್ನು ಸಹಿಸುವುದಿಲ್ಲ. ನೀವು ಇಲ್ಲಿ ಕುಳಿತು, ಅಚಾನಕ್ಕಾಗಿ, ಆಕಸ್ಮಿಕವಾಗಿ ಆಡಳಿತ ಸಿಕ್ಕಿರತಕ್ಕವರು, ನೀವು ಇದನ್ನು ಜಾರಿಗೆ ತರತಕ್ಕಂಥ ಸಮಯದಲ್ಲಿ ಹತ್ತಾರು ಸಾರಿ ಯೋಚನೆ ಮಾಡಬೇಕಾಗಿದೆ. ಇದು ಒಳ್ಳೆಯದಲ್ಲ. ಇದು ಒಳ್ಳೆಯ ಯೋಚನೆಯಲ್ಲ.

ನೀವು ಇಲ್ಲಿ ತರತಕ್ಕಂಥ ಒಂದು ಬಿಲ್ಲಿನ ಬಗ್ಗೆ ಪ್ರಗತಿಪರವಾದ ಚರ್ಚೆಯಾಗುತ್ತಿಲ್ಲ, ಮುಂದೆ ಗೋ ಹತ್ಯೆ, ಜಾನುವಾರುಗಳ ವಧೆಯ ಮೇಲಿನ ಚರ್ಚೆ ಬರುತ್ತದೆ, ಪ್ರೈವೇಟ್ ಯುನಿವರ್ಸಿಟಿದು, ಬೇರೆ ಬೇರೆ ವಿಚಾರಗಳನ್ನು ಇಲ್ಲಿ ತರುವುದನ್ನು ಹೇಳಿದ್ದು. ದಯವಿಟ್ಟು ನಾನು ಹೇಳುತ್ತೇನೆ, ರಾಜಕೀಯವಾಗಿಯೂ ನಿಮಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ, ತಾವು ಇದನ್ನು ಯೋಚನೆ ಮಾಡಬೇಕು..

(ಗೊಂದಲ)

ಶ್ರೀ ಸಿ.ಸಿ.ಪಾಟೀಲ್ : ಅಧ್ಯಕ್ಷರೆ, ಆಕಸ್ಮಿಕವಾಗಿ ಅಧಿಕಾರಕ್ಕೆ ಬಂದರು ಎನ್ನುವುದನ್ನು ಕಡತದಿಂದ ತೆಗೆದು ಹಾಕಬೇಕು, ನಿಮಗೆ ಜನರು ಓಟು ಹಾಕಿದಾಗ ಹೋರಾಟ, ನಮಗೆ ಓಟು ಹಾಕಿದರೆ ಆಕಸ್ಮಿಕವೇ? ತಾವು ಕೇಂದ್ರ ಮಂತ್ರಿಯಾಗಿದ್ದು ಆಕಸ್ಮಿಕ, ನೀವು 6 ಕೋಟಿ ಜನರಿಗೆ ಅವಮಾನ ಮಾಡುತ್ತಿದ್ದೀರಿ.

ಅಧ್ಯಕ್ಷರು : ಆಯಿತು ವೆರಿಫೈ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ನಾನು ಯಾವುದೇ ಭಾಷೆ, ಜಾತಿ ದ್ವೇಷಿಯಲ್ಲ, I am making it very very clear. ಸಿ.ಸಿ. ಪಾಟೀಲರೆ, ನೀವು Political Secretary ಮುಖ್ಯಮಂತ್ರಿಗಳಿಗೆ ಅಡ್ವೈಸ್ ಮಾಡುವವರು ಹೀಗಾದರೆ ಹೇಗೆ? ನಾನು ಯಾವುದೇ ಭಾಷೆ, ಜಾತಿ ದ್ವೇಷಿಯಲ್ಲ. ಆದರೆ ನಾವು ಇಡೀ legislators ಸೇರಿಕೊಂಡು ಒಂದು ಕಾನೂನು ಮಾಡುತ್ತಿದ್ದೇವೆ. ಕರ್ನಾಟಕದ ಜನರಿಗೆ ಉಪಯೋಗವಾಗುವಂಥ ಒಂದು ವಿಶ್ವವಿದ್ಯಾಲಯ ವನ್ನು ಮಾಡಬೇಕೆನ್ನುವುದಾದರೆ, ಅದು ಎಲ್ಲಾ ಜನರಿಗೆ ಉಪಯೋಗವಾ ಗುವಂಥ ಯುನಿವರ್ಸಿಟಿಯಾಗಬೇಕು. ಪಾಟೀಲ್ ಪುಟ್ಟಪ್ಪ ನವರು ಇದು ಬೇಡವೆಂದು, ಬಹುಜನಹಿತಾಯ ಬಹುಜನಸುಖಾಯ ಎಂದು ಒಂದು ಕಡೆ ಬರೆಯುತ್ತಾರೆ. ಸಂಸ್ಕೃತ ಯುನಿವರ್ಸಿಟಿ ಬೇಡವೆಂದು ಅವರು ಕೂಡ

ಒಂದು ಕಡೆ ಲೇಖನವನ್ನು ಬರೆದಿದ್ದಾರೆ. ಅವರು ನಮ್ಮಲ್ಲಿ ಬದುಕಿರುವ 91 ವರ್ಷದ ಹಿರಿಯ ಸಾಹಿತಿಗಳಲ್ಲಿ ಒಬ್ಬರಾಗಿದ್ದಾರೆ, ಅವರು ಹೇಳುವುದೇನೆಂದರೆ, ಬಹುಜನ ಸುಖಾಯ ಬಹುಜನ ಹಿತಾಯ. ನಮ್ಮ ಸರ್ಕಾರದ ಏನೇ ನಿರ್ಧಾರಗಳು, ಇಲ್ಲಿ ಸದನ ತೆಗೆದುಕೊಳ್ಳುವ ನಿರ್ಧಾರಗಳು ಬಹುಜನಹಿತಾಯ ಬಹುಜನ ಸುಖಾಯವಾಗಬೇಕು. ಆ ಯುನಿವರ್ಸಿಟಿಯಿಂದ ಆ ರೀತಿ ಆಗುತ್ತಿದೆಯೇ? ನಾನು ಆಗಲೇ ಹೇಳಿದೆ, ಬೆಂಗಳೂರು ಯುನಿವರ್ಸಿಟಿಯಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿದ್ದಾರೆ, ಬೆಂಗಳೂರು ಯುನಿವರ್ಸಿಟಿ ಬಂದು ಎಷ್ಟು ವರ್ಷವಾಯಿತು, 1964ರಲ್ಲಿ ಈ ಯುನಿವರ್ಸಿಟಿ ಸ್ಥಾಪನೆಯಾದುದು, 1948ನಲ್ಲಿ ಕರ್ನಾಟಕ ಯುನಿವರ್ಸಿಟಿ ಸ್ಥಾಪನೆಯಾಯಿತು, 1915-16ನಲ್ಲಿ ವಿಶ್ವೇಶ್ವರಯ್ಯನವರ ಕಾಲದಲ್ಲಿ ಮೈಸೂರು ಯುನಿವರ್ಸಿಟಿ ಸ್ಥಾಪನೆಯಾಯಿತು, ಎಷ್ಟು ಜನ ಟೀಚರ್ಸ್, ಪ್ರೊಫೆಸರ್ಸ್ ಮತ್ತು ವಿದ್ಯಾರ್ಥಿಗಳಿದ್ದಾರೆನ್ನುವ ಮಾಹಿತಿಯನ್ನು ತರಿಸಿಕೊಳ್ಳಿ. ಟೀಚರ್ಸ್, ಪ್ರೊಫೆಸರ್ಸ್‌ಗಿಂತ ಕಡಿಮೆ ವಿದ್ಯಾರ್ಥಿಗಳಿರುವಂಥ ಒಂದು ಭಾಷಾ ವಿಭಾಗಕ್ಕೆ ನಾವೊಂದು ಯುನಿವರ್ಸಿಟಿ ಮಾಡಿ ಅದಕ್ಕೆ ಸರ್ಕಾರದ ಹಣವನ್ನು ವ್ಯ ಮಾಡಬೇಕಾ? ಅಲ್ಲಿಗೆ ಒಬ್ಬರು ವೈಸ್ ಚಾನ್ಸಲರ್, ರಿಜಿಸ್ಟ್ರಾರ್, ಸ್ಟಾಫ್, ಒಂದು ಬಿಲ್ಡಿಂಗ್ ಎಲ್ಲಾ ಬೇಕಾ? ನಾನು ಹೇಳುತ್ತೇನೆ, ನೀವು ಸಂಸ್ಕೃತದಲ್ಲಿ ಸಂಶೋಧನೆ ಮಾಡಬೇಕಾ, ಇನ್ನೊಂದಷ್ಟು ಹಣ ಕೊಡಿ. ನಮ್ಮ ಸದಸ್ಯರಾದ ಪುಟ್ಟರಾಜುರವರು ಮೇಲುಕೋಟೆಯಲ್ಲಿ ಸಂಸ್ಕೃತ ಪಾಠಕ್ಕೆ ಒಂದಷ್ಟು ದುಡ್ಡು ಕೊಡಿ, ಇನ್ನು ಚೆನ್ನಾಗಿ ಸಂಸ್ಕೃತವನ್ನು ಅಧ್ಯಾಯನ, ಸಂಶೋಧನೆ ಮಾಡಲಿ, ಇನ್ನು ಏನಾದರು ಉಳಿದುಕೊಂಡುಬಿಟ್ಟಿದ್ದರೆ, ಏನೇನು ಇದೆಯೊ ಎಲ್ಲವನ್ನು ಹೆಕ್ಕಿ ತೆಗೆಯಲಿ, ನನ್ನ ಪ್ರಕಾರ ಎಲ್ಲವನ್ನು ತೆಗೆದು ಹಾಕಲಾಗಿದೆ. ಸಂಸ್ಕೃತಕ್ಕೆ ಅಲ್ಲಿಂದ ಏನೇನು ಸಾರ ತೆಗೆದುಕೊಳ್ಳಬೇಕೋ, ಅದೆಲ್ಲವನ್ನು ಕನ್ನಡ ಸೇರಿದಂತೆ ಬೇರೆ ಬೇರೆ ಭಾಷೆಗೆ ತೆಗೆದುಕೊಂಡುಬಿಟ್ಟು ಆಗಿಹೋಗಿಬಿಟ್ಟಿದೆ, ಅದಕ್ಕಾಗಿ ಅದು ಈಗ ಬಳಕೆಯಲ್ಲಿ ಇಲ್ಲದಿರುವುದೆಂದು ಕರೆಯುವುದು, ಅದು ಜನರ ಬಳಕೆಯಲ್ಲಿ ಇಲ್ಲದಿರುವ ಒಂದು ಭಾಷೆ. ಜನರ ಬಳಕೆಯಲ್ಲಿ ಇರದೆ ಇರುವಂಥ ಜನರ ಸಂಸ್ಕೃತಿಗೆ ಪೂರಕವಾಗಿರದಂಥ, ಬಹುಜನರ ಬದುಕಿಗೆ ಸಂಬಂಧವಿಲ್ಲದಿರುವಂಥ ಒಂದು ಭಾಷೆಯನ್ನು ನಾವು ಒಂದು ಯುನಿವರ್ಸಿಟಿಯ ಮೂಲಕ ಆ ಬಹುಸಂಖ್ಯಾತ ಜನರ ಹೇರತಕ್ಕಂಥ ಒಂದು ಪ್ರಯತ್ನವಿದೆಯಲ್ಲ, ಆ ಪ್ರಯತ್ನ ಸರಿಯಾದದ್ದಲ್ಲ, ಆ ಉದ್ದೇಶ ಸರಿಯಾದುದ್ದಲ್ಲ. That is my point. ಆದುದರಿಂದ, ಈ ಯುನಿವರ್ಸಿಟಿ

ಬೇಕಾಗಿಲ್ಲ, ಇದರಲ್ಲಿ ಮತ್ತೆ ನಾವು ಹೋಗುತ್ತೇವೆ, ಮತ್ತೆ ಇನ್ನೊಂದು ಶ್ರೇಣಿಕೃತ ವರ್ಣವ್ಯವಸ್ಥೆಗೆ ಪೂರಕವಾಗಿ ನಾವು ಕಾಲಿಡುವುದಕ್ಕೆ ಹೊರಟರೆ, ಇವತ್ತು ಸಂವಿಧಾನ ಬಂದು 60 ವರ್ಷವಾಗಿದೆ, ಅವತ್ತೆ Constituent Assembly ನಲ್ಲಿ ಸಂಸ್ಕೃತವನ್ನು national language ಆಗಿ ಮಾಡಬೇಕೆಂದು ಚರ್ಚೆಯಾಯಿತು. As a matter of fact ಅಂಬೇಡ್ಕರ್ ಅವರು ಕೂಡ ಆಗಲೆಂದು ಹೇಳಿಬಿಟ್ಟಿದ್ದರು, ಅವರು ಸಂಸ್ಕೃತ ಬಹಳ ಜನಪರವಾದ ಭಾಷೆಯೆಂದಲ್ಲ ಹೇಳಿದ್ದು. ಆದರೆ ರಾಜೇಂದ್ರ ಪ್ರಸಾದ್, ಜವಹಾರ್‌ಲಾಲ್ ನೆಹರು ಬೇಡವೆಂದು. 7–8 ರಾಜ್ಯಗಳಲ್ಲಿ ಹಿಂದಿ ಮಾತನಾಡುವ ಬಹುಸಂಖ್ಯಾತ ಭಾಷೆಯಾಗಿರುವುದರಿಂದ ಹಿಂದಿ ಮಾಡಿ ಎಂದು ಹೇಳಿದರು, not Sanskrit ಎಂದು ಹೇಳಿದರು. ಸಂಸ್ಕೃತ ಎಲ್ಲಾ ರಾಜ್ಯಗಳಲ್ಲಿ ಬಹುಸಂಖ್ಯಾತ ಭಾಷೆಯಾಗಿದ್ದಿದ್ದರೆ ಅವತ್ತು ರಾಷ್ಟ್ರೀಯ ಭಾಷೆಯಾಗುತ್ತಿತ್ತು. ಮತ್ತೆ, ಇದು, ಸಮಾಜದಲ್ಲಿ ಒಡಕನ್ನುಂಟು ಮಾಡತಕ್ಕಂಥ, disparity ಗೆ ದಾರಿಮಾಡಿಕೊಡುವಂಥ, ಕೆಲವು ಜನರಿಗೆ ಉಪಯೋಗ ಮಾಡಿಕೊಡುವುದಕ್ಕೆ ಮಾಡುತ್ತಿರುವ ಒಂದು ಪ್ರಯತ್ನವಿದೆ ಮತ್ತೆ ಇದು ಬಿಜೆಪಿ ಸರ್ಕಾರದ ಹಿಡನ್ ಅಜೆಂಡಾ ಎಂದು ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. It is not useful to the majority of the citizens of the State. When such being the case why do you want to pursue this University? Why do you want to establish this University? ನಿಮ್ಮ ಜಾಗದಲ್ಲಿ ನೀವು ನಿಂತುಕೊಂಡು ಹೇಳಿ.

ಶ್ರೀ ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಸಚಿವರು) : ತಿರುಪತಿಯಲ್ಲಿ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯವೇನಿದೆ, ಅದು ಸಂಸ್ಕೃತ ವಿಶ್ವವಿದ್ಯಾಲಯವಾಗಿದೆ, ಹಾಗಾದರೆ ಇದನ್ನು ಬಿಜೆಪಿ ಹಿಡನ್ ಅಜೆಂಡಾ ಎನ್ನುವುದಕ್ಕಿಂತ ಇಡೀ ಆಂಧ್ರಪ್ರದೇಶ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿ ಅಧೀಕಾರಕ್ಕೆ ಇನ್ನು ಬಂದಿಲ್ಲ, ಆದರೆ ಅಲ್ಲಿಯೂ ಕೂಡ ಅದು ಆಗುತ್ತಿದೆ ಎಂಬುದು ನಿಮ್ಮ ಗಮನದಲ್ಲಿರಲಿ.

ಶ್ರೀ ಸಿದ್ದರಾಮಯ್ಯ : ಜನಾರ್ಧನ ರೆಡ್ಡಿಯವರೆ ರಾಷ್ಟ್ರದಲ್ಲಿ 12 ಸಂಸ್ಕೃತ ವಿಶ್ವವಿದ್ಯಾಲಯಗಳಿವೆ, I am aware of it. ಇದು 13ನೆಯದನ್ನು ತೆಗೆಯುವುದಕ್ಕೆ ಹೊರಟಿರುವುದು.

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) : ಆ ರಾಜ್ಯಗಳಲ್ಲಿ ಹಿಡನ್ ಅಜೆಂಡಾದ ಮುಖಾಂತರ ಮಾಡಿದರೇ? ಇಲ್ಲ, ಬಿಜೆಪಿಯವರೇನಾದರು ಆ ರಾಜ್ಯಗಳಿಗೆ ಪ್ರೇರೇಪಣೆಯನ್ನು ಕೊಟ್ಟಿದ್ದೇವೆಯೇ?

ಶ್ರೀ ಸಿದ್ದರಾಮಯ್ಯ : ಅಲ್ಲಿ ಮಾಡಲಿಲ್ಲ, ಇಲ್ಲಿ ಮಾಡುತ್ತಿದ್ದೀರಿ, ಬಹುಶಃ they are influenced by RSS agenda.

ಶ್ರೀ ಆರ್. ಅಶೋಕ್ : ಆಗ ಆ ರಾಜ್ಯಗಳಲ್ಲಿ ಕಾಂಗ್ರೆಸ್ ಸರ್ಕಾರಗಳು ಇದ್ದವಲ್ಲಾ, ಅಂದರೆ RSS ಮಾತನ್ನು ಕಾಂಗ್ರೆಸ್ ಲೀಡರ್ಸ್ ಕೇಳುತ್ತಿದ್ದರೇ?

ಶ್ರೀ ಸಿದ್ದರಾಮಯ್ಯ : ಇದು ನಮಗ್ಯಾಕೆ ಬೇಕು? ನಿಮಗೆ ಬೇಕಾ ಹೇಳಿ ನೋಡೋಣ, ನಿಮ್ಮ ಮನೆಯಲ್ಲಿ ಎಷ್ಟು ಜನರಿಗೆ ಸಂಸ್ಕೃತ ಕಲಿಸಿದ್ದೀರಿ ಹೇಳಿ, ಒಪ್ಪಿಕೊಳ್ಳೋಣ, ಘಾದ ಮಾಡಬೇಕೆಂದು ವಾದ ಮಾಡುವುದ ರಿಂದೇನು ಪ್ರಯೋಜನ.

ಶ್ರೀ ಆರ್. ಅಶೋಕ್ : ನಮ್ಮ ಮನೆನಲ್ಲಿ ಯಾರಾದರು ಕಲಿತ್ತಿದ್ದಾರೆಯೇ ಎಂದು ಕೇಳಿದಿರಿ, ಹೌದು ನಮ್ಮ ಮಗ ಪಿಯುಸಿನಲ್ಲಿ ಕಲಿತ್ತಿದ್ದಾನೆ ಸ್ವಾಮಿ. ನೀವು ಹೇಳಿದಂತೆ ಯುನಿವರ್ಸಿಟಿಯಲ್ಲೆಲ್ಲಾ ಬಹಳ ವಿದ್ಯಾರ್ಥಿಗಳಿಗಿಂತ ಮೇಸ್ಟ್ರೇ ಜಾಸ್ತಿ ಇದ್ದಾರೆಂದು ಹೇಳಿದಿರಲ್ಲ, ಬೆಂಗಳೂರಿನ ಬಹಳಷ್ಟು ಕಾಲೇಜುಗಳಲ್ಲಿ ಬಹಳಷ್ಟು ಜನ ಸಂಸ್ಕೃತ ಓದುತ್ತಿರುವ ಸಾವಿರಾರು ವಿದ್ಯಾರ್ಥಿಗಳಿದ್ದಾರೆ. ಇಲ್ಲಿ ಪ್ರಶ್ನೆ ಅದಲ್ಲ ಇಲ್ಲಿ, ಯಾರೊ ಯಾವುದೊ ಒಂದು ಭಾಷೆಯನ್ನು ಕಲಿಯುತ್ತಾರೆ, ಅದನ್ನು ಬೆಳೆಸಬೇಕೆ ಹೊರತು ಆ ಭಾಷೆಯನ್ನು ಮುಳುಗಿಸುವಂಥ ಪ್ರಯತ್ನವನ್ನು ಮಾಡುವುದಕ್ಕೆ ಹೋಗಬಾರದು...

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು ಸಂಸ್ಕೃತ ವಿರೋಧಿಗಳಲ್ಲ, ಆ ಭಾಷೆಯನ್ನು ಬೆಳಸಬೇಡಿ ಎಂದು ಹೇಳಲಿಲ್ಲ, ಆ ಭಾಷೆಯಲ್ಲಿ ಸಂಶೋಧನೆ ಮಾಡಬೇಡಿ ಎಂದು ಹೇಳಲಿಲ್ಲ..

(ಗೊಂದಲ)

ಶ್ರೀ ಆರ್. ಅಶೋಕ್ : ದೇಶದಲ್ಲಿ 12 ರಾಜ್ಯಗಳು ಈ ಕೆಲಸ ಮಾಡಿವೆ ಎಂದರೆ, ಅವೆಲ್ಲವೂ ಒಳ್ಳೆಯ ಉದ್ದೇಶವನ್ನಿರಿಸಿಕೊಂಡು ವಿಶ್ವವಿದ್ಯಾ ನಿಲಯಗಳನ್ನು ಸ್ಥಾಪಿಸಿರುತ್ತವೆ. ನಾವು 13ನೇ ರಾಜ್ಯದವರಾಗುತ್ತಿದ್ದೇವೆ, ಅಷ್ಟೆ.

ಯಾವುದೇ ಒಂದು ಭಾಷೆ ಬಗ್ಗೆ ಇಷ್ಟೊಂದು ಚರ್ಚಿಸುವ ಅವಶ್ಯಕತೆ ಇರಲಿಲ್ಲ. ಈಗ ಕನ್ನಡ, ಹಿಂದಿ, ತಮಿಳು, ತೆಲುಗು ಹೀಗೆ ಭಾರತದ ನಾನಾ ಭಾಷೆಗಳಲ್ಲಿ ಸಂಸ್ಕೃತದಿಂದ ಬಹಳಷ್ಟು ಪದಗಳು ಬಂದಿವೆ.

ಶ್ರೀ ಟಿ.ಬಿ. ಜಯಚಂದ್ರ : ಕರ್ನಾಟಕದಲ್ಲಿ ಸಂಸ್ಕೃತ-ವೇದ ವಿಶ್ವವಿದ್ಯಾಲಯ ತರುವ ಉದ್ದೇಶದಿಂದ ನೀವು ಹೇಳುತ್ತಿದ್ದೀರಿ. ನಾನು ಆಗಲೇ ಓದಿ ಹೇಳಿದ್ದೇನೆ. "ಸಾಹಿತ್ಯದ ಅಧ್ಯಯನ ಸಾಂಪ್ರದಾಯಿಕ ಪದ್ಧತಿಯನ್ನು ಸಂರಕ್ಷಿಸುವುದು, ಪೋಷಿಸುವುದು, ಉತ್ತೇಜಿಸುವುದು" ಎಂದಿದೆ. ಇದು hidden agenda ಅಲ್ಲವೇ? ಇದು ಬೇಕೇ? ನೀವು ಸಂಸ್ಕೃತ ಭಾಷೆ ಬಗ್ಗೆ ಹೇಳುವುದಾದರೆ, ಈ ಪದಗಳು ಬೇಕೇ? ಏನು ಹೇಳುತ್ತಿದ್ದೀರಿ? ನಿಮ್ಮ ಉದ್ದೇಶಗಳು ಇವೆಯಲ್ಲ....ಅದನ್ನು ಓದಿ. ಇದೇ hidden agenda. Hidden Agenda ಅಂದರೆ, ಕೇಸರೀಕರಣ, ಅಷ್ಟೆ. ಅದರ ಮುಖಾಂತರ ವಿಶ್ವವಿದ್ಯಾಲಯ.....

ಶ್ರೀ ಸಿ.ಟಿ.ರವಿ : ವಿದೇಶಿ ನಾಯಕತ್ವ ತಂದು ಕೂರಿಸಿದರೆ ಅದು hidden agenda ಅಲ್ಲವೇ?

ಶ್ರೀ ಆರ್. ಅಶೋಕ್ : ನಾನು ನಿಮ್ಮ (ಸಿದ್ದರಾಮಯ್ಯ) ವಿರುದ್ಧ ಇಲ್ಲ. ನೀವು ಹೇಳಿದಂತೆ, ನಾನೇನೂ ಸಂಸ್ಕೃತ ಕಲಿಯುತ್ತಿಲ್ಲ. ಆದರೆ, ನಿಮ್ಮ ಪಕ್ಕದಲ್ಲಿ ಕುಳಿತಿರುವವರು ಸಂಸ್ಕೃತ ಕಲಿಯುತ್ತಿದ್ದಾರೆ. ನಮ್ಮ ಉದಾಸಿ ಸಾಹೇಬರು ಆರು ಭಾಷೆಗಳನ್ನು ಮಾತನಾಡುತ್ತಾರೆ. ನಾವು ಮಾತನಾಡುವುದು ದಕ್ಕಾಗುವುದಿಲ್ಲ. ಹೊಸ ಭಾಷೆಗಳನ್ನು ಕಲಿಯಲಿ. ಕಲಿಯುವ ಮಕ್ಕಳಿಗೆ option ಇರಲಿ, ಅದು ಅವರ ಇಷ್ಟ. ಡಾಕ್ಟ್ರೇ (ಹೆಚ್.ಸಿ.ಮಹದೇವಪ್ಪ) ನಾವು ಯಾರಾದರೂ ವಿದ್ಯಾರ್ಥಿಗಳನ್ನು ಉದ್ದೇಶಿಸಿ, ನೀವು ಸಂಸ್ಕೃತ ಶಾಲೆಗೆ ಸೇರಬೇಕೆಂದು ಬಲವಂತ ಮಾಡಿದರೆ ಅದನ್ನು hidden agenda ಎಂದು ಹೇಳಬಹುದು. ಆದರೆ, ನಾವು ಯಾರಿಗೂ ಹೇಳುತ್ತಿಲ್ಲ. ಯಾರಿಗೆ ಸಂಸ್ಕೃತ ಶಾಲೆಗೆ, ವಿಶ್ವವಿದ್ಯಾನಿಲಯಕ್ಕೆ ಹೋಗಲು ಇಷ್ಟವಿದೆಯೋ, ಅವರು ಹೋಗಲಿ. ನಿಮಗೇಕೆ ತೊಂದರೆ? ಸಂಸ್ಕೃತವನ್ನು ಕಡ್ಡಾಯವಾಗಿ ಕಲಿಯಬೇಕಾಗಿದೆ, ನೀವು ಕಲಿಯಲೇಬೇಕೆಂದು ನಿಮಗೇನಾದರೂ ನಾವು ಹೇಳಿದ್ದೇವೆಯೇ? ಯಾರಿಗೆ ಇಷ್ಟವಿದೆಯೋ, ಅವರು ಕಲಿಯಲಿ. ಕಲಿಯುವುದು ಸಾಂವಿಧಾನಿಕ ಹಕ್ಕು. ಎಲ್ಲರಿಗೂ ಸಂಸ್ಕೃತ ಕಲಿಯಲು ಅವಕಾಶವಿದೆ, ಸ್ವಾತಂತ್ರ್ಯವಿದೆ.

ಆದರೆ, ಭಾಷೆ ಕಲಿಯಬಾರದೆಂದು ನಿರ್ಬಂಧಿಸುವುದು ಸಂವಿಧಾನಕ್ಕೆ ಅಪಚಾರವೆಸಗಿದಂತಾಗುತ್ತದೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಮೈಸೂರಿನಲ್ಲಿ ಮಹಾರಾಜರ ಕಾಲದಿಂದಲೂ ಒಂದು ಸಂಸ್ಕೃತ ಶಾಲೆ ಇದೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಪ್ರಸ್ತಾಪಿಸಲು ಬಯಸುತ್ತಿರುವುದೇನೆಂದರೆ, ರಾಜ್ಯದಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಹೊರಟಿರುವ ಸಂದರ್ಭದಲ್ಲಿ ಅನೇಕ ಆಕ್ಷೇಪಣೆಗಳು ಬರುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಈಗ ವಿಶ್ವವಿದ್ಯಾನಿಲಯ ಎಂದರೆ, ವಿಶ್ವಕ್ಕೆ ಒಂದೇ ಇರಬೇಕೆಂದು ಮಾತುಗಳನ್ನಾಡುವವರು ಇರಬಹುದು. ಜಗದ್ಗುರುಗಳೆಂಬ ಹೆಸರು ಬಂದರೆ, ಇಂದು ಜಗತ್ತಿನಾದ್ಯಂತ ಅನೇಕ ಜಗದ್ಗುರುಗಳು ಆಗುತ್ತಿದ್ದಾರೆ ಎನ್ನುವ ಮಾತುಗಳನ್ನು ವ್ಯಾಖ್ಯಾನಿಸಬಹುದು. ಆದರೆ, ಒಂದು ವಿಚಾರವನ್ನು, ಸತ್ಯವನ್ನು ನಾವು ಪ್ರತಿಪಾದಿಸಭೇಕಾದಾಗ, 25 ವರ್ಷಗಳ ಹಿಂದೆ ರಾಜ್ಯಕ್ಕೆ Information Technology ಬಂದಾಗ, Information Technologyಯಿಂದ ಮೇಲ್ವರ್ಗದವರಿಗೆ ಮಾತ್ರ ಲಾಭವಾಗು ತ್ತದೆಂದು ಅನೇಕ ಜನರು ಆಕ್ಷೇಪಗಳನ್ನು ವ್ಯಕ್ತಪಡಿಸಿದ್ದನ್ನು ನಾನು ಗಮನಿಸಿದ್ದೇನೆ. ಆದರೆ, ಇವತ್ತು ಸಂಸ್ಕೃತ ಭಾಷೆ ಬಂದಾಗಲೂ..... ಮೊದಲೆಲ್ಲಾ ಸುಮಾರು 50–60 ವರ್ಷಗಳ ಹಿಂದೆ ಶಾಲೆಗೆ ಹೋಗಿ ಕಲಿಯುವುದೆಂದರೆ, ಅದು ಮೇಲ್ವರ್ಗದವರಿಗೆ ಮಾತ್ರ ಸೀಮಿತವಾಗಿದೆ ಎನ್ನುವ ಭಾವನೆ ಇತ್ತು. ಆದರೆ, ಇವತ್ತು ಏನಾಗಿದೆ ಎಂದರೆ, Information Technology ಬಂದ ನಂತರ, ಅದಕ್ಕೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟ ನಂತರ ಜಗತ್ತಿನಾದ್ಯಂತ ಇಂದು ಬೆಂಗಳೂರು ಮತ್ತು ಭಾರತವನ್ನು ಗುರ್ತಿಸುವ ಪರಿಸ್ಥಿತಿ ಬಂದಿದೆ. ಅಮೆರಿಕಾದ ಅಧ್ಯಕ್ಷರಾದ ಒಬಾಮರವರು, ಇವತ್ತು ಮಾತನಾಡುವಾಗಲೂ ಭಾರತ ಮತ್ತು ಚೀನಾ ದೇಶಗಳನ್ನು ಉದ್ಧರಿಸಿ ಮಾತನಾಡುವ ಪರಿಸ್ಥಿತಿ ಬರುತ್ತಿದೆ! ಹೀಗೆಲ್ಲಾ ಇರಬೇಕಾದರೆ, ಸಂಸ್ಕೃತದಲ್ಲಿ ಅನೇಕ ವಿಚಾರಗಳನ್ನು, ಜರ್ಮನಿಯಂತಹ ರಾಷ್ಟ್ರಗಳಲ್ಲಿ......

(ಗೊಂದಲ)

ಶ್ರೀ ಸಿ.ಎಂ. ಉದಾಸಿ : ಕೇಳಿ, ನನ್ನ ಮಾತುಗಳು ಪೂರ್ತಿಯಾದ ಬಳಿಕ ನೀವು ಮಾತನಾಡಿ. ಒಂದು ನಿಮಿಷ ಕುಳಿತುಕೊಳ್ಳಿ. ಜರ್ಮನಿ

ಯಂತಹ ರಾಷ್ಟ್ರದಲ್ಲಿ ಸಂಸ್ಕೃತದ ಬಗ್ಗೆ ಅಧ್ಯಯನ ನಡೆಯುತ್ತಿರಬೇಕಾದರೆ ತಾವು ಈ ರೀತಿ ವೃಥಾ ಆರೋಪ ಮಾಡುವುದು ಸರಿಯಾದುದಲ್ಲ.

ಅಧ್ಯಕ್ಷರು : ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ನಾಯ್ಡುರವರೆ, ಪ್ಲೀಸ್, ಕುಳಿತುಕೊಳ್ಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು : ಆಂಧ್ರಪ್ರದೇಶದಲ್ಲಿ ಮುಖ್ಯಮಂತ್ರಿ ಯಾಗಿದ್ದ ರಾಜಶೇಖರರೆಡ್ಡಿಯವರು ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಅವರ ರಾಜ್ಯದಲ್ಲಿ ಸ್ಥಾಪಿಸಿದಾಗ ಆಂಧ್ರಪ್ರದೇಶವೇನಾದರೂ ಹಾಳಾಗಿ ಹೋಗಿದೆಯೇ? ಅಲ್ಲೊಂದು ನೀತಿ, ಇಲ್ಲೊಂದು ನೀತಿ. ಎರಡೆರಡು ನೀತಿಗಳನ್ನು ಏಕೆ ಮಾಡುತ್ತೀರಿ?

ಶ್ರೀ ಟಿ.ಬಿ. ಜಯಚಂದ್ರ : ನೀವು ಮಾಹಿತಿ ಮತ್ತು ತಂತ್ರಜ್ಞಾನ ಸಚಿವರು.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು : ಹಾಗಂತ ಪೂಜೆ ಮಾಡುವುದನ್ನು ಬಿಟ್ಟುಬಿಡುತ್ತೇವೆಯೇ? ಬೆಳಗ್ಗೆ ಎದ್ದು ಪೂಜೆ ಮಾಡುವುದಿಲ್ಲವೇ?

ಅಧ್ಯಕ್ಷರು : ಇದು ಸರಿಯಲ್ಲ.

ಶ್ರೀ ಟಿ.ಬಿ. ಜಯಚಂದ್ರ : ನಾನಂತೂ ಪೂಜೆ ಮಾಡುವುದಿಲ್ಲ. ನನ್ನ ನಂಬಿಕೆಯೇ ಬೇರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು : ಒಳಗೊಂದು, ಹೊರಗೊಂದು. ಊರೂರಿನ ದೇವಸ್ಥಾನಗಳಿಗೆಲ್ಲಾ ಹೋಗಿ ಪೂಜೆ ಮಾಡಿಕೊಂಡು ಬಂದು ಜನರ ಹತ್ತಿರ ಓಟು ಕೇಳುತ್ತೀರಿ. ಆದರೆ, ಇಲ್ಲಿಗೆ ಬಂದು ಆಧುನಿಕ ತಂತ್ರಜ್ಞಾನವೆಂದು......

ಶ್ರೀ ಟಿ.ಬಿ. ಜಯಚಂದ್ರ : ನಾನು ಇವತ್ತಿನವರೆಗೂ ದೇವಸ್ಥಾನಕ್ಕೆ ಹೋಗಿಲ್ಲ, ಪೂಜೆ ಮಾಡಿಲ್ಲ.

ಅಧ್ಯಕ್ಷರು : ಪ್ಲೀಸ್, ಕುಳಿತುಕೊಳ್ಳಿ. ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ, ಎಲ್ಲರೂ ಕುಳಿತುಕೊಳ್ಳಬೇಕು.

(ಈ ಹಂತದಲ್ಲಿ ಶಾಸಕರಾದ ಶ್ರೀ ಎಸ್. ಶಿವಣ್ಣನವರು ಎದ್ದು ನಿಂತು ಮಾತನಾಡುತ್ತಿದ್ದುದು ಸ್ಪಷ್ಟವಾಗಿ ಕೇಳಿಸಲಿಲ್ಲ)

ಶ್ರೀ ಸಿದ್ದರಾಮಯ್ಯ : ತುಮಕೂರಿನವರು ಮಾತನಾಡಲು ಎದ್ದು ನಿಂತರೆ, ತುಮಕೂರಿನವರೇ ಹೇಳಬೇಕೆಂದು ಏನಾದರೂ ಇದೆಯೇ?

ಅಧ್ಯಕ್ಷರು : ಶಿವಣ್ಣನವರೆ, ತಾವು ಕುಳಿತುಕೊಳ್ಳಬೇಕೆಂದು ಹೇಳುತ್ತಿದ್ದೇನೆ, ಇದು ಸರಿಯಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಬಿಜೆಪಿ ಸರ್ಕಾರ ಇಲ್ಲದಿರುವ ರಾಜ್ಯಗಳಲ್ಲೂ ಸಂಸ್ಕೃತ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಗಿದೆ ಎಂದು ನಾನು ಹೇಳಿದೆ. ಇಲ್ಲವೆಂದು ನಾನೇನೂ ಹೇಳುವುದಿಲ್ಲ. ಆದರೆ, ದೇಶದ ಎಲ್ಲಾ ರಾಜ್ಯಗಳಲ್ಲೂ ಸಂಸ್ಕೃತ ವಿಶ್ವವಿದ್ಯಾನಿಲಯಗಳಿಲ್ಲ. ಕೇವಲ 12 ರಾಜ್ಯಗಳಲ್ಲಿ ಮಾತ್ರ ಸಂಸ್ಕೃತ ವಿಶ್ವವಿದ್ಯಾನಿಲಯಗಳಿವೆ. ಅವು ಯಾವುದೆಂದರೆ, ಆಂಧ್ರಪ್ರದೇಶ, ಬಿಹಾರ, ದೆಹಲಿ, ಕೇರಳ, ಮಹರಾಷ್ಟ್ರ, ಒರಿಸ್ಸಾ, ರಾಜಸ್ಥಾನ, ಉತ್ತರ ಪ್ರದೇಶ, ಗುಜರಾತ್, ಉತ್ತರಾಖಂಡ, ಪಶ್ಚಿಮ ಬಂಗಾಳ ಮತ್ತು ಮಧ್ಯಪ್ರದೇಶ.

ಒಬ್ಬ ಮಾನ್ಯ ಸದಸ್ಯರು : ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ್ ಸರ್ಕಾರ ಇರುವುದು.

Sri Siddaramaih : It is a political party. It is not the property of Communist Party or any other Party. ದೇಶದಲ್ಲಿ ಇರುವುದು ಕೇವಲ 12 ರಾಜ್ಯಗಳೇ? ಎಲ್ಲಾ ರಾಜ್ಯಗಳಲ್ಲೂ ಸಂಸ್ಕೃತ ವಿಶ್ವವಿದ್ಯಾನಿಲಯಗಳನ್ನು ತೆರೆದಿಲ್ಲ. ನಾನು ಏಕೆ ಹೇಳಿದ್ದೇನೆಂದರೆ, ಮಾನ್ಯ ಸಚಿವರಾದ ಜನಾರ್ಧನ ರೆಡ್ಡಿಯವರು ಆಂಧ್ರಪ್ರದೇಶದಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯ ಸ್ಥಾಪಿಸಲಾಗಿದೆ. ಅಲ್ಲಿ ಮುಖ್ಯಮಂತ್ರಿಗಳಾಗಿದ್ದ ರಾಜಶೇಖರರೆಡ್ಡಿಯವರು ತಮ್ಮ ಕಾಲದಲ್ಲಿ ಮಾಡಿದರು ಎಂದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾರು ಮಾಡಿದರು, ಯಾರು ಮಾಡಲಿಲ್ಲವೆಂದು..... it is my opinion, it my suggestion and the opinion of the many people who are denied opportunities from the Society.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ : ಕರ್ನಾಟಕ ಬಸವಣ್ಣನವರ ನಾಡು. ನಿನ್ನೆ ತಾನೇ 'ಬಸವಣ್ಣನವರು ನನ್ನ ರೋಲ್ ಮಾಡೆಲ್' ಎಂದು ಮುಖ್ಯಮಂತ್ರಿಯವರೇ ಹೇಳಿದ್ದಾರೆ. ಅಂತಹ ರಾಜ್ಯದಲ್ಲಿ.....

ಶ್ರೀ ಆರ್. ಅಶೋಕ್ : ಬರೀ ಬಸವಣ್ಣನವರು ಮಾತ್ರವಲ್ಲ, ಇಲ್ಲಿ ಕೆಂಪೇಗೌಡರೂ ಇದ್ದಾರೆ, ಎಲ್ಲರೂ ಇದ್ದಾರೆ.

O.32 F-23

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಹಾಗಂತ ಹೇಳಿದ್ದು ನಾನಲ್ಲ, ಮುಖ್ಯಮಂತ್ರಿಗಳು ನಿನ್ನೆ ಸದನದಲ್ಲಿಯೇ 'ಬಸವಣ್ಣನವರು ನನ್ನ ರೋಲ್

ಮಾಡೆಲ್' ಎಂದು ಹೇಳಿದ್ದಾರೆ. ಬಸವಣ್ಣನವರು ವಚನ ಕ್ರಾಂತಿ ಮುಖಾಂತರ 12ನೇ ಶತಮಾನದಲ್ಲಿ.....

ಶ್ರೀ ಆರ್. ಅಶೋಕ್ : ತಮಿಳು, ತೆಲುಗು, ಮರಾಠಿ, ಸಂಸ್ಕೃತ, ಎಲ್ಲಾ ಭಾಷೆಗಳೂ ಬೇಕು. ಆದರೆ, ಇಲ್ಲಿ ಬಂದು ಮಾತನಾಡುವಾಗ, ಯಾವುದೋ ಒಂದು ಭಾಷೆ ಬಗ್ಗೆ ಸೀಮಿತವಾಗಿ ಮಾತನಾಡುತ್ತೀರಲ್ಲ, ಕರ್ನಾಟಕದಲ್ಲಿ ಎಲ್ಲರೂ ಇದ್ದಾರೆ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ : ತಾವು ಬಸವಣ್ಣನವರಿಗೆ ಅಪಚಾರವೆಸಗಲು ಹೋಗುತ್ತಿದ್ದೀರಿ. ರೋಲ್ ಮಾಡೆಲ್ ಎಂದು ಹೇಳಿಕೊಂಡು ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ತಂದರೆ.....

ಶ್ರೀ ಆರ್. ಅಶೋಕ್ : ಬರೀ ಬಸವಣ್ಣನವರು ಮಾತ್ರ ರೋಲ್ ಮಾಡೆಲ್ ಅಲ್ಲ. ಕೆಂಪೇಗೌಡರು, ಪುರಂದರದಾಸರು, ಕನಕದಾಸರು ಎಲ್ಲರೂ ರೋಲ್ ಮಾಡೆಲ್‌ಗಳೇ ಆಗಿದ್ದಾರೆ.

ಅಧ್ಯಕ್ಷರು : ಅವರಿಬ್ಬರನ್ನು ಏಕೆ ಮತ್ತೆ ತರುತ್ತೀರಿ?

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ : ಬೇಕಿದ್ದರೆ, ವಚನ ಸಾಹಿತ್ಯ ವಿಶ್ವವಿದ್ಯಾನಿಲಯ ಸ್ಥಾಪಿಸಿ.

ಶ್ರೀ ಸಿದ್ದರಾಮಯ್ಯ : ಸಮಾಜದಲ್ಲಿ ಮನು ಬೇಕೇ? ಬಸವಣ್ಣ ಬೇಕೇ? ಎಂಬುದನ್ನು ಕರ್ನಾಟಕದಲ್ಲಿ ಕೇಳೋಣ. ಕರ್ನಾಟಕದಲ್ಲಿ ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಮನು ಬೇಕೇ? ಬಸವಣ್ಣ ಬೇಕೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಬಸವಣ್ಣನವರು ಮನು ಸಿದ್ಧಾಂತವನ್ನು ತಿರಸ್ಕಾರ ಮಾಡಿರುವವರು. Do you know that?

(2 – 40 PM)

ಶ್ರೀ ಸಿ.ಟಿ. ರವಿ : ಮನು ಸಿದ್ಧಾಂತವನ್ನು ಒಪ್ಪಿಕೊಂಡಿರುವವರು ಯಾರು? ಎಲ್ಲರೂ ತಿರಸ್ಕಾರ ಮಾಡಿರುವವರು.

ಶ್ರೀ ಸಿದ್ದರಾಮಯ್ಯ : ಬಸವಣ್ಣನವರು ಏನೇನು ಹೇಳಿದ್ದಾರೆ ಎಂಬುದನ್ನು ಹೇಳಲೆ? ಮೂಲತಃ ಬಸವಣ್ಣನವರು ಹುಟ್ಟಿದ್ದು ಬ್ರಾಹ್ಮಣರ ಜಾತಿಯಲ್ಲಿ. ಅವರು ಏನು ಹೇಳಿದ್ದಾರೆ ಗೊತ್ತೆ? ಈಗ ಬೇಡ. ಅದನ್ನೆಲ್ಲಾ ಹೇಳುವುದಕ್ಕೆ ಹೋದರೆ ನೀವು ಕೋಪಿಸಿಕೊಳ್ಳುತ್ತೀರಿ ಬಸವಣ್ಣನವರು ಹೇಳಿರುವ ವಿಚಾರವನ್ನು ಹೇಳಿದರೆ. ವೇದ ಉಪನಿಷತ್ತುಗಳನ್ನು ಚರ್ಚೆ

ಮಾಡುವವರು ಮುಂಡರು ಪೋಕರಿಗಳ ಘೋಷ್ಠಿ ಎಂದು ಹೇಳಿದ್ದಾರೆ. ಇದು ನಾನು ಹೇಳುವುದಿಲ್ಲ. ಬಸವಾದಿ ಶರಣರು, ವಚನಕಾರರು. ಈ ಪ್ರತಿಗಾಮಿ ಭಾಷೆಯನ್ನು ತಿರಸ್ಕಾರ ಮಾಡಿ ಜನರ ಭಾಷೆಯಲ್ಲಿ ಧರ್ಮ ಹೇಳತಕ್ಕಂಥ ಕೆಲಸವನ್ನು ಮಾಡಿದರು. ಅದಕ್ಕೋಸ್ಕರ ಬಸವಣ್ಣ ಇವತ್ತು ಎಲ್ಲ ಜನರ ಮನಸ್ಸಿನಲ್ಲಿರುವುದು. Not ಮನು.

ಶ್ರೀ ಆರ್. ಅಶೋಕ್ : ಅಂಬೇಡ್ಕರ್‌ರವರು ಕೂಡ ಸಂಸ್ಕೃತ ಭಾಷೆ ರಾಷ್ಟ್ರ ಭಾಷೆ ಆಗಬೇಕೆಂದು ಹೇಳಿದರು. ಸಿದ್ದರಾಮಯ್ಯನವರು ಕೋರ್ಟ್‌ನಲ್ಲಿ ವಾದ ಮಾಡಿದಂತೆ ಅವರಿಗೆ ಬೇಕಾದಂತೆ ವಿಚಾರಗಳೇನಿದೆ ಅಷ್ಟು ಮಾತ್ರ ತೆಗೆದುಕೊಳ್ಳುತ್ತಾರೆ. ಉಳಿದವರು ಹೇಳಿದ್ದನ್ನು ಯಾವುದನ್ನೂ ತೆಗೆದು ಕೊಳ್ಳುವುದಿಲ್ಲ.

ಡಾ: ಹೆಚ್.ಸಿ. ಮಹದೇವಪ್ಪ : ಅಬೇಡ್ಕರ್ ರವರು ಸಂಶ್ಕೃತವನ್ನು ಕಲಿಯಬೇಡಿ ಎಂದು ಹೇಳಿಲ್ಲ.

(ಗೊಂದಲ)

ಅಧ್ಯಕ್ಷರು : ಈ ಕಡೆಯವರು ಮತ್ತು ಆ ಕಡೆಯವರು ಒಟ್ಟಿಗೆ ಹೇಳಿದರೆ ಹೇಗೆ? ರವಿಯವರೆ ದಯವಿಟ್ಟು ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ನನ್ನ ಅನುಮತಿ ಇಲ್ಲದೇ ಯಾರೇ ಎದ್ದು ಮಾತನಾಡಿದರು ಅದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ. ರವಿಯವರೆ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಬಸವಣ್ಣನವರು ಒಬ್ಬ ವೈಚಾರಿಕ ದಾರ್ಶನಿಕ ವ್ಯಕ್ತಿ. ಆ ದಾರ್ಶನಿಕ ವ್ಯಕ್ತಿಯನ್ನು ನಾವು ಏಕೆ ಗೌರವಿಸುತ್ತೇವೆ ಮತ್ತು ಅವರ ಹೆಸರಿನಲ್ಲಿ ಅಥಾರಿಟಿಗಳನ್ನೆಲ್ಲಾ ಏಕೆ ಮಾಡಿದ್ದೇವೆಂದರೆ ಅವರು ಇಡೀ ಸಮಾಜಕ್ಕೆ ಮಾರ್ಗ ದರ್ಶನವನ್ನು ಮಾಡಿದರು. ಸಾಮಾಜಿಕ ನ್ಯಾಯವನ್ನು ಪ್ರತಿಪಾದನೆ ಮಾಡಿದರು. ಸರ್ವರಿಗೂ ಸಮಪಾಲು, ಸಮಬಾಳು ಎಂದು ಮಾಡಿದರು. ಅನುಭವ ಮಂಟಪವನ್ನು ಮಾಡಿ ಎಲ್ಲರನ್ನೂ ಸಮಾನವಾಗಿ ಕೂರಿಸಿದರು. ಇವತ್ತೇನು ನಾವು ಅಸೆಂಬ್ಲಿ, ಪಾರ್ಲಿಮೆಂಟ್ ಎಂದು ಕರೆಯುತ್ತೇವೋ ಈ ಅಸೆಂಬ್ಲಿ, ಪಾರ್ಲಿಮೆಂಟ್‌ಗಳು ಬಸವಣ್ಣನವರ ಕಾಲದಲ್ಲಿಯೇ ರಚನೆಯಾಗಿದ್ದವು. 12 ನೆಯ ಶತಮಾನದಲ್ಲಿ, ಆ concept ಮನು ಧರ್ಮಶಾಸ್ತ್ರದಲ್ಲಿ

ಬರುವುದಿಲ್ಲ. ಎಲ್ಲರನ್ನೂ ಒಂದೇ ವೇದಿಕೆ ಮೇಲೆ ತಂದಿರಲಿಲ್ಲ. ಇವತ್ತಿಗೂ ಕೂಡ ನಿಮಗೆ ಸುಮ್ಮನೆ ಒಂದು ಉದಾಹರಣೆಯನ್ನು ಹೇಳುತ್ತೇನೆ ಕೇಳಿ. ನೀವು ಮಂಡಲ್ ಕಮಿಷನ್ ವರದಿಯನ್ನು ಓದಿ. ಮಂಡಲ್ ಕಮಿಷನ್ ವರದಿ ಓದಿ. ಮಾನ್ಯ ಅಧ್ಯಕ್ಷರೆ ಪಾಂಡ್ಯನ್ ಎನ್ನುವವರು ಒಂದು dissenting note ಹಾಕಿದ್ದಾರೆ. ಇವರು Supreme Court Judge. ಇವತ್ತಿಗೂ ಕೂಡ ಒಂದು ವರ್ಗದ ಜನ ದೋಬಿ ಕೆಲಸ ಮಾಡುವ ಮಡಿವಾಳ ಜನಾಂಗದವರ ಸಾಮಾಜಿಕ ವ್ಯವಸ್ಥೆ ಹೇಗಿದೆಯೆಂದರೆ ಕನ್ಯಾಕುಮಾರಿ ಹತ್ತಿರವಿರುವ ಒಂದು ಊರಿನಲ್ಲಿರುವ ಇವತ್ತಿಗೂ ಕೂಡ ಮಡಿವಾಳರು ನಿಶಾಚರರಾಗಿದ್ದಾರೆ. ಅವರು ಹಗಲು ಹೊತ್ತು ಯಾರಿಗೂ ತಮ್ಮ ಮುಖವನ್ನು ತೋರಿಸುವಂತಿಲ್ಲ. They should not show their faces, nobody is ready to see their face. ಅದನ್ನು ಮಂಡಲ್ ಕಮಿಷನ್ ವರದಿಯಲ್ಲಿ ಉಲ್ಲೇಖ ಮಾಡಿದ್ದಾರೆ. ವರ್ಣಾಶ್ರಮ ಧರ್ಮದಲ್ಲಿ ಆ ರೀತಿ ಇತ್ತು. ಸಮಾಜವನ್ನು ಒಡೆಯತಕ್ಕಂಥ ಕೆಲಸ ಆಗ ಆಗಿತ್ತು.

(ಗೊಂದಲ)

ಅಧ್ಯಕ್ಷರು : ರವಿಯವರೆ ಕುಳಿತುಕೊಳ್ಳಿ, ಸಿದ್ದರಾಮಯ್ಯನವರೆ, ಬೇಗ ಮುಗಿಸಿ.

ಶ್ರೀ ಸಿದ್ದರಾಮಯ್ಯ : ಸಂಸ್ಕೃತ ಮತ್ತು ವೇದ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಬೇಕೆಂದು ತಂದಿರತಕ್ಕಂಥ ಈ ಬಿಲ್‌ನ ಹಿಂದುಗಡೆ ಒಂದು ಹುನ್ನಾರವಿದೆ. ಈ ರೀತಿ ಹುನ್ನಾರವಿರುವುದರಿಂದ ಇದು ಬಹು ಸಂಖ್ಯಾತ ವರ್ಗದ ಸಂಸ್ಕೃತಿಗೆ, ಬದುಕಿಗೆ ಮತ್ತು ಅವರ ಭಾಷೆಗೆ ವಿರೋಧವಿರುವುದರಿಂದ ಕರ್ನಾಟಕದಲ್ಲಿ ಈ ವಿಶ್ವವಿದ್ಯಾಲಯವನ್ನು ಮಾಡುವ ಅಗತ್ಯವಿಲ್ಲ. ಕನ್ನಡ ಭಾಷೆಗೆ ಕನ್ನಡ ವಿಶ್ವವಿದ್ಯಾಲಯವಿದೆ. ಆದುದರಿಂದ ಸಂಸ್ಕೃತ ವಿಶ್ವವಿದ್ಯಾಲಯದ ಅವಶ್ಯಕತೆಯಿಲ್ಲವೆಂದು ನಾನು ಹೇಳುತ್ತಿರುವುದು. ಆದುದರಿಂದ ನಾವೆಲ್ಲರೂ ಕೂಡ ಇದನ್ನು ತೀವ್ರವಾಗಿ ವಿರೋಧ ಮಾಡುತ್ತೇವೆ.

(ಗೊಂದಲ)

ಶ್ರೀ ಆರ್. ಅಶೋಕ್ : ರೇವಣ್ಣನವರು ಬೆಂಬಲವಿದೆ.

ಶ್ರೀ ಸಿದ್ದರಾಮಯ್ಯ : ಅಯ್ಯೋ ಅವರಿಂದ ಬೆಂಬಲ ಮಾಡಿಸಿಕೊಳ್ಳಿ. 20 ತಿಂಗಳ ಕಾಲ ಅವರ ಜೊತೆಯಲ್ಲಿದ್ದಿರಲ್ಲ. ಇನ್ನೇನು ಮತ್ತೆ ಹೇಳಿ. ನಿಮ್ಮ influence ಅವರ ಮೇಲೆ ಆಗಿದೆ.

ಶ್ರೀ ಆರ್. ಅಶೋಕ್ : 20 ವರ್ಷ ಜೆ.ಡಿ.(ಎಸ್) ಜೊತೆಯಲ್ಲಿಯೇ ಇದ್ದಿರಲ್ಲ ಸಾರ್.

ಶ್ರೀ ಸಿದ್ದರಾಮಯ್ಯ : ಅವರ ಮೇಲೆ ನಮ್ಮ influence ಮಾಡಿಲ್ಲ. ನೀವು ಹೋಗಿ ಅವರ ಮೇಲೆ ನಿಮ್ಮ influence ಮಾಡಿದ್ದೀರಿ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ : ಜೆ.ಡಿ.(ಎಸ್) ಜೊತೆ 20 ವರ್ಷವಿದ್ದರೂ ಅವರನ್ನು ಮಲೀನ ಮಾಡಲಿಲ್ಲ. ಆದರೆ ನೀವು ಅವರನ್ನು 20 ತಿಂಗಳಲ್ಲಿ ಮಲೀನ ಮಾಡಿದ್ದೀರಿ ಎಂದು ವಿರೋಧ ಪಕ್ಷದ ನಾಯಕರು ಹೇಳುತ್ತಿರುವುದು.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಸಿದ್ದರಾಮಯ್ಯನವರೆ, ಬೇಗ ಮುಗಿಸಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕ ಬಹು ಸಂಖ್ಯಾತ ವರ್ಗಕ್ಕೆ ವಿರೋಧವಾಗಿರತಕ್ಕಂಥದ್ದು. ಅವರ ಬದಲು ನಾನು ಸಲಹೆ ಮಾಡುವುದೇನೆಂದರೆ, ಜಾನಪದ ಯುನಿವರ್ಸಿಟಿಯನ್ನು ಮಾಡುವುದಕ್ಕೆ ವಿಧೇಯಕವನ್ನು ತೆಗೆದುಕೊಂಡು ಬಂದರೆ ಬಹುಸಂಖ್ಯಾತ ವರ್ಗದ ಸಂಸ್ಕೃತಿ, ಬದುಕು, ಅವರ ಭಾಷೆ, ಹೀಗೆ ಎಲ್ಲದಕ್ಕೂ ಕೂಡ ಒಳ್ಳೆಯದಾಗುತ್ತದೆ. ಆದುದರಿಂದ ಅದನ್ನು ಮಾಡಿ ಎಂದು ಸಲಹೆ ಮಾಡಿ ಈ ವಿಧೇಯಕವನ್ನು ವಾಪಸ್ ತೆಗೆದುಕೊಳ್ಳಬೇಕು. ಈ ವಿಧೇಯಕವನ್ನು ನಾನು ತೀವ್ರವಾಗಿ ನಾನು ವಿರೋಧ ಮಾಡುತ್ತೇನೆ. ನೀವು ಇದನ್ನು ಪಾಸ್ ಮಾಡಿದರೆ ಹೊರಗಡೆ ಬಹು ಸಂಖ್ಯಾತ ಜನರ ಕೋಪಕ್ಕೆ ಗುರಿಯಾಗುತ್ತೀರಿ, ಅವರ ಕೋಪಕ್ಕೆ ನೀವು ತುತ್ತಾಗುತ್ತೀರಿ, ಇದು ಸರಿಯಾದುದಲ್ಲ, ಅವರ ಅಭಿಪ್ರಾಯಕ್ಕೆ ವಿರುದ್ಧವಾದಂಥ ಕೆಲಸ ಮಾಡುವುದಕ್ಕೆ ಹೊರಟಿದ್ದೀರಿ. ಜನರ ಹಣವನ್ನು ಇದಕ್ಕೋಸ್ಕರವಾಗಿ ಖರ್ಚು ಮಾಡಬೇಕಾದಂಥ ಅಗತ್ಯವಿಲ್ಲ. ಈ ವಿಶ್ವವಿದ್ಯಾಲಯದ ಅಗತ್ಯವಿಲ್ಲವೆಂದು ಮತ್ತೆ ಹೇಳಬಯಸುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಅನೇಕ ಹಿರಿಯ ಸದಸ್ಯರು ಇಲ್ಲಿ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಡಿ.ಕೆ. ಶಿವಕುಮಾರ್‌ರವರು ಕೊಟ್ಟಿರತಕ್ಕಂಥ ಸಲಹೆಗಳನ್ನು ನಾನು ಪರಿಗಣಿಸುತ್ತೇನೆ. ಈಗಾಗಲೇ ತಮಗೆ ಪತ್ರವನ್ನು ನಾನು ಕಳುಹಿಸಿದ್ದೇನೆ. ಕರ್ನಾಟಕ ಸಂಸ್ಕೃತ ವೇದ ವಿಶ್ವವಿದ್ಯಾಲಯ ವಿಧೇಯಕ 2009 ರಲ್ಲಿ ವೇದ ಎನ್ನುವಂಥ ಪದವನ್ನು ಬಿಟ್ಟುಬಿಡತಕ್ಕಂಥದ್ದು ಎನ್ನುವಂಥದ್ದು ಎಲ್ಲೆಲ್ಲಿದೆ ಅದನ್ನು ಬಿಡತಕ್ಕಂಥದ್ದು ಎನ್ನುವಂಥದ್ದನ್ನು ಪರಿಗಣಿಸುತ್ತಾ,

ಶ್ರೀ ಸಿದ್ದರಾಮಯ್ಯ : ಅದರ ಜೊತೆ ಉದ್ದೇಶಗಳು ಕೂಡ ಬದಲಾವಣೆ ಆಗಬೇಕಾಗುತ್ತದೆ.

ಶ್ರೀ ಅರವಿಂದ ಲಿಂಬಾವಳಿ : ಆಯಿತು, ಆಯಿತು, ಮಾಡೋಣ. ಉದ್ದೇಶವಿರಲಿ, ನಿಮ್ಮ ದುರುದ್ದೇಶವೂ ಕೂಡ ಬದಲಾವಣೆಯಾಗಬೇಕು. ಏಕೆಂದರೆ ಹಿಂದೆ 12 ರಾಜ್ಯಗಳಲ್ಲಿ ಕಾಂಗ್ರೆಸ್ ಇರುವಂಥ ರಾಜ್ಯಗಳಲ್ಲಿ ವಿಶ್ವವಿದ್ಯಾಲಯಗಳಿವೆ. ಕರ್ನಾಟಕದಲ್ಲಿ ಮಾಡುವುದಕ್ಕೆ ಹೋದರೆ , , ,

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಜಯಚಂದ್ರರವರೆ, ಕಲಿತುಕೊಳ್ಳಿ, ಈ ರೀತಿ ಎಲ್ಲರೂ ಒಟ್ಟಿಗೆ ಒಮ್ಮೆಲೆ ಮಾತನಾಡುವುದು ಸರಿಯಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಅವರು ನಮ್ಮದು ದುರುದ್ದೇಶವಿದೆ ಎಂದು ಹೇಳುತ್ತಿದ್ದಾರೆ. ದುರುದ್ದೇಶ ಎಂದರೆ ಏನು?

ಶ್ರೀ ಅರವಿಂದ ಲಿಂಬಾವಳಿ : ಹೌದು, ನಾನು ಮಾತನಾಡುವಾಗ ಯಾವ ಪದಗಳನ್ನು ಬಳಸಿದ್ದೇನೋ ಅದಕ್ಕೆ ಬದ್ಧನಾಗಿದ್ದೇನೆ. ನೀವು ವಿತಂಡ ವಾದ ಮಾಡುವುದಾದರೆ ನಾನೂ ಕೂಡ ವಿತಂಡ ವಾದವನ್ನೇ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ವಿತಂಡವಾದವಲ್ಲ. ನಿಮ್ಮದು ಮೊಂಡು ವಾದ. ವಿತಂಡವಾದವಲ್ಲ, ನಿಮ್ಮದು ಮೊಂಡುವಾದ.

ಶ್ರೀ ಅರವಿಂದ ಲಿಂಬಾವಳಿ : ಏಕೆ ಹೀಗೆ ನೀವು ಮಧ್ಯೆ ಮಧ್ಯೆ ಏಳುತ್ತೀರಿ? ನೀವು ಸೀನಿಯರ್ ಲೀಡರ್ ಆಗಿದ್ದೀರಿ. ನೀವು ಸ್ವಲ್ಪ ಸಮಾಧಾನವಾಗಿರಿ.

ಡಾ: ಹೆಚ್.ಸಿ. ಮಹದೇವಪ್ಪ : ಮೊದಲು ನೀವು ಸಮಾಧಾನವಾಗಿರಿ. You are not supposed to be excited like this.

ಶ್ರೀ ಸಿದ್ದರಾಮಯ್ಯ : ಲಿಂಬಾವಳಿಯವರು ಪೇಸನ್ಸ್ ಕಳೆದುಕೊಂಡ ವರಂತಿದ್ದಾರೆ.

ಶ್ರೀ ಅರವಿಂದ ಲಿಂಬಾವಳಿ : ನಾನು ಪೇಶನ್ಸ್ ಕಳೆದುಕೊಂಡಿಲ್ಲ. ಏಕೆಂದರೆ 58 ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಬಹುಪಾಲು ಖಾಸಗಿ ವಿಶ್ವವಿದ್ಯಾಲಯಗಳಿರುವುದು ಕಾಂಗ್ರೆಸ್ ಸರ್ಕಾರ ಇರತಕ್ಕಂಥ ರಾಜ್ಯಗಳಲ್ಲಿ. ಅಲ್ಲಿ ಖಾಸಗಿ ವಿಶ್ವವಿದ್ಯಾಲಯಗಳು ಬರಬಹುದಂತೆ. ಆದರೆ ಕರ್ನಾಟಕದಲ್ಲಿ ಬರಲು ಇವರು ವಿರೋಧ ಮಾಡುತ್ತಾರೆ. 12 ರಾಜ್ಯಗಳಲ್ಲಿ ಸಂಸ್ಕೃತ ವಿಶ್ವವಿದ್ಯಾಲಯಗಳಿರುವಾಗ . . . .

(ಗೊಂದಲ)

ಅಧ್ಯಕ್ಷರು : ಎ.ಎಸ್. ಪಾಟೀಲರೆ, ನೀವು ಕುಳಿತುಕೊಳ್ಳಿ.

ಶ್ರೀ ಅರವಿಂದ ಲಿಂಬವಳಿ : ಮಾನ್ಯ ಅಧ್ಯಕ್ಷರೇ, ಇಲ್ಲಿ ವಿಶೇಷವಾ ದಂತಹ ಅಧ್ಯಯನದ ಅವಶ್ಯಕತೆ ಹಿನ್ನೆಲೆಯೊಳಗೆ ಈ ವಿಧೇಯಕವನ್ನು ನಾನು ತಂದಿದ್ದೇನೆ. ಆದುದರಿಂದ ದಯವಿಟ್ಟು ಇದನ್ನು ಅನುಮೋದಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ನಾವು ಇವರನ್ನು ಏನೂ ಕೇಳಲಿಲ್ಲ. ಇಲ್ಲಿವೇದ ಎನ್ನುವ ಪದವನ್ನು ಕೈಬಿಡಿ. ಅದನ್ನು ಕೈಬಿಟ್ಟ ಮೇಲೆ ಆ ವೇದ ಎನ್ನುವ ಪದಕ್ಕೆ ಪೂರಕವಾಗಿ ಶಬ್ಧಗಳು ಏನಿವೆ, ಉದ್ದೇಶ ಏನಿದೆ, ಅದನ್ನು ಬದಲಾವಣೆ ಮಾಡಿ. ಅದನ್ನು ಅವರು ಹೇಳುವುದಿಲ್ಲ.

ಅಧ್ಯಕ್ಷರು : ಅದನ್ನು ಅವರು consider ಮಾಡುತ್ತೇನೆಂದು ಹೇಳಿದ್ದಾರಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಎಲ್ಲಿ ಹೇಳಿದರು?

ಅಧ್ಯಕ್ಷರು : ಮೊದಲೇ ಹೇಳಿದರು.

ಶ್ರೀ ಸಿದ್ಧರಾಮಯ್ಯ : ಅವರು ಹೇಳಲಿಲ್ಲ.

ಮಾನ್ಯ ಸದಸ್ಯರು : ಅವರು ವೇದದ ಬಗ್ಗೆ ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ಎಲ್ಲಾದಕ್ಕೂ amendment ತೆಗೆದುಕೊಂಡು ಬನ್ನಿ.

ಅರವಿಂದ ಲಿಂಬಾವಳಿ : ಇದನ್ನು ಮುಂದಕ್ಕೆ ಹಾಕಬೇಕೆನ್ನುವುದು ನಿಮ್ಮ ಉದ್ದೇಶ ಎಂದು ಗೊತ್ತಾಗುತ್ತದೆ. ಆ ಉದ್ದೇಶ ನನಗೆ ಇಲ್ಲ. ವೇದ ಎನ್ನುವುದರ ಬಗ್ಗೆ ನಾನು ಈಗಾಗಲೇ ತಿಳಿಸಿದ್ದೇನೆ.

ಶ್ರೀ ಸಿದ್ದರಾಮಯ್ಯ : ಈ ಮಸೂದೆಯನ್ನು ವಾಪಸ್ಸು ತೆಗೆದು ಕೊಳ್ಳಬೇಕು.

ಅಧ್ಯಕ್ಷರು : ಇಲ್ಲಿ ತಿದ್ದುಪಡಿಗೆ ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ಇದು ಬಹುಸಂಖ್ಯಾತ ಜನರ ವಿರೋಧ ವಾದಂತಹ ಭಾಷೆ. ಈ University ಬೇಕಾಗಿಲ್ಲ. ಜನ ಸಾಮಾನ್ಯರ ಹಣವನ್ನು ಇದಕಕೋಸ್ಕರ ಖರ್ಚು ಮಾಡಬೇಕಾದಂತಹ ಅಗತ್ಯವಿಲ್ಲ. ಇದರಿಂದ ಜನರ ಪಗ್ರತಿಯಾಗುವುದಿಲ್ಲ. ಇದರಿಂದ ಜನರ ಬದುಕಿನಲ್ಲಿ ಬದಲಾವಣೆಯಾಗುವುದಿಲ್ಲ. ಇದು ಜನರ ಆಡು ಭಾಷೆಯಲ್ಲ. ನಾವು ಇದಕ್ಕೆ ಸಂಪೂರ್ಣವಾಗಿ ವಿರೋಧ ಮಾಡಿ ನಮ್ಮ ಪ್ರತಿಭಟನೆ ವ್ಯಕ್ತಪಡಿಸುವುದಕ್ಕೆ walk out ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದವರು ಸದನದಿಂದ walk out ಮಾಡಿದರು)

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ. ಆಂಧ್ರದಲ್ಲಿ ಆದಾಗ ಪ್ರತಿಭಟನೆ ಮಾಡಬೇಕಾಗಿತ್ತು. ಕೇರಳದಲ್ಲಿ ಆದಾಗ ಪ್ರತಿಭಟನೆ ಮಾಡಿದ್ದರೆ, ಮಹಾರಾಷ್ಟ್ರದಲ್ಲಿ ಕಾಂಗ್ರೆಸ್‌ನವರು ಪ್ರತಿಭಟನೆ ಮಾಡಿದ್ದರೆ, ಆಗ real congress ಅನ್ನುತ್ತಿದ್ದೆವು.

ಅಧ್ಯಕ್ಷರು : ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"2009ನೇ ಸಾಲಿನ ಕರ್ನಾಟಕ ಸಂಸ್ಕೃತ–ವೇದ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 72 ರವರೆಗೆ

ಅಧ್ಯಕ್ಷರು : "ಮಾನ್ಯ ಸಚಿವರು ಖಂಡ ಒಂದು, ಎರಡು ಮತ್ತು ಮೂರಕ್ಕೆ ತಿದ್ದುಪಡಿಯನ್ನು ನೀಡಿರುತ್ತಾರೆ. ಖಂಡ 2 ರಿಂದ 72 ರವರೆಗೆ ಖಂಡಗಳು ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 72 ರವರೆಗಿನ ತಿದ್ದುಪಡಿ ಖಂಡಗಳು ಸೇರಿದಂತೆ ವಿಧೇಯಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, "2010ನೇ ಸಾಲಿನ ಕರ್ನಾಟಕ ಸಂಸ್ಕೃತ–ವೇದ ವಿಶ್ವವಿದ್ಯಾಲಯ ವಿಧೇಯಕವನ್ನು ತಿದ್ದುಪಡಿಯಾಗಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, 2010ನೇ ಸಾಲಿನ ಕರ್ನಾಟಕ ಸಂಸ್ಕೃತ–ವೇದ ವಿಶ್ವವಿದ್ಯಾಲಯ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಜಾನುವಾರು ಹತ್ಯೆ ವಿಧೇಯಕವನ್ನು ಮಂಡಿಸಲು ಅನುಮತಿ ನೀಡಿ, ಮಾನ್ಯ ಸಚಿವರು explain ಮಾಡುತ್ತಾರೆ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಯಾರೂ ಇಲ್ಲ, ಈಗ ಮೂರು ಗಂಟೆ ಸಮಯವಾಗುತ್ತಿದೆ.

ಅಧ್ಯಕ್ಷರು : ಅರ್ಧ ಗಂಟೆ ಊಟಕ್ಕೆ ಬಿಡೋಣ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೇ ಈಗ ಮೂರು ಗಂಟೆಯಾಗಿದೆ, ಊಟಕ್ಕೆ ಸಮಯವಾಗಿದೆ, ಅರ್ಧ ಗಂಟೆ ಬಿಟ್ಟು ತೆಗೆದುಕೊಳ್ಳಿ.

ಅಧ್ಯಕ್ಷರು : ಈಗ ಈ ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳೋಣ. ಆಮೇಲೆ ಊಟಕ್ಕೆ ಬಿಡುತ್ತೇನೆ. ಈಗ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ 2010 ಅನ್ನು ಪರ್ಯಾಲೋಚನೆಗೆ ಮಂಡಿಸಲು ಸೂಚಿಸುತ್ತೇನೆ. ಇದರ ಬಗ್ಗೆ ಮಾನ್ಯ ಸಚಿವರು explain ಮಾಡಿಬಿಡಿ. ಇದನ್ನು explain ಮಾಡಿದ ತಕ್ಷಣ ಊಟಕ್ಕೆ ಬಿಡುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೇ, ಈಗ Explain ಮಾಡುವುದು ಬೇಡ.

VII ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ 2010

ಪರ್ಯಾಲೋಚನಾ ಪ್ರಸ್ತಾವ

ಶ್ರೀ ರೇವು ನಾಯಕ್ ಬೆಳಮಗಿ (ಪಶು ಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೇ, 2010ರ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ರೇವು ನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೇ, ಗೋ ಸಂಪತ್ತು, ದೇಶ ಸಂಪತ್ತು, ದೇಶ ಸಂಪತ್ತು ಎಂದರೆ ರಾಜ್ಯ ಸಂಪತ್ತು. ಗೋವು ಬೆಳೆಯಬೇಕು, ದೇಶ ಉಳಿಯಬೇಕಾದರೆ ಅದನ್ನು ರಕ್ಷಣೆ ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಈಗ ಊಟಕ್ಕೆ ಬಿಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಮಧ್ಯಾಹ್ನ 4.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವು ಮಧ್ಯಾಹ್ನ 2.56 ಕ್ಕೆ ಮುಕ್ತಾಯಗೊಂಡು ಮತ್ತೇ 4.00 ಸೇರಲು ನಿಶ್ಚಯಿಸಿತು)

(ಮತ್ತೆ ಸಭೆಯು ಮಧ್ಯಾಹ್ನ 4.00 ಗಂಟೆಗೆ ಪ್ರಾರಂಭವಾಯಿತು ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಬಂದ ತಕ್ಷಣ .. ..

ಅಧ್ಯಕ್ಷರು : ಈಗ ಬಿಲ್ ಅನ್ನು ಚರ್ಚೆಗೆ ತೆಗೆದುಕೊಂಡು ಆಗಿದೆ, ಅದು ಆದ ಮೇಲೆ ಮತ್ತೆ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ.ರೇವಣ್ಣ : ತಾವು ಬಿಲ್ ಅನ್ನು ಬೇಕಾದರೆ ಆಮೇಲೆ ತೆಗೆದುಕೊಳ್ಳಿ, ಮೊದಲು ಮಾನ್ಯ ಮುಖ್ಯಮಂತ್ರಿಯವರು ಬಂದ ತಕ್ಷಣ ನೈಸ್ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೀರಿ.

ಅಧ್ಯಕ್ಷರು : ಈಗ ಬಿಲ್ ಅನ್ನು ತೆಗೆದುಕೊಂಡು ಆಗಿದೆ, ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ. ರೇವಣ್ಣ : ನಾವು ಧರಣಿಗೆ ಕುಳಿತುಕೊಳ್ಳುತ್ತೇವೆ. ನಿನ್ನೆ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ತಾವು ಇವತ್ತು ಮಾನ್ಯ ಮುಖ್ಯಮಂತ್ರಿಯವರು ಬಂದಮೇಲೆ ತೆಗೆದುಕೊಳ್ಳೋಣವೆಂದು ಹೇಳಿದ್ದೀರಿ.

ಅಧ್ಯಕ್ಷರು : ನಾನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನಲ್ಲಾ, ಮಾನ್ಯ ಮಂತ್ರಿಯವರೆ, ತಾವು explain ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಬಿಲ್ ಬೇಕಾದರೆ ಆಮೇಲೆ ತೆಗೆದುಕೊಳ್ಳಿ, ಇವತ್ತು ರಾಜ್ಯದ ಮೂವತ್ತು ಸಾವಿರ ಕೋಟಿ ರೂಪಾಯಿಗಳು ಹೋಗುತ್ತಿರುವಾಗ ಇದನ್ನು ತಾವು ತೆಗೆದುಕೊಳ್ಳಿ, ಬಿಲ್ ಬೇಕಾದರೆ ಆಮೇಲೆ ತೆಗೆದುಕೊಳ್ಳಿ, ಇದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಇದಕ್ಕೆ ನಾವು ವಿರೋಧ ಮಾಡುತ್ತೇವೆ.

ಅಧ್ಯಕ್ಷರು : ನಿಮಗೆ ಅವಕಾಶ ಕೊಡುತ್ತೇನೆ. introduce ಮಾಡಿದ್ದನ್ನು ವಾಪಸ್ಸು ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ. ಮಾನ್ಯ ಮಂತ್ರಿಯವರೆ, explain ಮಾಡಿ.

(ಈ ಹಂತದಲ್ಲಿ ಜೆ.ಡಿ.ಎಸ್. ಶಾಸಕರು ಸದನದ ಬಾವಿಗೆ ಧರಣಿಗೆ ಬಂದರು)

ಅಧ್ಯಕ್ಷರು : ಇದು ಆದ ತಕ್ಷಣ ನಿಮಗೆ ಎಷ್ಟು ಹೊತ್ತಾದರೂ ಅವಕಾಶ ಕೊಡುತ್ತೇನೆ.

(ಜೆ.ಡಿ.ಎಸ್. ಶಾಸಕರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು well ಗೆ ಬಂದಿರುವಂಥದ್ದು ನಾಳೆ ಪತ್ರಿಕೆಗಳಲ್ಲಿ ಬರುವುದಿಲ್ಲ, ಚರ್ಚೆ ಶುರು ಮಾಡುವಿರಂತೆ ತಮ್ಮ ಸ್ಥಾನಗಳಿಗೆ ಬನ್ನಿ. ನಾವೇ ಚರ್ಚೆ ಮಾಡೋಣವೆಂದು ಹೇಳುತ್ತಿದ್ದೇವಲ್ಲ, ಚರ್ಚೆ ಮಾಡೋಣವೆಂದು ಇದು ಒಳ್ಳೆ ಕತೆಯಾಯಿತಲ್ಲಾ, ತಾವು ತಮ್ಮ ಸ್ಥಳಗಳಿಗೆ ಬನ್ನಿ, ಇವತ್ತು ಎಲ್ಲಾ ವಿಷಯಗಳಿಗೂ ಚರ್ಚೆ ಮಾಡಲು ಅವಕಾಶವಿದೆಯೆಂದು ಹೇಳಿದೆ.

(ಜೆ.ಡಿ.ಎಸ್. ಪಕ್ಷದ ಶಾಸಕರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು : ಈಗ ಬಿಲ್ ಆಗಿದೆ, ಮಧ್ಯದಲ್ಲಿ ಆಗಿರುವುದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ? Procedure ಬಿಟ್ಟು ಮಾಡಬೇಕೆಂದರೆ ಆಗುವುದಿಲ್ಲ. ಮಾನ್ಯ ಮಂತ್ರಿಗಳೆ, ತಾವು explain ಮಾಡಿ.

ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಈ ಬಿಲ್ ಆದ ತಕ್ಷಣ ನಿಮಗೆ ಅವಕಾಶ ಕೊಡುತ್ತೇನೆ.

(ಜೆ.ಡಿ.ಎಸ್. ಶಾಸಕರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು : ಇದು ಅಷ್ಟೆ ರಾತ್ರಿ 12 ಗಂಟೆಯಾದರೂ ನಡೆಸೋಣ, ಸಹಕಾರ ಕೊಡಿ.

Sri R. Roshan Baig : House is not in order.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, House is not in order, ಅವರಿಗೆ request ಮಾಡಿಕೊಂಡು ಕುಳಿತುಕೊಳ್ಳುವುದಕ್ಕೆ ಹೇಳಿ.

ಅಧ್ಯಕ್ಷರು : ನಾನು ಅವರಿಗೆ request ಮಾಡುತ್ತಿದ್ದೇನೆ. ಅವರಿಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ.

(ಮಾನ್ಯ ರೇವಣ್ಣನವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಸಿದ್ದರಾಮಯ್ಯ : ಈಗ bill move ಮಾಡಿ ಬಿಟ್ಟಿದ್ದಾರಲ್ಲಾ.. .

ಅಧ್ಯಕ್ಷರು : Bill move ಮಾಡಿ ಆಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ತಾವು agenda ಪ್ರಕಾರ ಹೋಗುತ್ತಿದ್ದೇವೆ.

(ಜೆಡಿ(ಎಸ್) ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಡೆಸಿದ್ದರು)

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ನಾವು ಅಜೆಂಡ ಪ್ರಕಾರ ಹೋಗುತ್ತಿದ್ದೇವೆ. question hour ಆಯಿತು, ಅದಾದ ಮೇಲೆ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು, ಅದಾದ ಮೇಲೆ ಶಾಸನ ರಚನೆ, ಅದಾದ ಮೇಲೆ, ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ, ಅದರಲ್ಲೂ ಮೊದಲು ಸನ್ಮಾನ್ಯ ರೇವಣ್ಣನವರು ಕೊಟ್ಟಿರುವ K.I.A.D.B. ಬಗ್ಗೆ ಚರ್ಚೆಯಿದೆ, ಅದಾದಮೇಲೆ ಸಿದ್ದರಾಮಯ್ಯನವರು ಕೊಟ್ಟಿರುವ, ರಕ್ಷಿತಾರಣ್ಯ

ಗಳಲ್ಲಿ ಗಣಿಗಾರಿಕೆಗೆ ಅನುಮತಿ ನೀಡಿರುವ ವಿಷಯದ ಬಗ್ಗೆ ಚರ್ಚೆಯಿದೆ, ಅದಾದ ಮೇಲೆ ನೈಸ್ ಬಗ್ಗೆ ಚರ್ಚೆಯಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ರಾತ್ರಿ 12 ಗಂಟೆಯಾಗಲಿ, ನೈಸ್ ಬಗ್ಗೆ ಚರ್ಚೆ ಮಾಡೋಣ. ರೇವಣ್ಣನವರೇ ನಾವು ರೆಡಿ ಇದ್ದೇವೆ.

(ಗೊಂದಲ)

ಅಧ್ಯಕ್ಷರು : ಇವತ್ತು ಎಷ್ಟು ಹೊತ್ತಾದರೂ ಅದನ್ನು ಚರ್ಚೆ ಮಾಡೋಣ.

ಶ್ರೀ ಹೆಚ್.ಡಿ.ರೇವಣ್ಣ : ಅಜೆಂಡಾ ಪ್ರಕಾರ ಏನಿದೆ ಎಂದು ನೋಡಿ.

ಅಧ್ಯಕ್ಷರು : ಅಜೆಂಡ ಪ್ರಕಾರವೇ ಹೇಳುತ್ತಿರುವುದು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಎಲ್ಲ ಬಿಲ್‌ಗಳನ್ನು ಪಾಸ್ ಮಾಡಿಕೊಂಡು ನೀವು ಮನೆಗೆ ಹೋಗಬೇಕು ಎನ್ನುವ ದೃಷ್ಟಿಯಿಂದ ಹೀಗೆ ಮಾಡುತ್ತಿದ್ದೀರಿ. ಅಜೆಂಡಾದಲ್ಲಿ ಏನಿದೆ ಎಂದು ತೆಗೆದು ನೋಡಿ. ಅಜೆಂಡ ಪ್ರಕಾರ ಹೋಗುತ್ತಿದೆಯೇ?

ಅಧ್ಯಕ್ಷರು : ರಾತ್ರಿ 12 ಗಂಟೆಯಾದರೂ ಚರ್ಚೆಗೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಬಿಲ್‌ಗಳನ್ನು ಬೇಕಾದರೆ ಮುಂದಕ್ಕೆ ಹಾಕಿ.

(ಗೊಂದಲ)

ಅಧ್ಯಕ್ಷರು : ಅವರನ್ನು ಒಪ್ಪಿಸಿ ಮೊದಲು ನಿಮ್ಮದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : ನಾವು ಒಪ್ಪುವುದಿಲ್ಲ.

ಅಧ್ಯಕ್ಷರು : ಅವರನ್ನು ಒಪ್ಪಿಸುತ್ತೇನೆ. ನಿಮ್ಮದೇ ಮೊದಲು ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಅಜೆಂಡ ಪ್ರಕಾರ ಇದು ಎರಡನೆಯದಿತ್ತು. ದುರುದ್ದೇಶದಿಂದ ಇದನ್ನು ಕೊನೆಯಲ್ಲಿಟ್ಟು, ಎಲ್ಲ ಬಿಲ್‌ಪಾಸ್ ಮಾಡಿ ಕೊಂಡು ಹೋಗಬೇಕು ಎನ್ನುವ ಉದ್ದೇಶದಿಂದ ಮಾಡುತ್ತಿದ್ದೀರಿ. ಏಕೆಂದರೆ ಇದು ಸಾವಿರಾರು ಕೋಟಿ ರೂಪಾಯಿಗಳ ಹಗರಣ.

ಅಧ್ಯಕ್ಷರು : ಅಜೆಂಡ ಪ್ರಕಾರ ಸದನ ನಡೆಸಲು ಅವಕಾಶ ಮಾಡಿಕೊಡಿ ಎಂದು ವಿನಂತಿ ಮಾಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಬೆಳಗ್ಗೆಯೇ ಇದನ್ನು ನಿಯಮ 60ರ ಕೆಳಗೆ ಕೊಟ್ಟಿದ್ದೇನೆ. ಆಗ ನೀವು, ಮುಖ್ಯಮಂತ್ರಿಗಳಿಲ್ಲ, ಅವರು ಕೌನ್ಸಿಲ್‌ನಲ್ಲಿದ್ದಾರೆ, ಅವರು ಬಂದ ತಕ್ಷಣ ತೆಗೆದು ಕೊಳ್ಳುತ್ತೇನೆ ಎಂದು ತಾವೇ ಸದನಕ್ಕೆ ಆಶ್ವಾಸನೆ ಕೊಟ್ಟಿದ್ದೀರಿ. ಅಜೆಂಡ ತೆಗೆದು ನೋಡಿ, ಇದು ಎರಡನೆಯದಿದೆ. ಎಲ್ಲ ಬಿಲ್ ಪಾಸ್ ಮಾಡಿಕೊಂಡುಬಿಟ್ಟು, ಇದನ್ನು ಕೊನೆಗೆ ಹಾಕಿ, ಹಾಗೇ ಹೋಗೋಣವೆಂದಿದ್ದೀರಿ. ನಿಯಮ 69ರ ಬರುವುದಿಲ್ಲ, ಯಾವುದೂ ಚರ್ಚೆಗೆ ಬರುವುದಿಲ್ಲ. ನಾವು ಬೇಕಾದರೆ ರಾತ್ರಿ ಇಲ್ಲೇ ಇರುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಿದ್ಧರಾಮಯ್ಯನವರೇ, ಇದನ್ನೇ ಕಾಲು ಕೆರೆದು ಜಗಳ ಆಡುವುದು ಎಂದು ಹೇಳುವುದು.

ಶ್ರೀ ಹೆಚ್.ಡಿ.ರೇವಣ್ಣ : ನಾವು ಕಾಲು ಕೆರೆದು ಜಗಳಕ್ಕೆ ಬರುತ್ತಿಲ್ಲ, ನಿಮಗೆ ಉತ್ತರ ಕೊಡುವುದಕ್ಕೆ ಶಕ್ತಿ ಇದೆಯಾ ಎಂದು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ರಾತ್ರಿ 12 ಗಂಟೆಯಾದರೂ ಚರ್ಚೆ ಮಾಡೋಣ ಎಂದು ನಾವು ಹೇಳಿದರೆ, ತಾವು ಹೀಗೆ ಮಾಡಿದರೆ ನಾವು ಏನು ಮಾಡೋಣವೆಂದು ನೀವೇ ಹೇಳಿ.

ಶ್ರೀ ಹೆಚ್. ಡಿ. ರೇವಣ್ಣ : ಬೆಳಗ್ಗೆ ಇದನ್ನು ನಾನು ನಿಯಮ 60ರ ಕೆಳಗೆ ತಂದೆ. ಮುಖ್ಯಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ ಬಂದ ಮೇಲೆ ತೆಗೆದು ಕೊಳ್ಳುತ್ತೇನೆ ಎಂದು ಹೇಳಿದರು. ಹಾಗೆ ಬೆಳಗ್ಗೆ ಹೇಳಿದ್ದಾರೋ, ಇಲ್ಲವೋ ಎಂದು ರೆಕಾರ್ಡ್ ತೆಗೆಸಿ ನೋಡಿ.

ಅಧ್ಯಕ್ಷರು : ಅವರು ಬರಲಿ, ತೆಗೆದುಕೊಳ್ಳೋಣ ಎಂದು ಹೇಳಿದ್ದೇನೆ. ಮುಖ್ಯಮಂತ್ರಿಗಳು ಬಂದ ತಕ್ಷಣ ತೆಗೆದುಕೊಳ್ಳುತ್ತೇನೆ ಎಂದು ಅಲ್ಲ. ಮುಖ್ಯಮಂತ್ರಿಗಳು ಬರಲಿ, ಚರ್ಚೆಗೆ ತೆಗೆದುಕೊಳ್ಳುತ್ತೇನೆ ಎನ್ನುವುದು ಅದರ ಅರ್ಥ. ಅಜೆಂಡ ಪ್ರಕಾರ ನಾವು ಹೋಗುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : ಬೇಕಿದ್ದರೆ ರಾತ್ರಿ 1 ಗಂಟೆಯವರೆಗೂ ಇರುತ್ತೇವೆ, ಬಿಲ್ ಪಾಸ್ ಮಾಡಿಕೊಳ್ಳಿ.

ಅಧ್ಯಕ್ಷರು : ನೀವು ಹೇಳಿದ ಹಾಗೆಯೇ ಸದನ ನಡೆಸಬೇಕು ಎಂದರೆ ಆಗುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ದುರುದ್ದೇಶದಿಂದ ವೆಲ್‌ಗೆ ಬಂದರೆ, ಅದಕ್ಕೇನಾದರೂ ಮಹತ್ವವಿಲ್ಲದಿದ್ದರೆ, ವೆಲ್‌ಗೆ ಬಂದರು ಎಂದು ನಾಳೆ

ಪತ್ರಿಕೆಗಳಲ್ಲಿ ಬರೆಯುವುದಿಲ್ಲ. ದಯಮಾಡಿ ಹೋಗಿ ನಿಮ್ಮ ಸ್ಥಳಗಳಲ್ಲಿ ಕುಳಿತುಕೊಳ್ಳಿ. ಅದು ನಿಮ್ಮ ದೃಷ್ಟಿಯಿಂದ ಒಳ್ಳೆಯದು.

ಅಧ್ಯಕ್ಷರು : ನೀವು ಸಹಕಾರ ಮಾಡಿ. ಅಜೆಂಡ ಪ್ರಕಾರ ಹೋಗೋಣ. ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಇದು ಒಂದಲ್ಲ, ಎರಡಲ್ಲ, 30 ಸಾವಿರ ಕೋಟಿ ರೂಪಾಯಿಗಳ ಹಗರಣ. ಇದನ್ನು ಹೇಳುತ್ತಿರುವುದು ನಾನಲ್ಲ, ನಿಮ್ಮ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳು ಹೈಕೋರ್ಟ್‌ನಲ್ಲಿ ಅಫಿಡವಿಟ್ ಹಾಕಿರುವುದನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಆರ್. ಅಶೋಕ್ : ಈ ವಿಷಯದ ಬಗ್ಗೆ ರೇವಣ್ಣನವರೇನೂ ಅರ್ಧ ದಿನ ಚರ್ಚೆಗೆ ಕೇಳಿರಲಿಲ್ಲ. ನಾವು ಅರ್ಧ ದಿನ ಚರ್ಚೆ ಮಾಡುತ್ತೇವೆ ಎಂದು ಸರ್ಕಾರ ಸ್ವತಃ ಒಪ್ಪಿಕೊಂಡಿದೆ. ಈಗ ಬಿಲ್ ಬಗ್ಗೆ ಚರ್ಚೆಗೆ ಅವಕಾಶ ಕೊಡಿ. ಬಹಳ ಪ್ರಮುಖವಾದಂಥ ಬಿಲ್ ಇದು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಈ ರಾಜ್ಯದ 30 ಸಾವಿರ ಕೋಟಿ ರೂಪಾಯಿ ಹಣ ಹೋಗುತ್ತಿದೆ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ಹೈಕೋರ್ಟಿನಲ್ಲಿ ಹಾಕಿರುವ ಅಫಿಡವಿಟ್ ಅನ್ನು ನಿಮ್ಮ ಮುಂದಿಡುತ್ತಿದ್ದೇನೆ. ದಯಮಾಡಿ ಇದರ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು : ಸಚಿವರೇ ತಾವು explain ಮಾಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ನಿಮ್ಮ ಬಣ್ಣ ಬಯಲಿಗೆ ಬರುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ಯಾರ ಬಣ್ಣ ಬಯಲಿಗೆ ಬರುತ್ತದೆ ಎಂದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೆ, 1964ರ ಅನ್ವಯ ಆ ಸಮಯದಲ್ಲಿ ಆರು ತಿಂಗಳ ಸಜೆ ಮತ್ತು ಒಂದು ಸಾವಿರ ರೂಪಾಯಿ ದಂಡ ಎಂದು ಇತ್ತು. ಅದನ್ನು ನಾವು ಸ್ವಲ್ಪ ಬದಲಾವಣೆ ಮಾಡಿದ್ದೇವೆ.

ಶ್ರೀ ಡಿ.ಕೆ. ಶಿವಕುಮಾರ್ : ರೇವಣ್ಣನವರೇ, ನಿಮ್ಮ political will ಏನು? ಗೋ ಹತ್ಯೆ ವಿಚಾರದಲ್ಲಿ ಏನು ಬಿಲ್ ತಂದಿದ್ದಾರೆ ಅದನ್ನು ಈ ಗಲಾಟೆಯಲ್ಲಿ ನೀವು ಪಾಸ್ ಮಾಡಿಸಿಕೊಡಬೇಕೆಂದಿರುವಿರಾ? ನಿಮ್ಮ ಆಚಾರ ವಿಚಾರವನ್ನು ತಿಳಿಸಬೇಕೆಂದಿರುವಿರಾ? Let us be confirmed. ಅವರೊಂದು political stand ತೆಗೆದುಕೊಂಡಿದ್ದಾರೆ, ನಾವು ಒಂದು Stand ತೆಗೆದುಕೊಂಡಿದ್ದೇವೆ. ಇದು ಬೇಕೇ, ಬೇಡವೇ ಎನ್ನುವ ಬಗ್ಗೆ ಚರ್ಚೆಯಾಗ ಬೇಕು. ಇಲ್ಲದಿದ್ದರೆ, House order ನಲ್ಲಿ ಇರುವುದಿಲ್ಲ, ಅವರು ಬಿಲ್‌ಪಾಸ್ ಮಾಡಿಕೊಂಡು ಹೋಗುತ್ತಾರೆ. ನಾವು ಯಾರೂ ಚರ್ಚೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಶಿವಕುಮಾರ್‌ರವರೇ, ಇದು 30 ಸಾವಿರ ಕೋಟಿ ರೂಪಾಯಿಗಳ ಹಗರಣ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಅದನ್ನು ಆಮೇಲೆ ಮಾತನಾಡೋಣ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಈಗ ಗೋವಿನ ಬಿಲ್ ಅರ್ಜೆಂಟೇ?

ಶ್ರೀ ಡಿ.ಕೆ. ಶಿವಕುಮಾರ್ : ನೀವು ಹೀಗೆ ಮಾಡಿದರೆ ಅವರು ಪಾಸ್ ಮಾಡಿಕೊಂಡು ಹೋಗುತ್ತಾರೆ.

ಅಧ್ಯಕ್ಷರು : ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನಲ್ಲ. ಇವತ್ತು ಎಷ್ಟು ಹೊತ್ತಾದರೂ ಸರಿ, ಚರ್ಚೆಗೆ ಅವಕಾಶ ಕೊಡುತ್ತೇನೆ. ದಯವಿಟ್ಟು ಸಹಕಾರ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಇದಾದ ತಕ್ಷಣ ತೆಗೆದುಕೊಳ್ಳುವಿರಾ?

ಅಧ್ಯಕ್ಷರು : ಆಯಿತು, time fix ಮಾಡೋಣ.

(ಈ ಹಂತದಲ್ಲಿ ಧರಣಿಯಲ್ಲಿದ್ದ ಜೆಡಿ(ಎಸ್) ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿದರು)

(ಗೊಂದಲ)

ಅಧ್ಯಕ್ಷರು : ಚರ್ಚೆಯಾಗದೇ ಸದನವನ್ನು ಮುಂದೂಡುವುದಿಲ್ಲ. ನೀವು ಹೇಳಿ.

O.32 F-25

6. ಶಾಸನಾ ರಚನೆ :

(ಪರ್ಯಾಲೋಚನಾ ಪ್ರಸ್ತಾವ (ಮುಂದುವರೆದಿದೆ)

(1) ಕರ್ನಾಟಕ ಜಾನುವಾರು ಹತ್ಯೆ ಪ್ರತಿಭಂದಕ ಮತ್ತು ಸಂರಕ್ಷಣ ವಿಧೇಯಕ 2010.

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈಗ ಈ ಮಸೂದೆಯನ್ನು ತರಲು ಕಾರಣವೇನೆಂದರೆ, 1964ರ ಕಾಯಿದೆ simple ಇತ್ತು. ಒಂದು ಸಾವಿರ ರೂಪಾಯಿಗಳ ದಂಡ ಮತ್ತು ಆರು ತಿಂಗಳ ಶಿಕ್ಷೆ ಎಂದು ಇತ್ತು. ಆದರೆ ಅದನ್ನು ವ್ಯತ್ಯಾಸ ಮಾಡಿ ಇದನ್ನು ತಂದಿದ್ದೇವೆ. ಗೋಮಾತೆ ಎಷ್ಟಿತ್ತು, ಎಷ್ಟು ಕಡಿಮೆಯಾಗುತ್ತಿದೆ ಎನ್ನುವುದು ತಮಗೆಲ್ಲರಿಗೂ ಗೊತ್ತಿದೆ. ಹಾಗಾಗಿ ಗೋರಕ್ಷಣೆ ಮಾಡಬೇಕಾದರೆ, ಗೋ ಹತ್ಯೆ ನಿಷೇಧ ಮಾಡಬೇಕಾದರೆ ಇದು ಅವಶ್ಯಕವಿದೆ ಎಂದು ನಾನು ಭಾವಿಸಿದ್ದೇನೆ. ಇದು ಎಲ್ಲರಿಗೂ ಮನವರಿಕೆಯಾಗಿದೆ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ, ಗೋಮಾತೆ ಎಲ್ಲರಿಗೂ ಬೇಕು. ಎಲ್ಲರೂ ಗೋಮಾತೆಯ ಹಾಲನ್ನು ಸೇವಿಸಿ, ಆರೋಗ್ಯವಂತರಾಗಿ ಈ ಸದನಕ್ಕೆ ಬಂದಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಅದಕ್ಕಾಗಿ, ಮೊದಲು ಏನು simple ಇತ್ತು, ಇದನ್ನು ಬಿಗಿ ಮಾಡುವ ಸಲುವಾಗಿ ತಹಶೀಲ್ದಾರರಿಗೆ ಪವರ್ ಕೊಟ್ಟಿದ್ದೇವೆ. ಅವರ ಮೇಲೆ ಅಪೀಲ್ ಮಾಡಲಿಕ್ಕೆ ಅಸಿಸ್ಟೆಂಟ್ ಕಮೀಷನರ್ ರವರಿಗೆ ಪವರ್ ಇದೆ, ಅದರ ಮೇಲೆ ನ್ಯಾಯಾಲಯಕ್ಕೂ ಕೂಡ ಅಪೀಲ್ ಮಾಡಲು ಅವಕಾಶವಿದೆ. ಯಾರೇ ಗೋ ಹತ್ಯೆ ಮಾಡಿದರೂ, ಸಬ್‌ಇನ್ಸ್ ಪೆಕ್ಟರ್‌ಗಿಂತ ಮೇಲಾಧಿಕಾರಿ ಅವರನ್ನು ಹಿಡಿಯಬೇಕು ಮತ್ತು ಒಂದು ವರ್ಷ ಶಿಕ್ಷೆಯಾಗಬೇಕು ಮತ್ತು 25 ಸಾವಿರ ದಂಡ ಹಾಕಬೇಕು ಎನ್ನುವ ಉದ್ದೇಶ ದಿಂದ ಈ ವಿಧೇಯಕವನ್ನು ತಂದಿದ್ದೇವೆ. ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ನಾನು ತಮ್ಮೆಲ್ಲರಿಗೂ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : Explain ಮಾಡಿ ಸ್ವಾಮಿ.

ಅಧ್ಯಕ್ಷರು : ಇಷ್ಟು ಹೊತ್ತು ಮಾಡಿದರಲ್ಲ.

ಶ್ರೀ ತನ್ವೀರ್ ಸೇಠ್ : ಮಾನ್ಯ ಸಭಾಧ್ಯಕ್ಷರೆ, ಗೋಹತ್ಯೆ ನಿಷೇಧ ಈಗಾಗಲೇ ಜಾರಿಯಲ್ಲಿರುವಂಥ ವಿಧೇಯಕ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಬಿಲ್ ಅನ್ನು introduce ಮಾಡಿದ ಪ್ರಾರಂಭದಲ್ಲೇ ನಾವು ಪ್ರತಿಭಟನೆ ಮುಖೇನ, ಯಾವುದಕ್ಕೋಸ್ಕರ ಇದನ್ನು introduce ಮಾಡುತ್ತಿದ್ದೀರಿ, ಇದರ ಅವಶ್ಯಕತೆಯಿಲ್ಲ, ಈಗಾಗಲೇ ಒಂದು ಬಿಲ್ ಇದೆ ಎಂದು ವಾದ ಮಾಡಿದ್ದೆವು. ಬಿಲ್‌ನಲ್ಲಿ ಏನಿದೆಯೋ ಅದನ್ನೇ ನೀವು ಮತ್ತೇ ಹೇಳಿದರೆ ಪ್ರಯೋಜನವಿಲ್ಲ. Already ಒಂದು legislation ಇದೆ. ಇದ್ದಾಗ ಅದನ್ನು replace ಮಾಡಿ ಇನ್ನೊಂದು legislation ತರುತ್ತಿದ್ದೀರಿ. ಇದರಲ್ಲಿ ಏನಾದರೂ ವ್ಯತ್ಯಾಸವಿದೆಯೇ ಎಂದು ನೋಡಿದರೆ ಏನೂ ವ್ಯತ್ಯಾಸವಿಲ್ಲ. ಆವತ್ತೊಂದು ಬಾಟಲ್‌ನಲ್ಲಿತ್ತು, ಇವತ್ತೊಂದು ಬಾಟಲ್‌ನಲ್ಲಿದೆ ಅಷ್ಟೇ, ಒಂದೇ ತರಹ ಇದೆ, ಬಣ್ಣವೂ ಒಂದೇ, ಏನೂ ಬದಲಾವಣೆ ಆಗಿಲ್ಲ. ಅದಕ್ಕಾಗಿ, ಏಕೆ ಇದನ್ನು ತರುತ್ತಿದ್ದೀರಿ ಎನ್ನುವುದು ನಮ್ಮ ಮೂಲ ಪ್ರಶ್ನೆ. ನಾವು ಇದಕ್ಕೆ ವಿರೋಧವಾಗಿದ್ದೇವೆ ಎನ್ನುವ ಭಾವನೆ ಬೇಡ. ಈಗಾಗಲೇ ಹೊರಗಡೆ ಏನಾಗಿದೆ ಎಂದರೆ, ಇದಕ್ಕೆ ನಾವು ವಿರೋಧವಿದ್ದೇವೆ ಎಂದು ಆಗಿದೆ. ನಾವು ಕೇಳುತ್ತಿರುವುದೇನೆಂದರೆ, ನಮ್ಮ ವಾದ ಏನೆಂದರೆ already ಒಂದು legislation 1964 ರಿಂದಲೂ ಇದೆ, ಇದು ದೇಶದ ಬೇರೆ ಬೇರೆ ರಾಜ್ಯಗಳಲ್ಲೂ ಕೂಡ ಇದೆ. ಹೀಗಿರುವಾಗ ಏಕೆ ಇದನ್ನು ತರುತ್ತಿದ್ದೀರಿ ಎಂದು ಕೇಳುತ್ತಿದ್ದೇವೆ.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, I will try to convince you. ನಾನು explain ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ 1964 ರಿಂದ ಜಾನುವಾರು ಸಂರಕ್ಷಣಾ ಕಾಯಿದೆ ಜಾರಿಯಲ್ಲಿದೆ. ಆದರೆ ಅದನ್ನು ಸಮರ್ಪಕವಾಗಿ ಜಾರಿ ಮಾಡಲು ಆಗದೇ ಇರುವಂಥ ತೊಂದರೆಗಳು ನಮ್ಮ ಪ್ರತ್ಯಕ್ಷ ಅನುಭವದಲ್ಲಿ ಇಷ್ಟು ವರ್ಷಗಳಲ್ಲಿ ನಮಗೆ ಬಂದದ್ದರಿಂದ ಮತ್ತು ಸಂವಿಧಾನದ 48ನೇ ಆಶಯ ಏನಿದೆ, ಅದನ್ನು ಅಂಬೇಡ್ಕರ್‌ರವರೇ ಸಂವಿಧಾನ ರಚನೆ ಮಾಡುವಾಗ ತೋರಿಸಿರುವಂಥದ್ದು, ಅದನ್ನು ನಾನು ಸದನದ ಗಮನಕ್ಕೋಸ್ಕರ ಓದಿಬಿಡುತ್ತೇನೆ.

"Article-48. Organisation of agriculture and animal husbandry :- The State shall endeavour to organize agriculture and animal husbandry on modern and scientific lines and shall, in particular, take steps for preserving and improving the

breeds, and prohibiting the slaughter, of cows and calves and other milch and draught cattle."

ಈಗ cattle ಎಂದು ಹೇಳುವಂಥದ್ದಕ್ಕೆ ಇದರಲ್ಲಿ definition ಕೊಟ್ಟಿದ್ದೇವೆ. ಹಸು, ಹೋರಿ ಅಥವಾ ಎತ್ತು, ಎಮ್ಮೆ ಕೋಣ ಮತ್ತು ಇವೆಲ್ಲದರ ಕರುಗಳು ಇವಿಷ್ಟು cattle ಎಂದು ಹೇಳುವುದಕ್ಕೆ ಈ Act ಗೆ ಸಂಬಂಧಪಟ್ಟ ಹಾಗೆ ಬರುತ್ತದೆ. ಇದು ಸಂವಿಧಾನದ ಪರಿಚ್ಛೇದ 48ರ ಆಶಯಕ್ಕೆ ಸರಿಯಾಗಿ ಬರಬೇಕನ್ನುವ ದೃಷ್ಟಿಯಿಂದ ತಂದಿದ್ದೇವೆ. 1964 ರಲ್ಲಿ ಅದಾಗಲಿಲ್ಲ. ನಿಮಗೆ ಗೊತ್ತು. ಇದು inadequate ಮತ್ತು ಎಲ್ಲಾ ಊರಿನಲ್ಲಿ ಅನಾವಶ್ಯಕವಾಗಿ ನಮ್ಮ ಪೋಲೀಸ್‌ನವರಿಗೆ, ಕೆಲವು ಅಮಾಯಕ ಜನರಿಗೆ ಇದೆಲ್ಲ ಇರುವಂಥದ್ದು.

Sri Siddaramaiah : Is 1964 Act, not in force?

Dr. V.S. Acharya : It is in force. But, it is not serving the purpose.

Sri Siddaramaiah : That is what we are telling. It is already in force. There is already an Act.

Dr. V.S. Acharya : I will come to the point. ನಿಮ್ಮ ಉಪನಾಯಕರೇ ಅದು ಇದ್ದಾಗಲೇ ಮತ್ತೊಂದು ಬಿಲ್ ಏಕೆ ತಂದಿರಿ ಎಂದು ಕೇಳಿದರು. ಅಂದರೆ ಅದನ್ನೇ replace ಮಾಡಿ comprehensive bill in true spirit ತಂದಿದ್ದೇವೆ.

Sri Siddaramaiah : Why do you want comprehensive bill? What is the necessity of it?

Dr. V.S. Acharya : I am going to explain now.

ಅಧ್ಯಕ್ಷರು : ಸಚಿವರು ಮೊದಲು explain ಮಾಡಲಿ. For your question he is explaining.

ಶ್ರೀ ಬಂಡೆಪ್ಪ ಕಾಶಂಪೂರ್ : ಆ ಬಿಲ್‌ಗೂ ಈ ಬಿಲ್‌ಗೂ ಏನು ವ್ಯತ್ಯಾಸವಿದೆ ಎಂದು ಹೇಳಿ.

Mr. Speaker : The purpose of new amendment ಏನು ಎನ್ನುವುದರ ಬಗ್ಗೆ ಸಚಿವರು ವಿವರ ನೀಡುವುದಕ್ಕೆ ಬಿಡಿ.

ಶ್ರೀ ಟಿ.ಬಿ. ಜಯಚಂದ್ರ : Article 48ರ ಪ್ರಕಾರ **Organisation of agriculture and animal husbandry:** ಅಂದರೆ ಕೃಷಿ ಮತ್ತು ಪಶು

ಸಂಗೋಪನೆ ವಿಚಾರವಾಗಿ. The State shall endeavour to organize agriculture and animal husbandary on modern and scientific lines and shall, in particular, take steps for preserving and improving the breeds, and prohibiting the slaughter, of cows and calves and other milch and draught cattle. ಅಂದರೆ ಸಂವಿಧಾನ ಆಶಯ ಏನೆಂದರೆ ಕೃಷಿಗೆ ಪೂರಕವಾಗಿ on modern and scientific lines …

ಡಾ: ವಿ.ಎಸ್. ಆಚಾರ್ಯ : ಅದು ಕೃಷಿ ಮತ್ತು Animal Husbandry…

ಶ್ರೀ ಟಿ.ಬಿ. ಜಯಚಂದ್ರ : ಸರ್ ನಾನು ಹೇಳುತ್ತೇನೆ ಕುಳಿತುಕೊಳ್ಳಿ. ಪಶುಸಂಗೋಪನೆ on modern lines, ಅಂದರೆ ಕೃಷಿಗೆ ಒತ್ತು ಕೊಡುವ ದೃಷ್ಟಿಯಲ್ಲಿ ಮಾಡುವಾಗ ಇದನ್ನು ಕೂಡ slaughter ಎಂದು consider ಮಾಡಿ ಎಂದು ಹೇಳಬೇಕಾದಾಗ ಈ ಕಾನೂನು 1964 ರಿಂದಲೂ ಜಾರಿಯಲ್ಲಿದೆ. ನೀವು 2 ವರ್ಷದಿಂದಲೂ ಅಧಿಕಾರದಲ್ಲಿದ್ದೀರಿ, ಹಿಂದೆ ಕೂಡ 20 ತಿಂಗಳು ಅಧಿಕಾರದಲ್ಲಿದ್ದೀರಿ, ಇದ್ದಾಗ್ಯೂ ಕೂಡ ಆವತ್ತು ಈ ಯೋಚನೆ ಬರಲಿಲ್ಲ. ಇವತ್ತು ಮಾತ್ರ ಈ ಬಿಲ್ ಅನ್ನು ತರುತ್ತಿದ್ದೀರಿ. Agriculture and Animal Husbandry ಗೆ ಪೂರಕವಾಗಿ ಸಹಾಯವಾಗುವಂಥ ಏನಾದರೂ ವಿಚಾರಗಳಿವೆಯೇ? ಏಕೆಂದರೆ ನೀವು ಈ bill ಅನ್ನು Place ಮಾಡಿದ್ದೀರಿ. ಅದರಲ್ಲಿ Preserving, improving breeds… ಅದೇನಾದರೂ ಹೊಸ ವಿಚಾರ ಇದೆಯೇ? ಸಂವಿಧಾನದ ಆಶಯದ ಪೂರಕದಲ್ಲಿ ಏನಾದರೂ ಹೊಸ ವಿಚಾರಗಳಿದ್ದಾಗ ಅದಕ್ಕೆ ನೀವು ಬಿಲ್ ತಂದಿದ್ದರೆ ಪರವಾಗಿಲ್ಲ. ನಿಮಗೆ ಏನೂ ಇಲ್ಲ 1964ರ Act ನಲ್ಲಿ ಏನಿತ್ತೋ ಅದನ್ನೇ ತಂದಿದ್ದೀರಿ. ಆವಾಗಲೂ 20 Section ಇತ್ತು. ಇವತ್ತು 21 Sections ಇವೆ. ಅಷ್ಟು ಬಿಟ್ಟರೆ ಬೇರೆ ಏನೂ ಇಲ್ಲ. ನೀವು ದೊಡ್ಡ ಕೆಲಸ ಮಾಡಿರುವುದು ಏನೆಂದರೆ, ಮಾಂಸ ಎಂದರೆ ಏನು ಎಂಬ ಬಗ್ಗೆ definition ಕೊಟ್ಟಿದ್ದೀರಿ. ಅದು ಯಾರಿಗೂ ಗೊತ್ತಿಲ್ಲ. ಅದು ಏನೋ ನನಗೆ ಅರ್ಥವಾಗಿಲ್ಲ. ಸಂವಿಧಾನದ ಆಶಯದಂತೆ ನಾವು ನಡೆಯಬೇಕಾಗುತ್ತದೆ. ಇದರಲ್ಲಿ ಒಂದು ಸಲ ಅಲ್ಲ ಇನ್ನೊಂದು ಸಾರಿ ಬೇಕಾದರೆ ಓದಿ. Agriculture ಅನ್ನು Scientific lines ನಲ್ಲಿ ಮಾಡಬೇಕಾದಾಗ ಅಥವಾ ಪಶುಸಂಗೋಪನೆ ಮಾಡಬೇಕಾದಾಗ

breeds improve ಮಾಡುವ ಸಂದರ್ಭದಲ್ಲಿ ಇದೂ ಒಂದು important ಎಂದಾಗ ಅದಕ್ಕೆ ಪೂರಕವಾಗಿ ಬೇರೆ ಏನಾದರೂ ಹೊಸ ವಿಚಾರ ಇದೆಯೇ ಎಂದರೆ ಏನೂ ಇಲ್ಲ. ಹಾಲಿ ಇದೆಯಲ್ಲಾ, ಚಿಂತೆ ಏಕೆ ಪಡುತ್ತೀರಿ?

ಅಧ್ಯಕ್ಷರು : ಸಚಿವರು ಹೇಳುವುದಕ್ಕೆ ಬಿಡಿ.

ಡಾ. ವಿ.ಎಸ್. ಆಚಾರ್ಯ : ಆ Act ನ ಪ್ರಕಾರ ಈ breeds ನ್ನಾಗಲಿ, Animal Husbandary ಯನ್ನಾಗಲಿ ರಕ್ಷಣೆ ಮಾಡಲಿಕ್ಕೆ modern days ನಲ್ಲಿ ಆಗದಿದ್ದಂಥ ಪರಿಸ್ಥಿತಿ ಬಂದಿತ್ತು. ಇದರ ಬಗ್ಗೆ ಯಾವುದು ಸಂವಿಧಾನದಲ್ಲಿದೆ, ಕಾನೂನಿನಲ್ಲಿದೆ ಅದರ final interpretation ಈ ದೇಶದ ಸರ್ವೋಚ್ಚ ನ್ಯಾಯಾಲಯ. ಈ ದೇಶದ ಉಚ್ಚನ್ಯಾಯಾಲಯಗಳು ಮತ್ತು ಸರ್ವೋಚ್ಚ ನ್ಯಾಯಾಲಯ ಕಾಲದಿಂದ ಕಾಲಕ್ಕೆ ಕೊಟ್ಟಂಥ ತೀರ್ಮಾನಗಳು, ತೀರ್ಪಿನ ಆಶಯಕ್ಕನುಗುಣವಾಗಿ ಈ ಕಾನೂನನ್ನು redraft ಮಾಡುವುದು ಅಗತ್ಯವಿತ್ತು. 30 ವರ್ಷಗಳ ಹಿಂದಿನ ಕಾನೂನು, ಜಮ್ಮು ಕಾಶ್ಮೀರ, ಉತ್ತರ ಪ್ರದೇಶವಿರಬಹುದು, ಗುಜರಾತ್ ಇರಬಹುದು, ಮಧ್ಯಪ್ರದೇಶ, ಮಹಾರಾಷ್ಟ್ರದವರೆಗೆ ಎಲ್ಲಾ ರಾಜ್ಯಗಳ ಕಾನೂನನ್ನು, Supreme Court ಮತ್ತು ಆಯಾ ರಾಜ್ಯಗಳ High Court ಎತ್ತಿಹಿಡಿದು interpret ಮಾಡಿದ ಪ್ರಕಾರ ಈ ಕಾನೂನನ್ನು draft ಮಾಡಿ ಇಲ್ಲಿ ತರಬೇಕಾದಂಥ ಅವಶ್ಯಕತೆ ಬಂತು. ಬೆಳಗಾಂ ಅಧಿವೇಶನದಲ್ಲಿ ಒಂದು ಸಾಗಾಣಿಕೆಗೆ ತಕ್ಕ ಹಾಗೆ ಸ್ವಲ್ಪ ಸುಧಾರಣೆ ಮಾಡುವಂಥ ಒಂದು amendment ತಂದಿದ್ದೆವು. ಅದನ್ನು ನಿನ್ನೆ ಈ ಬಿಲ್ ಅನ್ನು ಮಂಡನೆ ಮಾಡಬೇಕೆಂದು ವಾಪಸ್ಸು ತೆಗೆದುಕೊಂಡಿದ್ದೇವೆ. ಈಗ (1) ಸಂವಿಧಾನ, (2) ಇದರ ಬಗ್ಗೆಯೇ ಬೇರೆ ಬೇರೆ ರಾಜ್ಯಗಳಲ್ಲಿರುವಂಥ ಕಾನೂನು (3) High Court and Supreme Court ಎತ್ತಿಹಿಡಿದಿರುವಂಥದ್ದು (4) ನಾವು ಜನರ ಮುಂದೆ ಹೋಗುವಾಗ ಚುನಾವಣೆಯ ಮುಂಚೆ ನಮ್ಮದೇ ಆದಂಥ ಒಂದು Manifesto ಇಟ್ಟಿದ್ದೆವು. ಅಲ್ಲಿ ಗೋವು ಮತ್ತು ಗೋಮಾಂಸವನ್ನು ರಕ್ಷಣೆ ಮಾಡುವಂಥ ಕಾನೂನನ್ನು ತರುತ್ತೇವೆಂದು ಹೇಳಿದ್ದೆವು. ಐದನೆಯದು, ನಮ್ಮ ದೇಶದಲ್ಲಿ ಗೋಪೂಜೆ, ಗೋವನ್ನು ಮತೆ ಎಂದು ಪರಿಗಣಿಸುವುದು ಈ ಭಾವನೆಗಳೆಲ್ಲ ಇರುವಾಗ ಎಲ್ಲರದೂ ಅದಕ್ಕೆ ಸಮ್ಮತ ಇರುವ ದೃಷ್ಟಿಯಿಂದ ಈ ಎಲ್ಲಾ ವಿಷಯಗಳ ಮೇಲೆ ನಾವು ಈ ಕಾನೂನನ್ನು ತಂದಿದ್ದೇವೆ. ನಾನು

ಆಗಲೇ ಹೇಳಿದ ಹಾಗೆ ಇದು Supreme Court, High Courtನಲ್ಲಿ scrutiny ಮಾಡಿದಂಥ ಇಂಥಿಂಥ ಸೆಕ್ಷನ್‌ಗಳೇ ಇವೆ. ಈ ಕಾನೂನಿನ ವಿವರ ನಿಮ್ಮ ಮುಂದೆ ಇದೆ. ಸೆಕ್ಷನ್ 20, 21 ಅನ್ನು ತಾವು ಓದಿದ್ದೀರಿ. ಇದರಲ್ಲಿ ಸಣ್ಣ ತಿದ್ದುಪಡಿಯನ್ನು ನಾನು ತಂದಿದ್ದೇನೆ. English ನಲ್ಲಿ ಸರಿಯಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ನೀವು ಸದನದ ಮುಂದೆ ತರಬೇಕಾದಾಗ Objections and reasons are very important. ಅದನ್ನು ಓದಿ ಹೇಳಿ, ಅದರಲ್ಲಿ ಏನು wordings ಇವೆ. ಅದಕ್ಕೆ ಪೂರಕವಾಗಿ ಬಿಲ್ ಇದೆಯೇ? ಇದ್ದರೆ ಹೇಳಿ.

ಡಾ: ವಿ.ಎಸ್. ಆಚಾರ್ಯ : ಇದೆ. Article 48 ರ ಪ್ರಕಾರ ನಮ್ಮ definition ನಲ್ಲಿ ಗೋಮಾಂಸ ಎಂದರೆ ಅರ್ಥವಾಗುತ್ತದೆ. ಜಾನುವಾರು ಎಂದರೆ ಈ Act ಗೆ ಸಂಬಂಧಪಟ್ಟ ಹಾಗೆ ನಾನು ಹೇಳಿದಂತೆ ಈ objectives ನಲ್ಲಿ ಕಾಣಿಸಿದ್ದೇವೆ. ಹಸು ಹಾಗೂ ಹಸುವಿನ ಕರು, ಹೋರಿ, ಎತ್ತು, ಎಮ್ಮೆ ಅಥವಾ ಕೋಣ ಹಾಗೂ ಎಮ್ಮೆಯ ಕರು. ಎಂದರೆ ಗೋವು ಮತ್ತು ಗೋಮಾಂಸ. ಇದರಲ್ಲಿ ಕೆಲವರಿಗೆ milch and draught ಎಂದು ಹೇಳಿದರೆ ಈ ಉಳಿದಂಥ ಆಡು ಕುರಿ ಇತ್ಯಾದಿ ಬರುತ್ತದೆ ಎಂದು. ನಮ್ಮ definition ನಲ್ಲಿ ಅದ್ಯಾವುದೂ ಇಲ್ಲ. ನಮ್ಮ definition ನಲ್ಲಿ ಇರುವಂಥದ್ದು ಇಷ್ಟು, ಉಳಿದಂತೆ Competent Authority ಯಾರು ಎಂದು ಹೇಳಿದ್ದೇವೆ.

(ಗೊಂದಲ)

ಅಧ್ಯಕ್ಷರು : ಅವರು ಹೇಳಿ ಆದಮೇಲೆ ಕೇಳಿ. ಮಧ್ಯೆ ಮಧ್ಯೆ ಕೇಳಿದರೆ ಹೇಗೆ?

Sri T.B. Jayachandra : I have got every right to ask question.

Mr. Speaker : No, No, I don't think…

(ಗೊಂದಲ)

Sri S. Suresh Kumar : At the same time, it is your duty to hear him.

(ಗೊಂದಲ)

ಅಧ್ಯಕ್ಷರು : ಅವರು ಹೇಳುತ್ತಿರುವಾಗಲೇ ಮಧ್ಯೆ ಮಧ್ಯೆ ನೀವು How can you ask?

(ಗೊಂದಲ)

ಶ್ರೀ ಸುರೇಶ್ ಕುಮಾರ್ : ಅವರು ಉತ್ತರ ಕೊಡದಿದ್ದಾಗ, ನಾನು ಈ ಪ್ರಶ್ನೆಯನ್ನು raise ಮಾಡಿದ್ದೆ ಉತ್ತರ ಕೊಟ್ಟಿಲ್ಲ ಎಂದು ಎದ್ದು ನಿಂತುಕೊಳ್ಳಿ. ಆದರೆ, this is not the way. ಅವರಿಗೆ ಅವಕಾಶವನ್ನೇ ಕೊಡದಿದ್ದರೆ ಹೇಗೆ?

(ಗೊಂದಲ)

Mr. Speaker : Please hear me. You have raised certain question. Let him answer.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : I want him to read statement of objects and reasons ಅದಕ್ಕೆ ಪೂರಕವಾಗಿದೆಯೇ ಎನ್ನುವುದನ್ನು ದಯವಿಟ್ಟು ಹೇಳಿ.

(ಗೊಂದಲ)

ಅಧ್ಯಕ್ಷರು : ಈಗ ತಾವು ಕೆಲವು ಮೂಲಭೂತ ಪ್ರಶ್ನೆಗಳನ್ನು ಎತ್ತಿದ್ದೀರಿ. ಅದಕ್ಕೆ ಅವರು ಉತ್ತರ ಕೊಡುತ್ತಿದ್ದಾರೆ. ಸಮಾಧಾನವಾಗದಿದ್ದರೆ ಮತ್ತೆ ಪ್ರಶ್ನೆ ಕೇಳಿ. ಅವರಿಗೆ ಉತ್ತರವನ್ನೇ ಕೊಡಲಿಕ್ಕೆ ಬಿಡದೆ ಮಧ್ಯೆ ಮಧ್ಯೆ ಪ್ರಶ್ನೆ ಕೇಳಿದರೆ ಹೇಗೆ? ಅವರು ಉತ್ತರ ಕೊಡಲಿ. ಸಮಾಧಾನವಾಗದಿದ್ದರೆ ಮತ್ತೆ ಕೇಳಿ. You have got every right to ask.

Sri T.B. Jayachandra : Sri, I wanted to say that let him quote the objects and reasons clause. ಯಾವ ಆಧಾರದ ಮೇಲೆ ಬಂದಿದೆ ಎಂಬುದನ್ನು ಹೇಳಬೇಕು.

ಅಧ್ಯಕ್ಷರು : ತಾವು Preliminary objection to introduce the Bill ಬಗ್ಗೆ ಹೇಳಿದ್ದೀರಿ. ಅದಕ್ಕೆ ಈ ತರಹದ Preliminary submission ಇದೆ, I will convince you ಎಂದು ಹೇಳಿದ್ದಾರೆ. Let him finish it. If you are not satisfied. Once again you can ask question. ಏನು

ಬೇಕಾದರೂ ಆಮೇಲೆ ಕೇಳಿ. ಅದು ಬಿಟ್ಟು ಅವರು ಉತ್ತರ ಹೇಳಲಿಕ್ಕೇ ಬಿಡದಿದ್ದರೆ How this can be answered by the Government?

ಶ್ರೀ ಟಿ.ಬಿ. ಜಯಚಂದ್ರ : ಕಾನೂನು ಮಾಡುವ ಪರಮಾಧಿಕಾರ ನಿಮ್ಮ ಕೈಯಲ್ಲೇ ಇದೆ.

ಅಧ್ಯಕ್ಷರು : ಅದು ನನ್ನ ಕೈಯಲ್ಲಿ ಇಲ್ಲ. ಅದು ಇಡೀ ಸಭೆಯ ಕೈಯಲ್ಲಿದೆ. Don't say like that. ಸದನದ ಕೈಯಲ್ಲಿದೆ. ನಾನು ಹೇಗೆ ಕಾನೂನು ಮಾಡಲು ಸಾಧ್ಯ?

ಶ್ರೀ ಟಿ.ಬಿ. ಜಯಚಂದ್ರ : ಯಾವ ಕಾರಣಕ್ಕೋಸ್ಕರ ಈ ಬಿಲ್ ತಂದಿರಿ? ಅದನ್ನು ಮೊದಲು Explain ಮಾಡಲಿ. ನೀವು convince ಮಾಡಿದ್ದರೆ ನಾನು ಮಾತನಾಡುತ್ತಿರಲಿಲ್ಲ.

Mr. Speaker : Let him convince. ತಾವು ಕುಳಿತುಕೊಳ್ಳಿ.

ಡಾ: ವಿ.ಎಸ್. ಆಚಾರ್ಯ : ನಾನು ಈಗಾಗಲೇ ಅದನ್ನೇ ಹೇಳಿದ್ದೇನೆ. ಮತ್ತೊಮ್ಮೆ clarity ದೃಷ್ಟಿಯಿಂದ ಹೇಳುತ್ತಿದ್ದೇನೆ. ಪ್ರಮುಖವಾಗಿರುವಂಥ Agricultural and Animal Husbandry ಬಗ್ಗೆ ಹೇಳುತ್ತಿದ್ದೇನೆ. ಭಾರತ ಸಂವಿಧಾನದ 48ನೇ ಅನುಚ್ಛೇದಕ್ಕೆ ಅನುಸಾರವಾಗಿ ಹಸುಗಳ ಮತ್ತು ಹಸು ಅಥವಾ ಎಮ್ಮೆ ಕರುಗಳ, ಎತ್ತು, ಹೋರಿ, ಎಮ್ಮೆ ಅಥವಾ ಕೋಣ ಇವುಗಳ ಹತ್ಯೆಯನ್ನು ನಿಷೇಧಿಸುವುದಕ್ಕಾಗಿ ಮತ್ತು ಜಾನುವಾರುಗಳ ತಳಿಗಳನ್ನು ಸಂರಕ್ಷಿಸಿ ಸುಧಾರಿಸುವುದಕ್ಕಾಗಿ ಹಾಗೂ ಕೃಷಿ ಮತ್ತು ಪಶುಸಂಗೋಪನೆಯನ್ನು ಸಂಘಟಿಸಲು ಪ್ರಯತ್ನಿಸುವುದಕ್ಕಾಗಿ ಕರ್ನಾಟಕ ಗೋಹತ್ಯೆ ಪ್ರತಿಬಂಧ ಮತ್ತು ಜಾನುವಾರು ಸಂರಕ್ಷಣೆ ಅಧಿನಿಯಮ 1964ನ್ನು (1964ರ ಕರ್ನಾಟಕ ಅಧಿನಿಯಮ 35) ಒಂದು ಸಮಗ್ರ ಶಾಸನವನ್ನು ಅಧಿನಿಯಮಿಸುವ ಮೂಲಕ ಪ್ರತಿಷ್ಠಾಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. Replacing that bill. ಸಂವಿಧಾನದಲ್ಲಿ ಇಲ್ಲದಿರುವ 12 ವರ್ಷ, 14 ವರ್ಷ ವಯಸ್ಸಾಗಿ ಅದರ ಮೇಲಿರುವುದಕ್ಕೆ ಸಂಬಂಧವಿಲ್ಲ.

(4-30 PM)

O.32 F-26

ಕೆಲವು ಪ್ರಾಣಿಗಳಿಗೆ ಇಲ್ಲ. 1960ರ ಭಾರತ ಸರ್ಕಾರದ ಪ್ರಾಣಿಗಳ ಸಾಗಾಣಿಕೆ ನಿಯಮ, ಕಾಯಿದೆಯಡಿಯಲ್ಲಿ ಇದೂ ರಕ್ಷಣೆ ಸಿಗಬೇಕೆಂದು ಅದಕ್ಕೆ ಬೇಕಾದಂಥ Provision ಇರಲಿಲ್ಲ. ಹಾಗಾಗಿ ಸಾಗಾಣಿಕೆಯಲ್ಲಿ ಮತ್ತು

ಅವುಗಳ ಹತ್ಯೆ ಮಾಡುವಂಥ ವಿಷಯದಲ್ಲಿ ಸಂವಿಧಾನದ ಅನುಚ್ಛೇದದ 48ಕ್ಕೆ ಸರಿಯಾಗಿ ಅದು ಇರಲಿಲ್ಲ. ಹಾಗಾಗಿ ಅಧಿನಿಯಮ ಉಲ್ಲಂಘನೆಗೆ ಕಠಿಣ ಶಿಕ್ಷೆ ಇಂಥದ್ದು ಇರಲಿಲ್ಲ. ಈಗ Punitive action ಇಲ್ಲದಿದ್ದರೆ ಇಂಥದ್ದನ್ನು ಜಾರಿಗೆ ತರುವುದು ಕಷ್ಟ. ಹಾಗಾಗಿ ಕಠಿಣ ಶಿಕ್ಷೆಯನ್ನು ವಿಧಿಸುವುದಕ್ಕೆ ವಿಧೇಯಕವು ಉಪಬಂಧವನ್ನು ಕಲ್ಪಿಸುತ್ತದೆ ಮತ್ತು ನೌಕೆ ಅಥವಾ ವಾಹನವೂ ಒಳಗೊಂಡಂತೆ ಯವುದೇ ಆವರಣದ ಶೋಧನೆ ಮಾಡಲು ಮತ್ತು ಮುಟ್ಟುಗೋಲು ಹಾಕಿಕೊಳ್ಳಲು ಅಧಿಕಾರವನ್ನು ನೀಡುತ್ತದೆ. ಮುಂಚೆ ಅಂಥ ಅಧಿಕಾರವೂ ಇರಲಿಲ್ಲ. ಹಾಗಾಗಿ ಇವತ್ತು ತಂದಿದ್ದರಲ್ಲಿಯೂ 1964 ರಲ್ಲಿ ಪ್ರಾಣಿ ಎಂದರೆ ಅದರಲ್ಲಿ ಜಾನುವಾರು ಎಂದು ಇರಲಿಲ್ಲ, ಪ್ರಾಣಿ ಎಂದು ಇತ್ತು. ಸಂವಿಧಾನದಲ್ಲಿರುವ ಶಬ್ಧವನ್ನೇ ನಾವು ಉಪಯೋಗಿಸಿದ್ದೇವೆ. ಪ್ರಾಣಿ ಎಂದರೆ ಹೋರಿ, ಎತ್ತು, ಎಮ್ಮೆ, ಕೋಣ ಅಥವಾ ಎಮ್ಮೆ ಅಥವಾ ಎಮ್ಮೆಯ ಕರು ಅದು ಗಂಡಾಗಿರಲಿ ಹೆಣ್ಣಾಗಿರಲಿ, ಗೋತ್ರ ಎಂಬುದರಲ್ಲಿ ಗೋವಿನ ಕರು ಅದು ಗಂಡಾಗಿರಲಿ ಹೆಣ್ಣಾಗಿರಲಿ ಎಂದು ಇದೆ. ಈಗಿನದರಲ್ಲಿ ಜಾನುವಾರು ಎಂದರೆ ಹಸು ಹಾಗೂ ಹಸುವಿನ ಕರು, ಹೋರಿ ಮತ್ತು ಎಮ್ಮೆ ಅಥವಾ ಕೋಣ ಹಾಗೂ ಎಮ್ಮೆಯ ಕರು. ಗೋಮಾಂಸ ಎಂದರೆ ಜಾನುವಾರಿನ ಯಾವುದೇ ಬಗೆಯ ಮಾಂಸ ಎಂದು ಹೇಳುವಂಥ definition ಇದೆ. Some more clarity ದೃಷ್ಟಿಯಿಂದ ಇದನ್ನು ಸೇರಿಸ ಲಾಗಿದೆ. ಆಗ ಸಕ್ಷಮ ಪ್ರಾಧಿಕಾರ ಎಂದು ಇತ್ತು. ಅದಕ್ಕೆ ಬೇರೆ ರೂಪ ಇತ್ತು. ಈಗ ನಾವು ಅದನ್ನು ಮೂರನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ರೆವಿನ್ಯೂ ತಾಲ್ಲೂಕಿನ ತಹಶೀಲ್ದಾರರನ್ನು ಅಥವಾ Animal Husbandry ಯ Assistant Director ರವರನ್ನು ಅಧಿಕಾರಿ ಎಂದು ಮಾಡಿದ್ದೇವೆ. ಗೋವು ಅಥವಾ ಎಮ್ಮೆ ಕರುವಿನ ವಧಯೆ ನಿಷೇಧ ಎಂದು ಇದ್ದುದರಲ್ಲಿ ಹಿಂದಿನ ಕಾನೂನಿನಲ್ಲಿ ಯಾವನೇ ವ್ಯಕ್ತಿಯು ಯಾವುದೇ ಗೋವು ಅಥವಾ ಎಮ್ಮೆಯ ಕರುವನ್ನು ವಧೆ ಮಾಡತಕ್ಕದ್ದಲ್ಲ ಎಂದಿತ್ತು. ಈಗ ನಾವು ಅದನ್ನು general provision ನಲ್ಲಿ ಸೇರಿಸಿದ್ದೇವೆ. ಇದರಲ್ಲಿ ಒಂದು ಬದಲಾವಣೆ ಏನೆಂದರೆ ಈಗ ತಂದ ಬಿಲ್‌ನಲ್ಲಿ English ನಲ್ಲಿ ಅದು ಸರಿಯಾಗಿದೆ. Sub-Inspector ಅಥವಾ Assistant Director ರವರು seize ಮಾಡಿದಂಥದ್ದು, ಸಾಗಾಣಿಕೆಗೆ ಹೋಗುತ್ತಿರುವ ಸಂದರ್ಭದಲ್ಲಿ ವಧೆ ಮಾಡಲಿಕ್ಕೆ ಹೋಗುತ್ತಿರುವಂಥದ್ದು ಎಂದು ಗೊತ್ತಾದಾಗ Seize

ಮಾಡಲಿಕ್ಕೆ ಇದೆ. Assistant Commissioner ಎದುರು ಹಾಜರು ಮಾಡಬೇಕೆಂದು ಇತ್ತು. ಅದು ಅಲ್ಲ. ಅದರ record ಅನ್ನು ಮಾತ್ರ ಹಾಜರು ಮಾಡುವುದು. ಎಮ್ಮೆಗಳನ್ನು ಎಲ್ಲಿ seize ಮಾಡಿದ್ದಾರೋ ಅಥವಾ ದನ ಇರುತ್ತದೆಯೋ ಅದು ಅಲ್ಲಿಯೇ ಇರುತ್ತದೆ. ಅದರ records ಅನ್ನು ಮಾತ್ರ ತೆಗೆದುಕೊಂಡು ಹೋಗುವಂಥದ್ದು ಒಂದು ಬದಲಾವಣೆ. ತಮ್ಮ ಹತ್ತಿರ ಕೊಟ್ಟಿರಬೇಕು. ಇದನ್ನು ನಾನು introduce ಮಾಡುವಾಗಲೇ ಅದನ್ನು ತರುತ್ತಿದ್ದೇನೆ. ಎರಡನೆಯದು, clause 7ರಲ್ಲಿ ರಾಜ್ಯದಿಂದ ರಾಜ್ಯಕ್ಕೆ ಹೊರಗಡೆ ಜಾನುವಾರುಗಳ ಸಾಗಾಣೆ ನಿಷೇಧದಲ್ಲಿ ಎರಡನೇ ಸೆಕ್ಷನ್‌ನ ಒಂದನೇ Sub-sectionನಲ್ಲಿ ಉಪ ಪ್ರಕರಣದಡಿಯಲ್ಲಿ ನೀಡಿದ permit, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಮಾಡುವುದಕ್ಕೆ ಒಳಪಟ್ಟಿರತಕ್ಕದ್ದು ಎಂದು ಮಾತ್ರ ಇರುತ್ತದೆ ಮತ್ತು ಅಂಥ ಶುಲ್ಕವನ್ನು ಎಂದು ಇತ್ತು. ಆ ಶುಲ್ಕ ಬೇಡ ಎಂದು ಆಗದೆ. ಏಕೆಂದರೆ, ರೈತರಿಗೆ ಅದರಿಂದ ಯಾವುದೇ ರೀತಿ ಶುಲ್ಕ ಕಟ್ಟಬೇಕು ಎನ್ನುವ ತೊಂದರೆ ಬೇಡ. ಹಾಗಾಗಿ ಅದನ್ನು withdraw ಮಾಡುತ್ತಿದ್ದೇವೆ. ಇವು ಎರಡು ಬದಲಾವಣೆಗಳಿವೆ. ಒಟ್ಟಿಗೆ ಇದನ್ನು ಸಲ್ಲಿಸುತ್ತಿದ್ದೇವೆ. Penalty ವಿಷಯಕ್ಕೆ ಸಂಬಂಧಿಸಿದಂತೆ ಈಗ ಪ್ರಮುಖವಾಗಿ ಯಾರಾದರೂ ಗೋವಧೆ ಮಾಡುವಂಥದ್ದು, ಅದಕ್ಕೆ ಪ್ರೋತ್ಸಾಹ ಕೊಡುವಂಥದ್ದು, ಅದರಲ್ಲಿ ಭಾಗಿಯಾಗುವಂಥದ್ದು ಇರುವಂಥದ್ದು Section-4 ರ ಪ್ರಕಾರ ಅದಕ್ಕೆ ಒಂದು ವರ್ಷ ಶಿಕ್ಷೆ ಅಥವಾ 25 ಸಾವಿರ ರೂ. ವರೆಗಿನ fine ಇದೆ. ಪದೇ ಪದೇ ಅಪರಾಧ ಮಾಡಿದರೆ ಆ ಶಿಕ್ಷೆ ಒಂದು ವರ್ಷದಿಂದ ಏಳು ವರ್ಷದ ವರೆಗೂ ಆಗಬಹುದು ಮತ್ತು 50 ಸಾವಿರ ರೂ.ಗಳಿಂದ 1 ಲಕ್ಷ ರೂ.ವರೆಗೂ fine ಹಾಕಬಹುದು. ಅಂದರೆ ಅದು deterrent ಆಗಿದೆ. ಯಾರೂ ಅದನ್ನು ಮಾಡಬಾರದೆನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಉಳಿದಂಥ sections ಎಂದರೆ ಸಾಗಾಣಿಕೆಯಲ್ಲಿ ಅಥವಾ ಇನ್ನಿತರ ರೀತಿಯಲ್ಲಿ ಅಪರಾಧ ಮಾಡಿದರೆ ಒಂದು ವರ್ಷದವರೆಗೆ ಶಿಕ್ಷೆ ಮತ್ತು 10 ಸಾವಿರ ರೂ.ಗಳಿಂದ 25 ಸಾವಿರ ರೂ.ವರೆಗಿನ fine ಎಂದು ಇದೆ. ಇದು ದಂಡನೆ clause ನಲ್ಲಿಯೇ ಇದೆ. ಮೊದಲು 25 ಸಾವಿರ ರೂ. ಎಂದು ಇತ್ತು. ಪದೇ ಪದೇ ಮಾಡಿದರೆ ಮಾತ್ರ ಹೆಚ್ಚಿಗೆ ಆಗಿದೆ. ಪದೇ ಪದೇ ಗೋವಧೆ ಮಾಡಿದವರಿಗೆ 7

ವರ್ಷದವರೆಗೆ ಶಿಕ್ಷೆ ಇದೆ. ಬೇರೆ ರಾಜ್ಯದಲ್ಲಿಯೂ ಹೀಗೆಯೇ ಇದೆ. ಹಾಗಾಗಿ ಅವರು ಯಶಸ್ವಿಯಾಗಿ ಮಾಡಿದ್ದಾರೆ. ನಾನು ಜಮ್ಮು ಕಾಶ್ಮೀರದಿಂದ information ತರಿಸಿದ್ದೇನೆ. ಅದರಲ್ಲಿ ನಮ್ಮಲ್ಲಿ ಕಡ್ಡಾಯವಾಗಿ ನಿಷೇಧ ಎಂದು ಹೇಳುವ ಮಾತನ್ನು ಅಲ್ಲಿಂದ ತಿಳಿಸಿದ್ದಾರೆ. ಇದು ಹೊಸದಲ್ಲ. ನಮ್ಮ ರಾಜ್ಯಕ್ಕೂ ಹೊಸದಲ್ಲ. ಆದರೆ, ಈ ಕಾನೂನಿನಲ್ಲೊಂದು ಸ್ಪಷ್ಟತೆ ಇರಲಿಲ್ಲ ಎನ್ನುವ ದೃಷ್ಟಿಯಿಂದ ಇವತ್ತು ಸುದ್ದೇಶದಿಂದ ನಾನು ಹೇಳಿದಂಥ 5 ಕಾರಣಗಳಿಗೋಸ್ಕರ ಈ ಬಿಲ್ ಅನ್ನು ಮಂಡನೆ ಮಾಡಿದ್ದೇವೆ. 4ನೇ ಪ್ರಕರಣ ಬಿಟ್ಟು ಬೇರೆ ಎಲ್ಲಾ ಪರಕರಣಗಳಲ್ಲಿ ಮಾಡಿದಂಥ ಅಪರಾಧಗಳಿಗೆ ಒಂದು ವರ್ಷಕ್ಕೆ ಕಡಿಮೆ ಇಲ್ಲದೆ ಮೂರು ವರ್ಷದವರೆಗೆ ಸಜೆ ಹಾಗೂ 10 ಸಾವಿರ ರೂ.ಗಳಿಂದ 25 ಸಾವಿರ ರೂ.ವರೆಗೆ ಜುಲ್ಮಾನೆ ಎಂದಿದೆ. ಇದೊಂದು ಸದಿಚ್ಛೆಯಿಂದ ತಂದಿರುವ ಬಹುಸಂಖ್ಯಾತ ಜನರ ಭಾವನೆಗಳಿಗನು ಗುಣವಾಗಿ ಸ್ಪಂದಿಸಿ ಮತ್ತು ನಾವೇ ಕೊಟ್ಟಿರುವಂಥ Manifesto ಪ್ರಕಾರ ಮತ್ತು ಭಾರತದ ಇತರೆ ರಾಜ್ಯಗಳಲ್ಲಿರುವಂತೆ ಮತ್ತು ಸಂವಿಧಾನದಲ್ಲಿ ರುವಂತೆ, ಮತ್ತು Supreme Court ಹಾಗೂ High Court ನವರು ಒಪ್ಪಿರುವಂತೆ ಮಾಡಿರುವಂಥ ಕಾನೂನು. ಆದ್ದರಿಂದ ಸದನ ಇದನ್ನು ಸ್ವೀಕಾರ ಮಾಡಬೇಕು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಸಂವಿಧಾನದಲ್ಲಿ ಅಡಕವಾಗಿರುವ spirit ಏನಿದೆ ಅದು ಮುಖ್ಯ, ಶಬ್ಧಗಳೂ ಮುಖ್ಯ. ಅಲ್ಲಿ full stops, comma ಕೂಡ important ಆಗುತ್ತವೆ. ಅಧರ ಹಿನ್ನೆಲೆಯಲ್ಲಿ ಉದ್ದೇಶ ಮತ್ತು ಕಾರಣ ಗಳಿಗೋಸ್ಕರ ಮಂಡನೆ ಮಾಡಬೇಕಾದರೆ ಅವರೇನು ಹೇಳುತ್ತಾರೆಂದರೆ,

"It is considered necessary to replace the Karnataka Prevention of Cow Slaughter and Cattle Preservation Act, 1964 (Karnataka Act 35 of 1964) to Prohibit the slaughter of cows and calves of she-buffaloes, bull, bullock, buffalo male or female and for the preservation and improvement of the breeds of cattle, ಇವರು ಉದ್ದೇಶ ಏನು ಹೇಳಿದ್ದಾರೆ, and to endeavour to organize agriculture and animal husbandry in terms of Article 48 of the constitution of India, by enacting a comprehensive legislation," I want to know from the Minister whether it is comprehensiveness. Comprehensive ಎಂದರೆ, Within the four

wall of the Cow Slaughter Act, ಒಂದು ವರ್ಷ ಇದ್ದದ್ದನ್ನು ಏಳು ವರ್ಷ ಮಾಡಿದ್ದೇನೆ, 25 ಸಾವಿರ ಇದ್ದದ್ದನ್ನು 50 ಸಾವಿರ ಮಾಡಿದ್ದೇನೆ ಅಂದರೆ, that is not comprehensive. ಇದನ್ನು ಹೇಳಿರುವುದರಿಂದ ಆಧುನಿಕವಾಗಿರತಕ್ಕಂಥ ಕೃಷಿಗೆ, ಪಶುಸಂಗೋಪನೆಗೆ, ರೈತನಿಗೆ ಸಹಾಯ ವಾಗುವ ರೀತಿಯಲ್ಲಿ ಸಂವಿಧಾನ ಇರುವಾಗ Comprehensive ತರಬೇಕೆಂದು ಇರಬೇಕು. ನೀವು ಎಲ್ಲಾದರೂ ಒಂದು ಕಡೆ, ಹೌದು ಇವತ್ತು ಇರುವ Act ಸರಿಯಿಲ್ಲ. ಇವತ್ತು ಆಧುನಿಕ ಕೃಷಿಗಾಗಿ ಬಹಳ ಸಹಾಯ ವಾಗುತ್ತದೆ ಎನ್ನುವ ರೀತಿಯಲ್ಲಿ ಆ ಶಬ್ದಗಳನ್ನು ಏನಾದರೂ ಸೇರಿಸಿದ್ದರೆ, ಯಾವುದೋ breed ಗಳನ್ನು maintain ಮಾಡಬೇಕು. farm ಗಳನ್ನು maintain ಮಾಡಬೇಕು, ಇನ್ನೊಂದು ತರಹದ ಈ ತರಹದ ವಿಚಾರಗಳನ್ನು ಅಡಕ ಮಾಡಿದ್ದರೆ ನಾನು ಹೌದು ಇವತ್ತು comprehensive ಆಗಿ ತಂದಿದ್ದಾರೆಂದು ಒಪ್ಪಿಕೊಳ್ಳುತ್ತಿದ್ದೆ. It is not comprehensive. ಇದು ಏನೆಂದರೆ, ಕೇವಲ ನಿಮ್ಮ ಮಸೂದೆಯ ಹಿಂದೆ 1964 ರಿಂದ ಜಾರಿಯಲ್ಲಿ ರತಕ್ಕಂಥ ಮಸೂದೆ, ಆ ಮಸೂದೆಯಲ್ಲಿ ಕೆಲವು ಬದಲಾವಣೆಗಳಿಗೆ ನೀವು amendment ತರಬಹುದಾಗಿತ್ತು. ಅದನ್ನು repeal ಮಾಡತಕ್ಕಂಥದ್ದು ಏಕೆ? ಇದನ್ನು repeal ಮಾಡಿದ್ದೆಂದರೆ, 'This is an Act received the assent of the President of India on 14th day of August 1964.' 1964ರಲ್ಲೇ ರಾಷ್ಟ್ರಪತಿಗಳ ಅಂಗೀಕಾರವನ್ನು ಪಡೆದಿರುವಂತಹ ಕಾನೂನು ಆಗಿರುವಾಗ ನನ್ನ ವಿಚಾರ ಏನೆಂದರೆ, ತಾವು Law Minister ಆಗಿ ಅರ್ಥ ಮಾಡಿಕೊಳ್ಳ ಬಹುದು. ಮಾನ್ಯ ಆಚಾರ್ಯರವರಿಗೆ ಅರ್ಥವಾಗುತ್ತದೆ. ಏಕೆಂದರೆ ಅವರು ಹಿರಿಯರು ಅನುಭವಿಗಳು. Comprehensiveness ಏನಿತ್ತು ಇದರಲ್ಲಿ? ನಿಮ್ಮ ಬಿಲ್‌ನಲ್ಲಿ ಏನಾದರೂ ಹುಡುಕಿದರೆ, ಕೊಡವಿದರೆ ಏನಾದರೂ ಉದುರುತ್ತದೆಯೆ ಎಂದರೆ ಏನೂ ಉದುರುತ್ತಿಲ್ಲ. ಅದೇ Section ಎಲ್ಲಾ ಅದೇ ಇದೆ. 4 ವರ್ಷದ್ದು 7 ವರ್ಷವಾಗಿದೆ. ಇದು ಬಿಟ್ಟರೆ ಬೇರೆ ಏನೂ ಇಲ್ಲ. Where is the Comprehensiveness to bring this legislation? That is my objection. ಅದಕ್ಕೆ you have not been able to convince me. ಇನ್ನೊಂದು ಈ ಮಸೂದೆ ಈ ಕೇವಲ ಈ ಒಂದು ರಾಜ್ಯದಲ್ಲಿ ಅಲ್ಲ.

ಎಲ್ಲಾ ಕಡೆ ಇದೆ. ನೀವು ಯಾವುದೋ Supreme Court judgment/ High Court Judgment ಹೇಳಿದಿರಿ. Judgment ಬಂದ ಮೇಲೆ ಎಲ್ಲಾ ರಾಜ್ಯಗಳು ಏನಾದರೂ ಬದಲಾವಣೆ ಮಾಡುವುದಕ್ಕೆ ಹೊರಟಿವೆಯೆ? Spirit is the same. ಅದರಲ್ಲಿ ನನಗೊಂದು ಆಶ್ಚರ್ಯವಾಗಿದ್ದು ಏನೆಂದರೆ, Definition clause ನಲ್ಲಿ, first word, 'Beef means flesh of the cattle in any form. 'ಏನು ಸ್ವಾಮಿ ಆ ರೀತಿ ಅಂದರೆ? ದನ ಕಡಿದರೆ ಬರುವುದೆ ದನದ ಮಾಂಸವೆ. ಅದನ್ನೇನು definition ನಲ್ಲಿ ಹೇಳುವುದು? ಅಂದರೆ ನೋಡಿದವರಿಗೆಲ್ಲಾ ಕಣ್ಣಿಗೆ ದನದ ಮಾಂಸ ಎಂದು ಕಾಣಬೇಕು. ಅದು ಕಾಣುವುದು ಜೊತೆಗೆ 'flesh of the cattle in any form' ಎಂದು ಹೇಳಿದಾಗ, ನನಗೆ ಅನ್ನಿಸುತ್ತದೆ, ನೀವು ಗೋ ಹತ್ಯೆ ಮಾಡಿ ಮಾಂಸ ಮಾಡಿದರೆ ಒಂದು ತರಹ. ಉದಾಹರಣೆಗೆ ಹೇಳುವುದಾದರೆ, ಎಲ್ಲೋ ಬೇರೆ ದೇಶದಿಂದ beef import ಆಗಿ ಬಂತು. ಅದರ ಮೇಲೂ ನಿಮ್ಮ ಕಣ್ಣು. ಅದರ ಮೇಲೂ ಕೇಸ್ ಹಾಕಬೇಕು, ಅದನ್ನು ತಿನ್ನಕೂಡದು ಎನ್ನುವ ಉದ್ದೇಶ ಇಟ್ಟುಕೊಂಡು ನೀವು ಈ ರೀತಿಯಾಗಿ comprehensive ಆಗಿ ಹೇಳತಕ್ಕಂಥದ್ದು. Comprehensive ಎಂದರೆ, ಅದನ್ನು ಸಂವಿಧಾನ ಹಿನ್ನೆಲೆಯಲ್ಲಿ, spirit ನಲ್ಲಿ comprehensive ಮಾಡಿಲ್ಲ. ನೀವು ಈ ಹಿನ್ನಲೆಯಲ್ಲಿ ಇದನ್ನು ತಂದಿದ್ದೀರಿ. ಇನ್ನೊಂದು ನಿಮಗೆ ಯಾವುದೇ ವಿಚಾರದಲ್ಲಿ ಮೂಲ Act ಗೂ ಇದಕ್ಕೂ ಏನೇನು ವ್ಯತ್ಯಾವಿಲ್ಲ. ಶಬ್ದಗಳು ಮತ್ತು Section ಗಳನ್ನು ಸ್ವಲ್ಪ ಬದಲಾವಣೆ ಮಾಡಿದ್ದೀರಿ. ಅದು ಬಿಟ್ಟರೆ definition clause ಮಾಡಿರುವುದು ಬಿಟ್ಟರೆ ಏನೇನೂ ಇಲ್ಲ. ಈಗ ನೀವು '**4. Prohibition of slaughter of cattle-** Notwithstanding anything contained in any law, custom, or usage to the country, no person shall slaughter or cause to be slaughtered, or offer or cause to be offered for slaughter or otherwise intentionally kill or offer or cause to be offered for killing any cattle." ಇನ್ನೇನು ಮಾಡುವುದಕ್ಕಾಗುವುದಿಲ್ಲ. ಅದರ ಜೊತೆಗೆ "**5. Prohibition of sale, usae and possession of beef–** Notwithstanding anything contrary contained in any law, no person shall poses, sell or

transport or cause to be transported, the beef or beef products." ಸುರೇಶ್ ಕುಮಾರ್‌ರವರೆ, ಉದಾಹರಣೆಗೆ ಹೇಳುವುದಾದರೆ, ನನಗೆ ತಿನ್ನಬೇಕೆಂದು ಆಸೆ ಇದೆ. ಅಮೇರಿಕಾದಿಂದ ತರಿಸುತ್ತೇನೆ. ತಂದು ನನ್ನ ಮನೆಯಲ್ಲಿ ಫ್ರಿಜ್‌ನಲ್ಲಿಟ್ಟುಕೊಳ್ಳುತ್ತೇನೆ. ಆವಾಗ ನೀವು ಒಳಗೆ ನುಗ್ಗಬಹುದು ಅಲ್ಲವೆ? ಇದೇನಾ ಇದ್ದೇಶ? ಇದೇನಾ Comprehensiveness? ಇಷ್ಟಕ್ಕೆ ನೀವು ಬಿಡಲಿಲ್ಲ. **"7. Restriction on transport of cattle outside the State** – No person shall transport or offer to transport or cause to be transported by whatever means cattle from any place within the State to outside the State for the purpose of slaughter.' ನೀವು ಸಂತೆಯಿಂದ ಸಂತೆಗೆ ಹೋಗುವ ಹಾಗಿಲ್ಲ. ಒಂದು ಜಾತ್ರೆಯಿಂದ ಒಂದು ಜಾತ್ರೆಗೆ ಹೋಗುವ ಹಾಗಿಲ್ಲ. ಒಂದು vehicle ಕರೆದುಕೊಂಡು ಹೋಗುವ ಹಾಗಿಲ್ಲ. ಆಗಲೂ ಕೂಡ ನೀವು interfere ಮಾಡುವುದಕ್ಕೆ ಸಾಧ್ಯವಾಗುತ್ತದೆ. ದಯಮಾಡಿ ಮೊದಲು ಕೇಳಿ ಸಾರ್. ನನ್ನ ಅನುಮಾನಗಳನ್ನೆಲ್ಲಾ ಹೇಳಿ ಬಿಡುತ್ತೇನೆ. "Provided that the Taluk Magistrate may issue permit for transport of cattle for bona-fide agriculture or animal husbandry purposes." ನಮ್ಮೂರಿನಲ್ಲಿ ಸಂತೆಗಳಾಗುತ್ತವೆ. ನಾನು ನಿಮಗೆ mention ಮಾಡಿದೆ. ನಮ್ಮೂರಿನಲ್ಲಿ ಸಂತೆ ನಡೆಯುತ್ತಿದೆ ದನಗಳು ಬಹಳ ಬಂದಿವೆ ಎಂದು ಹೇಳಿದೆ. ಈ ಸಂತೆಯಲ್ಲಿ ಮಾರಾಟವಾಗಲಿಲ್ಲವೆಂದರೆ ಇನ್ನೊಂದು ಸಂತೆಗೆ ಹೋಗುತ್ತಾರೆ. 20–30–40–ಕಿ.ಮೀ. ದೂರ ಹೋಗುತ್ತಾನೆ. ಆಗ ಹೋಗುವುದಕ್ಕೆ ಆಗುವುದಿಲ್ಲ. ಆಗ vehicle ನಲ್ಲಿ transport ಮಾಡುತ್ತಾರೆಂದರೆ ಅದನ್ನು ಕೂಡ problem ಮಾಡುವುದಕ್ಕೆ ಸಾಧ್ಯವಾಗುತ್ತದೆ. **"8. Prohibition of sale, purchase or disposal of cattle for slaughter"** - ನೋಡಿ ನಿಮ್ಮ Comprehensiveness ಹೇಗಿದೆ ಎಂದರೆ, "No person shall purchase, sell or otherwise dispose of or offer to purchase, sell or otherwise dispose of or cause to be purchased,.." ಇಲ್ಲಿ ಏನೆಲ್ಲಾ ಶಬ್ದಗಳನ್ನು ಹಾಕಿಬಿಟ್ಟಿದ್ದೀರಿ. ಯಾರೇನು ಮಾಡುವ ಹಾಗಿಲ್ಲ. ಹೇಗಾದರೂ ಹಿಡಿದು ಒಳಗೆ ಹಾಕಬಹುದು. "...Sold or otherwise disposed of, cattle for slaughter or knowing or having reason to belive that

such cattle shall be slaughtered." ಇದರ ಜೊತೆಗೆ, "**9. Power of search and seizure-** (1) where a Police Officer not below the rank of Sub-Inspector or a Competent Authority has reason to believe that an offence under this Act has been committed has power to inspect and seize such cattle and premises and materials used or intended to be used for the commission of such offence." ನೀವು ಒಂದು amendment ತಂದು vide notification 'Sub-Inspector' ಎಂದು ಹೇಳಬಹುದಾಗಿತ್ತು. Sub-Inspector ಎನ್ನುವುದನ್ನು ಕೂಡ main Actನಲ್ಲಿ ತರುತ್ತೀರಿ. ಅದೇನು ಬಹಳ ಘನಂದಾರಿ ದೊಡ್ಡ ಪೋಸ್ಟ್ ಎನ್ನುವ ರೀತಿಯಲ್ಲಿ ಅದನ್ನು ತರುತ್ತೀರಿ. ಆಮೇಲೆ, "He shal report such seizure, without unreasonable delay before the Sub-Divisional Magistrate for Confiscation." ಎಷ್ಟು stringent ಆಗಿದೆ ನೋಡಿ. ಪೋಲಿಸ್‌ನವರಿಗೆ ಎಂಥ ಅಧಿಕಾರಿ ಕೊಡುತ್ತೀರಿ ನೋಡಿ. ಈಗ ನೀವು ಅದನ್ನು ಬಿಡಿಸಿಕೊಳ್ಳಬೇಕೆಂದರೆ bank guarantee ಕೊಟ್ಟು ಬಿಡಿಸಿಕೊಳ್ಳ ಬೇಕು. ಇದರ ಜೊತೆಯಲ್ಲಿ "11.Bar of jurisdiction in certain cases" ನೀವು court ಗೆ ಹೋಗುವ ಹಾಗೆ ಇಲ್ಲ. "Whenever any cattle and premises and materials used or intended to be used for the commission of such offence and detained under the Provisions of this Act, the Sub-divisional Magistrate or the Sessions Judge hearing an appeal under section 10 shall have and any other officer or court, tribunal or authority shall not have jurisdiction to make orders with regard to the custody, possession, delivery, disposal or distribution of such property." Penalty ಬಿಡಿ, ಈ ಬಗ್ಗೆ ನೀವು ಇದರಲ್ಲಿ ಹೇಳಿದ್ದೀರಿ. ಇನ್ನೊಂದು ಬಹಳ ತಮಾಷೆಯಾಗಿರುವುದು ಎಂದರೆ, ಇಷ್ಟೆಲ್ಲಾ ನೀವು provision ಮಾಡಿ ಕೊಡುತ್ತೀರಿ. ಅಧಿಕಾರಿಗಳು ತಪ್ಪು ಮಾಡುವುದಕ್ಕೆ ಎಲ್ಲಾ ಅವಕಾಶ ಮಾಡಿ ಕೊಡುತ್ತೀರಿ. ಯಾವ ರೀತಿ ಬೇಕಾದರೂ ಶಿಕ್ಷೆ ಮಾಡುವುದಕ್ಕೆ ಕೊಡುತ್ತೀರಿ. ಆಮೇಲೆ ಕೊನೆಗೆ shelter ಏನು ತೆಗೆದುಕೊಳ್ಳುತ್ತೀರೆಂದರೆ, **'16.Protection of persons acting in good faith.'** ಇದನ್ನು ಹೇಳುವ ಅವಶ್ಯಕತೆ ಇರಲಿಲ್ಲ. ಎಲ್ಲೋ ಒಂದು ಕಡೆಗೆ ನೀವು ಹೇಳಿ ತಪ್ಪು

ಮಾಡಿಸಿ ಅವರಿಗೆ ರಕ್ಷಣೆ ಕೊಡುವುದಕೋಸ್ಕರ ಈ section introduce ಮಾಡಿರುವುದು. ಮಾನ್ಯ ಯಡಿಯೂರಪ್ಪನವರೆ,.. ಸ್ವಲ್ಪ ಕೇಳಿ ಸಾರ್. ನೀವು ಡಾಕ್ಟರ್ ನಾನು ಲಾಯರ್ ಸಾರ್.. "No suit, prosecution or other legal proceedings shall be instituted against the competent authority or any person exercising powers under this Act for anything which is in good faith done or intended to be done under this Act or the rules made thereunder."

Good faith ಎಂದು ಯಾರು ತೀರ್ಮಾನ ಮಾಡುವುದು? ಅಧಿಕಾರಿಗಳು ಇದನ್ನು ಮಾಡುತ್ತಾರೆ. ಆದ್ದರಿಂದ, Good faith ನಲ್ಲಿ ಮಾಡಿದ್ದಾನೆ ಎಂದರೆ ಆತ ಏನು ಮಾಡಿದರೂ ಕೂಡ ಸರಿಯೇ ಎಂದು ಹೇಳುತ್ತಾರೆ. ಈ ಉದ್ದೇಶ ಇದರಲ್ಲಿದೆ. ಎಷ್ಟೆಲ್ಲಾ ಹೇಳಿಕೊಂಡು ಬಂದು ಅಂದರೆ, ನೇಣು ಹಾಕಿಕೊಳ್ಳುವ ಮಟ್ಟಕ್ಕೆ ತಂದು exemptions ಎಂದು ಆನಂತರ ಹೇಳಿದ್ದೀರಿ. ಇದರಲ್ಲಿ **"17. "17.Exemptions** – Subject to such conditions as may be prescribed, this Act shall not apply to," ಎಂದು ಪ್ರಾರಂಭ ಮಾಡಿಕೊಳ್ಳುತ್ತೀರಿ. ಅಂದರೆ, ಹಳೆಯ ಆಕ್ಟ್‌ನಲ್ಲಿ ಇರುವ ಪ್ರಕಾರ Veterinary Doctor ಮತ್ತೆ ಇತರೆ ಕೆಲವು ಮಾಹಿತಿಗಳನ್ನು ಇಲ್ಲಿ ಹೇಳಿಕೊಂಡಿದ್ದೀರಿ. ಯಾವುದೇ ತರಹದು ವ್ಯತ್ಯಾಸ ಇದರಲ್ಲಿ ಇದೆಯೇ? ಮಾನ್ಯ ಯಡಿಯೂರಪ್ಪನವರೆ, ಇದರಲ್ಲಿ ಏನೂ ವ್ಯತ್ಯಾಸ ಕಾಣುತ್ತಿಲ್ಲ. Cattle suffering ಆದಾಗ, cattle slaughtering, everything, it is all the same. ಇವೆಲ್ಲವುದರ ಜೊತೆಗೆ ಒಂದು ಹೊಸ ಸೆಕ್ಷನ್ introduce ಮಾಡಿದ್ದೀರಿ. ಅದೇನೆಂದರೆ, **"18. Establishment of institutions for taking care of cattle-** (1) The State Government may establish, or direct any local authority or permit society registered under the Karnataka Societies Registration Act, 1960, or any association or organization to establish institutions at such places as may be deemed necessary for taking care of the cattle to be sent thereto." ಹೊಸದಾಗಿ ಏನು ಮಾಡುತ್ತೀರೆಂದರೆ, ಸಂಘಸಂಸ್ಥೆಗಳನ್ನು ಮಾಡಿ ಅವರ ವಶಕ್ಕೆ ಕೊಡತಕ್ಕಂಥದ್ದಕ್ಕೆ ಇಲ್ಲಿ ಒಂದು ಅವಕಾಶವನ್ನು ಮಾಡಿದ್ದೀರಿ. "(2) The State Government may provide by rules for the proper

O.32 F-27

management of such institutions for the care of cattle therein and provide support for the class or variety of cows or other cattle that may be admitted herein." ಇದನ್ನು ನೋಡಿದರೆ ಯಾವುದೋ ಒಂದು ರೀತಿಯಲ್ಲಿ ಹತ್ಯೆ ಮಾಡತಕ್ಕಂಥದ್ದನ್ನು ಸಂಪೂರ್ಣ ವಾಗಿ ನಿಷೇಧ ಮಾಡಬೇಕೆಂಬುದು ಹಾಗೂ ಇದನ್ನು ತಿನ್ನುವಂಥವರು ಯಾರಾದರು ಇದ್ದರೆ ಅವರನ್ನು ಕರೆದುಕೊಂಡು ಒಳಗೆ ಹಾಕಬೇಕೆಂಬುದು ನಿಮ್ಮ ಉದ್ದೇಶವಾಗಿದೆ. ಇಷ್ಟು ಬಿಟ್ಟರೆ ಬೇರೇನು ಇದರಲ್ಲಿ ಕಾಣುತ್ತಿಲ್ಲ. ಈ ಸಂದರ್ಭದಲ್ಲಿ ನಾನೊಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ನೀವು ಯಾವುದೇ ಹಳ್ಳಿಗೆ ಹೋಗಿ ಅಥವಾ ಪೊಲೀಸ್‌ನವರಿಂದ, Intelligence department ರವರಿಂದ report ತರಿಸಿಕೊಳ್ಳಿ. ಎಲ್ಲಿ ಗೋಹತ್ಯೆ ಮಾಡಿದ್ದಾರೆಂಬುದು ನಿಮ್ಮ ದೃಷ್ಟಿಯಲ್ಲಿರಬಹುದು. ಯಾವುದೊಂದು ಸಮಾಜದವರು ಇದನ್ನು ಉಪಯೋಗಿಸುತ್ತಾರೆ ಎನ್ನತಕ್ಕಂಥ ಕಲ್ಪನೆ ಏನಾದರು ನಿಮಗೆ ಇದ್ದರೆ, ದಯಮಾಡಿ ಮಾನ್ಯ ಜಿಲ್ಲಾ ಮಂತ್ರಿಗಳು ನನ್ನ ಜೊತೆ ಬನ್ನಿ ಶಿರಾಗೆ ಹೋಗೋಣ. ಅಲ್ಲಿ ಹೋಗತಕ್ಕಂಥವರು ಯಾರು ಮತ್ತು ಅದನ್ನು ಕೊಡತಕ್ಕಂಥವರು ಯಾರು ಮತ್ತೆ ಅದನ್ನು ತಿನ್ನತಕ್ಕಂಥ ಜನರು ಯಾರೆಂಬುದನ್ನೆಲ್ಲಾ ನೋಡಿದರೆ ಯವುದೇ ಒಂದು ಸಮಾಜಕ್ಕೆ ಅಥವಾ ಒಂದು ವರ್ಗಕ್ಕೆ ಸೇರಿದ ಜನರಲ್ಲ. ಮಾನ್ಯ ಸುರೇಶ್‌ಕುಮಾರ್‌ರವರೆ, ತಮಗೆ ಇದರ ರೇಟ್ ಗೊತ್ತಿಲ್ಲವೆಂದು ಕಾಣುತ್ತದೆ. ಕುರಿ, ಕೋಳಿಯ ಒಂದು ಕೆ.ಜಿ. ಮಾಂಸಕ್ಕೆ 260 ರೂಪಾಯಿ ಇದೆ. ಅದರಲ್ಲಿಯೂ ಬೆಂಗಳೂರಿನಲ್ಲಿ ಬನ್ನೂರು ಕುರಿಯ ಒಂದು ಕೆ.ಜಿ. ಮಾಂಸಕ್ಕೆ 400 ರೂಪಾಯಿ ಇದೆ. ಮಾನ್ಯ ಅಧ್ಯಕ್ಷರಿಗೆ ಇದರ ಅನುಭವ ಇರಬಹುದು. 400 ಅಥವಾ 260 ರೂಪಾಯಿ ಕೊಟ್ಟು ತಿನ್ನುವಂಥ ಶಕ್ತಿ ಇವತ್ತಿನ ದಿವಸ ಎಲ್ಲರಿಗೂ ಇಲ್ಲ. ನಮ್ಮ ಜನ ಅತ್ಯಂತ ಬಡತನದಲ್ಲಿ ಮತ್ತು ಬಹಳ ಕಷ್ಟದಲ್ಲಿದ್ದಾರೆ. ಎನ್ನತಕ್ಕಂಥದ್ದು, ಅವರ ಹಕ್ಕು ಮತ್ತು ಅವರ ಟೇಸ್ಟ್ ಆಗಿದೆ. ಅದನ್ನು ನಾವು ರಿಸ್ಟ್ರಿಕ್ಟ್ ಮಾಡುವುದಕ್ಕೆ ಆಗುವುದಿಲ್ಲ. ಈಗ 60 ರೂಪಾಯಿಗೆ ಈ ಮಾಂಸ ಸಿಗುವುದರಿಂದ ಅದನ್ನು ತೆಗೆದುಕೊಂಡು ಹೋಗಿ ತಿನ್ನುತ್ತಾರೆ. ಒಂದು ವೇಳೆ ಇದನ್ನು ಸಂಪೂರ್ಣವಾಗಿ ನಿಷೇಧ ಮಾಡಿ ಎಲ್ಲರನ್ನು ತಂದು ಒಳಗೆ ಹಾಕಿ ಎಲ್ಲವನ್ನು ಮುಚ್ಚಿದರೆ ಬಡವರ ಪಾಡೇನು? 260 ರೂಪಾಯಿ ಕೊಟ್ಟು ತಿನ್ನುವುದಕ್ಕೆ ಹಾಕುವುದಿಲ್ಲ. ಮತ್ತೆ 60 ರೂಪಾಯಿ ಕೊಟ್ಟು ಇದನ್ನು ತಿನ್ನುವುದಕ್ಕೆ ಆಗುವುದಿಲ್ಲ. ತಿನ್ನತಕ್ಕಂಥದ್ದು ನನ್ನ ಹಕ್ಕು,

ನಾನು ತಿನ್ನಲೇ ಬೇಕು, ನೀವು ಹೇಗೆ ಕಿತ್ತುಕೊಳ್ಳುತ್ತೀರಿ? ನಾವು ಹೇಗೆ ಕಿತ್ತುಕೊಳ್ಳುವುದಕ್ಕೆ ಆಗುತ್ತದೆ. ಬಡವರು ಬದುಕುವುದು ಬಹಳ ಕಷ್ಟವಾಗಿದೆ. ಬಿ.ಟಿ. ಬದನೆಕಾಯಿ ಬೇಡ ಮತ್ತು ತಿನ್ನಬೇಡಿ ಎಂಬುದು ಮಾನ್ಯ ಮುಖ್ಯ ಮಂತ್ರಿಯವರ ಹೇಳಿಕೆ ಮತ್ತು ದೊಡ್ಡ ಪ್ರಚಾರ ದೆಹಲಿಯವರಿಗೆ ಮುಟ್ಟಿತು. ಈಗ ಬಿ.ಟಿ. ಸುದ್ದಿಗೆ ಹೋಗುವುದು ಬೇಡ. ದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯಾಗಿ ಸಾಮಾನ್ಯ ಜನರಿಗೆ ಸಾಮಾನ್ಯ ಬೆಲೆಯಲ್ಲಿ ಎಟುಕುವಂಥ ರೀತಿಯಲ್ಲಿ ಆಹಾರ ಧಾನ್ಯಗಳು ಮತ್ತು ತರಕಾರಿ ಸಿಗಬೇಕು. ಅದಕ್ಕೆ ಅವಕಾಶ ಕೊಡದೆ ಬಿ.ಟಿ. ಬದನೆಕಾಯಿ ತಿನ್ನಬೇಡಿ 80 ರೂಪಾಯಿ ಆದರೂ ಬೇರೆಯದು ತಿನ್ನಿ. ಬಿ.ಟಿ. ಬದನೆ ಬೇಡ, ಗೋ ಹತ್ಯೆ ಬೇಡವೆಂದು ಹೇಳತಕ್ಕಂಥದಲ್ಲ ಒಂದು ಕಡೆಯಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ವಿಷಯ ಹೇಳುವುದಕ್ಕೆ ಬಯಸುತ್ತೇನೆ. ನಾನೂ ಸಹ ವ್ಯವಸಾಯ ಮಾಡಿದ್ದೇನೆ. ಮತ್ತೆ ದನಗಳನ್ನು ನಾವೂ ಸಹ ಕಟ್ಟಿದ್ದೇವೆ. ತಾವೂ ಸಹ ದನಗಳನ್ನು ಕಟ್ಟಿದ್ದೀರೆಂದು ನಾನು ಭಾವಿಸುತ್ತೇನೆ. ದನಗಳಿಗೆ ಏನಾದರು ಕಾಯಿಲೆ ಆದಾಗ ಅದನ್ನು ಹೇಗೆ ಸಾಕುವುದು? ಹಾಲು ಕೊಡದ ಒಂದು ಹಸು ಅಥವಾ ಒಂದು ಕರುವಿಗೆ ಮೇವು ಹಾಕಿ ಸಾಕಬೇಕಾದರೆ ಒಂದು ತಿಂಗಳಿಗೆ 4 ಸಾವಿರ ರೂಪಾಯಿ ಬೇಕಾಗುತ್ತದೆ. ನಾನು ಹಸು ಕಟ್ಟಿರುವುದರಿಂದ ಇದರ ಅನುಭವ ನನಗೆ ಇದೆ. 4 ಸಾವಿರ ಖರ್ಚು ಮಾಡಿ ಕೇವಲ ಸಗಣಿ ತೆಗೆದುಕೊಳ್ಳತಕ್ಕಂಥ ಶಕ್ತಿ ರೈತನಿಗೆ ಇದೆಯೇ? ರೈತರಿಗೆ ಖಂಡಿತ ಶಕ್ತಿ ಇಲ್ಲ. ನಮ್ಮಲ್ಲಿ ಬರ ಬಂದಾಗ 50 ಸಾವಿರ ರೂಪಾಯಿ ಹೋಗುತ್ತಿದ್ದ ರಾಸುವನ್ನು ಕೇವಲ 5 ಸಾವಿರ ರೂಪಾಯಿ ಕೊಟ್ಟರು. ಒಬ್ಬ ರೈತ ತನ್ನ ಮುಗುವಿಗಿಂಥ ಹೆಚ್ಚಾಗಿ ಪ್ರೀತಿ ಮಾಡಿದ ಹಸು ತನ್ನ ಎದುರಿಗೆ ಸಾಯಬಾರದು, ಆದರೆ, ಯಾರಾದರು ಇದನ್ನು ತೆಗೆದುಕೊಂಡು ಹೋಗಲಿ ಅಥವಾ ಎಲ್ಲಿಗಾದರೂ ಹೋಗಲಿ ಆದರೆ ನನ್ನ ಎದುರು ಸಾಯಬಾರದು ಮತ್ತು ಇದಕ್ಕೆ ಹಾಕುವುದಕ್ಕೆ ಮೇವು ಕೊಳ್ಳುವುದಕ್ಕೂ ಕೂಡ ಹಣ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಯಾರಾದರು ತೆಗೆದುಕೊಂಡು ಹೋಗಲೆಂಬ ಮಟ್ಟಕ್ಕೆ ಇವತ್ತು ರೈತ ಯೋಚನೆ ಮಾಡುತ್ತಾನೆ. ಇದು ಹಳ್ಳಿಗಳಲ್ಲಿರುವ ಭಾವನೆ, ಹಳ್ಳಿ ಜನ ನೋಡುತ್ತಿ ರುವುದು. 5 ವರ್ಷಗಳಲ್ಲಿ 2 ವರ್ಷ ಇಂಥ ಪರಿಸ್ಥಿತಿ ಬಂದೇ ಬರುತ್ತದೆ. ಇಂಥ ಸಂದರ್ಭದಲ್ಲಿ ದನಗಳನ್ನು ಹೇಗೆ ಸಾಕುವುದು? ಅಥವಾ ನೀವೇನಾದರು Comprehensive bill ತರುವಂಥ ಸಂದರ್ಭದಲ್ಲಿ ಒಂದು ವೇಳೆ ದನಗಳನ್ನು ಸಾಕುವುದಕ್ಕೆ ಆಗದೆ ಇದ್ದಾಗ ಅಥವಾ ದನಗಳಿಗೆ

ಕಾಲು ಮುರಿದಂಥ ಸಂದರ್ಭದಲ್ಲಿ ಆ ದನಗಳನ್ನು ಸಾಕುವುದಕ್ಕೆ ಯಥೇಚ್ಛವಾಗಿ ಹಣ ಕೊಡುತ್ತೇವೆಂದು ಏನಾದರು ಮಾತನಾಡಿದ್ದೀರಾ? ಮಾನ್ಯ ಆಚಾರ್ಯರವರು ಹೇಳಿದ್ದಾರೆ ಆದ್ದರಿಂದ, ಇದನ್ನು ಒಪ್ಪಿಕೊಳ್ಳೋಣ ವೆಂದರೆ, ಅದನ್ನು ಸಾಕುವುದಕ್ಕೆ ಏನು ತೊಂದರೆಯಿಲ್ಲ, ಅದು ಹಾಕುವಂಥ ಸಗಣಿಯೇ ಸಾಕೆಂದು ಹೇಳಬಹುದಾಗಿತ್ತು. ಆದರೆ, ಅದೂ ಕೂಡ ಇಲ್ಲ. ನಮ್ಮಲ್ಲಿ ಪಶುಸಂಗೋಪನೆ ಜಾಸ್ತಿ ಆಗಬೇಕು, ಸಂಪತ್ತನ್ನು ಉಳಿಸಬೇಕು ಎಂಬುದರ ಬಗ್ಗೆ ಇದರಲ್ಲಿ ಇಲ್ಲ. ಇವತ್ತಿನ ದಿವಸ ಬಹಳಷ್ಟು ಜನ ಗೋವಿನ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಗೋವಿನ ಬಗ್ಗೆ ಮಾತಾನಾಡುವಾಗ ನಮ್ಮಲ್ಲಿರುವ ತಳಿಗಳ ಬಗ್ಗೆ ತಿಳಿದುಕೊಳ್ಳಬೇಕು. ಹಳ್ಳಿಕಾರ್ ತಳಿ ಮತ್ತು ನಮ್ಮ ಜಿಲ್ಲೆಯಲ್ಲಿ ಅನೇಕ ಕೆಲವು ತಳಿಗಳಿವೆ. ಈ ತಳಿಗಳ ಬೀಡ್‌ಗಳನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಏನಾದರೂ ಮಾಡಿದ್ದೀರಾ? ಅಥವಾ ಇವುಗಳಿಗೆ ದೊಡ್ಡ ದೊಡ್ಡ ಫಾರಂ ಮಾಡುವಂಥ ಕೆಲಸವನ್ನು ಏನಾದರೂ ಮಾಡಿದ್ದೀರಾ? ಈ ರೀತಿಯಾದ ಒಂದು ಪ್ರಸ್ತಾಪ ಕೂಡ ಈ ಬಿಲ್‌ನಲ್ಲಿ ಇಲ್ಲ. 7 ವರ್ಷದವರಿಗೆ ಜೈಲ್ ಹಾಕುವುದು, ಮಾಂಸ ತಿನ್ನುವಂತಿಲ್ಲ. ಮತ್ತೆ ಬೇರೆ ದೇಶಗಳಿಂದ import ಮಾಡಿಕೊಂಡು ತಿನ್ನುವಂತಿಲ್ಲ.

ಶ್ರೀ ಎ.ರಾಮದಾಸ್ : ಮಾನ್ಯ ಜಯಚಂದ್ರರವರೆ, ಸೆಕ್ಷನ್ 18 ಅನ್ನು ತಾವು ಓದಿದರೆ ತಮ್ಮ ಪ್ರಶ್ನೆಗೆ ಉತ್ತರ ಸಿಗುತ್ತದೆ. ದಯವಿಟ್ಟು ಮೊದಲು ಅದನ್ನು ಓದಿ ಸಾರ್.

ಶ್ರೀ ಟಿ.ಬಿ. ಜಯಚಂದ್ರ : ನನಗೆ ಓದುವುದಕ್ಕೆ ಬರುತ್ತದೆ. ತಾವು ಸೆಕ್ಷನ್ 18 ಓದುವುದಕ್ಕೆ ಹೇಳಿದ್ದೀರಿ. ಈಗ ಅದನ್ನು ಓದುತ್ತೇನೆ.

(ಗೊಂದಲ)

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಜಾಣ ಕುರುಡುಗೆ ಔಷಧಿ ಇಲ್ಲ. ಆ ರೀತಿ ಆಯಿತು.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ಮಧ್ಯೆ ಎದ್ದು ಏಕೆ ಅಡಚಣೆ ಮಾಡುತ್ತೀರಿ.

ಶ್ರೀ ಟಿ.ಬಿ. ಜಯಚಂದ್ರ : ಇದು ದೇಶದ ಎಲ್ಲಾ ರಾಜ್ಯದಲ್ಲಿದೆ. ಇದರ ಬಗ್ಗೆ ನಾನು ಅರ್ಥಮಾಡಿಕೊಂಡಿರುವ ಪ್ರಕಾರ ಸಮಗ್ರವಾದ ಚಿಂತನೆಯ ಹಿನ್ನಲೆಯಲ್ಲಿ ಈ ಮಸೂದೆಯನ್ನು ತಂದಿಲ್ಲ. ಇದನ್ನು ತಂದಿರುವುದರಿಂದ ನಿಮಗೆ ಎಲ್ಲಿಯೋ ಒಂದು ಕಡೆ ಆಸೆ ಇರಬಹುದು. ಈ ಮಸೂದೆಯನ್ನು

1964 ರಲ್ಲಿ ತರಲಾಗಿದೆ. ಇದು ಇಡೀ ದೇಶದಲ್ಲಿಯೇ ಇದೆ ಮತ್ತೆ ಇದನ್ನು ಸಂವಿಧಾನದ ಹಿನ್ನೆಲೆಯಲ್ಲಿ ತಂದಿದ್ದಾರೆ. ಆದರೆ, ನಾವು ಈಗ ವಿಶೇಷವಾಗಿ ತಂದಿದ್ದೇವೆಂದು ತಾವು ತಿಳಿದುಕೊಂಡಿದ್ದೀರಿ. ಗೋಹತ್ಯೆ ನಿಷೇಧ ಕಾನೂನನ್ನು ಜಾರಿಗೆ ತರಲೇಬೇಕೆಂದು ಇವರು ಹೇಳಿರತಕ್ಕಂದ್ದು ಪತ್ರಿಕೆಯಲ್ಲಿ ಬಂದಿವೆ. ಇದಕ್ಕೆ ನಾವೇನೋ ವಿರೋಧ ಮಾಡುತ್ತಿದ್ದೇವೆ ಎನ್ನುವ ರೀತಿಯಲ್ಲಿ ಎಲ್ಲಾ ಸ್ವಾಮಿಜಿಗಳು ನಮಗೆ ಬುದ್ಧಿವಾದ ಹೇಳುವವರೆ ಆಗಿದ್ದಾರೆ. ಮಾನ್ಯ ಯಡಿಯೂರಪ್ಪನವರು ದೊಡ್ಡ ಸಹಾಸ ಮಾಡಿ ಈ ಮಸೂದೆಯನ್ನು ಪಾಸ್ ಮಾಡುವುದಕ್ಕೆ ಒದ್ದಾಡುತ್ತಿದ್ದಾರೆ ಎನ್ನುವ ರೀತಿಯಲ್ಲಿ ಎಲ್ಲಾ ಮಠಾಧಿಪತಿಗಳು ಮಾತನಾಡುತ್ತಿರುವುದನ್ನು ನೋಡಿದರೆ ನಾವೇನೋ ದೊಡ್ಡ ಅಪರಾಧಿ ಮಾಡುತ್ತಿದ್ದೇವೆನೋ ಎಂದು ನಮಗೆಲ್ಲಾ ಗಾಬರಿ ಆಯಿತು. ಈ ಮಸೂದೆಯನ್ನು ತಂದು ಅಬೇಡ್ಕರ್‌ವರು ಬರೆದ ಸಂವಿಧಾನದ ಮೂಲ ಆಶಯಗಳನ್ನು ತರುವುದಕ್ಕೋಸ್ಕರ ಸಮಗ್ರವಾದಂಥ ಮಸೂದೆಯನ್ನು ತರುತ್ತಾರೆಂದು ತಿಳಿದುಕೊಂಡಿದ್ದೆವು. ಆದರೆ, ಎಂಥದ್ದನ್ನು ಮಾಡದೆ 1 ವರ್ಷ ಇದ್ದಂಥದನ್ನು 7 ವರ್ಷ ಹಾಗೂ 25 ಸಾವಿರ ಇರುವುದನ್ನು 50 ಸಾವಿರ ರೂಪಾಯಿ ಮಾಡಿದ್ದೀರಿ. ಇದಕ್ಕೋಸ್ಕರ ಇದನ್ನು ಮಾಡಬೇಕಾಗಿತ್ತೆ. ಇದರ ಬದಲು ಒಂದು ಅಮೆಂಡ್‌ಮೆಂಟ್ ಮಾಡಬಹು ದಾಗಿತ್ತು. ಈ ರೀತಿಯಾಗಿ ಗುಲ್ ಎಬ್ಬಿಸುವಂಥ ಕೆಲಸವನ್ನು ಏಕೆ ಮಾಡಿದ್ದೀರಿ?

ಡಾ: ವಿ.ಎಸ್. ಆಚಾರ್ಯ : ಮೊದಲು ಇದ್ದಂಥದ್ದಕ್ಕೂ ಮತ್ತು ಈಗ ಇರತಕ್ಕಂತದ್ದಕ್ಕೆ ಏನು ವ್ಯತ್ಯಾಸಗಳಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಹಾಗಾದರೆ, ಇದು ಏಕೆ ಬೇಕಾಗಿತ್ತು?

ಡಾ: ವಿ.ಎಸ್. ಆಚಾರ್ಯ : ಏಕೆ ಬೇಕಾಗಿತ್ತೆಂದರೆ, bring clarity.

ಅಧ್ಯಕ್ಷರು : ಮಾನ್ಯ ಆಚಾರ್ಯರವರೆ, ಅವರು ಮಾತನಾಡಿ ಮುಗಿಸಲಿ.

(5 – 00 PM)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಒಂದು ಸಲ repeal ಮಾಡಿದ ಮೇಲೆ ನಾಳೆ ಇದನ್ನು ತಿರುಗಿ ರಾಷ್ಟ್ರಪತಿಗೆ ಕಳುಹಿಸುತ್ತೀರಾ? ಏಕೆ ಆತುರದಲ್ಲಿ ತರುವುದಕ್ಕೆ ಹೋದಿರಿ. ಇರುವುದಕ್ಕೆ amendment ಮಾಡಿಕೊಂಡು ತಂದರೆ ಆಗಿರುತ್ತಿತ್ತು. 1964 ರಲ್ಲಿ ತಂದಿರುವಂಥ ಮಸೂದೆ

ಬಹಳ ಮಹತ್ತರವಾಗಿತ್ತು. ನನಗೆ ಅನಿಸುತ್ತದೆ 1964 ರಿಂದ ಇಲ್ಲಿಯವರೆಗೆ ನೀವು ಈಗ ತರತಕ್ಕಂಥದ್ದನ್ನು ನೋಡಿದರೆ ಎರಡು ಉದ್ದೇಶ ಇರಬೇಕು. ಇಲ್ಲಿಯವರೆಗೆ ಆ Act ಅನ್ನು ಅನುಷ್ಠಾನ ಮಾಡುವುದಕ್ಕೆ ಹೋಗಿಯೆ ಇಲ್ಲವೆನ್ನುವಂಥ ಒಂದು ಅಭಿಪ್ರಾಯ ಬರುತ್ತದೆ. ನೀವು ಅಧಿಕಾರದಲ್ಲಿ ಇದ್ದೀರಿ, ಅನುಷ್ಠಾನ ಮಾಡುವುದಕ್ಕೆ ಯಾವುದೇ ಪ್ರಯತ್ನವನ್ನು ಮಾಡಿಲ್ಲ. ಅದನ್ನು ಮಾಡಿ ಅಲ್ಲೋ ಇಲ್ಲೋ ಸ್ವಲ್ಪ Sub Inspector ಗೆ ಅಧಿಕಾರ, ಅವನು ತಪ್ಪು ಮಾಡಿದರೆ, ಅವನು ಏನು ಮುಟ್ಟಬಾರದು. ಈ Provisions ನ್ನು introduce ಮಾಡಿದ್ದನ್ನು ನೋಡಿದರೆ ಎಲ್ಲೋ ಒಂದು ಕಡೆಗೆ ಯಾರಿಗೋ ಒಬ್ಬರಿಗೆ ಕಿರುಕುಳ ಕೊಡುವುದಕ್ಕೋಸ್ಕರ ಮಾಡುತ್ತಿದ್ದೀರಿ ಎನ್ನತಕ್ಕಂಥ ಭಾವನೆ ಬರುತ್ತದೆ. ದಯಮಾಡಿ ಹೇಳುತ್ತೇನೆ, ಬೇರೆ ಬೇರೆ ರಾಜ್ಯದಲ್ಲಿ ಯಾವ್ಯಾವ ರಾಜ್ಯದಲ್ಲಿ Legislation ಇದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಕೇರಳದಲ್ಲಿ ಅದನ್ನು ಅವ್ಯಾಹತವಾಗಿ ಉಪಯೋಗಿಸುತ್ತಾರೆ. ಅಲ್ಲಿ Legislation ಯಾವ ರೀತಿಯಾಗಿದೆ ಎಂದರೆ,' Panchayat laws provide for prohibition of slaughter of useful animals in Panchayat (non-municipal) areas in the State. Under the Kerala Panchayat (Slaughter Houses and Meat Stalls) Rules, 1964, no certificate shall be granted under Rule 8 in respect of a bull, bullock, cow calf, he-buffalo or she-buffalo or buffalo calf unless the animals is over 10 years of age...' ಇಂತಹ ಯಾವುದಾದರೊಂದು restriction ಇದ್ದಿದ್ದರೆ comprehensive ಆಗಿ ಯೋಚನೆ ಮಾಡಿದ್ದಾರೆಂದು ಹೇಳುತ್ತಿದ್ದೆವು. ಇದರಲ್ಲಿ ಯಾವುದು ಇಲ್ಲ.'... and is unfit for working...' ಅದನ್ನು ಒಪ್ಪುತ್ತಿದ್ದೆವು. 'or breeding or the animal has become permanently incapacitated for work or breeding due to injury or deformity.' ಇದು ಯಾವುದಾದರೊಂದು clause ಇದ್ದಿದ್ದರೆ ರೈತನಿಗೆ ಹಕ್ಕು ಇರುತ್ತಿತ್ತು. ಈ ತರಹ ಆದಾಗ ಇಂತಹ ಸಂದರ್ಭದಲ್ಲಿ certificate ಬೇಕಾದರೆ ತೆಗೆದುಕೊಳ್ಳೋಣ. ಅದನ್ನು ತೆಗೆದುಕೊಂಡು ಕೊಡುವುದಕ್ಕೆ ಒಂದು ಕಾರಣ ಇರುತ್ತಿತ್ತು. ಇವತ್ತು ಇದರಲ್ಲಿ ನೀವು ಯಾವುದನ್ನು ಅಡಕ ಮಾಡದೆ ಇರುವುದರಿಂದ ನೀವು ಇದನ್ನು ಮಾಡಿ ಎಂದರೆ ಹೇಗೆ ಮಾಡುವುದಕ್ಕಾಗುತ್ತದೆ? 'In 1976, the Kerala

Government issued an executive order banning the slaughter of useful animals in the Municipal areas as well.' ಈ ರೀತಿಯಾದಂಥ Comprehensive ಆಗಿ Provisions ಇಟ್ಟುಕೊಂಡು, Conditions ಇಟ್ಟುಕೊಂಡುತರಬೇಕೇ ವಿನಹಃ ಅದನ್ನು ಬಿಟ್ಟು ಈ ರೀತಿಯಾಗಿ ಏನೋ ಒಂದು ದೃಷ್ಟಿಯನ್ನು ಇಟ್ಟುಕೊಂಡು ಇಂತಹ ಮಸೂದೆಗಳನ್ನು ತಂದರೆ ಖಂಡಿತವಾಗಿಯೂ ಕೂಡ ಇದು ಒಳ್ಳೆಯದಾಗುವುದಿಲ್ಲ. ದಯಮಾಡಿ ನಾನು ಹೇಳುತ್ತೇನೆ, ಈ ಚಿಂತನೆ ಬೇಡ. ಇದನ್ನು ವಾಪಸ್ಸು ತೆಗೆದು ಕೊಳ್ಳುವಂಥ ಕೆಲಸವನ್ನು ಮಾಡಿ. ಈಗ ಇರತಕ್ಕಂಥ Act ನಲ್ಲಿ amendment ಅನ್ನು ತಂದು ಸಮಗ್ರವಾಗಿ ಅದನ್ನು ಜಾರಿ ಮಾಡುವುದಕ್ಕೆ ಇನ್ನು ಬಹಳ ಕಷ್ಟವಿದೆ. ಬಹಳ steps ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ನೀವು steps ನ್ನು ತೆಗೆದುಕೊಳ್ಳುವ ಕೆಲಸವನ್ನು ಮಾಡತಕ್ಕಂಥದ್ದು ಸೂಕ್ತವೆನ್ನುವ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಇದರ ಬಗ್ಗೆ ಪತ್ರಿಕೆಯಲ್ಲಿಯೂ ಕೂಡ ಬರೆದಿರುತ್ತಾರೆ. ಏತಕ್ಕೆ ಈ ಬಿಲ್‌ನ್ನು ತಂದರು? ಈ ಕಾನೂನನ್ನು ಯಾವ ಉದ್ದೇಶಕ್ಕಾಗಿ ತಂದರು? ಅವರ ಒಳ agenda ಏನಿದೆ? ಎನ್ನತಕ್ಕಂಥ ರೀತಿಯಲ್ಲಿ ನಾನಾ ರೀತಿಯಾದ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಅದು ಸ್ವಾಭಾವಿಕ, ಈ ತರಹ ಒಂದು Act ಬಂದಾಗ ಅದರ ವ್ಯಾಖ್ಯಾನ ಮಾಡತಕ್ಕಂಥದ್ದು ಒಂದು ವಿಚಾರ. ಆದರೆ ನಾನು ಒಂದನ್ನು ಹೇಳುತ್ತೇನೆ. ಯಾರೇ ಆದರೂ ಕೂಡ ಈ ದೇಶದಲ್ಲಿರತಕ್ಕಂತ ಹಸುಗಳಿಗೆ ತನ್ನದೇ ಆದಂಥ ಗೌರವಸ್ಥಾನ ಇದ್ದೆ ಇದೆ. ಆ ಗೌರವಸ್ಥಾನವನ್ನು ಯಾರೇ ವಿರೋಧ ಮಾಡತಕ್ಕಂಥ ಪ್ರಶ್ನೆ ಅಲ್ಲ. ಇದನ್ನು ಸಂವಿಧಾನದಲ್ಲಿ ಅಡಕ ಮಾಡಿದ್ದಾರೆಂದು ಯಾವ ಜನಾಂಗದವರು ವಿರೋಧ ಮಾಡತಕ್ಕಂಥ ಪ್ರಶ್ನೆ ಅಲ್ಲ. ಅಂತಹ ಒಂದು ಮಸೂದೆ ಬಹಳ ವರ್ಷದಿಂದ ಕಾರ್ಯಾಚರಣೆಗೆ ಇದ್ದದ್ದು ಇವತ್ತು ಏಕಾಏಕಿ ತೆಗೆದು ಇವತ್ತು ಹೊಸ ಮಸೂದೆ ತರುತ್ತೇವೆಂದು ಹೊರಟಿರತ ಕ್ಕಂಥದ್ದರಲ್ಲಿ ಏನಾದರೂ ಅರ್ಥ ಇದೆಯೆ ಎನ್ನತಕ್ಕಂಥ ಮಾತನ್ನು ಹೇಳುತ್ತಾ, ಅಥವಾ ಒಂದು ಸಮಗ್ರವಾದಂಥ ರೀತಿಯಲ್ಲಿ ಆ breeds ನ್ನು protect ಮಾಡತಕ್ಕಂಥ ರೀತಿಯಲ್ಲಿ ಅವರಿಗೆ ಇನ್ನೇನೋ ಸಹಾಯ ಮಾಡತಕ್ಕಂಥ ರೀತಿಯಲ್ಲಿ ತಂದಿದ್ದರೆ ಅದನ್ನು ನಾವು ಸ್ವಾಗತ ಮಾಡುತ್ತಿದ್ದೆವು. ಆದರೆ ಅದು ಯಾವುದು ಇಲ್ಲದಿದ್ದರೆ ಎಲ್ಲೋ ಒಂದು ಕಡೆ ಅನಿಸುತ್ತದೆ. ಬಡವರ ಹೊಟ್ಟೆ ಮೇಲೆ ಹೊಡೆಯತಕ್ಕಂಥ ಕೆಲಸ ಆಗುತ್ತದೆ ಏನೋ? ನೋಡಿ ಅದು

ಅವರವರ ನಂಬಿಕೆ. ಏಕೆಂದರೆ ನಾವು ಒಂದು ಪೂಜ್ಯತಾ ಮನೋಭಾವನೆಯಿಂದ ನೋಡುತ್ತೇವೆ. ಬೇರೆಯವರು ಇನ್ನೊಂದು ರೀತಿಯಲ್ಲಿ ನೋಡುತ್ತಾರೆ. ನನಗೆ ಒಂದು ಜ್ಞಾಪಕ ಬರುತ್ತದೆ. ನಾಗರಹಾವು ಬಂದು ಬಿಟ್ಟರೆ ಆಗಿ ಹೊಯಿತು. ಅದು ಕನಸಿನಲ್ಲಿ ಬಂದರೆ ಒಳ್ಳೆಯದು ಆಗುತ್ತದೆಂದು ನಂಬಿಕೊಂಡಿರುವವರು ನಾವು. ನಾನು ಚುನಾವಣೆಗೆ ಹೋಗುವಾಗ ಒಂದು ಸಲ ನಾಗರಹಾವು ಕಂಡು ಬಿಟ್ಟಿತು. ಆಗ ನಮ್ಮ ಮನೆಯವರು ಹೇಳಿದರು. ನೀವು ಗೆದ್ದು ಬಿಟ್ರಿ ಬಿಡಿ ಇನ್ನೇನು ಎಂದು ಹೇಳಿದರು. ಅಂತಹ ನಾಗರಹಾವು. ನಾನು ಚೈನಾಕ್ಕೆ ಹೋದಾಗ ನೋಡಿದರೆ, ಹೋದ ತಕ್ಷಣ ಅವರು menu card ನಲ್ಲಿ ಕೇಳಿದ್ದು ಏನೆಂದರೆ, ನಿಮಗೆ ನಾಗರಹಾವು ಬೇಕೆ ಎಂದು. ಅಲ್ಲಿ ನಾಗರಹಾವು special meal. ಅದು ಅವರವರ ನಂಬಿಕೆ ಅದನ್ನು ನಾವು ಏನು ಮಾಡುವುದಕ್ಕಾಗುವುದಿಲ್ಲ. ನಂಬಿಕೆ ಎನ್ನುವುದು ಅವರವರ ಧರ್ಮಕ್ಕೆ ಅವರವರ ವ್ಯಕ್ತಿಗಾನುಸಾರವಾಗಿರುವಂಥದ್ದು. ಆದರೆ ಎಲ್ಲೋ ಒಂದು ಕಡೆಗೆ ಹೊಟ್ಟೆ ಎನ್ನತಕ್ಕಂಥದ್ದು ಬಹಳ ಮುಖ್ಯ. ಸರ್ಕಾರದಿಂದ ಹೊಟ್ಟೆಯ ಮೇಲೆ ಹೊಡೆಯತಕ್ಕಂಥ ಕೆಲಸವಾಗಬಾರದು ಮತ್ತು ದ್ವೇಷವನ್ನು ಸಾಧಿಸತಕ್ಕಂಥ ಕೆಲಸವಾಗಬಾರದು ಎನ್ನತಕ್ಕಂಥದ್ದು ನನ್ನ ಎಚ್ಚರಿಕೆ ಎನ್ನತಕ್ಕಂಥ ಮತನ್ನು ಹೇಳುತ್ತೇನೆ. ದಯಮಾಡಿ ಇಂತಹ ಮಸೂದೆಯಿಂದ ನಿಮಗೆ ಒಳ್ಳೆಯ ಹೆಸರು ಬರುವುದಿಲ್ಲ. ದಯಮಾಡಿ ವಾಪಸ್ಸು ತೆಗೆದು ಕೊಂಡು ಅದಕ್ಕೆ ಸೂಕ್ತವಾಗಿರತಕ್ಕಂಥ ಅಮೆಂಟ್‌ಮೆಂಟ್‌ನ್ನು Safeguard ಗಳನ್ನು ಹಾಕಿ ಅದನ್ನು ಜಾರಿಗೆ ತರತಕ್ಕಂಥ ಕೆಲಸವನ್ನು ಮಾಡಿದರೆ ಸೂಕ್ತವಾದಂಥದ್ದು ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಆರ್. ರೋಷನ್ ಬೇಗ್ (ಶಿವಾಜಿನಗರ) : ಮಾನ್ಯ ಅಧ್ಯಕ್ಷರೆ, ನಾನು ಒಂದು clarification ಮಾಡಬೇಕೆಂದು ಇದ್ದೇನೆ. ಕೆಲವರಿಗೆ ಏನಿದೆ ಎಂದರೆ, ಅಲ್ಪಸಂಖ್ಯಾತರು ಅದರಲ್ಲಿಯೂ ಮುಸಲ್ಮಾನರು ಈ beef ತಿನ್ನುವುದು ಜಾಸ್ತಿ ಎಂದು ಏನೋ ಒಂದು ಕಲ್ಪನೆ ಇರಬೇಕು. ನಾನು ನಿಮಗೆ ಒಂದು ಮಾತನ್ನು ಹೇಳುತ್ತೇನೆ. ತಮ್ಮ ಬಹುಸಂಖ್ಯಾತರ ಭಾವನೆಗಳು ಏನಿವೆ ಅದು ನಮಗೆ ಅರ್ಥವಾಗುತ್ತದೆ. ತಾವು ಇಡೀ ದೇಶದಲ್ಲಿ Cow Slaughter Act ಜಾರಿಯಲ್ಲಿದೆ. ಪ್ರತಿಯೊಂದು ರಾಜ್ಯದಲ್ಲಿ ಈ ಒಂದು Act ಜಾರಿಯಲ್ಲಿದೆ. ಅದಕ್ಕೆ ನಾವು ಯಾವತ್ತು oppose ಮಾಡಿಲ್ಲ. ಈ ದೇಶದ ಮುಸಲ್ಮಾನರು ಆಗಲಿ, ಈ ರಾಜ್ಯದ ಮುಸಲ್ಮಾನರು ಆಗಲಿ, ಯಾವತ್ತು

ಗೋಹತ್ಯೆಗೆ ವಿರೋಧ ಮಾಡಿಲ್ಲ, ಈಗಲೂ ಮಾಡುವುದಿಲ್ಲ. ಆದರೆ ತಮ್ಮ ಭಾವನೆಗಳು, ತಾವು ಗೋಮಾತೆಗೆ ತಾವು ನಮಸ್ಕಾರ ಮಾಡಿದರೆ, ನೀವು respect ಕೊಟ್ಟರೆ ನಾವು respect ಕೊಡುತ್ತೇವೆ. ನೀವು ಗೋಮಾತೆಗೆ ಜೈ ಎಂದರೆ ನಾವು ಜೈ ಎನ್ನುತ್ತೇವೆ. ಏನಾಗಿದೆ ಎಂದರೆ, ಇವರು ಯಾವ ಕಾಯಿದೆಯನ್ನು ತೆಗೆದುಕೊಂಡು ಬಂದಿದ್ದಾರೆ. ನಮಗೆ ನೋವಾಗುವುದೇನೆಂದರೆ, ಮಾನ್ಯ ಯಡಿಯೂರಪ್ಪ ಸಾಹೇಬರೆ, ನೀವು ಪ್ರಮಾಣ ವಚನ ಸ್ವೀಕಾರ ಮಾಡುವ ಸಮಯದಲ್ಲಿ ಏನು ಹೇಳಿದ್ದೀರೆಂದರೆ, ಎಲ್ಲಾ ಜಾತಿ ಜನಾಂಗದವರಿಗೆ ಬೇಧ ಭಾವ ಇಲ್ಲದಂತೆ ಎಲ್ಲರೂ ನೋಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳಾಗಲಿ, ಪ್ರತಿಯೊಬ್ಬ ಮಂತ್ರಿಗಳಾಗಲಿ oath ತೆಗೆದುಕೊಂಡರಲ್ಲಾ, my apprehension about this Bill is, ತಾವು ಈ ಬಿಲ್‌ನಲ್ಲಿ Sub Inspector ಗೆ ಏನು ಅಧಿಕಾರವನ್ನು ಕೊಟ್ಟಿರುತ್ತೀರಿ. ಈ ದೇಶದಲ್ಲಿ beef exporters ಯಾರು? ಮುಸಲ್ಮಾನರು ಅಲ್ಲ, ಬೇರೆ ಜನಾಂಗದವರು. ಹೆಸರು ಏನೆಂದರೆ ಅಲ್ ಕಬೀರ್. The leading exporters of beef in this country are not Muslims. They all belong to the major communities. ಅವರ ಬಗ್ಗೆ ತಾವು ಏನು ಮಾತನಾಡುವುದಿಲ್ಲವೆ? ಇಲ್ಲಿ 1964 Act ಇಲ್ಲಿ ಇದ್ದಾಗ ನೀವು ಈಗ Act ತೆಗೆದುಕೊಂಡು ಬರುತ್ತೀರಿ ಈಗ ನೋಡಿ. ಆಂಧ್ರಪ್ರದೇಶ-1977, ಆಸ್ಸಾಂ-1950, ಬಿಹಾರ-1955, ದೆಹಲಿ-1994, ಗೋವಾ-1994, ಗುಜರಾತ-1954, ಆ ರಾಜ್ಯಗಳಲ್ಲಿ ಅದೇ ಏಕೆ ನಡೆಯುತ್ತಿದೆ. ಗುಜರಾತಿನಲ್ಲಿ ಹೊಸ ಕಾನೂನು ತೆಗೆದುಕೊಂಡು ಬಂದಿಲ್ಲ. ನಾವು ಗುಜರಾತ ಮಾದರಿ ಎಂದು ತಾವು ಸುತ್ತೂರು ಮಠದಲ್ಲಿ ತಾವು ಏನು camp ಮಾಡಿದ್ದೀರಲ್ಲಾ ಆಗ ಏನು ಹೇಳಿದಿರಿ. ಗುಜರಾತ ಗುಜರಾತ ಮಾದರಿ ಎಂದು ಏನು ಗುಜರಾತ ಮಾದರಿ. ಗುಜರಾತಿನಲ್ಲಿ ಏನು ಹೊಸ ಕಾಯಿದೆ ಇಲ್ಲ. ಅದನ್ನು ಬಿಟ್ಟು ನೀವು Sub Inspector ಗೆ ಅಧಿಕಾರ ಕೊಡುತ್ತೀರಿ. ಅವರು ಅಲ್ಲಿಗೆ ಹೋಗಿ seize ಮಾಡಿ ಈ ಜಾತ್ರೆಯಿಂದ ಆ ಜಾತ್ರೆಗೆ ತೆಗೆದುಕೊಂಡು ಹೋಗಬೇಕಾದರೆ ಅದನ್ನು seize ಮಾಡಿ ಅವರನ್ನು arrest ಮಾಡಿ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈಗ ಇರುವ

U.32 F-28

1964 Act ನಲ್ಲಿ ಇಡೀ costal belt ನಲ್ಲಿ ಏನು ಅಲ್ಪಸಂಖ್ಯಾತರ ಮೇಲೆ ಏನು ಅತ್ಯಾಚಾರವಾಗಿದೆ ಗೊತ್ತೆ?

ಯಾವುದು ಬೇರೆ cattle ನ್ನು ತೆಗೆದುಕೊಂಡು ಹೋಗುತ್ತಿದ್ದರೆ, ತೆಗೆದುಕೊಂಡು ಹೋಗುವುದು ಅವರನ್ನು ಜೈಲಿನಲ್ಲಿ ಹಾಕುವುದು, ಜೈಲಿನಲ್ಲಿ ಹಾಕುವುದಕ್ಕೆ ಮುಂಚೆ ಅವರಿಗೆ ಬಟ್ಟೆಯನ್ನು ಬಿಚ್ಚಿ ಅಪ್ಪ ಮಗನಿಗೆ ಇದು ನಡೆದಿರುವುದು ಉಡುಪಿಯಲ್ಲಿ, ಆ ಏರಿಯಾದವರು ಹೋಂ ಮಿನಿಸ್ಟರ್ ರವರು ಬರುತ್ತಾರೆ. ಅಪ್ಪ ಮಗನಿಗೆ ಬಟ್ಟೆಯನ್ನು ಬಿಚ್ಚಿ ಅಲ್ಲಿ ಕೂರಿಸಿದ್ದರಲ್ಲಾ, ಅವರು ಎಂತಹ ನೋವನ್ನು ಪಟ್ಟಿದ್ದಾರೆ. ನಾವು ಇಲ್ಲಿ ಗೋಹತ್ಯೆ ವಿಧೇಯಕದ ಬಗ್ಗೆ ಇಲ್ಲಿ ನಾವೇನು ವಿರೋಧವನ್ನು ಮಾಡುತ್ತಿದ್ದೀವಾ? ಈ ದೇಶದಲ್ಲಿ ಯಾವತ್ತು ಕಾನೂನು ಬಂದಾಗ ಆಗಿನಿಂದಲೂ ನಾವು ಸುಮ್ಮನೆ ಇರಲಿಲ್ಲವೇ? ಅದನ್ನು ನಾವು ಸ್ವಾಗತ ಮಾಡಿಲ್ಲವೇ? ಇಂತಹ ಕಾನೂನುಗಳನ್ನು ತೆಗೆದುಕೊಂಡು ಬಂದು ನಮಗೆ ನೀವು ಏತಕ್ಕಾಗಿ harass ಮಾಡುತ್ತಿದ್ದೀರಿ? Bill makes slaughter of all calves of cattle, a punishable crime. ಆಮೇಲೆ Establishment of institutions ಇದೆ ಇರುವುದು. Establishment of institutions, ಪ್ರಾಣಿದಯಾ ಸಂಘ ಎನ್ನುವಂತಹದ್ದು ಬಂದು ನೀವು ಆ ಸಂಘಕ್ಕೆ handover ಮಾಡುತ್ತೀರಿ. ನನ್ನ experience ಏನೆಂದರೆ, ಇದಕ್ಕೂ ಮುಂಚೆ ಬಹಳ ವರ್ಷಗಳಿಂದ ನೋಡಿಕೊಂಡು ಬರುತ್ತಿದ್ದೇನೆ. ಎಲ್ಲೆಲ್ಲೋ ಓಡಿಹೋಗುತ್ತಾರೆ ಪ್ರಾಣಿದಯಾ ಸಂಘದವರು, ಅವರು complaint ಮಾಡುತ್ತಾರೆ. ಪೋಲೀಸ್‌ನವರು seize ಮಾಡಿ ಅವರ ಕೈಗೆ ಕೊಡುತ್ತಾರೆ. ಇವರು cattle ಗಳನ್ನು ತೆಗೆದುಕೊಂಡು ಹೋಗಿ ಶೆಡ್‌ನಲ್ಲಿ ಇಡುತ್ತಾರೆ. ಹಾಗೆಯೇ ಅಲ್ಲಿ ಜಾನುವಾರುಗಳು ಸತ್ತು ಹೋಗಿವೆ. ಆ ಪ್ರಾಣಿಗೆ ತಿನ್ನುವುದಕ್ಕೆ ಏನು ಹಾಕುವುದಿಲ್ಲ. ಆದರೆ ಹೆಸರು ಮಾತ್ರ ಪ್ರಾಣಿ ದಯಾ ಸಂಘ, ಎಷ್ಟೋ instances ಗಳು ನಮ್ಮ ಕಣ್ಮುಂದೆ ಬಂದಿದೆ. ಇದರ ಬಗ್ಗೆ ನಮಗೆ ಗೊತ್ತಾಗಿದೆ. ಅದಕ್ಕಾಗಿ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಇನ್ನೊಂದು ಸಾರಿ ಹೇಳುತ್ತೇನೆ ದಯವಿಟ್ಟು, ನಾನಾಗಲಿ, ಮಾನ್ಯ ಸದಸ್ಯರುಗಳಾದ ಹ್ಯಾರಿಸ್ ಆಗಲಿ, ತನ್ವೀರ್ ಸೇಠ್ ಆಗಲಿ, ರಹೀಂಖಾನ್ ಆಗಲಿ, ನಾವು ಯಾರ‍್ಯಾರು ಮುಸ್ಲಿಂ Legislators ಇದ್ದೇವೆ, ನಾವು

ಕನ್ನಡಿಗರು, ನಾವು ಅಷ್ಟೇ respect ಅನ್ನು ಕೊಡುತ್ತೇವೆ. ನಾವು ಇದಕ್ಕೆ oppose ಮಾಡುತ್ತಿಲ್ಲ. ತಾವು ದಯವಿಟ್ಟು ಏನು ಈ clauses ಅನ್ನು ತೆಗೆದುಕೊಂಡು ಬಂದಿದ್ದೀರಿ, Sub Inspector ಗೆ power ನ್ನು ಕೊಟ್ಟಿರುವುದು, 7 ವರ್ಷ punishment, ಇಲ್ಲಿ ಯಾರು ನಿಮಗೆ ಸಿಗುತ್ತಾರೆ ಅವರನ್ನು ಕರೆದುಕೊಂಡು ಹೋಗಿ ಜೈಲಿಗೆ ಹಾಕಿಬಿಡುತ್ತಾರೆ. ಇದೊಂದು hidden agenda ಇದನ್ನು implement ಮಾಡುವುದಕ್ಕೆ ಹೋಗಬೇಡಿ. ದಯವಿಟ್ಟು ಸನ್ಮಾನ್ಯ ಮುಖ್ಯಮಂತ್ರಿಗಳೆ, ನಮಗೂ ಸಹ ಮರ್ಯಾದೆಯನ್ನು ಕೊಡಿ. ನಾವು ಸಹ ಮರ್ಯಾದೆಯಿಂದ ಬಾಳಬೇಕು, ನಮ್ಮ ಮಕ್ಕಳು ಸಹ ಈ ರಾಜ್ಯದಲ್ಲಿ ಮರ್ಯಾದೆಯಿಂದ ಇರಬೇಕು. ನಾವು ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಕೊಡುತ್ತೇವೆಂದು ತಾವು ಪದೇಪದೇ ಹೇಳಿಕೊಂಡು ಬರುತ್ತಿದ್ದೀರಿ. ಆದರೆ ಈ ಕಾನೂನು ಏತಕ್ಕಾಗಿ ತೆಗೆದುಕೊಂಡು ಬಂದಿದ್ದೀರಿ? ಸನ್ಮಾನ್ಯ ಉಪನಾಯಕರಾದ ಶ್ರೀ ಜಯಚಂದ್ರ ರವರು ಈ ಬಗ್ಗೆ ಬಹಳ ವಿವರವಾಗಿ ಹೇಳಿದ್ದಾರೆ. ನಾನು ಅವರು ಹೇಳಿರುವುದನ್ನು repeat ಮಾಡುವುದಕ್ಕೆ ಹೋಗುವುದಿಲ್ಲ. ಸನ್ಮಾನ್ಯ Chief Minister ರವರೆ, ಉತ್ತರ ಪ್ರದೇಶದಲ್ಲಿ ವಿಚಾರಿಸಿ, the biggest cold storage plant, ಯಾವುದು ಎಂದರೆ ಅಲಿಫಢ್‌ನಲ್ಲಿ ಇದಕ್ಕೆ ಯಾರು Partner ಎಂದರೆ, ನಾನು ಅವರ ಹೆಸರನ್ನು ಹೇಳುವುದಿಲ್ಲ. ಒಬ್ಬ very senior BJP Leader and a former Chief Minister. ಅವನು ಅದಕ್ಕೆ partner ಆಗಿದ್ದಾನೆ. ಈ ಬಗ್ಗೆ ಬೇಕಾದರೆ ತಾವು ವಿಚಾರಿಸಿ. ಈ ಬಗ್ಗೆ ನಾನು facts ನ್ನು ಹೇಳುತ್ತಿದ್ದೇನೆ. ಈ ಬಗ್ಗೆ Deccan Herald ನಲ್ಲಿ Editorial Column ನಲ್ಲಿ 'Holy Cow' ಬಗ್ಗೆ ಬಂದಿದೆ. ಅದಕ್ಕಾಗಿ ನಾನು ದಯವಿಟ್ಟು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಇದರಲ್ಲಿ ಜಿದ್ದಾಜಿದ್ದಿ ಬೇಡ. ಇದರಲ್ಲಿ ತಾವು ಯಾವುದು Points ನ್ನು mention ಮಾಡಿದ್ದೀರಿ, clauses ಇವೆಲ್ಲವನ್ನು ತೆಗೆಯಿರಿ. Cow Slaughter Act, 1964 ಇದೆ. ಅದನ್ನು ನಾವು ಸ್ವಾಗತ ಮಾಡುತ್ತೇನೆ. ಅದು ಈಗ ಜಾರಿಗೆ ಬರಲಿ, ಇದನ್ನು ತಾವು ಮಾಡಿದರೆ ನಮಗೆ vote ಸಿಗುತ್ತದೆ, ನಾವು election ನಲ್ಲಿ ... ಮಾನ್ಯ ಸಭಾಧ್ಯಕ್ಷರೆ ಜನರು ಏನು ಮಾತನಾಡಿ ಕೊಳ್ಳುತ್ತಾರೆಂದರೆ, ಮೊನ್ನೆ ದೆಹಲಿಯಲ್ಲಿ ಹೋಗಿ ಏನೇನು ಗಲಾಟೆಗಳು

ಆಯಿತು, ಬಿಜೆಪಿಯಲ್ಲಿ ಬಂಡಾಯ rebel ಸರ್ಕಾರವು ಇವತ್ತು ಹೋಗುತ್ತದೆ. ಮಧ್ಯಾಹ್ನ ಹೋಗುತ್ತದೆ, ಸಾಯಂಕಾಲ ಹೋಗುತ್ತದೆ, 20 ದಿವಸ ಈ ರಾಜ್ಯದಲ್ಲಿ ಸರ್ಕಾರವು ಇರಲಿಲ್ಲ. ಅದಕ್ಕಾಗಿ ತಾವು ಯಾವ ತರಹವಾಗಿ vote bank ನ್ನು ವಾಪಸ್ಸು ತೆಗೆದುಕೊಳ್ಳುವುದು. ಇವರಿಗೆ ಯಾರು Support ನ್ನು ಮಾಡಿದರು; ಏನಪ್ಪಾ ನಾವು ಇವರಿಗೆ ಪ್ರೀತಿವಿಶ್ವಾಸದಿಂದ ವೋಟನ್ನು ಬಿಜೆಪಿಗೆ ಕೊಟ್ಟರೆ ಇವರು ಕೂಡ ಶುರು ಮಾಡಿದರಲ್ಲಪ್ಪಾ ಎಂದು ಅದೇ ಜನಾಂಗದವರು ಮಾತನಾಡುವುದಕ್ಕೆ ಶುರು ಮಾಡಿದ್ದಾರೆ. 'Party with a Difference' ಎಂದು slogan ಮಾಡಿದರು. ಎಲ್ಲಿ party with a difference? ಇವರಿಗೂ ಅದೇ ರೋಗ ಬಂತು? Somehow ಅದನ್ನು ಕಾಪಾಡಿಕೊಳ್ಳುವುದಕ್ಕೆ ಇಲ್ಲಾ ನಾವು ಗೋಹತ್ಯೆ ಕಾನೂನನ್ನು ತೆಗೆದುಕೊಂಡು ಬಂದಿದ್ದೇವೆ. ಈ ಬಿಲ್‌ನ್ನು ಹೊಸದಾಗಿ ನಾವು ಜಾರಿಗೆ ತೆಗೆದುಕೊಂಡು ಬಂದಿದ್ದೇವೆ. ಅಲ್ಪಸಂಖ್ಯಾತರನ್ನು ಕೊಂದು ಹಾಕುತ್ತೇವೆ. ಒಳಗಡೆ ಹಾಕಿಬಿಡುತ್ತೇವೆ, ಜೈಲಿಗೆ ಹಾಕಿಬಿಡುತ್ತೇವೆ. 7 ವರ್ಷ ಜೈಲಿಗೆ ಹಾಕಿಬಿಡುತ್ತೇವೆ. ಇದನ್ನು ಮಾಡುವುದು ದಯವಿಟ್ಟು ಬೇಡ. ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ತಮ್ಮ hidden agenda ವನ್ನು ದಯವಿಟ್ಟು implement ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಶ್ರೀ ಬಂಡೆಪ್ಪ ಕಾಶೆಂಪೂರ್‌ರವರೆ ತಾವು ಮಾತನಾಡಿ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಇವರು ಏನು ಹೊಸ Bill, Karnataka Prevention of Slaughter and Preservation of Cattle bill, 2010 ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. 1964ರ Bill replace ಮಾಡಿ ಇದನ್ನು ತರುತ್ತಿದ್ದೇವೆಂದು ಹೇಳಿದ್ದಾರೆ. ಆದರೆ ಈಗ ನಮ್ಮ ಎಲ್ಲಾ ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. ಮಾನ್ಯ ಗೃಹಸಚಿವರಾದ ಶ್ರೀ ವಿ.ಎಸ್. ಆಚಾರ್ಯರವರು ಈ ಬಗ್ಗೆ ಒಂದು ಮಾತನ್ನು ಹೇಳಿದರು. ನಮ್ಮ Election Manifesto ನಲ್ಲಿ ಇದೊಂದು ಹೇಳಿದ್ದೇವೆ. ಈಗ ಇವರು ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳು ಆಯಿತು. 2.00 ರೂಪಾಯಿಗೆ ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದ್ದೀರಿ, ಅದನ್ನು ಮಾಡಿದ್ದೀರಾ? ಯುವಕರಿಗೆ ನಿರುದ್ಯೋಗ ಭತ್ಯೆಯನ್ನು

ಕೊಡುತ್ತೇವೆಂದು ಹೇಳಿದ್ದೀರಿ, ಅದನ್ನು ಮಾಡಿದ್ದೀರಾ? ಆದರೆ ಇದು ಏನಾಗಿದೆ ಎಂದರೆ ಇಡೀ ರಾಜ್ಯದಲ್ಲಿ ಇವರು ಯಾವಾಗ ಈ ಬಿಲ್‌ನ್ನು introduce ಮಾಡುವುದಕ್ಕೆ ಹೊರಟಿದ್ದರೂ ಸುಮಾರು ಸಮುದಾಯಗಳು ಇವತ್ತು ಪ್ರತಿಭಟನೆಯನ್ನು ಮಾಡಿ ಈ ಬಿಲ್‌ನ್ನು ತರಬಾರದೆಂಬ ನಿಟ್ಟಿನಲ್ಲಿ ಇಡೀ ರಾಜ್ಯದಲ್ಲಿ ಇವತ್ತು strike ಆಗಿದೆ. ನಮ್ಮ ಬೀದರ್‌ನಲ್ಲಿ ದೊಡ ಪ್ರಮಾಣದಲ್ಲಿ ಆಯಿತು. ಅದಕ್ಕೆ ನಾವೆಲ್ಲರೂ ಹೋಗಿದ್ದೆವು. ಇವತ್ತು ಮುಖ್ಯವಾಗಿ ಏನಿದೆ ಎಂದರೆ, ಈಗ ಇವರು ಏನು ತಮ್ಮ agenda ಏನಿದೆ ಇದರಲ್ಲಿ ಅವರು ಹೇಳಿದ್ದಾರೆ. ಈಗ Prohibition of slaughter of the cattle ಎಂದು ಹೇಳಿದ್ದಾರೆ. ಹೌದು? ನಿಮ್ಮ hidden agenda ಏನಿದೆ, ಇದರಲ್ಲಿ ಹೇಳಿದ್ದೀರಿ. ಇವರು ಗೋಮಾತೆ ಎಲ್ಲರೂ ಅದಕ್ಕೆ respect ಕೊಡುತ್ತೇವೆ, ಪೂಜೆಯನ್ನು ಮಾಡುತ್ತೇವೆ. ಅದಕ್ಕೇನು ಇಲ್ಲ, ಇಷ್ಟು ಮಂದಿ ಇವತ್ತು ಜೋರಾಗಿ ಹೇಳುತ್ತಿದ್ದೀರಲ್ಲಾ, ಇವರು ಹೇಳಲಿ, ಇವರು ಇವತ್ತಿನ ತನಕ ಎಷ್ಟು ಮುದಿ ಆದಾಗ ಹೂಳಿ ಅದಕ್ಕೆ ಪೂಜೆಯನ್ನು ಮಾಡಿ ಅದಕ್ಕೆ ಸಂಸ್ಕಾರ ಮಾಡಿದ್ದಾರೆಂದು ಹೇಳಲಿ. ನೀವು ಅದನ್ನು ಮಾಡಿದ್ದೀರಾ? ತಾವು ಈ ಬಗ್ಗೆ ತಮ್ಮ ಎದೆಯ ಮೇಲೆ ಕೈಯನ್ನು ಇಟ್ಟುಕೊಂಡು ಹೇಳಿ. ಇವರು ಸುಮ್ಮನೆ ಮಾತನಾಡುತ್ತಾರೆ.

ಅಧ್ಯಕ್ಷರು : ನೀವು ಆ ಕಡೆಗೆ ಕೈಯನ್ನು ತೋರಿಸಬೇಡಿ. Please ನೀವು ಈ ಕಡೆಗೆ ನೋಡಿಕೊಂಡು ಮಾತನಾಡಿ. Please ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ : ಇವತ್ತು ಗೋಮಾತೆಯ ಬಗ್ಗೆ ಎಲ್ಲರಿಗೂ respect ಇದೆ ಅದು ನಮಗೂ ಸಹ ಇದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಊಟವನ್ನು ಕೊಟ್ಟರು. ಚಿಕ್ಕನ್ ಮಟನ್ ಎಲ್ಲವೂ ಅದರಲ್ಲಿ ಇರುತ್ತದೆ. ಅದಕ್ಕೇನು restriction ಇಲ್ಲ. ಅವರುಗಳು ಏನೇನು ತಿನ್ನುತ್ತಾರೆ ಅವರುಗಳು ಅದನ್ನು ತಿನ್ನುವುದಕ್ಕೆ ಬಿಡಿ. ಸುಮ್ಮನೆ ಏತಕ್ಕಾಗಿ ಪರೇಶಾನ್ ಆಗಲಿಕತ್ತೀರಿ. ಯಾರ್‍ಯಾರು ಯಾವುದಕ್ಕೆ respect ಕೊಡುತ್ತಾರೆಯೇ ಅದನ್ನು ಮಾಡಲಿ. ಇದರಿಂದ ಏನು ಹೇಳುತ್ತದೆ ಎಂದರೆ, ಇದು ತಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಇವತ್ತು ಸುಮಾರು 1 ರಿಂದ 2 ವರ್ಷದವರೆಗೆ ಹಿಡಿದು ಇದನ್ನು ನಾವು ನೋಡಿದ್ದೇವೆ. ಸುಮಾರು

ಏರಿಯಾದಲ್ಲಿ transport ಮಾಡುವಾಗ ನಮ್ಮ ಜಾತ್ರೆಯಿಂದ ಊರಿಗೆ ತೆಗೆದುಕೊಂಡು ಹೋಗುವಾಗ ಪೋಲೀಸ್‌ನವರು ಹಿಡಿದು ಅದಕ್ಕೆ hrassment ಮಾಡಿರುವುದನ್ನು ನಾವು ನೋಡಿದ್ದೇವೆ. ಈ Bill ಬಂದರೆ ಇದು ನಾಲ್ಕು ಪಟ್ಟು ಹೆಚ್ಚಿಗೆ ಆಗುತ್ತದೆ. ಇದರಲ್ಲಿ 25,000 ರಿಂದ 50,000 ದವರೆಗೆ ಎಂದು ಹೇಳಿದ್ದೀರಿ. 7 ವರ್ಷ ಸಜಾ ಎಂದು ಹೇಳಿದ್ದೀರಿ. ಇದನ್ನು ಮಾಡುವುದರಿಂದ ಬಹಳ ತೊಂದರೆಯಾಗುತ್ತದೆ. ತಮಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನಾನು ಗುಡಿಗೆ ಹೋಗಿದ್ದೆ, ಅಲ್ಲಿಗೆ ಒಬ್ಬ Assistant Commissioner ಬಂದು ನಮ್ಮ ಮೈಲಾರ ಎಂಬ ಒಂದು ಗುಡಿ ಇದೆ. ಇವರೆಲ್ಲರೂ ಸೇರಿ ಒಂದು ಗೂಳಿಯನ್ನು ಬಿಡುತ್ತಾರೆ. ಅವು ಈ ಸಾರಿ ಇಲ್ಲ, ಈ ಸಾರಿ ಯಾವುದಕ್ಕೂ ಕೊಡಬಾರದು ಎಂದು ಅಲ್ಲಿ ಏನು ಒಂದು ಮಠಕ್ಕೆ ಇದನ್ನು ವಹಿಸಿದ್ದಾರೆ. ಆ ಮಠದವರು ನನಗೆ ಪರಿಚಯ ಇದ್ದಾರೆ. ನೀವು ಇದನ್ನು ಏನು ಮಾಡುತ್ತೀರೆಂದು ನಾನು ಕೇಳಿದೆ. ನಾವು ಏನು ಮಾಡುವುದು ನಮಗೆ ಇದನ್ನು ಜಬರದಸ್ತಿಗೆ ಕೊಟ್ಟಿದ್ದಾರೆ. ಇದನ್ನು ಒಳ್ಳೆಯದು ಇದ್ದರೆ ಸಾಕುತ್ತಿದ್ದೇವೆ, ಸಾಕಿ ಮತ್ತೆ ಯಾರಾದರೂ ಬಂದರೆ ಅವರಿಗೆ ಅದನ್ನು ಕೊಡುತ್ತೇವೆ. 50% ನ್ನು ನಾವು ಗುಡಿಗೆ ಕೊಡುತ್ತೇವೆ. 50% ಹಣವನ್ನು ನಾವು use ಮಾಡಿಕೊಳ್ಳುತ್ತೇವೆ. ಅಲ್ಲಿ ಮತ್ತೇ ಅ ರೈತರು ತೆಗೆದುಕೊಂಡು ಹೋಗಿ ಅವರಿಗೆ ಸಹಾಯ ಆದರೆ ಇಟ್ಟುಕೊಳ್ಳುತ್ತಾರೆ, ಇಲ್ಲದೆ ಹೋದರೆ ಅವರು ಏನು ಮಾಡಬೇಕೋ ಅದನ್ನು ಮಾಡುತ್ತಾರೆ. ಈ Bill ನಲ್ಲಿ ಇವರುಗಳು ಏನು ಹೇಳಿದ್ದಾರಲ್ಲಾ, ನಿಮಗೆ ಇಷ್ಟು punishment ಆಗುತ್ತದೆ, ಮತ್ತು ಇದನ್ನು store ಮಾಡಿದರೆ, ಇದನ್ನು inspection ಮಾಡುವಂತಹ authority ಎಲ್ಲರಿಗೂ ಇದೆ ಎಂದು ಇವತ್ತು ಅದು fridge ನಲ್ಲಿದ್ದರೂ ಒಬ್ಬ Sub Inspector ಬಂದು ಅದನ್ನು seize ಮಾಡಬಹುದು. ಅದಕ್ಕಾಗಿ ನೀನು ಎಲ್ಲಿಂದ ತಂದೀರಿ, ಏಕೆ ತಂದಿರಿ, ಇದನ್ನು ತಂದು ದೊಡ್ಡ ಪಂಚನಾಮ ಮಾಡುವುದು ಇದೆಯಲ್ಲಾ ಅದಕ್ಕೆ ಒಂದು ಕೇಸ್ ಮಾಡ ಬಹುದು. ಇವತ್ತು ಇವರು ಏನು ಈ Bill ಅನ್ನು ತಂದಿದ್ದಾರೆ, ಇದು harassment ಹೆಚ್ಚಿಗೆ ಆಗುತ್ತದೆಯೇ ವಿನಃ ಇವತ್ತು ಹಳ್ಳಿ ಕಡೆಗಳಲ್ಲಿ ಬಡವರು ಇವರು ಸಾಕಾಣಿಕೆಗೆ ಒಳ್ಳೆಯ ರೀತಿಯಲ್ಲಿ ಮಾಡುತ್ತಾರೆ ಅವರು ಒಯ್ದು slaughter house ಗೆ ಕೊಡುವುದಿಲ್ಲ, ನಮ್ಮಲ್ಲಿ ಬಹಳ ದುಡಿದಿರುವ

ಎತ್ತುಗಳನ್ನು ಅಲ್ಲೇ ಹೂಳಿ ಸಂಸ್ಕಾರ ಮಾಡಿರುವುದನ್ನು ನಾವು ನೋಡಿದ್ದೇವೆ. ಆದರೆ ಇವತ್ತು ಬಡ ಜನ, ಇವತ್ತು ಅವರು ಹೇಳಿದ ಹಾಗೆ ಕಾಲು ಹೋಯಿತು, ಕೈ ಹೋಯಿತು ಅದಕ್ಕೆ ಏನು ಮಾಡಬೇಕು.

ಇವತ್ತು ಎಲ್ಲಾ ಪ್ರಾಣಿಗಳಿಗೆ ಒಂದು ಬೆಲೆಯನ್ನು ಕಟ್ಟಿ, ಇವತ್ತು ಆ ಬೆಲೆಯ ಮೇಲೆ ಟ್ರೀಟ್‌ಮೆಂಟ್ ಆಗುತ್ತದೆಯೇ ಏನಃ ಅದಕ್ಕೆ ದೊಡ್ಡ ರೀತಿಯಲ್ಲಿ ಇವತ್ತಿನವರೆಗೂ ಟ್ರೀಟ್‌ಮೆಂಟ್ ಎಲ್ಲಿಯೂ ಆಗಿಲ್ಲ. ಇವತ್ತು ನಾವು ಚೈನಾದಲ್ಲಿ ಹಾಗೂ ಬೇರೆ ಕಡೆಗಳಲ್ಲಿ ನೋಡುತ್ತಿದ್ದೇವೆ, ಹಾವು, ಚೇಳು ಹೀಗೆ ಎಲ್ಲಾ ರೀತಿಯ ಪ್ರಾಣಿಗಳನ್ನು ತಿನ್ನುತ್ತಾರೆ. ತಿನ್ನುವವರು ಏನೇನು ತಿನ್ನುತ್ತಾರೋ ಅವರಿಗೆ ತಿನ್ನುವುದಕ್ಕೆ ಬಿಡಿ. ಸುಮ್ಮನೆ ನೀವು ಬೇಜಾರು ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಯಾರ್‍ಯಾರು ಪೂಜೆ ಮಾಡುತ್ತಾರೆ, ಯಾರ್‍ಯಾರು ರಕ್ಷಣೆ ಕೊಡುತ್ತಾರೆ, ಹೀಗೆ ಅವರೂ ಮಾಡುತ್ತಾರೆ ನಾವೂ ಕೂಡ ಮಾಡುತ್ತೇವೆ. ಇನ್ನು ಒಂದು ವಿಷಯ ತಮಗೆ ಹೇಳಬೇಕಾದರೆ ಇವತ್ತು ಈ ಒಂದು ಬಿಲ್ ಅನ್ನು ಏನು ತಂದಿದ್ದಾರೆ, ಇದು ಕೇವಲ ಅಲ್ಪಸಂಖ್ಯಾತರಿಗೆ ಮಾತ್ರವಲ್ಲ, ಇವತ್ತು ಬಡವರಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ, ರೈತರಿಗೆ ತೊಂದರೆಯಾಗುತ್ತದೆ. ಅಲ್ಪಸಂಖ್ಯಾತರಿಗೇ ಎಂದು ಏನೂ ಇಲ್ಲ, ಇವತ್ತು ಅವರೇ business ಮಾಡುತ್ತಾರೆ. ಇದರಲ್ಲಿ ತಪ್ಪು ಏನೂ ಇಲ್ಲ. ಏಕೆಂದರೆ, ಇವತ್ತು ಯಾರ್‍ಯಾರೋ ಏನೇನೋ ಮಾಡುತ್ತಾ ಹೋಗುತ್ತಾರೆ. ಆದರೆ, ಈ ಒಂದು ಕಸುಬಿನಲ್ಲಿ ಸಾವಿರಾರು ಜನ ಭಾಗಿಯಾಗಿ ತಮ್ಮ ಜೀವನ ಮಾಡುತ್ತಿದ್ದಾರೆ. ಹಾಗಾಗಿ ಇದು ಹೊಸ ಪ್ರಯತ್ನವಾಗಿರುವುದರಿಂದ ಈ ಸರ್ಕಾರ ಮಾಡಬಾರದು. ಇನ್ನು ಮುಂದೆ ರಾಜ್ಯದ ಬಹಳಷ್ಟು ರೈತರಿಗೆ ಹಾಗೂ ಬಡವರಿಗೆ ಈ ಒಂದು ನಿಟ್ಟಿನಲ್ಲಿ ತೊಂದರೆಯಾಗುತ್ತದೆ, harassment ಗಳು ಬಹಳವಾಗುತ್ತದೆ. ಪೋಲೀಸ್ ನವರದಾಗಲಿ ಹಾಗೂ Assistant Commissioner ದಾಗಲಿ ಬಹಳಷ್ಟು harassment start ಆಗುತ್ತದೆ. ಅದಕ್ಕೆಲ್ಲಾ ಹೊಣೆಗಾರಿಕೆ ಇವರೇ ಆಗುತ್ತಾರೆ. ಮುಂದಿನ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಚಳುವಳಿ ಮಾಡುವುದಕ್ಕೆ ಜನರು ಪ್ರಾರಂಭ ಮಾಡುತ್ತಾರೆ. ದಯವಿಟ್ಟು ತಮ್ಮ ಮುಖಾಂತರ ನಾನು ಕೇಳಿಕೊಳ್ಳುವುದು ಏನೆಂದರೆ, ಈ ಸರ್ಕಾರ ಏನು ಈ ಬಿಲ್ ಅನ್ನು ತಂದಿರುವುದನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂಬ ನಿಟ್ಟಿನಲ್ಲಿ ನಾನು ಹೇಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) : ಮಾನ್ಯ ಅಧ್ಯಕ್ಷರೆ, ಬಿಜೆಪಿ ಪಕ್ಷದವರು ಚುನಾವಣೆಯಲ್ಲಿ ಏನು ಪ್ರಣಾಳಿಕೆಯನ್ನು ಮಾಡಿದ್ದರು, ನಮ್ಮ ಸಂಕಲ್ಪ, ನಿಮ್ಮ ಸಂಕಲ್ಪವೆಲ್ಲವನ್ನೂ ಜನತೆಗೆ ಮುಟ್ಟಿಸಬೇಕೆಂದು ಇದನ್ನು ತಂದಿದ್ದೇವೆ ಎಂದು ತಾವು ತಿಳಿಸಿದ್ದೀರಿ. ನನಗೆ ಆಶ್ಚರ್ಯವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಬಹಳ ಅನುಭವವಿದೆ, ಪ್ರಪಂಚದ ಅನೇಕ ಕಡೆಗಳಿಗೆ ಪ್ರವಾಸ ಮಾಡಿದ್ದಾರೆ ಹಾಗೂ Progressive Chief Minister ಎಂದು ಕರೆಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಈ ಸಂದರ್ಭದಲ್ಲಿ ಅಧಿಕಾರ ಎರಡು ವಿಚಾರಗಳಿಗೆ ಬರುತ್ತದೆ. Power for two things. 'You can make more friends, you can make more enemies' ಮಾನ್ಯ ಮುಖ್ಯಮಂತ್ರಿಗಳು ಏನು ಮಾಡುತ್ತಿದ್ದಾರೆ ಎಂದರೆ, ಈ ಅಧಿಕಾರದಿಂದ enemies ಅನ್ನು ಜಾಸ್ತಿ ಮಾಡಿಕೊಳ್ಳುತ್ತಿದ್ದಾರೆ. ಈ ಬಿಲ್ ಅನ್ನು ಏನು ತಂದಿದ್ದಾರೆ, ಒಂದು ಏನೆಂದರೆ, ಇದು ರೈತ ವಿರೋಧವಾದಂತಹ ಬಿಲ್, It is a anti-farmer Bill, ಇದು ಬಡವರ ವಿರುದ್ಧವಾದಂತಹ ಬಿಲ್, ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾದಂತಹ ಬಿಲ್, ಅಲ್ಪಸಂಖ್ಯಾತರಿಗೆ ವಿರುದ್ಧ ವಾದಂತಹ ಬಿಲ್, ಕೈಗಾರಿಕೆಗಳಿಗೆ ವಿರುದ್ಧವಾದಂತಹ ಬಿಲ್, ನಿರುದ್ಯೋಗ ಸಮಸ್ಯೆಗಳನ್ನು ಹೆಚ್ಚಿಸುವಂತಹ ಬಿಲ್, ಯುವಕರಿಗೆ ಕೂಡ ಅನೇಕ ಉದ್ಯೋಗ ಸಮಸ್ಯೆಯನ್ನು ಸೃಷ್ಟಿ ಮಾಡುವುದಕ್ಕೆ ಅವಕಾಶ ಇರುವಂತ ಹದ್ದನ್ನು ತಡೆಗಟ್ಟುವಂತಹ ಒಂದು ಬಿಲ್ ಹಾಗೂ ಇದರ ಜೊತೆಗೆ ಇದು ಒಂದು anti-global Bill. ನಮ್ಮ ಬೆಂಗಳೂರನ್ನು, ಕರ್ನಾಟಕ ರಾಜ್ಯವನ್ನು ಇಡೀ ವಿಶ್ವ ನೋಡುತ್ತಿದೆ. ನಮ್ಮ ಚಿಂತನೆ, ನಮ್ಮ ಆಚಾರ-ವಿಚಾರಗಳನ್ನು ಪ್ರತಿಯೊಂದು ಹಂತದಲ್ಲೂ ಕೂಡ ಪ್ರಪಂಚದಲ್ಲಿ ಬೆಂಗಳೂರು ಹಾಗೂ ಕರ್ನಾಟಕ ಇವತ್ತು World map ನಲ್ಲಿ ಇದೆ. ಇಂತಹ ಸಂದರ್ಭದಲ್ಲಿ ಇಂತಹ ಒಂದು ಸಣ್ಣ ವಿಚಾರದಲ್ಲಿ ಏನೋ ಚುನಾವಣೆಯಲ್ಲಿ ಒಂದು ಮಾತನ್ನು ಕೊಟ್ಟಿದ್ದೇವೆಂದು, ಇದೇ ರೀತಿ ಎಷ್ಟೋ ಮಾತುಗಳನ್ನು ಕೊಟ್ಟಿದ್ದಾರೆ? ನಾನು ಇದರ ಬಗ್ಗೆ details ಗೆ ಹೋಗುವುದಿಲ್ಲ. ನಮ್ಮ ಸ್ನೇಹಿತರು ಹೇಳುತ್ತಿದ್ದರು, ನಮ್ಮ ಉಪನಾಯಕರು ಈಗಾಗಲೇ ಬಹಳ ಸಾರವಾಗಿ ವಿವರಿಸಿದ್ದಾರೆ ಮತ್ತು ರೋಷನ್‌ಬೇಗ್ ರವರು ಈಗಾಗಲೇ ಈ ಬಗ್ಗೆ ಮಾತನಾಡಿದ್ದಾರೆ. ಕೊಟ್ಟ ಮಾತನ್ನು ಎರಡು ವರ್ಷಗಳಲ್ಲಿ ಸಾಧನೆ ಮಾಡುವುದಕ್ಕೆ ಆಯಿತೇ? ಎರಡು ರೂಪಾಯಿಗಳಿಗೆ ಅಕ್ಕಿ ಕೊಡುತ್ತೇವೆಂದು

ಹೇಳಿದ್ದನ್ನು ಈಗ ತಾನೇ ಯಾರೋ ನೆನಪಿಸಿದರು. Central Government ನಿಮಗೆ ಬೇಕಾದಷ್ಟು ಸಬ್ಸಿಡಿ ಹೆಚ್ಚಿಸಿದರೂ ಕೂಡ, ಒಂದು ಕೆ.ಜಿ.ಗೆ ಮೂರು ರೂಪಾಯಿಗಳಂತೆ 25 ಕೆ.ಜಿ. ಕೊಡುತ್ತೇವೆ ಎಂದು ಮಾಡಿದರೂ ಕೂಡ, ನೀವು ಎರಡು ರೂಪಾಯಿಗೆ ಅಕ್ಕಿಯನ್ನು ಕೊಡುತ್ತೇವೆ ಎಂದು ಹೇಳಿರುವ ಮಾತನ್ನು ಉಳಿಸಿಕೊಳ್ಳುವುದಕ್ಕೆ ಆಗಲಿಲ್ಲ. ಪ್ರತಿ ಹಳ್ಳಿಗೂ ಸಹ ಸೈಬರ್ ಕೆಫೆ, ನಿರುದ್ಯೋಗ ಭತ್ಯೆಯಾಗಿ 1,500 ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿರುವುದು, ಗ್ರಾಮೀಣ ಪ್ರದೇಶಗಳಲ್ಲಿ Separate ಆಗಿ ಪವರ್ ಗ್ರಿಡ್ ಮಾಡುತ್ತೇವೆ ಎಂದು ಹೇಳಿರುವುದು ಹಾಗೂ ಇಡೀ ರಾಜ್ಯದಲ್ಲಿ ಒಂದು separate water master plan ಮಾಡುತ್ತೇವೆ ಎಂದು ಹೇಳಿರುವುದು, ಹೀಗೆ ಅನೇಕ ವಿಚಾರಗಳನ್ನು ತಾವು ತಮ್ಮ ಮಾತುಗಳಲ್ಲಿ, ತಮ್ಮ ಸಂಕಲ್ಪದಲ್ಲಿ ತಿಳಿಸಿದ್ದೀರಿ. ಎಂತಹ political party ಗಳಿಗೂ ಸಹ ತಾವು ಏನನ್ನು ಮಾತನಾಡುತ್ತೇವೆ ಅದನ್ನು ಉಳಿಸಿಕೊಳ್ಳಬೇಕೆಂಬುದು ಇರುತ್ತದೆ ಅದು ನಿಜ. ಈಗ Corporation Election ನಡೆಯುತ್ತಿದೆ, ಇಲಿ ಏನಿದೆ ಎಂದರೆ 'ಜನರಿಂದ ನೇರವಾಗಿ ಆಯ್ಕೆಗೊಂಡಂತಹ ಮೇಯರ್' ನೀವು ವಚನಭ್ರಷ್ಟ ರಾಗಲಿಲ್ಲವೇ? ಎಲ್ಲಿದೆ ಚುನಾವಣೆಯಲ್ಲಿ ನೇರವಾಗಿ ಮೇಯರ್ ಆಯ್ಕೆ ಮಾಡುವುದು? ಈಗಾಗಲೇ election ನಡೆಯುತ್ತಿದೆ. ತಾವು ಕೂಡ ವಚನ ಭ್ರಷ್ಟರಾದರಲ್ಲವೇ? ತಮ್ಮ ಸಂಕಲ್ಪ ಏನಾಯಿತು? ನಮ್ಮ ರಾಜ್ಯದ ಜನತೆಗೆ ಏನು ಆಶ್ವಾಸನೆಯನ್ನು ಕೊಟ್ಟಿದ್ದೀರಿ ಆ ವಿಚಾರವನ್ನು ಮಾತ್ರ ನಾನು ತಿಳಿಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಚರ್ಚೆಗೆ ಅವಕಾಶ ಕೊಡದೇ, ಈಗ ಮಧ್ಯದಲ್ಲಿ ನಿಂತುಕೊಂಡು, ನಿಜ, ಇದು ರೈತರಿಗೆ ಬಹಳ ತೊಂದರೆಯಾಗುತ್ತದೆ, ಸಾಮಾನ್ಯ ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳಿದರು. ನಿನ್ನೆ ತಾನೇ ನಮ್ಮ ಮನೆಯಲ್ಲಿ ವರ್ಷದ ತೊಡಕು ಮಾಡಿದ್ದರು, ನಿಮ್ಮ ಮನೆಗಳಲ್ಲೆಲ್ಲಾ ಮಾಡಿರಬೇಕು, ಮಟನ್‌ರೇಟ್ ಎಷ್ಟು ಇದೆ ಎಂದು ನಾನು ನನ್ನ ಹೆಂಡತಿಯನ್ನು ಕೇಳಿದೆ, 270–300 ರೂಪಾಯಿಗಳು ಆಗಿದೆ ಎಂದು ಅವಳು ಹೇಳಿದಳು. ಬಹುಶಃ ನೀವು ಆ ಬಿಲ್ ಅನ್ನು ನಿಲ್ಲಿಸದೇ ಇದ್ದರೆ ಒಂದು ಕೆ.ಜಿ. ಮಟನ್‌ಗೆ ಒಂದು ಸಾವಿರ ರೂಪಾಯಿಗಳು ಆಗುತ್ತದೆ. ಏಕೆಂದರೆ, ಇವತ್ತು 25 ಸಾವಿರ ಟನ್ ದನದ ಮಾಂಸ ಇಲ್ಲಿಂದ ಹೊರಗಡೆಗೆ ಹೋಗುತ್ತದೆ, ಇವತ್ತು ಏನು ಇಲ್ಲಿ consumption ಆಗುತ್ತಿದೆ, 1,700 ಟನ್ ಇಡೀ ರಾಜ್ಯದಲ್ಲಿ, ಇಡೀ ದೇಶದಲ್ಲಿ ಏನು ಆಗುತ್ತಿದೆ,

(ಗೊಂದಲ) ಒಂದು ನಿಮಿಷ ಇರ್ರಿ. ನೀನು ಒಬ್ಬ ರೈತ. ನಾವು ಸಹ ಪೂಜೆ ಮಾಡುತ್ತಿದ್ದೇವೆ. ಇವತ್ತು ಮೀನಿನ ಬೆಲೆ ಏನಾಗುತ್ತಿದೆ, ಒಂದು ಕೆ.ಜಿ.ಗೆ 125 ರಿಂದ 300 ರೂಪಾಯಿಗಳು ಮೀನಿನ ಎಲೆ ಇದೆ. ಚಿಕನ್ ಬೆಲೆ ಈಗಾಗಲೇ 150 ರೂಪಾಯಿಗಳಿಗೆ ಹೋಗಿದೆ. ಬಡವರಿಗೆ ಇದು ಸಾಮಾನ್ಯವಾಗಿ 65 ರಿಂದ 75 ಇದೆ. ಮಾನ್ಯ ಅಧ್ಯಕ್ಷರೆ, ನಾವು ಸಾರಾಯಿ ಮಾರಾಟವನ್ನು ನಿಲ್ಲಿಸಿದೆವು. 10–12 ರೂಪಾಯಿಗಳಿಗೆ ಸಾರಾಯಿ ಸಿಗುತ್ತಿತ್ತು. ಅದನ್ನು ನಿಲ್ಲಿಸಿದ ತಕ್ಷಣ ಈಗ ಬಾಟಲ್‌ಗಳಲ್ಲಿ ಕುಡಿಯಬೇಕು. ಒಂದು ಕ್ವಾರ್ಟರ್‌ಗೆ 50 ರೂಪಾಯಿಗಳು ಇಲ್ಲದೇ ಆಗುತ್ತದೆಯೇ? ಕುಡಿಯುವುದನ್ನು ಯಾರಾದರೂ ನಿಲ್ಲಿಸಿದ್ದಾರೆಯೇ? ನಿಜ ನಾವು ಹಸುವನ್ನು ಪೂಜೆ ಮಾಡುತ್ತೇವೆ, ನಮ್ಮ ಧರ್ಮವನ್ನು ಉಳಿಸಿಕೊಳ್ಳಬೇಕೆಂದು ನಮ್ಮದೇ ಆದ ರೀತಿಯಲ್ಲಿ ಮಾಡುತ್ತೇವೆ. ಗಣೇಶನಿಗೆ ಪೂಜೆ ಮಾಡುವಾಗ ಗರಿಕೆ ಇಟ್ಟುಬಿಟ್ಟು ಹುಲ್ಲನ್ನು ಹಾಕಿದ ತಕ್ಷಣ ಅದನ್ನು ಗಣೇಶ ಎಂದು ಪೂಜೆ ಮಾಡುತ್ತೇವೆ. ಇದು ನಮ್ಮ ಭಾವನೆ. ಏಕೆಂದರೆ, ನಾವು ಯಾವ ರೀತಿ ಕಾಣುತ್ತೇವೆ ಅದರ ಮೇಲೆ ಇರುತ್ತದೆ. ಈಗ ನೀವು ನಿಷೇಧ ಮಾಡಬೇಕೆಂದರೆ, ನಾವು ಹಂದಿಯನ್ನು ಸಹ ಪೂಜೆ ಮಾಡುತ್ತೇವೆ, ನಮ್ಮ ಧರ್ಮದಲ್ಲಿ ಒಂದು ರೀತಿಯಲ್ಲಿ ನರಸಿಂಹನ ದೃಷ್ಟಿಯಲ್ಲಿ ನೋಡುತ್ತೇವೆ, ಹಂದಿಯನ್ನು ಕೂಡ ನಮ್ಮ ಧರ್ಮದಲ್ಲಿ ದೇವರು ಎನ್ನುವ ದೃಷ್ಟಿಯಿಂದ ಪೂಜೆ ಮಾಡುತ್ತೇವೆ. ಅದಕ್ಕೆ ಏಕೆ ಬಿಲ್ ಮಾಡಿಲ್ಲ? ಕೋಳಿ ಎಂದರೆ ನಮಗೆ ಇಷ್ಟವಿದೆ, ನಾವು ಕೋಳಿಯನ್ನು ಪೂಜೆ ಮಾಡುತ್ತೇವೆ, ನವಿಲನ್ನು ಪೂಜೆ ಮಾಡುತ್ತೇವೆ, ವಿವಿಧ ರೀತಿಯಲ್ಲಿ ದೇವರ ವಾಹನವೆಂದು ಹೇಳುತ್ತೇವೆ, ಈಗ ಬಿಲ್ ಅನ್ನು ನೀವು ಏನು ಮಾಡಿದ್ದೀರಲ್ಲಾ ಇದರಲ್ಲಿ ರಾಜಕಾರಣ ಮುಖ್ಯವಲ್ಲ, ರಾಜಕಾರಣ permanent ಅಲ್ಲ, ಇಲ್ಲಿ ಸಾಮಾಜಿಕವಾಗಿ ಎಲ್ಲಾ ವರ್ಗದ ಜನರೂ ಸಹ ನಿಮ್ಮ ಪಕ್ಷದಲ್ಲಿ ಆಯ್ಕೆಯಾಗಿದ್ದಾರೆ, ಇದನ್ನು ತಿನ್ನುವವರು, ತಿನ್ನದೇ ಇರುವವರು ಎಲ್ಲರೂ ಇರಬಹುದು, ಅದರೆ ಮಾಂಸದ ಬೆಲೆ 200–300 ರೂಪಾಯಿಗಳಾಗಿದೆಯಲ್ಲಾ ಇದಕ್ಕೆ ಕಾರಣ ಯಾರು? ಯಾರ್ಯಾರು ತಿನ್ನದೇ ಇರುವವರು ಇರುತ್ತಾರೋ ಅವರು ತಿನ್ನುವುದನ್ನು ಕಲಿತು ಇವತ್ತು ಈ ಮಟ್ಟಕ್ಕೆ ಬೆಲೆ ಹೋಗಿದೆಯೇ ಹೊರತು ಇಲ್ಲದಿದ್ದರೆ ಇಷ್ಟು ಬೆಲೆ ಆಗುವುದಕ್ಕೆ ಸಾಧ್ಯವೇ ಇರುತ್ತಿರಲಿಲ್ಲ. ಮೊದಲಿನಿಂದಲೂ ತಿನ್ನದೇ ಇರುವಂತಹವರು ಅಂದರೆ ಅವರು ಯಾವ ಸಮಾಜದವರು ಎಂದು ನಾನು ಹೇಳುವುದಿಲ್ಲ, ಏಕೆಂದರೆ ನೋವಾಗುತ್ತದೆ,

ಅವರು ಕರೆಕ್ಟ್ ಆಗಿ ಕಂಟ್ರೋಲ್ ಆಗಿ ತಿಂದಿದ್ದರೆ ಈ ಸಮಸ್ಯೆಯಾ ಗುತ್ತಿರಲಿಲ್ಲ. ನಾನು ಒಬ್ಬ ರೈತ. ಸಂತೋಷವಾಗಿ ತಿನ್ನಿ ಸ್ವಾಮಿ.

(ಗೊಂದಲ)

ಶ್ರೀ ಎಸ್. ಶಿವಣ್ಣ : ಆ ಮಹಾನುಭಾವ ಏನೂ ಹೇಳಲಿಲ್ಲ. ನೀವು ಏಕೆ ಇದನ್ನು ಹೇಳುತ್ತಿದ್ದೀರಿ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಶಿವಣ್ಣನವರೇ ನಿಮಗೆ ಪ್ರಾಮಾಣಿಕತೆ ಇದ್ದಿದ್ದರೆ ನೀನು ನಮ್ಮ ಜೊತೆ ಪಾರ್ಟಿಯಲ್ಲಿ ಇರುತ್ತಿದ್ದೆ. ನೀನು ಉಪ್ಪು ತಿನ್ನದೇ ಕೈ ಎತ್ತುವುದಿಲ್ಲ. ಅದು ನನಗೆ ಗೊತ್ತಿದೆ.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ : ಇಷ್ಟೆಲ್ಲ ಮಾತನಾಡಿ ಕಸರತ್ತು ಮಾಡುತ್ತಿರುವುದು vote ಗೋಸ್ಕರ ತಾನೇ? ನೀವು ಇಷ್ಟೆಲ್ಲಾ ಹೇಳುತ್ತಿರುವುದು?

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ಬೆಲೆ ಬಗ್ಗೆ ಹೇಳುವುದು, ಇನ್ನೊಂದು ಇಲ್ಲಿ ಏನಾಗಿದೆ ಎಂದರೆ, ಒಂದು ಕಡೆ leather industry ಗೆ ದೊಡ್ಡ major effect ಆಗುತ್ತದೆ. Leather industry ಯಾರ್‍ಯಾರು ನಡೆಸುತ್ತಿದ್ದಾರೆ? Shoes ಬೆಲೆ 500-600-700 ರೂಪಾಯಿ ಗಳಿಗೆ ಸಿಗುತ್ತಿದೆ. ಮುಂದಕ್ಕೆ 3,000 ರಿಂದ 4,000 ರೂಪಾಯಿಗಳು ಆಗುತ್ತದೆ. Shoes ಅನ್ನು ಹೊರಗಡೆಯಿಂದ ತರಬೇಕಾಗುತ್ತದೆ. ಹೊರಗಡೆ ಯಿಂದ ಚರ್ಮವನ್ನು export ಮಾಡಿಕೊಳ್ಳಬೇಕಾಗುತ್ತದೆ. ಏನು ನಮ್ಮಲ್ಲಿ industry ಗಳಿವೆ ಅವೆಲ್ಲಾ ಇವತ್ತು Complete ಆಗಿ ನಿಂತು ಹೋಗುತ್ತವೆ. ಚರ್ಬಿಯಿಂದ ಸೋಪ್ ಮಾಡುವುದು, ಒಂದು ಕಡೆ ಇದರ ಕೊಬ್ಬನ್ನು ಪಾಲೀಶ್ ಮಾಡುವುದಕ್ಕೋಸ್ಕರ textile industries ನಲ್ಲಿ ಶೈನಿಂಗ್ ಗೋಸ್ಕರ ಉಪಯೋಗಿಸಲಾಗುತ್ತದೆ, ಹೀಗೆ ವಿವಿಧ ರೀತಿಗಳಲ್ಲಿ ಉಪಯೋಗಿ ಸುತ್ತಾರೆ. ನಮ್ಮ ಡಾಕ್ಟರ್‌ಗೆ ಗೊತ್ತಿದೆ, tablet capsules ಅನ್ನು ಇದರ raw-materials ನಿಂದ ಮಾಡಲಾಗುತ್ತದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಬಹಳ ಜನ ಮಾತ್ರೆಗಳನ್ನು ನುಂಗುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಇದು ಸತ್ಯಾಂಶ ಸ್ವಾಮಿ. ಹಿಂದೆ Sugar Minister ಆಗಿದ್ದ ನಮ್ಮ ಮಾನ್ಯ ಉಮೇಶ್ ಕತ್ತಿಯವರನ್ನು ನಾನು ಹೋಗಿ ಕೇಳಿದೆ. ಸಕ್ಕರೆ ಮಾಡಬೇಕಾದರೆ ಶೈನಿಂಗ್ ಬರುತ್ತದೆ ಅದು ಶೈನಿಂಗ್ ಬರಬೇಕಾದರೆ ಇದರ ಮೂಳೆಯನ್ನು ಟ್ರೀಟ್‌ಮೆಂಟ್ ಮಾಡಿ, ಅದಕ್ಕೆ Charcoal ಎಂದು ಕರೆಯುತ್ತಾರೆ, ಅದನ್ನು ಹಾಕಿದರೆ ಸಕ್ಕರೆಗೆ ಶೈನಿಂಗ್ ಬರುತ್ತದೆ. ಇವೆಲ್ಲಾ ಪರಿಸ್ಥಿತಿ ಇದೆ. ನೀವೆಲ್ಲಾ ಬೆಲ್ಲವನ್ನು ಉಪಯೋಗಿ ಸುತ್ತೀರಾ? ಹೀಗೆ ಪ್ರತಿ ಹಂತದಲ್ಲೂ ನಿಮಗೆ ಗೊತ್ತಿಲ್ಲ. ಇದು ವಿವಿಧ ರೀತಿಯಲ್ಲಿ ಇಂತಹ ಸಂದರ್ಭಗಳಲ್ಲಿ ಉಪಯೋಗಕ್ಕೆ ಬರುತ್ತದೆ. ಈ bonesಗೆ ಸಂಬಂಧಪಟ್ಟಂತೆ ಒಂದು ದೊಡ್ಡ industry ಇದೆ. Bone nill flant ಇದೆ.

(5-30 PM)

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಕುಮಾರ್ ಅವರು ನೀವು ಸಕ್ಕರೆಗೆ ಎಲುವನ್ನು ಉಪಯೋಗ ಮಾಡುತ್ತೀರಾ ಎಂದು ಕೇಳಿದರು. ನಾವು ಅವುಗಳನ್ನೆಲ್ಲಾ ಉಪಯೋಗ ಮಾಡುವುದಿಲ್ಲ, ನಾವು sulphur ಮತ್ತು lime ಅನ್ನು ಉಪಯೋಗ ಮಾಡುತ್ತೇವೆಂದು ಹೇಳಿದೆ. ಉಮೇಶ್ ಕತ್ತಿ ಅವರು ಹೇಳಿದರು ಎಂದು ಮತ್ತೆ ಮತ್ತೆ ಹೇಳಿದರೆ ಹೇಗೆ? ನಾವು ಯಾವುದೇ ಎಲುಬಿನ powder ಅನ್ನು ಸಕ್ಕರೆಗೆ ಉಪಯೋ ಗಿಸುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ನಿಮ್ಮ factory ಯಲ್ಲಿ ಉಪಯೋಗಿಸದೇ ಇರಬಹುದು. ಕೆಲವು ಕಡೆ ಉಪಯೋಗಿಸುತ್ತಾರಲ್ಲವೇ?

ಶ್ರೀ ಉಮೇಶ್ ವಿ. ಕತ್ತಿ : Generally ಯಾರು ಉಪೋಗಿಸುವುದಿಲ್ಲ. Sulphur and lime ಅನ್ನು ಉಪಯೋಗಿಸುತ್ತೇವೆ. ಎಲುಬಿನ Powder ಅನ್ನೇ ಅದಕ್ಕೆ ಉಪಯೋಗ ಮಾಡುವುದಿಲ್ಲ. ಹೀಗೆ ಹೇಳಿದರೆ ಜನ ಸಕ್ಕರೆ ತಿನ್ನುವುದನ್ನು ಬಿಟ್ಟುಬಿಡುತ್ತಾರೆ. ಸಕ್ಕರೆ ಉಪಯೋಗಿಸುವ ಜನರಿಗೆ ತೊಂದರೆ ಮಾಡುವುದು ಬೇಡ.

ಶ್ರೀ ಡಿ.ಕೆ. ಶಿವಕುಮಾರ್ : Photo Film Industry ಗೂ ಕೂಡ ಇದರಲ್ಲಿರುವಂಥ raw material ಅನ್ನು ಉಪಯೋಗಿಸುತ್ತಾರೆ. Ice-cream ಗೆ Jelly ಇದೆಯಲ್ಲಾ... .

ಶ್ರೀ ಆರ್.ಅಶೋಕ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಕುಮಾರ್ ಅವರು ಮಾತನಾಡುತ್ತಿರುವುದನ್ನು ನೋಡಿದರೆ, ನಾಳೆ ಬೆಳಗ್ಗೆ ಯಾರೂ ಏನೂ ತಿನ್ನುವುದಕ್ಕೇ ಆಗುವುದಿಲ್ಲ. ಇವರ ಪ್ರಕಾರ ಮಾತ್ರೆಯನ್ನೂ ನುಂಗುವ ಹಾಗಿಲ್ಲ, Ice-cream ಅನ್ನೂ ಇನ್ನುವ ಹಾಗಿಲ್ಲ, ಸಕ್ಕರೆಯೂ ತಿನ್ನುವ ಹಾಗಿಲ್ಲ. ಇವರನ್ನು ಹೀಗೆ ಮಾತನಾಡುವುದಕ್ಕೆ ಬಿಟ್ಟರೆ. . .

ಶ್ರೀ ಟಿ.ಬಿ. ಜಯಚಂದ್ರ : ನಾವು ಏಕೆ ವಿರೋಧ ಮಾಡುತ್ತಿದ್ದೇವೆ ಎನ್ನುವುದು ಗೊತ್ತಾಯಿತೇ?

ಶ್ರೀ ಆರ್. ಅಶೋಕ್ : ಮಾನ್ಯ ಜಯಚಂದ್ರವರೆ ಎಷ್ಟೋ ಮೇಲು, ನೀವಾದರೂ ಬಹಳ ಚೆನ್ನಾಗಿ ಮಾತನಾಡಿದಿರಿ. ಇವರನ್ನು ಹೀಗೆ ಬಿಟ್ಟರೆ ಬೆಳಗ್ಗೆ ಯಾರೂ ಏನೂ ತಿನ್ನುವುದಕ್ಕೆ ಹೋಗುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಈ ಎಲ್ಲಾ industry ಯಿಂದ ಎಷ್ಟು ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡಬೇಕೆಂದು ನಿಮಗೆ ಇಷ್ಟ ಇದೆ? ಆಯಿತು ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ ಬಿಡಿ. ನಿಮ್ಮ ಸಮಾಧಾನಕ್ಕೆ ಸಕ್ಕರೆಯೂ ಇಲ್ಲ, ಮಾತ್ರೆಯೂ ಇಲ್ಲ. ಆಯಿತು ಬಿಡಿ. ಇವತ್ತು ಲಕ್ಷಾಂತರ ಜನರಿಗೆ ನಿರುದ್ಯೋಗ ಸಮಸ್ಯೆಯನ್ನು ಹೆಚ್ಚಿಸಲಿಕ್ಕೆ ತಾವು ಪ್ರಯತ್ನವನ್ನು ಮಾಡುತ್ತಿದ್ದೀರಿ.

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ : ಮಾನ್ಯ ಶಿವಕುಮಾರ್‌ರವರ R & D ಜಾಸ್ತಿ ಆಗಿದೆ.

ಶ್ರೀ ಡಿ.ಕೆ. ಶಿವಕುಮಾರ್ : ಏನು ಮಾಡುತ್ತೀರಾ ಸ್ವಾಮಿ, ತಾವು ಬಂದಿದ್ದೀರಿ, ತಮ್ಮನ್ನು ಏನಾದರೂ ಮಾಡಿ ನಾವು ಇಳಿಸಬೇಕು, ನಿಮ್ಮನ್ನು ರೈತರ ವಿರೋಧಿ ಎನ್ನಬೇಕು, ಜನರ ವಿರೋಧಿ ಎನ್ನಬೇಕು, ಬಡವರ ವಿರೋಧಿ ಎನ್ನಬೇಕು.

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ : ನಿಮ್ಮ R & D ಯಿಂದ ಸಾಧ್ಯವಾಗುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಏನು ಮಾಡುವುದು? ಮಾಡುವ ಪ್ರಯತ್ನ ಮಾಡಲೇಬೇಕಲ್ಲ.

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ : ಮಾನ್ಯ ಶಿವಕುಮಾರ್ ಅವರ R & D ಯಿಂದ ನಮಗೆ ಸಹಾಯವಾಗುವುದಿಲ್ಲ ಎನ್ನುವ ವಿಶ್ವಾಸ ನಮಗಿದೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ತಾವೂ ಕೂಡ ಹಳ್ಳಿಯಲ್ಲಿದ್ದೀರಿ, ರೈತರು ಗೋವುಗಳನ್ನೆಲ್ಲಾ ಮಾರಿಕೊಳ್ಳುತ್ತಾರೆ. ವ್ಯವಸಾಯಕ್ಕೆ ಉಪಯೋಗವಾಗುವುದಿಲ್ಲ, ಗಂಡು ಕರು ಹುಟ್ಟಿತು ಎಂದು ತಕ್ಷಣ ಮಾರಿಕೊಳ್ಳುತ್ತಾರೆ. ಏನು ಸರ್ಕಾರದವರು purchase ಮಾಡುತ್ತಾರೆಯೇ? ಅದಕ್ಕೆ ಹಣ ಕೊಡುತ್ತಾರೆಯೇ? Yes, if they are interested, ಸರ್ಕಾರವು ಒಂದು ಹಸುವಿಗೆ ಇಂತಿಷ್ಟು ವರ್ಷವಾದ ಮೇಲೆ ಇಂತಿಷ್ಟು ಹಣವನ್ನು ಕೊಟ್ಟು purchase ಮಾಡುತ್ತೇವೆಂದು ಹೇಳುತ್ತದೆಯೇ? ಬೇರೆಯವರು, ಈಗ ಬೇಕಾದಷ್ಟು ಸಂಘಗಳಾಗಿವೆ ಅವರು Purchase ಮಾಡುತ್ತಾರೆಯೇ? ನೀವು ರಾಜ್ಯದಲ್ಲಿ ಎಷ್ಟು ಸಾವಿರ, ಎಷ್ಟು ಲಕ್ಷ ಶೇಖರಣೆ ಮಾಡಬೇಕೆಂದು ಯೋಚನೆ ಮಾಡಿದ್ದೀರಾ? ಯಾವುದೋ ಒಂದು Association ಗೆ ಕೊಟ್ಟು ಅವರ ಕೈಯಲ್ಲಿ maintain ಮಾಡುತ್ತೇನೆಂದರೆ ಹೇಗೆ? ಕೆಲವು 2–3 ಮಠಗಳಿವೆ ಅದರ ಹೆಸರನ್ನು ಹೇಳುವುದು ಬೇಡ. ನಾನು ಅಲ್ಲಿ ಹೋಗಿ ನೋಡಿದ್ದೇನೆ, ಫೋಟೋಗ್ರಾಫ್ಸ್‌ನ್ನೆಲ್ಲಾ ತರಿಸಿದ್ದೇನೆ, ತಮಗೆ ಬೇಕಾದರೆ ಕೊಡುತ್ತೇನೆ. ಪಾಪ ವಯಸ್ಸಾಗುತ್ತಿದೆ, ಅವುಗಳಿಗೆ ಊಟವನ್ನೇ ಹಾಕುತ್ತಿಲ್ಲ, ಮೇವು ಹಾಕುತ್ತಿಲ್ಲ. ಒಬ್ಬ ಮನುಷ್ಯನನ್ನು maintain ಮಾಡುವುದಕ್ಕೆ ಎಷ್ಟು ಕಷ್ಟವಿದೆಯೋ ಅದೇ ರೀತಿ ಪ್ರತಿಯೊಂದು 150–160 ಕೆ.ಜಿ ಬೆಳೆದಂಥ ದೊಡ್ಡ ದೊಡ್ಡ ಪ್ರಾಣಿಗಳನ್ನು maintain ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಯಾವುದೇ ಮಠಕ್ಕೆ ಕೂಡ ಸಾಕುವುದಕ್ಕೆ ಆಗುವುದಿಲ್ಲ. ಬಿಲ್‌ನಲ್ಲಿ Establishment of institutions for taking care of cattle ಎಂದು ಇದೆ. ಅದರಲ್ಲಿ "The State Government may establish, or direct any local authority or permit a society registered under the Karnataka Societies Registrations Act, 1960, or any association or organization to establish institutions at such places as may be deemed necessary for taking care of the cattle to be sent thereto" ಇದು ಎಲ್ಲಾದರೂ ಸಾಧ್ಯವೇ ಸ್ವಾಮಿ? ಇರುವ ಜನರನ್ನೇ ನಾವು ಸರಿಯಾಗಿ ನೋಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ಇರುವ basic problem ಅನ್ನೇ solve ಮಾಡುವುದಕ್ಕೆ ಆಗುತ್ತಿಲ್ಲ. ಎಷ್ಟೋ ಸಮಸ್ಯೆಗಳನ್ನು ನೀವು ಹೆಚ್ಚಿಸಿ ಕೊಂಡು ಹೋಗುತ್ತಿದ್ದೀರಿ. ಯಾರು ಅದನ್ನು ನೋಡಿಕೊಳ್ಳುತ್ತಾರೆ? ನೋಡಿ

ಕೊಳ್ಳಲು ಯಾರು ಮುಂದಕ್ಕೆ ಬರುತ್ತಾರೆ? ಇದು practical ಆಗಿ ಸಾಧ್ಯವೇ ಇಲ್ಲ. ಅನೇಕ ಸಮಸ್ಯೆಗಳು ಉಲ್ಬಣವಾಗುತ್ತದೆ. ಇದರಿಂದ ಏನಾಗುತ್ತದೆ ಎಂದರೆ, Corruption and harassment ಹೆಚ್ಚಾಗುತ್ತದೆ. ತಹಶೀಲ್ದಾರರು ಮತ್ತು ಸಬ್‌ಇನ್ಸ್‌ಪೆಕ್ಟರ್‌ಗಳಿಗೆ ಹಬ್ಬನೋ ಹಬ್ಬ. ಸ್ವಾಮಿ ಕುಡಿಯುವವರನ್ನು ನೀವು ಎಲ್ಲಾದರೂ ನಿಲ್ಲಿಸುವುದಕ್ಕೆ ಆಗುತ್ತದೆಯೇ? ಈಗ ಒಂದೆರಡು ವರ್ಷಗಳಿಂದ ಕಡಿಮೆಯಾಗಿದೆ, 60–70 ವರ್ಷಗಳಿಂದ ಎಷ್ಟೇ ಆದರೂ ಕೂಡ ನಮ್ಮ ಹಳ್ಳಿಗಳ ಕಡೆ, ನಿಮ್ಮ ಹಳ್ಳಿಗಳ ಕಡೆಯಲ್ಲಿಯೂ ಇವತ್ತಿಗೂ ಶಿಕಾರಿಗಳು ನಡೆಯುತ್ತಿವೆ, ಬಂದೂಕಗಳನ್ನು ಎತ್ತಿಕೊಂಡು ಹೋಗುತ್ತಲೇ ಇದ್ದಾರೆ, ಕಾಡು ಹಂದಿಯನ್ನು ಹೊಡೆಯುತ್ತಲೇ ಇದ್ದಾರೆ.

ಅಧ್ಯಕ್ಷರು : ನೇರವಾಗಿ ನಮ್ಮನ್ನೇ ಅಪರಾಧಿಗಳನ್ನಾಗಿ ಮಾಡುವುದೇ?

ಶ್ರೀ ಡಿ.ಕೆ. ಶಿವಕುಮಾರ್ : ಬೇಕಾದಷ್ಟನ್ನು ನೋಡುತ್ತಿದ್ದೀರಿ. ಈಗ ಎಲ್ಲೋ ಸ್ವಲ್ಪ ಕಡಿಮೆಯಾಗಿದೆ. ನೀವು ಇದನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಒಂದು ದೊಡ್ಡ ಸೆಕೆಂಡ್ಸ್, ಎಲ್ಲಿಯವರೆಗೂ ಸೆಕೆಂಡ್ಸ್? ಇಷ್ಟೆಲ್ಲಾ ಕಾನೂನು ಮಾಡಿದ್ದು ಆಯಿತು, ಸೆಕೆಂಡ್ಸ್ ಎಷ್ಟು ನಿಲ್ಲಿಸಿದ್ದೇವೆ? ಹೊರಗಡೆ ದೇಶದಿಂದ ಇವತ್ತು ಸೆಕೆಂಡ್ಸ್ ಬರುತ್ತಿದೆ. ಇಲ್ಲೂ ಕೂಡ ನಡೆಯುತ್ತಲೇ ಇದೆ. ಏಕೆಂದರೆ ನಾವು ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಗೌರವ ಕೊಡಬೇಕು. ಸರ್ಕಾರ ಇದರ ಜವಾಬ್ದಾರಿಯನ್ನು ತೆಗೆದುಕೊಳ್ಳಿ. ಜವಾಬ್ದಾರಿಯನ್ನು ತೆಗೆದುಕೊಂಡು ಇದಕ್ಕೆ ಏನಾದರೂ ಒಂದು ಪರಿಹರ ಮಾಡಿದರೆ, ಬಹುಶಃ ಇದರ ಹಣವನ್ನು ಕೊಟ್ಟು ರೈತರಿಗೆ ಏನಾದರೂ ಸಹಾಯವನ್ನು ಮಾಡಬೇಕೆಂದು ಹೊರಟರೆ, ಏನಾದರೂ ಆಗುತ್ತದೆ. ಏಕೆಂದರೆ ಕೊಟ್ಟ ಮಾತನ್ನು ಕೇವಲ manifesto ನಲ್ಲಿ ತಂದಿದ್ದೇವೆ ಎಂದರೆ, 30 ಸಾವಿರದಿಂದ 60 ಸಾವಿರ ರೂಪಾಯಿಗೆ ಬಿಪಿಎಲ್ ಕಾರ್ಡ್‌ನ ಬಡವರನ್ನು, ಎಪಿಎಲ್ ಕಾರ್ಡ್‌ನಿಂದ ಬಿಪಿಎಲ್ ಕಾರ್ಡ್ ವಿಚಾರವಾಗಿ ಬಡತನ ರೇಖೆಯನ್ನು ಗುರ್ತಿಸಿದ್ದೇವೆಂದು ಹೇಳಿದರು. Income ratio ಮಾಡುವುದಕ್ಕೆ ಆಯಿತೇ? It is not possible. ನಾನು ಯಾವುದೋ ಒಂದು document ಓದಿದೆ. ನಮ್ಮ ಋಗ್ವೇದದಲ್ಲಿ, ಬೇಕಾದಷ್ಟು ನಮ್ಮ ಶಾಸ್ತ್ರಗಳಲ್ಲಿ ಎಲ್ಲಾ ಸಂದರ್ಭಗಳಲ್ಲಿಯೂ ಮಾಂಸವನ್ನು

ಬ್ರಾಹ್ಮಣರು ತಿನ್ನುತ್ತಿದ್ದರು ಎಂದು ಬರೆದಿದ್ದಾರೆ ಸ್ವಾಮಿ. ನಾನು ಏನು ಮಾಡಲಿ ನಾನು ಇದನ್ನು ಬರೆದಿಲ್ಲವಲ್ಲ.

ಶ್ರೀ ಆರ್. ಅಶೋಕ್ : ಏನು ಬರೆದಿದ್ದಾರೆ ಎನ್ನುವುದನ್ನು ಓದಿ. ಅದು ಯಾವುದೋ ಓದಿ.

ಶ್ರೀ ಡಿ.ಕೆ. ಶಿವಕುಮಾರ್ : ಆಯಿತು ಓದುತ್ತೇನೆ ಕೇಳಿ. ಇಂದ್ರನು ಹಸು, ಕರು, ಕುದುರೆ ಮತ್ತು ಎಮ್ಮೆಯ ಮಾಂಸವನ್ನು ತಿನ್ನುತ್ತಿದ್ದನ್ನು ಋಗ್ವೇದದಲ್ಲಿ 6,17,11. 'ಅತಿಥಿ ಆಗಮನವಾದಾಗ, ಹಿರಿಯರ ಶ್ರಾದ್ಧಾ ಮಾಡುವಾಗ ಮತ್ತು ವಿವಾಹದ ಸಂದರ್ಭದಲ್ಲಿ ಹಸುವನ್ನು ಕಡಿಯಲೇಬೇಕು' ಇದು ಅಪಸ್ ಬಂಧಕ್ ಗೋಸೂತ್ರದಲ್ಲಿ ಹೇಳಲಾಗಿದೆ. "ನಾನು ದನವನ್ನು ತಿನ್ನುತ್ತೇನೆ ಏಕೆಂದರೆ ಅದು ತುಂಬಾ ಮೃದುವಾಗಿರುತ್ತದೆ ಮತ್ತು ರುಚಿಕರವಾಗಿರುತ್ತದೆ'. ಋಷಿ ಮುನಿ ಯಜ್ಞ ಮಾಲ್ಯ ಅವರು ಹೇಳಿದಂಥ ಒಂದು ಮಾತು. ವಿವೇಕಾನಂದ ಅವರು ಒಂದು ಕಡೆ ಒಂದು ಮಾತನ್ನು ಹೇಳುತ್ತಾರೆ. ನಮಗೂ ಮತ್ತು ವಿವೇಕಾನಂದರಿಗೂ ಬಹಳ ಪ್ರೀತಿ. ಅವರು ಏನು ಹೇಳುತ್ತಾರೆಂದರೆ, "ನಿಮಗೆ ಆಶ್ಚರ್ಯವಾಗಬಹುದು ಪ್ರಾಚೀನ ಹಿಂದೂ ವಿಧಿ ಮತ್ತು ಆಚರಣೆಯ ಪ್ರಕಾರ ದನ ಮಾಂಸ ತಿನ್ನದೇ ಇದ್ದರೆ ಆತ ಒಳ್ಳೆಯ ಹಿಂದೂ ಎಂದು ಆಗಲು ಸಾಧ್ಯವಿರಲಿಲ್ಲ, ಈ ಭಾರತದಲ್ಲಿ ಒಂದು ಕಾಲವಿತ್ತು ದನವನ್ನು ತಿನ್ನುತ್ತಿದ್ದ ಯಾವ ಬ್ರಾಹ್ಮಣನೂ ಬ್ರಾಹ್ಮಣನಾಗಿಯೇ ಇರಲು ಸಾಧ್ಯವಾಗಿರಲಿಲ್ಲ. ಸನ್ಯಾಸಿಗಳು ಅಥವಾ ರಾಜರು ಅಥವಾ ಯಾರಾದರೂ ಮಹಾ ಪುರುಷರು ಮನೆಗೆ ಬಂದಾಗ ಅತ್ಯುತ್ತಮವಾದ ಎತ್ತನ್ನು ಕಡಿಯಲಾಗುತ್ತಿತ್ತು ಎಂದು ವೇದದಲ್ಲಿ ನೀವು ಓದಬಹುದು'. ಇದು ವಿವೇಕಾನಂದರು ಹಿಂದೂ ಧರ್ಮದ ಅಧಿಕೃತ ವ್ಯಕ್ತಾರ ಸಂಘದ ಪರವಾಗಿ ಅವರು ಮಾಡಿದಂಥ ಭಾಷಣ ಅವರ ಕೃತಿಯಲ್ಲಿದೆ. ಇದನ್ನು ನಾನು ಬರೆದಿದ್ದು ಅಲ್ಲ. ಅವರಿಗೆ ಬೇಜರಾಗಬಹುದು, ನಾನೇನಾದರೂ ಮಾತನಾಡಿದರೆ ನನ್ನ ಮೇಲೆ ಬೀಳಬಹುದು.

ಶ್ರೀ ಹೆಚ್. ಹಾಲಪ್ಪ : ಕುವೆಂಪು ಅವರು ಏನು ಹೇಳಿದ್ದಾರೆಂದರೆ...

ಶ್ರೀ ಎನ್. ಯೋಗೀಶ್‌ಭಟ್ : ಮಾನ್ಯ ಶಿವಕುಮಾರ್ ಅವರು ಯಾವ ಪುಸ್ತಕದ ಆಧಾರದ ಮೇಲೆ ಹೇಳುತ್ತಿದ್ದಾರೆ ಎನ್ನುವುದನ್ನು ಹೇಳಬೇಕು. ಇಲ್ಲಿ ಸುಳ್ಳು ಮಾಹಿತಿ ಬರುವುದಕ್ಕೆ ಅವಕಾಶ ಕೊಡಬಾರದು. ಯಾವ ಪುಸ್ತಕದ ಆಧಾರದಲ್ಲಿ ಹೇಳುತ್ತಿದ್ದೀರಿ. ಹೇಳಿ.

ಶ್ರೀ ಡಿ.ಕೆ. ಶಿವಕುಮಾರ್ : ಹೇಳುತ್ತಿದ್ದೇನಲ್ಲಾ ಸ್ವಾಮಿ, ಹಿಂದೂ ಧರ್ಮದ ಅಧಿಕೃತ ವ್ಯಕ್ತಾರ ಸಂಘ ಸಂಪುಟ-3, ಪುಟ-536.

ಶ್ರೀ ಎನ್. ಯೋಗೀಶ್ ಭಟ್ : ಈ ರೀತಿ ಸುಳ್ಳು ಮಾಹಿತಿಯನ್ನು ಕೊಟ್ಟು ಸದನವನ್ನು ತಪ್ಪು ದಾರಿಗೆ ಕರೆದುಕೊಂಡು ಹೋಗಬೇಡಿ. ನಿಮ್ಮಲ್ಲಿ ಯಾವ ಆಧಾರ ಇದೆ?

ಶ್ರೀ ಡಿ.ಕೆ.ಶಿವಕುಮರ್ : ಒಂದು ಕೆಲಸ ಮಾಡಿ, ನೀವು Privilege motion ಅನ್ನು move ಮಾಡಿ. You Please move a privilege motion.

ಶ್ರೀ ಎನ್. ಯೋಗೀಶ್‌ಭಟ್ : ಪುಸ್ತಕದ ಹೆಸರನ್ನು ಹೇಳಿ ಸ್ವಾಮಿ. ತಾವು ಯಾವ ಪುಸ್ತಕದ ಆಧಾರದ ಮೇಲೆ ಹೇಳುತ್ತಿದ್ದೀರಿ ಎನ್ನುವುದನ್ನು ಹೇಳಿ ಸ್ವಾಮಿ. ಸುಳ್ಳು ಮಾಹಿತಿಯನ್ನು ಇಲ್ಲಿ ತರುವುದಕ್ಕೆ ಹೋಗಬೇಡಿ.

ಅಧ್ಯಕ್ಷರು : ಆಯಿತು ಅವರು ಮುಗಿಸಲಿ.

ಶ್ರೀ ಎಸ್. ಶಿವಣ್ಣ : ಮಾನ್ಯ ಶಿವಕುಮಾರ್ ಅವರೆ, ನಿಮ್ಮ ಊರಿನಲ್ಲಿ ಮೊದಲು ಎಷ್ಟು ಹಸುಗಳು ಇದ್ದವು? ಈಗ ಎಷ್ಟು ಹಸುಗಳಿವೆ ಎನ್ನುವುದನ್ನು ಹೇಳಿ. ಇಡೀ ರಾಜ್ಯದಲ್ಲಿ ಏನೇನಾಗಿದೆ ಎನ್ನುವುದು ತಮಗೆ ಗೊತ್ತಿದೆ. ಗೊತ್ತಿದ್ದು ಮಾತನಾಡುತ್ತಿದ್ದೀರಿ ಪಾಪ. ಏಕೆಂದರೆ, ಮೊದಲು ನಿಮ್ಮ ಊರಿನಲ್ಲಿ ಎಷ್ಟು ಹಸುಗಳಿದ್ದವು ಈಗ ಎಷ್ಟಿವೆ ಎನ್ನುವುದನ್ನು ನೋಡಿ. ಬರೀ ತಿನ್ನುವುದು, ಟ್ಯಾಬ್ಲೆಟ್ಸ್ ಅದು ಇದು ಎಂದು ಹೇಳುತ್ತಿದ್ದೀರಲ್ಲಾ, ತೋಟಕ್ಕೆ ಗೊಬ್ಬರ ಹಾಕುತ್ತಿದ್ದೀರಲ್ಲಾ ಎಲ್ಲಿಂದ ಹಾಕುತ್ತಿದ್ದೀರಿ? ಅದರ ಬಗ್ಗೆ ಯೋಚನೆ ಮಾಡಿ ಹೇಳಿ ಸ್ವಾಮಿ.

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಶಿವಕುಮಾರ್ ಅವರೆ, ಸ್ವಲ್ಪ ಯೋಚನೆ ಮಾಡಿ. ನೀವು one angle ನಲ್ಲಿ ಮಾತನಾಡುತ್ತೀರಿ. ಇವತ್ತು ನಿಮಗೂ ಗೊತ್ತು, ಹಳ್ಳಿಗಳಲ್ಲಿ ನಿಮಗೆ ಒಂದು ಕಡೆ ಒಂದು ಜೊತೆ ಎತ್ತು ತೆಗೆದುಕೊಳ್ಳಬೇಕಾದರೆ ಒಂದು ಲಕ್ಷ ರೂಪಾಯಿಗಳ ಮೇಲೆ ಕೊಟ್ಟು ತೆಗೆದುಕೊಳ್ಳಬೇಕು. ಈ ಪರಿಸ್ಥಿತಿ ಏಕೆ ಬಂದಿತು? ಕರುಗಳನ್ನೆಲ್ಲಾ ಸಾಯಿಸುತ್ತಾರೆಂದು ನೀವು ಹೇಳಿದಿರಿ, ಏಕೆ? ಹಣದ ಆಸೆಗೋಸ್ಕರ ಕರುಗಳನ್ನೆಲ್ಲಾ ಸಾಯಿಸುತ್ತಿದ್ದಾರೆ.

ಶ್ರೀ ಹೆಚ್. ಎಸ್. ಮಹದೇವ್ ಪ್ರಸಾದ್ : ಈಗ ಆ ರೀತಿ ಎತ್ತುಗಳಿಂದ ಉಳುಮೆ ಮಾಡುವವರು ಕಡಿಮೆಯಾಗಿದ್ದಾರೆ. . .

ಶ್ರೀ ಎಸ್. ಶಿವಣ್ಣ : ನಿಮಗೆಲ್ಲಾ ನಾಚಿಕೆಯಾಗಬೇಕು.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್ : ಹಳ್ಳಿಗಳಲ್ಲಿ ಯಾರೂ ಈಗ ದನಗಳನ್ನು ಸಾಕುವುದಿಲ್ಲ. ಹಳ್ಳಿಗಳಲ್ಲಿ ಟ್ರಾಕ್ಟರ್‌ಗಳು, tiller ಗಳು ಅವು ಇವು ಬಂದು ಯಾರು ಎತ್ತುಗಳಲ್ಲಿ ವ್ಯವಸಾಯ ಮಾಡುವ ಜನ ಇಲ್ಲ.

(ಗೊಂದಲ)

ಶ್ರೀ ಹೆಚ್. ಹಾಲಪ್ಪ : ಕುವೆಂಪು ಅವರು ಏನು ಹೇಳುತ್ತಾರೆ ಗೊತ್ತೇನು?

ಶ್ರೀ ಡಿ.ಕೆ. ಶಿವಕುಮಾರ್ : ನೀವು ಏನು ಹೇಳಿದರೂ ನಾನು ಕೇಳುತ್ತೇನೆ.

ಶ್ರೀ ಹೆಚ್. ಹಾಲಪ್ಪ :- ರಾಷ್ಟ್ರಕವಿ ಕುವೆಂಪುರವರು ಏನು ಹೇಳಿದ್ದಾರೆಂಬುದು ಗೊತ್ತೇ? ಅವರು ಹೇಳುತ್ತಾರೆ: *"ಶ್ರೀಕೃಷ್ಣನೇ ಗೋಕುಲದಿ ಗೋವುಗಳ ಕಯ ಗೋಯಮ್ಮ ತಾಯಿ, ಎಳೆ ಮಕ್ಕಳಿಗೆ ಪೀಯೂಷವೀವ ಪರಮ ಜನನಿಯು ಗೋವು, ಊಳಿಡುವ ಜೀವ, ದುಡಿ ದುಡಿದು ಮುದಿಯಾಗುವ ಗೋವುಗಳನು ಮಾರಿ ಪಾಪಿಯಾಗಲು ಬೇಡ, ಪನ್ನೀರ ಚೂರಿ, ಕತ್ತಿಗಳ ಕಂಡ ಆ ಗೋವು ಶಪಿಸದೇ ಬಿಡದು ನಿನ್ನ, ವಿಷವಾಗದೇ ಪಾಪಿ ನೀನುಣ್ಣುವ ಹಾಲನ್ನು".* ಇದನ್ನು ಕುವೆಂಪುರವರು ಹೇಳಿದ್ದು. ನಾನು ಹೇಳಿದ್ದಲ್ಲ. ದಯವಿಟ್ಟು ಕುವೆಂಪುರವರ ಬಗ್ಗೆ ಮಾತನಾಡೋಣ.

ಶ್ರೀ ಡಿ.ಕೆ. ಶಿವಕುಮಾರ್ : ಈಗ ತಾವು ಹೇಳಿದಂತೆ, ಕುವೆಂಪು ರವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗೆಯೇ, ವಿವೇಕಾನಂದರು ಹೇಳಿದ್ದನ್ನು ನೀವೂ ಒಪ್ಪಿಕೊಳ್ಳಿ.

ಶ್ರೀ ಹೆಚ್. ಹಾಲಪ್ಪ : ನಮಗೆ ಕುವೆಂಪು ಬೇಕು.

ಶ್ರೀ ಡಿ.ಕೆ.ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ನೀವು ರೈತರನ್ನು ರಕ್ಷಿಸಬೇಕು. ನೀವು ಒಂದು announcement ಮಾಡಿ. ಈ ಕುರಿತು ನಿಮಗೆ Political commitment ಇದ್ದರೆ, ರಾಜಕೀಯ ಇಚ್ಛಾಶಕ್ತಿ ಇತ್ತೆಂದರೆ, 'ಆಯಿತು, ಇದನ್ನು ನಾವು ತರುತ್ತಿದ್ದೇವೆ, ಸರ್ಕಾರವೇ ಇದನ್ನು ಕೊಂಡು ಕೊಳ್ಳುತ್ತದೆ. ಒಂದು ಹಸುವಿಗೆ 10,000 ರೂ. ನಿಮಗೆ ನಾವು ಕೊಡುತ್ತೇವೆ' ಎಂದು ನೀವು announcement ಮಾಡಿ. ಈ ರೀತಿ announcement ಮಾಡಿ ನೀವು ತೆಗೆದುಕೊಳ್ಳಿ. ತೆಗೆದುಕೊಂಡು ಹೋಗಿ ನಿಮ್ಮ ಮನೆ, ಕಾಂಪೌಂಡ್‌ನಲ್ಲಾದರೂ ಕಟ್ಟಿಕೊಳ್ಳಿ, ವಿಧಾನಸೌಧದಲ್ಲಾದರೂ ಕಟ್ಟಿಕೊಳ್ಳಿ,

ಇಲ್ಲವೇ Chief Secretary, Political Secretary, ಇವರೆಲ್ಲರೂ ಇದ್ದಾರಲ್ಲ, ಅವರ ಮನೆಗಳಿಗೆ ಕೊಟ್ಟುಬಿಡಿ, ಅವರು ನೋಡಿಕೊಳ್ಳಲಿ. ಇಲ್ಲವೇ ಬಿಜೆಪಿ ಕಛೇರಿಯಲ್ಲಾದರೂ ಕಟ್ಟಿಕೊಳ್ಳಲಿ. ನಾವು ಬೇಡವೆಂದು ಹೇಳುವುದಿಲ್ಲ. ಇದಕ್ಕೋಸ್ಕರ ನಮಗೆ 10,000 ರೂ. ಕೊಡಿ.

ಅನಂತರ, employment. ಇದಕ್ಕೆ ಸಂಬಂಧಿಸಿದಂತೆ ಯಾವ್ಯಾವ ಫ್ಯಾಕ್ಟರಿಗಳಿವೆಯೋ, capsule Factory, bone factory, film factory, leather factory, ಇವೆಲ್ಲವನ್ನೂ ಸರ್ಕಾರವು take over ಮಾಡಲಿ. ನೀವು ದುಡ್ಡು ಕೊಡಿ. ಅವರು ಏನೇನು ಕೆಲಸಗಳನ್ನು ಮಾಡುತ್ತಿದ್ದರೋ, ಅವರೆಲ್ಲರನ್ನೂ ವಿಧಾನಸೌಧಕ್ಕೆ ಕರೆದುಕೊಂಡು ಬಂದು ಯಾವ್ಯಾವ ಕೆಲಸಗಳಿಗೆ ಬೇಕೋ, ತೆಗೆದುಕೊಂಡು ಬಿಡಿ, ನಿರುದ್ಯೋಗ ಸಮಸ್ಯೆಯನ್ನು ನೀವು ಬಗೆಹರಿಸಿ. ಇದರ ಹಿಂದೆ ದೊಡ್ಡ ಚೈನ್ ಇದೆ, ಲಕ್ಷಾಂತರ ಜನರ ನಿರುದ್ಯೋಗದ ಸಮಸ್ಯೆ ಇದೆ. ಪಾಪ! Drivers, slaughters, ಕತ್ತರಿಸುವವರು, ಇವರ ಜೊತೆಗೆ ಎಲ್ಲಕ್ಕಿಂತಲೂ ಮುಖ್ಯವಾಗಿ ತಿನ್ನುವವರು ಇದ್ದಾರಲ್ಲ, ಅವರ ಚಟವನ್ನು ನಿಮ್ಮಿಂದ ನಿಲ್ಲಿಸುವುದಕ್ಕಾಗುವುದಿಲ್ಲ. ಆತನಿಗೆ ಏನೇನು ಬೇಕೋ, ಈ ದೇಹಕ್ಕೆ ಯಾವ್ಯಾವ ತರಹದ ಚಟ ಬೇಕೋ, ಆತ ತೀರಿಸಿಕೊಂಡೇ ತೀರಿಸಿಕೊಳ್ಳುತ್ತಾನೆ. ನೀವು ಇದನ್ನು ನಿಯಂತ್ರಣ ಮಾಡುವುದಕ್ಕೆ ಹೋಗಬೇಡಿ. You cannot stop it. It is a biological need. ಈ ನಾಲಿಗೆಗೆ ಏನೇನು ಬೇಕೋ ಅದನ್ನು ತಿನ್ನಲೇಬೇಕು. ಎಷ್ಟಾದರೂ ಖರ್ಚಾಗಲಿ, ಊಟಕ್ಕೆ ಸಾವಿರ ರೂ. ಹೋಗಲಿ, ನೀವು ಮಾಡಲಿಲ್ಲವೆಂದರೆ, ಆತ ಹೊರಗಡೆ ಹೊಸೂರಿಗೆ ಹೋಗಿ ತಿಂದುಕೊಂಡು ಬರುತ್ತಾನೆ. ದಯವಿಟ್ಟು ಇದಕ್ಕೆ ಅವಕಾಶ ಕೊಡಬೇಡಿ. ಇದನ್ನು ಮುಖ್ಯಮಂತ್ರಿಗಳು ವಾಪಸ್ಸು ತೆಗೆದುಕೊಳ್ಳಬೇಕು. ಈ ಕಾಂಗ್ರೆಸ್ ಪಕ್ಷವು ಸಂವಿಧಾನದಲ್ಲಿ ಎಲ್ಲಾ ಸಮಾಜದವರ, ಎಲ್ಲಾ ವರ್ಗದ ಜನರ ರಕ್ಷಣೆ ಮಾಡುವ ಒಂದು ರಾಜಕೀಯ ಬದ್ಧತೆ ಇಟ್ಟುಕೊಂಡಿದೆ. ನಿಮ್ಮ ಸಂಕಲ್ಪ ಉಳಿಸಿಕೊಳ್ಳುವುದಕ್ಕಾಗುವುದಿಲ್ಲ, ನೀವೂ ವಚನ ಭ್ರಷ್ಟರು ಎಂದು ನೀವೂ ಕೆಟ್ಟ ಹೆಸರು ತೆಗೆದುಕೊಳ್ಳಬೇಕಾಗುತ್ತದೆ. ದಯವಿಟ್ಟು ಈ ಬಿಲ್ ಅನ್ನು ಮತಕ್ಕೆ ಅವಕಾಶ ಕೊಡದೇ ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾಗಿ ಚರ್ಚೆಯಾಗುತ್ತಿದೆ. ನಮಗೆ ಏನು ಆಶ್ಚರ್ಯವಾಗುತ್ತದೆಂದರೆ, ನಮ್ಮ

ಮಂತ್ರಿಗಳು Statement of Objects ನಲ್ಲಿ Article 48 ಇದು Directive Principles. ಇದು ಹೊಸ ಸಮಸ್ಯೆ ಅಲ್ಲ. Constituent Assembly ಯಲ್ಲಿ Why Directive Principles from Article 36 to 51 have been kept? It has been kept to make the state policies. Fundamental rights, Chapter 13 in Article 301, 303, and 304. These articles are for the freedom of trade, commerce and industries. ಈ ಹೊಸ ಬಿಲ್ contradicts. ತಾವು. ಹೇಳುತ್ತಿದ್ದೀರಿ ಇದು as per the Article 48 under the Directive of Principles. ಹಳೆಯ ಆ್ಯಕ್ಟ್ ಅನ್ನು we fully agree. Not only in Karnataka, in so many other states they have brought this bill in their houses and they had an Act. Karnataka also had in the year 1964. This is according to Article 48. Clause (6) (7) relates to freedom of trade and commerce. How it is possible to bring this bill without the signature and the sanction of the President of India? I wanted to know in this House that whether the Government has ought the carification from the Law Department or not. Since, it has been brought, Whether it has got sanction from the Law Department, let that be placed before the House through the Speaker. ಏಕೆಂದರೆ, ನಮಗೆ ಕಾನೂನು ಇಲಾಖೆ ಬಗ್ಗೆ ಬಹಳ ವಿಶ್ವಾಸವಿದೆ. ನಮ್ಮ ಸ್ನೇಹಿತರು ಇದೊಂದು hidden agenda ಎಂದು ಹೇಳುತ್ತಿದ್ದಾರೆ. ನನಗೆ ಏನು ಸಂಶಯ ಬರುತ್ತಿದೆ ಎಂದರೆ....

ಶ್ರೀ ಎಸ್. ಶಿವಣ್ಣ : ಜಿಹಾದ್ ಬಗ್ಗೆ ಹೇಳಬೇಕೆಂದರೆ, ಹೇಳೋಣ.

ಶ್ರೀ ಖಮರುಲ್ ಇಸ್ಲಾಂ : ಇದು academic discussion. ನಾನು ಒಬ್ಬ Parliamentarian ಆಗಿ ಮಾತನಾಡಲು ಬಂದಿದ್ದೇನೆ. ನನಗೆ ಏನು ಸಂಶಯವಿದೆ ಎಂಬುದರ ಬಗ್ಗೆ ಅಧ್ಯಕ್ಷರನ್ನು ಕೇಳಿದ್ದೇನೆ. ಅವರು ನಮ್ಮ custodian. ನಾನು ಏನು ಹೇಳುತ್ತೇನೆಂದರೆ, if it is there, kindly bring that to the House. No.2 is that this discussion has already taken place in the assembly. When Dr. Babasaheb Ambedkar, Jawaharlal Nehru, Iron man Sardar Patel, man like Moulana Azad, whom we give all respect speak and when Pandith Nehru speaks, the whole of India's people will think that whole India

is speaking. They are such personalities. When this matter came up, they have given this right to the states under the Directive Principles and not to ban it completely. The slaughtering of all the animals, that means cattle, beef, whatever definition they have given, this has been banned under Article 44. I also respect the Cow, "ಅನ್ನಂ ನಾ ನಿಂದ್ಯಾತ್", that means I respect what you eat. Those who eat beef, it does not mean that they do not respect the beef. Those who eat rice, it does not mean that we are bound to respect it. Who says ಅನ್ನವನ್ನು respect ಮಾಡಬಾರದು, beef ಅನ್ನು respect ಮಾಡಬಾರದು ಎಂದು? It is my food, I have to respect....Sir, here I wanted to know from Hon'ble Minister of Animal Husbandry. ಮಾನ್ಯ ಪಶುಸಂಗೋಪನಾ ಮಂತ್ರಿಗಳೆ, ತಾವು ಮೂರು ವರ್ಷಗಳಿಗೊಮ್ಮೆ ಜಾನುವಾರುಗಳನ್ನು ಸೆನ್ಸಸ್ ಮಾಡುತ್ತೀರಿ. 1996ರ ಸೆನ್ಸಸ್ ಪ್ರಕಾರ, ನಮ್ಮ ಮಾಹಿತಿ ರೀತ್ಯಾ, the cattle population is 96 lakhs. According to 2007-08 census, it has become 1,10,00,000. So many cattle have been slaughtered.

With the increase of cattle ratio it has become very difficult to give them the fodder. I am coming from Gulbarga, and I have seen drought many times. I have seen the farmers who were weeping. Government knows what will happen if the flood comes? What will happen if there is no fodder for these animals? I oppose this bill because it is not only unconstitutional, not only undemocratic but it is also anti-farmers and anti-poor beef eaters. Our country is a multi cultural, multi religious, multi lingual country. Sir, for academic discussion I am doing the discussion. I am goving so many things that if the Hon'ble Minister woul have been convinced that it is under Article 304 Clause (b) I had opined, definitely he would have not used these words.

ಅಧ್ಯಕ್ಷರು : ಶ್ರೀ ಸಿ.ಟಿ. ರವಿಯವರು ...

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೇ..

Mr. Speaker : Please conclude. ಬಹಳಷ್ಟು ಜನ ಮಾತನಾಡುವವರಿದ್ದಾರೆ.

Sri Qamarul Islam : And one more thing Sir, after the independence we have selected Jana Gana Mana as our National Anthem. I am telling you sir. Very important thing.

ಅಧ್ಯಕ್ಷರು : ಅದಕ್ಕೂ ಇದಕ್ಕೂ ಏನು ಸಂಬಂಧ.

Sri Qamarul Islam : No sir, I have got the right.

ಅಧ್ಯಕ್ಷರು : Bill ಗೂ ಜನಗಣಮನ ಕ್ಕೂ ಏನು ಸಂಬಂಧ?

Sri Qamarul Islam : It is connected with that.

Mr. Speaker : National Anthem is different.

Sri Qamarul Islam : At that time our country has selected Lion as national animal, Peacock as national bird. The cow has not been selected. Even though thousands, lakhs and crores of people are doing poojas. For those cow is a holy animals. We respect. Their sentiments. But do you feel that the Holy animal is a holy animal right from birth till death. When it dies, what are the arrangements made by this Government?

Mr. Speaker : Please conclude.

Sri Qamarul Islam : Why sir, what is wrong? I am a Member from last 30 years.

Mr. Speaker : ಬಿಲ್ ಬಗ್ಗೆ ಹೇಳಿ ಸ್ವಲ್ಪ. Whatever it may be. Even though it is 1 year, 30 years, 40 years, whatever it may be, everybody has to follow these rules. 30 ವರ್ಷ ಇದ್ದರೆ ಹೆಚ್ಚು ಮಾತನಾಡಬಹುದು, ಒಂದು ವರ್ಷ ಇದ್ದರೆ ಹೆಚ್ಚು ಮಾತನಾಡ ಬಾರದು ಎಂದು ನಿಯಮವೇನು ಇಲ್ಲ. ತಾವು senior most member ಆಗಿದ್ದು ಆ ರೀತಿ ಹೇಳಬಾರದು.

Sri Qamarul Islam : ನಾನು ಬಹಳ serious ಆಗಿ ಹೇಳುತ್ತಿದ್ದೇನೆ. If by chance this draconian bill is passed on the basis of the majority, there will be hatred amoung the different communities in the society. This Government has to face it and that hatred will create a law and order problem. Sir, even liquor was not banned throughout India. Some of the States banned

the liquor. It is available in other states. Here seconds and thirds are vailable. Do you think that the right of eating can be taken away?

Mr. SPEAKER : Please conclude.

Sri Qamarul Islam : Sir, Our country's beauty, our country's secularism, Constitution is like a Bible, Geetha, Quran and we have to respect the constitution. Unity in diversity is the main thing. This bill spoils the unity in diversity. Hence, I request through you the Hon'ble Minister that this draconian bill has to be withdrawn. The Act is sufficient which is already in existence to Protects cows, calves, cattles with the punishment whichever is stipulated under the Act.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೇ ಎರಡು ಕಾರಣಕ್ಕೆ ಸಂಪೂರ್ಣವಾಗಿ ಗೋಹತ್ಯೆ ನಿಷೇಧ ಮಾಡತಕ್ಕ ಈ ಬಿಲ್ ಅನ್ನು ತಂದಿರತಕ್ಕಂತಹ ರಾಜ್ಯ ಸರ್ಕಾರದ ಕ್ರಮ ಸ್ವಾಗತಾರ್ಹ. ಒಂದು ವ್ಯವಹಾರಿಕ ಕಾರಣಕ್ಕೆ. ಮತ್ತೊಂದು ಭಾವನಾತ್ಮಕ ಕಾರಣಕ್ಕೆ. ಯಾಕೆ ವ್ಯಾವಹಾರಿಕ ಕಾರಣಕ್ಕೆ ಎಂದರೆ ರೈತ ಈ ದೇಶದ ಬೆನ್ನೆಲುಬು ಎಂದು ಹೇಳುತ್ತಾರೆ. ರೈತರ ಬೆನ್ನೆಲುಬು ಯಾರು. ರೈತನ ಬೆನ್ನೆಲುಬು ಗೋವು. ಗೋ ಹತ್ಯೆ ನಿರಂತರವಾಗಿ ಹೀಗೆ ಮುಂದುವರೆದರೆ, ಹಾವೇರಿಯ ಒಬ್ಬರೈತ ಹೇಳಿದ ಮಾತು ಇವತ್ತು ನನ್ನ ಕಿವಿಯಲ್ಲಿ ಗುಣುಗುಡುತ್ತಿದೆ, ಇವತ್ತು ಒಬ್ಬ ಮನುಷ್ಯ ಸತ್ತರೆ ಮಣ್ಣಿಗೆ, ಮಣ್ಣೆ ಸತ್ತರೆ ಮತ್ತೆಲ್ಲಿಗೆ, ರಾಸಾಯನಿಕ ಗೊಬ್ಬರಗಳ ಬಳಕೆ ಪರಿಣಾಮವಾಗಿ ಭೂಮಿ ತನ್ನ ಸತ್ವವನ್ನು ಕಳೆದುಕೊಂಡು ಮಣ್ಣು ಸಾಯುತ್ತಿರುವ ಕಾಲದಲ್ಲಿ ಮಣ್ಣನ್ನು ಮತ್ತೆ ಜೀವಂತಗೊಳಿಸುವ ಶಕ್ತಿ ಇರುವಂತಹದ್ದು ಸಗಣಿಗೆ ಮತ್ತು ಗಂಜಲಕ್ಕೆ ಮಾತ್ರ. ಆ ಗೋವಿನ ಸಗಣಿ ಮತ್ತು ಗಂಜಲ ಮಾತ್ರ ಮಣ್ಣನ್ನು ಜೀವಂತಗೊಳಿಸುತ್ತದೆ. ಆ ಮೂಲಕ ರೈತನ ಬೆನ್ನೆಲುಬಾಗಿ ಗೋವು ಆಧಾರವಾಗಿ ನಿಂತಿದೆ. ಅಂದರೆ ರೈತ ದೇಶದ ಬೆನ್ನೆಲುಬು ಎನ್ನುವುದಾದರೆ ಯಾರ್ಯಾರು ರೈತರ ಮಕ್ಕಳು ಎಂದು ಹೇಳುತ್ತೇವೆ, ಯ್ಯಾರ್ಯಾರು ರೈತರ ಬಗ್ಗೆ ಕಾಳಜಿ ಇದೆಯೆಂದು ಬಂದಾಗಲೆಲ್ಲಾ ಕುಟ್ಟಿ ಪ್ರತಿಪಾದನೆ ಮಾಡುತ್ತಾರೆ ಅವರು ಕೂಡ ಈ ಗೋ ಹತ್ಯೆ ನಿಷೇಧ ಮಸೂದೆಯನ್ನು ವಿರೋಧಿಸಿರುವುದಿಲ್ಲ. ಯಾರಿಗೆ ರೈತರ ಬಗ್ಗೆ ನಿಜವಾಗಿ

ಕಾಳಜಿ ಇದೆ ಅವರು ಯಾರೊಬ್ಬರು ಇದನ್ನು ನಿಷೇಧಿಸುವುದಿಲ್ಲ. ಅದಕ್ಕೋಸ್ಕರವೇ ರೇವಣ್ಣನವರು ಸರಿಯಿದೆ ಎಂದು ಮೌನವಾಗಿ ಬೆಂಬಲವನ್ನು ಕೊಡುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಉತ್ತರ ಕೊಡುವಾಗ ಹೇಳುತ್ತೇನೆ. ನನ್ನ ಹೆಸರು ಹೇಳಿದ ಮೇಲೆ ಒಂದು ನಿಮಿಷ ಈಲ್ಡ್ ಆಗಬೇಕು ಅವರು.

ಅಧ್ಯಕ್ಷರು : ನೀವು ಅವರ ಹೆಸರನ್ನು ಏಕೆ ಹೇಳುತ್ತೀರಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ರೈತರ ಪರ ಬಿಲ್ ಅಲ್ಲ ಇದು. Vote Bank ಅನ್ನು ದೃಷ್ಟಿಯಲ್ಲಿಟ್ಟುಕೊಂಡು ಬಿಲ್ ತಂದಿದ್ದಾರೆ ಹೊರತು, ಇನ್ನಾವ ದೃಷ್ಟಿಯಿಲ್ಲ ಎಂದು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಸಿ.ಟಿ. ರವಿ : ಮೊನ್ನೆ ಅವರು ಬಹಳ ಪ್ರೀತಿಸುತ್ತಿದ್ದಂತಹ, ಅವರೇ ಕಟ್ಟಿ ಬೆಳೆಸಿದ್ದೇವೆ ಎಂದು ಹೇಳಿದಂತಹ Karnataka Milk Federation ಕೊಟ್ಟಿರುವ ಒಂದು report ಅನ್ನು ನಾನು ಓದಿದೆ. ಈಗಾಗಲೇ 2 1/2 ಲಕ್ಷ ಲೀಟರ್ ಹಾಲು ಪ್ರತಿನಿತ್ಯ ಕೊರತೆ ಇದೆಯಂತೆ. Demand and Supply ಗೂ. 3 ಲಕ್ಷ ಲೀಟರ್ ಹಾಲಿನ ಕೊರತೆ ಇದೆಯಂತೆ. ಇದೇ ರೀತಿ ಗೋ ಹತ್ಯೆ ನಿರಂತರವಾಗಿ ಮುಂದುವರೆದರೆ ಹಾಲು ಕುಡಿಯುವುದಕ್ಕೆ ಅಲ್ಲ ಕಡೆಗೆ ಔಷಧಿಗೆ ಬಳಸಲು ಸಿಗದೆ ಇರತಕ್ಕ ಪರಿಸ್ಥಿತಿ ಬರುತ್ತದೆ. ಹೀಗೆ ಬರಬಾರದು ಎಂದರೆ ನೀವು ಬಹಳ ಇಷ್ಟಪಡತಕ್ಕ KMF ಉಳಿಯಬೇಕು ಎಂದರೆ ಈ ಗೋ ಹತ್ಯೆ ನಿಲ್ಲಬೇಕು.

(6-00 PM)

(ಗೊಂದಲ)

ಎಲ್ಲಾ ಜಾನುವಾರುಗಳು ಅಂದರೆ, ಕೋಣ, ಎಮ್ಮೆ, ಕರು, ಹಸು, ಎತ್ತು ಎಲ್ಲವೂ ಸೇರಿದಂತೆ ಇದರಲ್ಲಿದೆ. 'ಕಲ್ಲ ನಾಗರ ಕಂಡರೆ ಹಾಲೆರೆವರು, ದಿಟ ನಾಗರ ಕಂಡರೆ ಬಡಿಗೆ ಎತ್ತಿ ಕೊಲ್ಲುವರಯ್ಯ' ಎಂಬ ಗಾದೆ ಮಾತಿನಂತೆ ನಡೆದುಕೊಳ್ಳುತ್ತಿದ್ದೀರಿ. ಬಸವ ಜಯಂತಿ ಮೇ 16ನೇ ತಾರೀಖು ಬರುತ್ತದಲ್ಲಾ, ನೀವೆಲ್ಲರೂ ಅಂದು ಪೂಜೆ ಮಾಡುವವರೇ, ಅದು ಒಳ್ಳೆಯ ದಿನ ಎಂದು ಹೇಳುವವರೇ. ಆದರೆ ಬಸವಣ್ಣನ ಹತ್ಯೆ ಮಾಡುವುದಕ್ಕೆ ಏಕೆ ಹೀಗೆ ಸಮರ್ತನೆ ಮಾಡುತ್ತೀರಿ? ಇವರು ಒಳ್ಳೆಯ ಕಾರ್ಯ ಮಾಡುವುದಕ್ಕೆ, ಮನೆಯ ಗೃಹ ಪ್ರವೇಶ ಮಾಡುವುದಕ್ಕೆ, ಮದುವೆ ಮಾಡುವುದಕ್ಕೆ ನಿಮಗೆ

ಗೋವು ಬೇಕು. ಒಳ್ಳೆಯ ಕಾರ್ಯಕ್ಕೆ, ಶುಭ ಕಾರ್ಯಕ್ಕೆ ನಿಮಗೆ ಗೋವು ಬೇಕು. ಆದರೆ ಈ ಬಸವಣ್ಣನ ಹತ್ಯೆ ಮಾಡುವುದನ್ನು ಸಮರ್ಥನೆ ಮಾಡುವುದು ಎಷ್ಟರಮಟ್ಟಿಗೆ ಸರಿ? ಎಂದು ನೀವು ಆತ್ಮಾವಲೋಕನ ಮಾಡಿಕೊಳ್ಳಬೇಕು. ಕೇವಲ ರಾಜಕೀಯ ಕಾರಣಕ್ಕೋಸ್ಕರ ವಿರೋಧ ಮಾಡುವುದು ಸರಿಯಲ್ಲ. ನೋಡಿ, ಒಂದು ಬಹಳ ಸ್ಪಷ್ಟ ನಿಮಗೆ ಯಾವ ಓಟ್‌ಗಳು ಬರಬೇಕೆಂದಿದೆಯೋ, ಅವುಗಳು ನಿಮಗೇ ಬರುತ್ತವೆ. ಅವುಗಳು ನಮಗೇನೂ ಬರುವುದಿಲ್ಲ. ಹಾಗಾಗಿ ನೀವು ಅದರ ಬಗ್ಗೆ ಕಾಳಜಿ ಮಾಡಿ. ಇದನ್ಯಾಕೆ ವಿರೋಧ ಮಾಡಿ ಪಾಪ ಕಟ್ಟಿಕೊಳ್ಳುತ್ತೀರಿ? ಡಾಕ್ಟರ್‌ರವರೆ, ನಿಮಗೆ ಕಷ್ಟವಾಗುತ್ತದೆ. ಸೇಡಂನಿಂದ ವಾಪಸ್ ಮತ್ತೆ ಆರಿಸಿ ಬರುವುದಕ್ಕೆ ನಿಮಗೆ ಕಷ್ಟವಾಗುತ್ತದೆ. ನಾಳೆ ಇದನ್ನು ......

(ಗೊಂದಲ)

ಅಧ್ಯಕ್ಷರು : ಬೇಗ ಮುಗಿಸಿ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ : ನಿಮ್ಮ ಓಟ್ ನಿಮಗೆ ಬರುವುದಿಲ್ಲ ಎಂಬುದು ನಮಗೆ ಗೊತ್ತಿದೆ ಎಂದು ಮಾನ್ಯ ಸಿ.ಟಿ.ರವಿಯವರು ಹೇಳಿದರು. ಅಂದರೆ ಜನರಿಗೆ ತೊಂದರೆ ಕೊಡಲಿಕ್ಕಾಗಿ ಇದನ್ನು ತರಲಾಗಿದೆ ಎನ್ನುವಂತಹ ಒಳಗಿನ ಮಾತನು ಅವರು ಈಗ ಹೇಳಿದರು.

(ಗೊಂದಲ)

ಶ್ರೀ ಸಿ.ಟಿ. ರವಿ : ನಾನೂ ಕೂಡ ಗೋಹತ್ಯೆ ನಿಷೇಧದ ಪರವಾಗಿ ಹೋರಾಟ ಮಾಡಿದವನು. ಮಾನ್ಯ ಅಧ್ಯಕ್ಷರೆ, ಇಲ್ಲಿ ಕಾನೂನು ಏನು ಇತ್ತು? ಈಗಿರುವ ಕಾನೂನಿನಲ್ಲಿ ಇವತ್ತು ತೆಗೆದುಕೊಂಡು ಹೋಗಿ ಕೋರ್ಟಿಗೆ ಹಾಜರು ಪಡಿಸಿದರೆ, 300–400 ರೂ.ಗಳ ದಂಡ ಹಾಕಿ ಬಿಟ್ಟು ಬಿಡುತ್ತಿದ್ದರು. ಅವನಿಗೆ ಆಗುತ್ತಿದ್ದ ಲಾಭದಲ್ಲಿ ಪ್ರತಿನಿತ್ಯ 300–400 ರೂ.ಗಳ ದಂಡ ಕಟ್ಟಿ, ಗೋ ಹತ್ಯೆ ಮುಂದುವರೆಸುತ್ತಿದ್ದನು. ಇದು ಆಗಬಾರದು ಎಂದು ಬಿಗಿ ನಿಲುವು ತೆಗೆದುಕೊಂಡು 1964ರ ಕಾಯ್ದೆ ತಿದ್ದುಪಡಿ ಮಾಡಿರತಕ್ಕದ್ದು ಸರಿಯಾಗಿದೆ. ಮೊಗಲ್ ಸಾಮ್ರಾಟ ಅಕ್ಬರ್ ಕಾಲದಲ್ಲೇ, ಮಾನ್ಯ ರೋಷನ್ ಬೇಗ್ ರವರಿಗೆ ಇದು ಚೆನ್ನಾಗಿ ಗೊತ್ತಿದೆ, ಈ ಗೋಹತ್ಯೆ ಸಂಪೂರ್ಣವಾಗಿ ನಿಷೇಧ ಮಾಡತಕ್ಕಂಥ ಕಾನೂನನ್ನು ಜಾರಿಗೆ ತಂದಿದ್ದರು. ಯಾರು Secularism ಹೆಸರಿನಲ್ಲಿ, ಜಾತಿ–ಜಾತಿ ನಡುವೆ ಕಂದಕವನ್ನು ತಂದಿಟ್ಟು, ಈ ಗೋಹತ್ಯೆ ನಿಷೇಧವನ್ನು ವಿರೋಧ ಮಾಡತಕ್ಕಂಥ ಪ್ರಯತ್ನ

ಮಾಡುತ್ತಾರೋ, ಅವರಿಗೆ ಅಕ್ಬರ್ ಕಣ್ಣು ತೆರೆಸಬೇಕು, ಅವರಿಗೆ ಒಳ್ಳೆಯ ಮಾರ್ಗದರ್ಶನ ಮಾಡಬೇಕು. ಆ ರೀತಿ ಮಾರ್ಗದರ್ಶನ ಅವರಿಂದ ಸಿಗುವಂತಾಗಬೇಕು.

ಅಧ್ಯಕ್ಷರು : ಬೇಗ ಮುಗಿಸಿ.

ಶ್ರೀ ಸಿ.ಟಿ. ರವಿ : 'ಇಟ್ಟರೆ ಸಗಣಿಯಾದೆ, ತಟ್ಟಿದರೆ ಕುರುಳಾದೆ, ತಟ್ಟದೆ ಹಾಕಿದರೆ ಮೇಲು ಗೊಬ್ಬರವಾದೆ, ಸುಟ್ಟರೆ ನೊಸಲಿಗೆ ವಿಭೂತಿಯಾದೆ, ನೀನ್ಯಾರಿಗಾದೆಯೋ ಎಲೆ ಮಾನವ' ಎಂಬುದೊಂದು ಇದೆ. ಅಂದರೆ ಮನುಷ್ಯನ ಸಗಣಿ ಕಂಡರೆ ಮಾರು ದೂರ ಹೋಗುತ್ತೇವೆ. ಆದರೆ ಗೋವಿನ ಸಗಣಿ, ಅದು ಪೂಜಾರ್ಹ ಮತ್ತು ಫಲವತ್ತತೆಯನ್ನು ತಂದು ಕೊಡತಕ್ಕಂಥ ಸಾಮರ್ಥ್ಯ ಇರುವಂತಾದ್ದು ಆಗಿದೆ. ಗೋವಿನ ಸಗಣಿಗೂ ಕೂಡ ಆ ರೀತಿ ಸಾಮರ್ಥ್ಯ ಇದೆ. ಇವತ್ತು ನೀವು ಆಧುನಿಕ ಕೃಷಿ ಇದೆ, ಟ್ರಾಕ್ಟರ್ ಬಳಸುತ್ತರೆಂದು ಹೇಳಬಹುದು. ಒಂದು ಮಾತು ಬಹಳ ಸ್ಪಷ್ಟವಾಗಿದೆ. ಮಾನ್ಯ ಟಿ.ಬಿ.ಜಯಚಂದ್ರರವರೆ, ಟ್ರಾಕ್ಟರ್ ಇವೆ, ಆದರೆ ಟ್ರಾಕ್ಟರ್ ಸಗಣಿ ಹಾಕುವುದಿಲ್ಲ. ಟ್ರಾಕ್ಟರ್ ಯಾವತ್ತೂ ಸಗಣಿ ಹಾಕುವುದಿಲ್ಲ. ಆಕಳು ಯಾವತ್ತೂ ಹೊಗೆ ಉಗುಳುವುದಿಲ್ಲ. ಇದರ ಜೊತೆಗೆ ಒಂದು ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಈ ಗೋಹತ್ಯೆ ಸಂಪೂರ್ಣ ನಿಷೇಧಕ್ಕೆ ತಂದಿರತಕ್ಕಂಥ ಕಾನೂನಿನ ಜೊತೆಗೆ ಗೋಮಾಳಗಳನ್ನೂ ಸಹಿತ ಉಳಿಸಬೇಕಾದಂತಹ ಅವಶ್ಯಕತೆ ಇದೆ. ಇವತ್ತು ಗೋಮಾಳಗಳಿಲ್ಲದೆ ಜಾನುವಾರುಗಳನ್ನು ಸಾಕುವುದು ಕಷ್ಟವಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬ್ರಿಟಿಷರ ಕಾಲದಲ್ಲಿ, ಅದಕ್ಕಿಂತ ಹಿಂದೆ ಇದ್ದಂತಹ ರಾಜ ಮಹಾರಾಜರ ಕಾಲದಲ್ಲಿ ಗೋಮಾಳಗಳಿಗೆ ಕೈ ಹಾಕಲಿಕ್ಕೆ ಅವತ್ತಿನ ಕಾನೂನು ಅವಕಾಶ ಕೊಡಲಿಲ್ಲ. ಆದ್ದರಿಂದ ಅವುಗಳನ್ನು Protect ಮಾಡಿಕೊಂಡು ಬಂದರು. ಆದರೆ ಇವತ್ತು ಗೋಮಾಳಗಳು ಒತ್ತುವರಿಯಾಗಿರುವುದು, ಅನ್ಯ ಉದ್ದೇಶಕ್ಕೆ ಬಳಕೆಯಾಗಿರುವುದು ಜಾನುವಾರು ಸಂತತಿ ನಶಿಸಿ ಹೋಗಲಿಕ್ಕೆ ಪ್ರಬಲವಾದಂತಹ ಕಾರಣವಾಗಿದೆ ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಂಡು, ಇದರ ಜೊತೆಗೆ ಗೋಮಾಳಗಳ ಸಂರಕ್ಷಣೆಯ ಕಡೆಗೂ ಕೂಡ ಗಮನಹರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಬೇಗ ಮುಗಿಸಿ.

ಶ್ರೀ ಸಿ.ಟಿ. ರವಿ : ಇದನ್ನು ವಿರೋಧ ಮಾಡತಕ್ಕವರ ವಿರೋಧಕ್ಕೆ ಅರ್ಥವಿಲ್ಲ. ಸುಪ್ರೀಂಕೋರ್ಟಿನವರೆಗೂ ಈ ಕೇಸ್ ಹೋಗಿದೆ. ಗುಜರಾತ್‌ನ

ಪ್ರಕರಣದಲ್ಲಿ ಇರಬಹುದು, ಮಧ್ಯಪ್ರದೇಶದ ಪ್ರಕರಣದಲ್ಲಿ ಇರಬಹುದು, ದೆಹಲಿಯ ಸರ್ಕಾರ ತೆಗೆದುಕೊಂಡಂತಹ ತೀರ್ಮಾನದಲ್ಲಿ ಇರಬಹುದು, ಸುಪ್ರೀಂ ಕೋರ್ಟಿನ full bench ನ judgement ಗೋಹತ್ಯೆ ನಿಷೇಧವನ್ನು ಸಮರ್ಥನೆ ಮಾಡಿದೆ. ಆ ಸಮರ್ಥನೆ ಮಾಡಿರಬೇಕಾದರೆ, ವಿರೋಧಕ್ಕಾಗಿ ವಿರೋಧ ಮಾಡುವಂಥಾದ್ದು ಸಲ್ಲ. ಪುರಾಣದ ಪುಣ್ಯ ಕಥೆಯೂ ಇವರಿಗೆ ಪ್ರೇರಣೆಯನ್ನು ಕೊಡಬೇಕು. ಯಾವುದು ಸರಿಯಲ್ಲ? ನನ್ನ ಲೆಕ್ಕದಲ್ಲಿ...

(ಗೊಂದಲ)

ಅಧ್ಯಕ್ಷರು : ಆಯಿತು, Please ಕುಳಿತುಕೊಳ್ಳಿ. ನೀವು ಮಾತನಾಡುವಾಗ ಹೇಳಿ. ಏಕೆ ಮಧ್ಯೆ ನಿಂತು ಹೇಳುತ್ತೀರಿ? ಈ ತರಹ ಎದ್ದರೆ ನಾನು ಮಾತನಾಡಲು ಅವಕಾಶ ಕೊಡುವುದಿಲ್ಲ.

(ಗೊಂದಲ)

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಒಂದು ಮಾತನ್ನು ಮಾತ್ರ ನೆನಪಿನಲ್ಲಿಟ್ಟುಕೊಳ್ಳಬೇಕು. ನಾವು ತಾಯಿಯ ಹಾಲನ್ನು ಕುಡಿಯುವುದು ಒಂದು ವರ್ಷ, ಹೆಚ್ಚೆಂದರೆ ಎರಡು ವರ್ಷ ಮಾತ್ರ, ಇವತ್ತಿನ ಕಾಲಕ್ಕೆ ಅದೂ ಕೂಡ ಕಷ್ಟ. ಆದರೆ ನಾವು ಬದುಕಿನ ಕೊನೆಯವರೆಗೂ ಹಸುವಿನ ಹಾಲನ್ನು, ಎಮ್ಮೆ ಹಾಲನ್ನು ಕುಡಿಯುತ್ತೇವೆ. ನಮ್ಮ ಸಂಸ್ಕೃತಿ ಉಪಕೃತ ಆಗತಕ್ಕಂಥ ಎಲ್ಲದರಲ್ಲೂ ದೈವತ್ವ ಕಾಣು ಎಂದು ಹೇಳುತ್ತದೆ. ಹೆತ್ತ ತಾಯಿ, ಹೊತ್ತ ತಾಯಿ. ಹೆತ್ತ ತಾಯಿ ನಮ್ಮ ಹಡೆದವ್ವ ಆದರೆ, ನಮ್ಮನ್ನು ಸಾಕುವವಳು ಈ ಗೋಮಾತೆ. ಇವಳು ನಮ್ಮನ್ನು ಕೊನೆಯವರೆಗೂ ಸಾಕುತ್ತಾಳೆ. ಹೆತ್ತವ್ವ ಎಂದರೆ ಭೂಮಿ ತಾಯಿ ನಮ್ಮ ಬದುಕಿಗೆ ಆಧಾರವಾಗುತ್ತಾಳೆ. ಈ ಮೂರರ ಬಗ್ಗೆ ಕೃತಘ್ನರಾಗುವುದು ......

(ಗೊಂದಲ)

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಟಿ.ಟಿ. ರವಿ : ತಾಯಿಯ ಬಗ್ಗೆ ಏನು ಶ್ರದ್ಧೆ ಇರುತ್ತದೋ, ಅದೇ ಶ್ರದ್ಧೆ ಗೋವಿನ ಬಗ್ಗೆಯೂ ಇರಬೇಕಾಗಿರತಕ್ಕದ್ದು ಸ್ವಾಭಾವಿಕ. ಅದು ಈ ದೇಶದ ಸಂಸ್ಕೃತಿ. ಇದು ಯಾವುದೇ ಮತ, ಧರ್ಮ ಅಥವಾ ಕೋಮಿಗೆ ಸೀಮಿತವಾದುದಲ್ಲ. ಇದು ಈ ದೇಶದ ಸಂಸ್ಕೃತಿ. ಹಾಗಾಗಿ ಈ ಸಂಪೂರ್ಣ ಜಾನುವಾರುಗಳ ನಿಷೇಧಕ್ಕೆ ತಂದಿರತಕ್ಕ ತಿದ್ದುಪಡಿ ಸರಿಯಾಗಿದೆ. ಇನ್ನೂ

ಕಠಿಣವಾಗಿ, ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಅವಕಾಶ ಮಾಡಿಕೊಡುವುದಾದರೆ, 7 ವರ್ಷ ಎಂದು ಇರುವುದನ್ನು 20 ವರ್ಷ ಎಂದು ಮಾಡಬೇಕಾಗಿತ್ತು, ಜೀವಾವಧಿ ಶಿಕ್ಷೆ ವಿಧಿಸಬೇಕಾಗಿತ್ತು. ಪುರಾಣದಲ್ಲಿ ಬಲರಾಮ ಗೋಹತ್ಯೆ ಮಾಡಿದ ಕಾರಣಕ್ಕೋಸ್ಕರ ತೀರ್ಥಯಾತ್ರೆ ಹೋಗಬೇಕಾಯಿತು.....

(ಗೊಂದಲ)

ಅಧ್ಯಕ್ಷರು : ಬೇಗ ಮುಗಿಸಿ.

(ಗೊಂದಲ)

ಶ್ರಿ ರಹೀಂಖಾನ್ : .... ಈ ಸದನದಲ್ಲಿ ಇರುವವರು ಎಲ್ಲರೂ ಸಹ ಯಾವುದೆ ಪ್ರಾಣಿ ಹತ್ಯೆ ಮಾಡಬಾರದು, ನಾವೆಲ್ಲರೂ full vegetarian ಆಗಬೇಕು ಎಂದು ಹೇಳಿಬಿಡಲಿ.....

(ಗೊಂದಲ)

ಅಧ್ಯಕ್ಷರು : ಇದು ದಾಖಲೆಗೆ ಹೋಗಬಾರದು.

(ಗೊಂದಲ)

ಅಧ್ಯಕ್ಷರು : ಮಾನ್ಯ ರವಿಯವರೆ, ಬೇಗ ಮುಗಿಸಿ. ಇಲ್ಲದಿದ್ದರೆ ನಾನು ಬೇರೆಯವರನ್ನು ಕರೆಯುತ್ತೇನೆ.

(ಗೊಂದಲ)

ಶ್ರೀ ಸಿ.ಟಿ. ರವಿ : ಕಾನೂನು ಲಂಚಕ್ಕೆ ಕಾರಣವಾಗುತ್ತದೆ ಎನ್ನುವ ಮಾತನ್ನು ಮಾನ್ಯ ಹಿರಿಯ ಸದಸ್ಯರೊಬ್ಬರು ಹೇಳಿದರು. ಯಾರು ಈ ಲಂಚ ಪ್ರತಿಪಾದನೆ ಮಾಡಿದವರು? ಯಾರು ಈ ದೇಶದಲ್ಲಿ ಲಂಚ ಬೆಳೆಸಿದವರು? ಎನ್ನುವುದನ್ನು ಅವರಿಗೆ ನಾನು ಹೇಳಬೇಕಾದಂತಹ ಅವಶ್ಯಕತೆ ಇಲ್ಲ. ಆದರೆ ಕಠಿಣ ಕಾನೂನು ಇದ್ದರೆ ಮಾತ್ರ ಇದನ್ನು ಬಲವಾಗಿ ನಿಷೇಧ ಮಾಡಲಿಕ್ಕೆ ಸಾಧ್ಯ. ನಮ್ಮ ಉಲ್ಲಾಳ ಶಾಸಕರು ಒಂದು ಮಾತನ್ನು ಹೇಳಿದರು. ಸದನದಲ್ಲಿ ಇಲ್ಲದೇ ಇರತಕ್ಕಂಥ, ಸಮರ್ಥನೆ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗದಿರತಕ್ಕಂಥ ನಿತ್ಯಾನಂದ ಸ್ವಾಮಿಯವರನ್ನು ಈ ಸದನಕ್ಕೆ ಎಳೆದು ತರತಕ್ಕಂಥ ಪ್ರಯತ್ನ ಮಾಡಿದರು. ಏನು ಮಾಡುತ್ತೀರಿ? ನಮ್ಮ ಸಂಸ್ಕೃತಿಯಲ್ಲಿ ಸನ್ಯಾಸತ್ವ ಇದೆ. ಬೇರೆ ಸಂಸ್ಕೃತಿಯಲ್ಲಿ ಮೂರು, ಮತ್ತೊಂದು, ಮಗದೊಂದು ಮಾಡಿಕೊಳ್ಳಲಿಕ್ಕೆ ಅವಕಾಶ ಇದೆ. ಆ ರೀತಿ ಅವಕಾಶ ನಿತ್ಯಾನಂದ ಸ್ವಾಮಿಗಳಿಗೆ ಇಲ್ಲದಿರುವುದರಿಂದ, ಅದರ ಬಗ್ಗೆ ನೀವು ಟೀಕೆ ಮಾಡುವುದಕ್ಕೆ ಸಾಧ್ಯವಾಗುತ್ತಿದೆ.....

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ರೇವಣ್ಣನವರನ್ನು ನಾನು ಕರೆದಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ, ಮಾನ್ಯ ರೇವಣ್ಣನವರು ಈಗ ಮಾತನಾಡಲಿ.

(ಗೊಂದಲ)

ಅಧ್ಯಕ್ಷರು : ಯಾವುದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ.

(ಗೊಂದಲ)

ಶ್ರೀ ಸಿ.ಟಿ. ರವಿ : ನಾನು ಯಾವುದೇ ವ್ಯಕ್ತಿ, ಧರ್ಮವನ್ನುದ್ದೇಶಿಸಿ ಹೇಳಲಿಲ್ಲ..

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಈ ಬಿಲ್ ಬಗ್ಗೆ ರವಿಯವರು ಸುದೀರ್ಘವಾಗಿ ಮಾತನಾಡಿದರು ಆದರೂ ಅವರಿಗೇನು ಪ್ರಯೋಜನವಾಗುವುದಿಲ್ಲ, ಯಡಿಯೂರಪ್ಪನವರು ಅವರನ್ನು ಮಂತ್ರಿ ಮಾಡುವುದಿಲ್ಲವೆಂಬುದನ್ನು ದಯಮಾಡಿ ಅವರು ತಿಳಿದುಕೊಳ್ಳಬೇಕು. ರವಿಯವರು ಏನಾದರು ಮಂತ್ರಿಯಾಗಬೇಕಾದರೆ ನಮ್ಮ ಕಡೆ ಬರಬೇಕು, ಅಲ್ಲಿದ್ದರೆ ಯಾವುದೇ ಕಾರಣಕ್ಕೂ ಮಂತ್ರಿಯಾಗುವುದಿಲ್ಲ. ಯಡಿಯೂರಪ್ಪ 10 ವರ್ಷವಲ್ಲ 20 ವರ್ಷ ಕಳೆದರು ರವಿಯವರನ್ನು ಮಂತ್ರಿ ಮಾಡುವುದಿಲ್ಲ, ಅವರು ಏಕೆ ವಾದ ಮಾಡುವುದಕ್ಕೆ ಹೋಗುತ್ತಾರೆ? ಈ ಸದನ ದೇವರ ಒಂದು ಸಭೆ, ಇವತ್ತು ಪಶುಸಂಗೋಪನ ಸಚಿವರ ಬಗ್ಗೆ ಅಪಾರವಾದಂಥ ಗೌರವವಿದೆ, ಏಕೆಂದರೆ, ಈ ಬಿಲ್ ಅನ್ನು ಅವರ ಆತ್ಮಸಾಕ್ಷಿಗೆ ಅನುಗುಣವಾಗಿ ತಂದಿದ್ದಾರೋ ಇಲ್ಲವೋ ಎಂದು ನಾನು ಮೊದಲನೆಯದಾಗಿ ಪ್ರಶ್ನೆ ಮಾಡಬೇಕಾಗುತ್ತದೆ. ಏಕೆಂದರೆ, ಈ ಬಿಲ್‌ನಲ್ಲಿರುವ ಅಂಶ, ಏನಗಿದೆ ಎಂದರೆ, ಕಳೆದ 18 ತಿಂಗಳಿನಿಂದ ಒಂದು ಸಮಾಜ, ಒಂದು ಜನಾಂಗವನ್ನು ಗುರಿಯಾಗಿಟ್ಟುಕೊಂಡು ಎಷ್ಟು ತೊಂದರೆಯಾಗುತ್ತಿದೆ ಎಂಬುದನ್ನು ಕಣ್ಣಾರೆ ನೋಡುತ್ತಿದ್ದೇವೆ. ಈ ಬಿಲ್ ತಂದ ಮೇಲೆ ಇವತ್ತು ಇನ್ನೆಷ್ಟು ಎರಾಸ್ಮೆಂಟ್ ಆಗುತ್ತದೆಯೊ ಗೊತ್ತಿಲ್ಲ. ಈಗಾಗಲೇ ಕೆಲವು ಕಡೆ ಬಿಲ್ ತರದೆ ಪೋಲೀಸರಿಂದ ಎಷ್ಟು ಕಿರುಕುಳವಾಗುತ್ತಿದೆ ಎಂದರೆ, ಕೆಲವು ಸಮಾಜದ ಜನರ ಹತ್ತಿರ ಒಡವೆ ಏನು ಇಲ್ಲ, 10 ರೂಪಾಯಿ ಹಣವಿದ್ದರೂ ಕಿತ್ತುಕೊಳ್ಳುತ್ತಾರೆ, ಇವತ್ತು ಆ ಪರಿಸ್ಥಿತಿ ಬಂದಿದೆ, ಬೇಕು ಬೇಕು ಎಂದು ಕೇಸ್ ಹಾಕುವಂಥ ಪರಿಸ್ಥಿತಿ ಇವತ್ತು ಬಂದಿದೆ. ರವಿಯವರು, ಒಂದು ಸಮಾಜದ ಓಟು ನಮಗೆ ಬರುವುದಿಲ್ಲ, ಆ ಉದ್ದೇಶದಿಂದ ಈ ಬಿಲ್

ತಂದಿದ್ದೇವೆ ಎನ್ನುವ ಭಾವನೆಯನ್ನು ಇವತ್ತು ಸದನದಲ್ಲಿ ವ್ಯಕ್ತಪಡಿಸಿದ್ದಾರೆ. ಇವತ್ತು ಈ ಸದನದಲ್ಲಿ ಈ ಬಿಲ್ ತರುವಂಥ ಉದ್ದೇಶವೇನಿತ್ತು? 1964 ರಲ್ಲೇನು ಆಕ್ಟ್ ಇತ್ತೋ ಅದರಲ್ಲೇ ಎಲ್ಲಾ ಇದೆ, ಇದನ್ನು ಹೊಸದಾಗಿ ತರುವುದೇನಿತ್ತು? ಅಂದರೆ, ಒಂದು ಸಮಾಜವನ್ನು ಗುರಿಯಾಗಿಟ್ಟುಕೊಂಡು ಈ ಬಿಲ್ ಅನ್ನು ಮಂಡಿಸಿದ್ದರೆ ಎನ್ನುವ ಭಾವನೆ ಇಡೀ ರಾಜ್ಯಕ್ಕಲ್ಲ, ಇಡೀ ದೇಶಕ್ಕೆ ಗೊತ್ತಾಗುತ್ತಿದೆ. ಏಕೆಂದರೆ, ಇವತ್ತು ಗುಜರಾತಿನಲ್ಲಿ ಅವರದೆ ಸರ್ಕಾರವಿದೆ, ಈ ಬಿಲ್ ಅನ್ನೇನಾದರು ತಂದಿದ್ದಾರಾ? ಇವತ್ತು ರವಿಯವರು, KMF ನಲ್ಲಿ ಎರಡೂವರೆ ಲಕ್ಷ ಲೀಟರ್ ಹಾಲು ಕಮ್ಮಿಯಾಗಿದೆ ಎಂದು ಹೇಳುತ್ತಿದ್ದರು, ಇವತ್ತು 40 ಲಕ್ಷ ಇದ್ದದ್ದು 30 ಲಕ್ಷಕ್ಕೆ ಬಂದಿದೆ. ಏಕೆಂದರೆ, ಇಡೀ ರಾಷ್ಟ್ರದಲ್ಲಿ ಹಾಲಿಗೆ ಅತಿ ಕಮ್ಮಿ ಅಂದರೆ, ಹನ್ನೆರಡುವರೆ ರೂಪಾಯಿ ಬೆಲೆ ಒಂದು ಲೀಟರ್‌ಗೆ ಕೊಡುತ್ತಿದ್ದಾರೆ, ಇವರು ದನಕರುಗಳಿಗೆ ಹುಲ್ಲಾಕಲು ಆಗುತ್ತಿಲ್ಲ, ಹನ್ನೆರಡೂವರೆ ರೂಪಾಯಿ ಒಂದು ಲೀಟರ್‌ಗೆ ರೇಟ್ ಕೊಟ್ಟು ಈ ಸರ್ಕಾರ ಬಂದ ಮೇಲೆ 18 ತಿಂಗಳಿನಿಂದ ದನಕರುಗಳನ್ನು ಸಾಯಿಸುತ್ತಿದ್ದಾರೆ. ಅದರ ಬಗ್ಗೆ ಚಿಂತನೆ ಮಾಡುವುದು ಬಿಟ್ಟು, ಹಸುಗಳಿಗೆ ಮೇವು ಕೊಡಬೇಕು, ಒಳ್ಳೆಯ ಉತ್ತಮವಾದಂಥ ಬೆಲೆ ಕೊಡಬೇಕು, ಹಸುಗಳನ್ನು ಸಾಕಬೇಕೆನ್ನುವ ಕಾರ್ಯಕ್ರಮವಿಲ್ಲ. ಇಲ್ಲಿ ಯಾವುದೊ ಒಂದು ಸಮಾಜವನ್ನ ಗುರಿಯಾಗಿಟ್ಟುಕೊಂಡು, 7 ವರ್ಷ ಜೈಲು, 1 ಲಕ್ಷ 50 ಸಾವಿರ ದಂಡ, ಇದರಿಂದೆ ಏನಾಗುತ್ತದೆಂದರೆ, ಈ ಪಕ್ಷಕ್ಕೆ ಯಾರು ಓಟು ಕೊಡುವುದಿಲ್ಲವೆನ್ನುವ ಒಂದೇ ಒಂದು ದುರುದ್ದೇಶವನ್ನಿಟ್ಟು ಕೊಂಡು ಅವರ ಮೇಲೆ ಒಂದು ಸೇಡಿನ ರಾಜಕೀಯ ಮಾಡುವ ಕಾರ್ಯಕ್ರಮವಾಗಿದೆ. ಯಡಿಯೂರಪ್ಪನವರಿಗೆ ಮನವಿ ಮಾಡುವುದಿಷ್ಟೆ, ಈ ಬಿಲ್ಲಿನಿಂದ ನಿಮ್ಮ ಸರ್ಕಾರ ಉರುಳುವಂಥ ಸನ್ನಿವೇಶ ಬರುತ್ತದೆ, ಅದಾಗುವುದು ಬೇಡ, ನೀವು ಇನ್ನು 5 ವರ್ಷ ಅಧಿಕಾರದಲ್ಲಿರಬೇಕು, ಆ ದೃಷ್ಟಿಯಿಂದ ಈ ಬಿಲ್ ಅನ್ನು ವಾಪಸ್ ತೆಗೆದುಕೊಳ್ಳಿ. ಈ ಬಿಲ್ ಅನ್ನು ನೀವೇನಾದರೂ ತಂದು ಮಂಡನೆಯಾಗಿ, ನಾಳೆ ಜಾರಿಗೆ ಬಂದರೆ, ಖಂಡಿತಾ ಯಡಿಯೂರಪ್ಪನವರ ಸರ್ಕಾರ ಹೋಗುತ್ತದೆ. ಅದಾಗಬಾರದು, ಅವರು ಇನ್ನು 2 ವರ್ಷ ಉಳಿಯಬೇಕು. ಆ ದೃಷ್ಟಿಯಿಂದ ಈ ಬಿಲ್ ಅನ್ನು ವಾಪಸ್ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇನೆ. ಯಡಿಯೂರಪ್ಪನವರು ಇನ್ನು 5 ವರ್ಷ ಅಧಿಕಾರ ದಲ್ಲಿರಬೇಕೆನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆ, ನಾನು ಇನ್ನ್ಯಾವುದೇ ಬೇರೆ ಉದ್ದೇಶದಿಂದ ಹೇಳುತ್ತಿಲ್ಲ. ಏಕೆಂದರೆ, ಈ ಬಿಲ್‌ನಿಂದ ಅವರಿಗೆ ಅಪಾಯ,

ಈ ಅಪಾಯವಾಗುವುದನ್ನು ತಪ್ಪಿಸಿಕೊಳ್ಳಬೇಕೆಂದರೆ, ಈ ಬಿಲ್ ಅನ್ನು ವಾಪಸ್ ತೆಗೆದುಕೊಳ್ಳಲೆಂದು ನಾನು ಮನವಿ ಮಾಡುತ್ತೇನೆ. ಮತ್ತೆ ಈ ಬಿಲ್‌ನಲ್ಲಿ ಏನು ಉದ್ದೇಶವಿದೆ ಸ್ವಾಮಿ? ಏನಾದರು ಒಂದು ಒಳ್ಳೆಯ ಉದ್ದೇಶವಿದ್ದು, ಉದಾಹರಣೆಗೆ ನೀವೇನಾದರೂ ತಪ್ಪಿಸುವುದಕ್ಕಾಗುತ್ತದೆಯೇ? ನಾವೇನು ಗೋಹತ್ಯೆ ಮಾಡಿ ಎಂದು ಹೇಳುತ್ತಿಲ್ಲ. ಆದರೆ ಈ ಬಿಲ್ ತಂದು, ಈಗ ಒಂದು ಮನೆಯವರು ನಮಗೆ ಆಗುವುದಿಲ್ಲ, 2 ಕೆ.ಜಿ.ಮಟನ್ ತಂದಿಟ್ಟರೆ, ಬೇಕೆಂದು ಅವರ ಮೇಲೆ ಸುಳ್ಳು ಕೇಸು ಹಾಕುವುದು. ಆ ಕೆಲಸ ಮಾಡುವುದಿದ್ದರೆ ಈ ರಾಜ್ಯದಲ್ಲಿ ದಂಗೆ ಏಳುತ್ತದೆ, ದಂಗೆ ಏಳಿಸಬೇಕೆಂದಿದ್ದರೆ ಮಾಡಲಿ ನಮ್ಮದೇನು, ಮಾಡಲಿ. ಯಡಿಯೂರಪ್ಪನವರ ಭವಿಷ್ಯಕ್ಕೋಸ್ಕರ ಈ ಬಿಲ್ ಅನ್ನು ಅವರು ವಾಪಸ್ ತೆಗೆದುಕೊಳ್ಳಲಿ, ಅವು ಉಳಿದುಕೊಂಡು 5 ವರ್ಷ ಒಳ್ಳೆಯ ಕೆಲಸ ಮಾಡಲಿ ಎಂದು ನಾನು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಈಗ ಶ್ರೀ ಸೈಯದ್ ಯಾಸೀನ್ ಅವರು.

ಶ್ರೀ ಸೈಯದ್ ಯಾಸೀನ್ (ರಾಯಚೂರು) : ಮಾನ್ಯ ಸಭಾಧ್ಯಕ್ಷರೇ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. I feel our House is very matured with all intellectuals, Even our Opposition Leaders are also matured and all our leaders present here, including MLAs have got good experience, intellectual background, education and thinking. We are here to protect the larger interest of the nation as well as the weaker section to protect the fundamental rights as well as to maintain the national integration. On the Other side Government has been continuously committing and to ensure safety and security of all citizens, peace and communal harmony in the State and also we have been mentioning about equal rights, equal share and social justice etc. ಇದೆಲ್ಲಾ ಬಹಳ ಚೆನ್ನಾಗಿರುವಂತಹ ವಿಷಯ. The press people and the general public and also Scheduled caste, Scheduled, Tribe, the major population weaker section, minorities are all surprised today as to why this bill has been introduced in the House. It is really a surprise. It is not necessary at this junction. After the hit of our flood and calamities, we had to face global recession and we had to face lot of crisis and other development programmes in our State. These are our priorities.

This bill unnecessarily creates nuisance, it gives bad undemocratic taste and it creates resentment among the large population such as Scheduled Caste, Scheduled Tribes, Minorities weaker sections, even in general public. This bill is concerned about three issues. One is economic concern, about what our Jayachandraji and our Hon'ble Leader of Opposition Sri Sidramaiahji have mentioned rightly and other thing is the food habitat and also an emotional issue. Sir, already our colleagues and friends have mentioned in their speech that; this bill has been passed in the year 1964 in the name of "Mysore Prevention Slaughter and Cattle Prevention" At the same time it was replaced as the Karnataka Prevention of Slaughter and Prevention act 1964. With the result through the said Act and our Government has banned the slaughter of cows and calf, she buffalos and he buffalos. Here it was commonly expected by everyone in the country and most of the States and most of the communities as our colleagues have already mentioned that we respect cows, because the major population respect and we have got regards also, we have already accepted. This is not a cow slaughter Bill. We have already accepted this Bill. The cattle slaughtering, unnecessarily is a nuisance and it is attacking such Bill in the august House. It reflects on the Government, because it is directly an attack on the food habitat's fundamental rights. Unnecessarily this bill is challenging the food habitat and also attacking the major population of our State. Food habit is nothing nut a natural selection, it is adaptive character, for which our great fundamental rights protect us and approve our food habitat, which are given by our society and population. Beef eating is the universal phenomenon. For example Our Government is encouraging the fisheries and inland fisheries. Why? Because we want to encourage protein food for a common man. If beef is there, it has nothing to do with it. For availability of beef, he cattle and she cattle be restored, the cow, calf whatever it may

be. Sir, by this bill we are attacking the fundamental rights. We cannot go against natural selection. We cannot go against the food habitat; we cannot go against the fundamental rights. It is not going to help our population, nor its economic growth or administration.

Sir, our priority is the growth of the State and the social justice. We have to protect the fundamental righta. It is totally important, so I request the Honble Speaker and Hon'ble Chief Minister to Withdraw this bill. Thank you, Thank you very much.

ಶ್ರೀ ಬಿ.ಸಿ. ನಾಗೇಶ್ (ತಿಪಟೂರು) : ಮಾನ್ಯ ಅಧ್ಯಕ್ಷರೆ, ಪ್ರಪಂಚದಲ್ಲಿ ಕಾರ್ಬನ್ ಕಂಟೆಂಟ್ಸ್ ಜಾಸ್ತಿಯಾಗುತ್ತಿರುವ ಕಾರಣಕ್ಕೋಸ್ಕರ ಏನೇನಾಗುತ್ತಿದೆ ಎಂದು ನೋಡಿ global warming ಎಂದು ಎಲ್ಲಾ ದೇಶದವರು ಹೇಳುತ್ತಿರುವಂತಹ ಕಾಲದಲ್ಲಿ ನಾವು ನೋಡುತ್ತಿದ್ದೇವೆ, ದಿನಾ ಬೆಳಿಗ್ಗೆ ಎದ್ದು ಟಿ.ವಿ.ಯಲ್ಲಿ ಕೇಳುತ್ತಿದ್ದೇವೆ. ಭಾರತ ದೇಶದಲ್ಲಿ global warming ಬರಬಹುದು ಎಂಬ ಯೋಚನೆಗಳು ತುಂಬಾ ಹಿಂದಿನಿಂದಲೂ ನಡೆದವು. ಪವರ್ ಬಗ್ಗೆ ನಾವು ಸಾಕಷ್ಟು ಯೋಚನೆಗಳನ್ನು ಮಾಡುತ್ತಾ, ನಾವು ಹಸುವಿಗೆ ಬರೀ ಹಾಲು ಕೊಡುವ ಒಂದೇ ವಿಧಾನದಲ್ಲಿ ಯೋಚನೆ ಮಾಡಿಲ್ಲ. ಹಸು ಪವರ್‌ಗೆ alternate ಎಂದು ಈ ದೇಶದಲ್ಲಿ ನಮ್ಮ ಪೂರ್ವಜರು ಯೋಚನೆ ಮಾಡಿದ್ದರು. ಮುಂದಿನ ದಿನಗಳಲ್ಲಿ ಪೆಟ್ರೋಲ್ ಮತ್ತೊಂದು ಸಿಗದೇ ಇರುವಂತಹ ಕಾಲದಲ್ಲಿ ಆ ದೇಶದಲ್ಲಿ ಪವರ್ ಎನ್ನುವುದಾದರೆ bullock cart ಮತ್ತು horse ಈ ತರಹದ ಯೋಚನೆಗಳನ್ನು ಮಾಡಿದಂತಹ ದೇಶ. ಅದಕ್ಕೋಸ್ಕರ ಈ ದೇಶದಲ್ಲಿ ಗೋ ಸಂತಾನವನ್ನು ಬರೀ ದೇವರು ಎನ್ನುವುದು ಒಂದೇ ಅಲ್ಲದೆ ಇದು ಈ ದೇಶದ ಎಕಾನಮಿ ಹಿಂದಿರುವಂತಹ back bone ಎಂದೂ ಕೂಡ ಈ ದೇಶದಲ್ಲಿ ಯೋಚನೆ ಮಾಡಿದ್ದರು. ಇದು ಅಷ್ಟೇ ಅಲ್ಲದೇ, ಈಗಿನ ಮೆಡಿಕಲ್ ರೀಸರ್ಚ್‌ಗಳು ಸಾಕಷ್ಟು ನಡೆಯುತ್ತಿವೆ. ಬೇಕಾದಷ್ಟು ರೋಗಗಳಿಗೆ ಔಷಧಿ ಇಲ್ಲ ರೋಗಗಳಿಗೆ ಗೋವಿನ ಗಂಜಲದ ಮೂಲಕ ಔಷಧಿಗಳು ತಯಾರಾಗುತ್ತಿರುವುದು ನಮಗೆಲ್ಲರಿಗೂ ಗೊತ್ತಾಗುತ್ತಿದೆ. ಮೊನ್ನೆ ಒಂದು magazine ನಲ್ಲಿ ನಾನು ಓದುತ್ತಿದ್ದೆ. ಕೇರಳದ ಕೇಲ್ಕರ್ ಎಂಬ ಹಸುವಿನ ಹಾಲು ಮತ್ತು ಗಂಜಲ

O.32 F-32

ಉಪಯೋಗಿಸಿದರೆ, initial stage of cancer ಸಹಿತ ವಾಸಿಯಾಗುತ್ತದೆ ಎನ್ನುವಂತಹ ಮಾತಿದೆ. ಈ ತರಹದ ರೀಸರ್ಚ್‌ಗಳು ನಡೆಯಬೇಕು ಎನ್ನುವುದಾದರೆ, ಮುಂದಿನ ದಿನಗಳಲ್ಲಿ ಬಡವನೂ ಔಷಧಿ ತೆಗೆದುಕೊಂಡು ಬದುಕಬೇಕೆಂಬ ರೀಸರ್ಚ್ ಆಗಬೇಕಾದರೆ, ಗೋವಂಶಗಳು ಉಳಿದುಕೊಳ್ಳ ಬೇಕು. ಆ ಗೋ ವಂಶಗಳು ಉಳಿದುಕೊಳ್ಳುವುದರ ಮೂಲಕ, ಗಂಜಲದ ಮೂಲಕ ಆ ಪ್ರಪಂಚ ಉಳಿಯಬೇಕೆನ್ನುವ ಸ್ಥಿತಿಗೆ ಬರಬೇಕಾದರೆ, ಗೋ ಹತ್ಯೆ ನಿಲ್ಲಬೇಕು. ಗೋ ಹತ್ಯೆ ನಿಲ್ಲಬೇಕಾದರೆ ಈಗ ನಮ್ಮ ಸರ್ಕಾರ ತಂದಿರುವಂತಹ Act implement ಆಗಬೇಕು. ಆಗ ಮಾತ್ರ ಗೋ ಹತ್ಯೆ ನಿಲ್ಲುತ್ತದೆ. ಆ ಕಾರಣಕ್ಕೋಸ್ಕರ ಸರ್ಕಾರ ಈ ಬಿಲ್ಲನ್ನು ತಂದಿರುವುದು ತುಂಬಾ ಶ್ಲಾಘನೀಯ. ಮಾನ್ಯ ರವಿ ಅವರು ಹೇಳಿದ ಹಾಗೆ Act ಅನ್ನು ಇನ್ನೂ strict ಆಗಿ implement ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ಇವರು ತಂದಿರತಕ್ಕಂತಹ ಬಿಲ್, ಬಡವರಿಗೆ ಮಾರಕವಾದುದು. ಕಾರಣ ನಾವು ಗೆದ್ದಿರುವುದೇ ಹಾಗೆ. ಮಾಂಸ ತಿನ್ನುವವರನ್ನು ಒಂದು ಮಾಡಿಕೊಂಡು ಗೆದ್ದಿರುವುದು. ಇದು ಇವತ್ತಿನದು ಅಲ್ಲ. ದ್ವಾಪರಯುಗದಲ್ಲಿ ರಾಜಸೂಯ ಯಾಗ ತ್ಯಾಗ ಮಾಡಿದಾಗಲೂ ಹೋರಿ ಕಡಿದೇ ಮಾಡಿರುತ್ತಾರೆ. ಈ ರಾಷ್ಟ್ರದಲ್ಲಿ ಇತಿಹಾಸ ಇದೆ. ದ್ವಾಪರಯುಗ, ಕಲಿಯುಗ, ತ್ರೇತಾಯುಗ, ಹಾಗೂ ಇವತ್ತಿನವರೆಗೂ ನಡೆದುಕೊಂಡು ಬಂದಿದೆ. ಈ ಕಾಯಿದೆ ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಇದೆ. ಅದಕ್ಕೆ ಒತ್ತು ಕೊಡುವಂತಹ ಅವಶ್ಯಕತೆ ಇಲ್ಲ. ಮಾಂಸ ತಿನ್ನುವುದು ನಮ್ಮ ಹಕ್ಕು. ನಾವೆಲ್ಲಾ 85% ಮಾಂಸ ತಿನ್ನುವವರೇ ಇಲ್ಲಿರುವುದು. ನಮ್ಮ ಹಕ್ಕು ಕಿತ್ತುಕೊಳ್ಳುವುದಕ್ಕೆ ಸರ್ಕಾರ ಯಾರು? ನಮಗೆ ಬೇಕಾದ ಮಾಂಸವನ್ನು ನಾವು ತಿನ್ನುತ್ತೇವೆ. ಒಬ್ಬರು ಹಂದಿ ತಿನ್ನುತ್ತಾರೆ, ಒಬ್ಬರು ಕುರಿ ತಿನ್ನುತ್ತಾರೆ, ಒಬ್ಬರು ಕೋಳಿ ತಿನ್ನುತ್ತಾರೆ. ಅದು ವೈಯುಕ್ತಿಕವಾದ ವಿಚಾರ. ಅದಕ್ಕೆ ನೀವೇಕೆ ತೊಂದರೆ ಕೊಡುತ್ತೀರಿ ಎನ್ನುವುದು ಮೂಲಭೂತವಾದ ಪ್ರಶ್ನೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಕ್ಯಾಬಿನೆಟ್ ಕಲೀಗ್ಸ್ ರಾಷ್ಟ್ರದಲ್ಲಿ ಮಾರುಕಟ್ಟೆ ದರ ನಿಯಂತ್ರಣ ಆಗುತ್ತಿಲ್ಲ, ಕಂಟ್ರೋಲ್ ಆಗುತ್ತಿಲ್ಲವೆಂದು ಸೈಕಲ್ ಹೊಡೆದುಕೊಂಡು ರಾಜಭವನಕ್ಕೆ ಹೋಗಿ ಮನವಿಯನ್ನು ಕೊಟ್ಟು ಬಂದೆವು. ಇವತ್ತು ಅಂತರ

ರಾಷ್ಟ್ರೀಯ ಮಟ್ಟದಲ್ಲಿ ಮಾರುಕಟ್ಟೆ ದರದಲ್ಲಿ ಮತ್ತೆ 13% food articles price ಜಾಸ್ತಿಯಾಗುತ್ತಿರುವಂತಹ ಸಂದರ್ಭದಲ್ಲಿ ನೀವು ಅದನ್ನು ಕಂಟ್ರೋಲ್ ಮಾಡುವುದು ಯಾವ ನ್ಯಾಯ? ಇವತ್ತು ಒಂದು ಕೇಜಿ ಮಟನ್ ಕುರಿ ಅಥವಾ ಮೇಕೆ ತೆಗೆದುಕೊಂಡರೆ 260 ರಿಂದ 270 ರೂ. ಆಗಿದೆ. ನೀವು ಅದನ್ನು ನಿಲ್ಲಿಸಿದರೆ 500 ರೂ. ಆಗುತ್ತದೆ. ಸರ್ಕಾರದವರು ಅದಕ್ಕೆ ಸಬ್ಸಿಡಿ ಕೊಡುತ್ತೀರಾ? ಅದನ್ನು announce ಮಾಡಿ. ಸರ್ಕಾರ ಏನಾದರೂ ಸಬ್ಸಿಡಿ ಕೊಡುವುದಿದ್ದರೆ ಪರವಾಗಿಲ್ಲ. ಇದು ಒಂದು ಕೆಟ್ಟ ತೀರ್ಮಾನವಾಗುತ್ತದೆ. ನಾನು ಜಾತಿ ಹೇಳುವುದಕ್ಕೆ ಬಯಸುವುದಿಲ್ಲ. ಅತ್ಯಂತ ಹಿಂದುಳಿದ ವರ್ಗ economic poor class ನವರು ಏನಿದ್ದಾರೆ ಅದನ್ನು ತಿನ್ನುತ್ತಾರೆ. ತಮಗೂ ಗೊತ್ತಿದೆ, ತಾವು ಕೂರ್ಗ್‌ನಿಂದ ಬಂದಿದ್ದೀರಿ ತಮಗೂ ಅನುಭವ ಇದೆ. ಇದು ಒಂದು ಕೆಟ್ಟ ತೀರ್ಮಾನವಾಗುತ್ತದೆ. ದಯಮಾಡಿ ಇದಕ್ಕೆ ಕಡಿವಾಣ ಹಾಕಬೇಕಾಗುತ್ತದೆ. ಇವತ್ತು ರಾಷ್ಟ್ರದಲ್ಲಿ 13% food grains ಕಡಿಮೆ ಆಗುತ್ತದೆ. ಇನ್ನೊಂದು ಎರಡು-ಮೂರು ವರ್ಷದಲ್ಲಿ ಈ ರಾಷ್ಟ್ರದಲ್ಲಿ ಹಾಹಾ ಕಾರ ಉಂಟಾಗಿ ತಿನ್ನುವುದಕ್ಕೆ ಊಟ ಸಿಗುವುದಿಲ್ಲ. ಅಂತಹ ಸಂದರ್ಭದಲ್ಲಿ ನೀವು slaughter amendment ತರತಕ್ಕಂಥದ್ದು ಎಷ್ಟು ನ್ಯಾಯ? ದಯಮಾಡಿ ಅವರು ಇವತ್ತು ಚಿಂತನೆ ಮಾಡಬೇಕು. ಈ ಆದೇಶ ಮಾಡುವುದರಿಂದ ಆರ್ಥಿಕವಾಗಿ ಹಿಂದುಳಿದಂತಹ ಜನಕ್ಕೆ ನಾವು ತೊಂದರೆ ಕೊಡುತ್ತಿದ್ದೇವೆ. ಪೊಲೀಸ್ ಇಲಾಖೆಗೆ ಹಬ್ಬ ಆಗಿ ಹೋಗುತ್ತದೆ. ದನಗಳನ್ನು ತೆಗೆದುಕೊಂಡು ಹಳ್ಳಿಗೆ ಹೊಡೆದುಕೊಂಡು ಹೋಗಬೇಕು. 25 ರಿಂದ 30,000 ರೂ. ಕೊಟ್ಟು ದನ ತೆಗೆದುಕೊಳ್ಳುತ್ತಾನೆ, 50,000ದ ಹೋರಿ ತೆಗೆದುಕೊಂಡು ಗಾಡಿಯಲ್ಲಿ ಊರಿಗೆ ತೆಗೆದುಕೊಂಡು ಹೋಗಬೇಕು. ಎಲ್ಲಾ ಕಡೆ ಪೊಲೀಸ್‌ನವರು ಕೈ ಒಡ್ಡುಕೊಂಡು ಕುಳಿತರೆ 50,000 ಎತ್ತು ಜೊತೆಗೆ ಅವರಿಗೆ 500 ರೂ. ಲಂಚ ಕೊಡಬೇಕು./ ಲಂಚಕ್ಕೆ ರಹದಾರಿ ತೆರೆದ ಹಾಗಾಗುತ್ತದೆ ಎಂದು ನನ್ನ ಭಾವನೆ. ಇದು ಒಂದು ಕೆಟ್ಟ ತೀರ್ಮಾನ ವಾಗುತ್ತದೆ. ದಯಮಾಡಿ ಇದನ್ನು ಕೂಡಲೇ ವಿತ್ ಡ್ರಾ ಮಾಡಬೇಕು: ಇವರ ಕಲ್ಪನೆ ತಪ್ಪಿದೆ. ಈ ರಾಜ್ಯದಲ್ಲಿ ಆರು ಕೋಟಿ ಜನರಲ್ಲಿ 4.5 ಕೋಟಿ ಮಾಂಸ ತಿನ್ನುವವರಿದ್ದೇವೆ ನಾವು. ನೀವು ನಮ್ಮನ್ನೆಲ್ಲಾ ಒಂದು ಮಾಡಿ ಕೊಡುತ್ತೀರಿ. ನಾನು ಚುನಾವಣೆಯಲ್ಲಿ ಗೆಲ್ಲಬೇಕಾದರೆ ಅದೇ ಆಗಿದ್ದು. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಯೋಚನೆ ಮಾಡಬೇಕು. ಯಾವ ಯಾವ

ಕ್ಷೇತ್ರದಲ್ಲಿ ಏನೇನಾಗುತ್ತದೆ ಎಂದು ಅವರಿಗೆ ಅನುಭವ ಇದೆ. ಈ ಕಾನೂನನ್ನು ಜಾರಿ ಮಾಡಿ ಕೊನೆಗೆ ತಾವೆಲ್ಲಾ ದುಃಖಕ್ಕೆ ಒಳಗಾಗಬೇಡಿ. ದಯಮಾಡಿ ವಾಪಸ್ ತೆಗೆದುಕೊಳ್ಳಿ, ನಾವು ನಿಮಗೆ ಧನ್ಯವಾದಗಳನ್ನು ಹೇಳಬೇಕಾಗುತ್ತದೆ. ಮಾಂಸ ತಿನ್ನುವವರನ್ನೆಲ್ಲಾ ಒಂದು ಮಾಡಿ ಕೊಡುತ್ತಿದ್ದೀರಿ. ನಮಗೆ ಬಹಳ ಖುಷಿ ಆಗುತ್ತಿದೆ. ಅದಕ್ಕೇನೂ ತೊಂದರೆ ಇಲ್ಲ. ಆದರೆ ಬಡವರು ಅಮಾಯಕರಾಗುತ್ತಾರೆ. ತೊಂದರೆಯಾಗುತ್ತದೆ. ಮಾನ್ಯ ಯಡಿಯೂರಪ್ಪನವರು ಇದರ ಬಗ್ಗೆ ಚಿಂತನೆ ಮಾಡಬೇಕು. ಹಳ್ಳಿಯಿಂದ ಬಂದವರು. ಹಳ್ಳಿಗಾಡಿನ ಹಿಂದುಳಿದ ವರ್ಗದ ಜನರ ಎಕಾನಮಿ ಲೈಫ್ ಏನಿದೆ, ಅದರ ಬಗ್ಗೆ ಅವರಿಗೆ ಅರಿವಿದೆ. ಹಾಗಾಗಿ ಅವರ ಕಾಲದಲ್ಲಿ ಈ ರೀತಿಯ ಮಸೂದೆಯನ್ನು ತರುವುದು ಯಾವ ನ್ಯಾಯ? ತಮ್ಮ ಮುಖಾಂತರ ಅವರಿಗೆ ವಿನಂತಿ ಮಾಡುತ್ತೇನೆ. ದಯಮಾಡಿ ಈ ಬಿಲ್ಲನ್ನು ವಾಪಸ್ಸು ಪಡೆಯಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ವಿ. ಶ್ರೀನಿವಾಸಪ್ರಸಾದ್ (ನಂಜನಗೂಡು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಹಾಗೂ ಸಂರಕ್ಷಣಾ ವಿಧೆಯಕದ ಬಗ್ಗೆ ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಇದನ್ನು introduction stage ನಲ್ಲಿಯೇ ನಾವೆಲ್ಲರೂ ಬಹಳ ತೀವ್ರವಾಗಿ ವಿರೋಧ ಮಾಡುತ್ತಿದ್ದೇವೆ. ಏಕೆಂದರೆ ಬಹಳ sensitive bill ಅದು. ಇದು ಬಹಳ ಸೂಕ್ಷ್ಮವಾದ ವಿಧೇಯಕವನ್ನು ಮಂಡಿಸುವುದಕ್ಕೆ ಹೋಗುತ್ತಿದ್ದೀರಿ. ಇದರ ಬಗ್ಗೆ ಬಹಳ ಪ್ರತಿಕೂಲವಾದ ವಿರೋಧ ಹಾಗೂ ಪ್ರತಿಭಟನೆಗಳು ಆಗಬಹುದು. ಈ ಬಿಲ್ಲನ್ನು ಮಂಡಿಸ ತಕ್ಕಂತಹ ಸಮಯದಲ್ಲಿ ನೀವು ಸ್ವಲ್ಪ ಎಚ್ಚರಿಕೆಯಿಂದ ಇರಬೇಕೆಂದು ಹೇಳಿ, ನಾವು ಈ ರೀತಿಯ ಬಹಳ ಸೂಕ್ಷ್ಮವಾದ ವಿಧೇಯಕಗಳನ್ನು ಮಂಡಿಸುವಾಗ ನಾನು ಪಾರ್ಲಿಮೆಂಟ್‌ದೂ ಕೂಡ ತೆಗೆದುಕೊಂಡು ಉದಾಹರಣೆ ಕೊಟ್ಟೆ.

(6-30 PM)

ಅಲ್ಲಿ Anti defection Law ಮಂಡಿಸತಕ್ಕಂಥ ಸಮಯದಲ್ಲಿ ಒಂದು ತರಹ ಉದ್ರಿಕ್ತವಾದಂಥ ವಾತಾವರಣ ಬಂತು. ಆಡಳಿತ ಪಕ್ಷದ ವತಿಯಿಂದಲೇ ಅದನ್ನು ವಾಪಸ್ ತೆಗೆದುಕೊಂಡರು ಎನ್ನತಕ್ಕಂಥ ವಿಷಯ ವನ್ನು ಕೂಡ ತಮ್ಮ ಗಮನಕ್ಕೆ ನಾನು ತೆಗೆದುಕೊಂಡು ಬಂದಿದ್ದೇನೆ. ಆದರೆ ಈಗ ಈ ವಿಧೇಯಕವನ್ನು ಮಂಡಿಸಿದ್ದೀರಿ. ಚರ್ಚೆ ಈಗ ಇನ್ನೂ ಪ್ರಾರಂಭ ವಾಗಿದೆ. ಬಹಳ ಬುದ್ಧಿವಂತಿಕೆಯಿಂದ ತಂದಿದ್ದೀರಿ. ಸಂವಿಧಾನದಲ್ಲಿ

ಸುಮಾರು 295 Articles ಇರತಕ್ಕಂಥದ್ದು. ಆ 295 Articles ನಲ್ಲಿ ಬಹಳ clever ಆಗಿ ಬಹಳ ಬುದ್ಧಿವಂತಿಕೆಯಿಂದ ಮತ್ತು ಉದ್ದೇಶಪೂರ್ವಕವಾಗಿ intentional ಆಗಿ ಕೂಡ ತಾವು Article 48 ರಲ್ಲೇನಿದೆ ಅದರಲ್ಲಿ ರಾಜ್ಯ ಸರ್ಕಾರಕ್ಕೆ ಇರತಕ್ಕಂಥ Within its limitations ಅಂತ ಹೇಳುತ್ತೇವೆ/ ಒಂದು ಇತಿಮಿತಿಯಲ್ಲಿ ಇದನ್ನು ತರತಕ್ಕಂಥ ಒಂದು ಪ್ರಯತ್ನವನ್ನು ನೀವು ಇಂದು ಮಾಡಿದ್ದೀರಿ. ಅಂದರೆ ಈಗಾಗಲೇ ಇರತಕ್ಕಂಥ 1964 ರ Act ಗೆ Refill ತರತಕ್ಕಂಥದ್ದನ್ನು ಮತ್ತು ಅದನ್ನು Replace ಮಾಡತಕ್ಕಂಥ ರೀತಿಯಲ್ಲಿ ಪ್ರಯತ್ನವನ್ನು ಈಗ ತಾವು ಮಾಡುತ್ತಿದ್ದೀರಿ. ಈಗಾಗಲೇ ಮಾತನಾಡಿರುವ ಸದಸ್ಯರುಗಳು ಅದರ ಬಗ್ಗೆ ಹೇಳಿದ್ದಾರೆ. ಮಾನ್ಯ ಸದಸ್ಯರಾದ ಡಿ.ಕೆ. ಶಿವಕುಮಾರ್‌ರವರು ಕೂಡ ಇದೊಂದು ಎಂಥ ದೊಡ್ಡ ಉದ್ಯಮವಾಗಿದೆ ಎನ್ನತಕ್ಕಂಥ ಹಿನ್ನಲೆಯಲ್ಲಿ ಅವರು ಮಾತನಾಡುವಾಗ ಹೇಳಿದರು. Biological ಎನ್ನುವುದಕ್ಕಿಂತ it is a habit ಎನ್ನತಕ್ಕಂಥದ್ದು. ಆಹಾರ ಒಂದು ಪದ್ಧತಿ ಎನ್ನತಕ್ಕಂಥದ್ದು. ಈ ಆಹಾರ ಪದ್ಧತಿಯನ್ನು ಯಾರಿಗೇ ಆಗಲಿ restrict ಮಾಡತಕ್ಕಂಥದ್ದು ತಪ್ಪಾಗುತ್ತದೆ ಎಂದು ನನ್ನ ಅಭಿಪ್ರಾಯ. Food ಎನ್ನತಕ್ಕಂಥದ್ದು habit ಎನ್ನುವುದು ನಿಮಗೆ ಗೊತ್ತಿದೆ, by birth vegetarians non vegetarians ಆಗಬಹುದು ಅಥವಾ non vegetarians, Vegetarins ಕೂಡ ಆಗಬಹುದು. ಅದು ಅಭ್ಯಾಸ ಬಲದಿಂದ ಹೋಗತಕ್ಕಂಥದ್ದು. ಅದು ಹೀಗೇ ಇರಬೇಕು ಎಂದು ಹೇಳತಕ್ಕಂಥದ್ದಲ್ಲ. ಆಹಾರ ಪದ್ಧತಿ ಎಂಬುದು ಬಹಳ ಹಿಂದಿನಿಂದಲೂ ಕೂಡ ನಡೆದುಕೊಂಡು ಬಂದಿರತಕ್ಕಂಥದ್ದು. ನಾನು ಮತ್ತೆ ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಈಗಗಲೇ ಮಾತನಾಡಿರುವ ಶಿವಕುಮಾರ್‌ರವರು ಅನೇಕ ಉದಾಹರಣೆಗಳನ್ನು ವೇದಗಳಿಂದ ಮತ್ತು ಈ ದೇಶದಲ್ಲಿರತಕ್ಕಂಥ spiritual leaders ವಿವೇಕಾನಂದರ ಬಗ್ಗೆ ಹೇಳಿದರು. ಅದೇ ರೀತಿ ನಮ್ಮ ಸ್ನೇಹಿತರಾದ ಆಹಾರ ಸಚಿವರು ಕೂಡ ಕುವೆಂಪುರವರ ಬಗ್ಗೆ ತಿಳಿಸಿದ್ದಾರೆ. ಎಲ್ಲವನ್ನೂ ಕೂಡ ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಅವರು ಹೇಳಿದ್ದು ಸರಿ, ಇವರು ಹೇಳಿದ್ದು ತಪ್ಪು ಎನ್ನತಕ್ಕಂಥದ್ದಲ್ಲ. ಆದರೆ ಇಲ್ಲಿ ಇಂಥ ಒಂದು ಸೂಕ್ಷ್ಮವಾದ ವಿಷಯದ ಬಗ್ಗೆ ಹಿಂದೆ ಇದ್ದದ್ದಕ್ಕೆ ಸ್ವಲ್ಪ ತಿದ್ದುಪಡಿಯನ್ನು ಮಾಡಿ ತಂದಿದ್ದೀರಿ. ಗೋಹತ್ಯೆ ನಿಷೇಧ ಆಗಬೇಕು ಎನ್ನತಕ್ಕಂಥದ್ದು

1965–66 ರಲ್ಲಿ ಮಾನ್ಯ ಮುಖ್ಯಮಂತ್ರಿಗಳೆ, ಈ ದೇಶದಲ್ಲಿ ದೊಡ್ಡ ಚಳುವಳಿಯಾಯಿತು. ನಿಮಗೆಲ್ಲರಿಗೂ ನೆನಪಿರಬೇಕು. ಯಾವ ಮಟ್ಟಕ್ಕೆ ಚಳುವಳಿಯಾಯಿತೆಂದರೆ ಆ ಗೋ ಹತ್ಯೆ ಚಳುವಳಿ ಈ ರಾಷ್ಟ್ರದ, ರಾಜಧಾನಿ ದೆಹಲಿಯಲ್ಲಿ ಬಹುಶಃ ಅಸಂಖ್ಯಾತ ಋಷಿಗಳಿಗೆಲ್ಲರಿಗೂ ತ್ರಿಶೂಲವನ್ನು ಕೊಟ್ಟು ಕಳುಹಿಸಿದ್ದರು. ನನಗೆ ಜ್ಞಾಪಕವಿದೆ. ಅವರು ತಮ್ಮ ತ್ರಿಶೂಲಗಳನ್ನು ಹಿಡಿದುಕೊಂಡು ದೆಹಲಿಯ ಪಾರ್ಲಿಮೆಂಟ್ ಗೇಟ್‌ನ್ನು ಕ್ರಾಸ್ ಮಾಡಿ ಹೊರಟುಹೋದರು. ಬಹಳ ರೌದ್ರಾವತಾರವನ್ನು ತಾಳಿ ತ್ರಿಶೂಲಗಳನ್ನು ಹಿಡಿದು ಒಳಗೆ ಹೋದಾಗ ಗೋಲಿಬಾರ್ ಆಗಿ ಅನೇಕ ಋಷಿಗಳು ಸತ್ತರು. ಅದು ಆದಮೇಲೆ ಬಹುಶಃ ಅದು ಅಲ್ಲಿಯೇ ನಿಂತಿತ್ತು. ಗೋಹತ್ಯೆ ಚಳುವಳಿ ಎನ್ನತಕ್ಕಂಥದ್ದು ಇರಲಿಲ್ಲ. ಆದರೆ ಬರುತ್ತಾ ಬರುತ್ತಾ ಈ ಗೋ–ಹತ್ಯೆ ಚಳುವಳಿಯನ್ನು ಯಾರು ಸಂಘಟನೆಯನ್ನು ಮಾಡಿದ್ದರು, ಗೋ ಹತ್ಯೆ ನಿಷೇಧ ಆಗಬೇಕು ಎನ್ನತಕ್ಕಂಥದ್ದನ್ನು ಪ್ರತಿಪಾದಿಸುತ್ತಾ ಬರತಕ್ಕಂಥವರಿಗೆ ಒಂದು Political momentum ಸಿಕ್ಕಿ ಇದು ತುಂಬಾ ಜಾಸ್ತಿಯಾಯಿತು. ಅಲ್ಲಿಯವರೆವಿಗೆ ಇದು ಈ ರೀತಿ ನಡೆದಿರಲಿಲ್ಲ. ಕರ್ನಾಟಕದಲ್ಲಿ ಬಂದಿರತಕ್ಕಂಥದ್ದು ಅದೇ ರೀತಿಯೆ. ಅಲ್ಲಿಯವರೆವಿಗೂ ಇದರ ಸೊಲ್ಲೇ ಇರಲಿಲ್ಲ. 1964 ರ Act ಇದ್ದೇ ಇತ್ತು. ಯಾವ ತರಹ ನಿಬಂಧನೆಗಳು ಮತ್ತು ಏನು ಮಾಡಬೇಕು ಎಂಬ ಬಗ್ಗೆ Act ನಲ್ಲಿತ್ತು. ಹೀಗಿರುವಾಗ ಮತ್ತೆ ಏಕೆ ಇದನ್ನು ಇಲ್ಲಿ ತಂದಿರಿ? ಯಾವಾಗ ರಾಜಕೀಯವಾಗಿ ಒಂದು ಪಕ್ಷ ಗರಿಗೆದರಿಕೊಳ್ಳುವುದಕ್ಕೆ ಶುರುವಾಯಿತೋ ಬಹುಶಃ ಆ ರೀತಿ ಮತ್ತೆ ಇದರ ಕೂಗು ಹೆಚ್ಚು ಹೆಚ್ಚಾಗುತ್ತಾ ಬಂತು. ಬಹುಶಃ ಅದರ ಪ್ರತಿಫಲ ನೀವು ಇವತ್ತು ಅಧಿಕಾರಕ್ಕೆ ಬಂದಿದ್ದೀರಿ, ಈಗ ಮತ್ತೆ ಇದನ್ನು ತರತಕ್ಕಂಥ ಪ್ರಯತ್ನಗಳನ್ನು ಮಾಡುತ್ತಿದ್ದೀರಿ. Article 48 ರಲ್ಲಿರುವುದನ್ನು ನಮ್ಮ ಆಚಾರ್ಯರು ಹೇಳಿದರು, ಅದು agriculture and veterinary ಯಲ್ಲಿ ಇರತಕ್ಕಂಥದ್ದನ್ನು ಯಾವ ರೀತಿಯಾದಂಥ ರೀತಿಯಲ್ಲಿ ಕೃಷಿ ಮತ್ತು ಪಶು ಸಂಗೋಪನೆ ದೃಷ್ಟಿಯಲ್ಲಿ ಏನು ಆಗಬೇಕು ಎನ್ನತಕ್ಕಂಥದ್ದನ್ನು ಹೇಳಿದರು. In shell particular ಎನ್ನತಕ್ಕಂಥದ್ದನ್ನು ಅವರು ಹೇಳಿದರು. ಬಹುಶಃ ಅದನ್ನು cattle slaughter ಎನ್ನತಕ್ಕಂಥದ್ದರ ಬಗ್ಗೆ ಮಾತನಾಡತಕ್ಕಂಥದ್ದರ ಸಂದರ್ಭದಲ್ಲಿ ಕೂಡ ಅವರು ಬಹಳ ಒತ್ತು ಕೊಟ್ಟು ಹೇಳುತ್ತಿದ್ದಾರೆ. ಇದಕ್ಕೆಲ್ಲಕ್ಕಿಂತ ಹೆಚ್ಚಾಗಿ ನಿಮ್ಮ ತಲೆಯಲ್ಲಿ ಇರತಕ್ಕಂಥದ್ದು religious sentiments ಎನ್ನತಕ್ಕಂಥದ್ದು.

ಆ ಧಾರ್ಮಿಕ ಭಾವನೆಗಳಿದೆಯಲ್ಲ ಬಹುಶಃ ಅದನ್ನು ನಿಮ್ಮಿಂದ ತೆಗೆಯುವುದಕ್ಕೆ ಆಗುತ್ತಿಲ್ಲ. ಎಲ್ಲ ಗೊತ್ತಿದೆ ನಿಮಗೆ, ಇದು ವೈಜ್ಞಾನಿಕವಾದಂಥದ್ದು it is so irrational, unscientific, unrealistic, it is impracticable to implement ಎನ್ನತಕ್ಕಂಥದ್ದು ತಮಗೆಲ್ಲರಿಗೂ ಗೊತ್ತಿರತಕ್ಕಂಥದ್ದೇ ಆಗಿದೆ. ಶ್ರೀ ಸುರೇಶ್‌ಕುಮಾರ್ ಮತ್ತು ಮುಖ್ಯಮಂತ್ರಿಗಳೆ ಇದರ ಬಗ್ಗೆ ನಿಮಗೇನು ಹೇಳಿಕೊಡಬೇಕಾಗಿಲ್ಲ. ಮುಖ್ಯಮಂತ್ರಿಗಳೆ, ಇದನ್ನು ಅನುಷ್ಠಾನಕ್ಕೆ ತರತಕ್ಕಂಥದ್ದು ಬಹಳ ಕಷ್ಟವಿದೆ. ಯಾವತ್ತೂ ಕೂಡ ತಿಳಿದುಕೊಳ್ಳಿ, ನಾವು ಯಾವುದೇ ಕಾಯಿದೆಯನ್ನು ಮಾಡಿದರೂ ಕೂಡ, ಯಾವುದೇ ರೀತಿಯಾದ ಕಾನೂನುಗಳನ್ನು ಮಾಡಿದರೂ ಕೂಡ ಪ್ರಾಕ್ಟಿಕಲಿ ನಾವು ಯೋಚನೆಯನ್ನು ಮಾಡಬೇಕು. Whethar it is practicable? ನಾವು ಅದನ್ನು ಕಾರ್ಯಗತಕ್ಕೆ ತರುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಅನುಷ್ಠಾನ ಮಾಡುವುದು ಬಹಳ ಕಷ್ಟಕರವಾಗಿರುವಂಥದ್ದು. ಇದು ನಿಮಗೆ ಗೊತ್ತಿದ್ದರೂ ಕೂಡ ನಿಮಗೆಲ್ಲೋ ಒಂದು ರೀತಿಯಾದಂಥ ರೀತಿಯಲ್ಲಿ ಧಾರ್ಮಿಕ ಭಾವನೆಗಳು ಬಾಧಿಸುತ್ತಿವೆ. ಕಾಣದ ಕೈಗಳು ಇದರ ಹಿಂದೆ ನಿಮಗೆ ಇರತಕ್ಕಂಥದ್ದು. ನಾನು ಅದರ ಬಗ್ಗೆ ಪ್ರತ್ಯೇಕವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮನ್ನು ಕೆರಳಿಸತಕ್ಕಂಥ ರೀತಿಯಲ್ಲಿ, ನಿಮಗೆ ಅಧಿಕಾರ ಸಿಕ್ಕಿರುವಾಗ ನೀವು ಇದನ್ನು ಏಕೆ ಮಾಡಬಾರದು ಎನ್ನತಕ್ಕಂಥ ರೀತಿಯಲ್ಲಿ ನಿಮ್ಮ ಮೇಲೆ ಒತ್ತಡಗಳು ಕೂಡ ಇದೆ ಎನ್ನತಕ್ಕಂಥದ್ದು ನಮಗೂ ಕೂಡ ಅರ್ಥವಾಗುತ್ತಿದೆ. ಇದರ ಬಗ್ಗೆ ನಾವು ಕೂಡ ಅರ್ಥ ಮಾಡಿಕೊಳ್ಳುತ್ತಿದ್ದೇವೆ. ಧಾರ್ಮಿಕ ಭಾವನೆಯ ಹಿನ್ನಲೆ ಇದೆ ಎಂದು ನಾನು ಮಾತನಾಡಿದೆ. ನೀವು ಇಷ್ಟೆಲ್ಲಾ ಮಾಡುತ್ತೀರಲ್ಲ, Article 48 ರಲ್ಲಿರುವುದನ್ನು ತೆಗೆದುಕೊಂಡಿರತಕ್ಕಂಥದ್ದು, ಬಹಳ ಮುಖ್ಯವಾಗಿ ನೀವು ಧಾರ್ಮಿಕ ಭಾವನೆಗಳ ಹಿನ್ನಲೆಯಲ್ಲಿ ನೋಡಿದರೆ ನಮ್ಮಲ್ಲಿ ಗೋವು ಒಂದು ಮಾತೆ, ಪೂಜ್ಯವಾದಂಥ ಒಂದು ಪ್ರಾಣಿ ಎಂದು ಇರತಕ್ಕಂಥದ್ದು, ನಾನು ಅನೇಕಾರು ಸಲ ಹೇಳಿದ್ದೇನೆ. ಹಿಂದೂ ಧರ್ಮದಲ್ಲಿರತಕ್ಕಂಥ ಮುಖ್ಯವಾದಂಥ stigma ಬಗ್ಗೆ ನಾವೆಲ್ಲರೂ ಕೂಡ ಅರ್ಥ ಮಾಡಿಕೊಳ್ಳಬೇಕು. ಇಲ್ಲಿರತಕ್ಕಂಥ ಕಳಂಕ ಯಾವುದು ಎನ್ನತಕ್ಕಂಥದ್ದು. ಗೋ ಹತ್ಯೆ ಒಂದು ಕಡೆ ಇಡೋಣ ಅಥವಾ ರಾಮ ಮಂದಿರ ಕಟ್ಟಬೇಕು ಎಂದು ಒಂದು ದೊಡ್ಡ ಆಂದೋಲನ, ಚಳುವಳಿ ಕೂಡ ಆಗುತ್ತಿರತ್ಕಕಂಥದ್ದು ಇದೆ. ಇವೆಲ್ಲ ಹಿಂದೂ

ಧರ್ಮಕ್ಕೆ ಅಂಟಿರತಕ್ಕಂಥ ಕಳಂಕ. ಇವತ್ತು ಹಿಂದೂ ಧರ್ಮ ಜಗತ್ತಿನಲ್ಲಿ ತಲೆ ಎತ್ತದೇ ಇರತಕ್ಕಂಥ ರೀತಿಯಲ್ಲಿ, ತಲೆ ತಗ್ಗಿಸತಕ್ಕಂಥ ರೀತಿಯಲ್ಲಿ ಅವಮಾನ ಕರವಾದಂಥ ರೀತಿಯಲ್ಲಿ ಒಂದು ಕಳಂಕ ಇದೆ. ಒಂದು stigma ಇದೆ ಎಂದು ಹೇಳಿದರೆ ಅದು ಅಸ್ಪೃಶ್ಯತೆ, ಜಾತೀಯತೆ ಇರತಕ್ಕಂಥದ್ದು. ಇದು ಬಹಳ ಮುಖ್ಯವಾದ ವಿಷಯ. ನೀವು ತೆಗೆದುಕೊಳ್ಳಿ ಮತ್ತೆ Article 17 ಅನ್ನೂ ಕೂಡ. Article 17 ನಲ್ಲಿ ಏನಿದೆ abolition of untouchability ಇದನ್ನು ತೆಗೆದುಕೊಳ್ಳಿ. ಇದರ ಬಗ್ಗೆ ಚರ್ಚೆ ಮಾಡೋಣವೇನು? ಬಹುಶಃ ಅದಕ್ಕಿಂತ ಮುಖ್ಯವಾದುದು ಬೇರೆ ಏನು ಬೇಕ್ರಿ? ಒಂದು ಪ್ರಾಣಿಯ ಬಗ್ಗೆ ಯೋಚನೆ ಮಾಡತಕ್ಕಂಥ ಸಮಯದಲ್ಲಿ ಒಬ್ಬ ಮನುಷ್ಯನ ಬಗ್ಗೆ ಯೋಚನೆ ಮಾಡಬೇಕಲ್ಲವೆ? ಇವತ್ತು ಶತ ಶತಮಾನಗಳಿಂದ ಎಂಥ ಮಾನಸಿಕವಾದಂಥ ರೀತಿಯಲ್ಲಿ, ದೈಹಿಕವಾಗಿ ಎಂಥ ದೌರ್ಜನ್ಯ, ದಬ್ಬಾಳಿಕೆಗೆ ಒಳಗಾಗುವರಿದ್ದಾರೆ. ಇವತ್ತು ಕೂಡ ಮನುಷ್ಯನನ್ನು ಮನುಷ್ಯನನಾಗಿ ಕಾಣದೇ ದೌಜನ್ಯಗಳು ಕೆಲವು ವರ್ಗದ ಮೇಲೆ ನಡೆಯುತ್ತಿದೆ. ಇಂದು 21ನೆಯ ಶತಮಾನದಲ್ಲಿ ಇವತ್ತು ಗೋ ಹತ್ಯೆ ಬಗ್ಗೆ, ಜಾನುವಾರುಗಳ ವಧೆಗಳ ಬಗ್ಗೆ ಮಾತನಾಡು ತ್ತಿದ್ದೇವೆ, ನಮಗೆ ಯಾವ ನೈತಿಕವಾದಂಥ ಹಕ್ಕಿದೆ ನಾನು ಆಡಳಿತ ಪಕ್ಷದ ಲೋಕಸಭಾ ಸದಸ್ಯನಾಗಿದ್ದಾಗ ಇದರ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಪ್ರಶ್ನೆ ಮಾಡಿದ್ದೇನೆ. abolition of untouchability ಬಗ್ಗೆ ನಾನು ಬಹಳ ದೀರ್ಘವಾಗಿ ಪಾರ್ಲಿಮೆಂಟಿನಲ್ಲಿ ಮಾತನಾಡಿದ್ದೇನೆ. ಅವತ್ತು ನಾನು ಮಾತನಾಡತಕ್ಕಂಥ ಬಹುಶಃ ಆಗ South Africa ಗೆ ಇನ್ನೂ ಸ್ವಾತಂತ್ರ್ಯ ಸಿಕ್ಕಿರಲಿಲ್ಲ. ನೆಲ್ಸನ್ ಮಂಡೇಲಾ ಇನ್ನೂ ಜೈಲಿನಲ್ಲಿಯೇ ಇದ್ದರು. ಆಗ ನಾವು ಮಾತನಾಡುತ್ತಿದ್ದೆವು, ಎಲ್ಲಾ ರೀತಿಯಾದಂಥ ನಮ್ಮ ವಿದೇಶ ವ್ಯವಹಾರ ಗಳನ್ನು ಕಡಿದು ಹಾಕಿಕೊಂಡೆವು ದಕ್ಷಿಣ ಆಫ್ರಿಕಾದಲ್ಲಿ, ಬಿಳಿತರು ಕಪ್ಪು ಜನರನ್ನು ವರ್ಣಬೇಧ ದಬ್ಬಾಳಿಕೆ ಮಾಡಿ ಅಮಾನವೀಯವಾದಂಥ ಅಬಾಲಿಶವಾದಂಥ ಪದ್ಧತಿಯನ್ನು ಅನುಸರಿಸುತ್ತಿದ್ದ ಕಾರಣ ದಕ್ಷಿಣ ಆಫ್ರಿಕಾ ಜೊತೆ ಯಾವುದೇ ರೀತಿಯ ಸಂಬಂಧ ಬೇಡವೆಂದು ಕಡಿದುಕೊಳ್ಳಲಾಗಿತ್ತು. ನಾನು ಮಾತನಾಡುತ್ತಿರುವುದು ಎಸ್.ಸಿ./ಎಸ್.ಟಿ. ಬಗ್ಗೆ. ಅದರೆ ವರ್ಣಬೇಧದಷ್ಟೇ ಕಠೋರವಾಗಿ ಈ ದೇಶದಲ್ಲಿ ಪ್ರತಿ ನಿಮಿಷ, ಪ್ರತಿ ಕ್ಷಣದಲ್ಲಿಯೂ ಕೂಡ ಅಸ್ಪೃಶ್ಯತೆ ಜೀವಂತವಾಗಿ ಸುಡುತ್ತಿದೆ. ಮನುಷ್ಯ ಮನುಷ್ಯನಾಗಿ ಬದುಕುವುದಕ್ಕೆ ಅವಕಾಶಗಳು ಈ ದೇಶದಲ್ಲಿ ಇಲ್ಲದಿರುವಂಥ

ಸಂದರ್ಭದಲ್ಲಿ ನಿಮಗೆ ದಕ್ಷಿಣ ಆಫ್ರಿಕಾ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಯಾವ ರೀತಿಯಾದಂಥ moral rights, ನೈತಿಕವಾದಂಥ ಹಕ್ಕಿದೆ ಎನ್ನತಕ್ಕಂಥದ್ದನ್ನು ನಾನು ಕೇಳಿದ್ದೇನೆ. ಇವತ್ತು ನಿಮಗೂ ಕೂಡ ಅದೇ ರೀತಿಯ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇವತ್ತು ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಪ್ರೀತಿಯಿಂದ, ಗೌರವದಿಂದ ಕಾಣುತ್ತಿಲ್ಲ. ಮಾನಸಿಕವಾಗಿ ಈ ರೀತಿಯಾದಂಥ ಅಸಮಾನತೆ ಇರತಕ್ಕಂಥದ್ದನ್ನು ವತ್ತು ನೀವು ಅರ್ಥ ಮಾಡಿಕೊಳ್ಳಬೇಕಾಗಿದೆ. ಇವತ್ತು ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲೇನಿದ್ದೇವೆ, ನಮ್ಮ ಮನಸ್ಸಿಗೆ ನೋವಾಗುತ್ತದೆ ನೀವು ಗೋ ಹತ್ಯೆ ಬಗ್ಗೆ ಮಾತನಾಡುವಾಗ. ಇಷ್ಟೊಂದು ಕಳಕಳಿ ಇಟ್ಟುಕೊಂಡಿರತಕ್ಕಂಥ ಸಮಯದಲ್ಲಿ ಇವತ್ತು ಯಾವ ರೀತಿ ಇದೆ ಜಾತೀಯತೆ ಗೊತ್ತೆ. ಯಾವುದಾದರೂ ಒಂದು ಜಾತಿಯವನು ತನಗಿಂತ ಕಡಿಮೆ ಜಾತಿಯವನನ್ನು ಮಾನಸಿಕವಾಗಿ ಸಮಾನ ಎಂದು ಒಪ್ಪಿಕೊಳ್ಳತಕ್ಕಂಥ ತಯಾರಿ ಆಗಿದೆಯೆ ಈ ದೇಶದಲ್ಲಿ? ಯೋಚನೆ ಮಾಡಿ. ಯಾವುದೇ ಜಾತಿಯವನಾಗಲಿ, ತನಗಿಂತ ಕೆಳಗಡೆ ಇರತಕ್ಕಂಥ ಜಾತಿಯವನನ್ನು ಮಾನಸಿಕವಾಗಿ ಅವನು ನನಗೆ ಸಮಾನ ಎಂದು ಒಪ್ಪಿಕೊಳ್ಳತಕ್ಕಂಥ ತಯಾರಿ ಇವತ್ತು ಇದೆಯೆ ಇಲ್ಲಿ? ಇಲ್ಲ. ಇವತ್ತು ಇಲ್ಲಿ ಮಾತನಾಡುತ್ತಿರ ತಕ್ಕಂಥದ್ದೇನು? ಜಾನುವಾರುಗಳ ರಕ್ಷಣೆ ಮಾಡಬೇಕು ಎನ್ನತಕ್ಕಂಥ ರೀತಿಯಲ್ಲಿ ಗೋ ಹತ್ಯೆ ಆಗಬಾರದೆಂದು. ನೀವು ಕಾನೂನು ಮಾಡಿ. ನಾನು ಬೇಡವೆಂದು ಹೇಳುವುದಿಲ್ಲ. ಆದರೆ ನೀವು ಮುಖ್ಯವಾಗಿ ಮಾಡಬೇಕಾಗಿರು ವುದನ್ನು ಬಹುಶಃ ನೀವು ಅರ್ಥ ಮಾಡಿಕೊಳ್ಳಬೇಕು. ಹೇಗಿದೆ ಇವತ್ತಿನ ಪರಿಸ್ಥಿತಿ ಎಂದರೆ ನೂರಾರು ವರ್ಷದಿಂದ ಯಾರು ಈ ಗೋ ಹತ್ಯೆ ಬಗ್ಗೆ ಮಾತನಾಡುತ್ತಿದ್ದಾರೆ They are all man eaters. ಮನುಷ್ಯನನ್ನು ಜೀವಂತವಾಗಿ ತಿನ್ನುತ್ತಿದ್ದೀರಿ ಅವನನ್ನು, ಮಾನಸಿಕವಾಗಿ, ದೈಹಿಕವಾಗಿ ಅನುಭವಿಸುತ್ತಿದ್ದಾನೆ, ನಮಗೆ ಅರ್ಥವಾಗುತ್ತದೆ how it will kill us ಎಂದು. ಅದು ನಿಮಗೆ ಅರ್ಥವಾಗುವುದಿಲ್ಲ, ಬಹಳಷ್ಟು ಜನಕ್ಕೆ ಅದು ನಮ್ಮನ್ನು ಹೇಗೆ ಕೊಲ್ಲುತ್ತದೆ ಎನ್ನತಕ್ಕಂಥದ್ದು ನಮಗೆ ಅರ್ಥವಾಗುತ್ತಿರತಕ್ಕಂಥದ್ದು. ಇದನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಪ್ರತಿ ನಿಮಿಷ, ಪ್ರತಿ ಕ್ಷಣದಲ್ಲಿಯೂ ಕೂಡ ಅಸ್ಪೃಶ್ಯತೆ, ಜಾತಿಯ ಹೆಸರಿನಲ್ಲಿ ಜನರು ಬಹಳ ನೋವನ್ನು ಅನುಭವಿಸುವಂಥವರು ಇನ್ನೂ ಇದ್ದಾರೆ. ನನಗೆ ಆಗದೇ ಇರಬಹುದು. ಹೌದು, ನಾನು ರಾಜಕೀಯವಾಗಿ ಬೆಳೆದು ಬಂದಿದ್ದೇನೆ, ವಿದ್ಯಾವಂತನಾ

O.32 F-33

ಗಿದ್ದೇನೆ, ಬುದ್ಧಿವಂತನಾಗಿದ್ದೇನೆ, ನನ್ನ ಮೇಲೆ ದೈಹಿಕವಾದ ದೌರ್ಜನ್ಯಗಳು ಆಗದೇ ಇರಬಹುದು. ಆದರೆ ಪತ್ರಿಕೆಗಳಲ್ಲಿ ಓದಿದಂಥ ಸಂದರ್ಭದಲ್ಲಿ ಇವತ್ತೂ ಕೂಡ ಒಬ್ಬ ದಲಿತ, ಒಬ್ಬ ವಿದ್ಯಾವಂತ ಯುವಕ ಮುಜರಾಯಿ ಇಲಾಖೆಗೆ ಸೇರಿದ ಒಂದು ದೇವಸ್ಥಾನದ ಒಳಗಡೆ ಹೋಗಿದ್ದಕ್ಕೆ ಅವನಿಗೆ ನೀವು ಮಾರಣಾಂತಿಕ ಹಲ್ಲೆಯನ್ನು ಮಾಡುತ್ತೀರ? ಇವತ್ತೂ ಕೂಡ ಆ ರೀತಿ ನಡೆಯುತ್ತಿದೆ. ಇದೊಂದು ಉದಾಹರಣೆಯನ್ನು ನಿಮಗೆ ನಾನು ಹೇಳಿದ್ದು.

ಇಲ್ಲಿ ದೌರ್ಜನ್ಯ ದಬ್ಬಾಳಿಕೆ ನಡೆಯುತ್ತಿದೆ. ನಾನು ಹತ್ತು ಹದಿನೈದು ದಿವಸದ ಹಿಂದೆ ಬಿಹಾರದಲ್ಲಿ ನಡೆದಂತಹ ಒಂದು ಘಟನೆ ಬಗ್ಗೆ ಓದಿದೆ. ಇವತ್ತು ಪರಿಸ್ಥಿತಿ ಹೇಗಿದೆ ಎಂದು ನೋಡಿ. ಬಿಹಾರದಲ್ಲಿ ಒಬ್ಬ ದಲಿತ ಅಸ್ಪೃಶ್ಯ ಬಾಲಕ ಸವರ್ಣೀಯರ ಮದುವೆಯ ಮನೆಯಲ್ಲಿ ತಾನು ಮದುವೆ ನೋಡಬೇಕೆಂದು ಪ್ರೀತಿಯಿಂದ ಅವರ ಮನೆಯೊಳಗೆ ಹೋಗಿ ಕುರ್ಚಿಯ ಮೇಲೆ ಕುಳಿತುಕೊಂಡ. He was shot dead! ಇದು ಸುದ್ದೀ ಮಾಧ್ಯಮಗಳಲ್ಲಿ ಬಂದಿಲ್ಲವೇನು? ಎಂತಹ ಪರಿಸ್ಥಿತಿ ಇದೆ ಎಂದು ಇದರ ಬಗ್ಗೆತಾವು ಯೋಚನೆ ಮಾಡುತ್ತಿಲ್ಲವೇ? ಕಾಣದ ಕೈಗಳು ಇವೆಯಲ್ಲ, ಸಂಘಟನೆಯಾಗಬೇಕು, ನಾವೆಲ್ಲ ಒಂದು ಎಂದು ಗೋಡೆಗಳ ಮೇಲೆ ಬರೆಯುತ್ತೀರಲ್ಲ, ನಿಮ್ಮ ಮನಸ್ಸುಗಳನ್ನು ಆ ಕಡೆಗೆ ಕೊಡಿ, ಅದರ ಬಗ್ಗೆ ಯೋಚನೆಯನ್ನು ಮಾಡಿ. ನಾನು ಇದನ್ನು ವಿರೋಧ ಮಾಡುತ್ತೇನೆ ಎನ್ನುವುದಲ್ಲ, ನೀವು ಮಾಡಬೇಕಾಗಿರುವಂಥಾದ್ದು ಇದಲ್ಲ. ಇವತ್ತು ರಾಮಚಂದ್ರಪುರ ಮಠದ ಸ್ವಾಮೀಜಿಗಳು, ಎಲ್ಲಾ ಮಠದ ಸ್ವಾಮೀಜಿಗಳು ಮಾತನಾಡುತ್ತಾರೆ. ನಾನು ಒಮ್ಮೆ ಇದನ್ನು ಪೇಜಾವರ ಶ್ರೀಗಳಿಗೆ ನೇರವಾಗಿ ಪ್ರಶ್ನೆ ಮಾಡಿದೆ. ನೀವು ವೇದ ಉಪನಿಷತ್ತುಗಳಲ್ಲಿ ಎಲ್ಲೂ ಕೂಡ ಅಸ್ಪೃಶ್ಯತೆ ಜಾತೀಯತೆ ಇಲ್ಲವೆನ್ನುವ ಮಾತುಗಳನ್ನು ಅನೇಕ ಕಡೆ ಹೇಳುತ್ತೀರಲ್ಲ, ಇವತ್ತು ನೀವೇಲ್ಲರೂ ಕೂಡ ಗೋಹತ್ಯೆ ಆಗಬಾರದು ಎಂದು ಎಲ್ಲಾ ಸ್ವಾಮೀಜಿಗಳು ಒಂದು ಕಡೆ ಸೇರುತ್ತಾರೆ. ರಾಮಚಂದ್ರಾಪುರದ ಪೀಠಾಧಿ ಪತಿಗಳು ಇವತ್ತು ಗೋ ಯಾತ್ರೆಯನ್ನು ಮಾಡುತ್ತಾರೆ. ಆದರೆ ಎಲ್ಲಿ ಮನುಷ್ಯ ಮನುಷ್ಯನನ್ನು ಸುಡತಕ್ಕಂಥಾದ್ದು, ಮನುಷ್ಯ ಮನುಷ್ಯನನ್ನಾಗಿ ಕಾಣದಿರು ವಂತಹ ದೌಜನ್ಯ ದಬ್ಬಾಳಿಕೆ, ಹಿಂಸೆಗಳು ನಡೆಯುತ್ತಿರುವುದರ ವಿಚಾರದಲ್ಲಿ ಒಂದು ಯಾತ್ರೆಯನ್ನು ಯಾರಾದರೂ ಸ್ವಾಮೀಜಿಯವರು ಮಾಡಿದ್ದಾರ? ಎಲ್ಲಿಯಾದರೂ ಒಂದು ಕಡೆ ಸ್ವಾಮೀಜಿಗಳು ನಮ್ಮ ಹಿಂದೂ ಧರ್ಮದಲ್ಲಿ ಇಂತಹ ಕಳಂಕ ಇದೆ ಎಂದು ಸೇರಿ ಇಲ್ಲಿ ಮಾತನಾಡಿದ್ದಾರೆಯೇ? ನೀವು

ಗೋಹತ್ಯೆ ವಿಚಾರದಲ್ಲಿ ಸೇರಿಕೊಂಡಿದ್ದೀರಲ್ಲ, ಮಾತನಾಡುತ್ತೀರಲ್ಲ ಏನನ್ನಬೇಕು? ಇದನ್ನು ನಾನು ಪೇಜಾವರ ಶ್ರೀಗಳಿಗೆ ಹೇಳಿದ್ದೆನು. ನೀವು ಒಂದು ಕೆಲಸ ಮಾಡಿಬಿಡಿ. ನಾವು Parliament, Assembly ಯಲ್ಲಿ ಕುಳಿತು ನೂರೆಂಟು ಕಾನೂನುಗಳನ್ನು ಮಾಡತಕ್ಕಂತಾದ್ದಲ್ಲ. ಬಹುಶಃ ನಾವು ಯಾವ ಮಟ್ಟಕ್ಕಾದರೂ ಹೋಗುತ್ತೇವೆ. ನಾವಾಗಲಿ, ಯಡಿಯೂರಪ್ಪನವರಾಗಲಿ, ಬಿಜೆಪಿಯವರಾಗಲಿ we can go to any extent to make any legislation to protect the interest of oppressed and depressed communityಗೆ ಮಾಡುತ್ತೇವೆ, ನಾವು ಓಟು ತೆಗೆದುಕೊಳ್ಳತಕ್ಕಂಥವರು ನಮಗೆ ಮಾಡುವುದಕ್ಕೆ ಆಗುತ್ತದೆ. ಆದರೆ ಅದರ ಪರಿಣಾಮ ಏನೋ ಆಗುತ್ತಿದೆ. ಅದಕ್ಕೆ ಹೃದಯಗಳು ಬದಲಾವಣೆ ಆಗಬೇಕು. ಇದು ಧಾರ್ಮಿಕ ಮುಖಂಡರ ಕೈಯಲ್ಲಿ ಸಾಧ್ಯವಿದೆ. ಅವರ ಮಾತಿಗೆ ಬೆಲೆ ಇದೆ, ಅವರನ್ನು ಜನ ಕೇಳುತ್ತಾರೆ, ಮೊದಲು ನೀವು ಮಾಡಿ. ಗೋಹತ್ಯೆ ಬಗ್ಗೆ ಚಳುವಳಿ ಅಲ್ಲ, ಉಪವಾಸ ಸತ್ಯಾಗ್ರಹ ಅಲ್ಲ ಅಥವಾ ರಾಮಮಂದಿರದ ಬಗ್ಗೆ ಉಪವಾಸ ಸತ್ಯಾಗ್ರಹ ಚಳುವಳಿ ಮಾಡುವುದಲ್ಲ. ಒಂದು ದಿನ ನಾನು ಪೇಜಾವರ ಶ್ರೀಗಳ ಎದುರಿಗೆ ಮಾತನಾಡಿ ಎರಡು ಮೂರು ಸಲ ಹೇಳಿದ್ದೇನೆ. ನನ್ನ ಮನೆಗೂ ಕೂಡ ಬಂದಾಗ ಒಂದು ಬಾರಿ ಹೇಳಿದೆನು. ನೀವು ಏನೂ ಮಾಡಬೇಡಿ. ನೀವು ವಿಶ್ವ ಹಿಂದೂ ಪರಿಷತ್‌ನ custodian, ಜಗತ್ತಿನಲ್ಲಿ ಯಾರು ಹಿಂದೂಗಳಿದ್ದಾರೆ ಅವರನ್ನು ಸಂಘಟನೆ ಮಾಡುವುದು ವಿಶ್ವ ಹಿಂದೂ ಪರಿಷತ್ತಿನ ಕೆಲಸವಲ್ಲವೇ? ಒಂದು ದಿನ ನೀವು ಎಲ್ಲಾ ಸ್ವಾಮೀಜಿಗಳು ಆ ಸಂಘಟನೆಯ custodian ಆಗಿ ಬೆಳಿಗ್ಗೆಯಿಂದ ಸಂಜೆಯ ವರೆಗೂ ಒಂದು call ಕೊಟ್ಟು ಸತ್ಯಾಗ್ರಹ ಮಾಡಿ. ನಮಗೆ ಗೊತ್ತಿದ್ದು, ಗೊತ್ತಿಲ್ಲದಿದ್ದರೂ ಕೂಡ ಈ ಅಸ್ಪೃಶ್ಯತೆ ಜಾತೀಯತೆ ಎನ್ನುವುದು ಇದೆ, ಇದು ಹಿಂದೂ ಧರ್ಮದಲ್ಲಿರುವಂತಹ ಕಳಂಕ, ಇದು ಹೋಗಬೇಕೆಂದು ಬೆಳಿಗ್ಗೆಯಿಂದ ಸಂಜೆಯವರೆಗೂ ಒಂದು ದಿನ ನಮ್ಮ ಭಾರತ ದೇಶದಲ್ಲಿ ಉಪವಾಸ ಮಾಡಿ ಸಾಕು. ಆದರೆ ನಾವು ನೂರೆಂಟು ಕಾನೂನು ಮಾಡುವುದು ಬೇಕಾಗಿಲ್ಲ. ನೋಡಿ ಯಾವ ರೀತಿ ಹೃದಯಗಳ ಬದಲಾವಣೆ ಆಗುತ್ತದೆಂದು, ಅದನ್ನು ಮಾಡಿಸಿ ನೋಡೋಣ. ಎಲ್ಲಾ ಸ್ವಾಮೀಜಿಗಳು ಸೇರಿ ಒಂದು ಕರೆ ಕೊಡಿ. ಇವತ್ತು ಯಾರ್‍ಯಾರೆಲ್ಲ ಸೇರಿಕೊಳ್ಳುತ್ತಿದ್ದೀರಿ, ನೀವು ಏಕೆ ಮಾಡುವುದಕ್ಕಾಗುವುದಿಲ್ಲ? ಏಕೆ ಮಾಡುವುದಿಲ್ಲ. ನಿಮಗೆ ಅದು ಬೇಡವಲ್ಲ.

ಇವತ್ತು ಗೋಹತ್ಯೆ ಪ್ರಾಣಿವಧೆ ಇದರ ಬಗ್ಗೆ ಎಲ್ಲ ಮಾತನಾಡುತ್ತೀರಿ. ನಾನು ಬಹಳ ನೊಂದು ಈ ಮಾತುಗಳನ್ನು ಹೇಳುತ್ತಿದ್ದೇನೆಂದು ತಾವು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ. ಈಗ ತಾವು ಏನು 1964ನೇ ಕಾಯಿದೆಗೆ replace ಮಾಡುವುದಕ್ಕೆ ಹೊರಟಿದ್ದೀರಿ, ಇದು ಒಳ್ಳೆಯದಲ್ಲ, ಇದು ಒಳ್ಳೆಯ ಯೋಚನೆಗಳಲ್ಲ. ನಾವು ಈ ಸದನದಲ್ಲಿ ಎರಡು ವರ್ಷದಲ್ಲಿ ಬಹಳಷ್ಟು ರೀತಿಯಲ್ಲಿ ಚರ್ಚೆ ಮಾಡಬೇಕಾಗಿತ್ತು. ಮಾನ್ಯ ಶಿವಕುಮಾರ್ ಯಾವುದಕ್ಕೆ ಆದ್ಯತೆಗಳನ್ನು ಕೊಡಬೇಕಾಗಿತ್ತು ಎಂದು ಪಟ್ಟಿ ಮಾಡಿ ಹೇಳಿದರು. ನಾನು ಮೊನ್ನೆ ಕೂಡ ಬಜೆಟ್ ಬಗ್ಗೆ ಮಾತನಾಡುತ್ತಾ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆನು. ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಸಚಿವರು ಕೂಡ ಆಗಿದ್ದೀರಿ ನೀವು ಯಾವುದನ್ನು ಗಮನದಲ್ಲಿಟ್ಟುಕೊಳ್ಳಬೇಕು? ನಿಮಗೆ ಚುನಾವಣಾ ಪ್ರಣಾಳಿಕೆನೇ ಭಗವದ್ಗೀತೆ, ನೀವು ಅದರ ಮೇಲೆ ಬಜೆಟ್ ಮಂಡಿಸಿ. ನೀವು ಐದು ಬಾರಿ ಬಜೆಟ್‌ನ್ನು ಮಂಡಿಸಿದ್ದೀರಿ ಎಂದು ಹೇಳುತ್ತೀರಿ. ನೀವು ಎರಡು ಬಾರಿ ಸಮ್ಮಿಶ್ರ ಸರ್ಕಾರದಲ್ಲಿದ್ದಾಗ ನನ್ನ ಕೈಯಲ್ಲಿ ಆಗಲಿಲ್ಲವೆಂದು ಕೊರಗಿದ್ದೀರಿ. ಈ ಮೂರು ವರ್ಷಗಳಲ್ಲಿ ಬಹುಮತ ಬಂದಮೇಲೆ ನಾನು ಇವತ್ತು ಬಹಳ ಬಹಳ ಒಳ್ಳೆಯ ಬಜೆಟ್ ಕೊಡಬೇಕೆಂದು ಇದ್ದೀರಿ. ಆದರೆ ಅಂತಾದ್ದು ಯಾವುದು Progressive bill ಗಳು ಬರಲೇ ಇಲ್ಲ. ನಮಗೆ ಇನ್ನೇನು ಕಾದಿದೆಯೋ ಗೊತ್ತಿಲ್ಲ. ಬಹುಶಃ ಇಲ್ಲಿ ಚರ್ಚೆ ಮಾಡತಕ್ಕಂಥದ್ದು, ಆ ಗೋಕರ್ಣ ಮಠ ಯಾರ ಕೈಯಿಂದ ಯಾರ ಕೈಗೆ ಹೋಯಿತು? ನಾವು ಇಲ್ಲಿ ಸದನದಲ್ಲಿ ಕುಳಿತುಕೊಂಡು ಸಾರಸ್ವತರಿಂದ ಹವ್ಯಕರಿಗೆ ಹೋದಂಥದ್ದಾನ್ನು ನಾವು ಇಲ್ಲಿ ಸದನದಲ್ಲಿ ಕುಳಿತುಕೊಂಡು ದೊಡ್ಡ ಚರ್ಚೆ ಮಾಡಬೇಕು, ನೋಡಿ ಇದು ಹೇಗಿದೆ? ಇಂತಹ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕುಳಿತು ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಕೂಡ ಇನ್ನು ಮತಾಂತರ ವಿಷಯ ಬಂದಿಲ್ಲ. ಒಬ್ಬ ವ್ಯಕ್ತಿಯ ಮೇಲೆ ಒಂದು ಖಾಸಗಿ ವಿಶ್ವವಿದ್ಯಾನಿಲಯದ ಬಿಲ್‌ನ್ನು ತೆಗೆದುಕೊಂಡು ಬಂದಿದ್ದೀರಿ. ಇವತ್ತು ಬೆಳಿಗ್ಗೆ ಸಂಸ್ಕೃತ ವಿಶ್ವವಿದ್ಯಾಲಯದ ಬಗ್ಗೆ ಮಾತನಾಡಿದ್ದೇವೆ. ಇನ್ನೂ ಮುಂದೆ ಏನೇನು ಇಲ್ಲಿ ತರುತ್ತೀರಿ ಗೊತ್ತಿಲ್ಲ. ರಾಜರು, ಪಾಳೆಯಗಾರರು, ಸಾಮಂತರಿಂದ ದೂರವಾಗಿ ಈ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಪ್ರಜಾಪ್ರಭುತ್ವ ಸಂಸ್ಥೆಯಲ್ಲಿ ಎಲ್ಲಾ ಧರ್ಮ ಜಾತಿ-ಜನಾಂಗದವರು ಕುಳಿತು ಚರ್ಚೆ ಮಾಡುವಾಗ ಸದನದಲ್ಲಿ ಎಂತಹ

ವಿಷಯಗಳು ಬರಬೇಕು? ಇವತ್ತು ಕೂಡ ಕಿತ್ತು ತಿನ್ನುವಂತಹ ಬಡತನ, ಅನಕ್ಷರತೆ ಇದೆ, ಅಸ್ಪೃಶ್ಯತೆ ಇದೆ. ಇವೆಲ್ಲವುಗಳ ಬಗ್ಗೆ ಯಾವ ರೀತಿ ಹೋರಾಟ ಮಾಡಬೇಕು ಎನ್ನುವುದರ ಬಗ್ಗೆ ನಿಮಗೆ ಐದು ವರ್ಷದಲ್ಲಿ ನಿಮಗೆ ಒಂದು ನಿರ್ದಿಷ್ಟವಾದ ಒಂದು ಕಾರ್ಯಕ್ರಮ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಆ ರೀತಿಯ ಆಲೋಚನೆಗಳು ಇದ್ದರೆ ಹಾಕಿಕೊಳ್ಳ ಬೇಕಾಗಿತ್ತು. ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೆನು. ತಾವು ಬಜೆಟ್ ಬಗ್ಗೆ ಉತ್ತರ ಕೊಡುವಾಗ ನಾನು ಇರಲಿಲ್ಲ, ಇಲ್ಲದಿದ್ದರೆ ನಾವು ಪ್ರಶ್ನೆ ಮಾಡುತ್ತಿದ್ದೆನು. ನಿಮ್ಮನ್ನು ಒಂದು ದಿನ ಕೇಳಿದೆನು. ಆ ಕೊಳಗೇರಿಗಳು ಆ ಸೂರ್ಯಚಂದ್ರರು ಇರುವವರೆಗೂ ಇರಬೇಕೇ? ನೀವು ಬಂದು ಐದು ವರ್ಷದಲ್ಲಿ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕೊಳಗೇರಿಗಳಿಗೆ ಪುನರ್ವಸತಿ ಕೊಡುತ್ತೇನೆ, ಒಂದೂ ಕೊಳಗೇರಿ ಇರದ ರೀತಿಯಲ್ಲಿ ಮಾಡಬೇಕೆನ್ನುವ ರೀತಿಯಲ್ಲಿ ಯೋಚನೆ ಮಾಡಬೇಕು ಅಥವಾ ನಾನು ಐದು ವರ್ಷಗಳ ಅವಧಿಯಲ್ಲಿ ಕೇರಳ ರಾಜ್ಯದ ರೀತಿಯಲ್ಲಿ ನೂರಕ್ಕೆ ನೂರು ಪರ್ಸೆಂಟ್ literacy state ಮಾಡುತ್ತೇನೆ. Education ಎಂದರೆ ಏನು? Education is nothing but knowledge. ಅ ಸಂಸ್ಕೃತದ ಬಿಲ್ ಬಂದಾಗ ಅದನ್ನು ಕೂಡ ಹೇಳೋಣವೆಂದು ಇದ್ದೆನು. ವಿದ್ಯೆ ಒಂದು ಜ್ಞಾನ ಮತ್ತು ತಿಳುವಳಿಕೆಯನ್ನು ಕೊಡುತ್ತದೆ. ನಾವು ಅದರಲ್ಲಿ ಬಹಳ ನೊಂದಿದ್ದೇವೆ. ನೂರಾರು ವರ್ಷಗಳ ಕಾಲ ಒಬ್ಬರ ಕಪಿಮುಷ್ಟಿಯಲ್ಲಿ ಇದೆ, ಅದನ್ನು ನೀವು ಬಿಡಿಸಬೇಕು. ಮಾನ್ಯ ಸಿದ್ದರಾಮಯ್ಯನವರು How Britisher, gave us education ಎಂದು ಬಹಳ ಚೆನ್ನಾಗಿ ಹೇಳಿದರು. ಅದುವರೆಗೂ ಇಲ್ಲಿ ಇರಲಿಲ್ಲ. ವಿದ್ಯೆ ಎನ್ನುವ ತಿಳುವಳಿಕೆ ಒಬ್ಬರ ಸ್ವತ್ತಾಗಿತ್ತು. ವಿದ್ಯೆಯನ್ನು ಬ್ರಿಟಿಷರು universalize ಮಾಡಿದರ ಪರಿಣಾಮ ಇವತ್ತು ನಾವೆಲ್ಲರೂ ವಿದ್ಯಾವಂತರಾಗಿ, ಬುದ್ಧಿವಂತರಾಗಿ, ತಿಳುವಳಿಕೆಯನ್ನು ಪಡೆದಿದ್ದೇವೆ. ಇದು ಪ್ರತಿಯೊಬ್ಬರಿಗೂ ಕೂಡ ಸಿಗುವಂತಹ ರೀತಿಯಲ್ಲಿ ಯೋಚನೆ ಮಾಡಬೇಕು. ಈ ರೀತಿಯಾ ದಂತಹ ಕಾರ್ಯಕ್ರಮಗಳು, ಈ ರೀತಿಯಾದಂತಹ ಚರ್ಚೆಗಳು ಈ ಸದನದಲ್ಲಿ ಆಗ ಬೇಕಾಗಿರುವುದು ಬಹಳ ಮುಖ್ಯ. ನಾವು ಸಂವಿಧಾನದಲ್ಲಿ ಒಪ್ಪಿಕೊಂಡಿದ್ದೇವೆ, broad based secular concept ಇಟ್ಟುಕೊಂಡು ಯೋಚನೆ ಮಾಡುವಂತಹ ಅವಕಾಶ ಸಂವಿಧಾನದಲ್ಲಿ ಇರತಕ್ಕಂಥಾದ್ದಿದೆ. ಆ ಹಿನ್ನೆಲೆಯಲ್ಲಿ ಮಾನ್ಯ ಅಧ್ಯಕ್ಷರೇ, ಈಗಿರತಕ್ಕಂಥ ಬಿಲ್ ನಮ್ಮ ಜಾತ್ಯಾತೀತ

ಕಲ್ಪನೆಗೂ ಕೂಡ ಅದು ವಿರೋಧವಾಗಿರುವಂತಾದ್ದು. ಹಾಗಾಗಿ ತಾವೇನು ಈಗ ಹೊರಡಿಸಿದ್ದೀರಿ, ಇದರ ಪ್ರತಿಕೂಲ ಪರಿಣಾಮಗಳನ್ನು ನೀವು ಗಮನ ದಲ್ಲಿಟ್ಟುಕೊಂಡು ಮಾಡಬೇಕು. ಖಂಡಿತ ನೀವು ಇದನ್ನು ಯಾವುದೋ ಒಂದು ಒತ್ತಡದ ದೃಷ್ಟಿಯಿಂದ ತಂದಿದ್ದೀರಿ. ಇದನ್ನು ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಿಲ್ಲವೆನ್ನುವಂತಹ ಮಾತನ್ನು ಈಗಲೂ ಕೂಡ ನಾನು ಹೇಳುತ್ತಿದ್ದೇನೆ. ಈಗಲೂ ಕೂಡ ತಾವು ಯೋಚನೆಯನ್ನು ಮಾಡಿ ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕು ಎನ್ನುವಂತಹ ಸಲಹೆಯನ್ನು ಕೊಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಕೊನೆಯದಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ. ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ, ಈಗ ಮಾತನಾಡುವುದಕ್ಕೆ ವಿರೋಧ ಪಕ್ಷದ ನಾಯಕರನ್ನು ಕರೆದಿದ್ದೇನೆ.

ಡಾ: ಹೆಚ್.ಸಿ. ಮಹದೇವಪ್ಪ : ನಾನು ಮಾತನಾಡಬೇಕು. ಈ ರೀತಿಯಾದರೆ ಹೇಗೆ? ನಾನು ತಾವು ಅವಕಾಶ ಕೊಡುತ್ತೀರಿ ಎಂದು ಸುಮ್ಮನೆ ಕುಳಿತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಇದರ ಬಗ್ಗೆ ಎಲ್ಲರಿಗೂ ಮಾತನಾಡಬೇಕೆಂದು ಆಸಕ್ತಿ ಇದೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಅಧ್ಯಕ್ಷರೆ, ನನಗೂ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ : ನಮ್ಮ ಪಕ್ಷದಲ್ಲಿ ಇಬ್ಬರಿಗೆ ಅವಕಾಶ ಕೊಟ್ಟಿರುವುದು, ನಮಗೆ ಯಾರಿಗೂ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ, ನಾವು ಏನು ಮಾಡಬೇಕು.

(ಗೊಂದಲ)

ಶ್ರೀ ಎನ್.ಎ. ಹ್ಯಾರೀಸ್ : ಅಧ್ಯಕ್ಷರೆ, ನನಗೂ ಅವಕಾಶ ಕೊಡಿ. ನೀವು ಈ ರೀತಿ ಅವಕಾಶ ಕೊಡದಿದ್ದರೆ ನಾವು ಏಕೆ ಸದನಕ್ಕೆ ಬರಬೇಕು.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ : ಹಗಾದರೆ ನಾವು ಹೋಗಿಬಿಡುತ್ತೇವೆ ಬಿಡಿ. ನಮಗೆ ಎರಡೆರಡು ನಿಮಿಷ ಅವಕಾಶ ಕೊಡಿ.

(ಗೊಂದಲ)

Mr. Speaker : What do you mean by that? You can't speak like that. ಏನಾದರೂ ಮಾತನಾಡಬಹುದು ಎಂದು ಕೊಂಡಿದ್ದೀರಾ? No, this is not the way. ನೀವು ಕೇಳಿ, ಮಾತನಾಡಿ. ಆದರೆ ಕೇಳುವಾಗಲೂ ನಮ್ಮ ನಿಯಮದೊಳಗೆ ಮಾತನಾಡಿ. ಏನು ಬೇಕಾದರೂ ಕೇಳಬಹುದೇ?

(ಗೊಂದಲ)

ಶ್ರೀ ವೆಂಟಕರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೇ, ನಮ್ಮ ಪಕ್ಷದ ಇಬ್ಬರು ಸದಸ್ಯರಿಗೆ ಎರಡೆರಡು ನಿಮಿಷ ಅವಕಾಶ ಕೊಡಿ ಮಾತನಾಡುತ್ತೇವೆ.

ಅಧ್ಯಕ್ಷರು : ಕೊಟ್ಟಿದ್ದೇನೆ.

ಡಾ: ಹೆಚ್.ಡಿ. ಮಹದೇವಪ್ಪ : ಮನ್ಯ ಅಧ್ಯಕ್ಷರೇ ಇದೊಂದು ಬಹಳ ಪ್ರಮುಖವಾದಂತಹ ಕಾಯಿದೆ. ತಾವು ಸಮಯ ಕೊಡುತ್ತೀರಿ ಎಂದು ನಾವು ಎದ್ದೇಳದೆ ಹಾಗೆ ಕುಳಿತಿದ್ದೇವೆ. ತಾವು ಇದಕ್ಕೆ ಮುಖ್ಯವಾಗಿ urgent ಮಾಡದೇ ಒಂದೆರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಎಲ್ಲರೂ ಸಮಯ ಪಾಲನೆ ಮಾಡಿದರೆ ಕೊಡಬಹುದು.

ಡಾ: ಹೆಚ್.ಸಿ. ಮಹದೇವಪ್ಪ : ಇದು ಪ್ರಮುಖವಾದಂತಹ ಕಾಯಿದೆ. ಆದ್ದರಿಂದ ನಾನು ತಮಗೆ request ಮಾಡುತ್ತೇನೆ. I am requesting you. ನಾನು ಬೆಳಿಗ್ಗೆ ಮಾತನಾಡುತ್ತಾ ಒಂದು ಮಾತನ್ನು ಹೇಳಿದೆ. ಶಾಸನ ಮಾಡತಕ್ಕಂಥಾದ್ದು ಈ ಮನೆಯ ಎಲ್ಲ ಸದಸ್ಯರ Privilege ಎಂದು ಹೇಳಿದೆ. ಕಾಲ ಕಾಲಕ್ಕೆ ರಾಜ್ಯದ ಜನರ ಹಿತರಕ್ಷಣೆ ಮಾಡುವುದಕ್ಕೆ. ಸಾಮಾಜಿಕ, ಆರ್ಥಿಕ, ಔದ್ಯೋಗಿಕ, ಧಾರ್ಮಿಕ ಹಕ್ಕುಗಳನ್ನು ರಕ್ಷಣೆ ಮಾಡುವುದಕ್ಕೆ, ಈ ಮನೆಯ ಸದಸ್ಯರು ಸರ್ಕಾರ ತರಲು ಉದ್ಧೇಶಿರುವಂಥ ವಿಧೇಯಕಗಳ ಮೇಲೆ ಚರ್ಚೆ ಮಾಡಿ, ಅದಕ್ಕೆ ಸಲಹೆಗಳನ್ನು ಕೊಟ್ಟು, ಅದಕ್ಕೆ ಉತ್ತಮವಾದಂಥ ವಾತಾವರಣದಲ್ಲಿ ಒಂದು ಕಾಯಿದೆಯನ್ನು ಮಾಡುವುದಕ್ಕೆ ನಮಗೆಲ್ಲರಿಗೂ ಅಧಿಕಾರವಿದೆ. ನಾವು ಮಾಡಿದಂಥ ಒಂದು ಶಾಸನ ರಾಜ್ಯದ ಬಹು ಭಾಗ ಜನರಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕು, ಮತ್ತೆ ಸೌಹಾರ್ದತೆಯ ವಾತಾವರನವನ್ನು ನಿರ್ಮಾಣ ಮಾಡಬೇಕು. ಈಗಾಗಲೇ ಗೋ ಹತ್ಯೆ ಮತ್ತು ಗೋ ಸಂರಕ್ಷಣೆ ಮತ್ತು ಅದರ ಸಂತತಿಯ ಉತ್ಪಾದನೆ

ಕಾಯಿದೆಯನ್ನು 2010ನೇ ಇಸವಿಯಲ್ಲಿ ತರಲು ಉದ್ದೇಶಿಸಿದ್ದಾರೆ. ಈಗಾಗಲೇ ರಾಜ್ಯದಲ್ಲಿ ಈ ಕಾಯಿದೆಯನ್ನು ಸಂವಿಧಾನದ ಆಶಯದ ಕೆಳಗೆ 48ನೇ ಪರಿಚ್ಛೇದದ ಕಡೆಗೆ 1964ನೇ ಇಸವಿಯಲ್ಲಿ ಜಾರಿಯಾಗಿದೆ. ಅಂದಮೇಲೆ ಸಂವಿಧಾನದ ಆಶಯದ ಕೆಳಗೆ ನಾವು ನಮ್ಮ ವ್ಯವಸಾಯ ಮತ್ತು ಗೋ ಸಂತತಿಯನ್ನು ಮತ್ತು ಅದರ ಉತ್ಪಾದನೆಯನ್ನು, ಅದರ ಸಂತತಿಯನ್ನು ಸಂರಕ್ಷಣೆ ಮಾಡಬೇಕೆನ್ನುವಂಥ ಹಿನ್ನೆಲೆ 1964 ರಲ್ಲೆ ಅಂದಿನ ಸರ್ಕಾರಕ್ಕೆ ಇತ್ತು, ಅದು ರಾಜ್ಯಾಂಗದ ಪರಿಚ್ಛೇದದ ಕೆಳಗಡೆ ಇತ್ತು. ಇವತ್ತು ಸರ್ಕಾರ ತರಲು ಉದ್ದೇಶಿಸಿರುವಂಥ ಕಾಯಿದೆಯ ಹಿನ್ನೆಲೆಯನ್ನು ಗೃಹ ಸಚಿವರಾದ ಸನ್ಮಾನ್ಯ ಆಚಾರ್ಯರವರು ಈ ಸಭೆಗೆ ವಿವರಿಸಿ ಹೇಳಿದ್ದಾರೆ. ವಿರೋಧ ಪಕ್ಷದ ಉಪ ನಾಯಕರು ಅನೇಕ ಪ್ರಮುಖವಾದಂಥ ವಿಷಯಗಳನ್ನು ಪ್ರಶ್ನಾವಳಿ ಮುಖಾಂತರ ಕೇಳಿ, ಇಲ್ಲಿರುವಂಥ ಅನುಮಾನಗಳನ್ನು ವ್ಯಕ್ತ ಮಾಡಿದ್ದಾರೆ. ಅದರ ಬಗ್ಗೆ ಹೆಚ್ಚು ಮಾತನಾಡದೆ ನಾನು ಪ್ರಮುಖವಾದಂತ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಭಾರತ ದೇಶದಲ್ಲಿ ಇಸ್ಲಾಂ ಧರ್ಮ ಹುಟ್ಟುವುದಕ್ಕಿಂತ ಮೊದಲೇ ಭಾರತದ ಹಿಂದುಗಳು ದನದ ಮಂಸವನ್ನು ಭಕ್ಷ್ಯ ಮಾಡುತ್ತಿದ್ದರು. ನಾನು ಏಕೆ ಈ ಮಾತನ್ನು ಹೇಳಿದೆಯೆಂದರೆ, ಬಾಬಾ ಸಾಹೇಬ್ ಡಾ: ಅಂಬೇಡ್ಕರ್ ರವರು ಒಂದು ಮಾತನ್ನು ಹೇಳಿದ್ದಾರೆ, ಅದು ಏನೆಂದರೆ, People who do not know history, they cannot create History. (ಯಾರಿಗೆ ಚರಿತ್ರೆ ಗೊತ್ತಿಲ್ಲವೊ, ಅವರು ಚರಿತ್ರೆಯನ್ನು ನಿರ್ಮಾಣ ಮಾಡಲಾರರು). ಏನು ಚರಿತ್ರೆ ಎಂಬ ಬಗ್ಗೆ ವೇದ ಪುರಾಣಗಳಲ್ಲಿ ನೋಡಿದ್ದೆವು. ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿನಪತ್ರಿಕೆಯಾದ ಸಂಯುಕ್ತ ಕರ್ನಾಟಕದಲ್ಲಿ ಒಂದು article ಬಂದಿದೆ. "ಹಸಿವು ಮತ್ತು ಶ್ರೇಷ್ಠ ಕತೆಗಳು: ವಿಶ್ವಾಮಿತ್ರ ತಾನು ತಿಂದದ್ದೇ ಶ್ರೇಷ್ಠ, ತಾನು ಮಾಡಿದ್ದೇ ಶ್ರೇಷ್ಠ ಎಂದು ಯಾವಾಗಲೂ ಹೇಳಿಕೊಂಡಿಲ್ಲ. ಇದು ಅವರ ಹಿರಿಮೆ. ಆದರೆ ನಾವು ಮಾಡಿದ್ದೆಲ್ಲ ಶ್ರೇಷ್ಠ ಎಂದು ಶ್ವಪಚರಾದಾಗಲೂ ಸಮರ್ಥಿಸಿಕೊಳ್ಳುವವರನ್ನು ನಾವು ನಮ್ಮ ಸಾಮಾಜಿಕ ಸಂದರ್ಭದಲ್ಲಿ ಕಾಣಬಹುದಾಗಿದೆ." ಅಂದರೆ ನಿಮಗೆ ಹಸಿವು ಆಗಿ, ಏನು ಆಹಾರ ಸಿಕ್ಕದೆ ಇರುವಾಗ, ನಾಯಿಯನ್ನೇ ತಿಂದೆ ಎಂದು ವಿಶ್ವಾಮಿತ್ರರು ಒಪ್ಪಿಕೊಂಡಿದ್ದಾರೆ. ಇದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ article ನಲ್ಲಿ ಬಂದಿರುವಂಥದ್ದು, ಇದು ನಾನು ಹೇಳಿದ್ದಲ್ಲ.

ಅದೇ ರೀತಿಯಲ್ಲಿ ವೇದ ಪುರಾಣಗಳ ಕಾಲದಲ್ಲಿ, ಹಸುವಿನ ಕರುವನ್ನು, ಕುದುರೆಯನ್ನು ಹೋಮ-ಹವನಗಳಿಗೆ ಬಳಸಿ ತಿನ್ನುತ್ತಿದ್ದರೆಂಬ ಮಾತು ಚರಿತ್ರೆಯಲ್ಲಿ ನಿರ್ಮಾಣವಾಗಿದೆ. ಸ್ವಾಮಿ ವಿವೇಕಾನಂದರು ಹೇಳಿಲ್ಲ, ಅದು ಸರಿಯಿಲ್ಲವೆಂದು ನಮ್ಮ ಗೆಳೆಯರು ಕೇಳಿದರು. *This letter was published in Letters to Editor; Hindustan Times dated 3rd January 2002* ಎಂದು ಒಂದು letter ಇದೆ. ಇದು From Swami Vivekananda's reply to the welcome address at Madurai in 1897, Published in Swamiji's Lecture from Colombo to Almora, brought out by the Advaita Ashram in 1997. ಇದರಲ್ಲಿ ಏನು ಹೇಳಿದ್ದಾರೆಂದರೆ, ದನದ ಮಾಂಸವನ್ನು ತಿನ್ನದೇ ಇರುವ ಬ್ರಾಹ್ಮಣ ಬ್ರಾಹ್ಮಣನೇ ಅಲ್ಲವೆಂಬ ಸಾರಾಂಶವಿದೆ. ನಾನು letter ಓದಿ ಹೇಳಿದ್ದೇನೆ, ಇದನ್ನು ಯಾರು ಬೇಕಾದರೂ ತೆಗೆದುಕೊಂಡು ಓದಬಹುದು, ನಾನು ಇಷ್ಟೆ ಹೇಳುವುದು. ಖ್ಯಾತ ಕಾದಂಬರಿಕಾರರಾದ ಶ್ರೀ ಎಸ್.ಎಲ್. ಭೈರಪ್ಪನವರ ಪರ್ವ ಎಂಬ ಕಾದಂಬರಿಯನ್ನು ಬರೆದಿದ್ದರೆ. ಅರ್ಜುನ, ಭೀಮ ಇವರೆಲ್ಲಾ ಬೇಟೆ ಆಡಿಕೊಂಡು ಬಂದು, ಕೋಣನ ಮಾಂಸವನ್ನು ಊಟ ಮಾಡುವಾಗ, ಏನು ಇವತ್ತು ನಮ್ಮ ಅರಮನೆಗಿಂತ ಚೆನ್ನಾಗಿ ಅಡುಗೆ ಮಾಡಿದ್ದಾರೆ, ಯಾರು ಮಾಡಿದ್ದು ಎಂದು ಕೇಳುತ್ತಾರೆ. ಅನೇಕ ಆರ್ಯರು ಬೇಟೆಯಲ್ಲಿ ಪ್ರಸಿದ್ಧರಾಗಿದ್ದರು, ಬೇಟೆಗೆ ಹೋಗಿ ಬೇಟೆಯಾಡಿ ತಂದು ಚೆನ್ನಾಗಿ ಬೇಯಿಸಿ ಕೊಂಡು ತಿನ್ನುತ್ತಿದ್ದರು. So, more than a caste or a religion, it is a food habit. Why the beef eaters became the beef protectors? What made them to become beef protectors? 4ನೇ ಶತಮಾನದ ನಂತರ ಭಾರತ ದೇಶದಲ್ಲಿ ಮಾಂಸಾಹಾರವನ್ನು ನಿಷೇಧಿಸಲು ಪ್ರಾರಂಭ ವಾಯಿತು, ಏಕೆಂದರೆ ಬುದ್ಧನ ಕಾಲದಲ್ಲಿ ಆಗ ಗುಡಿ-ಗುಂಡಾರಗು, ದೇವರು ಯಾವುದೆಂದರೆ ಈಶ್ವರ, ಶಂಕರ, ಪಾರ್ವತಿ ಯಾರು ಇರಲಿಲ್ಲ. ಬುದ್ಧನ ಕಾಲದ ನಂತರ ಅವರ ಅನುಯಾಯಿಗಳು ಸ್ತೂಪ್ರಗಳನ್ನು ಕಟ್ಟಿ, ಈ ಪ್ರಪಂಚದಲ್ಲಿ ಅವರ ವಿಷಯಗಳನ್ನು ಪ್ರಚಾರ ಮಾಡಿದರು. ಇದು ಇಡೀ ಜನ ಸಮುದಾಯ ನಡೆದುಕೊಳ್ಳುವಂಥ ಧರ್ಮವಾಯಿತು. ಬುದ್ಧನ ಧರ್ಮದಲ್ಲಿ ಮಾಡಿದಂಥ ಬೋಧನೆಗಳು ಸಾಮಾನ್ಯ ಜನರನ್ನು ಅವರತ್ತ ಸೆಳೆಯುವಂಥ ಪ್ರಯತ್ನಗಳು ಆದಾಗ, ಹಿಂದೂ ಧರ್ಮ started fighting

O.32 F-34

against Buddhism. It was a fight between the Hinduisn and Buddhism, 4ನೇ century ಆದಮೇಲೆ. ಈ ಹಿನ್ನೆಲೆಯಲ್ಲಿ ಯಾರ್‍ಯಾರು beef ತಿನ್ನುತ್ತಿದ್ದರೋ ಅವರು beef protector ಆದರು. ಇಲ್ಲಿ ಭಾವನಾತ್ಮಕ ವಿಷಯಗಳು, ಸೂಕ್ಷ್ಮ ವಿಷಯಗಳ ಮುಖಾಂತರ ಜನರನ್ನು ತನ್ನತ್ತ ಸಂಘಟನೆ ಮಾಡುವಂಥ ಪ್ರಯತ್ನಗಳು ನಡೆದವು. ಆ ಹಿನ್ನೆಲೆಯಲ್ಲಿ 1950ನೇ ಇಸವಿಯಲ್ಲಿ ಭಾರತ ದೇಶದಲ್ಲಿ ಜನ ಸಂಘ ರಾಷ್ಟ್ರವ್ಯಾಪಿ ಒಂದು ಸಂಘಟನೆ ಮಾಡಬೇಕೆಂದು ಹೇಳಿ, ತನ್ನ ಸಂಘಟನೆ ಕಾರ್ಯಕ್ರಮಗಳಲ್ಲಿ ಗೋ ಹತ್ಯೆ ಪ್ರಕರಣವನ್ನು ಗೋಹತ್ಯೆ ನಿಷಿದ್ಧವನ್ನು ಕಾರ್ಯಕ್ರಮ ಸೂಚಿಯಲ್ಲಿ ಹಾಕಿತು. 1952ನೇ ಇಸವಿಯಲ್ಲಿ RSS ರಾಷ್ಟ್ರವ್ಯಾಪಿ ಚಳುವಳಿ ಯನ್ನು ಮಾಡಿತು. ರಾಷ್ಟ್ರಪತಿಯವರ ಮೇಲೆ ಒತ್ತಡವನ್ನು ತಂದು ಇದು ಒಂದು ರಾಷ್ಟ್ರೀಯ ಕಾರ್ಯಕ್ರಮವನ್ನಾಗಿ ಗೋ ಹತ್ಯೆ ನಿಷೇಧವನ್ನು ಸೇರಿಸಬೇಕೆಂದು ಪ್ರಯತ್ನ ಮಾಡಿದರು. ಗಾಂಧೀಜಿಯವರ ಹತ್ಯೆಯ ಹಿನ್ನೆಯಲ್ಲಿ ಅವರಿಗೆ ಸ್ವಲ್ಪ ಹಿನ್ನಡೆಯಾಯಿತು. ಅದು ಆದಮೇಲೆ RSS ಹಿಂದೂ ಸೇನೆಯಾಗಿ ಮಾರ್ಪಟ್ಟು ಜನಾಭಿಪ್ರಾಯವನ್ನು ಕ್ರೋಢೀಕರಿಸಿ ಭಾವನಾತ್ಮಕ ಮತ್ತು ಸೂಕ್ಷ್ಮ ವಿಷಯಗಳ ಮುಖಾಂತರ ಹೆಚ್ಚು ಶಕ್ತಿಯನ್ನು ಗಳಿಸುವಂಥ ಪ್ರಯತ್ನಗಳು ನಡೆದವು. ಆ ಹಿನ್ನೆಲೆಯಲ್ಲಿ ಇವತ್ತು ಅತ್ಯಂತ ಸೂಕ್ಷ್ಮವಾಗಿರುವಂಥ ಸಂಗತಿಗಳ ಮುಖಾಂತರ ರಾಜಕೀಯವನ್ನು ಹೆಚ್ಚು ಶಕ್ತಿಯುತವಾಗಿ ಕಟ್ಟುವುದಕ್ಕೆ ಮತ್ತು ಬಹುತೇಕ ಸಮಾಜದ ಜನರನ್ನು ಒಂದು ಕಡೆ ಪ್ರತ್ಯೇಕಿಸುವುದಕ್ಕೆ ಬಲತ್ಕಾರವಾಗಿ ಮುಸಲ್ಮಾನರ ಮೇಲೆ ಗೋ ಹತ್ಯೆ ನಿಷೇಧದಂಥ ಕಾಯಿದೆಯನ್ನು ಬಲವಂತವಾಗಿ ಹೇರಿ, ಅವರು ಗೋ ಹತ್ಯೆ ಮಾಡುವ ಕಾರ್ಯವನ್ನು ನಿಷೇಧ ಮಾಡುವಂಥದ್ದು, ಹಿಂದೂ ಧರ್ಮವನ್ನು ಬಲತ್ಕಾರವಾಗಿ ಸೇರದ ರೀತಿಯಲ್ಲಿ ಮಾಡತಕ್ಕ ಪ್ರೇರಣೆ ಎಂದು ಒಂದು ಹೀನಾಯ ಕೃತ್ಯವಾಗುತ್ತದೆ. ಆದುದರಿಂದ ಭಾರತದಲ್ಲಿರುವಂಥ ಬಹು ಜನರು ಮುಸಲ್ಮಾನರ ಮೇಲೆ ಈ ರೀತಿಯಾದಂಥ ಹೇಯ ಕೃತ್ಯವನ್ನು ಮಾಡುವಂಥದ್ದು ವಿವೇಚನರಹಿತವಾದಂಥ ಘಟನೆ. ಆ ಹಿನ್ನಲೆಯಲ್ಲಿ ಮಹಾತ್ಮ ಗಾಂಧಿಯವರು ಒಂದು ಮಾತನ್ನು ಹೇಳಿದ್ದಾರೆ. ನನಗೆ ಸಮಯದ ಅಭಾವವಿರುವುದರಿಂದ ನಾನು ಹೆಚ್ಚು ವಿಷಯಗಳನ್ನು ಹೇಳದೆ, Nutritive values of Beef, ಎಷ್ಟೊಂದು protein ಇದೆ. Riboflavin ಇದೆ, Niacin ಇದೆ, Zinc ಇದೆ, Calcium ಇದೆ. ಏನೇನು ಇದೆಯೆಂಬುದು

ಡಾ: ಆಚಾರ್ಯರವರಿಗೆ ಗೊತ್ತಿದೆ, ತಮಗೆ ಗೊತ್ತಿದೆ, ಡಾ: ಸಾರ್ವಭೌಮ ಬಗಲಿಯವರಿಗೆ ಗೊತ್ತಿದೆ, ಆಹಾರ ಹೇಗಿದೆಯೆಂಬುದು ಗೊತ್ತಿದೆ. ಮಹಾತ್ಮ ಗಾಂಧಿಯವರು ಹೇಳಿರುವಂಥ ಮಾತನ್ನು ನಾನು ಇಲ್ಲಿ ಓದಿ ಹೇಳುತ್ತೇನೆ.

ಅಧ್ಯಕ್ಷರು : ಆಗಲೇ ಹೇಳಿದ್ದಾರೆ.

ಡಾ: ಹೆಚ್.ಸಿ. ಮಹದೇವಪ್ಪ : ಇರಲಿ ಸಾರ್, ಹೇಳುತ್ತೇನೆ. The collected works of Mahatma Gandhi's Speech at Prayer Meeting, New Delhi, July 25, 1947.

(7-00 PM)

"Brothers and sisters, Rajendrababu tells me that he has received some 50 thousand post cards between 25 thousands and 30 thousand letters, and many thousands of telegrams demanding ban on cow slaughter. I spoke to you view about this before. Why this sort of telegram and letters thay have mailed with us? Another telegram which says that a friend has started pass on this card. In India no law can be made to ban cow slaughter. I do not doubt that Hindus are forbidden the slaughter of cow. I have been long pledged to serve the cow but how can my religion also be the religion of rest of the Indians? It ill mean coalescence against those Indians who are not Hindus. We have been shouting from this whole House's top that there will be no coalescence in the matter of religion. We have been reciting verses from the coral at the prayer. How can I force my religion source cow slaughter and another relgion." This is Mahatma Gandhi's speech in 1947.

ಈ ಕಾಯಿದೆಯ 16ರಲ್ಲಿ "ಸದ್ಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳ ರಕ್ಷಣೆ" ಎಂದು ಇದೆ. ಅಂದರೆ ಯಾರ್ಯಾರು ಹಿಡಿದು ಕೊಡುತ್ತಾರೋ ಅವರಿಗೆ ಏನೂ ಮಾಡಬೇಡಿ ಎಂದಿದೆ. ಹಿಡಿದು ಕೊಡುವವರು ಯಾರು? 1950, National Movement, cow slaughter, Converted Hindu Sena, Mobilize people, organize political seminars, ಈ ರೀತಿಯ ಉದ್ದೇಶವನ್ನಿಟ್ಟುಕೊಂಡು ಇಂಥ ಒಂದು ಕಾಯಿದೆಯನ್ನು ತರುತ್ತಿದ್ದೀರಿ. ಅದರ ಜೊತೆಗೆ ಒಂದು ವಿಷಯವನ್ನು ಹೇಳಿಬಿಡುತ್ತೇನೆ. ಭಾರತ ಜನಗಣತಿ ಕಮೀಷನ್ನಿನ ಒಂದು ವರದಿ, 1910.

ಸಾಮಾಜಿಕವಾಗಿ ಮೂರು ವಿಧವಾಗಿ ಹಿಂದೂ ಜನಸಂಖ್ಯೆಯನ್ನು ವಿಂಗಡಿಸಿತು. ಹಿಂದೂಗಳು, ಸವರ್ಣೀಯ ಗುಂಪುಗಳನ್ನೊಳಗೊಂಡ ಸಸ್ಯಹಾರಿ ಹಾಗೂ ಮಾಂಸಾಹಾರಿಗಳು. ಇದರಲ್ಲಿ ಮಾಂಸಾಹಾರಿಗಳು ಸಂಸ್ಕೃತಮಯವಾದ ಜಾತಿ ಮುಂದಾಳತ್ವವನ್ನು ಒಪ್ಪಿಕೊಂಡು ಗೋ ಮಾಂಸ ಭಕ್ಷಣೆಯನ್ನು ಸೇವಿಸುವುದೇ ಅಲ್ಲದೇ ಬ್ರಾಹ್ಮಣರ ಪೌರೋಹಿತ್ಯಕ್ಕೆ ಮಾನ್ಯತೆಯನ್ನು ನೀಡುವುದು. ಎರಡನೆಯದು, ಬುಡಕಟ್ಟು ಹಾಗೂ ವೈರುಧ್ಯ ಮನಸ್ಸಿನ ಗುಂಪು ಯಾವುದೇ ವಿಧದಲ್ಲೂ ಅಂದರೆ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಆಹಾರ ಪದ್ಧತಿಯನ್ನು ಒಳಗೊಂಡಂತೆ ಮೊದಲನೇ ಗುಂಪಿನೊಂದಿಗೆ ಸಾಮ್ಯವಿಲ್ಲದಿರುವುದು. ಆದ್ದರಿಂದ ಇವರನ್ನು ಕೀಳು ದರಿಮರೆಂದು ಹಾಗೂ ಸ್ಪಷ್ಟವಾಗಿ ಮಾತು ಬಾರದ ಹಿಂದುಗಳೆಂದು ಕರೆದಿದ್ದರು. ಮೂರನೆಯವರು, ಅಸ್ಪೃಶ್ಯರು. ಒಡೆದ ಮನಸ್ಸಿನವರು ಅಂದರೆ, ಇವರು ಗೋ ಮಾಂಸ ಭಕ್ಷಕರು, ಹೊರಹಾಕಿದ ಸತ್ತದನಗಳ ಮಾಂಸವನ್ನು ತಿನ್ನುತ್ತಿದ್ದರಲ್ಲದೇ, ಮಾಂಸಕ್ಕಾಗಿ ಕೊಂದವುಗಳನ್ನಲ್ಲ. ಏಕೆಂದರೆ ಈ ಜನಕ್ಕೆ ಸುಲಭವಾಗಿ ದಕ್ಕುತ್ತಿದ್ದ ಆಹಾರವೇ ಈ ಸತ್ತ ದನಗಳಾಗಿದ್ದವು.' ನಾನು ಸಣ್ಣ ಹುಡುಗನಾಗಿದ್ದಾಗ ದನ ಮೇಯಿಸುತ್ತಿದ್ದೆ, ಎಮ್ಮೆ ಮೇಯಿಸುತ್ತಿದ್ದೆ. 7ನೇ ಕ್ಲಾಸಿನಿಂದ S.S.L.C. ಗೆ ಬರುವವರೆಗೆ ದನದ ಮಾಂಸ ತಿನ್ನುತ್ತಿದ್ದೆ. ದನದ ಗೊಬ್ಬರವನ್ನು ತಲೆಯ ಮೇಲೆ ಹೊತ್ತುಕೊಂಡು ತಿಪ್ಪೆಗುಂಡಿಗೆ ಹಾಕುತ್ತಿದ್ದೆ. ದನ, ಎಮ್ಮೆಗಳನ್ನು ತೊಳೆಯುತ್ತಿದ್ದೆ. ನಿಮ್ಮಲ್ಲಿ ಯಾರು ಸ್ವಾಮಿ ತೊಳೆದಿದ್ದಾರೆ? ಯಾರು ಕೊಟ್ಟಿಗೆಯಲ್ಲಿ ಮಲಗಿದ್ದಾರೆ? ಇವುಗಳನ್ನು ಯಾರು ರಕ್ಷಣೆ ಮಾಡುತ್ತಿದ್ದಾರೆ? ತಾವು ಇದನ್ನು ಮಾಡುವವರಲ್ಲ. ಇದರ ಬಗ್ಗೆ ಕಾಳಜಿ ಇರಬೇಕಾದುದು ರೈತನಿಗೆ. ಪಾಕಿಸ್ತಾನದಲ್ಲಿ ದನದ ಮಾಂಸದ ತೂಕ ನೂರಾರು ಕೆ.ಜಿ. ಬರುತ್ತದೆ. ಆದರೆ ಭಾರತದಲ್ಲಿ 58 ಕೆ.ಜಿ. ಬರುತ್ತದೆ. ಅಮೇರಿಕದಲ್ಲಿ 305 ಕೆ.ಜಿ. ಬರುತ್ತದೆ. ಇಲ್ಲಿ, ಅವುಗಳಿಗೆ ಹುಲ್ಲು ಹಾಕದೇ, ಮೇವು ಹಾಕದೇ, ನೀರು ಕುಡಿಸದೇ, ಹಿಂಸೆ ಮಾಡಿ, ಅವುಗಳಿಗೆ ಏನೂ ಮಾಡದೇ ದನದ ಬಗ್ಗೆ ಮಾತನಾಡಿದರೆ ಹೇಗೆ? ಸಾಕಷ್ಟು ಜನ ದಲಿತರು tanning industry ಮಾಡುತ್ತಿದ್ದಾರೆ. ಶಿವಕುಮಾರ್‌ರವರು ಹೇಳಿದರು. ನಿಮ್ಮ ಕೈಯಲ್ಲಿರುವ ವಾಚಿನಲ್ಲಿರುವ ಬೆಲ್ಟ್ ಏನು? ನಿಮ್ಮ ಕಾಲಿನಲ್ಲಿರುವ shoes ಯಾವುದರಿಂದ ಮಾಡಿದ್ದು? ಈ leather industries ಏನಾಗಬೇಕು? ಸಾಮಾಜಿಕ ಮತ್ತು ಆರ್ಥಿಕ ಬದುಕು ಇದರಲ್ಲಿ ಅಡಕವಾಗಿದೆ. ವ್ಯವಸಾಯ

ಕೂಡ ಇಲ್ಲಿದೆ. 1964 ರಲ್ಲಿ ಇದ್ದಂಥ ಕಾಯಿದೆಯನ್ನೇ ಮುಂದುವರೆಸಿ ಕೊಂಡು ಬಂದರೆ ಯಾರೂ ಇದರ ಬಗ್ಗೆ ಮಾತನಾಡುತ್ತಿರಲಿಲ್ಲ. ಭಾವನಾತ್ಮಕವಾಗಿ ಸೂಕ್ಷ್ಮವಾದ ವಿಚಾರಗಳ ಮುಖಾಂತರ ರಾಜಕೀಯ ಲಾಭ ಪಡೆದು, ಒಂದು ವರ್ಗದ ಬಹುತೇಕ ಜನರನ್ನು ಬೆದರಿಕೆಯಿಂದ ಇಡತಕ್ಕಂಥ ರಾಜಕೀಯ ವಾತಾವರಣ ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಮಾರಕವಾದುದು. ಆ ಹಿನ್ನಲೆಯಲ್ಲಿ ಈ ಕಾಯಿದೆಯನ್ನು, ಹಿಂದೆ ಇದ್ದ 1964ರ ಸ್ವರೂಪದಲ್ಲೇ ಬಿಟ್ಟು, ಈಗ ತರಲು ಉದ್ದೇಶಿಸಿರುವ ಕಾಯಿದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ಇವತ್ತು ಸರ್ಕಾರದವರು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣ ಕಾಯಿದೆಯನ್ನು ತಂದಿದ್ದಾರೆ. ಒಂದು ವೇಳೆ ಇದು ಗೋ ಹತ್ಯೆ ನಿಷೇಧದ ಕಾಯಿದೆಯಾಗಿದ್ದರೆ, ಬಹುಶಃ ಇದು ಈ ಸದನದಲ್ಲಿ ಚರ್ಚೆಯಿಲ್ಲದೇ ಪಾಸ್ ಆಗುತ್ತಿತ್ತು. ಜಾನುವಾರುಗಳು ಎಂದರೆ ಏನು ಅರ್ಥ ಎನ್ನುವುದನ್ನು ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಇವತ್ತಿಗೂ ಕೂಡ ಗೋವನ್ನು ಎಲ್ಲರೂ ಪ್ರೀತಿಸುತ್ತೇವೆ, ಪೂಜಿಸುತ್ತೇವೆ. ಅದು ಹಿಂದೂಗಳಿರಬಹುದು, ಮುಸ್ಲಿಮರು ಇರಬಹುದು, ಯಾರೇ ಇರಬಹುದು, ಅದರ ಬಗ್ಗೆ ಎರಡು ಮಾತಿಲ್ಲ. ಮೂಲಭೂತವಾಗಿ ಜಾನುವಾರುಗಳು ಇರುವುದು ರೈತರ ಮನೆಯಲ್ಲಿ. ಅವರು ಯಾವುದೇ ಜಾತಿಯವರಾಗಿರಬಹುದು, ಯಾವುದೇ ಧರ್ಮದವರಾ ಗಿರಬಹುದು. ದನಗಳನ್ನು ರೈತ ಏಕೆ ಮಾರುತ್ತಿದ್ದಾನೆ ಎನ್ನುವುದು ಮೂಲಭೂತವಾದ ಪ್ರಶ್ನೆ. ಒಂದು ವೇಳೆ ನಾವು ಮಾರಾಟ ಮಾಡದಿದ್ದರೆ, ಯಾವ ಕಸಾಯಿಖಾನೆಯವರೂ ಬಂದು ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಹಾಗಾಗಿ, ಅದರ ಬಗ್ಗೆ ಚಿಂತನೆಯಾಗಬೇಕೇ ವಿನಃ ಕಾನೂನನ್ನು ಮಾಡಿ, ಅದನ್ನು ಮಾರಬಾರದು ಎಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ? ನನ್ನ ಮನೆಯಲ್ಲಿ ಒಂದು ಹೋರಿ ಹುಟ್ಟಿದರೆ, ಅದು ನನ್ನ ಮನೆಯ ಮಗ ಎಂದು ನನ್ನ ಅಪ್ಪ ಹೇಳುತ್ತಿದ್ದರು. ನಂತರ ನನ್ನ ಮನೆಗೆ ಅದು ಹತ್ತು ವರ್ಷ ದುಡಿದಿದೆ ಎಂದು ಹೇಳಿ ಅದನ್ನು ಸತ್ತಮೇಲೂ ಸಹ ಯಾರಿಗೂ ಕೊಡುತ್ತಿರಲಿಲ್ಲ. ಅದನ್ನು ಸಮಾಧಿ ಮಾಡಿ, ಪೂಜೆ ಮಾಡತಕ್ಕಂಥ ಸಂಸ್ಕೃತಿ ಇದ್ದವರು ನಾವು. ಆದರೆ ಇವತ್ತು ಅನಿವಾರ್ಯವಾಗಿ ನಾವು ದನಗಳನ್ನು ಏಕೆ ಮಾರುತ್ತಿದ್ದೇವೆ ಎನ್ನುವ ಬಗ್ಗೆ ಚಿಂತನೆಯಾಗಬೇಕು. ರೈತರಿಗೆ

ಅವುಗಳನ್ನು ಸಾಕುವಂಥ ಶಕ್ತಿ ತುಂಬಿದರೆ, ಅವನು ಅವುಗಳನ್ನು ಮಾರದಿದ್ದರೆ ಈ ಕಾಯಿದೆಯ ಅವಶ್ಯಕತೆಯೇ ಇರುವುದಿಲ್ಲ. ನಾವು ಅವುಗಳನ್ನು ಮಾರುತ್ತಿರುವುದರಿಂದ ಅವರು ಬಂದು ತೆಗೆದುಕೊಳ್ಳುತ್ತಿದ್ದಾರೆ. ನಾವು ಮಾರದೇ ಇದ್ದರೆ, ಅವರು ನಮ್ಮ ಮನೆಗೆ ಬಂದು ಒತ್ತಾಯಪೂರ್ವಕವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ. ಅದನ್ನು ಅರ್ಥಮಾಡಿಕೊಳ್ಳಬೇಕಾಗಿರುವುದು ಇಲ್ಲಿ ಮುಖ್ಯ. ದನಕರುಗಳನ್ನು ಸಾಕತಕ್ಕಂಥ ಶಕ್ತಿಯನ್ನು ರೈತ ಅಥವಾ ರೈತ ಕಾರ್ಮಿಕನಿಗೆ ನಾವು ತುಂಬಬೇಕಾಗಿದೆಯೇ ವಿನಃ ಈ ಕಾಯಿದೆ ಮಾಡುವುದರಿಂದ ಏನೂ ಉಪಯೋಗವಾಗುವುದಿಲ್ಲ. ಒಂದು ವಿಚಾರದಲ್ಲಿ ನಾನು Clarification ಅನ್ನು ಕೇಳುತ್ತೇನೆ. ನಾವು ಎಮ್ಮೆಯನ್ನು, ಕೋಣವನ್ನು ಪೂಜೆ ಮಾಡುವುದಿಲ್ಲ. ಅವುಗಳನ್ನು ನಾವು ಮಾರಾಟ ಮಾಡುತ್ತಾ ಬಂದಿರುವುದು ನಮ್ಮ ಮನೆತನದಲ್ಲಿ ಇದೆ. ಯಾವ ರೈತರೂ ಕೂಡ ಕೋಣಗಳನ್ನು ಇಟ್ಟುಕೊಳ್ಳುವುದಿಲ್ಲ, ಅವುಗಳನ್ನು ಮಾರುತ್ತಾರೆ. ಅವುಗಳನ್ನೂ ಕೂಡ ಮಾರಬಾರದು ಎಂದು ನೀವು ಇಲ್ಲಿ ಹೇಳಿದ್ದೀರಿ. ಈ ಕಾಯಿದೆಯ 18 ರಲ್ಲಿ "ಜಾನುವಾರುಗಳ ರಕ್ಷಣೆಗಾಗಿ ಸಂಸ್ಥೆಗಳ ಸ್ಥಾಪನೆ" ಎಂದು ಹೇಳಿದ್ದೀರಿ. ಅಂದರೆ ಇವುಗಳನ್ನೆಲ್ಲ ಸರ್ಕಾರ ಸಾಕುತ್ತದೆಯೇ? ಎನ್ನುವುದನ್ನು ಹೇಳಬೇಕು. ಏಕೆಂದರೆ, ಕಾಯಿದೆಯ 18 (1) ರಲ್ಲಿ ಈ ರೀತಿ ಹೇಳಿದ್ದೀರಿ:

"ರಾಜ್ಯ ಸರ್ಕಾರವು, ಕಳುಹಿಸಲಾಗಿರುವ ಜಾನುವಾರುಗಳ ಪಾಲನೆಗಾಗಿ ಅವಶ್ಯಕವೆಂದು ಭಾವಿಸಬಹುದಾದಂತ ಸ್ಥಳಗಳಲ್ಲಿ ಅಂಥ ಸಂಸ್ಥೆಗಳನ್ನು ಸ್ಥಾಪಿಸಬಹುದು ಅಥವಾ ಸ್ಥಾಪಿಸುವಂತೆ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ನಿರ್ದೇಶಿಸಬಹುದು ಅಥವಾ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಅಡಿಯಲ್ಲಿ ನೋಂದಣಿಯಾದ ಸಂಘಕ್ಕೆ ಅಥವಾ ಯಾವುದೇ ಅಸೋಸಿಯೇಷನ್‌ಗೆ ಅಥವಾ ಸಂಸ್ಥೆಗೆ ಅನುಮತಿಸಬಹುದು" ಎಂದು ಇದೆ. ಇದನ್ನು clarify ಮಾಡಬೇಕು ಎಂದು ನಾನು ಕೇಳುತ್ತೇನೆ. ಅವುಗಳನ್ನೆಲ್ಲ ಈ ಸಾಕುತ್ತದೆಯೇ, ಹೇಗೆ ಎನ್ನುವುದನ್ನು ಹೇಳಬೇಕು. ಇದರ ಅರ್ಥ ಏನೆಂದು ನನಗೆ ಅರ್ಥವಾಗಲಿಲ್ಲ. ಅದನ್ನು ದಯವಿಟ್ಟು ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಮಾಡಬೇಕೆನ್ನುವ ಮನವಿಯನ್ನು ಮಾಡಿ, ಇದು ಅಷ್ಟು ಸಮಂಜಸವಲ್ಲ, ಇದನ್ನು ಸರ್ಕಾರ ಮರುಪರಿಶೀಲನೆ ಮಾಡಬೇಕು ಎಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ಈಗ ಒಂದು ಪ್ರಕಟಣೆ.

7. ಪ್ರಕಟಣೆ :

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2010ನೇ ಸಾಲಿನ ವಿಧೇಯಕಗಳನ್ನು ಈ ದಿನ, ದಿನಾಂಕ: 19-03-2010 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

1. ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2010
2. ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ, 2010
3. ಕರ್ನಾಟಕ ಸ್ಟ್ಯಾಂಪ್ (ಎರಡನೇ ತಿದ್ದುಪಡಿ) ವಿಧೇಯಕ, 2010
4. ಕರ್ನಾಟಕ ಮೌಲ್ಯ ತೆರಿಗೆ (ತಿದ್ದುಪಡಿ) ವಿಧೇಯಕ, 2010
5. ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2010
6. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2010

8. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅಧ್ಯಕ್ಷರು : ಭಾರತ ಸಂವಿಧಾನದ 151(2)ನೇ ಅನುಚ್ಛೇಧದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2009ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕ ಪರಿಶೋಧನಾ (ಸಿವಿಲ್) ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳು ಸಭೆಯ ಮುಂದಿಡುವರು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151(2)ನೇ ಅನುಚ್ಛೇಧದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2009ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕಪರಿಶೋಧನಾ (ಸಿವಿಲ್) ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

9. ಶಾಸನಾ ರಚನೆ :

(1) ಪರ್ಯಾಲೋಚನಾ ಪ್ರಸ್ತಾವ (ಮುಂದುವರೆದದ್ದು) ಕರ್ನಾಟಕ ಜಾನುವಾರು ಹತ್ಯೆ ಪ್ರತಿಭಂದಕ ಮತ್ತು ಸಂರಕ್ಷಣ ವಿಧೇಯಕ 2010

ಶ್ರೀ ರಹೀಂ ಖಾನ್ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ಬೀದರ್ ಜಿಲ್ಲೆಯಲ್ಲಿ ದಲಿತರು, ಕ್ರಿಶ್ಚಿಯನ್, ಹೀಗೆ ಎಲ್ಲಾ ಸಮಾಜದ ಬಡವರಿದ್ದಾರೆ. ಇವತ್ತು ಈ ಬಿಲ್ ಪರಿಶೀಲನೆಯಲ್ಲಿದೆ. ಗೋ ಮಾಂಸದಲ್ಲಿ Protein ಇದ್ದು ಅದು ಬಡವರ, ಸಾಹುಕಾರರ ಆಹಾರವಾಗಿದೆ. ನಮ್ಮ ಬೀದರ್‌ನಿಂದ 10–20 ಕಿ.ಮೀ. ದೂರ ಒಂದು ದೊಡ್ಡ ಕಂಪನಿ ಇದೆ. ಪ್ರತಿ ದಿವಸ 5–10 ಸಾವಿರದಷ್ಟು ಕೆ.ಜಿ.ಯ ಮಾಂಸವನ್ನು foreign country ಗೂ ಕೂಡ Supply ಮಾಡುತ್ತಿದ್ದಾರೆ. ಅದು ಯಾರದೋ upper caste ನವರ ಕಂಪನಿ. ದಿಲ್ಲಿಯವರು ಇಲ್ಲಿಗೆ ಆ ಕಂಪನಿ ನಡೆಸುತ್ತಿದ್ದಾರೆ. ಆದುದರಿಂದ, ನಾನು ತಮಗೆ request ಮಾಡುವುದೇನೆಂದರೆ, ಬಡವರಿಗೆ ತೊಂದರೆಯಾಗುವುದ ರಿಂದ ಈ ಬಿಲ್ ಅನ್ನು ಜಾರಿಗೆ ತರಬಾರದು. ಈ ಬಿಲ್ ತರಬೇಕೆಂದರೆ, ಸರ್ಕಾರಕ್ಕೆ ಶಕ್ತಿ ಇದ್ದರೂ ನಾನು ಹೇಳುತ್ತೇನೆ, Vegetarian Bill ತರಬೇಕು, ಅದಕ್ಕೆ ಎಲ್ಲರೂ Support ಮಾಡಬೇಕು. Tiger ಊಟಕ್ಕೆ disturb ಮಾಡಬಾರದು. Tiger ಊಟಕ್ಕೆ disturb ಮಾಡಿದರೆ, ಅವು ಹಸಿವಿನಿಂದ ಸಾಯುತ್ತವೆ. ಇಲ್ಲವೆ, ಸಾಯಿಸುತ್ತದೆ. ಅದರ ಸಲುವಾಗಿ ನಾನು ಹೇಳುವುದೇ ನೆಂದರೆ, request ಮಾಡುವುದೇನೆಂದರೆ, ಈ ಬಿಲ್ ಜಾರಿಗೆ ತರಬಾರದು. ರವಿಯವರು ಹೇಳಿದ ಹಾಗೆ, ನಾವೂ ಸಪೋರ್ಟ್ ಮಾಡುತ್ತೇವೆ, life punishment ಕೊಡಬೇಕು. ನಾನು ಈ ಬಿಲ್ ಅನ್ನು ವಿರೋಧಿಸುತ್ತೇನೆ.

ಅಧ್ಯಕ್ಷರು : ಸಾಕು, ನಿಲ್ಲಿಸಿ, ನಾನು ಕುಮಾರಸ್ವಾಮಿಯವರನ್ನು ಕರೆದಿದ್ದೇನೆ. ತಾವು ಮಾತನಾಡುವುದು ದಾಖಲೆಗೆ ಹೋಗುವುದಿಲ್ಲ. ದಾಖಲೆಗೆ ತೆಗೆದುಕೊಳ್ಳಬೇಡಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಸರ್ಕಾರ ತಂದಿರುವ ಮಸೂದೆ ಬಹುಶಃ ಬಹು ಜನರ ವಿರೋಧಿ ಮಸೂದೆ ಎಂದು ನಾನು ಭಾವಿಸುತ್ತೇನೆ. ಕಾರಣ, ಈಗಾಗಲೇ ಮಾತನಾಡಿದಂಥ ಅನೇಕ ಮಾನ್ಯ ಸದಸ್ಯರು ಈ ಮಸೂದೆಯನ್ನು ಜಾರಿಗೆ ತಂದರೆ ಅದರಿಂದಾಗತಕ್ಕಂಥ ಪರಿಣಾಮಗಳ ಬಗ್ಗೆ

ಹೇಳಿದ್ದಾರೆ. ಇರತಕ್ಕಂಥ ಜನಸಂಖ್ಯೆಯಲ್ಲಿ ಶೇ. 70ಕ್ಕಿಂತಲೂ ಹೆಚ್ಚು ಜನ ಗೋ ಮಾಂಸವನ್ನು ಉಪಯೋಗಿಸತಕ್ಕಂಥದ್ದು ಇದೆ. ಯಾವುದೇ ಒಬ್ಬ ವ್ಯಕ್ತಿಯ ಆಹಾರ ಪದ್ಧತಿಯನ್ನು ಕಿತ್ತುಕೊಳ್ಳತಕ್ಕಂಥ ಹಕ್ಕು ಯಾವುದೇ ಸರ್ಕಾರಕ್ಕೂ, ಯಾರಿಗೂ ಕೂಡ ಇಲ್ಲ. ಅದು fundamental right. ನನ್ನ ಆಹಾರ ಪದ್ಧತಿ ನನಗೆ ರುಚಿಕರ ಇದೆ.

ಮಹದೇವಪ್ಪನವರು ಮಾತನಾಡುವಾಗ, ಅದರಲ್ಲಿ ಎಷ್ಟು ಪೌಷ್ಟಿಕಾಂಶವಿದೆ ಎಂದು ಹೇಳಿದ್ದಾರೆ. ಬಹುಶಃ ಮುಖ್ಯಮಂತ್ರಿಯವರಿಗೆ, ಸರ್ಕಾರಕ್ಕೆ ಎಲ್ಲರಿಗೂ ಗೊತ್ತು. ಭಾರತ ದೇಶದಲ್ಲಿ ಬಿಡಿ, ವಿದೇಶಗಳಲ್ಲಿ ಇವತ್ತು ಗೋ ಮಾಂಸವೇ ಪ್ರಧಾನವಾಗಿದೆ. ಹೊರದೇಶಗಳಿಗೆ ಯಾರೇ ಹೋದರೂ ಇದರ ಅನುಭವವಾಗಿರಬಹುದು. ಅಲ್ಲಿ ಚಿಕನ್, ಮಟನ್ ಇಲ್ಲ ಬೀಫ್ ಮಾತ್ರ ಇರುತ್ತದೆ. ಎಲ್ಲಾ ರೀತಿಯಲ್ಲಿ ಪರಿಷ್ಕರಿಸಿ ಗೋ ಮಾಂಸವನ್ನು ಉಪಯೋಗಿಸುತ್ತಾರೆ. ಇವತ್ತು ಮಾಂಸ ತಿನ್ನುವುದಕ್ಕೆ ಜಾತಿ ಇಲ್ಲ. ಎಲ್ಲಾ ಜಾತಿಯಲ್ಲೂ ಕೂಡ ಯಾವುದು ರುಚಿಕರವಾಗಿರುತ್ತದೆ ಅದನ್ನು ಎಲ್ಲರೂ ತಿನ್ನುತ್ತಾರೆ. ಅದಕ್ಕಾಗಿ, ಬಹು ಜನರ ವಿರೋಧಿ ಕಾಯ್ದೆ ಇದು. ಇದನ್ನು ಸರ್ಕಾರವರ ಪ್ರತಿಷ್ಠೆಯಾಗಿ ಮಾಡಿಕೊಳ್ಳಬಾರದು. ಸುರೇಶ್‌ಕುಮಾರ್ ರವರೆ, ತಾವು ತುಂಬಾ ಬುದ್ಧಿವಂತರು, ವಿಮರ್ಶಕರಿದ್ದೀರಿ, ಸ್ವಲ್ಪ ಯೋಚನೆ ಮಾಡಿ. ಆತ್ಮಸಾಕ್ಷಿಯಿಂದ ಮಾಡಿ. ನಿಮ್ಮ ಪಕ್ಷದ ಪ್ರಣಾಳಿಕೆ ಹೇಳಿದೆ, ನಮ್ಮ ಕಾರ್ಯಕರ್ತರು ಹೇಳಿದ್ದಾರೆಂದು ಪ್ರತಿಷ್ಠೆ ಮಾಡಬೇಡಿ. ಇದನ್ನು ವಾಪಸ್ ತೆಗೆದುಕೊಳ್ಳಿ, ಕನಿಷ್ಠ ಇದನ್ನು ಜಂಟಿ ಸದನ ಸಮಿತಿಯನ್ನು ರಚಿಸಿ, ಅಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಬೇಕು. ಈಗ ಈ ಬಿಲ್ ಅನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ತನ್ವೀರ್ ಸೇಠ್ : ಸರ್ಕಾರ ತಂದಿರುವ ಈ ಮಸೂದೆಯನ್ನು ತೀವ್ರವಾಗಿ ನಾನು ಖಂಡಿಸುತ್ತೇನೆ. ಈಗಾಗಲೇ 1964 ಗೋ ಹತ್ಯೆ ನಿಷೇಧ ಕಾಯ್ದೆ ಏನಿದೆ ಅದು ಈ ರಾಜ್ಯದಲ್ಲಿ ಕೆಲಸ ಮಾಡುತ್ತಿದೆ. ಇವತ್ತಿನ ಆಹಾರ ಪದ್ಧತಿ ಹೇಗಿದೆ ಎಂದರೆ, ಒಬ್ಬರ ಆಹಾರ ಮತ್ತೊಬ್ಬರಿಗೆ ವಿಷವಾಗಬಹುದು. One man's food is other man's poison. ಇಂಥ ಸಂದರ್ಭದಲ್ಲಿ ಸರ್ಕಾರ ಮಸೂದೆ ತಂದಿದೆ. ಇದು ಸಾಕಷ್ಟು ಲೋಪದೋಷಗಳಿಂದ ಕೂಡಿರುವ ಮಸೂದೆಯಾಗಿದೆ. ಕೃಷಿ ಕ್ಷೇತ್ರ, ಕೈಗಾರಿಕಾ ಕ್ಷೇತ್ರ ಅಥವಾ ಉದ್ಯೋಗ ಸೃಷ್ಟಿ ಮಾಡುವಂಥ ಪರಿಕಲ್ಪನೆ ಮಾಡುವಂಥದ್ದಿರಬಹುದು,

O.32 F-35

ಇವೆಲ್ಲದಕ್ಕೂ ಧಕ್ಕೆ ತರುವಂಥ ಮಸೂದೆ ಇದಾಗಿದೆ. ಇದರ ಜೊತೆಗೆ, ಹೊರ ರಾಷ್ಟ್ರಕ್ಕೆ ರಫ್ತಾಗುವಂಥದ್ದಿದ್ದು, ಇದರಲ್ಲಿ ಅಕಷ್ಟು ಕೈಗಾರಿಕೋದ್ಯಮಿಗಳು ಅನೇಕ ಜನರಿಗೆ ಉದ್ಯೋಗ ಸೃಷ್ಟಿ ಮಾಡಿಕೊಟ್ಟು ಇದು ನಡೆಯುತ್ತಾ ಬಂದಿದೆ. ಈ ಬಿಲ್‌ನಲ್ಲಿ definition of beef ಎಂದು ಕೊಟ್ಟಿದ್ದಾರೆ. Definition of cattle ಎಂದು ಕೊಟ್ಟಿದ್ದಾರೆ. ಬಹುಶಃ ಸರ್ಕಾರ definition of beef products ಎಂದು ಕೂಡ ಕೊಡಬೇಕಾಗಿತ್ತು. Beef products ಎಂದರೆ, ದಿನ ನಿತ್ಯಕ್ಕೆ ಬಳಕೆಯಾಗುವಂಥ ಅನೇಕ ಸಾಮಗ್ರಿಗಳು ಇದರಲ್ಲಿ ಸೇರಿರುತ್ತವೆ. ಇದರ Section 5 ನಲ್ಲಿ, Prohibition of sale, usage and possession of beef ಎಂದಿದೆ, beef products ಎನ್ನುವ ಪದಗಳನ್ನು ಏನು ಬಳಕೆ ಮಾಡಿದ್ದಾರೆ ಅದರ definition ಕೊಟ್ಟಂಥ ಸಂದರ್ಭದಲ್ಲಿ ಇದನ್ನೂ ಇನ್ನೂ ವ್ಯಾಪಕವಾಗಿ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಇದರ ಜೊತೆಗೆ, ಸರ್ಕಾರ ಈ ಮಸೂದೆಯಲ್ಲಿ ಲಕ್ಷಾಂತರ ಜನರಿಗೆ ಉದ್ಯೋಗವಾಗಿರಬಹುದು ಅಥವಾ ಆಹಾರ ಸೇವನೆ ಮಾಡುವಂಥ ಪದ್ಧತಿ ಇರಬಹುದು ಅದಕ್ಕೆ alternate ಏನೆನ್ನುವುದನ್ನು ಇದರಲ್ಲಿ ತೋರಿಸಬೇಕಿತ್ತು, ಆದರೆ, ತೋರಿಸಿಲ್ಲ. Section 8 ರಲ್ಲಿ, fundamental right of trade guarantee, Constitution Article 19(1) (g) ನಲ್ಲಿ ಏನಿದೆ ಅದಕ್ಕೆ ಧಕ್ಕೆ ಬರುವಂಥ ಸಾಧ್ಯೆಗಳಿವೆ. ಇದರ ಜೊತೆಗೆ, 1964ರ ಮಸೂದೆ ರಾಷ್ಟ್ರಪತಿಯವರ ಒಪ್ಪಿಗೆಯನ್ನು ಪಡೆದು ಜಾರಿಯಲ್ಲಿದೆ. ಈಗ ಮತ್ತೆ ಅದನ್ನು ಬದಲಾವಣೆ ಮಾಡಬೇಕಾದರೆ repeal ಮಾಡಿ ಮತ್ತೊಮ್ಮೆ ತರಬೇಕಾದರೆ ಇದನ್ನು ಮತ್ತೆ ರಾಷ್ಟ್ರಪತಿಯವರ ಒಪ್ಪಿಗೆಯನ್ನು Article 304(b) ರ ಪ್ರಕಾರ ಬರೆದು ಮಾಡಬೇಕಾಗಿರುವ ಅವಶ್ಯಕತೆ ಇರುವುದರಿಂದ ಸರ್ಕಾರ ಇದನ್ನು ವಾಪಸ್ ತೆಗೆದುಕೊಂಡು 1964ರ ಗೋಹತ್ಯೆ ನಿಷೇಧ ಕಾಯ್ದೆ ಏನಿದೆ ಅದನ್ನು ನಾವೆಲ್ಲರೂ ಸ್ವಾಗತಿಸುತ್ತೇವೆ. ನಾವು ಆ ಭಾವನೆಗಳಿಗೆ ಧಕ್ಕೆ ಬರುವಂಥ ಕೆಲಸವನ್ನು ಮಾಡುವುದಿಲ್ಲ. ಬಹುಶಃ ಈ ಸದನದಲ್ಲಿ ನಾವು 8 ಜನರಿದ್ದೇವೆ. ರೋಷನ್ ಬೇಗ್, ಖಮರುಲ್ ಇಸ್ಲಾಂ, ನಾನೂ ಸೇರಿದಂತೆ 8 ಜನರಿದ್ದೇವೆ.

ಅಧ್ಯಕ್ಷರು : ಇನ್ನೂ ಸಾಕಷ್ಟು ಜನರಿದ್ದಾರೆ. ತಾವು ಮುಗಿಸಿ.

ಶ್ರೀ ತನ್ವೀರ್ ಸೇಠ್ : ನಾವು 8 ಜನರೂ ಬೇಕಾದರೆ bond paper ನಲ್ಲಿ ಬರೆದುಕೊಡುತ್ತೇವೆ. ಒಂದೇ ಒಂದು ಕೋಮಿಗೆ ಗುರಿಯಾಗಿದ್ದರೆ, ನಾವು 8 ಜನರೂ ಬರೆದುಕೊಡುತ್ತೇವೆ. ಗೋ ಹತ್ಯೆ ನಿಷೇಧಕ್ಕೆ ನಾವು ಪೂರ್ಣ ಪ್ರಮಾಣದಲ್ಲಿ ಸಹಕಾರ ಕೊಡುತ್ತೇವೆ. ಆದರೆ, ಜಾನುವಾರು ಹತ್ಯೆ ನಿಷೇಧ ಕಾನೂನು ಏನು ತಂದಿದ್ದಾರೆ ಅದರಿಂದ ಅನೇಕ ಜನರಿಗೆ ತೊಂದರೆಯಾಗುತ್ತದೆ ಎಂದು ನಾನು ಪ್ರತಿಪಾದಿಸುತ್ತಿದ್ದೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ಈ ಬಿಲ್‌ನ ಬಗ್ಗೆ ಈಗಾಗಲೇ ಸುದೀರ್ಘವಾಗಿ ಚರ್ಚೆಯಾಗಿದೆ. ಅವರು ಈ ವಿಧೇಯಕವನ್ನು ಬಹಳ ಆಸೆಯಿಂದ ತಂದಿದ್ದಾರೆ. ಅವರ ಬಜರಂಗ ದಳದ ಕಾರ್ಯಕರ್ತರಿಗೆ ಮಾತು ಕೊಟ್ಟಿದ್ದಾರೆ. ನಮ್ಮ ಅರಸೀಕೆರೆಯಲ್ಲಿ ಪ್ರತಿ ದಿವಸ ಹೊಡೆದಾಡುತ್ತಾರೆ. ಏಕೆಂದರೆ, ಈಶ್ವರಪ್ಪನವರು ಎರಡು ಜೊತೆ ಹೋರಿ ಕೊಂಡುಕೊಂಡಿದ್ದರು. ಅವುಗಳನ್ನು ಲಾರಿಯಲ್ಲಿ ತುಂಬಿಕೊಂಡು ಅರಸೀಕೆರೆಗೆ ಬಂದರು. ಅರಸೀಕೆರೆ ಹತ್ತಿರ ಹೋಗಿ ಬಜರಂಗ ದಳದವರು ಹೋಗಿ ಹಿಡಿದರು. ಅವರನ್ನು ಪೊಲೀಸ್ ಸ್ಟೇಷನ್‌ನಲ್ಲಿ ಹೊಡೆಸಿದರು. ಅಷ್ಟು ಹೊತ್ತಿಗೆ ಈಶ್ವರಪ್ಪನವರದು ಎಂದು ಗೊತ್ತಾದಾಗ ಬಿಟ್ಟು ಕಳುಹಿಸಿದರು. ಅಲ್ಲಿ ದಿವಸ ಹಿಡಿಯುತ್ತಾರೆ. ಅಲ್ಲೇನಾಗಿದೆ ಎಂದರೆ, ಸಾಗಾಣಿಕೆಯನ್ನು ಕಾನೂನನ್ನು ತರತಕ್ಕಂಥ ವ್ಯವಸ್ಥೆಯಲ್ಲಿ ಬಹಳಷ್ಟು ನ್ಯೂನತೆಗಳನ್ನು ತಂದಿದ್ದೀರಿ. ವೈಯಕ್ತಿಕವಾಗಿ ದ್ವೇಷವನ್ನು ಆಚರಣೆ ಮಾಡತಕ್ಕಂಥ ಬಹಳಷ್ಟು ನ್ಯೂನತೆಗಳು ಇದರಲ್ಲಿವೆ. ಯಾರೇ ಒಬ್ಬ ವ್ಯಕ್ತಿ ಆ ಗೋ ಹತ್ಯೆಗೆ ಪ್ರಚೋದನೆ ಮಾಡಿದರು ಎಂದರೂ ಸಹ ಅವನಿಗೂ ಶಿಕ್ಷೆ ಎಂದು ಹೇಳಿದರೆ, ಯಾರೋ ನನಗೆ ಆಗುವುದಿಲ್ಲ, ಅವನೊಬ್ಬ ಬಂದು ಇವರು ಗೋ ಮಾಂಸ ಕಡಿಯಿರಿ ಎಂದು ಹೇಳಿದರೆಂದು ನನ್ನ ಮೇಲೆ ಹೇಳಿದರೆ ನಾನು election ಗೆ ನಿಲ್ಲುವ ಹಾಗೆಯೇ ಇಲ್ಲ. ಈ ಬಗ್ಗೆ ಯೋಚನೆ ಮಾಡಿ. ಬಿಲ್‌ಗಳನ್ನು ತರಬೇಕೆಂದರೆ, ಯಾವ ರೀತಿ ಅರಾಜಕತೆ ಉಂಟಾಗುತ್ತದೆ, ಕಾನೂನಿನ ಚೌಕಟ್ಟಿನ ಸೂಕ್ಷ್ಮತೆ ಬುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ಬಹಳ ಯೋಚನೆ ಮಾಡಬೇಕು.

ಅಧ್ಯಕ್ಷರು : ಆಯಿತು ಮುಗಿಸಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅಧ್ಯಕ್ಷರೆ, ಮಾತನಾಡಲು 5 ನಿಮಿಷ ಅವಕಾಶ ಕೊಡಿ. ಇಷ್ಟು ಬೇಗ ಮುಗಿಸಿ ಎಂದರೆ ಆಗುವುದಿಲ್ಲ. ಎರಡು

ಪಾಯಿಂಟ್ ಹೇಳುವುದಕ್ಕೆ ಅವಕಾಶ ಕೊಡಿ. ಬೇರೆಯವರಿಗೆಲ್ಲ ಅರ್ಧ ಅರ್ಧ ಗಂಟೆ ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು : ಹೇಳುವುದನ್ನೇ ಹೇಳಿದರೆ ಅದರಲ್ಲೇನು ವಿಶೇಷತೆ ಇದೆ? ನಾನು ಮೊದಲೇ 2–2 ನಿಮಿಷ ಅವಕಾಶ ಕೊಡುತ್ತೇನೆಂದು ಎಲ್ಲರಿಗೂ ಹೇಳಿದ್ದೇನೆ. Please, ಬೇಗ ಮುಗಿಸಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಹೀಗೆ ಮಾಡಿದರೆ ನಾವು ಕೆಲಸ ಮಾಡುವುದಕ್ಕಾಗುವುದಿಲ್ಲ. ದನಗಳಿಗೆ ವಯಸ್ಸಾದ ಮೇಲೆ ಅವುಗಳನ್ನು ಎಲ್ಲಿಗೆ ಕಳುಹಿಸಬೇಕು?

ಯೌವನ ಇರುವವರೆಗೆ ದುಡಿಸಿಕೊಳ್ಳುತ್ತೇವೆ. ಒಂದೊಂದು ಮನೆಯಲ್ಲಿ 4–5 ದನಗಳಿರುತ್ತದೆ. ಇಂದಿನ ಕಾಲದಲ್ಲಿ ತಂದೆ ತಾಯಿಯರನ್ನೇ ಸಾಕದೆ ಅನಾಥಾಶ್ರಮಕ್ಕೆ ಕಳುಹಿಸುತ್ತಾರೆ. ಇದನ್ನು ಪ್ರತಿ ದಿವಸ ಟಿ.ವಿ. ಯಲ್ಲಿ ನೋಡುತ್ತಿರುತ್ತೇವೆ. ಇವರು 18ನೇ ಪ್ರಕಣರದಲ್ಲಿ, ನಾವು ಸಂಘ ಸಂಸ್ಥೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಕೆಲವು ಸಂಘ ಸಂಸ್ಥೆಗಳು ಈಗಾಗಲೇ ರಚನೆಯಾಗಿವೆ. ಎಲ್ಲಾ ಮಠಗಳು 10–10 ಲಕ್ಷ ರೂ.ಗಳನ್ನು ತೆಗೆದು ಕೊಂಡಿದ್ದಾರೆ. ಯಾರೂ ದನಗಳನ್ನು ತೆಗೆದುಕೊಂಡು ಹೋಗಿ ಸಾಕುತ್ತಿಲ್ಲ.

ಅಧ್ಯಕ್ಷರು : ಹೊಸ ವಿಚಾರ ಇದ್ದರೆ ಹೇಳಿ. ಇದನ್ನು ಎಲ್ಲರೂ ಹೇಳಿದ್ದಾರೆ. ಹೇಳುವುದನ್ನೇ ಹೇಳುವುದು ಸರಿಯಲ್ಲ. ಇದು ಹೊಸ ವಿಚಾರವೇ? ಎಲ್ಲರೂ ಮಾತನಾಡಿದ್ದನ್ನೇ ಹೇಳುತ್ತಿದ್ದೀರಿ. ಅದನ್ನು ಎಲ್ಲರೂ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಆಹಾರವಿಲ್ಲದೆ ದನಗಳು ಕಾಡಿಗೆ ಹೋಗಿ ಸಾಯುತ್ತಿವೆ. ಗೋ ಸಂರಕ್ಷಣೆ ಮಾಡುತ್ತೇವೆಂದು ಹೇಳಿ, ಇವರು ವಧೆ ಮಾಡುತ್ತಾರಲ್ಲ, ಅವರು ರಕ್ಷಣೆ ಮಾಡದಿದ್ದರೆ, ಆ ವಧೆಯ ಪಾಪವನ್ನು ಅವರು ಹೊರಬೇಕಾಗುತ್ತದೆ . ಈಗ ಈ ಬಿಲ್ ತಂದಿದ್ದಾರೆ. ಮುಂದೆ ಇಡೀ ಕರ್ನಾಟಕ ರಾಜ್ಯದಲ್ಲಿರುವ ಗೋವುಗಳನ್ನು ಸಾಕಬೇಕಾದರೆ ಇಂಥ ಕಾನೂನೇನು introduce ಮಾಡಿದ್ದೀರಿ, guarantee ಯಾಗಿ ದನ ಕೋಣಗಳನ್ನು ಸಾಕುವುದಕ್ಕಾಗುವುದಿಲ್ಲ, ಹುಲ್ಲು ಇಲ್ಲ. ಅವುಗಳನ್ನು ನಿಮ್ಮ ಗೋ ಶಾಲೆಗೆ ತಂದು ಬಿಡುತ್ತೇವೆ. ಅದಕ್ಕೆ ಆಹಾರ ಕೊಡದಿದ್ದರೆ ಮುಂದಿನ ದಿವಸ ಯಾವ ಉದ್ದೇಶವಿಟ್ಟುಕೊಂಡು ಮಾಡಿದಿರೋ, ಅದು reverse ಆಗದಿದ್ದರೆ ಕೇಳಿ. ಆಗ ನಿಮಗೆ ಗೊತ್ತಾಗುತ್ತದೆ.

SRI FEROZ NURUDDIN SAIT (Belgaum Uttar) : Today, I would like to address only Hon'ble Law Minister and Hon'ble Home Minister. ಈ Situation ಏಕೆ create ಆಯಿತೆಂದರೆ, first the cow is holy and second, we have made an election promise. The cow is holy it is universal, we all agree. Because you cannot bring a Bill separately for the cow only, you are brining the entire progeny of the cow family. I hope the Law Minister is hearing and listening. Sir, Hon'ble Law Minister, I woul like to request that, we know that we cannot bring a holy cow bill separately. It is against the law. I would suggest to protect the cow. You bring in certain rules where you protect and substantiate and support the people who take care of the cow for its naturals life turn. That is the first thing. Second, if you wish to preserve the cattle, then you find a way of reducing the export out of the State, which is more than 50% of what you have started today, everyday. By doing these two things perhaps you can increase the population of the cattle in the Karnataka State. No.3, you can treat this as an independent industry, give it sufficient grazing grounds, farm, scientific breeding, ways of increasing the population of the cattle. As far as the real spirit behind the cow and the spirit of the holiness of the cow is concerned, 99% of the people sitting here are very careless today, 99% including yourself and myself. I don't think we care for the cow, because every time we look at our feet, we are wearig leather which is the skin of the cow. My dear friend, I do not know Mr.Ravi is here, who has equated his mother with the cow. He should understand that he would wearing today the best calf leather shoe. Please allow me to speak. This is important.

MR. SPEAKER : Please conclude. Everything is important.

SRI FEROZ NURUDDIN SAIT : Sir intwo minutes nothing is gong to happen. Please find the way of increasing the population of the cattle, protecting the holiness of the cow and

also protecting the business, dynamics and economics of the State. Please understand that writing one line and saying 'yes' or 'no' is not going to end it just because we have a majority. Let us be sensible. Adsolutely listen to words of wisdom from seniors including your own self. Listen to your conscience and see whether you are doing it for the betterment f the State or whether you are doing it for politics. Thank you very much.

ಶ್ರೀ ಸಾ.ರಾ. ಮಹೇಶ್ (ಕೆ.ಆರ್. ನಗರ) : ಈ ದೇಶದಲ್ಲಿರುವ ವರೆಲ್ಲರೂ ಸಹ ಗೋ ಮಾತೆಯನ್ನು ಪೂಜಿಸುತ್ತಾರೆ. ಹಾಗೆಯೇ, ಅದರಲ್ಲಿ ನಾನೂ ಒಬ್ಬ. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಈ ದಿವಸ ಗೋ ಹತ್ಯೆ ನಿಷೇಧದ ವಿಚಾರದಲ್ಲಿ ಈ ಬಿಲ್ ಏನು ತಂದಿದ್ದೀರಿ, ಇದರಲ್ಲಿ ಕೆಲವು ವಿಚಾರಗಳಲ್ಲಿ ಬದಲಾವಣೆ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ. ಗೋ ಮಾತೆಯನ್ನು ನಾವೇನು ಪೂಜಿಸುತ್ತೇವೆ, ಅದನ್ನು ಕಡಿಯಲಿಕ್ಕೆ ನನ್ನ ವಿರೋಧವಿದೆ ಎಂದು ನಾನು ಆಗಲೇ ಹೇಳಿದ್ದೇನೆ. ಆದರೆ, ಅದೇ ರೀತಿ ವಯಸ್ಸಾದ ಗೂಳಿಗಳಿವೆ ಅವುಗಳನ್ನು ಏನು ಮಾಡುವುದು? ಶಿವಲಿಂಗೇಗೌಡರವರು ಮಾತನಾಡುತ್ತಾ, ವಯಸ್ಸಾದ ದನಗಳನ್ನು ಏನು ಮಾಡುತ್ತೀರಿ ಎಂದು ಕೇಳಿದರು. ಇವತ್ತು ನಾವು ನಮ್ಮ ತಂದೆ ತಾಯಿಯರನ್ನೇ ಸಾಕಲಿಕ್ಕೆ ಕಷ್ಟ, ಹಾಗಾಗಿ, ವಯಸ್ಸಾದ ದನಗಳನ್ನು ಇಟ್ಟುಕೊಳ್ಳುವ ಸಂದರ್ಭದಲ್ಲಿ ಸರ್ಕಾರ ನಿರ್ದಾಕ್ಷಿಣ್ಯವಾಗಿ ಒಂದು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನೀವು ಯಾವ ಸಂಘ ಸಂಸ್ಥೆಗಳೆಂದು ಹೇಳಿದ್ದೀರಿ, ಅವರು ಉಪಯೋಗ ಬರದಿರುವ ದನಗಳನ್ನು ಸಾಕುತ್ತಾರೆನ್ನುವುದು ನಮಗೆ ಅನುಮಾನವಿದೆ. ಹಾಗಾಗಿ, ತಾಲ್ಲೂಕಿನ ದಂಡಧಿಕಾರಿಗಳು ಕಡ್ಡಾಯವಾಗಿ ಅವುಗಳನ್ನು ನೋಡಿಕೊಳ್ಳಲಿಕ್ಕೆ ತತ್‌ಕ್ಷಣ ಕ್ರಮವನ್ನು ತೆಗೆದುಕೊಳ್ಳುವಂಥ ಕೆಲಸವಾಗಬೇಕು. ಎರಡನೆಯದಾಗಿ, ಯಾವುದೇ ಜಾನುವಾರುಗಳನ್ನು ಈ ರಾಜ್ಯದಿಂದ ಬೇರೆ ಸ್ಥಳಗಳಿಗೆ ವರ್ಗಾವಣೆ ಮಾಡುವಂಥ ಸಂದರ್ಭದಲ್ಲಿ ನಿಮ್ಮ ಬಿಲ್‌ನ ನಂ.6 ರಲ್ಲಿ ಅಧಿಕಾರಿಗಳ ಅನುಮತಿ ಬೇಕೆಂದು ಹೇಳಿದ್ದೀರಿ. ಇವತ್ತಿನ ಅಧಿಕಾರಿಗಳ ವಿಚಾರವನ್ನು ನಾನೇನೂ ಹೇಳುವುದಿಲ್ಲ. ಎಲ್ಲರಿಗೂ ಗೊತ್ತಿದೆ. ಒಬ್ಬ ರೈತ ಅವರಿಂದ ಅನುಮತಿಯನ್ನು ಪಡೆದುಕೊಳ್ಳುವುದು ತುಂಬಾ ಕಷ್ಟವಿದೆ. ಅಲ್ಲಿರುವ ಅಧಿಕಾರಿಗಳಿಗೆ ನೀವು ಸೂಚನೆಯನ್ನೇನು ಕೊಡಬೇಕೆಂದರೆ, ಮಾರುವವರು ಯಾರು, ಮಾರದಿರುವವರು ಯಾರೆಂಬುದು ಅವರಿಗೆ ಗೊತ್ತಾಗುತ್ತದೆ. ನಿಜವಾಗಿ ತಂದಂಥ ರೈತರಿಗೆ

ಯಾವುದೇ ಅನುಮತಿ ಇಲ್ಲದೆ ಅವರು ಹೊರ ರಾಜ್ಯಕ್ಕೆ ತೆಗೆದುಕೊಂಡು ಹೋಗುವಂಥ ಸಂದರ್ಭದಲ್ಲಿ ನಿಯಮ ಅನುಸರಿಸಿ, ರಾಜ್ಯದೊಳಗೆ ಊರಿಂದೂರಿಗೆ ವರ್ಗಾವಣೆ ಮಾಡುವ ಸಂದರ್ಭದಲ್ಲಿ ನಿಯಮವ್ನು ಸ್ವಲ್ಪ ಸಡಿಲ ಮಾಡಬೇಕು. ಇನ್ನು, ನಂ.8ರಲ್ಲಿ, ಜಾನುವಾರುಗಳನ್ನು ಮಾರುವ ಸಂದರ್ಭದಲ್ಲಿ ಯಾರು ಮಾರುತ್ತಾರೆ ಅವರಿಗೂ ಸಹ ಕಠಿಣ ಶಿಕ್ಷೆಯನ್ನು ವಿಧಿಸುತ್ತೇವೆಂದು ಇದರಲ್ಲಿ ತಿಳಿಸಿದ್ದೀರಿ. ಆದರೆ, ಒಬ್ಬ ರೈತ ಮಾರುವಂಥ ಸಂದರ್ಭದಲ್ಲಿ ಅವನಿಗೆ ಗೊತ್ತಾಗುವುದಿಲ್ಲ. ಯಾರು ದುಡ್ಡು ಕೊಟ್ಟು ತೆಗೆದುಕೊಂಡು ಹೋಗುತ್ತಾರೆ ಅವನಿಗೆ ಕೊಡುತ್ತಾರೆ. ಆದ್ದರಿಂದ, ಅದನ್ನು ಕೊಡುವ ರೈತರಿಗೆ ನೀವು ರಿಯಾಯಿತಿಯನ್ನು ಕೊಡಬೇಕು. ಈ ವಿಧೇಯಕದಲ್ಲಿ ಯಾರು ಈ ನಿಯಮದಡಿಯಲ್ಲಿ ಸಹಕಾರ ಕೊಡುತ್ತಾರೋ ಅವರನ್ನು ಸಾರ್ವಜನಿಕ ನೌಕರರೆಂದು ತೀರ್ಮಾನ ಮಾಡಬೇಕೆಂದು ಏನು ಹೇಳಿದ್ದೀರಿ, ಯಾವ್ಯಾವ ಇಂಥ ಜನಪರ ಕೆಲಸಗಳನ್ನು ಮಾಡುತ್ತಾರೋ ಇದಕ್ಕಿಂತ ಒಳ್ಳೆಯ ಕೆಲಸಗಳನ್ನು ಮಾಡುವಂಥ ಉದಹರಣೆಗಳಿವೆ. ಅವರನ್ನೂ ಸಹ ನೀವು ಸಾರ್ವಜನಿಕ ನೌಕರರೆಂದು ತೀರ್ಮಾನ ಮಾಡಬೇಕೆಂದು ಮನವಿ ಮಾಡುತ್ತಾ, ನನ್ನ ವಿಚಾರವನ್ನು ತಿಳಿಸುತ್ತಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಬೆಳಗ್ಗೆಯಿಂದ ನೋಡಿದರೆ, ನೈಸ್ ವಿಚಾರವನ್ನು ಮುಂದಕ್ಕೆ ಹಾಕಬೇಕೆನ್ನುವ ಭಾವನೆ ಇವರಲ್ಲಿ ಇದ್ದ ಹಾಗಿದೆ. ಬೆಳಗ್ಗೆಯಿಂದ ನಡೆಯುತ್ತಿರುವುದನ್ನು ನೋಡಿದರೆ 30,000 ಕೋಟಿ ರೂ.ಗಳ ಹಗರಣವನ್ನು ಮುಚ್ಚಿ ಹಾಕಬೇಕೆಂಬುದು ಇಲ್ಲಿ ನಡೆಯುತ್ತಿದೆ.

ಅಧ್ಯಕ್ಷರು : ಅದನ್ನು ಆಮೇಲೆ ಚರ್ಚೆ ಮಾಡೋಣ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಬಂದ ಮೇಲೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದಿರಿ. ಈ ಬಿಲ್ ಬಗ್ಗೆ ಚರ್ಚಿಸಲು ಸಾಯಂಕಾಲ 4.30 ಗಂಟೆಯಿಂದ ಅವಕಾಶ ಕೊಟ್ಟಿದ್ದೀರಿ. ನಿನ್ನೆ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕಾಗಿತ್ತು. ಆದರೆ, ನಾಳೆ ಕೊಡುತ್ತೇನೆಂದು ಹೇಳಿದಿರಿ. ರಾಜ್ಯದ 30000 ಕೋಟಿ ರೂ. ಹೋಗುತ್ತಿದೆ.

ಅಧ್ಯಕ್ಷರು : ಆಯಿತು, ಅದನ್ನೂ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಈ ಬಿಲ್ ಅನ್ನು ಬೆಳಗ್ಗೆಯಿಂದ ತಂದಿರುವುದೇಕೆಂದರೆ, ಈ ನೈಸ್ ವಿಚಾರವನ್ನು ಉದ್ದೇಶಪೂರ್ವಕವಾಗಿ ಚರ್ಚೆ ಮಾಡಲು ಅವಕಾಶ ಕೊಡಬಾರದೆನ್ನುವ ಕಾರಣಕ್ಕಾಗಿ. ಇವತ್ತು ನೈಸ್ ಕಂಪನಿಯ ಮುಖ್ಯಸ್ಥರ ಪಿ.ಎ. ಮಂಜುನಾಥ್ ಎನ್ನುವವರು ಮುಖ್ಯಮಂತ್ರಿಯವರ ಛೇಂಬರ್‌ನಲ್ಲಿ ಬಂದು ಕುಳಿತಿದ್ದಾರೆ. ಪೇಪರ್‌ನಲ್ಲಿ ಅವರ ಫೋಟೋ ಬಂದಿದೆ.

ಅಧ್ಯಕ್ಷರು : ಚರ್ಚೆ ಮಾಡೋಣವೆಂದು ಹೇಳಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ಬೆಳಗ್ಗೆಯಿಂದ ಕೇಳುತ್ತಿದ್ದೇನೆ, ನೀವು ಅವಕಾಶ ಕೊಟ್ಟಿಲ್ಲ. ದುರುದ್ದೇಶಪೂರ್ವಕವಾಗಿ ಈ ಬಿಲ್ ಅನ್ನು ತಂದು ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ.

(ಗೊಂದಲ)

ಶ್ರೀ ಎನ್.ಎ. ಹ್ಯಾರೀಸ್ : ಸನ್ಮಾನ್ಯ ಅಧ್ಯಕ್ಷರೇ, Article 304 of Constitution ಪ್ರಕಾರ, ಯಾವುದೇ ಒಂದು ಹೊಸ ಕಾಯ್ದೆಯನ್ನು ಜಾರಿಗೆ ತರುವಾಗ ನಾವು President Permission ತೆಗೆದುಕೊಳ್ಳಬೇಕೆಂದಿದೆ.

(7-30 PM)

1964 ರಲ್ಲಿ ಈಗಾಗಲೇ ಈ ಬಿಲ್ ಇದೆ. ಹೊಸದು ನಾವು ತಂದಿರುವಾಗ ಪರ್ಮಿಷನ್ ತೆಗೆದುಕೊಂಡಿದ್ದೇವೆಯೋ ಇಲ್ಲವೋ ಎನ್ನುವುದರ ಬಗ್ಗೆ ಮಾನ್ಯ ಕಾನೂನು ಸಚಿವರು clarify ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, 304-B ಏನು ಹೇಳುತ್ತದೆ ಎಂದರೆ, 'Impose such reasonable restriction on the freedom of trade, commerce or intercourse with or within the State as may be required on the public interest. provided that no Bill or Amendments for the Purpose of Clause-B shall be introduced or moved in the Legislature of a State without the previous sanction of the President.' ಮಾನ್ಯ ಕಾನೂನು ಸಚಿವರು ಇಲ್ಲಿ ಇಲ್ಲ. ನಮ್ಮ ಮಾನ್ಯ ಗೃಹ ಸಚಿವರು ಈ ಬಗ್ಗೆ ಹೇಳಬೇಕಾಗುತ್ತದೆ. ಇದನ್ನು ನೀವು ಏಕೆ ತಡೆಗಟ್ಟುತ್ತೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಕೋಟ್ಯಾಂತರ ಬಡಜನರ ಊಟಕ್ಕೆ ತಾವು ಕೈ ಹಾಕುತ್ತಿದ್ದೀರಿ. ತಾವು ನಿಜವಾಗಲೂ ಗೋವು ಹತ್ಯೆದ ಬಗ್ಗೆ ಮಾತ್ರ ಮಾಡುತ್ತಿದ್ದರೆ ನಾವು ಈ ಜಾನುವಾರು ಬಿಲ್ ಅನ್ನು ಗೋವು ಬಿಲ್ ಎಂದು

ತನ್ನಿ ಅದು ಪಾಸ್ ಆಗಲಿಕ್ಕೆ ನಾವು ಕೂಡ ಸಹಕಾರ ಮಾಡುತ್ತೇವೆ. ನಾವು ಯಾರೂ ಅದರ ವಿರೋಧ ಇಲ್ಲ. ಯಾವುದೋ ಒಂದು ಜನಾಂಗಕ್ಕೆ ಸೇರಿದವರು ಎಂದಲ್ಲ. ನಮ್ಮ ರಾಜ್ಯದಲ್ಲಿ SCs, STs, backward, minorities, ಇರಬಹುದು. ಇತ್ತೀಚೆಗೆ ನಮ್ಮ ಜ್ಯೂತಿಬಸುರವರು ತೀರಿ ಹೋದರು. 25 ವರ್ಷಗಳ ಕಾಲ West Bengal ದ ಮುಖ್ಯಮಂತ್ರಿ ಯಾಗಿದ್ದರು.

ಅಧ್ಯಕ್ಷರು : ಜ್ಯೂತಿ ಬಸುಗೆ ಈ ಬಿಲ್‌ಗೂ ಏನು ಸಂಬಂಧ?

ಶ್ರೀ ಎನ್.ಎ.ಹ್ಯಾರೀಸ್ : ಅವರು ಸತ್ತ ಮೇಲೆ ಅವರ ದೇಹವನ್ನು ಆಸ್ಪತ್ರೆಗೆ ಕೊಟ್ಟು ತ್ಯಾಗ ಮಾಡಿದರು. ಆ right ಅವರಿಗೆ ಇದೆ. ಹಸು, ಕೋಣ ಸಾಕಿರುವವನು ಅವುಗಳನ್ನು ಏನು ಮಾಡಬೇಕೆನ್ನುವ right ಕೂಡ ನೀವು ಅವನಿಗೆ ಬಿಟ್ಟು ಕೊಡುತ್ತಿಲ್ಲ. ಜ್ಯೂತಿ ಬಸು ರವರು ಅವರ ದೇಹ ಏಕೆ ಕೊಟ್ಟರು ಎಂದರೆ ಇದು waste ಆಗಬಾರದು, at least ಓದುವಂಥ ಮಕ್ಕಳ ಪ್ರಯೋಜನಕ್ಕೆ ಬರಲಿ ಎಂದು ಕೊಟ್ಟರು. ಇವತ್ತು ತಿನ್ನುವುದಕ್ಕೆ ಹೊಟ್ಟೆಗೆ ಆಗುವಂಥದ್ದನ್ನು ನೀವು ಬೇಡ ಎಂದು ತಡೆಗಟ್ಟುತ್ತಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ದಯವಿಟ್ಟು ತಾವು ಇದರ ಬಗ್ಗೆ ಇನ್ನಷ್ಟು ಚರ್ಚಿಸಿ, ಕಮಿಟಿ ಮಾಡಿ ನಂತರ ಇದನ್ನು ತನ್ನಿ, urgent ಏನಿಲ್ಲ. ತಮಗೆ ಇನ್ನೂ ಮೂರು ವರ್ಷ ಸಮಯ ಇದೆ, ನಾವು ಇದ್ದೇವೆ, ನೀವು ಇದ್ದೀರಾ ಆಲೋಚನೆ ಮಾಡಿ ಇದನ್ನು ತರೋಣ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಅಧ್ಯಕ್ಷರು : ಅಶ್ವಥ್‌ರವರು ನೀವು ಮಾತನಾಡಿ ನಂತರ ನೀವು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನೀವು ದುರುದ್ದೇಶದಿಂದ ಈ ಬಿಲ್ ಅನ್ನು ತಂದು ನೈಸ್ ಬಗ್ಗೆ ಚರ್ಚೆಗೆ ಅವಕಾಶ ಕೊಡುತ್ತಿಲ್ಲ, ನಾವು ಇದಕ್ಕೆ ಸಹಕಾರ ಕೊಡುವುದಿಲ್ಲ. ನಾವು ಸದನದ ಬಾವಿಗೆ ಬಂದು ಧರಣಿ ಕುಳಿತು ಕೊಳ್ಳುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಜೆ.ಡಿ.ಎಸ್.ನ ಸದಸ್ಯರು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)

(ಗೊಂದಲ)

ಅಧ್ಯಕ್ಷರು : ನೈಸ್ ಬಗ್ಗೆ ಚರ್ಚೆ ಮಾಡೋಣ. ಯಾರು ಬೇಡ ಎಂದರು. ರೇವಣ್ಣನವರೆ ದಯಮಾಡಿ ಇಲ್ಲಿ ಕೇಳಿ. ಈ ಬಿಲ್ ಆದ ತಕ್ಷಣ ತೆಗೆದುಕೊಳ್ಳೋಣ. ನೀವು ನಿಮ್ಮ ಸ್ಥಾನಗಳಿಗೆ ವಾಪಸ್ ಹೋಗಿ. Please ವಾಪಸ್ ಹೋಗಿ. ದಯಮಾಡಿ ಹೋಗಿ ಈಗಲೇ ಹತ್ತು ನಿಮಿಷದಲ್ಲಿ ಮುಗಿಸುಯತ್ತೇವೆ. ನೀವು ತಾಳಿದ್ದೀರಿ. ಒಂದು ಹತ್ತು ನಿಮಿಷ ಕಾಯಿರಿ ನಂತರ ಅದನ್ನೆ ತೆಗೆದುಕೊಳ್ಳೋಣ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು.. ಮಾತನಾಡಿ.

(ಗೊಂದಲ)

ಶ್ರೀ ಯು.ಟಿ. ಖಾದರ್ : ಮಾನ್ಯ ಅಧ್ಯಕ್ಷರಿಗೆ ನನಗೆ ಎರಡು ನಿಮಿಷ ಅವಕಾಶ ಕೊಡಲೇಬೇಕು.

ಅಧ್ಯಕ್ಷರು : Please, ವಿರೋಧ ಪಕ್ಷದ ನಾಯಕರೆ, ನಿಮ್ಮ ಸದಸ್ಯರಿಗೆ ಹೇಳಿ. ತಾವು ಮಾತನಾಡಿ ಇಲ್ಲದಿದ್ದರೆ ನಾನು vote ಗೆ ಹಾಕುತ್ತೇನೆ. ಅವರು ಧರಣಿ ಕುಳಿತಿದ್ದಾರೆ. ಇದು ಸರಿಯಲ್ಲ. ನೀವು ಅವರಿಗೆ ಹೇಳಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನಮ್ಮ ಸದಸ್ಯರೆಲ್ಲರೂ ಬಾವಿಯಲ್ಲಿ ಇರಲಿ ಯಾರು ಬರುವುದು ಬೇಡ. ಬೆಳಗ್ಗೆಯಿಂದ ನಾವು ಕಾದು ಕುಳಿತುಕೊಂಡಿದ್ದೇವೆ. ಬರಿ ಬಿಲ್ ಪಾಸ್ ಮಾಡಿಕೊಂಡು ಹೋದರೆ ನಾವು ಏನು ಮಾಡುವುದು. 30 ಸಾವಿರ ಕೋಟಿ ರೂಪಾಯಿಯ ಅವ್ಯವಹಾರ ಎಂದು 1997ನೇ ಇಸ್ವಿಯಲ್ಲಿ ಈಗಿನ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನಲ್ಲ. ಇದು ನೈಸ್ ಕಂಪನಿಯ ವಿಚಾರ ಚರ್ಚೆ ಮಾಡಬೇಕು ಅಲ್ಲವೆ?

(ಗೊಂದಲ)

ಅಧ್ಯಕ್ಷರು : ಇದಾದ ತಕ್ಷಣ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ.ರೇವಣ್ಣ : ಬೆಳಗ್ಗೆಯಿಂದ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೆಂದರೆ ಹೇಗೆ? ಇವತ್ತು ಯಾವುದೋ ಬಿಲ್ ತೆಗೆದುಕೊಂಡು ಬಿಟ್ಟಿರಿ, ಈ ಬಿಲ್‌ನ ಅವಶ್ಯಕತೆ ಇದೆಯೆ? ಮುಂದಿನ ಅಧಿವೇಶನದಲ್ಲಿ ತನ್ನಿ. ಈ ಬಿಲ್‌ನ ಅವಶ್ಯಕತೆ ಏನಿದೆ ಸಾರ್?

(ಗೊಂದಲ)

ಶ್ರೀ ಸಿದ್ದರಾಮಯ್ಯ : ರೇವಣ್ಣನವರೆ ಈಗೇನು ಮಾಡಬೇಕು?

ಶ್ರೀ ಹೆಚ್.ಡಿ.ರೇವಣ್ಣ : ಬೆಳಗ್ಗೆಯಿಂದ ಕಾದರೂ ಚರ್ಚೆಗೆ ಅವಕಾಶ ಕೊಡಲಿಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನು ಹೇಳಿದ ಮೇಲೆ ಅವರು ಉತ್ತರ ಕೊಡುತ್ತಾರೆ ನಂತರ ಬಿಲ್ ಬಗ್ಗೆ ಮುಕ್ತಾಯವಾಗುತ್ತದೆ.

(ಗೊಂದಲ)

ಅಧ್ಯಕ್ಷರು : ನೀವು ವೆಲ್‌ನಲ್ಲಿ ನಿಂತು ಮಾತನಾಡಬೇಡಿ. ಬಿಲ್ ಬಗ್ಗೆ ಅವರು ಮಾತನಾಡಿದ್ದಾರೆ.. ಇಲ್ಲ ಇದು ಆಗುವುದಿಲ್ಲ. ವಿರೋಧ ಪಕ್ಷದ ನಾಯಕರು ತಾವು ಸಹಕಾರ ಕೊಡದಿದ್ದರೆ ಹೇಗೆ? ಇದು ಸರಿಯಲ್ಲ ಅವರು ಧರಣಿಗೆ ಬಂದಿದ್ದಾರೆ. ನೀವು ಅವಕಾಶದಿಂದ ವಂಚಿತರಾಗುತ್ತೀರಿ ಅಷ್ಟೆ. ನಾನು vote ಗೆ ಹಾಕುತ್ತೇನೆ ಅಷ್ಟೆ.

(ಗೊಂದಲ)

ಶ್ರೀ ಆರ್. ಅಶೋಕ್ : ನಾವು ನೈಸ್ ಬಗ್ಗೆ ಮಾತನಾಡುವುದಕ್ಕೆ ಎಲ್ಲಾ ತಂದಿದ್ದೇವೆ. ನಾವು ರೆಡಿ ಇದ್ದೇವೆ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರೆ, ತಾವು ಮಾತನಾಡದಿದ್ದರೆ ನಾನು..

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅವರು ಹೌಸ್‌ವೆಲ್‌ನಲ್ಲಿ ಇದ್ದಾರೆ ನಾನು ಹೇಗೆ ಮಾತನಾಡಲಿ ಹೇಳಿ ನೋಡೋಣ.

ಅಧ್ಯಕ್ಷರು : ತಾವು ದಯಮಾಡಿ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಹತ್ತು ನಿಮಿಷದಲ್ಲಿ ಮುಗಿಸುತ್ತೇನೆ... ತಾವು ದಯವಿಟ್ಟು ಕುಳಿತುಕೊಳ್ಳಿ. No chance. ಅವರು ಮುಗಿಸುತ್ತಾರೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನಾವು ತಾಳ್ಮೆಯಿಂದ ಇದ್ದೇವೆ. ಈ ಬಿಲ್‌ನ ಅವಶ್ಯಕತೆ ಇಲ್ಲ. ಇದರಿಂದ ನಾಳೆ ಬೆಳಗ್ಗೆ ಏನೂ ಮುಳುಗಿ ಹೋಗುವುದಿಲ್ಲ. ಈ ಬಿಲ್ ವಾಪಸ್ ತೆಗೆದುಕೊಳ್ಳಿ, ಮಂದಿನ ಅಧಿವೇಶನಕ್ಕೆ ಹಾಕಿ. ಈ ರಾಜ್ಯದ 30 ಸಾವಿರ ಕೋಟಿ ಹಣ ಹೋಗುತ್ತಿದೆ, ಅದರ ಬಗ್ಗೆ ಚರ್ಚೆ ಮಾಡದೇ ಯಾವುದೊ ಒಂದು ಸಮಾಜದ ದೃಷ್ಟಿಯಿಟ್ಟುಕೊಂಡು ನೀವು

ಬಿಲ್ ತಂದಿದ್ದೀರಿ. ಇದರಿಂದಾಗಿ ರಾಜ್ಯದ ಜನತೆಯನ್ನು ದಿಕ್ಕು ತಪ್ಪಿಸುತ್ತಿದ್ದೀರಿ. ಏನು vote bank ರಾಜಕೀಯ ಮಾಡುತ್ತೀರಾ? ಇದೇನು?

ಅಧ್ಯಕ್ಷರು : Please ತಾವು ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ. ಹತ್ತು ನಿಮಿಷದಲ್ಲಿ ಮುಗಿಸಿ ಬಿಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ರೇವಣ್ಣ ಏಕೆ ಹೀಗೆ, ಈ ಬಿಲ್ ಹಾಗೆ ಪಾಸ್ ಆಗಿ ಬಿಡಬೇಕೋ? What is your intention? ನಿಮ್ಮ intention ಏನು ಎಂದು I want know. This is to be passed without discussion. .. ನಾಳೆಯೂ Assembly ನಡೆಸುವ ಹಾಗೆ ಮಾಡಿ. ಪುನಃ ಸೋಮವಾರ ಮಾಡಿಸಿ.

(ಗೊಂದಲ)

ಅಧ್ಯಕ್ಷರು : ಈಗ ಆದ ತಕ್ಷಣ ನೈಸ್ ಬಗ್ಗೆ ಚರ್ಚೆ ಮಾಡೋಣ. ಹತ್ತು ನಿಮಿಷ ಅವಕಾಶ ಕೊಡಿ, Please ಎಲ್ಲರೂ ನಿಮ್ಮ ಸ್ಥಾನಗಳಿಗೆ ಹೋಗಿ. ನೀವು ಹತ್ತು ನಿಮಿಷದಲ್ಲಿ ಮುಗಿಸಬೇಕು.

(ಈ ಹಂತದಲ್ಲಿ ಜೆ.ಡಿ.ಎಸ್. ನ ಸದಸ್ಯರು ಸದನದ ಬಾವಿಯಿಂದ ತಮ್ಮ ಸ್ಥಾನಗಳಿಗೆ ಮರಳಿದರು)

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ನನಗೆ ಎರಡು ನಿಮಷ ಅವಕಾಶ ಕೊಡಿ.

ಶ್ರೀ ಯು.ಟಿ. ಖಾದರ್ : ನನಗೂ ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ಸಿದ್ದರಾಮಯ್ಯ : ನಮ್ಮಲ್ಲಿ ಒಂದಿಬ್ಬರು ಈ ಬಗ್ಗೆ ಮಾತನಾಡು ವವರು ಇದ್ದರು. ಅವರು ಬೇಸರ ಮಾಡಿಕೊಂಡು ಬಿಡುತ್ತಾರೆ.

(ಗೊಂದಲ)

ಅಧ್ಯಕ್ಷರು : ಅವರು ಬೇಡ, ಎಲ್ಲರೂ Please ಕುಳಿತುಕೊಳ್ಳಿ. ನೀವು ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಆಯಿತು ಬಿಡಿ ನಾನೇ ಮಾತನಾಡುತ್ತೇನೆ. ನೀವು ಇಂಥ important Bill ನ್ನು ಮಧ್ಯದಲ್ಲಿ ತರದೇ ಕೊನೆಯಲ್ಲಿ ಇಟ್ಟುಕೊಂಡು ಬಿಟ್ಟು ಅವರಿಗೂ ತೊಂದರೆ, ನಮಗೂ ತೊಂದರೆ, ಎಷ್ಟು

ಪಜೀತಿ ಆಯಿತು ನೋಡಿ. ರೇವಣ್ಣನವರೆ ನೀವು ಕುಳಿತುಕೊಳ್ಳಿ ನಾನು ಮುಗಿಸಿ ಬಿಡುತ್ತೇನೆ..

ಶ್ರೀ ಹೆಚ್.ಡಿ. ರೇವಣ್ಣ : ನೈಸ್ ವಿಚಾರದ ಬಗ್ಗೆ ಚರ್ಚಿಸಲು ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ಐದು ಗಂಟೆಯಾಗಿದೆ.

Sri Siddaramaiah : This is such an important Bill, it affects majority of the people.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಜಾನುವಾರು ನಿಷೇದ ಮಸೂದೆ ಏನಿವತ್ತು ಬಿಜೆಪಿ ಸರ್ಕಾರ ಕಾನೂನು ಮಾಡಬೇಕೆಂದು ತೆಗೆದುಕೊಂಡು ಬಂದಿದ್ದಾರೆ. ಇದರ ಹಿಂದೆ ಜನಪರವಾದಂಥ ಯಾವ ಕಾಳಜಿಯಾಗಲಿ, ಸದ್ದುದ್ದೇಶ ವಾಗಲಿ ಇಲ್ಲ. Article 48 of the Constitution, Which is coming in the Part-4th of the Constitution not in the Part-3rd of the Constitution – Directive Principles.

ಹಿಂದೆ ಸಂವಿಧಾನ ರಚನಾ ಸಭೆಯಲ್ಲಿಯೂ ಕೂಡ ಇದರ ಬಗ್ಗೆ ಚರ್ಚೆ ಆಗಿದೆ. Whether it is to be included in the Fundamental Rights or to be put in the Directive Principles? ಇದರ ಬಗ್ಗೆ ಪರ ಮತ್ತು ವಿರೋಧವಾದಂಥ ಚರ್ಚೆಗಳು ನಡೆದಿವೆ. ಗೋವಿನ ಬಗ್ಗೆ ಕೆಲವು ಜನರಿಗೆ ಪವಿತ್ರವಾದಂಥ ಭಾವನೆ ಇದೆ. ಅವರ ಭಾವನೆಗಳಿಗೆ ಕೂಡ ನೋವಾಗದ ಹಾಗೆ ನೋಡಿಕೊಳ್ಳಬೇಕು ಮತ್ತು ಅದೇ ರೀತಿಯಾಗಿ ರೈತರು, ಬಹುಸಂಖ್ಯಾತ ವರ್ಗದ ಜನ, ದಲಿತರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಶ್ರಮಿಕರು, ಈ ಎಲ್ಲಾ ವರ್ಗದ ಜನರಿಗೂ ಕೂಡ ತೊಂದರೆಯಾಗಬಾರದೆಂದು ಅಲ್ಲಿ ಚರ್ಚೆಯಾಗಿ ಮಾನ್ಯ ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಮಾನ್ಯ ನೆಹರುರವರು ಸೇರಿ ಎರಡು ವರ್ಗದ ಜನರಿಗೆ ಸಮಾಜದಲ್ಲಿ ನೋವು ಮತ್ತು ತೊಂದರೆಯಾಗದ ರೀತಿಯಲ್ಲಿ ಹಾಗು ಜೀವನಾಧಾರವಾದಂಥ ಹಕ್ಕುಗಳು ಮೊಟಕು ಆಗಬಾರದೆಂಬ ಕಾರಣ ಕ್ಕೋಸ್ಕರ, instead of putting this matter in Part III of the Constitution under Fundamental Rights, it is included in the Directive Principles of the Constitution.

(ಈ ಹಂತದಲ್ಲಿ ಶ್ರೀ ಎನ್. ಯೋಗೀಶ್ ಭಟ್‌ರವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು)

ಸಂವಿಧಾನದ 48ರ ವಿಧಿ ಏನಿದೆ ಅದರ ಅನುಗುಣವಾಗಿ ಈಗ 1964ರ ಕಾನೂನನ್ನು replace ಮಾಡುವುದಕ್ಕೆ 1964ರ ಕಾನೂನನ್ನು repeal ಮಾಡಿ ಹೊಸ ಕಾನೂನನ್ನು ತರುವುದಕ್ಕೋಸ್ಕರ ಈ ಬಿಲ್ ಅನ್ನು ತಂದಿದ್ದೇವೆಂದು ಹೇಳುತ್ತಾರೆ. ಸಂವಿಧಾನದ ಆರ್ಟಿಕಲ್ 48ರಲ್ಲಿ ಏನಿದೆ ಎಂಬುದನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

"ರಾಜ್ಯವು ಕೃಷಿ ಮತ್ತು ಪಶುಪಾಲನೆಯನ್ನು ಆಧುನಿಕ ಮತ್ತು ವೈಜ್ಞಾನಿಕ ರೀತಿಗಳಲ್ಲಿ ಸಂಘಟನೆಗೊಳಿಸುವುದಕ್ಕೆ ಪ್ರಯತ್ನಿಸತಕ್ಕದ್ದು, ಮತ್ತು ವಿಶೇಷವಾಗಿ ತಳಿಗಳನ್ನು ಸಂರಕ್ಷಿಸಿ ಉತ್ತಮಗೊಳಿಸುವುದಕ್ಕಾಗಿ ಹಸುಗಳು ಮತ್ತು ಕರುಗಳು ಅಥವಾ ಇತರ ಹಾಲು ಕೊಡುವ ಮತ್ತು ವಾಹಕ ದನಕರುಗಳ ವಧೆಯನ್ನು ನಿಷೇಧಿಸುವುದಕ್ಕಾಗಿ ಕ್ರಮ ಕೈಗೊಳ್ಳತಕ್ಕದ್ದು."

ಎಂದು ಹೇಳಿದ್ದಾರೆ ಹೊರತು ದನಕರುಗಳ ವಧೆಯನ್ನು Total ban ಎಂದು ಇದರಲ್ಲಿ ಹೇಳಿಲ್ಲ. The interpretation of this provision is not total Prevention of slaughter of cattle. This is very clear under Article 48 of the Constitution. The basic fearure of our Constitution is secularism. ಸಂವಿಧಾನದಲ್ಲಿ ಇರುವುದನ್ನು ನಾವು ನೋಡಿದ್ದೇವೆ. ಆದರೆ, ಬಹುಸಂಖ್ಯಾತ ಜನರ ಬದುಕು ಮತ್ತು ಹಕ್ಕನ್ನು ಮೊಟಕುಗೊಳಿಸುವಂಥ ಪ್ರಯತ್ನ ಇದರಲ್ಲಿ ಆಗುತ್ತಿದೆ. That is why the present Bill is anti-secular. 1994ರಲ್ಲಿ ಬೊಮ್ಮಾಯಿರವರ ಕೇಸ್‌ನಲ್ಲಿ ಸರ್ಕಾರ ಅದನ್ನು ಡಿಸ್‌ಮಿಸ್ ಮಾಡಿದಾಗ, ಸುಪ್ರೀಂ ಕೋರ್ಟ್‌ನವರು ಒಂದು ತೀರ್ಪು ಕೊಟ್ಟಿದ್ದಾರೆ. ಈ ತೀರ್ಪು ಮತ್ತು ಬೇರೆ ಬೇರೆ ಕಡೆಯ ಕೇಸ್‌ಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್‌ನವರು ಏನು ಹೇಳಿದ್ದಾರೆಂದರೆ, ಎಲ್ಲೆಲ್ಲಿ ಹಿಂದೂ ರಾಷ್ಟ್ರ against the secularism pursuel ಮಾಡಿದ್ದಾರೆ, ನಾಲ್ಕು ರಾಜ್ಯ ಸರ್ಕಾರವನ್ನು ಡಿಸ್‌ಮಿಸ್ ಮಾಡಿದ್ದಾರೆ. ಯಾವುದೇ ಸರ್ಕಾರ ಸೆಕ್ಯುಲರಿಸಂಗೆ ವಿರುದ್ಧವಾಗಿ ಯಾವುದೇ ಕಾನೂನನ್ನು ಅಂದರೆ anti-secular ಆಗಿರುವಂಥ ಕಾನೂನನ್ನು ತಂದು basic feature ಗೆ ಹೊಡೆತ ತರುವ ರೀತಿಯಾದರೆ ಆಗ Article 356 can be invoked. ಬೇಕಾದರೆ ನಿಮ್ಮ ಸರ್ಕಾರವನ್ನೂ ಸಹ ವಜಾ ಮಾಡಬಹುದು. Preamble

of the Constitution. That is the basic feature of the Constitution. ಆದ್ದರಿಂದ, ಇದಕ್ಕೆ ಏಕೆ ಕೈ ಹಾಕುವುದಕ್ಕೆ ಹೋಗುತ್ತೀರಿ? It attracts Article 356, it violates Article 356. This is anti-secular, anti-Constitutional, it attracts Article 356 of the Constitution. That is my first basic point to be considered. ಈಗ ತಂದಿರುವ ಕಾಯಿದೆ ಒಂದು ರೀತಿಯಲ್ಲಿ arbitrary powers ಅನ್ನು ಕೊಡುತ್ತದೆ. Unilateral, arbitrary ಅಧಿಕಾರ ಕೊಡತಕ್ಕಂಥ ಕಾಯಿದೆಯಾಗಿದೆ. ಈಗ ಯಾವುದೇ property confiscate ಮಾಡಿಕೊಳ್ಳಬಹುದು, auction ಮಾಡಬಹುದು ಹಾಗೆಯೇ ಯಾವುದೇ Premises, vessels, vehicle ಎಲ್ಲವನ್ನು ಸೀಜ್ ಮಾಡಬಹುದು. ಈ ತರಹ ಮಾಡುವುದು it is against the fundamental right and right guaranteed under Article 19 clause 1 sub clause (g). It is also violation of the Constitution. It clearly violates Article 14 of the Constitution also. ನೀವು ತಂದಿರುವ ಮಸೂದೆಯ ಸೆಕ್ಷನ್ 4 ರಲ್ಲಿ there is a tital ban of trade and commerce in cattle because those who have sold the cattle can be prosecuted for offering the cattle for slaughter. The said provision makes anyone and everyone vulnerable for prosecution if he has sold a cow, calf, bull or buffalo. ಈ ರೀತಿ Section 4ರಲ್ಲಿ ಹೇಳಿದ್ದೀರಿ. ಮತ್ತೆ ಇದಕ್ಕೆ violation ಆದರೆ 7 ವರ್ಷ Punishment ಎಂದು ಇದೆ. ರೇಪ್ ಕೇಸ್‌ಗೆ ಈ ರೀತಿಯಾದ ಪನಿಷ್ ಮೆಂಟ್ ಇದೆ. ನೀವು ಈ ಕಾನೂನನ್ನು ತರುವುದರ ಮೂಲಕ ಬಹುಸಂಖ್ಯಾತ ಜನರ ಆಹಾರ ಪದ್ಧತಿಯ ಮೇಲೆ ದಾಳಿ ಮಾಡಿದ್ದೀರಿ ಮತ್ತೆ ಬಲತ್ಕಾರವಾಗಿ Vegetarian ಸಂಸ್ಕೃತಿಯನ್ನು ಬಹುಸಂಖ್ಯಾತ ಜನರ ಮೇಲೆ ಏರುವಂಥ ಪ್ರಯತ್ನ ಮಾಡಿದ್ದೀರಿ.

ಶ್ರೀ ಕೆ.ಜಿ. ಕುಮಾರಸ್ವಾಮಿ : ಆರೋಗ್ಯಕ್ಕೆ vegetarian ಒಳ್ಳೆಯದು.

ಶ್ರೀ ಸಿದ್ದರಾಮಯ್ಯ : ಹಾಗಾದರೆ, ಬೇರೆ ದೇಶದಲ್ಲಿ ದನ, ಎಮ್ಮೆ ಮತ್ತು ಹಂದಿ ತಿನ್ನುವವರೆಲ್ಲರೂ ಸತ್ತು ಹೋಗಿದ್ದಾರೆಯೇ? ನೀವು ಮಾತ್ರ 100ವರ್ಷ ಬದುಕಿದ್ದೀರಾ? ಆರೋಗ್ಯ ಕೆಡುತ್ತದೆಂದು ಸುಮ್ಮನೆ ಹೇಳುವುದಕ್ಕೆ ಹೋಗಬೇಡಿ. Don't argue. ಸುಮ್ಮನೆ baseless argument ಮಾಡುವುದಕ್ಕೆ

ಹೋಗಬೇಡಿ. ನಮ್ಮ ದೇಶದ ಜನರ life longevity ಎಷ್ಟು? What is the life longevity of people of America? Are they vegetarians? What about China? ಸುಮ್ಮನೆ don't argue like that. It is a baseless argument.

Sri Qamarul Islam : There is one thing. God has given two types of teeth, Pointed and flat. Our digestion system is responsible to digest the vegetarian and non veretarian food. It is abti-natural also to say that we are not using the pointed teeth.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಅವರು ಹೇಳಿದ ಒಂದು ಮಾತನ್ನು ಹೇಳುತ್ತೇನೆ. ನಮ್ಮ ಹಲ್ಲುಗಳ ದಂತದ ರಚನೆ ಇದೆಯಲ್ಲಾ inside jaws, canines, premolars and molars ನಾಲ್ಕು ಬಾಗಗಳು ಇವೆ. ಅದು ನಿಮಗೆ ಗೊತ್ತೆ? ಈ canines ಎನ್ನುವಂಥದ್ದು ಕೋರೆ ಹಲ್ಲುಗಳು. ಮನುಷ್ಯನಿಗೆ ಕೋರೆ ಹಲ್ಲುಗಳು ಏಕೆ ಇವೆ ಡಾ: ವಿ.ಎಸ್. ಆಚಾರ್ಯರವರೆ. ಏಕೆ ಹೇಳಿ ನೋಡೋಣ. Vegetarian food ತಿನ್ನುವ animals ಗೆ canines ಇಲ್ಲ.

Dr. V.S. Acharya : It is in rudimentary from in humans whereas in animals. . .

ಶ್ರೀ ಸಿದ್ದರಾಮಯ್ಯ : ಹಾಗಾದರೆ ಆನೆಗೆ ಏಕೆ ಇಲ್ಲ?

ಡಾ: ವಿ.ಎಸ್. ಆಚಾರ್ಯ : ಇದೆಯಲ್ಲಾ?

ಶ್ರೀ ಸಿದ್ದರಾಮಯ್ಯ : ಅದು ಹಲ್ಲು ಅಲ್ಲ. ಮನುಷ್ಯರ structure ಇರುವುದೇ ಹಾಗೆ. ನಾವೆಲ್ಲಾ basically ಮಾಂಸ ತಿನ್ನುತ್ತಿದ್ದವರು. ನೀವೂ ಎಲ್ಲಾ ತಿನ್ನುತ್ತಿದ್ದವರೇ.

ಡಾ: ವಿ.ಎಸ್. ಆಚಾರ್ಯ : Canine tooth ಇರುವ ಜಾಗದಲ್ಲಿರುವ tooth ಗೆ rudimentary ಆಗಿ ಇದ್ದರೂ ಕೂಡ ಅದಕ್ಕೆ canine ಎನ್ನುತ್ತಾರೆ.

ಶ್ರೀ ಸಿದ್ದರಾಮಯ್ಯ : ನಾನು Science ಓದಿಕೊಂಡಿರುವ ಮಟ್ಟಿಗೆ, ಆನೆಗೆ ಏಕೆ ಕೋರೆ ಹಲ್ಲು ಇಲ್ಲ ಹೇಳಿ?, ನಾಯಿಗೆ ಏಕೆ ಕೋರೆ ಹಲ್ಲು ಇದೆ? ಹುಲಿ, ಸಿಂಹಗಳಿಗೆ ಏಕೆ ಕೋರೆ ಹಲ್ಲುಗಳು ಇವೆ. ಹಸು, ಎಮ್ಮೆ, ಕುರಿಗಳಿಗೆ ಏಕೆ ಕೋರೆ ಹಲ್ಲು ಇಲ್ಲ? ಮನುಷ್ಯನಿಗೆ ಏಕೆ ಕೋರೆ ಹಲ್ಲು

ಇದೆ? ನೀವು dental ಓದಿದ್ದೀರಾ? ಮಾನ್ಯ ಅಧ್ಯಕ್ಷರೆ, ನಾನು Scientific ಆಗಿ ಹೇಳುತ್ತಿದ್ದೇನೆ. Basic science ನಾನೂ ಸಹ ಓದಿದ್ದೇನೆ.

ಅಧ್ಯಕ್ಷರು : ಈಗ ಆ ವಿಚಾರ ಬೇಡ. ನೇರವಾಗಿ ಬಿಲ್ ಚರ್ಚೆಗೆ ಬಂದು ಬಿಡಿ.

ಶ್ರೀ ಸಿದ್ದರಾಮಯ್ಯ : ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಡಾ: ಮಹಾದೇವಪ್ಪನವರು ಎಲ್ಲವನ್ನು ಹೇಳಿದ್ದಾರೆ. ಅದೆಲ್ಲವನ್ನು ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಸುಮ್ಮನೆ ಅವರು ಹೇಳಿದರಲ್ಲಾ ಎಂದು ನಾನು ಹೇಳುತ್ತಿದ್ದೇನೆ ಅಷ್ಟೆ. ಅದಕ್ಕೋಸ್ಕರ ನಮಗೆ ನಾಲ್ಕು ತರಹದ ಹಲ್ಲುಗಳು ಇರುವುದು. Inside jaws, canines, premolars, molars ಎಂದು 32 ಹಲ್ಲುಗಳು ಇವೆ. ಮನುಷ್ಯನಿಗೆ ರಚನೆಯಾಗಿರುವುದೆ ಅದಕ್ಕೋಸ್ಕರ. Darwin's theory ಯಲ್ಲಿ Use and Disuse theory ಎಂದು ಇದೆ. ಯಾರು ಉಪಯೋಗಿಸುತ್ತಾ ಉಪಯೋಗಿಸುತ್ತಾ ಕೆಲವು ಅಂಗಾಂಗಗಳು ಬೆಳೆಯುತ್ತವೆ. ಮತ್ತೆ ಕೆಲವು ಅಂಗಾಂಗಗಳು ಉಪಯೋಗಿಸುತ್ತಾ ಉಪಯೋಗಿಸುತ್ತಾ redundant ಆಗಿ ಬಿಡುತ್ತವೆ. ಝಿರಾಫೆಯ ಕತ್ತು ಏಕೆ ಉದ್ದ ಇದೆ? ಮೇಲಿರುವ ಮೇವಿನ ಸಲುವಾಗಿ ಕತ್ತು ಎಳೆದು ಎಳೆದು ಉದ್ದವಾಗಿದೆ. Darwin's theory ಯಲ್ಲಿ Use and Disuse theory ಎಂದು ಹೇಳುತ್ತೇವೆ. ಮೊದಲು ಹಾವುಗಳಿಗೆ ಕಾಲುಗಳು ಇದ್ದವು, ಅವು ಕಾಲುಗಳನ್ನು ಉಪಯೋಗಿಸುವುದನ್ನೇ ಬಿಟ್ಟು ಬಿಟ್ಟವು. ಆಗ ಕಾಲುಗಳು ಹೋಗಿಬಿಟ್ಟವು.

ಅಧ್ಯಕ್ಷರು : ಈಗ ಅವು ಯಾವುದೂ ನಮಗೆ ಬೇಡ.

ಶ್ರೀ ಸಿದ್ದರಾಮಯ್ಯ : Academic interest ನಿಂದ ಅದನ್ನು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಈಗ ಅದಕ್ಕೆ ಸಮಯವಿಲ್ಲ. ಆಮೇಲೆ ಕುಳಿತು ಕೊಳ್ಳೋಣ.

ಶ್ರೀ ಸಿದ್ದರಾಮಯ್ಯ : ಸಮಯ ಏಕೆ ಇಲ್ಲ ಸ್ವಾಮಿ, ಬೇಕಾದಷ್ಟು ಸಮಯವಿದೆ.

O.32 F-37

ಡಾ: ಹೆಚ್.ಸಿ. ಸಿದ್ದರಾಮಯ್ಯ : Zoology ಓದಿದ್ದಾರೆ.

ಅಧ್ಯಕ್ಷರು: ಈಗ Zoology ಬೇಡ, ಬಿಲ್ ಮೇಲೆ ಮಾತನಾಡೋಣ.

ಶ್ರೀ ಸಿದ್ದರಾಮಯ್ಯ : ನಾನು ಬಿಲ್ ಗೋಸ್ಕರ ಹೇಳಿದೆ. Use and Disuse theory. . .

ಶ್ರೀ ಕಳಕಪ್ಪ ಜಿ. ಬಂಡಿ : ಸರ್ ಒಂದು ನಿಮಿಷ.

ಅಧ್ಯಕ್ಷರು : Please ಕುಳಿತುಕೊಳ್ಳಿ, record ಗೆ ಹೋಗಬಾರದೆಂದು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ನಿಮಗೆ ಅವಕಾಶ ಕೊಟ್ಟಿಲ್ಲ ಕುಳಿತುಕೊಳ್ಳಿ. ಮಾನ್ಯ ಅಧ್ಯಕ್ಷರು ಬೇಸರ ಮಾಡಿಕೊಂಡು ಬಿಡುತ್ತಾರೆ. ಯಾರು ಎದ್ದುನಿಂತು ಮಾತನಾಡಿದರೂ ದಾಖಲೆಗೆ ತೆಗದುಕೊಳ್ಳಬೇಡಿ. ಸಿದ್ದರಾಮಯ್ಯನವರೆ, ತಾವು ಮಾತನಾಡಿ, ತಾವು ಮಾತನಾಡಿ, ತಾವು ಕುಳಿತುಕೊಳ್ಳಬಾರದು.

ಶ್ರೀ ಸಿದ್ದರಾಮಯ್ಯ : ನಾನು ಕುಳಿತುಕೊಂಡಿಲ್ಲ ನಿಂತುಕಂಡೆ ಇದ್ದೇನೆ. ಮಾನ್ಯ ಅಧ್ಯಕ್ಷರು ನೀವು ಮಾತನಾಡುವುದನ್ನು ಒಪ್ಪಿಕೊಳ್ಳುವುದಿಲ್ಲ, Please ಕುಳಿತುಕೊಳ್ಳಿ. Co-operate ಮಾಡಿ. ಈಗ ನಾನು ಮನುಷ್ಯನ evolution ಹೇಗಾಯಿತು ಏನು ಎನ್ನುವುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈಗ ನಾನು ಇತಿಹಾಸವನ್ನು ಹೇಳುವುದಕ್ಕೆ ಹೋಗುವುದಿಲ್ಲ. ವಿವೇಕಾನಂದರು ಹೇಳಿರುವುದನ್ನು ಹೇಳುವುದಿಲ್ಲ. ಆದರೆ ಮಹಾತ್ಮಾಗಾಂಧಿ ಯವರು ಒಂದು ಸಲ ಏನು ಹೇಳಿದರೆಂದರೆ, ಪ್ರಾಣಿಹಿಂಸೆಗೆ ವಿರುದ್ಧ ವಾಗಿದ್ದವರು. ಅಹಿಂಸೆಯಲ್ಲಿ ನಂಬಿಕೆಯನ್ನು ಇಟ್ಟುಕೊಂಡಿರುವವರು. ಒಂದು ಸಲ ಅವರ ಆಶ್ರಮದಲ್ಲಿ ಒಂದು ಕರು ಖಾಯಿಲೆ ಬಂದು ಒದ್ದಾಡುತ್ತಿರುತ್ತದೆ. ಆಗ ಅವರು ಏನು ಮಾಡುತ್ತಾರೆಂದರೆ, ಅದರ ನೋವನ್ನು ಅವರಿಂದ ನೋಡುವುದಕ್ಕಾಗದೆ ಕೊಂದು ಹಾಕಿಬಿಡಿ ಎನ್ನುತ್ತಾರೆ. ಅದಕ್ಕೆ mercy killing ಎಂದು ಹೇಳುತ್ತರೆ. ಅದು ಪಾವಿತ್ರ್ಯಕ್ಕೆ ಪರನೋ ಅಥವಾ ಅಪಾವಿತ್ರನೋ?

ಶ್ರೀ ಕಳಕಪ್ಪ ಜಿ. ಬಂಡಿ : ಎರಡು ಇದೆ.

ಶ್ರೀ ಸಿದ್ದರಾಮಯ್ಯ : ಎರಡು ಇದೆಯಾ? ನೀವು ಈ ಕಾನೂನಿನಲ್ಲಿ ಕೆಲವು section ಗಳು ಇವೆಯಲ್ಲಾ, 7 ವರ್ಷ ಶಿಕ್ಷೆ ಕೊಡುವ ಕಾನೂನು ಮಾಡಿದ್ದೀರಲ್ಲಾ the burden of proof is on whom? ಯಾರು ಹಸು ತೆಗೆದುಕೊಳ್ಳುತ್ತಾನೆ, ಎಮ್ಮೆ ತೆಗೆದುಕೊಳ್ಳುತ್ತಾನೆ, ವ್ಯವಸಾಯಕ್ಕೋಸ್ಕರ ತೆಗೆದು ಕೊಳ್ಳುತ್ತಾನೆ, Animal Husbandry purpose ಸಲುವಾಗಿ ತೆಗೆದು ಕೊಳ್ಳುತ್ತಾನೆ, ಯಾರಾದರೂ slaughter ಗೋಸ್ಕರ ತೆಗೆದುಕೊಂಡು ಬಿಟ್ಟರೆ,

the burden of proof is on the farmer. What is the basic principle under the Criminal Jurisprudence? Is it not against the basic Principle of Criminal Jurisprudence? Zoo ನಲ್ಲಿ ಪ್ರಾಣಿಗಳನ್ನು ಸಾಕಬೇಕು, ನೀವು total ban ಮಾಡಿಬಿಟ್ಟರೆ ಎಲ್ಲಿಂದ ಮಾಂಸವನ್ನು ತೆಗೆದುಕೊಂಡು ಬರುವುದು. Cattle slaughter total ban ಮಾಡಿಬಿಟ್ಟರೆ, ಅಲ್ಲಿಗೆ ನಾಯಿ ಕತ್ತರಿಸಿಕೊಂಡು ಬಂದು ಕೊಡುವುದಾ? ಹಾಗಾದರೆ ಎಲ್ಲಾ National Park ಗಳನ್ನು ಮುಚ್ಚಿಹಾಕಿ ಬಿಡುವುದಾ? ನಮ್ಮಲ್ಲಿರುವ Zoo, ಬನ್ನೇರುಘಟ್ಟದಲ್ಲಿರುವುದು, All National Parks ಅವುಗಳನ್ನು ಏನು ಮಾಡಬೇಕು. ನೋಡಿ, ಎಲ್ಲಾ ರಾಜ್ಯಗಳ ಮಾಹಿತಿ ನನ್ನ ಹತ್ತಿರ ಇದೆ. slaughter ನ್ನು ಎಲ್ಲೂ ಕೂಡ total ಆಗಿ ban ಮಾಡಿಲ್ಲ. ವ್ಯವಸಾಯಕ್ಕೆ ಉಪಯೋಗ ಇಲ್ಲದೇ ಇರತಕ್ಕಂಥವು, ಹಾಲು ಕೊಡದೆ ಇರತಕ್ಕಂಥವು, ಬರಡಾಗಿರತಕ್ಕಂಥವುಗಳು, 14 ವರ್ಷ ತುಂಬಿರತಕ್ಕಂಥವುಗಳು. . . Supreme Court ನವರು ಕೂಡ ಅದನ್ನೇ ಹೇಳಿದ್ದಾರೆ. ಈ ಎಲ್ಲಾ ಕೇಸ್ ಗಳನ್ನು ನೋಡಿ Supreme Court ನವರು ಅಬ್ದುಲ್ ಹಕೀಂ ಮತ್ತು ಸ್ಟೇಟ್ ಆಫ್ ಬಿಹಾರ್ ಹಾಗೂ ಮಹಮ್ಮದ್ ಫರೂಕ್ ಮತ್ತು ಸ್ಟೇಟ್ ಆಫ್ ಮಧ್ಯಪ್ರದೇಶ್‌ನಲ್ಲಿ ಸುಪ್ರೀಮ್ ಕೋರ್ಟ್ ಏನು ಹೇಳುತ್ತದೆ ಎದರೆ, ಪ್ರಸ್ತುತ ಆರ್ಥಿಕ ಪರಿಸ್ಥಿತಿಯನ್ನು ಅನುಪಯುಕ್ತ ದನಗಳನ್ನು ಸಾಕುವುದು ಹೊರೆಯಾಗುತ್ತದೆಯಾದ್ದರಿಂದ ಸಂಪೂರ್ಣ ಗೋಹತ್ಯೆ ನಿಷೇಧ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂದು ಸ್ಪಷ್ಟವಾಗಿ ಅಭಿಪ್ರಾಯ ವನ್ನು ಪಟ್ಟಿದೆ. 2006 ರಲ್ಲಿ ಕರ್ನಾಟಕದ ಹಿಂದೂ ಜಾಗರಣಾ ವೇದಿಕೆಯು ಗೋವು ಮಾತ್ರವಲ್ಲದೆ, ಎಮ್ಮೆ, ಕೋಣ, ಆಕಳು ಇತರೆ ಎಲ್ಲಾ ಜಾನುವಾರುಗಳ ಹತ್ಯೆಯನ್ನು ನಿಷೇಧಿಸಬೇಕೆಂದು ಹೂಡಿದ ದಾವೆಯನ್ನು ವಜಾ ಮಾಡುತ್ತಾ ಅದು ಅಸಂವಿಧಾನಿಕವಾಗಿರುತ್ತದೆಂದು ಸ್ಪಷ್ಟವಾಗಿ ಅಭಿಪ್ರಾಯ ಪಟ್ಟಿದ್ದರು. ಈ ತೀರ್ಮಾನಕ್ಕೆ ಬರಲು 2005 ರಲ್ಲಿ ಏಳು ನ್ಯಾಯಾಧೀಶರ ಸಾಂವಿಧಾನಿಕ ಪೀಠ ನೀಡಿದ ತೀರ್ಮಾನದ ತರ್ಕವನ್ನೆ ನ್ಯಾಯಾಲಯ ಬಳಸಿಕೊಂಡಿತು. ಈಗ ಕರ್ನಾಟಕ ಸರ್ಕಾರ ತರುತ್ತಿರುವ ಕಾಯಿದೆಯಲ್ಲಿ ಗೋವು ಎಂದರೆ, ಆಕಳು ಜೊತೆಯಲ್ಲಿ ನೀವು ಎಲ್ಲವನ್ನು ಸೇರಿಸಿಬಿಟ್ಟಿದ್ದೀರಿ. Cattle ಎಂದರೆ ಎಮ್ಮೆ, ಹಸು, ಕರು, ಕೋಣ, ಎತ್ತು ಎಲ್ಲಾ ಬಂದು ಬಿಡುತ್ತವೆ. Total ban ಮಾಡಿದರೆ ನಿಮಗೆ ಆಹಾರದ ಸಮಸ್ಯೆ

ಎಷ್ಟಾಗುತ್ತದೆನ್ನತಕ್ಕಂಥದ್ದನ್ನು ನೀವು ಯೋಚನೆ ಮಾಡಬೇಕು. If there is a total ban on cattle slaughter, total ban ಆಗಿ ಬಿಟ್ಟರೆ ಹೇಗೆ? ಈಗಾಗಲೇ ನಮಗೆ food production ನಮ್ಮ ದೇಶದಲ್ಲಿ ಎಲ್ಲರಿಗೂ ಕೊಡುವುದಕ್ಕಾ ಗುತ್ತಿಲ್ಲ. ಯಾರು ಅವರ ತಮ್ಮ ಆಹಾರ ಪದ್ಧತಿಯನ್ನು ಮೊದಲಿನಿಂದಲೂ ಬೆಳೆಸಿಕೊಂಡು ಬಂದಿರುತ್ತಾರೆ, ತಿನ್ನುತ್ತಾ ಬಂದಿರುತ್ತಾರೆ. ತಿನ್ನುವುದಿಲ್ಲ ಸಮ್ಮನೆ ಇರಿ. ನಾವು ತಿನ್ನುವವರಿಗೆ ಏಕೆ ತೊಂದರೆ ಕೊಡುತ್ತೀರಿ.

(ಗೊಂದಲ)

ಶ್ರೀ ಎಸ್. ಶಿವಣ್ಣ : ಏನು ತೊಂದರೆಯಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ನೀವು ತಿನ್ನುತ್ತೀರಿ ನಿಮಗೆ ತೊಂದರೆಯಾ ಗುತ್ತದೆ. ನಾನು ನನ್ನ ಅಭಿಪ್ರಾಯವನ್ನು ಹೇಳುತ್ತೇನೆ, ನೀವು ನಿಮ್ಮ ಅಭಿಪ್ರಾಯವನ್ನು ಹೇಳಿ.

ಶ್ರೀ ಎಂ.ಟಿ. ಕೃಷ್ಣಪ್ಪ : Highest ತಿನ್ನುವವನೆ ಶಿವಣ್ಣ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಮಗೆ cheap ಸಿಗುತ್ತದೆ, ನಾನು ತಿನ್ನುತ್ತೇನೆ. ಏಕೆ ನೀವು ತಡೆಯುವುದಕ್ಕೆ ಹೋಗುತ್ತೀರಿ? ಅದೇನು ವ್ಯವಸಾಯಕ್ಕೆ ಯೋಗ್ಯವಾದದು ಅಲ್ಲ ಅದನ್ನು ಕತ್ತರಿಸುವುದಕ್ಕೆ ಬರುವುದಿಲ್ಲ, ಹಾಲು ಕೊಡುವುದಕ್ಕೆ ಬರುವುದಿಲ್ಲ, ಅದು ಉಪಯುಕ್ತವಾಗುವುದಕ್ಕೆ ಬರುವುದಿಲ್ಲ, ಇದ್ದರೆ ಅದನ್ನು ನಾವು ತಿನ್ನುತ್ತೇನಪ್ಪ. ಇದಕ್ಕೆ ನೀವು ಏತಕ್ಕಾಗಿ ಅಡ್ಡಬರುತ್ತೀರಿ? Yo are curtailing my right. ಕಡಿಮೆ ದುಡ್ಡಿಗೆ ಸಿಗುತ್ತದೆ ಏನೋ ಅದನ್ನು ಬಹುಸಂಖ್ಯಾತ ಜನರು ಅಭ್ಯಾಸವನ್ನು ಮಾಡಿಕೊಂಡಿದ್ದಾರೆ. ನಾನು ಕುರಿ, ಕೋಳಿ ಮತ್ತು ಮೇಕೆಯನ್ನು ತಿನ್ನುತ್ತೇನೆ, ನಾಳೆ ಹಸು, ಕರು, ಎಮ್ಮೆ, ದನ ಎಲ್ಲವನ್ನು ನೀವು ban ಮಾಡಿದರೆ ಕುರಿಮಾಂಸ ಒಂದು ಕೆಜಿಗೆ ಒಂದು ಸಾವಿರ ರೂಪಾಯಿಗಳು ಆಗುತ್ತದೆ. ಮಾನ್ಯ ಬಚ್ಚೇಗೌಡರೆ, ನಾವು ಏನು ಮಾಡಬೇಕು? ಮಾನ್ಯ ಕಾರಜೋಳ್‌ರವರೆ ನಾವು ಏನು ಮಾಡಬೇಕು? ಏನು ಮಾಡಬೇಕೆಂದು ತಾವು ಹೇಳಿ. ನಾವುಗಳು ಎಲ್ಲಿಗೆ ಹೋಗಬೇಕು? ಇದರಿಂದ ಜನರ ಆರ್ಥಿಕ ಪರಿಸ್ಥಿತಿಯ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ.

ಶ್ರೀ ಶ್ರೀನಿವಾಸ : ಸಾರ್ ನಾನು 50 ಸಾಕಿದ್ದೇನೆ.

ಅಧ್ಯಕ್ಷರು : ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಮ್ಮ cost of living ಮೇಲೆ ದುಷ್ಪರಿಣಾಮ ಬೀರುತ್ತದೆ. ನಾವೇನು ಇಲ್ಲಿ ದನ ಸಾಕದೆ ಬಂದಿದ್ದೇವ? ನೀವೊಬ್ಬರೆ ಸಾಕಿರುತ್ತೀರಾ? ನಾನು ದನ ಎಮ್ಮೆಯನ್ನು ಮೇಯಿಸಿಯೇ ಇಲ್ಲಿಗೆ ಬಂದಿರುತ್ತೇನೆ. ಈ ಕಾಯಿದೆಯನ್ನು ತರಬೇಕೆನ್ನುವವರು ಯಾವತ್ತು ಗಂಜಲವನ್ನು ಎತ್ತದೆ, ತೊಪ್ಪೆಯನ್ನು ಎತ್ತದೆ ಇರುವವರು, ಸಗಣಿಯನ್ನು ಎತ್ತದೇ ಇರುವವರು ಇದನ್ನು ತರಬೇಕೆಂದು ಇರುವವರು. ಈ ಸಗಣಿಯನ್ನು ಎತ್ತುತ್ತೇವೆನ್ನುವವರು ಒಬ್ಬರು ತರುತ್ತೇವೆಂದು ಹೇಳುವುದಿಲ್ಲ. ಬೇಕಾದರೆ ನೀವು ಹೋಗಿ ಕೇಳಿಕೊಂಡು ಬನ್ನಿ. ನೀವು ರೈತರ ಹತ್ತಿರ ಹೋಗಿ ನೀವು opinion poll ತೆಎದುಕೊಳ್ಳಿ. ದನ, ಕುರಿ ಹಾಗೂ ಎತ್ತನ್ನು ಸಾಕುವವರು: ರೈತರುಗಳು, ನೀವು ಯಾರಿಗೋ ಸೊಸೈಟಿಯನ್ನು ಕೊಡುವುದಕ್ಕೆ ಹೋಗುತ್ತಿದ್ದೀರಿ, ಅವರುಗಳು ಇವುಗಳನ್ನು ಯಾವತ್ತಾದರೂ ಸಾಕಿದ್ದಾರಾ? ಇವರ ಹತ್ತಿರ ಇರುವುದನ್ನು ಕಿತ್ತು, ಅವರ್‍ಯಾರಿಗೋ ಕೊಡುವುದಕ್ಕೆ ಹೊರಟಿದ್ದೀರಲ್ಲಾ, ಅವರ್‍ಯಾರು ದನ ಹಾಗೂ ಎಮ್ಮೆಯನ್ನು ಸಾಕಿದ್ದಾರಾ? ಮಾನ್ಯ ಬಚ್ಚೇಗೌಡರೆ, ಅವರು ಸಗಣಿಯನ್ನು ಎತ್ತಿದ್ದಾರೆಯೇ? ನಾವುಗಳು ಸಗಣಿಯನ್ನು ಮೈಮೇಲೆ ಸುರಿದುಕೊಂಡು ಅದನ್ನು ಹೊತ್ತುಕೊಂಡು ಹೋಗಿದ್ದೇವೆ. ನಾವು ಈ ಕಾನೂನು ಸರಿಯಾಗಿದೆ ಬೇಡ್ರಪ್ಪಾ, ಜಾನುವಾರು ಗಳನ್ನು ರಕ್ಷಣೆಯನ್ನು ಮಾಡುವುದಕ್ಕೆ ಹೋಗುತ್ತಿದ್ದೀರಿ. Animal husbandry ಆಗುತ್ತದೆ, ಬೆಳವಣಿಗೆಯು ಆಗುತ್ತದೆ, ಇದರಿಂದ ವ್ಯವಸಾಯಕ್ಕೂ ಕೂಡ ಅನುಕೂಲವಾಗುತ್ತದೆ. ಈಗ ಇರುವ ಕಾನೂನು ಸಾಕೆಂದು ಹೇಳಿದರೆ, ಇವರು ಯಾವುದೋ ದುರುದ್ದೇಶವನ್ನು ಇಟ್ಟುಕೊಂಡು ಯಾವುದೋ ಒಂದು ವರ್ಗದ ಜನರ ಮೇಲೆ ದ್ವೇಷ ಸಾಧನೆಯನ್ನು ಮಾಡುವುದಕ್ಕೋಸ್ಕರ ಇದನ್ನು ತಂದಿದ್ದೀರಲ್ಲ ನಿಮ್ಮನ್ನು ಯಾರಾದರೂ ಮೆಚ್ಚುತ್ತಾರೆಯೋ? ಇದನ್ನು ಜನರು ಮೆಚ್ಚುತ್ತಾರೆಯೇ? ಆಮೇಲೇ Beef products. ಇದರಲ್ಲಿ ನೀವು ಬರಿ beef ಅಂದರೆ ಏನು ಎಂದು ಹೇಳಿದ್ದೀರಿ. What about beef products? ಇದರಲ್ಲಿ ಎಷ್ಟೆಷ್ಟು ಬರುತ್ತದೆ? ಅದರ ಮೇಲೆ ಅವಲಂಬನೆಯಾಗಿರುವಂತಹ ಜನರ ಗತಿ ಏನು? ಹೇಳಿ ನೋಡೋಣ. ಚರ್ಮದ ಕೈಗಾರಿಕೆ, ಷೂವನ್ನು ಮಾಡುವವರು, ಚಪ್ಪಲಿ ಯನ್ನು ಹೊಲಿಯುವವರು, ಬೆಲ್ಟ್‌ನ್ನು ತಯಾರು ಮಾಡುವವರು, ಬಟನ್ ತಯಾರು ಮಾಡುವವರು, ಕನ್ನಡದ ಫ್ರೇಮ್‌ನ್ನು ಮಾಡುವವರು, ಕ್ಯಾಪಸಲ್ಸ್,

ಶುಗರ್‌ಗೆ ಔಷಧಿ ಮಾಡುವವರು, ಇವರುಗಳು ಇದರ ಮೇಲೆ depend ಆಗಿದ್ದಾರಲ್ಲಾ, ನಿವು ಅವರುಗಳ ಬಗ್ಗೆ ಏನು ಯೋಚನೆಯನ್ನು ಮಾಡಿದ್ದೀರಿ? ಅವರ rehabilitation ಮಾಡುವುದಕ್ಕೆ ಏನು ಮಾಡಿದ್ದೀರಿ? ಇದರ ಮೇಲೆ ಅವಲಂಬನೆಯಾಗಿ ಲಕ್ಷಾಂತರ ಜನರು ಬದುಕುತ್ತಿದ್ದಾರಲ್ಲಾ, ಇವರುಗಳಿಗೆ ಏನು ಉದ್ಯೋಗವನ್ನು ಕೊಡುತ್ತೀರಿ? ನೀವು ಸಾರಾಯಿ ತರಬೇಡಿ ಅಂದರೆ ಸಾರಾಯಿಯನ್ನು ತೆಗೆದುಕೊಂಡು ಬಂದಿರಿ, ಪಾಪಾ ಸಾರಾಯಿ ಮೇಲೆ ಅವಲಂಬಿತವಾದಂತಹ ಜನರಿಗೆ rehabilitate ಮಾಡುತ್ತೇವೆಂದು ಹೇಳಿದ್ದೀರಿ. ಅವರೆಲ್ಲರೂ ಬೀದಿ ಪಾಲಾದರು, ಅವರಿಗೆ ನೀವುಗಳು ಏನು ಮಾಡಲಿಲ್ಲ. ಸಾರಾಯಿ ಮಾರಾಟ ಮಾಡುವುದನ್ನು ನಿಲ್ಲಿಸಿದರೋ? ಸಾರಾಯಿಯನ್ನು ಜನರು ಕುಡಿಯುವುದನ್ನು ನಿಲ್ಲಿಸಿದರೋ ಜನಗಳೂ 12 ರಿಂದ 13 ರೂಪಾಯಿಯನ್ನು ಕೊಟ್ಟು ಸಾರಾಯಿ ಪ್ಯಾಕೇಟ್‌ನ್ನು ತೆಗೆದುಕೊಂಡು ಒಂದು ಬೋಂಡವನ್ನು ತಿಂದುಕೊಂಡು ಮನೆಗೆ ಹೋಗುತ್ತಿದ್ದರು. ಈಗ ಅವನು 50 ರೂಪಾಯಿ ಕೊಟ್ಟು ಕುಡಿದುಕೊಂಡು ಮನೆಗೆ ಹೋಗುತ್ತಿದ್ದಾನೆ. ಈಗ ಹಳ್ಳಿಯಲ್ಲಿ ಮನೆಗಳು ಹಾಳಾಗಿ ಹೋಗುತ್ತದೆ. ಇದು ಆ ತರಹದ ಒಂದು ಕಾಯಿದೆಯಾಗಿದೆ. ಈಗ ಏನಾಗಿದೆ ಎಂದರೆ, ಪೋಲೀಸ್ ಹಾಗೂ ಎಕ್ಸೈಸ್ ಇಲಾಖೆಯವರಿಗೆ ಹಬ್ಬ ಆಗಿದೆ. ಅವರುಗಳು ಅಂಗಡಿಗಳಿಗೆ ಹೋಗಿ ಮಾಮೂಲು ವಸೂಲಿ ಮಾಡಿಕೊಂಡು ಬರುತ್ತಾರೆ. ಇದು ಸಹ ಹಾಗೆಯೇ ಅಗುತ್ತದೆ. ನಾವು ಯಾವುದೇ ಕಾನೂನನ್ನು ಬಲತ್ಕಾರವಾಗಿ ಹೇರುವುದಕ್ಕೆ ಹೋಗುತ್ತೇವೆ ಅಲ್ಲಿ ಭ್ರಷ್ಟಾಚಾರವಾಗುತ್ತದೆ. ಇದರಿಂದ ಕಳ್ಳತನಗಳು ಜಾಸ್ತಿಯಾಗುತ್ತದೆ. ಕಾನೂನನ್ನು ಪಾಲನೆ ಮಾಡುವುದಕ್ಕೆ ಸಾಧ್ಯವಿಲ್ಲ. Law and Order problem create ಆಗುತ್ತದೆ. ಅದನ್ನು ಮಾಡುವುದಕ್ಕೋಸ್ಕರ ಇದನ್ನು ಮಾಡಬೇಕಾಗುತ್ತದೆ. The term bef product is not defind. The belts, shoes, nail polish, gusset, film, sutures used in surgical operations, buttons, ivory imitations, musical instruments like drums, even sugar which is bleached using bone products, soaps, shampoos, optical frames, painting brushes can all be brought under beef products. ಇದರ ಮೇಲೆ ಅವಲಂಬನೆಯಾಗಿರುವಂತಹವರ ಬದುಕು ಏನಾಗುತ್ತದೆ? You are making their lives miserable. ಅದಕ್ಕೆ ಇದನ್ನು ತೆಗೆದುಕೊಂಡು

ಬರುತ್ತೀರಾ? 1964ರ ಕಾಯಿದೆ ಸಾಕಲ್ಲಾ? ನೀವು ಯಾವುದೋ ದುರುದ್ದೇಶವನ್ನು ಇಟ್ಟುಕೊಂಡು ಈ ತರಹ ತೆಗೆದುಕೊಂಡು ಬರುತ್ತಿದ್ದೀರಿ. ನೀವು ಸೆಕ್ಷನ್ 7ನಲ್ಲಿ ಹೇಳಿದ್ದೀರಿ. ಯಾರು ಆ ತರಹ ಬಿಸಿನೆಸ್‌ನ್ನು ಮಾಡುವ ಹಾಗಿಲ್ಲ. What does Article 304 (B) say? Section 7 of this Amendment Bill violates Article 304(B). Article 304 ಹೀಗೆ ಹೇಳುತ್ತದೆ:

> "301ನೇ ಅಥವಾ 303ನೇ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ ಒಂದು ರಾಜ್ಯದ ವಿಧಾನಮಂಡಲವು ಕಾನೂನು ಮೂಲಕ ಇತರ ರಾಜ್ಯಗಳಿಂದ ಆಮದಾದ ಸರಕುಗಳ ಮೇಲೆ ಆ ರಾಜ್ಯದಲ್ಲಿ ತಯಾರಾದ ಅಥವಾ ಉತ್ಪಾದಿಸಲಾದ ಅದೇ ಬಗೆಯ ಸರಕುಗಳು ಯಾವ ತೆರಿಗೆಗೆ ಒಳಪಟ್ಟಿದೆಯೋ ಅಂತಹ ಯಾವುದೇ ತೆರಿಗೆಯನ್ನು. . .
>
> (ಬಿ) ಅ ರಾಜ್ಯದೊಡನೆ ಅಥವಾ ರಾಜ್ಯದಲ್ಲಿ ವ್ಯಾಪಾರ ವಾಣಿಜ್ಯ ಮತ್ತು ಸಂಪರ್ಕ ಇವುಗಳ ಸ್ವಾತಂತ್ರ್ಯದ ಮೇಲೆ ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಗತ್ಯಬಹುದಾದಂತಹ ಯುಕ್ತ ಸಂಬಂಧಗಳನ್ನು ವಿಧಿಸಬಹುದು ಮತ್ತೆ (Provided) ಪರಂತು ಖಂಡ ಉದ್ದೇಶಗಳಿಗಾಗಿ ಯಾವ ವಿಧೇಯಕವನ್ನು ತಿದ್ದುಪಡಿ ಯನ್ನು ರಾಷ್ಟ್ರಪತಿಯಿಂದ ಪೂರ್ವ ಮಂಜೂರಾತಿಯಿಲ್ಲದೆ ಒಂದು ರಾಜ್ಯದ ವಿಧಾನಮಂಡಲದಲ್ಲಿ ತರತಕ್ಕದ್ದಲ್ಲ ಮತ್ತು ಮಂಡಿಸತಕ್ಕದ್ದಲ್ಲ."

Is there any prior sanction of the President of India to restrict trade, commerce, interstate between one State to another? ಎಲ್ಲಿ ಮಾಡಿದ್ದೀರಿ? Then how can it stand the scrutiny of the Court.? Is it not clear violation of the Constitution?

ಮಾನ್ಯ ಅಧ್ಯಕ್ಷರೆ, ಈ ಮಸೂದೆ total ಆಗಿ it is not only unconstitutional, but also null and void *ab-initio*. That is the word used in Constitution. ಅದಕ್ಕೆ ನಾವು ತಂದಾಗಲೇ ವಿರೋಧ ಮಾಡಿದ್ದೇವೆ. ಇದನ್ನು introduce ಮಾಡುವಾಗಲೇ ಏಕೆ ವಿರೋಧ ಮಾಡಿದೆವು ಎಂದರೆ because of this reason. ಈ ರೀತಿ ನೀವು

President sanction ಇಲ್ಲದೇ, it is not valid. It is unconstitutional. It is null and void. That is why we call this bill as a draconian law. It is going to be draconian law. ಹಿಟ್ಲರ್ ಕಾಲದಲ್ಲಿ ಇವೆಲ್ಲವನ್ನೂ ತರಹಬಹುದೇ ಹೊರತು, ಪ್ರಜಾಪ್ರಭುತ್ವವಿರುವ ಕಡೆಗಳಲ್ಲಿ ಇಂತಹವುಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ನಿಮ್ಮದು ಏನು ಹಿಟ್ಲರ್ ರಾಜ್ಯವೇ, ಹಿಟ್ಲರ್ ಸರ್ಕಾರವೇ? ಹಿಟ್ಲರ್ ಸರ್ಕಾರದಲ್ಲಿ ನಡೆಯುವ ರೀತಿಯಲ್ಲಿ ನಡೆಸುವುದಕ್ಕೆ ನೀವು ಹೊರಟಿದ್ದೀರಿ.

ಶ್ರೀ ಸಿ.ಟಿ. ರವಿ : 1956ರಲ್ಲಿ, 1964 ರಲ್ಲಿ ತಂದಿದ್ದರಲ್ಲಾ ಅವರು ಆಗ ಹಿಟ್ಲರ್‌ಗಳು ಆಗಿದ್ದರೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ರವಿಯವರೇ ನಿಮಗೆ ಇದೆಲ್ಲಾ ಗೊತ್ತಾಗುವುದಿಲ್ಲ. ಕುಳಿತುಕೊಳ್ಳಿ.

ಶ್ರೀ ಖಮರುಲ್ಲಾ ಇಸ್ಲಾಂ : The Act of 1964 is perfect.

(ಗೊಂದಲ)

ಅಧ್ಯಕ್ಷರು : Please ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಇದಕ್ಕೆ ಸಂಬಂಧಪಟ್ಟಂತೆ, ಒಂದು ಸುಪ್ರೀಂ ಕೋರ್ಟ್ decision ಅನ್ನು ಕೂಡ I would like to bring it to your notice. ಇದು Constitutional Bench decision. A.I.R. 1961 Supreme Court, page 232, 26th September 1960. I would like to bring the relevant portion to your notice.

> "The difference in the Provisions contained in Article 302 and Article 304 (B), would *Prima facie* suggest that where Parliament exercises its power under Article 302 and passes a law imposing restriction on the freedom of trade in the public interest, whether or not the given law is in the public interest may not be justifiable and in that sense Parliament is given the sole power to decide what restrictions can be imposed in public interest as authorized by the Article 302.

Article 304 ನಲ್ಲಿ ಏನು ಹೇಳಿದೆ ಎಂದರೆ,

"On the other hand Article 304 (B) requires not only that the law should be in the publc interest and should however receive the previous sanction of the President, but that restrictions imposed by it should also be reasonable."

Restrictions imposed by the Legislation should be reasonable and also obtain the sanction of the President. Here is a case, wherein the present Bill moved by the Government they have not taken the sanction of the President and thay are putting unreasonable restrictions on the freedom of trade. ಆ freedom of trade ಮೇಲೆ unreasonable restrictions ಅನ್ನು ಹಾಕುತ್ತಿದ್ದಾರೆ. ಇದು ಒಂದು decision. ಇತ್ತೀಚೆಗೆ 2006ರಲ್ಲಿ ಒಂದು ಸುಪ್ರೀಂಕೋರ್ಟ್ judgment ಆಗಿದೆ. That is M/s. Jindal Steels Limited Vs. State of Hariyana. ಮಾನ್ಯ ಅಧ್ಯಕ್ಷರೆ, I will read the operative portion of the judgment, "As soon as it is shown that the Act invades freedom of trade it is necessary to enquire whether the State has proved that the restrictions imposed by it by way of taxation are reasonable and in public interest within the meaning of Article 304 (B).

An additional requisite for the exercise of power under Article 304 (B) by the State Legislature is that previous Presidential sanction is required for such Legislation."

ಇದು ಇತ್ತೀಚೆಗೆ ಬಂದಿರತಕ್ಕಂತಹ ಅಂದರೆ 2006 ರಲ್ಲಿ ಸುಪ್ರೀಂಕೋರ್ಟ್ ಕೊಟ್ಟಿರತ್ತಕಂತಹ judgment. Here also it is very clear. Categorically it is mentioned that previous sanction of the President is necessary to Legislation which puts restrictions on freedom of trade. ಇದನ್ನು ನೀವು ಕಿತ್ತುಕೊಳ್ಳುವುದಕ್ಕೆ ಹೊರಟಿದ್ದೀರಲ್ಲಾ? Is it not a violation of fundamental rights guaranteed under the Constitution? ಈ ಎಲ್ಲಾ ದೃಷ್ಟಿಯಿಂದ ಇದು unconstitutional, not in accordance with the provisions of the Constitution, that is why it is null and void *ab-initio*. ಈ ರೀತಿಯ ಕಾನೂನು ಕೋರ್ಟ್‌ನಲ್ಲಿ ನಿಲ್ಲುವುದಿಲ್ಲ. That is number (1). Number (2) ಏನೆಂದರೆ, ಬಹುಸಂಖ್ಯಾತ ಜನರ ಹಕ್ಕುಗಳನ್ನು ಕಿತ್ತುಕೊಳ್ಳುವಂತಹದ್ದು, ಬದುಕುವ ಹಕ್ಕನ್ನು ಕಿತ್ತುಕೊಳ್ಳುವಂತಹದ್ದು, ಬಹುಸಂಖ್ಯಾತ ಜನರ ಸಂಸ್ಕೃತಿ ಮೇಲೆ ದಾಳಿ ಮಾಡತಕ್ಕಂತಹದ್ದು, ಆಹಾರ ಪದ್ಧತಿ ಮೇಲೆ ದಾಳಿ ಮಾಡತಕ್ಕಂತಹದ್ದು, ಬಹುಸಂಖ್ಯಾತ ಜನರ ಮೇಲೆ vegetarian food habit ಅನ್ನು ಬಲಾತ್ಕಾರವಾಗಿ ಹೇರತಕ್ಕಂತದ್ದು. ಬಲಾತ್ಕಾರವಾಗಿ ಅಂದರೆ, it is a forcible imposition. ಆಮೇಲೆ ಎಲ್ಲಾ ಏನು ಮಾಡುತ್ತಾರೆ ಎಂದರೆ, ತಿನ್ನುವುದು non-vegetarian ಆದರೆ ಹೇಳುವುದು ಮಾತ್ರ Vegetarian. ಕೆಲವರು ಕದ್ದು ಕದ್ದು ತಿನ್ನುತ್ತಾರೆ. ಮಾನ್ಯ ಅಧ್ಯಕ್ಷರೆ, ಇವತ್ತು ಬಾರ್‌ಗಳು ನಡೆಯುತ್ತಿರುವುದು ಯಾರಿಂದ ಗೊತ್ತೇ? ಯಾರು vegetarian by birth ಇದ್ದರೋ ಅವರಿಂದಲೇ ಬಾರ್‌ಗಳು ನಡೆಯುತ್ತಿವೆ. ನೀವು ಅಲ್ಲಿ ಹೋಗಿ ನೋಡಬೇಕು. ಇಲ್ಲಿ ಬಂದು . . ..

Dr. H.C. Mahadevappa : Let us welcome, let them eat.

ಶ್ರೀ ಸಿದ್ದರಾಮಯ್ಯ : ತಿನ್ನಬೇಡಿ ಎಂದು ನಾನು ಹೇಳುವುದಿಲ್ಲ. It is a food habit ಎಂದು ಹೇಳಿದ ಮೇಲೆ Let them eat. ಆದರೆ, ಇಲ್ಲಿ ಮಂತ್ರ ಹೇಳುವುದು ಬೇಡ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇದು ಪ್ರಕೃತಿಯ ನಿಯಮ. ನಾವು ನೀವು Vegetarian ಗಳೋ ಅಥವಾ Non-Vegetarian ಗಳೋ ಎಂದು ಕೇಳುತ್ತೇವಲ್ಲಾ, ಈ Vegetarian ಅನ್ನುತ್ತೇವಲ್ಲಾ ನಾವು ರಾಗಿ ತಿನ್ನುತ್ತೇವೆ. ರಾಗಿಗೆ ನೀರನ್ನು ಹಾಕಿ ಎರಡು ದಿವಸಗಳ ಕಾಲ ಬಿಟ್ಟರೆ

ಅದಕ್ಕೆ ಜೀವ ಇರುವುದಿಲ್ಲವೇ? ಅದಕ್ಕೂ ಜೀವ ಇದೆ. ಎಲ್ಲದಕ್ಕೂ ಜೀವ ಇದೆ. ಇದು ಪ್ರಕೃತಿ ನಿಯಮ. They are also living beings ಎಂದು ನಾವು ಓದುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಸಸ್ಯಗಳಿಗೂ ಜೀವ ಇದೆ. Plants and animals ಎರಡಕ್ಕೂ ಜೀವ ಇದೆ ಎಂದು ನಾವು ಓದುತ್ತೇವೆ. ಎರಡಲ್ಲೂ ಸಹ ಸೆಲ್‌ಗಳು ಇರುತ್ತವೆ.

ಶ್ರೀ ಟಿ.ಬಿ. ಜಯಚಂದ್ರ : ಸಸ್ಯಹಾರಿಗಳು ನಾವು ನಿರ್ಜೀವವನ್ನು ತಿನ್ನುತ್ತೇವೆ ಎಂದು ತಿಳಿದುಕೊಂಡರೆ ಅದು ತಪ್ಪು.

Sri Qamarul Islam : Even milk is a Non-Vegetarian.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಯಾವುದೇ ರಾಜ್ಯದಲ್ಲಿಯೂ ಕೂಡ ಈ ರೀತಿಯ draconian law ಇಲ್ಲ. No where in the country. ನಾನು ಬೇಕಾದರೆ ಎಲ್ಲಾ ರಾಜ್ಯಗಳ information ಅನ್ನು ತರಿಸಿದ್ದೇನೆ. ಎಲ್ಲಾ ರಾಜ್ಯಗಳದ್ದೂ ಸಹ ಇದೆ. ಆಂಧ್ರ, ಅಸ್ಸಾಂ, ಬಿಹಾರ, ಜಮ್ಮು ಮತ್ತು ಕಾಶ್ಮೀರ, ಡಯ್ಯುಡಾಮನ್, ಗೋವಾ, ದೆಹಲಿ, Goa Animal Preservation Act 1995 ಇದೆ. Bombay Animal Preservation Act ಇದೆ. Gujarath, Hariyana, Himachal Pradesh, Jammu and Kashmir, Karnataka ಎಲ್ಲಾ ರಾಜ್ಯಗಳ information ಇದೆ. ಎಲ್ಲಿಯೂ ಕೂಡ except Delhi ಎಲ್ಲಿಯೂ ಕೂಡ ಆರು ತಿಂಗಳುಗಳಿಗಿಂತ ಜಾಸ್ತಿ ಶಿಕ್ಷೆ ಕೊಡತಕ್ಕಂತಹದ್ದು ಎಲ್ಲಿಯೂ ಇಲ್ಲ. ಇವರು 7 ವರ್ಷ ಶಿಕ್ಷೆ ಕೊಡುವಂತೆ ಬಿಲ್ ತೆಗೆದುಕೊಂಡು ಬಂದು, ಎಲ್ಲರನ್ನೂ ಜೈಲಿಗೆ ಕಳುಹಿಸ ಬೇಕು ಎಂದು ಮಾಡಿದ್ದಾರೋ ಏನೋ ಗೊತ್ತಿಲ್ಲ. Beef ತಿಂದ ತಕ್ಷಣ 7 ವರ್ಷ ಜೈಲಿಗೆ ಹೋಗಿ ಎಂದರೆ ಏನರ್ಥ? ಅವರೇನೂ murder ಮಾಡಿದ್ದಾರಾ, rape ಮಾಡಿದ್ದಾರಾ, ಯಾರಾದರೂ ಒಬ್ಬರು ಅವರಿಗೆ ಶತ್ರುಗಳಾದಂತಹವರ ಮನೆಗೆ ಎರಡು ಕೆ.ಜಿ. Beef ಅನ್ನು ತೆಗೆದುಕೊಂಡು ಹೋಗಿ ಇಟ್ಟರೆ ಏನು ಮಾಡಬೇಕು? ಅವರು ಜೈಲಿಗೆ ಹೋಗಬೇಕು.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ಹಿಂದೆ ಹಳ್ಳಿಗಳಲ್ಲಿ ತಾನಾಗಿಯೇ ಸತ್ತ ದನ, ಹಸು ಇದ್ದರೆ ಅವರು ಹೋಗಿ Veterinary Doctor ಅವರಿಂದ ಸರ್ಟಿಫಿಕೇಟ್ ತರಬೇಕಾಗಿತ್ತು.

ಶ್ರೀ ಸಿದ್ದರಾಮಯ್ಯ : ಹಸುಗಳು ವಯಸ್ಸಾದ ಮೇಲೆ ವ್ಯವಸಾಯಕ್ಕೆ ಉಪಯೋಗಕ್ಕೆ ಬರುವುದಿಲ್ಲ. ಅವು ಹಾಲನ್ನೂ ಕೊಡುವುದಿಲ್ಲ, ಕರುಗಳನ್ನೂ ಹಾಕುವುದಿಲ್ಲ, ಎಮ್ಮೆ, ಕೋಣ, ಎತ್ತು, ಇವುಗಳನ್ನು ಕಟ್ಟಿಕೊಂಡು ರೈತರು ಏನು ಮಾಡಬೇಕು? ಅವುಗಳಿಗೆ ಹುಲ್ಲನ್ನು ಎಲ್ಲಿಂದ ತೆಗೆದುಕೊಂಡು ಬರುತ್ತಾರೆ? ಈಗಲೇ ಒಂದು ಅಂದಾಜಿನ ಪ್ರಕಾರ 40% ಜಾನುವಾರುಗಳಿಗೆ ಆಹಾರ ಇಲ್ಲ, ಮೇವಿಲ್ಲ ಎಂದು ಹೇಳುತ್ತಿದ್ದಾರೆ. ಒಂದು ಸಲ ಬರ ಬಂದರೆ ಏನು ಮಾಡಬೇಕು? ಈ ರೀತಿ ಇವ್ಯಾವುದನ್ನೂ ಇವರು ಯೋಚನೆ ಮಾಡದೇ ಒಂದು ತರಹ ಕುದುರೆಗಳಿಗೆ ನಾವು ಕಟ್ಟುತ್ತೇವೆಲ್ಲಾ, ಮೈಸೂರಿನಲ್ಲಿ ಟಾಂಗಾ ಗಾಡಿಗಳನ್ನು ನೀವು ನೋಡಿದ್ದೀರಾ ಕುದುರೆಗಳ ಕಣ್ಣಿಗೆ ಒಂದು ತರಹ ಪಟ್ಟಿ ಕಟ್ಟುತ್ತಾರಲ್ಲಾ ಹಾಗೆ ಕಣ್ಣಿಗೆ ಕಟ್ಟಿಕೊಂಡು ನೀವು ಅಧಿಕಾರಕ್ಕೆ ಬಂದು ಎಲ್ಲರಿಗೂ ತೊಂದರೆ ಕೊಡುವ ಕೆಲಸ ಮಾಡುತ್ತಿದ್ದೀರಲ್ಲಾ ಇದು ನ್ಯಾಯವೇ? ಇದರಿಂದ ನೀವು ಕಾನೂನಿನಲ್ಲಿ ತರತಕ್ಕಂಥದ್ದು totally unconstitutional, inhuman and draconian in nature. ಅದಕ್ಕೋಸ್ಕರ ನಾವೆಲ್ಲಾ ಇಷ್ಟೊಂದು ತೀವ್ರವಾಗಿ ವಿರೋಧ ಮಾಡುತ್ತಿದ್ದೇವೆ. ಬೇರೆ ವಿಚಾರಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಬಹಳಷ್ಟು ವಿಚಾರಗಳು ಇದ್ದರೂ ಕೂಡ, ಬೇರೆ ಬೇರೆ ಒಳ್ಳೆಯ ಕೆಲಸಗಳಿವೆ ಬೇಕಾದರೆ ಮಾಡಲಿ. ಇವತ್ತು ಜಾನುವಾರುಗಳನ್ನು ರಕ್ಷಣೆ ಮಾಡಬೇಕಾದರೆ ನಮ್ಮ ಅಮೃತ ಮಹಲ್ ತಳಿಗಳಿವೆ ಅವುಗಳನ್ನು ಅಭಿವೃದ್ಧಿ ಮಾಡಲಿ. ಹಳ್ಳಿಕಾರ್ ತಳಿಗಳಿವೆ ಅವುಗಳನ್ನು ಅಭಿವೃದ್ಧಿ ಮಾಡಿ, ಆ ಕಡೆ ಕೃಷ್ಣ ತಳಿ ಇದೆ ಅಭಿವೃದ್ಧಿ ಮಾಡಿ, ಬೀದರ್‌ನಲ್ಲಿ ಕಿಲಾರಿ ತಳಿ ಇದೆ ಅಭಿವೃದ್ಧಿ ಮಾಡಿ, ಬೀದರ್‌ನಲ್ಲಿ ದೇವಣಿ ಎಂಬ ಬೇರೆ ಹೊಸ ತಳಿ ಇದೆ ಅದನ್ನು ಅಭಿವೃದ್ಧಿ ಮಾಡಿ, ಅದನ್ನು ಬಿಟ್ಟು ಯಾವುದನ್ನೂ ಅಭಿವೃದ್ಧಿ ಮಾಡದೇ ಇರುವುದನ್ನೇ ಮಾಡಿದರೆ ಹೇಗೆ? ಬನ್ನೂರು ತಳಿಯ ಕುರಿಗಳಿವೆ, ಅದು ಏಷ್ಯಾ ಖಂಡದಲ್ಲೇ ತಿನ್ನುವುದಕ್ಕೆ ಬಹಳ ಶ್ರೇಷ್ಠವಾದದ್ದು ಎಂದು ಇದೆ. ಮಾನ್ಯ ನರೇಂದ್ರಸ್ವಾಮಿಯವರ constituency ಯಲ್ಲಿದೆ, ಅವುಗಳನ್ನು ಅಭಿವೃದ್ಧಿ ಮಾಡಿ. ಅದನ್ನು ಬಿಟ್ಟು ಬಹುಸಂಖ್ಯಾತ ಜನ ತಿನ್ನುವುದನ್ನು ಬಲಾತ್ಕಾರವಾಗಿ ಕಿತ್ತುಕೊಳ್ಳುವುದಕ್ಕೆ

ನೀವು ಹೊರಟಿದ್ದೀರಲ್ಲಾ, ಇದರಿಂದ ಸಮಾಜದಲ್ಲಿ ಅಶಾಂತಿ ನಿರ್ಮಾಣ ವಾಗುತ್ತದೆ. ಸಮಾಜದಲ್ಲಿ harmony ಹಾಳಾಗುತ್ತದೆ. ಈಗಲೇ ನೀವು ಬಂದ ಮೇಲೆ ಸಮಾಜದಲ್ಲಿ ಎಲ್ಲಾ ಕಡೆ ಅಲ್ಪಸಂಖ್ಯಾತ ಜನ ಆತಂಕದಿಂದ ಬದುಕಬೇಕಾದಂಥ ಪರಿಸ್ಥಿತಿ ಇದೆ. ಬಡವರು ಆತಂಕದಿಂದ ಬದುಕಬೇ ಕಾದಂಥ ಪರಿಸ್ಥಿತಿ ಇದೆ. ಈ ತರಹವೆಲ್ಲಾ ಮಾಡುವುದರಿಂದ ಸಮಾಜದಲ್ಲಿ ಇನ್ನೂ ಕೂಡ ಅಶಾಂತಿ, ಒಡಕು ಇವೆಲ್ಲಾ ಆಗುವುದಕ್ಕೆ ಕಾರಣವಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಮಾನ್ಯ ಅಧ್ಯಕ್ಷರೆ ನಾನು ಹೇಳುವುದೇನೆಂದರೆ, ಸರ್ಕಾರಕ್ಕೆ ಇದಕ್ಕಿಂತ ಆದ್ಯತಾ ಕಾರ್ಯಕ್ರಮಗಳು ಬೇಕಾದಷ್ಟು ಇವೆ. ಮಾನ್ಯ ಶ್ರೀನಿವಾಸ್ ಪ್ರಸಾದ್ ಅವರು ಹೇಳಿದರು ಅದನ್ನು ಮಾಡಿ. ಅದನ್ನು ಬಿಟ್ಟು ಇವೆಲ್ಲಾ ಏಕೆ ತೆಗೆದುಕೊಂಡು ಬರುತ್ತೀರಿ? ಬಹುಸಂಖ್ಯಾತ ಜನರ ಭಾವನೆಗಳಿಗೆ ನೋವು ಉಂಟು ಮಾಡತಕ್ಕಂಥದ್ದು, ಅವರ ಜೀವನಾಧಾರಕ್ಕೆ ತೊಂದರೆ ಕೊಡತಕ್ಕಂಥದ್ದು, ಅವರನ್ನು ನಿರುದ್ಯೋಗಿಗಳನ್ನಾಗಿ ಮಾಡತ ಕ್ಕಂಥದ್ದು, ಅವರಿಗೆ re-habilitation ಏನಾದರೂ ಪರ್ಯಾಯವಾಗಿ ಇಲ್ಲಿ ತಂದಿದ್ದೀರಾ? ಬೆಲ್ಟ್ ತಯಾರು ಮಾಡುವವರಿಗೆ, ಚರ್ಮ ಹದ ಮಾಡುವವರಿಗೆ, ಚಪ್ಪಲಿ ಹೊಲಿಯುವವರಿಗೆ, ಏನು ಮಾಡುತ್ತೀರಿ? ಇಂಡಸ್ಟ್ರೀಸ್ ಎಲ್ಲಾ ನಾಶವಾಗುತ್ತವೆ. ಎಷ್ಟು ಜನ ಅದರ ಮೇಲೆ ಅವಲಂಬನೆ ಯಾಗಿದ್ದಾರೆ? Not only Muslims and Christians, there are so many Hindus, who are depending upon these trades. ಅವರಿಗೆಲ್ಲಾ ಅವರ ಕೆಲಸವನ್ನು ಕಿತ್ತುಕೊಳ್ಳತಕ್ಕಂಥದ್ದು, ಅವರನ್ನು ನಿರುದ್ಯೋಗಿಗಳನ್ನಾಗಿ ಮಾಡತಕ್ಕಂಥದ್ದು, ಅವರ ಅನ್ನ ಕಿತ್ತುಕೊಳ್ಳತಕ್ಕಂಥದ್ದು, ಈ ತರಹದ್ದು ಸಮಾಜಕ್ಕೆ ಒಳ್ಳೆಯದು ಆಗುವುದಕ್ಕಿಂಥ ಕೆಟ್ಟದ್ದು ಜಾಸ್ತಿಯಾಗುತ್ತದೆ. ಆ ಕಾರಣದಿಂದ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ದಯಮಾಡಿ ಈ ಕಾಯ್ದೆಯನ್ನು ನೀವು ಪ್ರತಿಷ್ಠೆ ಮಾಡಿಕೊಂಡು, ಏನೋ ಇದರಿಂದ ರಾಜಕೀಯವಾಗಿ ನಮಗೆ ಲಾಭವಾಗುತ್ತದೆ ಎಂದು ತಿಳಿದು ಕೊಂಡಿದ್ದರೆ ಅದು boomerang ಆಗುತ್ತದೆ. ಆ ಜನಗಳನ್ನು ನೀವು ಅಯ್ಯೋ ಎಂದು ಅನಿಸುವುದಕ್ಕೆ ಹೋಗಬೇಡಿ. ರಾಜಕೀಯವಾಗಿ ಯಾರಿಗೂ ಲಾಭವಾಗುವುದಿಲ್ಲ. ಆದರೆ ಬಹುಸಂಖ್ಯಾತ ಜನರಿಗೆ ನೋವಾಗುತ್ತದೆ. ರಾಜಕೀಯವಾಗಿ ನಿಮಗೂ ಏನೂ ಲಾಭವಾಗುವುದಿಲ್ಲ. ನೀವೇನೋ ಮಾಡಿದ್ದೇವೆ ಎಂದು ನೀವು ಬೆನ್ನು ತಟ್ಟಿಕೊಳ್ಳಬೇಕು ಅಷ್ಟೇ ಹೊರತು ಇದು

ಬಹುಸಂಖ್ಯಾತ ವರ್ಗದ ಜನರಿಗೆ ಅನ್ಯಾಯವಾಗುತ್ತದೆ. ಆ ಕಾರಣದಿಂದ ಈ ಬಿಲ್ ಅನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ ಮತ್ತೆ 64 ರ ಕಾಯ್ದೆ ಇದೆಯಲ್ಲಾ, that itself is enough ಅದನ್ನು strict ಆಗಿ implement ಮಾಡಿ ಅಷ್ಟೆ.

ಶ್ರೀ ರೇವೂ ನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ.. .

ಶ್ರೀ ಸಿದ್ದರಾಮಯ್ಯ : ನಾನು ಇನ್ನೂ ಮಾತನಾಡುವುದನ್ನು ಮುಗಿಸಿಲ್ಲ. ಕುಳಿತುಕೊಳ್ಳಿ, ನೀವು ಗೋವು ಗೋವು ಎಂದು ಏಕೆ ಎದ್ದೇಳುತ್ತೀರಿ? ರಾತ್ರಿ ಕನಸಿನಲ್ಲೂ ನಿಮಗೆ ಗೋವು ಕಾಣಿಸುತ್ತದೆ ಅನಿಸುತ್ತದೆ. ರೇವು ನಾಯಕ್ ಅವರೆ, ಪಾಪ ನಿಮ್ಮ ಕೈಯಲ್ಲಿ ಈ ತರಹ ಕೆಲಸವನ್ನು ಮಾಡಿಸುತ್ತಿದ್ದಾರಲ್ಲಾ, ಏಕೆ ಅವರು ಹೀಗೆ ಮಾಡುತ್ತಾರೆ? ಸಂಸ್ಕೃತ ವಿಶ್ವವಿದ್ಯಾನಿಲಯದ್ದು ನಮ್ಮ ಅರವಿಂದ ಲಿಂಬಾವಳಿಯವರ ಕೈಯಲ್ಲಿ ಮಾಡಿಸುತ್ತಾರೆ. ಬೇರೆಯವರ ಕೈಯಲ್ಲಿ ಮಾಡಿಸಿ, ಮಾನ್ಯ ಆಚಾರ್ಯರವರ ಕೈಯಲ್ಲಿ ಮಾಡಿಸಿ, ಸುರೇಶ್ ಕುಮಾರ್ ಅವರ ಕೈಯಲ್ಲಿ ಮಾಡಿಸಿ, ಯಾರು ವಿರೋಧ ಮಾಡಬೇಕೋ ಅವರ ಕೈಯಲ್ಲೇ ಮಾಡಿಸುತ್ತಾರಲ್ಲಾ, ನಿಮ್ಮ ಕೈಯಲ್ಲಿ ಕೊಡಲಿ ಕೊಟ್ಟು ಈ ತರಹ ಕತ್ತರಿಸುವುದಕ್ಕೆ ಹೊರಟಿದ್ದಾರೆ. ಆತ್ಮವನ್ನು ಮುಟ್ಟಿಕೊಡು ಹೇಳಿ. ರೇವುನಾಯಕ್ ಅವರು ಊರಿಗೆ ಹೋದರೆ ಸಾಮಾನ್ಯ ಜನರು ಅವರನ್ನು ಬಿಡುತ್ತಾರೆಯೇ?

ಶ್ರೀ ಖಮುರುಲ್ಲಾ ಇಸ್ಲಾಂ : ಮುಸ್ಲಿಮ್ಸ್ ವೋಟ್ ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ಕೇವಲ ಮುಸ್ಲಿಮ್ಸ್ ಅಷ್ಟೆ ಅಲ್ಲ, ಬಡವರು, ಹಿಂದುಳಿದವರು ಎಲ್ಲರೂ ವೋಟ್ ಕೊಟ್ಟಿದ್ದಾರೆ. ಅವರೆಲ್ಲಾ ಸುಮ್ಮನಾಗುತ್ತಾರೆಯೇ?

ಶ್ರೀ ಖಮುರುಲ್ಲಾ ಇಸ್ಲಾಂ: ಪಾಪ ಒಳ್ಳೆಯ ಮನುಷ್ಯ, ಏಕೆ ನೀವು ಇದನ್ನು ಮಂಡಿಸಿದ್ದೀರೋ ಗೊತ್ತಿಲ್ಲ.

ಶ್ರೀ ರೇವೂ ನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ. . .

ಶ್ರೀ ಸಿದ್ದರಾಮಯ್ಯ : ಮಾನ್ಯ ರೇವೂ ನಾಯಕ್ ಅವರೆ, ನಿಮ್ಮ ಬಗ್ಗೆ ನನಗೆ ಬಹಳ ಅಭಿಮಾನವಿದೆ. ಆಮೇಲೆ ನೀವು ಉತ್ತರ ಹೇಳುವಾಗ ಹೇಳಿ. ನಿಮ್ಮ ಕೈಯಲ್ಲಿ ನಿಮಗೆ ಕೊಡಲಿ ಕೊಟ್ಟು ಹೇಗೆ ಕತ್ತರಿಸುತ್ತಿದ್ದಾರೆ ನೋಡಿ. ಮಾನ್ಯ ಅರವಿಂದ ಲಿಂಬಾವಳಿ ಮತ್ತು ನಿಮ್ಮ ಕೈಯಲ್ಲಿ ಕೊಟ್ಟಿದ್ದಾರೆ. ಸನ್ಮಾನ್ಯ

ಯಡಿಯೂರಪ್ಪನವರು ಎಲ್ಲಿಂದ ಹಿಡಿದುಕೊಂಡು ಬಂದಿದ್ದಾರೆ ನೋಡಿ, ನಿಮ್ಮನ್ನೇ ಹುಡುಕಿದ್ದಾರಲ್ಲ.

ಶ್ರೀ ಆರ್. ಅಶೋಕ್ : ಅವರು Concerned Ministers.

ಶ್ರೀ ಸಿದ್ದರಾಮಯ್ಯ : Concerned Ministers ಅಂದರೆ, ಬೇರೆಯವರ ಕೈಯಲ್ಲಿ ಮಾಡಿಸಬಹುದಿತ್ತು. ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡುವುದೇನೆಂದರೆ, ದಯವಿಟ್ಟು ಈ ಕಾನೂನನ್ನು withdraw ಮಾಡಿ. ಇದನ್ನು pursue ಮಾಡುವುದಕ್ಕೆ ಹೋಗಬೇಡಿ. ನೀವು ಕೋರ್ಟ್‌ಗೆ ಹೋದರೂ ಇದು ನಿಲ್ಲುವುದಿಲ್ಲ, I am very certain about it. President ಅವರ sanction ಅನ್ನೂ ನೀವು ತೆಗೆದುಕೊಂಡಿಲ್ಲ. ಈ ಎಲ್ಲಾ ಕಾರಣಗಳಿಂದ ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದು. ಅದು ಎಲ್ಲಕ್ಕಿಂತ ಹೆಚ್ಚಾಗಿ ಬಹು ಜನರ ಅಂದರೆ, ಚಮ್ಮಾರರು, sweepers, ಎಲ್ಲಾ ಜನರ ಜೀವನಾಧಾರವನ್ನು ಕಿತ್ತುಕೊಳ್ಳತಕ್ಕಂಥ ಕೆಲಸವನ್ನು ಮಾಡುತ್ತಿದ್ದೀರಿ. ಕೇವಲ ಮುಸ್ಲಿಂರನ್ನೇ ಗುರಿಯಾಗಿಟ್ಟುಕೊಂಡು ಮಾಡುವುದಕ್ಕೆ ಹೋದರೆ ಅದರಿಂದ ನಿಮಗೆ ಕೆಟ್ಟದ್ದು ಆಗುತ್ತದೆಯೇ ಹೊರತು ಒಳ್ಳೆಯದಾಗುವುದಿಲ್ಲ. ಇಷ್ಟು ಹೇಳಿ ನೀವು ವಾಪಸ್ಸು ತೆಗೆದುಕೊಳ್ಳುತ್ತೀರೆಂದು ನಾನು ವಿಶ್ವಾಸ ಇಟ್ಟುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಸನ್ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಒಂದು ಶಾಸನ ಸಭೆಯಲ್ಲಿ ನಾಡಿನ ಜನತೆಗೆ ಸಂಬಂಧಪಟ್ಟಂಥ ಒಂದು ಶಾಸನವನ್ನು ಮಾಡುವಂಥ ಸಂದರ್ಭದಲ್ಲಿ ಇಷ್ಟು ಗಂಭೀರವಾಗಿ, ಸುಧೀರ್ಘವಾಗಿ ಅದರಿಂದ ಆಗಬಹುದಾದಂಥ ಸಾಧಕ-ಬಾಧಕಗಳ ಬಗ್ಗೆ ಬಹಳ ಒಳ್ಳೆಯ ರೀತಿಯಲ್ಲಿ ಚರ್ಚೆಯಾಗಿದೆ. ತಮ್ಮ ದೃಷ್ಟಿಕೋನದಲ್ಲಿ ತಮಗೆ ಏನೇನು ಅನಿಸುತ್ತದೆ ಆ ಭಾವನೆಗಳನ್ನು ಪರಿಣಾಮಕಾರಿಯಾಗಿ ಮಂಡನೆ ಮಾಡಿದ್ದೀರಿ. ಆದರೆ, ಒಂದು ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ನಮ್ಮ ಉದ್ದೇಶ ಬಹುಸಂಖ್ಯಾತರಿಗಾಗಲಿ, ಅಲ್ಪಸಂಖ್ಯಾತರಿಗಾಗಲಿ, ಯಾವುದೇ ಒಂದು ಸಮೂಹಕ್ಕೆ ಅನ್ಯಾಯ ಮಾಡಬೇಕು, ನೋವು ಮಾಡಬೇಕು ಎನ್ನುವ ದೃಷ್ಟಿಕೋನವನ್ನು ಇಟ್ಟುಕೊಂಡು ಮಾಡಿದ್ದು ಅಲ್ಲ. ನಮ್ಮ ಕಣ್ಮುಂದೆ ಈ ದೇಶದ ನಮ್ಮ ನಾಡಿನ ರೈತ ಇದ್ದಾನೆ. ಗೋ ಸಂಪತ್ತನ್ನು ಉಳಿಸಿಕೊಳ್ಳಬೇಕು, ಬೆಳೆಸಬೇಕು ಅದು ರೈತನ ನಾಡಿನ ಜನರ ಜೀವನಾಡಿ. ಎಲ್ಲೋ ಒಂದು ಕಡೆ ಆ ಸಂಪತ್ತೇ ನಾಶವಾಗುತ್ತಿದೆ. ಇದಕ್ಕೆ

ಕಡಿವಾಣ ಹಾಕಬೇಕು. ಇಲ್ಲದಿದ್ದರೆ ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ ಎನ್ನುವ ಉದ್ದೇಶವನ್ನು ಇಟ್ಟುಕೊಂಡು ಇದನ್ನು ತರುವಂಥ ಪ್ರಯತ್ನ ಮಾಡಿದ್ದೇವೆ. ಮಹಾತ್ಮ ಗಾಂಧೀಜಿಯವರು ಈ ಗೋ ಹತ್ಯೆ ಬಗ್ಗೆ, ಗೋ ಸಂಪತ್ತನ್ನು ಉಳಿಸಿಕೊಳ್ಳುವುದರ ಬಗ್ಗೆ ಏನು ಹೇಳಿದರು?

(8-30 PM)

ಈ ದೇಶಕ್ಕೆ ಸಂವಿಧಾನ ಕೊಟ್ಟ ಡಾ: ಬಾಬಾಸಾಹೇಬ್ ಅಂಬೇಡ್ಕರ್ ರವರು ಮತ್ತು ವಿನೋಬಾ ಭಾವೆಯವರು ಏನು ಹೇಳಿದರು ಎಂದರೆ... ಇದು ಕೇವಲ ಭಾರತೀಯ ಜನತಾ ಪಾರ್ಟಿ, ತಮಗೆ ಅಧಿಕಾರ ಸಿಕ್ಕಾಗ ಯಾವುದೋ ಒಂದು ಶಾಸನ ತಂದು, ಯಾರನ್ನೋ ಎತ್ತಿ ಕಟ್ಟುವುದಕ್ಕೋ, ಯಾರ ಮೇಲೋ ಪ್ರಹರಿಸುವುದಕ್ಕೆ ಹೊರಟಿದೆ ಎಂಬ ಭಾವನೆ ಬರುವ ರೀತಿಯಲ್ಲಿ, ಬೇರೆಯವರನ್ನು ಕೆರಳಿಸುವ ರೀತಿಯಲ್ಲಿ ಮಾತನಾಡುವುದು ಎಷ್ಟರಮಟ್ಟಿಗೆ ಸರಿ, ತಪ್ಪು ಎನ್ನುವುದನ್ನು ನಾನು ತಮಗೇ ಬಿಡುತ್ತೇನೆ. ಆದರೆ, ಒಂದು ಮಾತನ್ನು ಹೇಳಬಯಸುತ್ತೇನೆ. 1982ರಲ್ಲಿ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಎಲ್ಲಾ ರಾಜ್ಯಗಳಿಗೂ ಒಂದು ಪತ್ರ ಬರೆದು, ಗೋ ಹತ್ಯೆ ನಿಷೇಧಿಸುವಂತೆ ಸೂಚಿಸಿದ್ದರು. ಈಗ ಹಾಲಿ ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನ, ಛತ್ತಿಸ್ ಗಢ, ಜಮ್ಮು ಮತ್ತು ಕಾಶ್ಮೀರವೂ ಸೇರಿದಂತೆ ಇನ್ನಿತರ ರಾಜ್ಯಗಳಲ್ಲಿ ಸಂಪೂರ್ಣ ಗೋ ಹತ್ಯೆ ನಿಷೇಧದ ಕಾನೂನು ಜಾರಿಯಲ್ಲಿದೆ. ಬಾರತದ ಸಂಸತ್ತಿನಲ್ಲೂ ಸಹ ಗೋ ಹತ್ಯೆಯನ್ನು ವಿರೋಧಿಸಿ ಖಾಸಗಿ ಮಸೂದೆಯನ್ನು ಹಲವು ಸಲ ಮಂಡಿಸಲಾಗಿತ್ತು. 1979, 1985, 1990, 1994, 1996, 1999 ಮತ್ತು 2000 ರಲ್ಲಿ ಗೋ ಹತ್ಯೆ ವಿರೋಧಿಸಿ ಖಾಸಗಿ ಮಸೂದೆಗಳನ್ನು ಮಂಡಿಸಲಾಗಿತ್ತು. ಸಂವಿಧಾನದ 48ನೇ ವಿಧಿಯಡಿಯಲ್ಲಿ ಗೋವಧೆ ನಿಷೇಧಿಸುವುದನ್ನು ಬಹಳ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ಕೇವಲ ನಮ್ಮ ದೇಶ ಮಾತ್ರವಲ್ಲ ಕ್ಯೂಬಾ ದೇಶವು ಸಂಪೂರ್ಣ ಗೋ ಹತ್ಯೆ ನಿಷೇಧದ ಕಾನೂನನ್ನು ಜಾರಿಗೆ ತಂದಿದೆ. ಅದೇ ರೀತಿ ಇರಾನ್ ದೇಶದಲ್ಲೂ ಸಹ ಗೋಹತ್ಯೆ ನಿಷೇಧ ಕಾನೂನು ಸಂಪೂರ್ಣ ಜಾರಿಯಲ್ಲಿದೆ. ಗೋಮೂತ್ರ, ಅದರ ಔಷಧದ ಲಾಭಗಳು, ಗೋಮೂತ್ರದಲ್ಲಿ ವಿಶೇಷವಾದ ಔಷಧೀಯ ಗುಣಗಳಿವೆಯೆಂದು ಸಂಶೋಧನೆಯಿಂದ ಸಾಬೀತಾಗಿದೆ. ಗೋಮೂತ್ರದಲ್ಲಿರುವ ವಿಶೇಷ ಔಷಧೀಯ ಗುಣಗಳು ಮಾನವ ಶರೀರವು ಪ್ರೊಟೀನ್ ಬಳಸಿ ಕೊನೆಯಲ್ಲಿ ಉಳಿಯುವ ಶೇಷವೇ ಯೂರಿಯಾ.

ಇದೊಂದು ಪ್ರಬಲವಾದ ಬ್ಯಾಕ್ಟೀರಿಯಾ ನಿರೋಧಕ ವಸ್ತುವಾಗಿದೆ ಎನ್ನುತ್ತಾರೆ. ಯೂರಿಕ್ ಆಸಿಡ್‌ನಲ್ಲಿ ಬ್ಯಾಕ್ಟೀರಿಯಾ ನಿರೋಧಕ ಗುಣವಿರುತ್ತದೆ ಮತ್ತು ಇದು ಕ್ಯಾನ್ಸರ್‌ನಂತಹ ಬ್ಯಾಕ್ಟೀರಿಯಾವನ್ನು ನಿಯಂತ್ರಿಸುವುದಕ್ಕೆ ಸಹಕರಿಸುತ್ತದೆಂತಲೂ ಹೇಳುತ್ತಾರೆ. ಅಲ್ಲದೆ, ಹೆಚ್ಚಿನ ಪ್ರಮಾಣ ಹಾಗೂ ಅಧಿಕ ರೀತಿಯ ಮತ್ತು ವೈವಿಧ್ಯಮಯ ಖನಿಜಾಂಶಗಳನ್ನು ಹೊಂದಿದೆ ಯೆಂತಲೂ ಹೇಳುತ್ತಾರೆ. ಜೊತೆಗೆ, ಹೆಪ್ಪುಗಟ್ಟಿದ ರಕ್ತವನ್ನು ಕರಗಿಸುವುದಕ್ಕೆ ಸಹಕಾರಿ, ಹೃದ್ರೋಗದ ಚಿಕಿತ್ಸೆಯಲ್ಲಿ ಪರಿಣಾಮಕಾರಿಯಾಗಿ ರಕ್ತ ಸಂಚಾರ ವನ್ನು ಉತ್ತಮಗೊಳಿಸುತ್ತದೆಂದು ಹೇಳುತ್ತಾರೆ. ಇಂದು ನಾವು ಅನೇಕ ರೀತಿಯ ಗೋಮೂತ್ರದ ವಿಶೇಷತೆಯನ್ನು ಪ್ರತ್ಯಕ್ಷವಾಗಿ ಕಾಣುತ್ತಿದ್ದೇವೆ. ಗೋವು ಅಥವಾ ಎಮ್ಮೆ ಅಥವಾ ಹೋರಿ, ಯಾವುದೇ ಇರಬಹುದು, ಇದು ರೈತನಿಗೆ ಬಹಳಷ್ಟು ಉಪಕಾರಿಯಾಗಿದೆ. ಭೂಮಿಯ ಫಲವತ್ತತೆಗೆ ಇದರಿಂದ ಬಹಳಷ್ಟು ಉಪಯೋಗವಾಗುತ್ತದೆ. ಬದುಕಿನ ಕೊನೆಯ ನಿಮಿಷದವರೆಗೂ ಎಷ್ಟು ಲಾಭದಾಯಕವಾಗಿದೆ ಎಂಬುದನ್ನು ಬಹುಶಃ ನಾನು ಇಲ್ಲಿ ನಿಂತು ರೈತರ ಮಕ್ಕಳಿಗೆ, ಅವರ ಪ್ರತಿನಿಧಿಗಳಿಗೆ ಹೇಳುವ ಅಗತ್ಯವಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಾಗಾಗಿ, ಈ ಗೋಹತ್ಯೆ ನಿಷೇಧದ ಬಗ್ಗೆ ಸಂವಿಧಾನ ಕೊಟ್ಟ ಡಾ: ಬಾಬಾಸಾಹೇಬ್ ಅಂಬೇಡ್ಕರ್ ಅವರಿಗಾಗಲಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಗಳಿಸಿ ಕೊಟ್ಟ ಮಹಾತ್ಮಾಗಾಂಧೀಜಿಯವರಿಗಾಗಲಿ, ಯಾವುದೇ ಚಿಂತನೆ ಇಲ್ಲದೆ ಈ ಬಗ್ಗೆ ಪ್ರಸ್ತಾಪಿಸಿದರು ಎಂದು ಹೇಳುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಹೇಳಬಯಸುತ್ತೇನೆ.

ಇತ್ತೀಚೆಗೆ ಸುಪ್ರೀಂ ಕೋರ್ಟ್‌ನಲ್ಲಿ ಈ ಕುರಿತು ಚರ್ಚೆಯಾದಾಗ ಬಹಳ ಸ್ಪಷ್ಟವಾಗಿ ಭಾರತದ ಸಂವಿಧಾನದ 48ನೇ ವಿಧಿಯಲ್ಲಿ ಗೋ ಹತ್ಯೆ ನಿಷೇಧಿಸುವ ತೀರ್ಮಾನವನ್ನು ಎತ್ತಿ ಹಿಡಿದಿರುವುದು ಇತ್ತೀಚಿನ ದಿವಸಗಳ ದಾಖಲೆಗಳಲ್ಲಿ ಕಂಡು ಬರುತ್ತದೆ. ಲಾಭ ಏನು, ಲುಕ್ಸಾನು ಏನು, ಸಾಧಕವೇನು, ಬಾಧಕವೇನು? ಇತ್ಯಾದಿ ಅನೇಕ ವಿಷಯ ಗಳನ್ನು ತಾವು ಹೇಳಿದ್ದೀರಿ. ಇವತ್ತು ಸಸ್ಯಾಹಾರಿಗಳಲ್ಲದವರಿಗೆ ಬೇರೆ ಪ್ರಾಣಿಗಳೇ ಇಲ್ಲವೇನು?

ಶ್ರೀ ಟಿ.ಬಿ. ಜಯಚಂದ್ರ : ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಯಾವಾಗ ಆಗಿದೆ? ಅದರ ಬಗ್ಗೆ ನಾವೂ ಸ್ವಲ್ಪ ತಿಳಿದುಕೊಂಡರೆ ಒಳ್ಳೆಯದು. ಅದನ್ನು ನಮ್ಮ ಗಮನಕ್ಕೂ ತನ್ನಿ. ಓದಿ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೇಳುತ್ತೇನೆ. ಇದರಲ್ಲಿ ನಾನು ಮುಚ್ಚಿಡುವ ಪ್ರಶ್ನೆಯೇ ಇಲ್ಲ. ಸುಪ್ರೀಂ ಕೋರ್ಟ್‌ನ full benchನಲ್ಲಿ, ಯಾವುದೇ ಆಹಾರ ಮೂಲಭೂತ ಹಕ್ಕು ಅಲ್ಲವೆಂದು ಗುಜರಾತ್ ವಿಷಯದಲ್ಲಿ ಹೋದಾಗ full bench ಕೊಟ್ಟಿರುವ ತೀರ್ಮಾನ ಇದಾಗಿದೆ. ಎರಡನೆಯದಾಗಿ, ಒಂದು ಸಲ ಈ ಕಾನೂನನ್ನು ಬಿಗಿಯಾಗಿ ತರಬೇಕೆಂದಿದ್ದರೆ, ಬಿಗಿಯಾಗಿ ಕೆಲವು ನಿಬಂಧನೆಗಳನ್ನು ಹಾಕದೇ ಇದ್ದರೆ ಮತ್ತು ಭಯ ಇಲ್ಲದೇ ಇದ್ದರೆ, ಆ ಕಾನೂನನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ಅದನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಎಲ್ಲಾ ರೀತಿಯ ಪ್ರಯತ್ನಗಳಾಗಬಹುದೆಂದು ಬಿಗಿ ನಿಲುವನ್ನು, ಬಿಗಿಯಾಗಿ ಕ್ರಮ ಕೈಗೊಳ್ಳುವಂತಹ ಪ್ರಯತ್ನ ಮಾಡಿದ್ದೇವೆಯೇ ಹೊರತು ಬೇರಾವುದೇ ದುರುದ್ದೇಶವಿಟ್ಟುಕೊಂಡು ಇದನ್ನು ಮಾಡಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಈಗಾಗಲೇ ದೇಶದ ಅನೇಕ ರಾಜ್ಯಗಳಲ್ಲಿ ಈ ಕಾನೂನು ಜಾರಿಗೆ ಬಂದಿರುವುದರಿಂದ ಮತ್ತು ಸಂವಿಧಾನದಲ್ಲಿ ಬಹಳ ಸ್ಪಷ್ಟವಾಗಿ ಇದಕ್ಕೆ ಬೆಂಬಲವಿರುವುದರಿಂದ ಹಾಗೂ Article 48ನೇ ವಿಧಿಯಲ್ಲಿ ಪೂರ್ಣ ಅವಕಾಶ ಇರುವುದರಿಂದ ಇದ್ಯಾವುದೋ ಹೊಸದನ್ನು ತಂದು ಇವತ್ತು ಪಾಸ್ ಮಾಡಿಕೊಂಡು ನಾವೇನೂ ಹೋಗುತ್ತಿಲ್ಲ ಅಥವ ಯಾವುದೋ ಹೊಸದನ್ನು ತಂದು ನಿಮ್ಮ ಮೇಲೆ ಹೇರುವ ಪ್ರಯತ್ನವನ್ನೇನೂ ಮಾಡುತ್ತಿಲ್ಲ. ಆದುದರಿಂದ, ನಾನು ಎಲ್ಲಾ ಗೌರವಾನ್ವಿತ ಮಾನ್ಯ ಸದಸ್ಯರುಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಇದನ್ನು ಸದುದ್ದೇಶವಿಟ್ಟುಕೊಂಡು, ರೈತನನ್ನು ಕಣ್ಮುಂದೆ ಇಟ್ಟುಕೊಂಡು ಗೋವಿನ ರಕ್ಷಣೆ, ಗೋ ಸಂಪತ್ತು ಉಳಿಸಿಕೊಳ್ಳುವ ಭಾವನೆ ಇಟ್ಟುಕೊಂಡು ಈ ಮಸೂದೆಯನ್ನು ತಂದಿದ್ದೇವೆಯೇ ಹೊರತು ಬೇರೆ ಅರ್ಥದಲ್ಲಿ ತಂದಿಲ್ಲ. ಅದಕ್ಕೋಸ್ಕರ, ಈ ಮಸೂದೆಗೆ ತಾವೆಲ್ಲರೂ ಅನುಮೋದನೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಯು.ಟಿ. ಖಾದರ್ : ಗೋ ಹತ್ಯೆಗೆ ನಮ್ಮ ಯಾರ ವಿರೋಧವೂ ಇಲ್ಲ. ಅದಕ್ಕೆ ನಮ್ಮ ಬೆಂಬಲವಿದೆ. ನಾವೆಲ್ಲರೂ ಗೌರವಿಸುತ್ತೇವೆ. ಆದರೆ, ಜಾನುವಾರು ಹತ್ಯೆ ನಿಷೇಧವನ್ನು ಏಕೆ ತಂದಿದ್ದೀರಿ ಎಂದು ಕೇಳುತ್ತಿದ್ದೇನೆ. ಜಾನುವಾರು ಹತ್ಯೆ ನಿಷೇಧ ತರುವ ಅಗತ್ಯವೇನಿದೆ? ಅದಕ್ಕೆ ತಾವು ಉತ್ತರ ಕೊಡಬೇಕು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, Clarification ಗೆ ಅವಕಾಶ ಕಲ್ಪಿಸಿಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಸುಪ್ರೀಂ ಕೋರ್ಟ್‌ನ ಯಾವುದೋ ಒಂದು ಜಡ್ಜ್‌ಮೆಂಟ್ ಬಗ್ಗೆ ಹೇಳಿದರು. Article 48 of the Constitution ನಲ್ಲಿ ಟೋಟಲ್ ಆಗಿ cattle ban ಮಾಡುವುದು ಎಲ್ಲಿದೆ? ಅದನ್ನು ಓದಿ ಹೇಳಿ.

Dr. V.S. Acharya : Gujarath latest Act 4 of 1994, if in the interest of the general public held for majority on the basis of available material such ban is in the interest of the general public and the change of factual circumstances since the decision of 1958 ಹಿಂದಿನ ಡಿಸಿಷನ್ ಬಗ್ಗೆ ನೀವು ಹಾಗೆ ಹೇಳಿದ್ದೀವಿ.

ಶ್ರೀ ಸಿದ್ದರಾಮಯ್ಯ : ಅದು 2006.

ಡಾ: ವಿ.ಎಸ್. ಆಚಾರ್ಯ : ಆದರೆ, ಅದನ್ನು revise ಮಾಡಿದ್ದಾರೆ. ಅದು ಇದೆ. ಅದರ ಮೇಲೆಯೇ recent ಆಗಿ ಜಡ್ಜ್‌ಮೆಂಟ್ ಬಂದಿದೆ.

ಶ್ರೀ ಸಿದ್ದರಾಮಯ್ಯ : ಅದರ ದಿನಾಂಕ ಹೇಳಿ.

ಡಾ: ವಿ.ಎಸ್. ಆಚಾರ್ಯ : ದಿನಾಂಕಗಳು ಬೇರೆ ಬೇರೆ ಇವೆ.

ಶ್ರೀ ಆರ್.ರೋಷನ್ ಬೇಗ್ : ತಾವು ಏನು quote ಮಾಡುತ್ತಿದ್ದೀರಿ, Division Bench, Full bench ಎಂದು ಹೇಳುತ್ತಿದ್ದೀರಿ. ಅದು ಯಾವಾಗ ಆಯಿತು?

ಡಾ: ವಿ.ಎಸ್. ಆಚಾರ್ಯ : ಗುಜರಾತ್ ಆ್ಯಕ್ಟ್ ಅನ್ನು uphold ಮಾಡಿದಂತಹ ಒಂದು ಜಡ್ಜ್‌ಮೆಂಟ್. 1994 Act ಅನ್ನು uphold ಮಾಡಿರುವುದು. ಅದರ ನಂತರ ಬಂದ ಒಂದು ಜಡ್ಜ್‌ಮೆಂಟ್‌ನಲ್ಲಿ ಯಾರದೋ religious ಪ್ರಶ್ನೆ ಬಂದಾಗ, ಯಾರದೋ religious right ಎಂದು ಬಂದಾಗ.. ..

ಶ್ರೀ ಸಿದ್ದರಾಮಯ್ಯ : ಅದು ಯಾವ ವರ್ಷ? Is it the fundamental right? It should be an act of the majority of the people.

ಶ್ರೀ ಆರ್. ರೋಷನ್ ಬೇಗ್ : ತಾವು 1984 ಅನ್ನು quote ಮಾಡುತ್ತಿದ್ದೀರಿ.

(ಗೊಂದಲ)

ಡಾ: ವಿ.ಎಸ್. ಆಚಾರ್ಯ : ಆಗ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನವರು uphold ಮಾಡಿರುವ ಸೆಕ್ಷನ್‌ಗಳನ್ನು ಮಾತ್ರ ನಾವು ಇಲ್ಲಿ ಅಳವಡಿಸಿದ್ದೇವೆ. ಹೊಸದನ್ನೇನೂ ಮಾಡಿಲ್ಲ.

(ಗೊಂದಲ)

Sri Siddaramaiah : I want to know the constitutional position.

Dr. V.S. Acharya : I will tell you.

Sri Siddaramaiah : What is the latest Supreme Court decision on Article 48, 304 and 304 (b). ಅದರ ಬಗ್ಗೆ judgements ಗಳು ಇದ್ದರೆ ಹೇಳಿ ನೋಡೋಣ.

(ಗೊಂದಲ)

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ವಿಷಯವನ್ನು ಇಲ್ಲಿ ತಿಳಿಸಿದ್ದಾರೆ. ಯಾವ ದುರುದ್ದೇಶದಿಂದ ಅಥವಾ ಯಾವುದೇ......

(ಗೊಂದಲ)

Dr. V.S. Acharya : Judgements ಬೇಕಾದಷ್ಟು ಇವೆ.

(ಗೊಂದಲ)

Sri Siddaramaiah : Supreme Court citation Judgement ಯಾವುದಾದರೂ ಇದ್ದರೆ ಹೇಳಿ ನೋಡೋಣ. 304 (b) ಮೇಲೆ What is the constitutional position? Tell me.

ಅಧ್ಯಕ್ಷರು : 48 ಮೇಲೆಯೇ latest judgement ಇದೆ. ಅದನ್ನೆಲ್ಲಾ ಹೇಳುವುದಕ್ಕೆ ಕಷ್ಟವಾಗುತ್ತದೆ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸಿದ್ದರಾಮಯ್ಯನವರು ಎರಡು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. Article 48 ಬಗ್ಗೆ ನೀವು ಕೇಳುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಸುರೇಶ್‌ಕುಮಾರ್‌ರವರೆ, 48 ಏನು ಹೇಳುತ್ತದೆ ಎಂಬುದನ್ನು ಓದಿ ಹೇಳಿ.

ಶ್ರೀ ಎಸ್. ಸುರೇಶ್ ಕುಮಾರ್ : Article 48 says.

"The State shall endeavor to organise agriculture and animal husbandry on modern and scientific lines, and shall, in particular, take steps for Preserving and improving the breeds, and prohibiting the slaughter of cows and calves and other milch and draught cattle.

ಇದಕ್ಕಿಂತ ನಿಮಗೆ clarity ಇನ್ನೇನು ಬೇಕು. Article 48 ಯಲ್ಲಿ ....

Sri Siddara Maiah : Does it mean; it is a total prevention of slaughter? It doesn't say like that.

ಶ್ರೀ ಎಸ್. ಸುರೇಶ್ ಕುಮಾರ್ : ಒಂದು ನಿಮಿಷ, ಅದಕ್ಕೆ ನಾನು ಉತ್ತರ ಕೊಡುತ್ತೇನೆ. ".... Slaughter of cows and calves and other milch and draught cattle" ಅಂದರೆ ಏನರ್ಥ?

ಶ್ರೀ ಸಿದ್ದರಾಮಯ್ಯ : ಒಂದು ನಿಮಿಷ, ಕುಳಿತುಕೊಳ್ಳಿ. ನಾನು ಕನ್ನಡದಲ್ಲಿ ಇರುವುದನ್ನು ಉಲ್ಲೇಖಿಸಬಯಸುತ್ತೇನೆ. ಸಂವಿಧಾನದ 48ನೇ ವಿಧಿ ಏನು ಹೇಳುತ್ತದೆ ಎಂದರೆ,

"ರಾಜ್ಯವು ಕೃಷಿ ಮತ್ತು ಪಶುಪಾಲನೆಯನ್ನು ಆಧುನಿಕ ಮತ್ತು ವೈಜ್ಞಾನಿಕ ರೀತಿಗಳಲ್ಲಿ ಸಂಘಟನೆಗೊಳಿಸುವುದಕ್ಕೆ ಪ್ರಯತ್ನಿಸತಕ್ಕದ್ದು ಮತ್ತು ವಿಶೇಷವಾಗಿ ತಳಿಗಳನ್ನು ಸಂರಕ್ಷಿಸಿ ಉತ್ತಮಗೊಳಿಸುವುದಕ್ಕಾಗಿ ಹಸುಗಳ ಮತ್ತು ಕರುಗಳ ಹಾಗೂ ಇತರ ಹಾಲು ಕೊಡುವ ಮತ್ತು ಭಾರ ಎಳೆಯುವ ದನಕರುಗಳ ವಧೆಯನ್ನು ನಿಷೇಧಿಸುವುದಕ್ಕಾಗಿ ಕ್ರಮ ಕೈಗೊಳ್ಳುವುದು"

ಅಂದರೆ ಅನುಪಯುಕ್ತವಾಗಿರುವುದನ್ನು slaughter ಮಾಡಬಹುದು ಎಂಬುದು ಇದರ ಅರ್ಥವಾಗಿದೆ. That's why it is not included in the Constitution.

ಶ್ರೀ ಎ.ರಾಮದಾಸ್ : ಎಲ್ಲವೂ ಉಪಯುಕ್ತವೇ.

Sri Siddaramaiah : It is not mandatory.

Sri A Ramadas : No, No.

Sri Siddaramaiah : It is not enforceable in a court of law.

(ಗೊಂದಲ)

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, 'ಅನುಪಯುಕ್ತ' ಎಂಬ ಪದವನ್ನು ಎಲ್ಲಿಯೂ ಉಪಯೋಗ ಮಾಡಿಲ್ಲ.

(ಗೊಂದಲ)

Sri S. Suresh kumar : In the Constitution, it is very clear.

ಶ್ರೀ ಸಿದ್ದರಾಮಯ್ಯ : ನಾನು ಸಂವಿಧಾನವನ್ನೇ ಓದಿದ್ದು.

ಶ್ರೀ ಎಸ್. ಸುರೇಶ್ ಕುಮರ್ : ನಾನೂ ಸಂವಿಧಾನವನ್ನೇ ಓದಿ ಹೇಳಿದ್ದು.

(ಗೊಂದಲ)

Sri Siddaramaiah : It is your wrong interpretation.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ನಾನು interpret ಮಾಡುತ್ತಿಲ್ಲ. ನಾನು ಕೇವಲ ಸಂವಿಧಾನ ಓದಿದೆ ಅಷ್ಟೇ. That is your interpretation.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ನಾನು ಇನ್ನೂ ಒಂದ್ಸಲ ಅದನ್ನು ಓದಿ ಹೇಳುತ್ತೇನೆ, ಕೇಳಿ.

"The State shall in particular take steps for preseeving and improving the breeds, and prohibiting the slaughter of cows, calves and other milch and draught cattle." It is not a total.

(ಗೊಂದಲ)

Mr. Speaker : What is the meaning of cattle?

(ಗೊಂದಲ)

Mr. Speaker : Cattle includes everything.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ....304 (B) ಪ್ರಕಾರ President ನಿಂದ ಮುಂಚೆಯೇ sanction ತೆಗೆದುಕೊಳ್ಳಬೇಕೆಂದು ಇದೆ. Article 255 ಏನು ಹೇಳುತ್ತದೆ ಎಂಬುದನ್ನು ಹೇಳುತ್ತೇನೆ. ಇದನ್ನು ಓದಿ ನೀವು 304ನ್ನು ಅರ್ಥ ಮಾಡಿಕೊಳ್ಳಿ.

255. Requirements as to recommendations and previous sanctions to be regarded as matters of procedure only.- No Act of Parliament or of the Legislature of a State and no provision in any such

Act, shall be invalid by reason only that some recommendation or previous sanction required by this Constitution was not given, if assent to that Act was given-

(a) where the recommendation required was that of the Governor, either by the Governor or by the President;

(b) where the recommendation required was that of the Rajpramukh, either by the Rajpramukh or by the President

So, ಇಲ್ಲಿ ಯಾವುದೂ invalid ಆಗುವುದಿಲ್ಲ. Act ಆದಮೇಲೆ ಕೂಡ ಹೋಗಿ assent ತೆಗೆದುಕೊಳ್ಳಬಹುದು.

(ಗೊಂದಲ)

Mr. Speaker : There is a judgement also.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನು Supreme Court judgement ಹೇಳುತ್ತಿದ್ದೇನೆ. ಅದನ್ನು ಸ್ವಲ್ಪ ಕೇಳಿ.

ಶ್ರೀ ಎಸ್. ಸುರೇಶ್ ಕುಮಾರ್ : ನಾನು Constitution, ಸಂವಿಧಾನದ Article 255 ನ್ನು ಓದುತ್ತಿದ್ದೇನೆ.

(ಗೊಂದಲ)

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಸುಪ್ರೀ ಕೋರ್ಟ್ ಜಡ್ಜ್‌ಮೆಂಟ್ Taxable commodities ಅನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಾಗಿಸುವಂತಹ ವಿಚಾರಕ್ಕೆ ಸಂಬಂಧಪಟ್ಟಂತೆ ಇದೆ. It is not a taxable commodity.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : Constitution of India ದ Article 255 ನ್ನು ನಾನು ಈಗ ಓದಿ ಹೇಳಿದೆ. Notes on Article 255 ನ್ನು ಈಗ ಓದಿ ಹೇಳುತ್ತೇನೆ.

"Neither the Legislature nor the President has the power to declare that non compliance with

> Article 255 of the Constitution was of no effect. By giving his assent to a subsequent bill, the President cannot validate with retrospective effect an earlier Act which has failed for want of President's assent under Article 255 so as to validate it."

So, ಇದು ಆದಮೇಲೂ ಕೂಡ ನಾವು assent ತೆಗೆದುಕೊಳ್ಳ ಬಹುದು. Article 255 is very clear.

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಾಕಷ್ಟು ವಾದವಾಗಿದೆ. ದಯವಿಟ್ಟು ಬಿಲ್ ಪಾಸ್ ಮಾಡಿ. ಇನ್ನೂ ನಾವು ನೈಸ್ ಬಗ್ಗೆ ಚರ್ಚೆ ಮಾಡುವುದಿದೆ.

(ಗೊಂದಲ)

ಅಧ್ಯಕ್ಷರು : ಈಗಾಗಲೇ ಸಾಕಷ್ಟು ಚರ್ಚೆಗಳಾಗಿದೆ.

(ಗೊಂದಲ)

Mr. Speaker : That is only pertaining to tax.

(ಗೊಂದಲ)

ಶ್ರೀ ಎ. ರಾಮದಾಸ್ : ನಾನು ಎಲ್ಲಾ ವಿಚಾರಗಳನ್ನೂ ಹೇಳಿದ್ದೇನೆ. ಈಗಾಗಲೇ ಅದಕ್ಕೆ Clarification ಕೊಟ್ಟಾಗಿದೆ.

(ಗೊಂದಲ)

ಅಧ್ಯಕ್ಷರು : ಅದು only for tax. There are so many judgements. Latest comments ಇರುವ book ಇದೆ. ಅದನ್ನು ಕೊಡುತ್ತೇನೆ, ಓದಿ. ಅದರಲ್ಲಿ 304 [ಬಿ] ನೋಡಿ. That all pertains to tax.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರಾದರೂ ಒಬ್ಬರು ನಿಂತುಕೊಂಡು ಹೇಳಿ. ಸನ್ಮಾನ್ಯ ಅಧ್ಯಕ್ಷರೆ, ಸುಮಾರು ನಾಲ್ಕು ಗಂಟೆಗಳ ಕಾಲ ಸುದೀರ್ಘವಾದ ಚರ್ಚೆಗಳನ್ನು ಮಾಡಿದ್ದೇವೆ. ಅವರ ಅನುಮಾನಗಳಿಗೆ ನಮ್ಮಿಂದ ಏನು ಸಾಧ್ಯವಿದೆಯೋ, ಆ Clarifications ಕೊಟ್ಟಿದ್ದೇವೆ. ಈಗಾಗಲೇ ಈ ದೇಶದ ಅನೇಕ ರಾಜ್ಯಗಳಲ್ಲಿ ಜಾರಿಯಲ್ಲಿರುವಂತಹ

ಶಾಸನವನ್ನು ಇಲ್ಲಿ ಜಾರಿಗೆ ತರುತ್ತಿದ್ದೇವೆ. ದಯಮಾಡಿ ಇದನ್ನು ಪಾಸ್ ಮಾಡಿಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಎಲ್ಲಾ ರಾಜ್ಯಗಳಲ್ಲೂ 64ರ ಕಾಯ್ದೆಯೇ ಇದೆ. ಅದರಲ್ಲಿ ವ್ಯವಸಾಯಕ್ಕೆ ಉಪಯುಕ್ತವಾದಂತಹ ಜಾನುವಾರುಗಳನ್ನು ರಕ್ಷಣೆ ಮಾಡುವುದಕ್ಕೆ, ಹಾಲು ಕೊಡತಕ್ಕಂಥ......

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ನಮ್ಮ ಬಿಲ್ಲಿನಲ್ಲಿ ಕೂಡ.....

(ಗೊಂದಲ)

ಶ್ರೀ ಎ.ರಾಮದಾಸ್ : ಸಂವಿಧಾನದ Article 255 ರ ವಿಧಿ ಅಡಿಯಲ್ಲಿ ರಾಜ್ಯಕ್ಕೆ ಕೊಟ್ಟಂತಹ ಅಧಿಕಾರವನ್ನು ಹಾಳು ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : .... ಇದು ಸಮಾಜದಲ್ಲಿ ಅಶಾಂತಿಯನ್ನು ನಿರ್ಮಾಣ ಮಾಡಲಿಕ್ಕೆ ತಂದಿರುವಂತಹ ದುರುದ್ದೇಶದ ಒಂದು ಮಸೂದೆ ಯಾಗಿದೆ. ಇದರಿಂದ ಸಮಾಜದಲ್ಲಿ ಅನಾಹುತ ಆಗುತ್ತದೆ. ಬಹುಸಂಖ್ಯಾತ ವರ್ಗದವರ ಜೀವನೋಪಾಯಕ್ಕೆ ತೊಂದರೆಯಾಗುತ್ತದೆ. ಅವರ ಹಕ್ಕನ್ನು ಕಿತ್ತುಕೊಳ್ಳತಕ್ಕಂಥ ಕೆಲಸವನ್ನು ನೀವು ಮಾಡುತ್ತಿದ್ದೀರಿ.

ಅದಕ್ಕಾಗಿ ಈ ಸರ್ಕಾರ ಬಹುಸಂಖ್ಯಾತ ವಿರೋಧಿಯಾಗಿದೆ. ಬಡವರು, ದಲಿತರು, ರೈತರು, ಹಿಂದುಳಿದವರು, ಅಲ್ಪಸಂಖ್ಯಾತರು, ಯಾರ್‍ಯಾರು ಮಾಂಸಾಹಾರವನ್ನು ಸೇವಿಸುತ್ತಿದ್ದಾರೋ, ಯಾರ್‍ಯಾರು ದನದ ವ್ಯಾಪಾರ ಮಾಡುತ್ತಾರೋ........

(ಗೊಂದಲ)

ಈ ಹನ್ನಾರದ. ವಿರುದ್ಧ ಕಾಂಗ್ರೆಸ್ ಪಕ್ಷವು ಪ್ರತಿಭಟಿಸುತ್ತದೆ. ನಾವು ಧರಣಿ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಮತ್ತು ಜಾತ್ಯತೀತ ದಳ(ಎಸ್)ದ ಸದಸ್ಯರೆಲ್ಲರೂ ಸದನದ ಬಾವಿಗಿಳಿದು ಧರಣಿ ಹೂಡಿದರು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2010ರ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 6ರವರೆಗೆ

ಅಧ್ಯಕ್ಷು : ಖಂಡ 2 ರಿಂದ 6ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 6ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 7 ಕ್ಕೆ ತಿದ್ದುಪಡಿ

ಶ್ರೀ ರೇವು ನಾಯಕ್ ಬೆಳಮಗಿ (ಪಶು ಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೆ, ಖಂಡ 7ಕ್ಕೆ ನಾನು ಈ ಕೆಳಕಂಡ ತಿದ್ದುಪಡಿ ಮಂಡಿಸುತ್ತೇನೆ.

"7ನೇ ಖಂಡದ (2)ನೇ ಉಪಖಂಡದಲ್ಲಿ , "ಅಂಥ ವಿಧಾನದಲ್ಲಿ ಮತ್ತು ಅಂಥ ಶುಲ್ಕವನ್ನು ಸಂದಾಯ ಮಾಡುವುದಕ್ಕೊಳಪಟ್ಟಿರತಕ್ಕದ್ದು" ಎಂಬ ಪದಗಳಿಗೆ "ಅಂಥ ವಿಧಾನದಲ್ಲಿ ಇರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"7ನೇ ಖಂಡದ (2)ನೇ ಉಪಖಂಡದಲ್ಲಿ, "ಅಂಥ ವಿಧಾನದಲ್ಲಿ ಮತ್ತು ಅಂಥ ಶುಲ್ಕವನ್ನು ಸಂದಾಯ ಮಾಡುವುದಕ್ಕೊಳಪಟ್ಟಿರತಕ್ಕದ್ದು"

ಎಂಬ ಪದಗಳಿಗೆ "ಅಂಥ ವಿಧಾನದಲ್ಲಿ ಇರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 7 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 7 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 7 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 8 ರಿಂದ 21 ರವರೆಗೆ

ಅಧ್ಯಕ್ಷರು " ಖಂಡ 8 ರಿಂದ 21ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 8 ರಿಂದ 21ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1, ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ರೇವು ನಾಯಕ್ ಬೆಳಮಗಿ (ಪಶು ಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋಡುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2010 ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಕಾಂಗ್ರೆಸ್ ಮತ್ತು ಜಾತ್ಯಾತೀತ ದಳ(ಎಸ್) ಪಕ್ಷಗಳ ಮಾನ್ಯ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ಧರಣಿ ಹೂಡಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

(ಗೊಂದಲ)

ಅಧ್ಯಕ್ಷರು : Please, ಈಗ NICE ವಿಚಾರ ಕುರಿತು ಚರ್ಚಿಸುವುದಾದರೆ, ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು.

(ವಿರೋಧ ಪಕ್ಷಗಳ ಮಾನ್ಯ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ನಿಂತು ಘೋಷಣೆಗಳನ್ನು ಕೂಗುತ್ತಾ, ಸರ್ಕಾರದ ವಿರುದ್ಧ ಪ್ರತಿಭಟಿಸುತ್ತಿದ್ದರು).

(ಗೊಂದಲ)

ಅಧ್ಯಕ್ಷರು : ನಾನು ಮತ್ತೊಮ್ಮೆ ತಮ್ಮೆಲ್ಲರಲ್ಲಿ ವಿನಂತಿಸಿಕೊಳ್ಳುತ್ತೇನೆ. ಈಗ NICE ಕುರಿತಂತೆ ಚರ್ಚೆ ಮಾಡುವುದಾದರೆ, ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು.

(ಗೊಂದಲ)

ಅಧ್ಯಕ್ಷರು : ಈಗ ನಾನು ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

(ಸದನದ ಕಲಾಪವು ರಾತ್ರಿ 8 ಗಂಟೆ 54 ನಿಮಿಷಕ್ಕೆ ಮುಕ್ತಾಯಗೊಂಡು, ಅನಿರ್ದಿಷ್ಟ ಅವಧಿಯವರೆಗೆ ಮುಂದೂಡಲ್ಪಟ್ಟಿತು)

* * * * * * * * *

11. ಅನುಬಂಧ – I

ಬಿ.ಪಿ.ಎಲ್. ಮತ್ತು ಎ.ಪಿ.ಎಲ್. ಪಡಿತರ ಚೀಟಿ

953 (1123) ಶ್ರೀಮತಿ ಅನಿತಾಕುಮಾರಸ್ವಾಮಿ : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಧುಗಿರಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಬಿಪಿಎಲ್ ಮತ್ತು ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಇ) ಮಧುಗಿರಿ ತಾಲ್ಲೂಕಿನಲ್ಲಿ ಕೆಲವು ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿಗಳನ್ನು ನೀಡಿ ಉಳಿದ ಭಾಗಗಳಿಗೆ ನೀಡದಿರಲು ಕಾರಣಗಳೇನು;

ಈ) ಮಧುಗಿರಿ ತಾಲ್ಲೂಕಿಗೆ ಸಂಪೂರ್ಣ ಪಡಿತರ ಚೀಟಿಗಳನ್ನು ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಉ) ಹಾಗಿದ್ದಲ್ಲಿ, ಎಂದಿನಿಂದ ಪಡಿತರ ಚೀಟಿಗಳನ್ನು ವಿವರಿಸಲಾಗುವುದು?

ಶ್ರೀ ಹೆಚ್. ಹಾಲಪ್ಪ (ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಹೌದು.

ಆ) 14,802 ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ಅನರ್ಹರೆಂದು ಗುರುತಿಸಿ ರದ್ದು ಗೊಳಿಸಲಾಗಿದೆ.

ಇ) ಮಧುಗಿರಿ ತಾಲ್ಲೂಕಿನಲ್ಲಿ ಬಿಪಿಎಲ್ ಮತ್ತು ಎಪಿಎಲ್ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ಎಲ್ಲಾ ಭಾಗಗಳಲ್ಲಿ ನೀಡಲಾಗಿದೆ.

ಈ) ಹೌದು.

ಉ) ಮಧುಗಿರಿ ತಾಲ್ಲೂಕಿನಲ್ಲಿ 54392 ಬಿಪಿಎಲ್ ಮತ್ತು 12,724 ಎಪಿಎಲ್ ಒಟ್ಟು 67,116 ತಾತ್ಕಾಲಿಕ ಪಡಿತರ ಚೀಟಿಗಳನ್ನು ನೀಡಲಾಗಿರುತ್ತದೆ.

ರಸ್ತೆ ದಿಬ್ಬಗಳು

954 (101) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಮಡಿಕೇರಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನಿಂದ ಬೆಂಗಳೂರಿನವರೆಗೆ ಹೊಸದಾಗಿ ನಿರ್ಮಿಸಿರುವ ರಸ್ತೆಯಲ್ಲಿ ಎಷ್ಟು ರಸ್ತೆ ದಿಬ್ಬಗಳಿವೆ (ಹಂಪ್ಸ್);

ಆ) ಈ ಬಗ್ಗೆ ಉಚ್ಚ ನ್ಯಾಯಾಲಯದ ಆದೇಶವಿದ್ದರೂ ರಸ್ತೆ ದಿಬ್ಬಗಳನ್ನು (ಹಂಪ್ಸ್) ಹಾಕಲು ಕಾರಣವೇನು;

ಇ) ಈ ರಸ್ತೆ ದಿಬ್ಬಗಳನ್ನು ಹಾಕಿರುವುದು ಸರ್ಕಾರದವರೇ ಅಥವಾ ಖಾಸಗಿ ಸಂಸ್ಥೆಯವರೇ;

ಈ) ಈ ಬಗ್ಗೆ ಸರ್ಕಾರದಿಂದ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಪಿ.ಎಂ ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಒಟ್ಟು 63 ಸಂಖ್ಯೆ ರಸ್ತೆ ದಿಬ್ಬಗಳಿರುತ್ತವೆ. ಇದರಲ್ಲಿ 31 ಸಂಖ್ಯೆಯು ಎಡಭಾಗದ ಕಯಾರೇಜ್ ವೇನಲ್ಲಿ ಹಾಗೂ 32 ಸಂಖ್ಯೆ ಬಲಭಾಗದ ಕ್ಯಾರೇಜ್‌ವೇನಲ್ಲಿ ಇರುತ್ತದೆ.

ಆ) ಪಟ್ಟಣ ಮತ್ತು ಶಾಲಾ ಪರಿಮಿತಿಯಲ್ಲಿ ಹಾಗೂ ಅಪಘಾತಗಳು ಸಂಭವಿಸಿರುವ ಸ್ಥಳಗಳಲ್ಲಿ ಸ್ಥಳೀಯ ನಾಗರೀಕರ ಒತ್ತಾಯದ ಮೇರೆಗೆ ಖಾಸಗಿಯವರೇ 53 ದಿಬ್ಬಗಳನ್ನು ನಿರ್ಮಿಸಿಕೊಂಡಿರುತ್ತಾರೆ.

ಇ) ಮಂಡ್ಯ ಮತ್ತು ಮದ್ದೂರು ಪಟ್ಟಣ ಪರಿಮಿತಿಯಲ್ಲಿ ಎಡ ಹಾಗೂ ಬಲ ಪಥಗಳಲ್ಲಿ ಒಟ್ಟಾರೆ 10 ರಸ್ತೆ ಉಬ್ಬುಗಳನ್ನು ಸಂಬಂಧಪಟ್ಟು ಸಂಚಾರಿ ಪೋಲೀಸ್‌ನವರ ಸಲಹೆಯಂತೆ ಇಲಾಖಾ ವತಿಯಿಂದಲೇ ನಿರ್ಮಿಸಲಾಗಿದೆ. ಉಳಿದ 53 ಸಂಖ್ಯೆ. ಉಬ್ಬುಗಳನ್ನು ಸ್ಥಳೀಯ ನಾಗರೀಕರ ಒತ್ತಾಯುದ ಮೇರೆಗೆ ಖಾಸಗಿಯವರೇ ನಿರ್ಮಿಸಿಕೊಂಡಿರುತ್ತಾರೆ.

ಈ) ಸ್ಥಳೀಯ ಹಾಗೂ ಸಾರ್ವಜನಿಕರ ಒತ್ತಾಯದ ಮೇರೆಗೆ ಸದರಿ ಉಬ್ಬುಗಳು ಹಾಗೆಯೇ ಉಳಿದಿರುತ್ತವೆ.

ರಸ್ತೆಗಳ ಅಭಿವೃದ್ಧಿ

955 (1273) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿನ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಲೆಕ್ಕ ಶೀರ್ಷಿಕೆ 3054ರಲ್ಲಿ ಈವರೆವಿಗೂ ಪೂರ್ಣಗೊಂಡ ಕಾಮಗಾರಿಗಳಾವುವು (ವಿವರ ನೀಡುವುದು);

ಆ) ಈ ರೀತಿ ಪೂರ್ಣಗೊಂಡ ಎಷ್ಟು ಕಾಮಗಾರಿಗಳಿಗೆ ಇನ್ನೂ ಸರ್ಕಾರದಿಂದ ಹಣ ಬಿಡುಗಡೆಯಾಗಬೇಕಾಗಿದೆ (ಪ್ರತಿ ಕಾಮಗಾರಿಯ ವಿವರ ಒದಗಿಸುವುದು);

ಇ) ಸರ್ಕಾರದಿಂದ ಹಣ ಬಿಡುಗಡೆಯಾಗದೆ ತೊಂದರೆಯನ್ನು ಅನುಭವಿಸುತ್ತಿರುವ ಗುತ್ತಿಗೆದಾರರ ಬವಣೆಯನ್ನು ಸರ್ಕಾರವು ಗಮನಿಸಿದೆಯೇ?

ಈ) ಇವರ ತೊಂದರೆಯನ್ನು ನಿವಾರಿಸಲು ಸರ್ಕಾರವು ಯಾವಾಗ ಪೂರ್ಣ ಹಣ ಬಿಡುಗಡೆ ಮಾಡುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಿಜಾಪುರ ಜಿಲ್ಲೆಯಲ್ಲಿನ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಲೆಕ್ಕ ಶೀರ್ಷಿಕೆ 3054 ರಲ್ಲಿ ಈವರೆವಿಗೂ ಪೂರ್ಣಗೊಂಡ ಕಾಮಗಾರಿಗಳ ವಿವರವನ್ನು ಅನುಬಂಧ–1 ರಲ್ಲಿ ವಿವರಿಸಿದೆ.

ಆ) ಈಗಾಗಲೇ ಪೂರ್ಣಗೊಂಡಿರುವ ಹಾಗೂ ಹಣ ಬಿಡುಗಡೆ ಯಾಗಬೇಕಾಗಿರುವ ಕಾಮಗಾರಿಗಳ ವಿವರವನ್ನು ಅನುಬಂಧ–1 ರಲ್ಲಿ ವಿವರಿಸಿದೆ.

ಇ) ಗಮನಿಸಿದೆ.

ಈ) ಬಾಕಿ ಬಿಲ್ಲುಗಳನ್ನು ಆಧರಿಸಿ ಮತ್ತು ರಾಜ್ಯದ ಸಂಪನ್ಮೂಲ ವನ್ನಾಧರಿಸಿ ಆರ್ಥಿಕ ಇಲಾಖೆಯಿಂದ ಬಿಡುಗಡೆ ಮಾಡಲಾಗುವ ಹಣಕ್ಕನುಗುಣವಾಗಿ ಹಂತ ಹಂತವಾಗಿ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ-3

ಲೋಕೋಪಯೋಗಿ ಇಲಾಖೆ ವಿಜಾಪುರ ವಿಭಾಗದ ಬಾಕಿ ಬಿಲ್ಲುಗಳ ವಿವರ.

ಕ್ರ.ಸಂ.	ಕಾಮಗಾರಿಗಳ ವಿವರ	ಆಡಳಿತಾತ್ಮಕ ತಾಂತ್ರಿಕ ಮಂಜೂರಾತಿ ಸಂಖ್ಯೆ ಮತ್ತು ದಿನಾಂಕ	ಲೆಕ್ಕ ಶೀರ್ಷಿಕೆ	ಅಂದಾಜು ಮೊತ್ತ	ವಿಭಾಗದ ಬಿ.ಆರ್. ಸಂಖ್ಯೆ ಮತ್ತು ದಿನಾಂಕ	ಹೆಸರು (ಗುತ್ತಿಗೆದಾರರ ಹೆಸರು)	ಬಾಕಿ ಬಿಲ್ಲಿನ ಮೊತ್ತ	ಷರಾ
1	2	3	4	5	6	7	8	9
			3054 ಆರ್ & ಬಿ.					
1	ಸಿಂದಗಿ ತಾಲೂಕಿನ [illegible] ರಸ್ತೆ ಕಿ.ಮೀ.40 ರಿಂದ 43ರ ವರೆಗೆ ಸುಧಾರಣೆ.	541/5/06	ಸದರ	1.00	1007/21-3-07	ಶ್ರೀ. [illegible]	1.00	- -
2	ಸಿಂದಗಿ ತಾಲೂಕಿನ [illegible] ರಸ್ತೆ ಕಿ.ಮೀ.43 ರಿಂದ 47ರ ವರೆಗೆ ಸುಧಾರಣೆ.		ಸದರ	2.00	1008/21-3-07	ಶ್ರೀ. [illegible]	2.00	
3	ವಿಜಾಪುರ [illegible] ರಾ.ಹೆ. ಕಿ.ಮೀ. 17.00 ರಿಂದ 20.00 ರ ವರೆಗೆ [illegible]	538/3/07	ಸದರ	2.00	306/11/07	ಶ್ರೀ.ಪಿ.ಎಸ್.[illegible]	1.11	12 3712 9-11-06
4	ವಿಜಾಪುರ ತಾಲೂಕಿನ [illegible] ರಾ.ಹೆ. ಕಿ.ಮೀ. 23.00 ರಿಂದ 26.00 ರ ವರೆಗೆ [illegible] ಹಾಗೂ ದುರಸ್ತಿ	540/3/07	ಸದರ	2.00	322/7/12/07(ಬಿ)	ಶ್ರೀ.ಪಿ.ಎಸ್.[illegible]	1.24	14/11 9-12-06 11
5	ಮುದ್ದೇಬಿಹಾಳ ತಾಲೂಕಿನ [illegible] ರಸ್ತೆ 12.98ರಲ್ಲಿ [illegible]	563/3/07	ಸದರ	1.80	396/1/08	ಶ್ರೀ.ಪಿ.ಎಸ್.[illegible]	0.80	7 3600ರ 13-12-2006
6	ಸಿಂದಗಿ ತಾಲೂಕಿನ [illegible] ರಸ್ತೆ ಸುಧಾರಣೆ.		ಸದರ	-	428/2/08	ಶ್ರೀ[illegible]	9.87	1 5696 ದಿ8-2-06
7	ವಿಜಾಪುರ ತಾಲೂಕಿನ [illegible] ರಸ್ತೆ ಕಿ.ಮೀ.8.00 ರಿಂದ [illegible]		ಸದರ	-	474(ಪಿ)11/2/08	ಶ್ರೀ.[illegible]	9.56	

O.32 E-41

8	ಬಿಜಾಪುರ ತಾಲೂಕಿನ ಬಬಲೇಶ್ವರ ಕಾಖಂಡಕಿ ರಸ್ತೆ ಕಿ.ಮೀ.0.00 ರಿಂದ 6.00ರ ವರೆಗೆ ರಸ್ತೆ ಸುಧಾರಣೆ.	264/12/07	ಸದರ	1.90	523/2/08	ಶ್ರೀ. ಆರ್.ಎಸ್. [illegible]	1.90	22 5285 ದಿ:-10-8-07
9	ಬಿಜಾಪುರ ತಾಲೂಕಿನ ಬಿಜಾಪುರ ಯತ್ನಾಳ ರಸ್ತೆ ಕಿ.ಮೀ.15.20 ರಲ್ಲಿ ಸೇತುವೆ ಕೂಡುವ ರಸ್ತೆ ದುರಸ್ತಿ ಮಾಡುವದು.		ಸದರ	0.61	597/29-2-08	ಶ್ರೀ. ಜಿ.ಎಸ್. [illegible]	0.61	5 11 ದಿ:10-8-07
10	ಬಿಜಾಪುರ ತಾಲೂಕಿನ ಬಬಲೇಶ್ವರ ಕಾಖಂಡಕಿ [illegible] ರಸ್ತೆ ಕಿ.ಮೀ. 0.00 ರಿಂದ 1.00ರ ವರೆಗೆ [illegible]	81/12/07	ಸದರ	0.58	621/8/3/08	ಶ್ರೀ. ಎಸ್.ಬಿ.[illegible]	0.56	
11	ಬಿಜಾಪುರ ತಾಲೂಕಿನ [illegible] ರಸ್ತೆ ಕಿ.ಮೀ. 39.10 ರಿಂದ 41.00 ರ ವರೆಗೆ ಸುಧಾರಣೆ ಹಾಗೂ ದುರಸ್ತಿ.	303/12/07	ಸದರ	0.75	646/8/3/08	ಶ್ರೀ. ಎಮ್.[illegible]	0.75	8 5285 ದಿ:10.8-07
12	ಬಿಜಾಪುರ ತಾಲೂಕಿನ [illegible] ರಸ್ತೆ ಕಿ.ಮೀ. 24.10 ರಿಂದ 26.20ರ ವರೆಗೆ ಸುಧಾರಣೆ ಹಾಗೂ, ದುರಸ್ತಿ		ಸದರ	0.75	694//3/08	ಶ್ರೀ. ಎಮ್.[illegible]	0.75	36 3821ದಿ:-17-11-07
13	ಮುದ್ದೇಬಿಹಾಳ ತಾಲೂಕಿನ [illegible] ರಸ್ತೆ ಕಿ.ಮೀ. 1.50 ರಿಂದ 3.00ರ ವರೆಗೆ ಮರು ಡಾಂಬರೀಕರಣ.		ಸದರ	7.50	698/3/08	ಶ್ರೀ. [illegible]	7.32	7 3712ದಿ: 5-11-07
14	ಬಿಜಾಪುರ ತಾಲೂಕಿನ ಬಬಲೇಶ್ವರ ಕಾಖಂಡಕಿ [illegible] ರಸ್ತೆ ಕಿ.ಮೀ. 12.00 ರಿಂದ14.35ರ ವರೆಗೆ ಮತ್ತು 19.30 ರಿಂದ 20.00 ರ ವರೆಗೆ		ಸದರ	-	724/3/08	ಶ್ರೀ.ಎಮ್.[illegible]	0.29	
15	ಮುದ್ದೇಬಿಹಾಳ ತಾಲೂಕಿನ [illegible] ರಸ್ತೆ ಕಿ.ಮೀ.2.00 ರಿಂದ 3.50ರ ವರೆಗೆ ಮರು ಡಾಂಬರೀಕರಣ ಮಾಡುವದು.	181/08/09	ಸದರ	4.00	735/3/08	ಶ್ರೀ.ಎಮ್.ಎಸ್.[illegible]	1.31	3 3821ದಿ:-17-11-07
16	ಬಿಜಾಪುರ ತಾಲೂಕಿನ [illegible] ರಸ್ತೆ ಕಿ.ಮೀ. 12ರಿಂದ ರಸ್ತೆ 15.00 ರಲ್ಲಿ [illegible] 14.00 ರಲ್ಲಿ ಸೇತುವೆ [illegible].	31/1/06	ಸದರ	4.00	751/3/08	ಶ್ರೀ. ಎಸ್.ಎಸ್. [illegible]	3.97	3 1600ದಿ:-13-12-08
17	ಬಿಜಾಪುರ [illegible] ವರೆಗೆ [illegible].	516/2/08	ಸದರ	0.50	773/3/08	ಶ್ರೀ. [illegible]	0.50	4 5617ದಿ:-8-2-08

18	ಮುದ್ದೇಬಿಹಾಳ ತಾಲ್ಲೂಕಿನ ಮದಗಿನಾಳ [illegible] ರಾ.ಹೆ. 61 ಕಿ.ಮೀ.42.60 ರಿಂದ 51.60ರ ವರೆಗೆ ಸೂಚನಾ ಫಲಕ ಅಳವಡಿಸುವುದು.		ಸದರ		855/3/08	ಶ್ರೀ. ಎ.ಎಸ್.ಪಾಟೀಲ,	0.97	
19	ಸದರ-ಕಿ.ಮೀ. 53.00 ರಿಂದ 63ರ ವರೆಗೆ ಸೂಚನಾ ಫಲಕ ಅಳವಡಿಸುವುದು.		ಸದರ		856/3/08	ಶ್ರೀ. ಎಸ್.ಬಿ. [illegible]	0.97	
20	ಸದರ- ಕಿ.ಮೀ. 63.00 ರಿಂದ 70ರವರೆಗೆ ಸೂಚನಾ ಫಲಕ ಅಳವಡಿಸುವುದು.		ಸದರ		857/3/08	ಶ್ರೀ. ಎಸ್.ಬಿ. [illegible]	0.97	33/11 ದಿ:8.2.08
21	ಸದರ- ಕಿ.ಮೀ. 70.00 ರಿಂದ 75.57ರವರೆಗೆ ಸೂಚನಾ ಫಲಕ ಅಳವಡಿಸುವುದು.	130/08	ಸದರ	1.00	858/3/08	ಶ್ರೀ. ಎಸ್.ಬಿ. [illegible]	0.97	34/11 ದಿ:8.2.08
22	ಮುದ್ದೇಬಿಹಾಳ ತಾಲ್ಲೂಕಿನ ಮದಗಿನಾಳ [illegible] ರಾ.ಹೆ.-61 ಕಿ.ಮೀ.68.00 ರಿಂದ 83.[illegible]ರ ವರೆಗೆ ಸೂಚನಾ ಫಲಕ ಅಳವಡಿಸುವುದು.	126/08	ಸದರ	1.00	860/3/08	ಶ್ರೀ.ಎ.ಎಸ್.ಪಾಟೀಲ	0.97	30/11 8.2.08
23	ಮುದ್ದೇಬಿಹಾಳ ತಾಲ್ಲೂಕಿನ [illegible] [illegible] ರಾ.ಹೆ.41 ಕಿ.ಮೀ. 130 ರಿಂದ 138.20ರ ವರೆಗೆ ಸೂಚನಾಫಲಕ ಅಳವಡಿಸುವುದು.	131/08	ಸದರ	1.00	863/3/08	ಶ್ರೀ.ಎಸ್.ಬಿ.[illegible]	0.97	35/ 3616 ದಿ:8-2-08
24	ವಿಜಾಪುರ ತಾಲ್ಲೂಕಿನ [illegible] [illegible] ರಸ್ತೆ ಕಿ.ಮೀ.9.00 ರಿಂದ 13.50ರ ವರೆಗೆ	848/2/08	ಸದರ	28.00	868/3/08	ಶ್ರೀ.ಬಿ.ಆರ್.[illegible]	25.38	1/ 5617 ದಿ:8-6-08
ಅ) ವಾಗದರಿ- ರಿಬ್ಬನಪಲ್ಲಿ ರಸ್ತೆಯು ಕರ್ನಾಟಕದಲ್ಲಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಈ ರಸ್ತೆಯ ಅಭಿವೃದ್ಧಿ ಕಾಮಗಾರಿಗಾಗಿ ಟೆಂಡರ್ ಪ್ರಕ್ರಿಯೆಯು ಪ್ರಾರಂಭವಾಗಿದೆಯೇ;

ಈ) ಹಾಗಿದ್ದಲ್ಲಿ, ಟೆಂಡರ್ ಪಡೆದಿರುವ ಗುತ್ತಿಗೆದಾರರು ಯಾರು (ಹೆಸರು, ವಿಳಾಸ ಸಹಿತ ಮಾಹಿತಿ ನೀಡುವುದು);

ಉ) ಮೇಲ್ಕಂಡ ರಸ್ತೆಯ ಕಾಮಗಾರಿಯನ್ನು ಸರ್ಕಾರದ ವತಿಯಿಂದ ನಬಾರ್ಡ್ ಅಥವಾ ವಿಶ್ವಬ್ಯಾಂಕಿನ ನೆರವಿನಿಂದ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಊ) ಹಾಗಿದ್ದಲ್ಲಿ, ಈ ಕಾಮಗಾರಿಗಾಗಿ ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು;

ಋ) ಈ ರಸ್ತೆ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು (ವಿವರ ನೀಡುವುದು)?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಸದರಿ ರಸ್ತೆ ರಾಜ್ಯದ ಗುಲ್ಬರ್ಗ ಜಿಲ್ಲೆ ವ್ಯಾಪ್ತಿ ಪ್ರದೇಶದಲ್ಲಿ ಬರುತ್ತದೆ.

ಆ) ವಾಗ್ದಾರಿ- ರಿಬ್ಬನಪಲ್ಲಿ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿಯನ್ನು "ಸಾರ್ವಜನಿಕ – ಖಾಸಗಿ – ಸಹಭಾಗಿತ್ವ (ಪಿ.ಪಿ.ಪಿ.) – ವಿ.ಜಿ. ಎಫ್. (ಶುಲ್ಕ)" ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗಿದೆ.

ಇ) ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿದ್ದು, M/s GVR Infra Projects Limited along with M/s RMN Infrastructures Limited and M/s Prathyusha Associates Shipping Pvt. Ltd., ರ Consortium ರವರು ಸಲ್ಲಿಸಿರುವ ವಿ.ಜಿ.ಎಫ್. ಬಿಡ್ ಮೊತ್ತವನ್ನು (ಶೇ.38) ಅನುಮೋದಿಸುವ ಕುರಿತು ಸರ್ಕಾರದಲ್ಲಿ ಅಂತಿಮ ಹಂತದಲ್ಲಿರುತ್ತದೆ.

ಈ) M/s GVR Infra Projects Limited along with M/s RMN Infrastructures Limited and M/s Prathyusha Associates Shipping Pvt. Ltd.,

ಲೀಡ್ ಮೆಂಬರ್ ವಿಳಾಸ: M/s GVR Infra Projects Limited., No.476, Tala Cauvery Layour, Amrutha Halli, Byatarayanapura, New Bengaluru International Airport Road, Bangaluru- 560 092.

ಉ) ನಬಾರ್ಡ್ ಅಥವಾ ವಿಶ್ವಬ್ಯಾಂಕಿನ ನೆರವಿನಿಂದ ಕಾಮಗಾರಿ ಪ್ರಾರಂಭಿಸುವ ಬಗ್ಗೆ ಸರ್ಕಾರದಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಊ) ಪಿ.ಪಿ.ಪಿ. – ವಿ.ಜಿ.ಎಫ್. (ಶುಲ್ಕ) ಆಧಾರದ ಮೇಲೆ ಕೈಗೊಳ್ಳಲು ಉದ್ದೇಶಿಸಿದ್ದು, ವಿ.ಜಿ. ಎಫ್ 38%, ಕೇಂದ್ರದ ಪಾಲು 20% ಹಾಗೂ ರಾಜ್ಯದ ಪಾಲು 18% ಆಗಿರುತ್ತದೆ.

ಋ) Consortium ರವರೊಂದಿಗೆ ಗುತ್ತಿಗೆ ಕರಾರು ಮಾಡಿಕೊಂಡು Financial closer ಆದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ವಸತಿ ಗೃಹಗಳು

1051 (1257) ಶ್ರೀ ಸುಭಾಷ್ ಆರ್. ಗುತ್ತೇದಾರ್ (ಅಳಂದ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ವಸತಿಗೃಹಗಳ ಸಂಖ್ಯೆ ಎಷ್ಟು ಮತ್ತು ಯಾವುವು; ಅವುಗಳ ವಿಸ್ತೀರ್ಣ ಸಹಿತ ಪೂರ್ಣ ಮಾಹಿತಿ ನೀಡುವುದು;

ಆ) ಲೋಕೋಪಯೋಗಿ ಇಲಾಖೆಯ ಕಛೇರಿ ನಿವೇಶನದ ಒಟ್ಟು ವಿಸ್ತೀರ್ಣದ ಅಳತೆ ಎಷ್ಟು (ಎಕರೆ, ಗುಂಟೆವಾರು ಮಾಹಿತಿ ನೀಡುವುದು);

ಇ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ಜಮೀನನ್ನು ಖಾಸಗಿಯವರು ಅಕ್ರಮ ಪ್ರವೇಶ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಅತಿಕ್ರಮ ಪ್ರವೇಶ ಮಾಡಿರುವವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಅಳಂದ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯು ವ್ಯಾಪ್ತಿಯಲ್ಲಿರುವ ಒಟ್ಟು ವಸತಿಗೃಹಗಳ ಸಂಖ್ಯೆ 10. ಸದರಿ ವಸತಿಗೃಹಗಳ ವಿವರ ಮತ್ತು ವಿಸ್ತೀರ್ಣ ಈ ಕೆಳಕಂಡಂತಿರುತ್ತವೆ.

ವಸತಿ ಗೃಹ ಸಂಖ್ಯೆ	ವಿಸ್ತೀರ್ಣ (ನಿವೇಶನ ಚದರ ಅಡಿಯಲ್ಲಿ)
17:ಬಿ	4588.21
17:ಬಿ	4588.21
18	3576.54
14	4331.21
19: ಬಿ	1564.00
19: ಎ	1564.00
13: ಎ	1912.50
13: ಬಿ	1912.50
20: ಬಿ	1368.75
20: ಎ	1368.75

ಆ) ಲೋಕೋಪಯೋಗಿ ಇಲಾಖೆಯ ಉಪ ವಿಭಾಗ ಕಚೇರಿಯ ನಿವೇಶನದ ಒಟ್ಟು ವಿಸ್ತೀರ್ಣ 0 ಎಕರೆ 26.37 ಗುಂಟೆ ಇರುತ್ತದೆ.

ಇ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ಜಮೀನಿನಲ್ಲಿ ಖಾಸಗಿಯವರು ಅಕ್ರಮ ಪ್ರವೇಶ ಮಾಡಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉದ್ಯಾನವನ ನಿರ್ಮಿಸುವುದು

1053 (1259) ಶ್ರೀ ಸುಭಾಷ ಆರ್. ಗುತ್ತೇದಾರ್ (ಆಳಂದ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ತಾಲ್ಲೂಕಿನ ಅಮರ್ಜಾ ಅಣೆಕಟ್ಟು ಪ್ರದೇಶದಲ್ಲಿ ಉದ್ಯಾನವನ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ನಿರ್ಮಿಸಲಾಗುವುದು;

ಇ) ಹಾಗಿದ್ದಲ್ಲಿ, ಅಣೆಕಟ್ಟು ಕೆಳಭಾಗದಲ್ಲಿ ಸರ್ಕಾರಿ ಜಮೀನಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಉದ್ಯಾನವನ ನಿರ್ಮಿಸಲು ಸರ್ಕಾರ ಸ್ಥಳಪರಿಶೀಲನೆ ನಡೆಸಿದೆಯೇ;

ಉ) ಹಾಗಿದ್ದಲ್ಲಿ, ಉದ್ಯಾನವನ ನಿರ್ಮಿಸಲು ಸರ್ಕಾರ ಅನುದಾನವನ್ನು ನಿಗಧಿಪಡಿಸಿದೆಯೇ;

ಊ) ಹಾಗಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) ಇಲ್ಲ.

ಆ) ಇ) ಈ) ಉ) ಮತ್ತು ಊ)

ಉದ್ಭವಿಸುವುದಿಲ್ಲ.

ಅನುಬಂಧ – I

ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2010
(2010ರ ವಿಧಾನಸಭೆಯ ವಿಧೇಯಕ ಸಂಖ್ಯೆ 14)

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 10) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು *ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2010* ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 61ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10), 61ನೇ ಪ್ರಕರಣದಲ್ಲಿ,–

(i) (2)ನೇ ಉಪ ಪ್ರಕರಣದಲ್ಲಿ, "ಬೇಸಾಯ ವಿಧಾನಗಳನ್ನು ಉತ್ತಮಗೊಳಿಸುವ ಬಗ್ಗೆ" ಎಂಬ ಪದಗಳ ತರುವಾಯ "ಅಥವಾ ಅಂಥ ವ್ಯಕ್ತಿಯ ಮಕ್ಕಳ ಉನ್ನತ ವ್ಯಾಸಂಗವನ್ನು ಮುಂದುವರಿಸುವ ಸಲುವಾಗಿ ಶೈಕ್ಷಣಿಕ ಸಾಲವನ್ನು ತೆಗೆದುಕೊಳ್ಳುವ ಬಗ್ಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (2)ನೇ ಉಪಪ್ರಕರಣದ ತರುವಾಯ. ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

: **ವಿವರಣೆ.–** ಈ ಉಪಪ್ರಕರಣದ ಉದ್ದೇಶಕ್ಕಾಗಿ, "ಉನ್ನತ ವ್ಯಾಸಂಗ" ಎಂದರೆ ಪದವಿ ಪೂರ್ವ ಪರೀಕ್ಷೆಯ ಅಥವಾ ಸಿಬಿಎಸ್‌ಸಿ ಅಥವಾ ಐಸಿಎಸ್‌ಇ ಯವರು ನಡೆಸುವ 12ನೇ ತರಗತಿ ಪರೀಕ್ಷೆಯ ತರುವಾಯದ ಅಥವಾ ಯಾವುದೇ ಡಿಪ್ಲೊಮೊ ಕೋರ್ಸುಗಳ ತರುವಾಯದ ಮುಂದಿನ ವ್ಯಾಸಂಗಗಳು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10) 61ನೇ ಪ್ರಕರಣದ (2)ನೇ ಉಪ ಪ್ರಕರಣವು, ಅಧಿಭೋಗದಾರನಿಗೆ, ಭೂಮಿಯ ಅಭಿವೃದ್ಧಿಗಾಗಿ ಅಥವಾ ಬೇಸಾಯ ವಿಧಾನಗಳನ್ನು ಉತ್ತಮಗೊಳಿಸುವುದಕ್ಕಾಗಿ, ಭೂಮಿಯಲ್ಲಿರುವ ತನ್ನ ಹಿತಾಸಕ್ತಿಯ ಮೇಲೆ ಸಾಲ ತೆಗೆದುಕೊಳ್ಳುವುದಕ್ಕೆ ಅಥವಾ ಪ್ರಭಾರವನ್ನು ಸೃಜಿಸುವುದಕ್ಕೆ ಅವಕಾಶ ನೀಡುತ್ತದೆ. ಮಾಲೀಕರು ತಮ್ಮ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಜಮೀನನ್ನು ಅಡಮಾನ ಮಾಡಿ ಸಾಲ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವಂತೆ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಅನುಬಂಧ – II

ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2010
(2010ರ ವಿಧಾನಸಭೆಯ ವಿಧೇಯಕ ಸಂಖ್ಯೆ 14)

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 10) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ***ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2010*** ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 61ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10), 61ನೇ ಪ್ರಕರಣದಲ್ಲಿ,–

(i) (2)ನೇ ಉಪ ಪ್ರಕರಣದಲ್ಲಿ, "ಬೇಸಾಯ ವಿಧಾನಗಳನ್ನು ಉತ್ತಮಗೊಳಿಸುವ ಬಗ್ಗೆ" ಎಂಬ ಪದಗಳ ತರುವಾಯ "ಅಥವಾ ಅಂಥ ವ್ಯಕ್ತಿಯ ಮಕ್ಕಳ ಉನ್ನತ ವ್ಯಾಸಂಗವನ್ನು ಮುಂದುವರಿಸುವ ಸಲುವಾಗಿ ಶೈಕ್ಷಣಿಕ

ಸಾಲವನ್ನು ತೆಗೆದುಕೊಳ್ಳುವ ಬಗ್ಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (2)ನೇ ಉಪಪ್ರಕರಣದ ತರುವಾಯ. ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

: **ವಿವರಣೆ.**- ಈ ಉಪಪ್ರಕರಣದ ಉದ್ದೇಶಕ್ಕಾಗಿ, "ಉನ್ನತ ವ್ಯಾಸಂಗ" ಎಂದರೆ ಪದವಿ ಪೂರ್ವ ಪರೀಕ್ಷೆಯ ಅಥವಾ ಸಿಬಿಎಸ್‌ಸಿ ಅಥವಾ ಐಸಿಎಸ್‌ಇ ಯವರು ನಡೆಸುವ 12ನೇ ತರಗತಿ ಪರೀಕ್ಷೆಯ ತರುವಾಯದ ಅಥವಾ ಯಾವುದೇ ಡಿಪ್ಲೊಮೊ ಕೋರ್ಸುಗಳ ತರುವಾಯದ ಮುಂದಿನ ವ್ಯಾಸಂಗಗಳು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10) 61ನೇ ಪ್ರಕರಣದ (2)ನೇ ಉಪ ಪ್ರಕರಣವು, ಅಧಿಭೋಗದಾರನಿಗೆ, ಭೂಮಿಯ ಅಭಿವೃದ್ಧಿಗಾಗಿ ಅಥವಾ ಬೇಸಾಯ ವಿಧಾನಗಳನ್ನು ಉತ್ತಮಗೊಳಿಸುವುದಕ್ಕಾಗಿ, ಭೂಮಿಯಲ್ಲಿರುವ ತನ್ನ ಹಿತಾಸಕ್ತಿಯ ಮೇಲೆ ಸಾಲ ತೆಗೆದುಕೊಳ್ಳುವುದಕ್ಕೆ ಅಥವಾ ಪ್ರಭಾರವನ್ನು ಸೃಜಿಸುವುದಕ್ಕೆ ಅವಕಾಶ ನೀಡುತ್ತದೆ. ಮಾಲೀಕರು ತಮ್ಮ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಜಮೀನನ್ನು ಅಡಮಾನ ಮಾಡಿ ಸಾಲ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವಂತೆ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2010
(2010ರ ವಿಧಾನಸಭೆಯ ವಿಧೇಯಕ ಸಂಖ್ಯೆ 14)

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 10) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ***ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2010*** ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 61ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10), 61ನೇ ಪ್ರಕರಣದಲ್ಲಿ,-

(i) (2)ನೇ ಉಪ ಪ್ರಕರಣದಲ್ಲಿ, "ಬೇಸಾಯ ವಿಧಾನಗಳನ್ನು ಉತ್ತಮಗೊಳಿಸುವ ಬಗ್ಗೆ" ಎಂಬ ಪದಗಳ ತರುವಾಯ "ಅಥವಾ ಅಂಥ ವ್ಯಕ್ತಿಯ ಮಕ್ಕಳ ಉನ್ನತ ವ್ಯಾಸಂಗವನ್ನು ಮುಂದುವರಿಸುವ ಸಲುವಾಗಿ ಶೈಕ್ಷಣಿಕ ಸಾಲವನ್ನು ತೆಗೆದುಕೊಳ್ಳುವ ಬಗ್ಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (2)ನೇ ಉಪಪ್ರಕರಣದ ತರುವಾಯ. ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

: **ವಿವರಣೆ.-** ಈ ಉಪಪ್ರಕರಣದ ಉದ್ದೇಶಕ್ಕಾಗಿ, "ಉನ್ನತ ವ್ಯಾಸಂಗ" ಎಂದರೆ ಪದವಿ ಪೂರ್ವ ಪರೀಕ್ಷೆಯ ಅಥವಾ ಸಿಬಿಎಸ್‌ಸಿ ಅಥವಾ ಐಸಿಎಸ್‌ಇ ಯವರು ನಡೆಸುವ 12ನೇ ತರಗತಿ ಪರೀಕ್ಷೆಯ ತರುವಾಯದ ಅಥವಾ ಯಾವುದೇ ಡಿಪ್ಲೊಮೊ ಕೋರ್ಸುಗಳ ತರುವಾಯದ ಮುಂದಿನ ವ್ಯಾಸಂಗಗಳು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10) 61ನೇ ಪ್ರಕರಣದ (2)ನೇ ಉಪ ಪ್ರಕರಣವು, ಅಧಿಭೋಗದಾರನಿಗೆ, ಭೂಮಿಯ ಅಭಿವೃದ್ಧಿಗಾಗಿ ಅಥವಾ ಬೇಸಾಯ ವಿಧಾನಗಳನ್ನು ಉತ್ತಮಗೊಳಿಸುವುದಕ್ಕಾಗಿ, ಭೂಮಿಯಲ್ಲಿರುವ ತನ್ನ ಹಿತಾಸಕ್ತಿಯ ಮೇಲೆ ಸಾಲ ತೆಗೆದುಕೊಳ್ಳುವುದಕ್ಕೆ ಅಥವಾ ಪ್ರಭಾರವನ್ನು ಸೃಜಿಸುವುದಕ್ಕೆ ಅವಕಾಶ ನೀಡುತ್ತದೆ. ಮಾಲೀಕರು ತಮ್ಮ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಜಮೀನನ್ನು ಅಡಮಾನ ಮಾಡಿ ಸಾಲ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವಂತೆ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತಾವಿತ ಕ್ರಮವು ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ

ಜಿ. ಕರುಣಾಕರ ರೆಡ್ಡಿ
ಕಂದಾಯ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10)

ಉದ್ಧೃತ ಭಾಗ.

xx xx xx

61. ಗೇಣಿದಾರನು ಅಧಿಭೋಗದಾರನಾಗಿರುವ ಭೂಮಿಯ ವರ್ಗಾವಣೆಗೆ ನಿರ್ಬಂಧ.–

(1) xx xx xx

(2) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಹಾಗೆ ನೋಂದಾಯಿತ ಅಧಿಭೋಗದಾರನು ಅಥವಾ ಅವನ ಹಕ್ಕಿನ ಉತ್ತರಾಧಿಕಾರಿಯು ಭೂಮಿಯ ಅಭಿವೃದ್ಧಿ ಅಥವಾ ಬೇಸಾಯ ವಿಧಾನ ಗಳನ್ನು ಉತ್ತಮಗೊಳಿಸುವ ಬಗ್ಗೆ ರಾಜ್ಯ ಸರ್ಕಾರ ಹಣಕಾಸು ಸಂಸ್ಥೆ, ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕು, ಒಂದು ಸಹಕಾರ ಸಂಘ ಅಥವಾ ಕಂಪೆನಿಗಳ ಅಧಿನಿಯಮದ 1956ರ 3ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಶೇಕಡ ಐವತ್ತೊಂದಕ್ಕೆ ಕಡಿಮೆ ಇಲ್ಲದಷ್ಟು ಸಂದಾಯವಾದ ಷೇರು ಬಂಡವಾಳವನ್ನು ರಾಜ್ಯ ಸರ್ಕಾರವು ಹೊಂದಿರುವ ಕಂಪೆನಿ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಅವೆರಡರ ಒಡೆತನ ಅಥವಾ ನಿಯಂತ್ರಣವಿರುವ ನಿಗಮದಿಂದ ಸಾಲ ತೆಗೆದುಕೊಳ್ಳುವುದು ಮತ್ತು ಭೂಮಿಯಲ್ಲಿರುವ ತನ್ನ ಹಿತಾಸಕ್ತಿಯನ್ನು ಅಡಮಾನ ಮಾಡುವುದು ಅಥವಾ ಅದರ ಮೇಲೆ ಪ್ರಭಾರವನ್ನು ಸೃಜಿಸುವುದು ವಿಧಿಬದ್ಧವಾಗಿರತಕ್ಕದ್ದು ಮತ್ತು ಅಂಥ ಸಾಲವನ್ನು ಯಾವ ನಿಬಂಧನೆ ಮತ್ತು ಷರತ್ತುಗಳ ಮೇಲೆ ಮಂಜೂರು ಮಾಡಲಾಯಿತೋ ಅವುಗಳಿಗನುಸಾರವಾಗಿ ಅಂಥ ಸಾಲವನ್ನು ಸಂದಾಯ ಮಾಡಲು ತಪಿದ್ದರೆ ಯಾವುದೇ ವಿಧಿಯಲ್ಲಿ ಉಪಬಂಧಿತವಾದ ಇತರ ಯಾವುದೇ ಕ್ರಮೋಪಾಯಕ್ಕೆ ಪ್ರತಿಕೂಲವಾಗದಂತೆ ಭೂಮಿಗಳಲ್ಲಿರುವ

ಅವನ ಹಿತಾಸಕ್ತಿಯನ್ನು ಜಪ್ತಿ ಮತ್ತು ಮಾರಾಟ ಮಾಡಿಸುವುದು ಮತ್ತು ಅದರ ಉತ್ಪತ್ತಿಯನ್ನು ಅಂಥ ಸಾಲದ ಸಂದಾಯಕ್ಕೆ ಉಪಯೋಗಿಸುವುದು ವಿಧಿಬದ್ಧವಾಗಿರತಕ್ಕದ್ದು.

XX XX XX

ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತಾವಿತ ಕ್ರಮವು ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ

ಜಿ. ಕರುಣಾಕರ ರೆಡ್ಡಿ
ಕಂದಾಯ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10)

ಉದ್ಧೃತ ಭಾಗ.

xx xx xx

61. ಗೇಣಿದಾರನು ಅಧಿಭೋಗದಾರನಾಗಿರುವ ಭೂಮಿಯ ವರ್ಗಾವಣೆಗೆ ನಿರ್ಬಂಧ.-

(1) xx xx xx

(2) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಹಾಗೆ ನೋಂದಾಯಿತ ಅಧಿಭೋಗದಾರನು ಅಥವಾ ಅವನ ಹಕ್ಕಿನ ಉತ್ತರಾಧಿಕಾರಿಯು ಭೂಮಿಯ ಅಭಿವೃದ್ಧಿ ಅಥವಾ ಬೇಸಾಯ ವಿಧಾನ ಗಳನ್ನು ಉತ್ತಮಗೊಳಿಸುವ ಬಗ್ಗೆ ರಾಜ್ಯ ಸರ್ಕಾರ ಹಣಕಾಸು ಸಂಸ್ಥೆ, ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕು, ಒಂದು ಸಹಕಾರ ಸಂಘ ಅಥವಾ ಕಂಪೆನಿಗಳ ಅಧಿನಿಯಮದ 1956ರ 3ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಶೇಕಡ ಐವತ್ತೊಂದಕ್ಕೆ ಕಡಿಮೆ ಇಲ್ಲದಷ್ಟು ಸಂದಾಯವಾದ ಷೇರು ಬಂಡವಾಳವನ್ನು ರಾಜ್ಯ ಸರ್ಕಾರವು ಹೊಂದಿರುವ ಕಂಪೆನಿ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಅವೆರಡರ ಒಡೆತನ ಅಥವಾ ನಿಯಂತ್ರಣವಿರುವ ನಿಗಮದಿಂದ ಸಾಲ ತೆಗೆದುಕೊಳ್ಳುವುದು ಮತ್ತು ಭೂಮಿಯಲ್ಲಿರುವ ತನ್ನ ಹಿತಾಸಕ್ತಿಯನ್ನು ಅಡಮಾನ ಮಾಡುವುದು ಅಥವಾ ಅದರ ಮೇಲೆ ಪ್ರಭಾರವನ್ನು ಸೃಜಿಸುವುದು ವಿಧಿಬದ್ಧವಾಗಿರತಕ್ಕದ್ದು ಮತ್ತು ಅಂಥ ಸಾಲವನ್ನು ಯಾವ ನಿಬಂಧನೆ ಮತ್ತು ಷರತ್ತುಗಳ ಮೇಲೆ ಮಂಜೂರು ಮಾಡಲಾಯಿತೋ ಅವುಗಳಿಗನುಸಾರವಾಗಿ ಅಂಥ ಸಾಲವನ್ನು ಸಂದಾಯ ಮಾಡಲು ತಪಿದರೆ ಯಾವುದೇ ವಿಧಿಯಲ್ಲಿ ಉಪಬಂಧಿತವಾದ

ಇತರ ಯಾವುದೇ ಕ್ರಮೋಪಾಯಕ್ಕೆ ಪ್ರತಿಕೂಲವಾಗದಂತೆ ಭೂಮಿಗಳಲ್ಲಿರುವ ಅವನ ಹಿತಾಸಕ್ತಿಯನ್ನು ಜಪ್ತಿ ಮತ್ತು ಮಾರಾಟ ಮಾಡಿಸುವುದು ಮತ್ತು ಅದರ ಉತ್ಪತ್ತಿಯನ್ನು ಅಂಥ ಸಾಲದ ಸಂದಾಯಕ್ಕೆ ಉಪಯೋಗಿಸುವುದು ವಿಧಿಬದ್ಧವಾಗಿರತಕ್ಕದ್ದು.

XX XX XX

ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತಾವಿತ ಕ್ರಮವು ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ

ಜಿ. ಕರುಣಾಕರ ರೆಡ್ಡಿ
ಕಂದಾಯ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10)
ಉದ್ಧೃತ ಭಾಗ.

xx xx xx

61. ಗೇಣಿದಾರನು ಅಧಿಭೋಗದಾರನಾಗಿರುವ ಭೂಮಿಯ ವರ್ಗಾವಣೆಗೆ ನಿರ್ಬಂಧ.–

(1) xx xx xx

(2) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಹಾಗೆ ನೋಂದಾಯಿತ ಅಧಿಭೋಗದಾರನು ಅಥವಾ ಅವನ ಹಕ್ಕಿನ ಉತ್ತರಾಧಿ ಕಾರಿಯು ಭೂಮಿಯ ಅಭಿವೃದ್ಧಿ ಅಥವಾ ಬೇಸಾಯ ವಿಧಾನ ಗಳನ್ನು ಉತ್ತಮಗೊಳಿಸುವ ಬಗ್ಗೆ ರಾಜ್ಯ ಸರ್ಕಾರ ಹಣಕಾಸು ಸಂಸ್ಥೆ, ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕು, ಒಂದು ಸಹಕಾರ ಸಂಘ ಅಥವಾ ಕಂಪೆನಿಗಳ ಅಧಿನಿಯಮದ 1956ರ 3ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಶೇಕಡ ಐವತ್ತೊಂದಕ್ಕೆ ಕಡಿಮೆ ಇಲ್ಲದಷ್ಟು ಸಂದಾಯವಾದ ಷೇರು ಬಂಡವಾಳವನ್ನು ರಾಜ್ಯ ಸರ್ಕಾರವು ಹೊಂದಿರುವ ಕಂಪೆನಿ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಅವೆರಡರ ಒಡೆತನ ಅಥವಾ ನಿಯಂತ್ರಣವಿರುವ ನಿಗಮದಿಂದ ಸಾಲ ತೆಗೆದುಕೊಳ್ಳುವುದು ಮತ್ತು ಭೂಮಿಯಲ್ಲಿರುವ ತನ್ನ ಹಿತಾಸಕ್ತಿಯನ್ನು ಅಡಮಾನ ಮಾಡುವುದು ಅಥವಾ ಅದರ ಮೇಲೆ ಪ್ರಭಾರವನ್ನು ಸೃಜಿಸುವುದು ವಿಧಿಬದ್ಧವಾಗಿರತಕ್ಕದ್ದು ಮತ್ತು ಅಂಥ ಸಾಲವನ್ನು ಯಾವ ನಿಬಂಧನೆ ಮತ್ತು ಷರತ್ತುಗಳ ಮೇಲೆ ಮಂಜೂರು ಮಾಡಲಾಯಿತೋ ಅವುಗಳಿಗನುಸಾರವಾಗಿ ಅಂಥ ಸಾಲವನ್ನು ಸಂದಾಯ ಮಾಡಲು ತಪ್ಪಿದ್ದರೆ ಯಾವುದೇ ವಿಧಿಯಲ್ಲಿ ಉಪಬಂಧಿತವಾದ ಇತರ

ಯಾವುದೇ ಕ್ರಮೋಪಾಯಕ್ಕೆ ಪ್ರತಿಕೂಲವಾಗದಂತೆ ಭೂಮಿಗಳಲ್ಲಿರುವ ಅವನ ಹಿತಾಸಕ್ತಿಯನ್ನು ಜಪ್ತಿ ಮತ್ತು ಮಾರಾಟ ಮಾಡಿಸುವುದು ಮತ್ತು ಅದರ ಉತ್ಪತ್ತಿಯನ್ನು ಅಂಥ ಸಾಲದ ಸಂದಾಯಕ್ಕೆ ಉಪಯೋಗಿಸುವುದು ವಿಧಿಬದ್ಧವಾಗಿರತಕ್ಕದ್ದು.

xx xx xx

ಕರ್ನಾಟಕ ವಿಧಾನಸಭೆ
ಸೋಮವಾರ, 28ನೇ ಜೂನ್ 2010 ರಂದು
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಮಧ್ಯಾಹ್ನ 12 ಗಂಟೆ 30
ನಿಮಿಷಗಳಿಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯರವರು ಪೀಠವನ್ನು ಅಲಂಕರಿಸಿದರು.

1. ಸಂತಾಪ ಸೂಚನೆ :

ಮಾನ್ಯ ಸಭಾಧ್ಯಕ್ಷರು :

ವಿಧಾನಸಭೆಯ ಹಾಲಿ ಸದಸ್ಯರಾಗಿದ್ದ ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ, ಮಾಜಿ ಉಪರಾಷ್ಟ್ರಪತಿಯಾಗಿದ್ದ ಶ್ರೀ ಬೈರೋನ್ ಸಿಂಗ್ ಶೆಖಾವತ್, ಮಾಜಿ ಸದಸ್ಯರುಗಳಾಗಿದ್ದ ಶ್ರೀ ಹನುಮಂತರಾವ್ ದೇಸಾಯಿ, ಶ್ರೀ ಅಂದಾನಪ್ಪ, ಶ್ರೀ ಎ.ದೊಣ್ಣೇಗೌಡ, ಸಂಸತ್ ಮಾಜಿ ಸದಸ್ಯರಾದ ಶ್ರೀ ನಾನಾಜಿ ದೇಶಮುಖ್ ಹಿರಿಯ ಪತ್ರಕರ್ತರಾಗಿದ್ದ ಶ್ರೀ ಸುರೇಂದ್ರ ದಾನಿ, ಶ್ರೀ ಸುಬ್ರಾಯ್ ನಾರಾಯಣ್ ಮಲ್ಯ, ವಿಶ್ವವಿಖ್ಯಾತ ಬರಹಗಾರರಾದ ಶ್ರೀ ಮನೋಹರ್ ಮಾಳಗಾವಂಕರ್ ಮತ್ತು ಜೈನ ಮುನಿ ಶ್ರೀ ಮಹಾ ಪ್ರಜ್ಞಾಜಿ ಹಾಗೂ ಮಂಗಳೂರಿನ ವಿಮಾನ ನಿಲ್ದಾಣದಲ್ಲಿ ಸಂಭವಿಸಿದ ವಿಮಾನ ಅಪಘಾತದಲ್ಲಿ 158 ಜನ ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ್

ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ್ ಅವರು 1958 ರ ಜನವರಿ 26 ರಂದು ವಿಜಾಪುರದಲ್ಲಿ ಜನಿಸಿದ್ದು, ಡಿ.ಫಾರ್ಮ ವರೆಗೆ ವ್ಯಾಸಂಗ ಮಾಡಿದ್ದಲ್ಲದೆ, ವೃತ್ತಿಯಲ್ಲಿ ವ್ಯಾಪಾರಸ್ಥರಾಗಿದ್ದರು. 1998 ರಿಂದ 2001 ರವರೆಗೆ ಗುಲ್ಬರ್ಗಾ ನಗರ ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 2004-2007ರ ಅವಧಿಗೆ ಬಿ.ಜೆ.ಪಿ. ಪಕ್ಷದಿಂದ ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆಯಾಗಿದ್ದರಲ್ಲದೆ 2008 ರಲ್ಲಿ ಎರಡನೇ ಅವಧಿಗೆ ಗುಲ್ಬರ್ಗಾ ದಕ್ಷಿಣ ಕ್ಷೇತ್ರದಿಂದ ಮರು ಆಯ್ಕೆಗೊಂಡಿದ್ದರು.

ಶ್ರೀಯುತರು ದಿನಾಂಕ: 14.04.2010 ರಂದು ನಿಧನ ಹೊಂದಿದರು.

2. ಶ್ರೀ ಬೈರೋನ್ ಸಿಂಗ್ ಶೆಖಾವತ್,

ಶ್ರೀ ಬೈರೋನ್ ಸಿಂಗ್ ಶೇಖಾವತ್, ಅವರು 23ನೇ ಅಕ್ಟೋಬರ್ 1923 ರಂದು ರಾಜಸ್ಥಾನ ರಾಜ್ಯದ ಸಿಕಾರ್ ಜಿಲ್ಲೆಯ ಖಚಾರಿಯಾವಸ್ ಗ್ರಾಮದಲ್ಲಿ ಜನಿಸಿದ್ದರು. ಬಾಲ್ಯದಲ್ಲಿಯೆ ತಂದೆಯನ್ನು ಕಳೆದುಕೊಂಡು ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿ ಪೊಲೀಸ್ ಇಲಾಖೆಗೆ ಸೇರ್ಪಡೆಗೊಂಡು, 1948 ರಲ್ಲಿ ಸಬ್‌ಇನ್ಸ್‌ಪೆಕ್ಟರ್ ಹುದ್ದೆಗೆ ಬಡ್ತಿ ಪಡೆದಿದ್ದರು. ತರುವಾಯ 1952 ರಲ್ಲಿ ಜನಸಂಘದ ಅಭ್ಯರ್ಥಿಯಾಗಿ ಮೊದಲ ಬಾರಿಗೆ ವಿಧಾನಸಭೆಗೆ ಪ್ರವೇಶಿಸಿದ ಶ್ರೀಯುತರು ಐದು ದಶಕಗಳ ಕಾಲ ಸಕ್ರಿಯ

ರಾಜಕಾರಣದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. 1977–1980, 1990–1992 ಮತ್ತು 1993–1998ರಲ್ಲಿ ಮೂರು ಬಾರಿ ರಾಜಸ್ಥಾನದ ಮುಖ್ಯಮಂತ್ರಿಯಾಗಿದ್ದರು. 1974ರಲ್ಲಿ ರಾಜ್ಯಸಭೆಗೂ ಸಹ ಆಯ್ಕೆಯಾಗಿ ಕಾರ್ಯನಿರ್ವಹಿಸಿರುತ್ತಾರಲ್ಲದೆ, 2002 ರಿಂದ 2007 ರವರೆಗೆ ಭಾರತದ ಹನ್ನೆರಡನೇ ಉಪರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ತಮ್ಮ ರಾಜಕೀಯ ಜೀವನದಲ್ಲಿ ಎಲ್ಲಾ ಪಕ್ಷದ ನಾಯಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರಲ್ಲದೆ, ಅಜಾತಶತ್ರು ಎನಿಸಿಕೊಂಡಿದ್ದರಲ್ಲದೆ ಶ್ರೀಯುತರ ಅಭಿಮಾನಿಗಳು ಶ್ರೀ ಶೇಖಾವತ್ ರವರನ್ನು "ಬೈರೋನ್ ಬಾಬ" ಎಂದು ಕರೆಯುತ್ತಿದ್ದರು.

ಶ್ರೀಯುತರು ದಿನಾಂಕ: 15.05.2010 ರಂದು ನಿಧನ ಹೊಂದಿದರು.

3. ಶ್ರೀ ಹನುಮಂತರಾವ್ ದೇಸಾಯಿ,

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಹನುಮಂತರಾವ್ ದೇಸಾಯಿ, ಅವರು 1934 ರ ಮೇ 8 ರಂದು ಗುಲ್ಬರ್ಗಾ ಜಿಲ್ಲೆಯ ಅಫ್‌ಜಲ್‌ಪುರ ತಾಲ್ಲೂಕಿನ ಹಿರೇ ಜೇವರ್ಗಿಯಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು, ವೃತ್ತಿಯಲ್ಲಿ ನ್ಯಾಯವಾದಿಯಾಗಿದ್ದರಲ್ಲದೆ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದರು ಮತ್ತು ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನವನ್ನು ಕಲ್ಪಿಸುವ 371 ನೇ ಕಲಂ ತಿದ್ದುಪಡಿಗಾಗಿ ನಡೆದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ವಿದ್ಯಾರ್ಥಿ ದೆಸೆಯಿಂದಲೇ ಸಾರ್ವಜನಿಕ ಹೋರಾಟಗಳಲ್ಲಿ ಸಕ್ರಿಯರಾಗಿದ್ದ ಶ್ರೀಯುತರು 1983 ರಲ್ಲಿ 7ನೇ ವಿಧಾನಸಭೆಗೆ ಅಫ್‌ಜಲ್‌ಪುರ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ: 07.04.2010 ರಂದು ನಿಧನ ಹೊಂದಿದರು.

4. ಶ್ರೀ ಸಿ. ಅಂದಾನಪ್ಪ,

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಅಂದಾನಪ್ಪ, ಅವರು ಅವಿವಾಹಿತರಾಗಿದ್ದರಲ್ಲದೆ, ವೃತ್ತಿಯಲ್ಲಿ ಉದ್ಯಮಿಯಾಗಿದ್ದರು, ಶ್ರೀಯುತರು ಕೊಟ್ಟೂರಿನ ಎಪಿಎಂಸಿ ಮತ್ತು ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು 1972–1978ರ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಹಡಗಲಿ 5ನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ: 09.04.2010 ರಂದು ನಿಧನ ಹೊಂದಿದರು.

5. ಶ್ರೀ ಎ. ದೊಡ್ಡೇಗೌಡ

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎ.ದೊಡ್ಡೇಗೌಡ ಅವರು 1930 ರಲ್ಲಿ ಹಾಸನ ಜಿಲ್ಲೆಯ ಹೊಳೇನರಸೀಪುರ ತಾಲ್ಲೂಕಿನ ಅಣ್ಣೆಚಾಕನಹಳ್ಳಿಯಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರು ಹಾಗೂ ಸಮಾಜ ಸೇವಕರಾಗಿದ್ದರು. ಶ್ರೀಯುತರು ಹಲವಾರು ಸಂಘ ಸಂಸ್ಥೆಗಳ ನಿರ್ದೇಶಕರಾಗಿ, ಅಧ್ಯಕ್ಷರಾಗಿ ಮತ್ತು ತಾಲ್ಲೂಕು ಪಂಚಾಯ್ತಿ ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರಾಗಿ, ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ. 1986–1992ರ ಅವಧಿಗೆ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು ಹಾಗೂ 1999ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ 11ನೇ ವಿಧಾನಸಭೆಗೆ ಹೊಳೆನರಸೀಪುರ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ: 11.06.2010 ರಂದು ನಿಧನ ಹೊಂದಿದರು.

6. ನಾನಾಜಿ ದೇಶ್ ಮುಖ್

ರಾಜ್ಯ ಸಭಾ ಮಾಜಿ ಸದಸ್ಯರಾದ ಶ್ರೀ ನಾನಾಜಿ ದೇಶ್‌ಮುಖ್ ರವರು 11ನೇ ಅಕ್ಟೋಬರ್ 1961 ರಲ್ಲಿ ಮಹಾರಾಷ್ಟ್ರ ರಾಜ್ಯದ ಪರ್ಬಾನಿ ಜಿಲ್ಲೆಯ ಕಡೊಲಿಯಲ್ಲಿ ಜನಿಸಿದ್ದು, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಆಳವಾಗಿ ಅಧ್ಯಯನ ಮಾಡಿದ್ದರಲ್ಲದೆ ಚಿತ್ರಕೂಟದಲ್ಲಿ ಗ್ರಾಮೋದ್ಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದರು. ಶ್ರೀಯುತರು 1999 ರಿಂದ 2005 ರ ಅವಧಿಯಲ್ಲಿ ರಾಜ್ಯಸಭೆಗೆ ನಾಮನಿರ್ದೇಶಿತ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ: 26.02.2010 ರಂದು ನಿಧನ ಹೊಂದಿದರು.

7. ಶ್ರೀ ಸುರೇಂದ್ರ ದಾನಿ,

ಶ್ರೀ ಸುರೇಂದ್ರ ದಾನಿ ಅವರು 17ನೇ ಆಗಸ್ಟ್ 1925 ರಲ್ಲಿ ಜನಿಸಿದ್ದು, ಬಿ.ಎ ಪದವೀಧರರಾಗಿದ್ದರು, ವಿದ್ಯಾರ್ಥಿದೆಸೆಯಿಂದಲೆ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಶ್ರೀ ದಾನಿಯವರು 'ಚಲೇಜಾವ್' ಚಳುವಳಿ ಯಲ್ಲಿಯೂ ಸಹ ಭಾಗವಹಿಸಿದ್ದರು. 1947 ರಲ್ಲಿ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ವರದಿಗಾರರಾಗಿ ಕಾರ್ಯ ಆರಂಭಿಸಿ, ಮುಂದೆ ಅದೇ ಪತ್ರಿಕೆಯ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದರು. ಶ್ರೀಯುತರು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಶ್ರೀಯುತರು ದಿನಾಂಕ: 28.03.2010ರಂದು ನಿಧನ ಹೊಂದಿದರು.

8. ಶ್ರೀ ಸುಬ್ರಾಯ್ ನಾರಾಯಣ್ ಮಲ್ಯ

ಶ್ರೀ ಸುಬ್ರಾಯ್ ನಾರಾಯಣ್ ಮಲ್ಯ, ಅವರು 1927 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳುವಾಯಿಯಲ್ಲಿ ಜನಿಸಿದ್ದರು. ಮೂಲತಃ ಕೆನರಾ ಬ್ಯಾಂಕಿನ ಉದ್ಯೋಗಿಯಾಗಿದ್ದ ಶ್ರೀಯುತರು 'ವಿಕ್ರಮ ಪತ್ರಿಕೆ'ಯ ಸಂಪಾದಕರಾಗಿ ಸೇವೆ ಸಲ್ಲಿಸಿದ್ದರಲ್ಲದೆ ಹಿರಿಯ ಪತ್ರಕರ್ತರೂ ಆಗಿದ್ದರು. 1977 ರಲ್ಲಿನ "ತುರ್ತು ಪರಿಸ್ಥಿತಿ"ಯ ಸಂದರ್ಭದಲ್ಲಿ ಸೆರೆಮನೆವಾಸ ಅನುಭವಿಸಿದ್ದರು. ಶ್ರೀಯುತರು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಶ್ರೀಯುತರು ದಿನಾಂಕ: 01.04.2010 ರಂದು ನಿಧನ ಹೊಂದಿದರು.

9. ಶ್ರೀ ಮನೋಹರ್ ಮಾಳಗಾವಂಕರ್

ಶ್ರೀ ಮನೋಹರ್ ಮಾಳಗಾವಂಕರ್ ಅವರು ವಿಶ್ವವಿಖ್ಯಾತ ಬರಹಗಾರರು ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾಗಿದ್ದರು. ನಿವೃತ್ತ ಸೈನಿಕರಾಗಿದ್ದ ಶ್ರೀಯುತರು ದೇಶಾಭಿಮಾನ ಹಾಗೂ ರಾಷ್ಟ್ರಪ್ರೇಮದ ಭಾವನೆಯನ್ನು ತಮ್ಮ ಬರಹಗಳ ಮೂಲಕ ಜನರಿಗೆ ನೀಡುತ್ತಿದ್ದ ಕ್ರಾಂತಿಕಾರಿ ಬರಹಗಾರರಾಗಿದ್ದರು.

ಶ್ರೀಯುತರು ದಿನಾಂಕ: 14.06.2010 ರಂದು ನಿಧನ ಹೊಂದಿದರು.

10. ಶ್ರೀ ಮಹಾ ಪ್ರಜ್ಞಾಜೀ

ಕಾಲ್ನಡಿಗೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮೈಲು ದೂರವನ್ನು ಕ್ರಮಿಸಿ ರಾಷ್ಟ್ರವ್ಯಾಪ್ತಿ ಅಹಿಂಸಾ ತತ್ವವನ್ನು ಪ್ರಚಾರ ಮಾಡಿದ ಮತ್ತು ಹೆಣ್ಣು ಭ್ರೂಣ ಹತ್ಯೆ ಮಹಾ ಪಾತಕದ ವಿರುದ್ಧ ರಾಷ್ಟ್ರವ್ಯಾಪ್ತಿ ಮಹಿಳೆಯರನ್ನು ಜಾಗೃತಿಗೊಳಿಸಿದ ಹಾಗೂ "ಪರಸ್ಪರೋಪಗ್ರಹೋ ಜೀವಾಣಾಂ" ಎಂಬಂತೆ ತಾನು ಬದುಕಿ ಇತರರನ್ನು ಬದುಕಗೊಡಬೇಕೆನ್ನುವ ಭಗವಾನ್ ಮಹಾವೀರರ ಆದರ್ಶ ತತ್ವವನ್ನು ಪ್ರಚಾರ ಮಾಡಿ ಜನಜಾಗೃತಿ ಮೂಡಿಸಿದ ಶ್ರೀ ಮಹಾ ಪ್ರಜ್ಞಾಜೀಯವರು ಮಹಾನ್ ದಾರ್ಶನಿಕರಾಗಿದ್ದರು.

ಶ್ರೀಯುತರು ದಿನಾಂಕ: 09.05.2010 ರಂದು ನಿಧನ ಹೊಂದಿದರು.

11. ದುಬೈನ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನವು ದಿನಾಂಕ: 22.05.2010 ರಂದು ಬೆಳಿಗ್ಗೆ 6.30 ಗಂಟೆಗೆ ಮಂಗಳೂರಿನ ಬಜ್ಪೆ ವಿಮಾನ ನಿಲ್ದಾಣದಲ್ಲಿ ಸಂಭವಿಸಿದ ಭೀಕರ ಅಪಘಾತದಿಂದಾಗಿ, ವಿಮಾನದಲ್ಲಿದ್ದ 166 ಜನರ ಪೈಕಿ

158 ಅಮಾಯಕ ಜನರು ದುರ್ಮರಣಕ್ಕೀಡಾಗಿ ಸಾವನ್ನಪ್ಪಿದವರಿಗೆ ಈ ಸದನವು ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಮಾನ್ಯ ಸದಸ್ಯರು ಒಂದು ನಿಮಿಷ ಮೌನವನ್ನು ಆಚರಿಸಿದರು)

ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಲಾಗುವುದು.

* * * * * * * * *

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇದೇ ಸದನ ಮಾರ್ಚ್ ತಿಂಗಳಲ್ಲಿ ಜರುಗಿದ ರಾಜ್ಯ ವಿಧಾನ ಮಂಡಲದ ಅಧಿವೇಶನ ಮತ್ತು ಈ ಅಧಿವೇಶನದ ನಡುವಿನ ಅವಧಿಯಲ್ಲಿ ಹಲವು ಗಣ್ಯರು ನಮ್ಮನ್ನು ಅಗಲಿದ್ದಾರೆ. ನಮ್ಮಿಂದ ಕಣ್ಮರೆಯಾದ ಗಣ್ಯರು ಹಾಗೂ ಮಂಗಳೂರು ವಿಮಾನ ನಿಲ್ದಾಣದ ದುರಂತದಲ್ಲಿ ಮಡಿದವರು ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಮಡಿದ ಗಣ್ಯರ ಸ್ಮರಣಾರ್ಥ ತಾವು ಮಂಡಿಸಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಧ್ವನಿಯನ್ನು ಸೇರಿಸುತ್ತಿದ್ದೇನೆ. ಬೈರೋನ್ ಸಿಂಗ್ ಶೇಖಾವತ್ ರಾಷ್ಟ್ರದ ಎರಡನೇ ಅತ್ಯುನ್ನತ ಹುದ್ದೆಯಾದ ಉಪರಾಷ್ಟ್ರಪತಿಯಾಗಿ ಅದಕ್ಕೂ ಮುನ್ನ ರಾಜಸ್ಥಾನದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ಹಿರಿಯ ನಾಯಕರು ನಮ್ಮನ್ನು ಅಗಲಿದ್ದಾರೆ. ಇವರು ಒಬ್ಬ ವಿಶಿಷ್ಟ ಜನನಾಯಕರಾಗಿದ್ದರು. ಸಾರ್ವಜನಿಕ ಜೀವನದಲ್ಲಿ ಅಜಾತ ಶತ್ರು ಎಂದೇ ಗೌರವಕ್ಕೆ ಪಾತ್ರರಾಗಿದ್ದರು. ದಿ: 23-10-1923 ರಂದು ರಾಜಸ್ಥಾನದ ಗ್ರಾಮವೊಂದರಲ್ಲಿ ಜನಿಸಿದ ಇವರು ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡಿದ್ದರಿಂದ ವಿದ್ಯಾಭ್ಯಾಸ ವನ್ನು ಮೊಟಕುಗೊಳಿಸಿ ಸರ್ಕಾರಿ ಸೇವೆಗೆ ಸೇರಿ ಪೋಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಇವರು 1952 ರಲ್ಲಿ ಜನಸಂಘದ ಅಭ್ಯರ್ಥಿಯಾಗಿ ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆಯಾದ ಇವರು 5 ದಶಕಗಳ ಕಾಲ ಸಕ್ರೀಯ ರಾಜಕಾರಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. 1977-1980,

O.32 F-82

1990–1992, 1993–1998 ರಲ್ಲಿ ಮೂರು ಭಾರಿ ರಾಜಸ್ಥಾನದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ಜನಪ್ರಿಯತೆಗೆ ಸಾಕ್ಷಿಯಾಗಿ 1974 ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿದ್ದ ಇವರು 2002–2007 ರವರೆಗೆ ನಮ್ಮ ರಾಷ್ಟ್ರದ 12ನೇ ಉಪರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದರು. ಮೌಲ್ಯಾಧಾರಿತ ರಾಜಕಾರಣಿಯೆಂದೆ ಗೌರವಿಸಲ್ಪಡುವಂಥ ಇವರು ತಮ್ಮ 5 ದಶಕಗಳ ರಾಜಕಾರಣದಲ್ಲಿ ಎಲ್ಲ ಪಕ್ಷಗಳಲ್ಲೂ ತಮ್ಮ ಆತ್ಮೀಯ ಸ್ನೇಹಿತರನ್ನು ಹೊಂದಿರುವಂಥದ್ದು ನಿಜಕ್ಕೂ ನಾವು ಶ್ಲಾಘನೆ ಮಾಡಬೇಕಾದಂಥ ಸಂಗತಿ. ಯಾವುದೇ ರಾಜಕೀಯ ಪಕ್ಷದಲ್ಲಿ ಇರಲಿ ಎಲ್ಲರ ಜೊತೆಗೆ ನಿಕಟ ಸಂಬಂಧವನ್ನು ಇಟ್ಟುಕೊಂಡು ಅನೇಕ ನುರಿತ ರಾಜಕಾರಣಿಗಳು ಸಹ ಅವರಲ್ಲಿ ಬಂದು ಸಲಹೆ ಸಹಕಾರಗಳನ್ನು ಪಡೆದುಕೊಂಡು ಹೋಗುತ್ತಿರುವಂಥದು ನಾವು ಗಮನಿಸಬೇಕಾದ ಅಂಶ. ವಿಶೇಷವಾಗಿ ಉಪ ರಾಷ್ಟ್ರಪತಿಯಾಗಿ ಮತ್ತು ಪದನಿಮಿತ್ತ ರಾಜ್ಯಸಭೆಯ ಸಭಾಪತಿಗಳಾಗಿ ತಮ್ಮ ನಿಷ್ಪಕ್ಷಪಾತದ ನಡೆ ನುಡಿಯಿಂದ ಆಡಳಿತ ಮತ್ತು ವಿರೋಧ ಪಕ್ಷಗಳ ಎಲ್ಲಾ ಸದಸ್ಯರ ಒಂದು ಮೆಚ್ಚುಗೆಯನ್ನು ಅವರು ಸಂಪಾದನೆ ಮಾಡಿದ್ದರು. ರಾಜಕೀಯ ವರಸೆಗಳೆಲ್ಲವನ್ನು ಕರಗತ ಮಾಡಿಕೊಂಡಿದ್ದ ಇವರನ್ನು ಅವರ ಅಭಿಮಾನಿಗಳು ಬೈರೋನ್ ಬಾಬಾ ಎಂದು ಹೇಳಿ ಕರೆಯುತ್ತಿದ್ದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಸರಳ ಹಾಗೂ ನೇರ ಬದುಕಿನ ತತ್ವವಾದ ನಾಯಕರಾಗಿದ್ದಂಥ ಇವರ ನಿಧನದಿಂದ ಒಬ್ಬ ದೊಡ್ಡ ನಾಯಕರನ್ನು ಕಳೆದುಕೊಂಡಂತಾಗಿದೆ. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇನೆ.

ನಮ್ಮ ಜೊತೆಯಲ್ಲಿಯೆ ಇದ್ದಂಥ ಮಾನ್ಯ ಚಂದ್ರಶೇಖರ ಪಾಟೀಲ್ ರೇವೂರವರು ಬಿಜಾಪುರದಲ್ಲಿ ಜನಿಸಿ ವೃತ್ತಿಯಿಂದ ವ್ಯಾಪಾರಸ್ಥರಾಗಿ 1998–2001 ರವರೆಗೆ ಗುಲ್ಬರ್ಗಾ ಜಿಲ್ಲೆಯ ಭಾರತೀಯ ಜನತಾಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. 2004–2007ರ ಅವಧಿಗೆ ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿ ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆಯಾದರು. 2008ರಲ್ಲಿ ಎರಡನೇ ಅವಧಿಗೆ ಗುಲ್ಬರ್ಗಾ ದಕ್ಷಿಣ ಕ್ಷೇತ್ರದಿಂದ ಆಯ್ಕೆಯಾದರು. ದಿನಾಂಕ: 14.4.2010 ರಂದು ತಮ್ಮ 52ನೇ ವರ್ಷದಲ್ಲಿ ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರ ನಿಧನದಿಂದ ಒಬ್ಬ ಯುವ ನಾಯಕನನ್ನು ಆ ಭಾಗದ ಜನರು ಕಳೆದುಕೊಂಡಂತಾಗಿದೆ. ಅವರ

ನಿಧನದಿಂದ ಅವರ ಆತ್ಮಕ್ಕೆ ಶಾಂತಿಯನ್ನು ನೀಡಲೆಂದು ನಾನು ಆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ನಾನಾಜಿ ದೇಶಮುಖರವರು ಈ ದೇಶ ಕಂಡಂಥ ಅಪರೂಪದ ವ್ಯಕ್ತಿ, ತನ್ನನ್ನೆ ತಾನು ಸಮಾಜಕ್ಕೆ ಅರ್ಪಣೆ ಮಾಡಿಕೊಂಡಂಥ ಜೀವನವಿಡಿ ಸಮಾಜದ ಒಂದು ಚಟುವಟಿಕೆಗಳಲ್ಲಿ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಂಥ ನಾನಾಜಿ ದೇಶ್‌ಮುಖರವರು 26ನೇ ಫೆಬ್ರವರಿ 2010 ರಂದು ತಮ್ಮ 94ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಮಹಾರಾಷ್ಟ್ರದ ಪರ್ಬಾನಿ ಜಿಲ್ಲೆಯ ಕಡೂಲಿಯಲ್ಲಿ ಗ್ರಾಮದಲ್ಲಿ 1916ರ ಅಕ್ಟೋಬರ್ 11 ರಂದು ಜನಿಸಿದ ಇವರು ಬಹುಮುಖ ವ್ಯಕ್ತಿತ್ವನ್ನು ಪಡೆದಿದ್ದರು. ದೇಶಪ್ರೇಮ ಮತ್ತು ಸ್ವದೇಶಿ ಚಿಂತನೆಗಳಿಗೆ ಹಾಗೂ ರಚನಾತ್ಮಕವಾದ ಹೋರಾಟಗಳಿಗೆ ಹೆರಾಗಿದ್ದರು. 1999–2005 ರ ಅವಧಿಗೆ ರಾಜ್ಯಸಭೆಗೆ ನಾಮನಿರ್ದೇಶನ ಸದಸ್ಯರಾಗಿ ಮತ್ತು ಶಿಕ್ಷಣಕ್ಕೆ ವಿಶೇಷವಾದ ಆದ್ಯತೆಯನ್ನು ನೀಡಿ ಚಿತ್ರಕೂಟದಲ್ಲಿ ಗ್ರಾಮೋದ್ಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು. ಗ್ರಾಮೀಣ ವಿಕಾಸಕ್ಕೆ ಪೂರಕವಾದ ಚಟುವಟಿಕೆಗಳನ್ನು ಹಮ್ಮಿಕೊಂಡು ಚಿತ್ರಕೂಟದ ಬಗ್ಗೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸುಧಾರಣೆಯ ಒಂದು ಗಾಳಿ ಬೀಸಲು ಕಾರಣ ಕರ್ತರಾಗಿದ್ದರು. ಅವರ ನಿಧನದಿಂಧ ದೇಶಿ ಚಿಂತನೆಗಳ ಒಬ್ಬ ಪರಮೋಚ್ಚ ನಾಯಕರನ್ನು ಕಳೆದುಕೊಂಡಂತಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ನಾನು ಕೋರುತ್ತೇನೆ.

ಶ್ರೀ ಹನುಮಂತರಾವ್ ದೇಸಾಯಿಯವರು ದಿನಾಂಕ: 7.4.2010 ರಂದು ನಮ್ಮನ್ನು ಅಗಲಿದ್ದಾರೆ. ಇವರು ಹೈದ್ರಾಬಾದ್–ಕರ್ನಾಟಕ ಅಭಿವೃದ್ಧಿಗೆ ಸಂಬಂಧಪಟ್ಟಂಥ ಹೋರಾಟಗಳಲ್ಲಿ ಮುಖ್ಯವಾಗಿ ಸಂವಿಧಾನದ ಕಲಂ 371ನೇ ತಿದ್ದುಪಡಿಗಾಗಿ ನಡೆದ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡಿದ್ದರು. 1983ರಲ್ಲಿ ಅಫಜಲ್‌ಪುರ ವಿಧಾನಸಭೆಯ ಕ್ಷೇತ್ರವನ್ನು ಪ್ರತಿನಿಧಿಸಿ ಇವರು ಸ್ವತಃ ಪ್ರಸಿದ್ದ ವಕೀಲರಾಗಿದ್ದು, ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ದೇಸಾಯಿಯವರ ನಿಧನದಿಂದ ಒಬ್ಬ ಕ್ರೀಯಾಶೀಲ ಹೋರಾಟಗಾರ ಮತ್ತು ಜನಪರ ಕಾಳಜಿಯ ನಾಯಕನ್ನು ಕಳೆದುಕೊಂಡಂತಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ.

ಶ್ರೀ ಸಿ.ಅಂದಾನಪ್ಪನವರು ಕೊಟ್ಟೂರಿನ ಎಪಿಎಮ್‌ಸಿ ಮತ್ತು ಬಿಡಿಸಿಸಿಯ ಬ್ಯಾಂಕಿನ ಅಧ್ಯಕ್ಷರಾಗಿ ಜನಸೇವೆಯನ್ನು ಮಾಡಿದ್ದು 1972 ರಲ್ಲಿ ಹಡಗಲಿ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿ ಉತ್ತಮ ಕಾರ್ಯವನ್ನು

ನಿರ್ವಹಿಸಿದ್ದಾರೆ. ಕ್ಷೇತ್ರದ ಜನರ ಪಾಲಿಗೆ ಸದಾ ದೊರೆಯುತ್ತಿದ್ದ ಅಂದಾನಪ್ಪನವರು ಒಬ್ಬ ಆದರ್ಶ ಉದ್ಯಮಿಯಾಗಿದ್ದರು. 2010ರ ಏಪ್ರಿಲ್ 9 ರಂದು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಭಗವಂತನ್ನು ಶಾಂತಿಯನ್ನು ಕೊಡಲೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀಯುತ ಎ.ದೊಡ್ಡೇಗೌಡರವರು ಹಾಸನ ಜಿಲ್ಲೆ ಹೊಳೆನರಸೀಪುರ ವಿಧಾನಸಭೆ ಕ್ಷೇತ್ರದಿಂದ 1999 ರಲ್ಲಿ ಆಯ್ಕೆಯಾಗಿದ್ದರು. ಅದಕ್ಕೂ ಮುನ್ನ 1996 ರಲ್ಲಿ ವಿಧಾನ ಪರಿಷತ್ತು ಸದಸ್ಯರಾಗಿ ದೊಡ್ಡೇಗೌಡರು ಸಮಾಜ ಸೇವಕರಾಗಿ ಅನುಕರಣೀಯವಾದ ಸೇವೆಯಲ್ಲಿ ಸಲ್ಲಿಸಿದ್ದಾರೆ. ವೃತ್ತಿಯಿಂದ ಕೃಷಿಕರಾಗಿದ್ದ ದೊಡ್ಡೇಗೌಡರು ಸ್ಥಳೀಯ ಸಂಘ ಸಂಸ್ಥೆಗಳಲ್ಲಿ ಕ್ರಿಯಾ ಶೀಲತೆಯ ಸೇವೆಯನ್ನು ಸಲ್ಲಿಸಿ ಜನಾನುರಾಗಿ ನಾಯಕರಾಗಿದ್ದರು. ದಿನಾಂಕ: 11-2-2010ರಲ್ಲಿ ನಿಧನರಾದ ಶ್ರೀಯುತ ದೊಡ್ಡೇಗೌಡರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀಯುತ ಸುರೇಂದ್ರ ದಾನಿಯವರು ನಾಡಿನ ಪ್ರಖ್ಯಾತ ಹಿರಿಯ ಪತ್ರಿಕೋದ್ಯಮಿಯಾಗಿದ್ದರು. ಇವರು ಸ್ವಾತಂತ್ರ್ಯ ಪೂರ್ವದಲ್ಲಿಯೆ ವಿದ್ಯಾರ್ಥಿ ಚಳುವಳಿಯಲ್ಲಿ ಹೋರಾಟ ಮಾಡಿ ತಮ್ಮನ್ನು ತಾವು ತೊಡಗಿಸಿಕೊಂಡು ಮುಂಚೂಣಿಯ ನಾಯಕರಾಗಿದ್ದರು. 1947 ರಲ್ಲಿ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ವರದಿಗಾರರಾಗಿ ಪತ್ರಿಕೋದ್ಯಮವನ್ನು ಪ್ರಾರಂಭಿಸಿದ ಅವರು ಅದೇ ಪತ್ರಿಕೆಯ ಅತ್ಯುನ್ನತ ಸ್ಥಾನದಲ್ಲಿ ಸಂಪಾದಕ ಹುದ್ದೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದರು. ಹಲವಾರು ಯುವ ಪತ್ರಿಕೋದ್ಯಮಿಗಳಿಗೆ ಮಾರ್ಗದರ್ಶನವನ್ನು ನೀಡಿದ್ದಾರೆ. ಶ್ರೀಯುತರು ದಿನಾಂಕ: 28.3.2010 ರಂದು ನಿಧನವಾದರು. ಅವರ ನಿಧನದಿಂದ ರಾಜ್ಯದ ಪತ್ರಿಕೋದ್ಯಮಿಯು ಒಬ್ಬ ಅನುಭವಿ ಮತ್ತು ಪತ್ರಕರ್ತನನ್ನು ಕಳೆದುಕೊಂಡಂತಾಗಿದೆ. ಇವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ.

ಶ್ರೀಯುತ ಸುಬ್ರಾಯ್ ನಾರಾಯಣ್ ಮಲ್ಯರವರು ದಿನಾಂಕ: 1.4.2010ರಂದು ನಮ್ಮನ್ನು ಅಗಲಿದ ಇನ್ನೊಬ್ಬ ಹಿರಿಯ ಪತ್ರಕರ್ತರಾಗಿದ್ದರು. ಅವರು ಮಲ್ಯ ಎಂದೇ ಚಿರಪರಿಚಿತರಾಗಿದ್ದರು. ಬೆಂಗಳೂರಿನಲ್ಲಿ ಇವರು ತಮ್ಮ ಜೀವನ ಪೂರ್ತಿ ವಿಕ್ರಮ ಪತ್ರಿಯಲ್ಲಿ ಇದ್ದು ತಮ್ಮ ಸೇವೆಯನ್ನು ಸಲ್ಲಿಸಿದರು. 1927 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳುವಾಯಿಯಲ್ಲಿ ಜನಿಸಿದ ಮಲ್ಯರವರು ಬ್ಯಾಂಕಿಂಗ್ ಸೇವೆಯಲ್ಲಿ ಕೂಡ ಉತ್ತಮ ಸೇವೆಯನ್ನು

ಮಾಡಿದ್ದರು. ದೇಶಪ್ರೇಮಿಯಾಗಿದ್ದಂಥ ಮಾನ್ಯ ಮಲ್ಯರವರು 1977 ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸೆರೆಮನೆ ವಾಸವನ್ನು ಅನುಭವಿಸಿದ್ದರು. ಇವರು ಬ್ಯಾಂಕಿಂಗ್‌ನಿಂದ ಹಿಡಿದು ಪತ್ರಿಕಾರಂಗ ಮತ್ತು ಆರ್ಥಿಕ, ಸಾಮಾಜಿಕವಾಗಿ ಯಾವುದೇ ವಿಚಾರದ ಬಗ್ಗೆ ಖಚಿತವಾದ ಅಭಿಪ್ರಾಯಗಳನ್ನು ಬರೆಯಬಲ್ಲ ನುರಿತ ಪತ್ರಿಕೋದ್ಯಮಿಯಾಗಿದ್ದ ವಿಕ್ರಮ ಪತ್ರಿಕೆಯ ಸಂಪಾದಕರಾಗಿ ಆ ಪತ್ರಿಕೆಗೆ ಒಂದು ಹೊಸ ಆಯಾಮವನ್ನು ನೀಡಿದರು. ಮಲ್ಯರವರ ನಿಧನದಿಂದ ಒಬ್ಬ ದೇಶಪ್ರೇಮಿ ವಿಚಾರವಂಥ ಪತ್ರಿಕೋದ್ಯಮಿ ಇವತ್ತು ಇಲ್ಲವಾಗಿದ್ದಾರೆ. ಅವರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತೇನೆ.

ಶ್ರೀಯುತ ಮನೋಹರ್ ಮಾಳಗಾವಂಕರ್‌ವರು ತೀರ ಇತ್ತೀಚೆಗೆ ಎಂದರೆ ದಿನಾಂಕ: 14.6.2010 ರಂದು ನಮ್ಮನ್ನು ಅಗಲಿದ ಸೇವಾ ಹಿನ್ನಲೆಯ ಹಿರಿಯ ಲೇಖಕ ಮತ್ತು ಪತ್ರಕರ್ತರಾಗಿದ್ದ ಅವರದ್ದು ಒಳ್ಳೆಯ ವ್ಯಕ್ತಿತ್ವ

ಶ್ರೀ ಮನೋಹರ್ ಮಾಳಗಾವಂಕರವರು ವರ್ಣರಂಜಿತ ವ್ಯಕ್ತಿತ್ವವನ್ನು ಹೊಂದಿದ್ದವರು. ಇಂಗ್ಲೀಷ್ ಹಾಗೂ ಸಂಸ್ಕೃತ ಪದವಿಯನ್ನು ಪಡೆದಿದ್ದ ಇವರು ಭಾರತೀಯ ಸೇನೆಯಲ್ಲಿ ಉನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದರು. ತಮ್ಮ 57ನೇ ವಯಸ್ಸಿನಲ್ಲಿ ಬರವಣಿಗೆಯನ್ನು ಪ್ರಾರಂಭಿಸಿದ ಅವರ ಇಂಗ್ಲೀಷ್ ಕಾದಂಬರಿ ಲೋಕದಲ್ಲಿ ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆದಿತು. ಜೊಯಿಡಾ ಸಮೀಪ ಕಾಡಿನಲ್ಲಿ ಅವರು ಮನೆಯನ್ನು ಮಾಡಿಕೊಂಡು ತಮ್ಮ ಲೇಖನ, ವ್ಯವಸಾಯ ಮತ್ತು ಪರಿಸರದ ಕಾರ್ಯ ಚಟುವಟಿಕೆಗಳಲ್ಲಿ ಅವರು ತೊಡಗಿಸಿಕೊಂಡಿದ್ದರು. 97 ವರ್ಷಗಳ ಕಾಲ ಅವರು ಸಾರ್ಥಕ ಜೀವನವನ್ನು ನಡೆಸಿದ್ದರು. ಅವರ ನಿಧನದಿಂದ ಒಬ್ಬ ಅದ್ಭುತ ಲೇಖಕ ಹಾಗೂ ಪರಿಸರ ಪ್ರೇಮಿಯನ್ನು ಕಳೆದುಕೊಂಡಂತಾಗಿದೆ. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಶ್ರೀ ಮಹಾ ಪ್ರಜ್ಞಾಜೀ ಇವರು ಕಾಲ್ನಡಿಗೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮೈಲು ದೂರವನ್ನು ಕ್ರಮಿಸಿ ರಾಷ್ಟ್ರ ವ್ಯಾಪ್ತಿ ಅಹಿಂಸಾ ತತ್ವವನ್ನು ಪ್ರಚಾರ ಮಾಡಿದ ಹೆಣ್ಣು ಭ್ರೂಣಹತ್ಯೆ ಮಹಾ ಪಾಪದ ಪಾತಕದ ವಿರುದ್ಧ ರಾಷ್ಟ್ರವ್ಯಾಪ್ತಿ ಮಹಿಳೆಯರನ್ನು ಜಾಗ್ರತಗೊಳಿಸಿದ ಒಬ್ಬ ಮಹಾನ್ ಸಂತ ಶ್ರೀ ಮಹಾ ಪ್ರಜ್ಞಾಜೀ ಆಗಿದ್ದರು. ಇವರು ಬದುಕಿನ ಉದ್ದಕ್ಕೂ ಭಗವಾನ್ ಮಹಾವೀರರ ಆದರ್ಶ ತತ್ವವನ್ನು ಪ್ರಚಾರ ಮಾಡಿ ಜನಜಾಗೃತಿಯನ್ನು ಮೂಡಿಸಿದ ಶ್ರೀಯುತರು ಮಹಾನ್ ದರ್ಶಕನಾಗಿದ್ದರು. ಅವರ

ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತೇನೆ. ದಿನಾಂಕ: 22.05.2010ರ ಬೆಳಿಗ್ಗೆ ಮಂಗಳೂರು ಬಜ್ಪೆ ವಿಮಾನ ನಿಲ್ದಾಣದ ಕೆಂಜಾರುವಿನ ಬಳಿ ಸಂಭವಿಸಿದ ದುರಾದೃಷ್ಟಕರ ಏರ್ ಇಂಡಿಯಾ ವಿಮಾನ ದುರಂತದಲ್ಲಿ ಪ್ರಯಾಣಿಕರು ಹಾಗೂ ಸಿಬ್ಬಂದಿ ಸೇರಿ ಸುಮಾರು 158 ಮಂದಿ ಮುಗ್ಧರು ಅಕಾಲಿಕ ಮರಣವನ್ನು ಹೊಂದಿದ್ದಾರೆ. ಇದೊಂದು ಘೋರ ದುರಂತವಾಗಿದೆ. ಈ ದುರಂತದಲ್ಲಿ ಮಡಿದ ಎಲ್ಲರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕರುಣಿಸಲಿ ಎಂದು ನಾನು ಮತ್ತೊಮ್ಮೆ ದೇವರಲ್ಲಿ ಪ್ರಾರ್ತಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಈ ಎಲ್ಲಾ ಮಹಾನೀಯರ ನಿಧನದಿಂದ ದೇಶ ಹಾಗೂ ರಾಜ್ಯ ಉತ್ತಮ ಜನನಾಯಕರು ಮತ್ತು ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಕೊಡುಗೆಯನ್ನು ನೀಡಿದ್ದ ಮತ್ತು ಇನ್ನು ಕೊಡುಗೆಯನ್ನು ನೀಡಬಹುದಾಗಿದ್ದವರನ್ನು ಕಳೆದು ಕೊಂಡಂತಾಗಿದೆ. ಇವರೆಲ್ಲರಿಗೂ ಸಂತಾಪವನ್ನು ಸೂಚಿಸಿ ಇವರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿಯನ್ನು ಅವರ ಕುಟುಂಬದವರಿಗೆ ಪರಮಾತ್ಮನು ನೀಡಲಿ ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇವತ್ತು ತಾವು ಮಂಡಿಸಿರುವಂತಹ ಈ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತಾ ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕಳೆದ ವಿಧಾನಸಭೆಯಾದ ಮೇಲೆ ಇವತ್ತಿನ ವರೆಗೆ ನಮ್ಮನ್ನು ಬಹಳ ಜನರು ಅಗಲಿದ್ದಾರೆ. ಅವರ ಬಗ್ಗೆ ಪಟ್ಟಿಯನ್ನು ಮಾಡಿ ಈ ಸದನದ ಮುಂದೆ ತಂದಿಟ್ಟಿದ್ದೀರಿ. ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ್‌ರವರು ಈ ಮನೆಯ sitting member ಆಗಿದ್ದರು. ಶ್ರೀಯುತರು ಎರಡು ಭಾರಿ ವಿಧಾನಸಭೆಗೆ ಆಯ್ಕೆಯಾಗಿ ಜನರ ಪ್ರತಿನಿಧಿಯಾಗಿ ಸದನದ ಒಳಗೆ ಮತ್ತು ಹೊರಗೆ ಜನಪರವಾದ ಕಾಳಜಿಯನ್ನು ಇಟ್ಟುಕೊಂಡು ಕೆಲಸವನ್ನು ಮಾಡುತ್ತಿದ್ದರು. ಗುಲ್ಬರ್ಗಾ ಗ್ರಾಮೀಣ ವಿಧಾನಸಭೆಗೆ ಎರಡು ಬಾರಿ ಆಯ್ಕೆಯಾಗಿದ್ದರು. ಒಮ್ಮೆ ಹಿಂದೆ ಒಂದು ಸಾರಿ ಆಯ್ಕೆಯಾಗಿದ್ದರು. ಇವರು ಎರಡನೇ ಬಾರಿ ಆಯ್ಕೆಯಾಗಿ ಅವರು ಅವಧಿ ಮುಗಿಯುವುದ ರೊಳಗಾಗಿ ಪಾಪ ಅವರು ಕಾಲವಾಗಿದ್ದಾರೆ. ಅವರು ಅವಧಿಯನ್ನು ಪೂರ್ಣ ಮಾಡುವುದಕ್ಕಾಗಲಿಲ್ಲ. ಶ್ರೀಯುತರು ಬಹಳ ಮಿತಭಾಷಿಯಾಗಿದ್ದರು, ಸಜ್ಜನಿಕೆ ಇದ್ದಂತಹ ವ್ಯಕ್ತಿಯಾಗಿದ್ದರು. ನಾನು ಅನೇಕ ಸಾರಿ ಅವರ ಕ್ಷೇತ್ರಕ್ಕೆ ಹೋಗಿದ್ದಾಗ ನಾವು ಮತ್ತು ಅವರು ಒಟ್ಟಿಗೆ ಸಭೆಗಳನ್ನು ಮಾಡಿದ್ದೆವು. ಅವರು ಬಹಳ ಸಂಸ್ಕೃತಿ ಇದ್ದಂತಹ ವ್ಯಕ್ತಿಯಾಗಿದ್ದರು. ಅಂತಹ ವ್ಯಕ್ತಿ ಇವತ್ತು

ನಮ್ಮನ್ನು ಅಗಲಿದ್ದಾರೆ. ಈ ಸದನದಲ್ಲಿ ಅವರ ಅವಧಿಯು ಇನ್ನು ಮೂರು ವರ್ಷಗಳ ಕಾಲ ಇತ್ತು, ಅವರು ಮಧ್ಯದಲ್ಲಿಯೇ ಕಾಲವಾಗಿದ್ದಾರೆ. ಹಾಗಾಗಿ ವಿಧಾನಸಭೆಗೂ ಕೂಡ ನಷ್ಟವಗಿದೆ, ಅವರ ಕ್ಷೇತ್ರಕ್ಕೂ ಕೂಡ ನಷ್ಟವಾಗಿದೆ, ರಾಜ್ಯಕ್ಕೂ ಕೂಡ ನಷ್ಟವಾಗಿದೆ. ಅವರ ಆತ್ಮಕ್ಕೆ ಈ ಸಂದರ್ಭದಲ್ಲಿ ನಾನು ಚಿರಶಾಂತಿ ದೊರಕಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬೈರೋನ್ ಸಿಂಗ್ ಶೇಖಾವತ್‌ರವರು ಭಾರತದ ರಾಜಕಾರಣ ದಲ್ಲಿ ಬಹಳ ದೀರ್ಘ ಕಾಲ ಇದ್ದಂತವರಾಗಿದ್ದರು. ರಾಜಾಸ್ಥಾನದಲ್ಲಿ ಮೂರು ಬಾರಿ ಶ್ರೀಯುತರು ಮುಖ್ಯಮಂತ್ರಿಯಾಗಿದ್ದರು. ಅವರು statesman ಕೂಡ ಆಗಿದ್ದರು. ಎಲ್ಲಾ ರಾಜಕೀಯ ಗುಣಗಳನ್ನು ಹೊಂದಿದಂತಹ ವ್ಯಕ್ತಿಯಾಗಿದ್ದರು. ಹಾಗೆಯೇ ಅವರು statesman ಆಗಿದ್ದರಿಂದ ಎಲ್ಲಾ ಜನರು ಕೂಡ ಅವರನ್ನು ಗೌರವಿಸುತ್ತಿದ್ದರು ಮತ್ತು ಪ್ರೀತಿಸುತ್ತಿದ್ದರು. ಬರೀ ಜನಸಂಘ ಮತ್ತು ಭಾರತೀಯ ಜನತಾಪಕ್ಷದವರಷ್ಟೇ ಅವರನ್ನು ಗೌರವಿಸು ತ್ತಿರಲಿಲ್ಲ ಪ್ರೀತಿಸುತ್ತಿರಲಿಲ್ಲ, ಬೇರೆ ಪಕ್ಷದವರು ಕೂಡ ಅವರನ್ನು ಬಹಳ ಗೌರವದಿಂದ ಕಾಣುವಂತಹ ವ್ಯಕ್ತಿತ್ವವನ್ನು ಬೆಳೆಸಿ ಕೊಂಡಿದ್ದರು. ಪೊಲೀಸ್ ಇಲಾಖೆಗೆ ಕೆಲಸಕ್ಕೆ ಸೇರಿ ಸಾಮಾನ್ಯ ಪೊಲೀಸ್ ಆಗಿ ಕೆಲಸಕ್ಕೆ ಸೇರಿಕೊಂಡು ಉಪರಾಷ್ಟ್ರಪತಿ ಅಂತಹ ಉನ್ನತಸ್ಥಾನಕ್ಕೂ ಅಲ್ಲಿಯವರೆಗೆ ಅವರ ರಾಜಕೀಯ ನಡಿಗೆಯಾಗಿತ್ತು. ಅವರ ರಾಜಕೀಯ ಪಯಣ 50 ವರ್ಷಗಳ ದೀರ್ಘ ಕಾಲದವರೆಗೆ ಸಮಾಜಸೇವೆಯನ್ನು ಮಾಡಿದ್ದರು. ಅವರು ಬರೀ ರಾಜಸ್ತಾನಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಒಮ್ಮೆ ರಾಜ್ಯಸಭೆಯ ಸದಸ್ಯರಾಗಿ ಕೆಲಸವನ್ನು ಮಾಡಿದ್ದರು. ಅವರಿಗೆ ರಾಷ್ಟ್ರಪತಿ ಹುದ್ದೆ ಸಿಗಲಿಲ್ಲ ಎನ್ನುವಂತಹ ಕೊರಗು ಇತ್ತು. ಮೊದಲನೆಯ ಚುನಾವಣೆಯಿಂದ ಹಿಡಿದು ಇಲ್ಲಿಯವರೆಗೂ ಅವರು ಸಕ್ರೀಯವಾಗಿ ರಾಜಕಾರಣದಲ್ಲಿದ್ದರು. 1952ನೇ ಇಸವಿಯಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಮೊದಲನೆ ಚುನಾವಣೆಯಾಯಿತು, 1952ರ ಚುನಾವಣೆಯಲ್ಲಿ ಸ್ಪರ್ಧೆಯನ್ನು ಮಾಡಿದ್ದವರು ಇಡೀ ದೇಶದಲ್ಲಿ ಬಹಳ ವಿರಳ ಕೆಲವೆ ಬೆರಳೆಣಿಕೆಯಷ್ಟು ಜನರು ಇರಬಹುದು. ಇವರು ಅಂತಹ ಒಬ್ಬ ಹಿರಿಯ ಮುತ್ಸದ್ದಿ ರಾಜಕಾರಣಿ ಎಲ್ಲಾ ಮುಂದಿನ ಪೀಳಿಗೆಗೆ ಇವತ್ತಿನ ಯುವ ರಾಜಕಾರಣಿಗಳಿಗೆ ಆದರ್ಶಪ್ರಾಯರಾಗಿದ್ದಂತಹ ವ್ಯಕ್ತಿಯಾಗಿದ್ದರು. ಹಾಗಾಗಿ ನಮ್ಮೆಲ್ಲರಿಗೂ ಕೂಡ ಅವರ ಬದುಕು ಮಾರ್ಗದರ್ಶನ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ನಾನು ಈ

ಸಂದರ್ಭದಲ್ಲಿ ಪ್ರಾರ್ಥನೆಯನ್ನು ಮಾಡುತ್ತೇನೆ. ಶ್ರೀ ಹನುಮಂತರಾವ್ ದೇಸಾಯಿಯವರು ನಮ್ಮ ಜೊತೆಯಲ್ಲಿ ಇದ್ದವರು, ನನಗೂ ಮತ್ತು ಅವರಿಗೂ ಬಹಳ ಆತ್ಮೀಯವಾದಂತಹ ಸ್ನೇಹವಿತ್ತು. 1983ನೇ ಇಸವಿಯಲ್ಲಿ ನಾನು ಮೊದಲನೆಯ ಬಾರಿಗೆ ವಿಧಾನಸಭೆಗೆ ಆಯ್ಕೆಯಾಗಿದ್ದಾಗ ಅವರು ಸಹ ವಿಧಾನಸಭೆಗೆ ಆಯ್ಕೆಯಾಗಿ ಬಂದಿದ್ದರು. 1983 ರಿಂದ 1985ರವರೆಗೆ ವಿಧಾನಸಭೆಯಲ್ಲಿ ಈತ ಸದನದ ಸದಸ್ಯರಾಗಿ ಬಹಳ ಸಕ್ರೀಯವಾಗಿ ಜನರ ಸಮಸ್ಯೆಗಳನ್ನು ಇಲ್ಲಿ ಪ್ರಸ್ತಾಪ ಮಾಡುವಂತಹದ್ದು ಚರ್ಚೆಮಾಡುವಂತಹದ್ದು, ಸಲಹೆಯನ್ನು ಸರ್ಕಾರಕ್ಕೆ ಕೊಡುವಂತಹದ್ದನ್ನು ಮಾಡುತ್ತಿದ್ದರು. ಜೊತೆಗೆ ಒಳ್ಳೆಯ ವಾಗ್ಮಿಯೂ ಕೂಡ ಆಗಿದ್ದರು, ಒಳ್ಳೆಯ ಭಾಷಣಕಾರರು ಕೂಡ ಆಗಿದ್ದರು ಬಹಳ ಚೆನ್ನಾಗಿ ಮಾತನಾಡುತ್ತಿದ್ದರು. ಎಲ್ಲಾ ವಿಷಯಗಳ ಮೇಲೆ ತಯಾರಾಗಿ ಬಂದು ಸದನದಲ್ಲಿ ಮಂಡಿಸುವಂತಹ ಪ್ರಯತ್ನವನ್ನು ಮಾಡುತ್ತಿದ್ದರು. ಇದರ ಜೊತೆಗೆ ವಿದ್ಯಾರ್ಥಿದೆಸೆಯಿಂದಲೂ ಕೂಡ ಹೋರಾಟಗಾರರಾಗಿದ್ದರು. ಹಾಗಾಗಿ ಅವರು ಬದುಕಿರುವವರೆಗೂ ಕೂಡ ಅವರಿಗೆ ಆರೋಗ್ಯ ಕೆಟ್ಟುಹೋಗಿದ್ದರು ಕೂಡ ಹೈದರಾಬಾದ್-ಕರ್ನಾಟಕಕ್ಕೆ ವಿಶೇಷವಾದಂತಹ ಸ್ಥಾನಮಾನ ಸಿಗಬೇಕು ಎಂದು ಹೋರಾಟ ಮಾಡಿದವರು.

(1-00 PM)

ಶ್ರೀ ಹನುಮಂತರಾವ್ ದೇಸಾಯಿಯವರು ಸಂವಿಧಾನದ 371 ನೇ ವಿಧಿಯನ್ನು ತಿದ್ದುಪಡಿ ಮಾಡಬೇಕು ಆ ಮೂಲಕ ವಿಶೇಷ ಸವಲತ್ತುಗಳನ್ನು ಕೊಡಬೇಕೆಂದು ಕೊನೆಯವರೆಗೂ ಹೋರಾಟವನ್ನು ಮಾಡಿಕೊಂಡು ಬಂದಿದ್ದರು. ಅವರಿಗೆ ಅದರಲ್ಲಿ ಬದ್ಧತೆ ಕೂಡ ಇತ್ತು, ಜೊತೆಗೆ ಅವರು ವಕೀಲರು ಕೂಡ ಆಗಿದ್ದರು. ಅಫಜಲ್‌ಪುರ ಕ್ಷೇತ್ರದಿಂದ ಆಯ್ಕೆಯಾಗಿದ್ದರೂ ಅವರು ನಮ್ಮನ್ನು ಅಗಲಿದ್ದಾರೆ. ವೈಯಕ್ತಿಕವಾಗಿ ಅವರು ನನಗೆ ಒಳ್ಳೆಯ ಸ್ನೇಹಿತರು. ಅವರ ಅಗಲಿಕೆಯಿಂದ ನನಗೆ ವೈಯಕ್ತಿಕವಾಗಿ ನಷ್ಟವಾಗಿದೆ ಅಲ್ಲದೆ ಈ ರಾಜ್ಯಕ್ಕೆ ನಷ್ಟವಾಗಿದೆ. ಅವರ ಆತ್ಮಕ್ಕೆ, ಅವರ ಕುಟುಂಬ ವರ್ಗವದರಿಗೆ ಈ ಸಾವಿನ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಭಗವಂತ ಕೊಡಲಿ ಎಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ. ಮಾನ್ಯ ಅಂದಾನಪ್ಪನವರು ಐದನೇ ವಿಧಾನಸಭೆಗೆ 72–78 ರವರೆಗೆ ಶಾಸಕರಾಗಿದ್ದರು. ಸಹಕಾರ ಕ್ಷೇತ್ರದಲ್ಲಿಯೂ ಕೂಡ ಕೆಲಸ ಮಾಡುತ್ತಿದ್ದರು. ಹಾಗಾಗಿ ಎ.ಪಿ.ಎಂ.ಸಿ. ಹಾಗೂ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾಗಿದ್ದರು. ಸಹಕಾರ ಕ್ಷೇತ್ರದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ರೈತರ ಪರವಾಗಿ, ಬಡವರ ಪರವಾಗಿ ಕೆಲಸ

ಮಾಡುತ್ತಿದ್ದಂಥವರು. ಅವರೂ ಕೂಡ ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಪ್ರಾರ್ಥಿಸುತ್ತೇನೆ. ಇನ್ನು ಶ್ರೀ ಎ.ದೊಡ್ಡೇಗೌಡ ರವರು ಹೊಳೇನರಸೀಪುರದ ತಾಲ್ಲೂಕಿನವರು ಆಗಿದ್ದರು. ಒಮ್ಮೆ ಈ ಸದನದ ಸದಸ್ಯರಾಗಿದ್ದರು, ಒಮ್ಮೆ ಮೇಲ್ಮನೆ ಸದಸ್ಯರೂ ಸಹ ಆಗಿದ್ದರು. ಅವರು ಸಹ ನಮ್ಮ ಜೊತೆಯಲ್ಲಿದ್ದವರು. ದೊಡ್ಡೇಗೌಡರವರು ಅಷ್ಟೊಂದು ವಿದ್ಯಾವಂತರಾಗಿಲ್ಲದಿದ್ದರೂ ಅಪಾರವಾದಂಥ ಸಾಮಾನ್ಯ ಜ್ಞಾನ, ಅನುಭವ, ತಿಳುವಳಿಕೆ ಹೊಂದಿದ್ದರು. ಹಾಗಾಗಿ ತಮ್ಮನ್ನು ಸಂಪೂರ್ಣವಾಗಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ತಾಲ್ಲೂಕು ಅಭಿವೃದ್ಧಿ ಮಂಡಳಿ, ಗ್ರಾಮೀಣಾಭಿವೃದ್ಧಿ ಮಂಡಳಿ, ವಿಧಾನಸಭೆ, ವಿಧಾನ ಪರಿಷತ್ತು ಇಲ್ಲೆಲ್ಲಾ ಕೆಲಸ ಮಾಡಿದಂಥವರು, ಯಾವಾಗಲೂ ಜನಪರವಾದ ಕಾಳಜಿ ಇಟ್ಟು ಕೊಂಡಿದ್ದರು. ಅವರ ಹಳ್ಳಿ ಹಳೇ ಮೈಸೂರು ಎಂಬುದು. ಅಲ್ಲಿ ನೀರಾವರಿ ಆಗಿಲ್ಲ. ನೀರಾವರಿ ಬೇಕು ಎಂದು ನಾನು ಮಂತ್ರಿಯಾಗಿದ್ದಾಗ ನನ್ನಲ್ಲಿಗೆ ಬಂದು ಪದೇ ಪದೇ ಹೇಳುತ್ತಿದ್ದರು. ನಮ್ಮ ರೈತರ ಜಮೀನುಗಳಿಗೆ ನೀರು ಕೊಡಬೇಕು, ಏನಾದರೂ ಮಾಡಿ ನೀರು ಕೊಡಿಸುವಂಥ ಕೆಲಸ ಮಾಡಿ ಎಂದು ಬಹಳ ಕಾಳಜಿ ವಹಿಸಿ ಕೆಲಸ ಮಾಡುತ್ತಿದ್ದರು. ಅವರೂ ಊಡ ನಮ್ಮನ್ನು ಅಗಲಿದ್ದಾರೆ ಅವರ ಆತ್ಮಕ್ಕೂ ಶಾಂತಿ ದೊರಕಲಿ ಎಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥಿಸುತ್ತೇನೆ.

ಶ್ರೀ ನಾನಾಜಿ ದೇಶ್‌ಮುಖ್‌ರವರು ನಮಗೆ ಅಷ್ಟೊಂದು ಪರಿಚಯ ಇಲ್ಲ. ಇವರು ಮಹಾರಾಷ್ಟ್ರದ ಪರ್ಬಾನಿ ಜಿಲ್ಲೆಯ ಕಡೊಲಿಯಲ್ಲಿ ಜನಿಸಿದರು. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅಧ್ಯಯನ ಮಾಡಿದ್ದರಿಂದ ಅಪಾರವಾದ ಜ್ಞಾನವಿತ್ತು. ಚಿತ್ರಕೂಟದಲ್ಲಿ ಗ್ರಾಮೋದ್ಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ್ದರು ಎಂದು ಇದೆ. ಒಮ್ಮೆ ರಾಜ್ಯಸಭೆ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ. ಅವರೂ ಕೂಡ ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೂ ಶಾಂತಿಯನ್ನು ಕೋರುತ್ತೇನೆ. ಶ್ರೀ ಸುರೇಂದ್ರ ದಾನಿಯವರು ಸ್ವಾತಂತ್ರ್ಯದ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡು ಸ್ವಾತಂತ್ರ್ಯಕ್ಕೋಸ್ಕರವಾಗಿ, ದೇಶಕ್ಕಾಗಿ ಹೋರಾಟ ಮಾಡಿದಂಥವರು. ಚಲೇಜಾವ್ ಚಳವಳಿಯಲ್ಲಿಯೂ ಸಹ ಸಕ್ರಿಯವಾಗಿ ಭಾಗವಹಿಸಿದ್ದರು. ವಿದ್ಯಾರ್ಥಿ ದೆಶೆಯಿಂದಲೇ ಚಳವಳಿ, ಹೋರಾಟಗಳು ಸಾಮಾಜಿಕ ಸೇವೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಂಥ ವ್ಯಕ್ತಿ, ಜೊತೆಗೆ ಪತ್ರಕರ್ತರಗಿಯೂ ಇದ್ದರು. ಸಂಯುಕ್ತ ಕರ್ನಾಟಕ ಪತ್ರಿಕೆಯ ವರದಿಗಾರರಾಗಿದ್ದರು. ಆಮೇಲೆ ಆದೇ ಪತ್ರಿಕೆಗೆ ಸಂಪಾದಕರಾಗಿಯೂ ಸಹ

O.32 F-83

ಕೆಲಸ ಮಾಡಿದ್ದರು. ಇವರು ಕೇವಲ ಸ್ವಾತಂತ್ರ್ಯ ಹೋರಾಟಗಾರರಷ್ಟೇ ಅಲ್ಲ. ಸ್ವಾತಂತ್ರ್ಯ ಗಟ್ಟಿಯಾಗಿ ಇರಬೇಕೆನ್ನುವ ಕಾರಣಕ್ಕೋಸ್ಕರ ಸ್ವಾತಂತ್ರ್ಯದ ನಾಲ್ಕನೇ ಆಧಾರಸ್ತಂಭವಾದ ಪತ್ರಿಕಾಂಗದಲ್ಲಿಯೂ ಪತ್ರಿಕಾಕರ್ತರಾಗಿಯೂ, ಸಂಯುಕ್ತ ಕರ್ನಾಟಕದ ಸಂಪಾದಕರಾಗಿ ಅವರು ಸಮಾಜಕ್ಕೆ ಅಪರಿಮಿತವಾದ ಸೇವೆಯನ್ನು ಮಾಡಿದ್ದಾರೆ. ಅವರು ಕೂಡ ನಮ್ಮನ್ನು ಅಗಲಿದ್ದಾರೆ. **ಶ್ರೀ ಸುಬ್ರಾಯ್ ನಾರಾಯಣ್** ಮಲ್ಯ ಇವರು ವಿಕ್ರಮ ಪತ್ರಿಕೆಯ ಸಂಪಾದಕರಾಗಿದ್ದರು. ಮೂಲತಃ ಬ್ಯಾಂಕಿನ ಉದ್ಯೋಗಿಯಾಗಿದ್ದವರು ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದಂಥವರು. ಬಹಳ ಮುಖ್ಯವಾಗಿ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ತುರ್ತು ಪರಿಸ್ಥಿತಿಯನ್ನು ವಿರೋಧ ಮಾಡಿ ಜೈಲ ವಾಸವನ್ನು ಅನುಭವಿಸಿದ್ದಂಥವರು. ಇವರಿಗೆ ಅನೇಕ ಗೌರವ ಪ್ರಶಸ್ತಿಗಳು ದೊರಕಿವೆ. ಗೌರವಕ್ಕೆ ಪಾತ್ರರಾಗಿದ್ದಾರೆ. ಸಮಾಜದಲ್ಲಿ ತಮ್ಮದೇ ಆದಂಥ ಛಾಪನ್ನು ಬಿಟ್ಟು ಹೋಗಿದ್ದಾರೆ. ಅವರ ಆತ್ಮಕ್ಕೂ ಈ ಸಂದರ್ಭದಲ್ಲಿ ಶಾಂತಿಯನ್ನು ಕೋರುತ್ತೇನೆ. **ಶ್ರೀ ಮನೋಹರ್ ಮಾಳಗಾಂವಕರ್** ಇವರು ಸೇನಾಧಿಕಾರಿ ಆಗಿದ್ದಂಥವರು. ಸೇನೆಯಲ್ಲಿ ಬಹಳ ವರ್ಷ ಸೇವೆ ಮಾಡಿ ಸೇನೆಯಲ್ಲಿ ನಿವೃತ್ತರಾದ ಮೇಲೆ ಬರಹಗಾರರಾಗಿ ಆಂಗ್ಲ ಭಾಷೆಯಲ್ಲಿ ಬರೆಯುತ್ತಿದ್ದರು. ಅವರು ಬಹಳ ನಿರ್ಭಯವಾಗಿ ಅವರಿಗೆ ತೋಚಿದ್ದನ್ನು ನೇರವಾಗಿ ಬರೆಯುವಂಥ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದಂಥವರು. ಅವರು ಸೈನ್ಯದಲ್ಲಿ ಕೆಲಸ ಮಾಡಿದ್ದರಿಂದ ವಿಶೇಷವಾದ ರಾಷ್ಟ್ರಪ್ರೇಮ, ದೇಶಾಭಿಮಾನ ಇದ್ದ ಕಾರಣ ಇವುಗಳಿಗೆ ಸಂಬಂಧಪಟ್ಟಂತೆ ಅನೇಕ ಬರಹಗಳನ್ನು, ಕೃತಿಗಳನ್ನು ಬರೆದು ಈ ದೇಶಕ್ಕೆ, ಈ ನಾಡಿಗೆ ಕೊಟ್ಟು ಹೋಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ನಾನು ಸ್ಮರಿಸುತ್ತಾ ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ನಾನು ಪ್ರಾರ್ಥಿಸುತ್ತೇನೆ. **ಶ್ರೀ ಮಹಾ ಪ್ರಜ್ಞಾಜೀ** ಇವರು ಭಗವಾನ್ ಮಹಾವೀರರ ಅನುಯಾಯಿ, ಜೈನಧರ್ಮವನ್ನು ಪ್ರಚಾರ ಮಾಡುತ್ತಾ ತಮ್ಮ ಜೀವನದುದ್ದಕ್ಕೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಅಹಿಂಸಾತತ್ವ, ಜೈನಧರ್ಮ ತತ್ವಗಳನ್ನು ಜನರಿಗೆ ತಿಳಿಸತಕ್ಕಂಥ ಕೆಲಸವನ್ನು ರಾಷ್ಟ್ರವ್ಯಾಪಿ ಅವರು ಮಾಡಿದ್ದಾರೆ ಅದರ ಜೊತೆಗೆ ಬಹಳ ಮುಖ್ಯವಾಗಿ ಮಹಿಳೆಯರಲ್ಲಿ ಜಾಗೃತಿಯನ್ನು ಮೂಡಿಸುವಂಥ ಕೆಲಸವನ್ನು ಮಾಡಿದ್ದಾರೆ. ಹೆಣ್ಣು ಭ್ರೂಣ ಹತ್ಯೆಯಿಂದ ಸಮಾಜದ ಮೇಲೆ, ದೇಶದ ಮೇಲೆ ಆಗುವಂಥ ಅನಾಹುತಗಳು, ಅದರಿಂದಾಗುವ ಪರಿಣಾಮಗಳು, ಮಹಿಳಾ ಸಂಖ್ಯೆಯ ಮೇಲೆ ಆಗುವಂಥ ಪರಿಣಾಮಗಳು. ಗಂಡುಮಕ್ಕಳು ಹುಟ್ಟಿದರೆ ಮಾತ್ರ ವಂಶ

ಉದ್ಧಾರವಾಗುತ್ತದೆ ಎನ್ನುವ ಮೂಢನಂಬಿಕೆಗಳು, ಭಾವನೆಗಳು ಇವೆ. ಈ ಭಾವನೆಗಳನ್ನು ತೊಡೆದು ಹಾಕಲಿಕ್ಕೆ ಹೆಣ್ಣುಮಕ್ಕಳಲ್ಲಿ ವಿಶೇಷವಾಗಿ ಭ್ರೂಣ ಹತ್ಯೆ ಮಾಡಬಾರದು, ಅದು ಮಹಾಪಾಪ ಎಂದು ಜಾಗೃತಿ ಮೂಡಿಸುವಂಥ ಕೆಲಸವನ್ನು ಮಾಡಿದರು. ಅವರು ಒಬ್ಬ ದಾರ್ಶನಿಕರು, ಸಮಾಜದಲ್ಲಿ ಬದಲಾವಣೆಗಾಗಿ ಪ್ರಯತ್ನವನ್ನು ಮಾಡಿದಂಥವರು. ಎಲ್ಲಾ ಜನರು ಕೂಡ ಮಾನವೀಯತೆಯಿಂದ, ಸೋದರಭಾವನೆಯಿಂದ ಬದುಕಬೇಕು. ಅಹಿಂಸಾತತ್ವ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ನಾನು ಬದುಕಬೇಕು, ಬೇರೆಯವರೂ ಬದುಕಬೇಕು ಎನ್ನುವಂಥ ವಿಚಾರದಲ್ಲಿ ಬದ್ಧತೆಯನ್ನು ಇಟ್ಟುಕೊಂಡು ಕೆಲಸ ಮಾಡಿದಂಥ ಇವರು ನಮ್ಮನ್ನೆಲ್ಲಾ ಅಗಲಿದ್ದಾರೆ. ಇವರನ್ನು ನೆನಪು ಮಾಡಿಕೊಳ್ಳುವುದು ನಮ್ಮ ಕರ್ತವ್ಯ ಎಂದು ಭಾವಿಸಿಕೊಂಡು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ.

ಕೊನೆಯದಾಗಿ ಹೇಳುವುದಾದರೆ, ಇತ್ತೀಚೆಗೆ ಬಹಳ ಘೋರವಾದ ದುರಂತ ಮಂಗಳೂರು ಏರ್‌ಪೋರ್ಟ್‌ನಲ್ಲಿ ಆಯಿತು. ಸುಮಾರು 166 ಜನರು ಇದ್ದಂತಹ ವಿಮಾನ ದುಬೈನಿಂದ ಮಂಗಳೂರಿಗೆ ಬಂದು, ಮಂಗಳೂರು ವಿಮಾನ ನಿಲ್ದಾಣದಲ್ಲಿ ಇಳಿಯತಕ್ಕಂತಹ ಸಂದರ್ಭದಲ್ಲಿ ದೊಡ್ಡ ದುರಂತವಾಯಿತು. ಕರ್ನಾಟಕದಲ್ಲಿ ಈ ಹಿಂದೆ ವಿಮಾನ ದುರಂತಗಳು ಆಗಿವೆ. ಆದರೆ, ಇಷ್ಟೊಂದು ದೊಡ್ಡ ಪ್ರಮಾಣದ ದುರಂತ ಯಾವಾಗಲೂ ಕೂಡ ಆಗಿರಲಿಲ್ಲ. 166 ಪ್ರಯಾಣಿಕರಿದ್ದಂತಹ ವಿಮಾನದಲ್ಲಿ 8 ಜನ ಬದುಕಿ ಉಳಿದಿದ್ದಾರೆ. 158 ಜನರು ಬಹುಶಃ ಕರಕಲಾಗಿ ಸುಟ್ಟು ಹೋಗಿದ್ದಾರೆ. ಆ ಸಂದರ್ಭದಲ್ಲಿ ಅಲ್ಲಿಗೆ ನಾನು ಸಹ ನೋಡುವುದಕ್ಕೆ ಹೋಗಿದ್ದೆ. ಅದನ್ನು ನೋಡುವುದಕ್ಕಾಗುತ್ತಿರಲಿಲ್ಲ. ಕೆಲವು ಸುಟ್ಟು ಹೋದಂತಹ ಶವಗಳನ್ನು ಪತ್ತೆ ಮಾಡುವುದಕ್ಕೆ ಆಗಲಿಲ್ಲ. ಡಿ.ಎನ್.ಎ. ಟೆಸ್ಟ್‌ಗಳನ್ನು ಮಾಡಿದರೂ ಕೂಡ ಕೆಲವು ಶವಗಳನ್ನು ಪತ್ತೆ ಹಚ್ಚಲಿಕ್ಕೆ ಆಗಲಿಲ್ಲ. ಅದನ್ನು ನೋಡುವುದಕ್ಕೆ ಒಂದು ಭಯಾನಕ ದೃಶ್ಯವಾಗಿತ್ತು. ಯಾರೂ ಈ ರೀತಿ ಸಾಯಬಾರದು. ಸತ್ತ ಮೇಲೆ ಸುಟ್ಟುಹಾಕುವಂತಹ ಪದ್ಧತಿ ಕೆಲವರಲ್ಲಿ ಇದೆ. ಆದರೆ, ಜೀವಂತವಾಗಿ ಸುಟ್ಟುಹೋಗುವುದನ್ನು ಇಲ್ಲಿ ಒಂದು ಕಡೆ ನಾನು ನೋಡಿದೆ ಹಾಗೂ ಚಳ್ಳಕೆರೆ ಹತ್ತಿರ ಒಂದು ಬಸ್ ಹಳ್ಳಕ್ಕೆ ಬಿದ್ದು ಸುಟ್ಟು ಹೋಯಿತು. ಅದರಲ್ಲಿದ್ದಂತಹ ಜನರು ಸುಟ್ಟು ಹೋದರು. ನಿದ್ದೆ ಮಾಡುವಾಗ ಬಸ್ ಕೆಳಗೆ ಬಿದ್ದು ಅದರಲ್ಲಿದ್ದವರೆಲ್ಲರೂ ಸುಟ್ಟು ಹೋದರು. ಅವರೂ ಕೂಡ ಅದೇ ರೀತಿಯಲ್ಲಿ ಸುಟ್ಟು ಕರಕಲಾಗಿದ್ದರು. ಯಾರಿಗೂ

ಕೂಡ ಇಂತಹ ಪರಿಸ್ಥಿತಿ ಬರಬಾರದು. ಯಾರಿಗೂ ಕೂಡ ಇಂತಹ ಕೆಟ್ಟ ರೀತಿಯಲ್ಲಿ ಸಾಯುವಂತಹ ಪರಿಸ್ಥಿತಿ ಬರಬಾರದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇಂತಹ ಘಟನೆಗಳು ಎಂದಿಗೂ ಆಗದೇ ಇರಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಈ ಘಟನೆಯಲ್ಲಿ ಸತ್ತಿರತಕ್ಕಂತಹ 158 ಜನರಲ್ಲಿ ಹೆಚ್ಚಾಗಿ ಮಂಗಳೂರು ಹಾಗೂ ಕೇರಳದವರು. ಅವರೆಲ್ಲಾ ದುಬೈನಲ್ಲಿ ಕೆಲಸಕ್ಕೆ ಹೋಗಿದ್ದವರು. ಒಂದೇ ಮನೆಯ ಕೆಲವು ಮಂದಿ ತಿಥಿ ಮಾಡುವುದಕ್ಕೆ ಬಂದು ಸತ್ತು ಹೋದರು. ತಿಥಿ ಮಾಡುವುದಕ್ಕೆ ಹೋದ ಅವರೇ ತಿಥಿಯಾದರು. ಇದು ಮನಸ್ಸನ್ನು ಹಿಂಡತಕ್ಕಂತಹ ಒಂದು ಘೋರ ದುರಂತ. ಈ 158 ಜನರು ಪಾಪ ಅಮಾಯಕರು, ಸಾಯುತ್ತೇವೆ ಎಂದು ಅವರಿಗೆ ಗೊತ್ತಿರಲಿಲ್ಲ. ಸಾಯುತ್ತೇವೆ ಎಂದು ಗೊತ್ತಿದ್ದರೆ ಯಾರೂ ಕೂಡ ವಿಮಾನದಲ್ಲಿ ಬರುತ್ತಿರಲಿಲ್ಲ. ಇವರೆಲ್ಲರ ಆತ್ಮಗಳಿಗೆ ಚಿರಶಾಂತಿ ದೊರಕಲಿ ಹಾಗೂ ಇಂತಹ ಘಟನೆ ಮತ್ತೊಮ್ಮೆ ನಡೆಯದೇ ಇರಲಿ ಎಂದು ನಾನು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತಾ, ಸತ್ತಿರತಕ್ಕಂತಹ ಎಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ ನಿಮ್ಮ ಈ ನಿರ್ಣಯವನ್ನು ಬೆಂಬಲಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೇನರಸೀಪುರ) : ಮಾನ್ಯ ಅಧ್ಯಕ್ಷರೆ, ಇವತ್ತು ಇಲ್ಲಿ ತಂದಿರತಕ್ಕಂತಹ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ, ಹಾಲಿ ಶಾಸಕರಾಗಿದ್ದಂತಹ ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ್ ರವರು 1958ರ ಜನವರಿ 26 ರಂದು ವಿಜಾಪುರದಲ್ಲಿ ಜನಿಸಿ, 2004–2007ರ ಅವಧಿಗೆ ವಿಧಾನಸಭಾ ಸದಸ್ಯರಾಗಿ ಮೊದಲ ಬಾರಿಗೆ ಆಯ್ಕೆಯಾಗಿ ಮತ್ತೆ ಎರಡನೇ ಬಾರಿಗೆ 2008ರಲ್ಲಿ ಗುಲ್ಬರ್ಗಾ ದಕ್ಷಿಣ ಕ್ಷೇತ್ರಕ್ಕೆ ಆಯ್ಕೆಗೊಂಡಿದ್ದರು. ಇವರು 14.04.2010 ರಂದು ನಿಧನರಾದರು. ಅವರ ಆತ್ಮಕ್ಕೆ ಹಾಗೂ ಅವರ ಕುಟುಂಬ ವರ್ಗದವರಿಗೆ ಶಾಂತಿ ದೊರಕಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಜೊತೆಗೆ ನಮ್ಮ ರಾಷ್ಟ್ರದ ಉಪ ರಾಷ್ಟ್ರಪತಿಯಾಗಿದ್ದಂತಹ ಹಾಗೂ ರೈತ ಮುಖಂಡರಾಗಿದ್ದಂತಹ ಶ್ರೀ ಬೈರೋನ್ ಸಿಂಗ್ ಶೆಖಾವತ್‌ರವರು 15.05.2010 ರಂದು ನಿಧನರಾದರು. ಅವರು ಸುಮಾರು ಮೂರು ಬಾರಿ ರಾಜಸ್ಥಾನದ ಮುಖ್ಯಮಂತ್ರಿಯಾಗಿದ್ದರು. ರಾಜ್ಯಸಭಾ ಸದಸ್ಯರಾಗಿ ಹಾಗೂ ಭಾರತ ದೇಶದ 12ನೇ ಉಪ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರ

ಆತ್ಮಕ್ಕೂ ಹಾಗೂ ಅವರ ಕುಟುಂಬ ವರ್ಗದವರಿಗೂ ಶಾಂತಿ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಮಾಜಿ ಸದಸ್ಯರಾಗಿದ್ದಂತಹ ಶ್ರೀ ಹನುಮಂತರಾವ್ ದೇಸಾಯಿ ಯವರು ಜೇವರ್ಗಿ ಕ್ಷೇತ್ರದಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ನ್ಯಾಯವಾದಿಯಾಗಿದ್ದರಲ್ಲದೆ ಶ್ರೀಯುತರು 1983 ರಲ್ಲಿ 7ನೇ ವಿಧಾನಸಭೆಗೆ ಆಯ್ಕೆಯಾಗಿದ್ದರು. ದಿನಾಂಕ: 07-04-2010 ರಂದು ನಿಧನರಾದರು. ಅವರ ಆತ್ಮಕ್ಕೆ ಹಾಗೂ ಅವರ ಕುಟುಂಬ ವರ್ಗದವರಿಗೆ ಶಾಂತಿ ದೊರಕಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ.

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಸಿ.ಅಂದಾನಪ್ಪನವರು 5ನೇ ವಿಧಾನಸಭೆಗೆ ಆಯ್ಕೆಯಾಗಿದ್ದರು. ಅವರ ಆತ್ಮಕ್ಕೂ ಶಾಂತಿ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಜೊತೆಗೆ ನಮ್ಮ ಜಿಲ್ಲೆಯ ಹಾಗೂ ನಮ್ಮ ತಾಲ್ಲೂಕಿನವರಾಗಿದ್ದ ಮಾಜಿ ವಿಧಾನಪರಿಷತ್ತಿನ ಸದಸ್ಯರಾಗಿದ್ದಂತಹ ಮತ್ತು 11ನೇ ವಿಧಾನಸಭೆಯ ಮಾಜಿ ಶಾಸಕರಾಗಿದ್ದಂತಹ ಸನ್ಮಾನ್ಯ ದೊಡ್ಡೇಗೌಡರವರು 11.06.2010 ರಂದು ನಿಧನರಾಗಿದ್ದಾರೆ. ಶ್ರೀಯುತರು ನಮ್ಮ ಜಿಲ್ಲೆಯಲ್ಲಿ ಜನಿಸಿ ಅದರಲ್ಲೂ ಬಡ ಕುಟುಂಬದಿಂದ ಬಂದಿದ್ದರೂ ಸಹ ವಿಧಾನ ಪರಿಷತ್ ಹಾಗೂ ವಿಧಾನ ಸಭೆಯ ಸದಸ್ಯರಾಗಿದ್ದು, ಇತ್ತೀಚೆಗೆ ನಿಧನರಾಗಿದ್ದಾರೆ. ಅವರ ಆತ್ಮಕ್ಕೂ ಶಾಂತಿ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಅದರ ಜೊತೆಗೆ ಶ್ರೀ ನಾನಾಜಿ ದೇಶ್‌ಮುಖ್‌ರವರು, ಶ್ರೀ ಸುರೇಂದ್ರ ದಾನಿ, ಶ್ರೀ ಸುಬ್ರಾಯ್ ನಾರಾಯಣ್ ಮಲ್ಯ, ಶ್ರೀ ಮನೋಹರ್ ಮಾಳಗಾವಂಕರ್, ಶ್ರೀ ಮಹಾ ಪ್ರಜ್ಞಾಜೀರವರು ಹಾಗೂ ದುಬೈನ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನವು ಮಂಗಳೂರಿನ ಬಜ್ಪೆ ವಿಮಾನ ನಿಲ್ದಾಣದಲ್ಲಿ ಸಂಭವಿಸಿದ ಭೀಕರ ಅಪಘಾತದಿಂದ 166 ಜನರ ಪೈಕಿ 158 ಅಮಾಯಕ ಜನರು ದುರ್ಮರಣ ಕ್ಕೀಡಾಗಿದ್ದಾರೆ, ಅವರ ಆತ್ಮಕ್ಕೂ ಹಾಗೂ ಅವರ ಕುಟುಂಬ ವರ್ಗದವರಿಗೂ ಸಂತಾಪವನ್ನು ವ್ಯಕ್ತಪಡಿಸಿ, ಮಾನ್ಯ ಸಭಾಧ್ಯಕ್ಷರು ಏನು ಸಂತಾಪ ಸೂಚನೆಯನ್ನು ತಂದಿದ್ದಾರೆ ಅದಕ್ಕೆ ನಾನು ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಸುರೇಶ್ ಕುಮಾರ್ ಎಸ್. (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಮಾನ್ಯ ಅಧ್ಯಕ್ಷರೆ, ಸುಮಾರು 10 ಜನ ಮಹನೀಯರು ಯಾರು ತೀರಿಕೊಂಡಿದ್ದಾರೆ ಹಾಗೂ ಮಂಗಳೂರಿನಲ್ಲಿ ಏನು ಅಪಘಾತವಾಯಿತು, ಅಲ್ಲಿ ಯಾರ್‍ಯಾರು ತೀರಿಕೊಂಡಿದ್ದಾರೆ ಅದರ ಬಗ್ಗೆ ಇವತ್ತಿನ ಸಭೆಯ ಮುಂದೆ ಸಂತಾಪ ಸೂಚನಾ ನಿರ್ಣಯವನ್ನು ತಂದಿದ್ದೀರಿ. ಇದರಲ್ಲಿ ನನ್ನ ಧ್ವನಿಯನ್ನು ಕೂಡ ಸೇರಿಸುತ್ತಾ ಕೆಲವು ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಮಾನ್ಯ ಸಿದ್ದರಾಮಯ್ಯರವರು ಹೇಳಿದ ಹಾಗೆ ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ್‌ರವರು ನಮ್ಮ ಸದನದಲ್ಲಿ ನಮ್ಮ ಜೊತೆಯಲ್ಲಿ ಕಾರ್ಯ ಮಾಡುತ್ತಿದ್ದ ಒಬ್ಬ ಸಕ್ರಿಯ ಶಾಸಕರಾಗಿದ್ದರು. ಅವರು ತೀರಿಕೊಳ್ಳುವ ವಯಸ್ಸು ಅವರಿಗೆ ಆಗಿರಲಿಲ್ಲ. 52 ವಯಸ್ಸು ತೀರಿಕೊಳ್ಳುವ ವಯಸ್ಸು ಅಲ್ಲ. ಒಳ್ಳೆಯ ಕೆಲಸ ಮಾಡಿ ಜನಪ್ರಿಯತೆಗಳಿಸಿ ಎರಡನೇ ಬಾರಿಯೂ ಸಹ ಗೆದ್ದು ಕಾರ್ಯ ಮಾಡುತ್ತಿದ್ದರು. ಅವರು ತೀರಿಕೊಂಡು ವಿಶೇಷವಾಗಿ ನಮ್ಮ ಪಕ್ಷಕ್ಕೂ ಕೂಡ ನಷ್ಟ ಸಂಭವಿಸಿದೆ. ಅವರ ಕ್ಷೇತ್ರದ ಜನಕ್ಕೆ ನಷ್ಟ ಸಂಭವಿಸಿದೆ. ಇನ್ನು ಮಾನ್ಯ ಬೈರೋನ್ ಸಿಂಗ್ ಶೆಖಾವತ್‌ರವರ ಬಗ್ಗೆ ಹೇಳಬೇಕಾದರೆ, ರಾಜಕೀಯದಲ್ಲಿ ಅಜಾತಶತ್ರು ಎಂದು ಯಾರ್‍ಯಾರ ಬಗ್ಗೆಯೋ ನಾವು ಹೇಳುತ್ತಿರುತ್ತೇವೆ. ಒಬ್ಬ ನಿಜವಾದ 'ಅಜಾತಶತ್ರು'ವನ್ನು ನಾವು ನೋಡಿರುವುದು ಎಂದರೆ ಬೈರೋನ್ ಸಿಂಗ್ ಶೆಖಾವತ್‌ರವರು. ಅವರ ಬಗ್ಗೆ ಅವರು ಒಂದು ಪಕ್ಷಕ್ಕೆ ಮಾತ್ರ ಸೀಮಿತವಾಗಿರಲಿಲ್ಲ ಎಂದು ಮಾನ್ಯ ಸಿದ್ದರಾಮಯ್ಯರವರು ಬಹಳ ಚೆನ್ನಾಗಿ ಹೇಳಿದರು. ಎಲ್ಲರೂ ಕೂಡ ಅವರನ್ನು ಪ್ರೀತಿಸುತ್ತಿದ್ದರು ಹಾಗೂ ಗೌರವಿಸುತ್ತಿದ್ದರು ಎಂದು ಒಂದು ಮಾತನ್ನು ಹೇಳಿದರು. ಇದು ನಮ್ಮ ಪ್ರಜಾಪ್ರಭುತ್ವದ ಒಂದು ವೈಶಿಷ್ಟ್ಯ. ಒಬ್ಬ ಪೊಲೀಸ್ ಕಾನ್ಸ್‌ಟೇಬಲ್ ಆಗಿದ್ದಂತಹ ವ್ಯಕ್ತಿ ಉಪ ರಾಷ್ಟ್ರಪತಿ ಮಟ್ಟಕ್ಕೆ ಏರಿ, ರಾಜ್ಯ ಸಭಾ ಸಭಾಪತಿಯಾಗಿ ಕಾರ್ಯನಿರ್ವಹಿಸಿರುವುದು ನಿಜವಾಗಿಯೂ ಕೂಡ ಪ್ರಜಾಪ್ರಭುತ್ವದ ಒಂದು ವೈಶಿಷ್ಟ್ಯ. ನನಗೆ ಚೆನ್ನಾಗಿ ನೆನಪಿದೆ, 77ನೇ ಇಸವಿಯಲ್ಲಿ ಅವರು ಮುಖ್ಯಮಂತ್ರಿಯಾದಾಗ, ದೇಶದಲ್ಲಿಯೇ ಮೊಟ್ಟ ಮೊದಲನೇಯ ಬಾರಿಗೆ 'ಅಂತ್ಯೋದಯ' ಎನ್ನುವ ಒಂದು ಯೋಜನೆಯನ್ನು ತಂದರು. ಪ್ರತಿ ಗ್ರಾಮದಲ್ಲಿ ಐದು ಕುಟುಂಬಗಳನ್ನು ಆರಿಸಿ, ಆ ಕುಟುಂಬಗಳಿಗೆ ಅವರವರ ಕಾಲಿನ ಮೇಲೆ ನಿಂತುಕೊಳ್ಳುವ ಒಂದು ಯೋಜನೆಯನ್ನು ಬಹಳ ಯಶಸ್ವಿಯಾಗಿ ತಂದರು ಮಾನ್ಯ ಬೈರೋನ್

ಸಿಂಗ್ ಶೆಖಾವತ್‌ರವರು. ರಾಜ್ಯ ಸಭಾ ಸಭಾಪತಿಗಳಾಗಿಯೂ ಕೂಡ ಬಹಳ ಮಾದರಿ ರೀತಿಯಲ್ಲಿ ಆ ಸಭೆಯನ್ನು ನಡೆಸಿದ ಕೀರ್ತಿ ಮಾನ್ಯ ಬೈರೋನ್ ಸಿಂಗ್ ಶೆಖಾವತ್‌ರವರಿಗೆ ಸೇರುತ್ತದೆ. ಬಹಳ ಅತ್ಯಂತ ದೀರ್ಘಕಾಲದ, ಪ್ರಾಯಶಃ ಮಾನ್ಯ ಬೈರೋನ್ ಸಿಂಗ್ ಶೇಖಾವತ್‌ರವರ ಜೀವನವನ್ನು ನಾವು ನೋಡಿದರೆ ಭಾರತದ ಜೀವನ ಗೊತ್ತಾಗುತ್ತದೆ. ಸ್ವಾತಂತ್ರ್ಯಾನಂತರದ ಒಂದು ರಾಜಕೀಯ ಜೀವನ ಗೊತ್ತಾಗುತ್ತದೆ. ಆ ರೀತಿಯ ಮಹಾನ್ ವ್ಯಕ್ತಿ ಅವರು. ಪ್ರಾಯಶಃ ನಾವೆಲ್ಲರೂ ಕೂಡ ಅವರನ್ನು ನೋಡಿ ಕಲಿಯುವಂತಹ ಪಾಠಗಳು ಬಹಳ ಇವೆ. ಬೈರೋನ್ ಸಿಂಗ್ ಶೆಖಾವತ್‌ರವರ ಜೀವನದಲ್ಲಿ ನಾನು ಕಲಿಯುವುದು ಏನೆಂದರೆ, ನಾವುಗಳು ಬೇರೆ ಬೇರೆ ಪಕ್ಷಗಳಲ್ಲಿ ಇರುತ್ತೇವೆ. ನಾವು ಪರಸ್ಪರ ಶತ್ರುಗಳು ಎಂದು ತಿಳಿದುಕೊಂಡು ಬಹಳ ಸಲ ಭಾವಿಸುತ್ತೇವೆ. ಖಂಡಿತ ಶತ್ರುಗಳಲ್ಲ. ಪರಸ್ಪರ ವಿರೋಧದ ವಿಚಾರ ಹಾಗೂ ವಿರೋಧದ ಭಾವನೆಗಳನ್ನು ಇಟ್ಟುಕೊಂಡಿರುತ್ತೇವೆ. ಶತ್ರು ಎನ್ನುವ ವಿಚಾರಕ್ಕೆ ತಿಲಾಂಜಲಿಯನ್ನು ಕೊಟ್ಟು, ರಾಜಕೀಯ ವಿರೋಧಿಗಳು ಎಂದರೆ ಪರವಾಗಿಲ್ಲ. ಆದರೆ, ರಾಜಕೀಯ ಶತ್ರುಗಳು ಅಲ್ಲ ಎನ್ನುವುದನ್ನು ಮಾನ್ಯ ಬೈರೋನ್ ಸಿಂಗ್ ಶೆಖಾವತ್‌ರವರ ಜೀವನದಿಂದ ನಾವು ಕಲಿಯಬೇಕಾಗಿದೆ.

ಶ್ರೀ ಬೈರೋನ್ ಸಿಂಗ್ ಶೆಖಾವತ್‌ರಲ್ಲಿ ಇಡೀ ದೇಶಕ್ಕೇ ಬಹಳ ಉತ್ತಮವಾದ ಒಂದು ಮಾರ್ಗದರ್ಶನ ಮಾಡುವ ಶಕ್ತಿ, ಅರ್ಹತೆ ಇತ್ತು. ಅವರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ.

ಈಗಾಗಲೇ ಶ್ರೀ ಹನುಮಂತರಾವ್ ದೇಸಾಯಿ ಅವರ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಶ್ರೀಯುತರು ನಮ್ಮ ಸದನದಲ್ಲಿ ಸದಸ್ಯರಾಗಿ, ವಿಶೇಷವಾಗಿ ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನ ಕಲ್ಪಿಸುವ ಹೋರಾಟದಲ್ಲಿ, ಆಂದೋಲನದಲ್ಲಿ ಭಾಗವಹಿಸಿದ್ದರು. ಅದೇ ರೀತಿ ಶ್ರೀ ಸಿ. ಅಂದಾನಪ್ಪನವರು ನಮ್ಮ ಸದನದ ಸದಸ್ಯರಾಗಿದ್ದರು. ಶ್ರೀ ಎ.ದೊಣ್ಣೇಗೌಡರು ಒಬ್ಬ ಎತ್ತರದ ನಿಲುವಿನ ವ್ಯಕ್ತಿ. ನಮ್ಮ ಜೊತೆಯಲ್ಲಿ 1999ನೇ ಇಸವಿಯಲ್ಲಿ ಸದನದಲ್ಲಿ ಕುಳಿತುಕೊಂಡು ಕಾರ್ಯ ಮಾಡುತ್ತಿದ್ದರು. ಶ್ರೀ ನಾನಾಜಿ ದೇಶ್‌ಮುಖ್‌ರವರು, ಪ್ರಾಯಶಃ ಭಾರತದ ರಾಜಕಾರಣದಲ್ಲಿ ಅತ್ಯಂತ ವಿಶೇಷವಾದ ಒಂದು ಸ್ಥಾನವನ್ನು ಇಟ್ಟುಕೊಂಡಂಥವರು ಆಗಿದ್ದರು. ನನಗೆ ನೆನಪಿಗೆ ಬರುವುದು 1973-1974-1975, ಅಂದು ದೇಶಾದ್ಯಂತ ಏನು ಶ್ರೀ ಜಯಪ್ರಕಾಶ್ ನಾರಾಯಣ್‌ರವರ ನೇತೃತ್ವದಲ್ಲಿ ಗುಜರಾತ್ ಹಾಗೂ ಬಿಹಾರದಲ್ಲಿ ಆಂದೋಲನವಾಯಿತು, ಆ ಬಿಹಾರದಲ್ಲಿ ಆಂದೋಲನ

ವಾದಾಗ, ಬಹಳ ದೊಡ್ಡ ಸಂಖ್ಯೆಯಲ್ಲಿ ಸೇರಿದ್ದ ಆಂದೋಲನದಲ್ಲಿ ಚಳುವಳಿಗಾರರು ಇದ್ದಾಗ, ಸ್ವತಃ ಜಯಪ್ರಕಾಶ್ ನಾರಾಯಣ್‌ರವರ ಮೇಲೆ ಲಾಠಿ ಪ್ರಹಾರವಾಗುವ ಸಂದರ್ಭ ಬಂದಾಗ, ಜಯಪ್ರಕಾಶ್ ನಾರಾಯಣ ರವರಿಗೆ ಅಡ್ಡವಾಗಿ ತಮ್ಮ ಕೈಯನ್ನು ಕೊಟ್ಟು ಜಯಪ್ರಕಾಶ್ ನಾರಾಯಣ್ ರವರನ್ನು ಉಳಿಸಿದ ವ್ಯಕ್ತಿ ನಾನಾಜಿ. ಆವತ್ತು ಅವರ ಕೈ fracture ಆಯಿತು, ಎಲ್ಲಾ ಆಯಿತು. ನಾವು ನಮ್ಮ ದೇಶದ ರಾಜಕಾರಣದಲ್ಲಿ ಒಬ್ಬ ಚಿಂತಕ ಎಂದು ಕರೆಯುವ ದೀನ್ ದಯಾಳ್ ಉಪಾಧ್ಯಾಯ ಅವರ ಜೊತೆಗೆ ಒಂದೇ ಕೊಠಡಿಯಲ್ಲಿದ್ದುಕೊಂಡು ಕೆಲಸ ಮಾಡಿಕೊಂಡು ಬಂದವರು ನಾನಾಜಿ ದೇಶ್‌ಮುಖ್‌ರವರು. 1977ನೇ ಇಸವಿಯಲ್ಲಿ ಅವರು ಪಾರ್ಲಿಮೆಂಟ್‌ಗೆ ಗೆದ್ದಿದ್ದರು. ಮೊರಾರ್ಜಿದೇಸಾಯಿಯವರ ಸಚಿವ ಸಂಪುಟದಲ್ಲಿ ಅವರಿಗೆ ಸಚಿವ ಸ್ಥಾನವನ್ನು ಕೊಟ್ಟರು. ಆದರೆ ನನಗೆ ಸಚಿವ ಸ್ಥಾನ ಬೇಡವೆಂದು ಹೇಳಿ, 60 ವರ್ಷ ಆದಮೇಲೆ ಸಕ್ರಿಯ ರಾಜಕಾರಣದಲ್ಲಿ ಇರಬಾರದು ಎಂದು ತೀರ್ಮಾನ ತೆಗೆದುಕೊಂಡು ಅತ್ಯಂತ ಹಿಂದುಳಿದ ಪ್ರದೇಶವಾದ ಮಧ್ಯಪ್ರದೇಶದ ಚಿತ್ರಕೂಟಕ್ಕೆ ಹೋಗಿ, ಅಲ್ಲಿ ದೇಶ ವಿದೇಶಗಳ ಗಮನ ಸೆಳೆಯುವಂಥ ಅದ್ಭುತವಾದ ಸಮಾಜ ಕಾರ್ಯವನ್ನು ಮಾಡಿದವರು ನಾನಾಜಿ ದೇಶ್‌ಮುಖ್‌ರವರು. ಬಹಳ ಇಳಿ ವಯಸ್ಸಿನಲ್ಲಿ ಅವರು ತೀರಿಕೊಂಡಿದ್ದಾರೆ. ನಾವು ಯಾರು ರಾಜಕೀಯ ಶಾಸ್ತ್ರದ ವಿದ್ಯಾರ್ಥಿಗಳು ಎಂದು ತಿಳಿದುಕೊಂಡು ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇವೆ, ನಮಗೆ ಬಹಳ ಅತ್ಯುತ್ತಮ ಪಾಠ, ಅತ್ಯುತ್ತಮ ಮಾರ್ಗದರ್ಶನ ನಾನಾಜಿ ದೇಶ್‌ಮುಖ್ ರವರ ಜೀವನದಲ್ಲಿ ಕೂಡ ಸಿಗುತ್ತದೆ.

ಇನ್ನು ಶ್ರೀ ಸುರೇಂದ್ರ ದಾನಿಯವರು, ಒಬ್ಬರು ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಾರರಾಗಿ, 'Quit India Movement' ನಲ್ಲಿ ಸಕ್ರಿಯವಾಗಿ ಭಾಗವಹಿಸಿ, ಅದೇ ಕೆಚ್ಚು, ಅದೇ ಕಿಚ್ಚನ್ನು ಉಳಿಸಿಕೊಂಡು, ಒಬ್ಬ ಪತ್ರಕರ್ತರಾಗಿ, ಸಂಪಾದಕರಾಗಿ, 'ಸಂಯುಕ್ತ ಕರ್ನಾಟಕ' ಪತ್ರಿಕೆಯನ್ನು ಜನರ ಧ್ವನಿಯನ್ನಾಗಿ ಮಾಡಿದ ಕೀರ್ತಿ, ಶ್ರೇಯಸ್ಸು ಸುರೇಂದ್ರ ದಾನಿಯವರದ್ದು. ಇವತ್ತು ಆ ರೀತಿಯ ಭಾವನೆ, ಅದೇ ರೀತಿಯ ಒಂದು ಉತ್ಕಟ ದೇಶಾಭಿಮಾನ ನಾವು ಕಾಣುವುದು ಸ್ವಲ್ಪ ಅಪರೂಪವೇ. ಅಂತಹ ಸುರೇಂದ್ರ ದಾನಿಯವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ.

ವಿಶೇಷವಾಗಿ ನಮಗೆ, ಏನು ಸುಬ್ಬರಾಯ್ ನಾರಾಯಣ್ ಮಲ್ಯ, ಬೇ.ಸು.ನಾ. ಮಲ್ಯ ಎಂದು ಕರೆಯುತ್ತೇವೆ ಅವರು ನನ್ನಂಥ ಅನೇಕರಿಗೆ ಜೀವನದಲ್ಲಿ ಮಾರ್ಗದರ್ಶನ ಮಾಡಿದವರು. ಕೆನರಾ ಬ್ಯಾಂಕ್‌ನಲ್ಲಿ ಬಹಳ ಉನ್ನತ ಹುದ್ದೆಯಲ್ಲಿದ್ದರು. ಯಾವುದೋ ಒಂದು ಸಮಯದಲ್ಲಿ 'ಇದನ್ನು ಬಿಟ್ಟುಬಿಡು ಈ ಪೇಪರ್ ನಡೆಸು' ಎಂದು ಕೇಳಿದರು. ಪ್ರಾಯಶಃ ಅವರು ಅದೇ ಹುದ್ದೆಯಲ್ಲಿ ಮುಂದುವರೆದಿದ್ದರೆ ಕೆನರಾ ಬ್ಯಾಂಕಿನ Vice Chairman, ಆ ರೀತಿಯ ಹುದ್ದೆಗೆ ಹೋಗಬಹುದಾಗಿತ್ತು. ಅದನ್ನು ಬಿಟ್ಟು ಸಂಬಳ ಇಲ್ಲದ, ಕೇವಲ ಸಮಸ್ಯೆ ಇದ್ದ, ಒಂದು ದೇಶಾಭಿಮಾನ ಭಾವನೆ ಮೂಡಿಸುವಂಥ ಪತ್ರಿಕೆಗೆ editor ಆಗಿದ್ದರು. ನನಗೇ ವೈಯಕ್ತಿಕವಾಗಿ ಬೇ.ಸು.ನಾ. ಮಲ್ಯರವರು ಯಾವ ರೀತಿ ಹತ್ತಿರವೆಂದರೆ, 1977ನೇ ಇಸವಿ ನವೆಂಬರ್ 10ನೇ ತಾರೀಖು ಹೈಗ್ರೌಂಡ್ಸ್ ಪೋಲೀಸ್ ಸ್ಟೇಷನ್‌ನಿಂದ ನೇರವಾಗಿ ನನ್ನನ್ನು ಜೈಲಿಗೆ ಕರೆದುಕೊಂಡು ಹೋದರು. ರಾತ್ರಿ ಹತ್ತು ಗಂಟೆಯಾಗಿತ್ತು, ಮೊದಲು ನನ್ನನ್ನು ಜೈಲಿನಲ್ಲಿ ಸ್ವಾಗತಿಸಿ, ನನ್ನ ಮೈದಡವಿ ಏನಪ್ಪಾ ಪೊಲೀಸಿನವರು ತುಂಬಾ ಹೊಡೆದರೆ, ನೀನು ತುಂಬ ಬಳಲಿದ್ದೀಯಾ, ನಾಲ್ಕು ದಿವಸ ನಿನ್ನ ಹೊಟ್ಟೆಗೂ ಕೂಡ ಹಾಕಲಿಲ್ಲವೆಂದು ಮೈದಡವಿ ನೋಡಿಕೊಂಡು ತಾವು ಕೂಡ ಊಟ ಮಾಡದೇ ಅವತ್ತು ಎಲ್ಲಾ ನಾಲ್ಕೂ ಜನರಿಗೂ ಊಟವನ್ನು ಬಡಿಸಿದವರು ಬೇ.ಸು.ನಾ.ಮಲ್ಯರವರು. ನಿಜವಾಗಿಯೂ ಕೂಡ ಹೃದಯದಿಂದ, ಮನಸ್ಸಿನಿಂದ ಬಹಳ ವಿಶಾಲತೆ ಹೊಂದಿದ ವ್ಯಕ್ತಿ ಬೇ.ಸು.ನಾ. ಮಲ್ಯರವರು. ಬಹಳ ಉತ್ಕೃಷ್ಟ ದೇಶಾಭಿಮಾನ ಮತ್ತು ಸಮಾಜಮುಖಿ, ಒಬ್ಬರು ಪತ್ರಕರ್ತರಾಗಿ ಕಾರ್ಯ ಮಾಡಿದವರು. ಕಳೆದ ಬಾರಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಕೂಡ ದೊರಕಿತ್ತು.

ಇನ್ನು ಶ್ರೀ ಮನೋಹರ್ ಮಾಳಗಾವಂಕರ್‌ರವರು, ಪ್ರಾಯಶಃ ನಮ್ಮ ರಾಜ್ಯದಲ್ಲೇ ಅಲ್ಲ, ಇಡೀ ದೇಶದಲ್ಲಿ ಜನಪ್ರಿಯತೆಗಳಿಸಿದ, ಹೊರಹೊಮ್ಮಿದ ಅತ್ಯುತ್ತಮ ಲೇಖಕ ಮತ್ತು ಕಾದಂಬರಿಕಾರ. ಅವರು ಸೇನಾಧಿಕಾರಿಯಾಗಿದ್ದರು ಎಂದು ಮಾನ್ಯ ಸಿದ್ದರಾಮಯ್ಯನವರು ಹೇಳಿದರು. ಅವರ ಅನುಭವ, ದಿಟ್ಟತನ, ಅವರ ಲೇಖನದಲ್ಲಿಯೂ ಕಾಣುತ್ತಿತ್ತು. ಅವರ ಅನೇಕ ಪುಸ್ತಕಗಳನ್ನು ಓದಿದ್ದೇನೆ. ಅದರಲ್ಲಿ 'Men who Killed Gandhi' ಎನ್ನುವ ಒಂದು ಪುಸ್ತಕವನ್ನು ಅವರು ಬರೆದಿದ್ದಾರೆ. ಅದನ್ನು ಓದಿದರೆ

ನಾವೇ ಆ ಪ್ರಕರಣದ ಒಂದು ಸಾಕ್ಷಿಯಾಗಿದ್ದೇವೆಯೇ, ನೋಡುತ್ತಿದ್ದೇವೆಯೇ ಎನ್ನುವ ರೀತಿಯಲ್ಲಿ ಅವರು ಬರೆದಿದ್ದಾರೆ. ಅದು ಬಹಳ ಸುಪ್ರಸಿದ್ಧ ಪುಸ್ತಕ.

ಶ್ರೀ ಮಹಾ ಪ್ರಜ್ಞಾಜೀ, ಜೈನ ಸಂನ್ಯಾಸಿನಿಗಳು ಹೇಗಿರುತ್ತಾರೆಂದು ನಮಗೆ ಗೊತ್ತಿದೆ. ಅವರ ಜೀವನ ಬಹಳ ಕಠಿಣ. ಎಲ್ಲೂ ಕೂಡ ಅವರು ವಾಹನ ಹತ್ತುವುದಿಲ್ಲ. ಒಂದು ಲಕ್ಷ ಕಿ.ಮೀ.ವರೆಗೆ ಅವರು ನಡೆದಿದ್ದಾರೆ. ಹಾಗೆ ನಡೆಯುತ್ತಾ, ಹೆಣ್ಣು ಭ್ರೂಣ ಹತ್ಯೆ ಮತ್ತು ಅಹಿಂಸಾ ತತ್ವ ಈ ಬಗ್ಗೆ ಜನರಲ್ಲಿ ಜಾಗೃತಿ ಉಂಟು ಮಾಡಿರುವುದು ಒಂದು ಮಹಾನ್ ಕಾರ್ಯ. ಅಂತಹವರು ಇವತ್ತು ತೀರಿಕೊಂಡಿದ್ದಾರೆ.

ಮಂಗಳೂರಿನ ವಿಮಾನ ದುರಂತ, ನಾವು ಕಂಡಿರಲಿಲ್ಲ, ಕೇಳಿರಲಿಲ್ಲ, ಮುಂದೆ ಕಾಣುವುದಕ್ಕೆ ಇಷ್ಟಪಡುವುದಿಲ್ಲ ಅಂತಹ ಒಂದು ದುರಂತ. ಸುಮಾರು 158 ಜನ ತೀರಿಕೊಂಡಿದ್ದಾರೆ. ಅವರಿಗೆಲ್ಲರಿಗೂ ಶ್ರದ್ಧಾಂಜಲಿ ಅರ್ಪಿಸುತ್ತಾ, ಮಂಗಳೂರು ಘಟನೆಯಿಂದ ನಾವು ಪಾಠವನ್ನು ಕೂಡ ಕಲಿಯಬೇಕಾಗಿದೆ. ಇಂತಹ ದುರಂತ ಮರುಕಳಿಸದ ರೀತಿಯಲ್ಲಿ ಏನು ಮಾಡಬೇಕು? ಅದನ್ನು ಇಲಾಖೆಯವರು ಮಾಡುತ್ತಾರೆ. ಆದರೆ, at the same time, ಮಂಗಳೂರಿನ ಜಿಲ್ಲಾಡಳಿತ ಆವತ್ತು ದುರಂತ ಆದ ತಕ್ಷಣ ಅವರು ಪ್ರತಿಕ್ರಿಯಿಸಿದ ರೀತಿ, ಸಾಮಾನ್ಯವಾಗಿ, ಬರುವುದಿಲ್ಲ, ಅದು ಮಾಡುವುದಿಲ್ಲವೆಂದು ನಾವೆಲ್ಲಾ ಬೈಯುತ್ತಿರುತ್ತೇವೆ. ಆದರೆ ಯಾರೂ ಕೂಡ ಅಪಸ್ವರ ತೆಗೆಯದ ರೀತಿಯಲ್ಲಿ ಅಲ್ಲಿನ ಜಿಲ್ಲಾ ಪೊಲೀಸ್ ಇರಬಹುದು, ಜಿಲ್ಲಾ ಅಗ್ನಿಶಾಮಕ ದಳ ಇರಬಹುದು, ಬೇರೆ ನಮ್ಮ ಕೇಂದ್ರದಿಂದ ಬಂದ ಪಡೆಗಳು, ಇರಬಹುದು, ಬಹಳ ತುರ್ತಾಗಿ ಆ ಜಾಗಕ್ಕೆ ಹೋಗಿ, ಒಂದೇ ಒಂದು ನಿಮಿಷವನ್ನೂ ವ್ಯರ್ಥ ಮಾಡದೇ ಎಷ್ಟು ಜನಕ್ಕೆ ಉಳಿಸಲಿಕ್ಕೆ ಸಾಧ್ಯವೋ ಅವೆಲ್ಲಾ ಕಾರ್ಯವನ್ನು ಮಾಡಿದರು. ಮಾನ್ಯ ಸಿದ್ಧರಾಮಯ್ಯನವರೂ ಒಂದು ಮಾತನ್ನು ಹೇಳಿದರು, ಏನೆಂದರೆ ವಿಮಾನದಲ್ಲಿದ್ದ ಜನರೆಲ್ಲರೂ ಕರಕಲಾಗಿದ್ದರು ಎಂದು. ಎಷ್ಟರಮಟ್ಟಿಗೆ ಕರಕಲಾಗಿದ್ದರು ಎಂದರೆ, ಕೆಲವು ಬಂಧುಗಳಿಗೆ ನಮ್ಮ ಪೈಕಿ ಸತ್ತವರು ಯಾರು ಎಂದು ಗುರುತೇ ಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲ. ಅಂಥವರನ್ನೆಲ್ಲಾ ಸಾಮೂಹಿಕವಾಗಿ ದಹನವಾಯು ಮಾಡಿದರು. ಅಂದರೆ ಸತ್ತ ಮೇಲೆ ಜಾತಿಯೂ ಇಲ್ಲ, ಕುಲವೂ ಇಲ್ಲ, ಯಾವುದೂ ಇಲ್ಲ ಎನ್ನುವುದನ್ನು ಆ ಒಂದು ಪ್ರಸಂಗ ನಮಗೆ ತೋರಿಸುತ್ತದೆ. ಅದರ ಜೊತೆಗೆ ಚಳ್ಳಕೆರೆಯಲ್ಲಿ ಒಂದು ಪ್ರಸಂಗ

ನಡೆಯಿತು. ಸಾರಿಗೆ ಬಸ್ಸು ಬಂದು, ಸೀಮೆಎಣ್ಣೆ ಸುರಿದು ಬೆಂಕಿ ಹತ್ತಿಕೊಂಡಿದ್ದು ಅದು ಆಗಬಾರದಿತ್ತು. ಆವತ್ತು ನಮ್ಮ ಸುರಪುರದ ಶಾಸಕರು ಕೂಡ ಬಹಳ ತುರ್ತಾಗಿ ಹೋಗಿದ್ದು ನಾನು ಪತ್ರಿಕೆಯಲ್ಲಿ ಓದಿದ್ದೆ. ಈ ರೀತಿ ದುರಂತಗಳು ಯಾರ ಹೃದಯವನ್ನಾದರೂ ಮುಟ್ಟಿಸುತ್ತದೆ ಮತ್ತು ಕರಗಿಸುತ್ತದೆ. ಕರಕಲಾಗಿರುವ ದೇಹಗಳ ಬಗ್ಗೆ ಪೇಪರ್‌ನಲ್ಲಿ ಓದುವುದು, ಟಿ.ವಿ ಯಲ್ಲಿ ನೋಡುವುದೇ ಕಷ್ಟ. ಅಲ್ಲಿದ್ದುಕೊಂಡು ಯಾವ ರೀತಿ ಕೆಲಸ ಮಾಡಿದರು ಎನ್ನುವುದು ಗೊತ್ತಿಲ್ಲ. ಒಟ್ಟಾರೆ ಈ ರೀತಿ ಯಾರ್ಯಾರು ದೇಶಕ್ಕೆ, ಸಮಾಜಕ್ಕೆ ಕೊಡುಗೆಯನ್ನು ಕೊಟ್ಟಿದ್ದಾರೋ, ಜೊತೆಗೆ ತೀರಿಕೊಳ್ಳಬಾರದ ರೀತಿಯಲ್ಲಿ ತೀರಿಕೊಂಡಿದ್ದಾರೋ ಅವರೆಲ್ಲರಿಗೂ ಕೂಡ ನಾನು ಶ್ರದ್ಧಾಂಜಲಿ ಅರ್ಪಿಸಿ ಅವರ ಕುಟುಂಬಕ್ಕೆ ದುಃಖವನ್ನು ಭರಿಸುವ ಶಕ್ತಿ, ಧೈರ್ಯ ಕೊಡಲಿ ಎಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ನಂಜನಗೂಡು) : ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿದಂಥ ಈ ಒಂದು ಸಂತಾಪ ಸೂಚನ ನಿರ್ಣಯ ಏನಿದೆ, ಅಗಲಿದ ರಾಷ್ಟ್ರ ಮತ್ತು ರಾಜ್ಯ ಮಟ್ಟದ ನಾಯಕರುಗಳು ಹಾಗೂ ಮಂಗಳೂರು ಬಜ್ಪೆ ವಿಮಾನ ನಿಲ್ದಾಣದಲ್ಲಿ ನಡೆದಂಥ ಕ್ರೂರ ದುರಂತದ ಬಗ್ಗೆ ಈ ಒಂದು ಶ್ರದ್ಧಾಂಜಲಿ ಅರ್ಪಿಸುವಂಥ ನಿರ್ಣಯವನ್ನು ತಾವು ಮಂಡಿಸಿದ್ದೀರಿ. ಈಗಾಗಲೇ ಈ ನಿರ್ಣಯದ ಬಗ್ಗೆ ಸದನದ ನಾಯಕರಾದ ಸನ್ಮಾನ್ಯ ಮುಖ್ಯಮಂತ್ರಿಗಳೂ ಮಾತನಾಡಿದ್ದಾರೆ. ನಮ್ಮ ಶಾಸಕಾಂಗ ಪಕ್ಷದ ನಾಯಕರು ಕೂಡ ಮಾತನಾಡಿದ್ದಾರೆ, ಮಾನ್ಯ ರೇವಣ್ಣನವರು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದಂಥ ಮಾನ್ಯ ಎಸ್. ಸುರೇಶ್ ಕುಮಾರ್‌ರವರೂ ಮಾತನಾಡಿದ್ದಾರೆ. ಮತ್ತೆ ಅದನ್ನು repeat ಮಾಡುವುದಕ್ಕೆ ಹೋಗುವುದಿಲ್ಲ. ನಾನೂ ಕೂಡ ಅಗಲಿದ ರಾಷ್ಟ್ರ ಹಾಗೂ ರಾಜ್ಯದ ನಾಯಕರುಗಳಿಗೆ, ಬಜ್ಪೆ ವಿಮಾನ ನಿಲ್ದಾಣದಲ್ಲಿ ನಡೆದಂಥ ಕ್ರೂರ ದುರಂತ ದಲ್ಲಿ ಸಾವಿಗೀಡಾದಂಥ ಎಲ್ಲರಿಗೂ ಕೂಡ ನಾನು ನನ್ನ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ವಿಶೇಷವಾಗಿ ಶ್ರೀ ಬೈರೋನ್ ಸಿಂಗ್ ಶೆಖಾವತ್ ಬಗ್ಗೆ ಮಾತನಾಡುವಾಗ, ನನಗೆ ಅವರನ್ನು ನೋಡತಕ್ಕಂಥ ಅವಕಾಶ ಸಿಕ್ಕಿತ್ತು. ಅವರು ಕೇಂದ್ರದ ಮಂತ್ರಿಯಾಗಿದ್ದರು, ಈ ರಾಷ್ಟ್ರದ ಉಪರಾಷ್ಟ್ರಪತಿಗಳಾಗಿ, ರಾಜ್ಯ ಸಭೆಯ ಸಭಾಪತಿಗಳಾಗಿದಂಥವರು. ಅವರ ಹಿನ್ನಲೆಯ ಬಗ್ಗೆ ಕೂಡ ಹೇಳಿದರು. ದೇಶದಲ್ಲಿ ಮೊಟ್ಟಮೊದಲನೆಯದಾಗಿ

ನಡೆದಿಂದ ಚುನಾವಣೆ 1952 ರಲ್ಲಿ, ಅಂದಿನ ಭಾರತೀಯ ಜನಸಂಗತಿ ಬಗ್ಗೆ, ವಿಧಾನಸಭೆಗೆ ಆಯ್ಕೆಯಾಗಿರುವಂಥ ಕೆಲವು ಬೆರಳೆಣಿಕೆಯಷ್ಟರಲ್ಲಿ ಬೈರೋನ್ ಸಿಂಗ್ ಶೆಖಾವತ್‌ರವರೂ ಒಬ್ಬರಾಗಿದ್ದರು.

(1-30 PM)

ವಿಧಾನಸಭೆಗೆ ಆಯ್ಕೆಯಾಗಿದ್ದ ಬೆರಳೆಣಿಕೆಯಷ್ಟು ಸದಸ್ಯರಲ್ಲಿ ಬೈರೋನ್ ಸಿಂಗ್ ಶೆಖಾವತ್‌ರವರು ಸಹ ಒಬ್ಬರಾಗಿದ್ದರು. ಅನಂತರ 1977ರಲ್ಲಿ ಅವರು ರಾಜಾಸ್ಥಾನದ ಮುಖ್ಯಮಂತ್ರಿಗಳು ಆದರು. ಅವರ ರಾಜಕೀಯ ಹಿನ್ನೆಲೆಯಲ್ಲಿ ನೋಡಿದಾಗ ಒಂದು Conservative movement ಇಂದ ಬಂದಂಥವರು. Concervative Party ಇಂದ ಬಂದಂಥವರು. ಎಲ್ಲಾ ರಾಜಕೀಯ ಪಕ್ಷಗಳು ಹೆಚ್ಚು ಮಾತನಾಡತಕ್ಕದ್ದು ಮಹಾತ್ಮ ಗಾಂಧೀಜಿಯವರ ಬಗ್ಗೆ. ಅವರ ಸರ್ವೋದಯ ಮತ್ತು ಅಂತ್ಯೋದಯ ಎಂಬ ಎರಡೂ ಕಾರ್ಯಕ್ರಮಗಳನ್ನು ನಾವು ಗಮನದಲ್ಲಿಟ್ಟು ಕೊಂಡು ಮಾಡುತ್ತೇವೆ. ನಮ್ಮ ಯಾವುದೇ election manifesto ಆಗಲಿ, ಯಾವುದೇ Social economic Programmes ಆಗಲಿ ನಾವು ಗಾಂಧೀಜಿ ಯವರ ಚಿಂತನೆ ಆಧಾರದ ಮೇಲೆ, ಗ್ರಾಮ ಸ್ವರಾಜ್ಯದ ಆಧಾರದ ಮೇಲೆ ಮಾಡತಕ್ಕದ್ದು. ಆದರೆ, ನಾವು ಸರ್ವೋದಯದ ಬಗ್ಗೆ ಹೆಚ್ಚು ಮಾತನಾಡುತ್ತೇವೆ. ಅಂತ್ಯೋದಯದ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ಅಂತ್ಯೋದಯ ಎಂದರೆ ಸಮಾಜದಲ್ಲಿ ಅತ್ಯಂತ ಕೆಳಸ್ಥಳದಲ್ಲಿ ಇರತಕ್ಕವನು. ಗಾಂಧೀಜಿಯವರು ಅಂತ್ಯೋದಯ ಎಂದರೆ ಬೆಳಿಗ್ಗೆ ಎದ್ದು ಬಂಗಿ ಕಾಲೋನಿಯಲ್ಲಿ ಚಹಾ ಕುಡಿಯಲು ಹೋಗುತ್ತಿದ್ದರು. Sweeping Community ಎಂದು ಏನು ಹೇಳುತ್ತೇವೆ ಅಲ್ಲಿ ತಮ್ಮ ಕಾರ್ಯಕ್ರಮ ಪ್ರಾರಂಭ ಮಾಡುತ್ತಿದ್ದರು. ಅನಂತರ ಸರ್ವೋದಯ, ಎಲ್ಲರ ಬಗ್ಗೆ ಚಿಂತನೆ ಮಾಡತಕ್ಕದ್ದು. ಆದರೆ, ಅವರೇ ಸ್ವತಃ ಮುಖ್ಯಮಂತ್ರಿಗಳಾದಾಗ, ಅಂಥ ಕಾರ್ಯಕ್ರಮವನ್ನು ಬೈರೋನ್ ಸಿಂಗ್ ಶೆಖಾವತ್‌ರವರು ಅಂತ್ಯೋದಯಕ್ಕೆ ಬಹಳ ಆದ್ಯತೆ ಕೊಟ್ಟಂಥವರು. ಅನಂತರ ಸರ್ವೋದಯ ಬರತಕ್ಕದ್ದು. ಒಬ್ಬರು Constable ಆಗಿದ್ದಂಥವರು Sub Inspector ಆಗಿ ಬಡ್ತಿಯನ್ನು ಪಡೆದರೂ ಹೋಗದೇ ರಾಜಕೀಯಕ್ಕೆ ಪ್ರವೇಶ ಮಾಡಿದಂಥವರು. ಅವರು ಅಂಥ ಶೈಕ್ಷಣಿಕ ಹಿನ್ನೆಲೆಯನ್ನೇನೂ ಹೊಂದಿರಲಿಲ್ಲ. ವಿದ್ಯಾವಂಥರೇನು ಆಗಿರಲಿಲ್ಲ. ಆದರೆ, ಚುನಾಯಿತ ಪ್ರತಿನಿಧಿಗಳೆಲ್ಲರಿಗೂ ಇರಬೇಕಾದ

ಮೂಲಭೂತವಾದ ಗುಣವೇನಿದೆ 'humanitarian qualification is greater than academic qualification' ಎನ್ನುವ ಮಾತನ್ನು ಹೇಳುತ್ತಿರುತ್ತೇವೆ. ನಾವು ಶೈಕ್ಷಣಿಕವಾಗಿ ಎಷ್ಟೇ ಅರ್ಹತೆಗಳನ್ನು, ಪದವಿಯನ್ನು ಪಡೆದಿದ್ದರೂ ಮಾನವೀಯತೆಗೆ ಸ್ಪಂದಿಸುವ ಗುಣಗಳು ಇಲ್ಲದಿದ್ದರೆ ಅದು ನಿಶ್ಪ್ರಯೋಜಕ ಎನ್ನತಕ್ಕದ್ದು. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾರ್ವಜನಿಕ ಜೀವನದಲ್ಲಿ ಇದನ್ನು ಬಹುಶಃ ನಾವು ಬೈರೋನ್ ಸಿಂಗ್ ಶೆಖಾವತ್ ರವರಲ್ಲಿ, ಅವರು ಅಷ್ಟೊಂದು ಉನ್ನತ ಸ್ಥಾನಕ್ಕೆ ಬಂದಿದ್ದರೂ ಅವರಲ್ಲಿ ಇದ್ದಂಥ ಮಾನವೀಯತೆಯ ಗುಣಗಳನ್ನು ನೋಡಿದಾಗ ಅವರು ರಾಜಕೀಯವಾಗಿ ಒಬ್ಬರು ಅಜಾತಶತ್ರು. ನಾವು ಜನರಿಗೆ ಏನು ಆಶ್ವಾಸನೆ ಕೊಟ್ಟಿರುತ್ತೇವೆ, ನಾವು ರಾಜಕೀಯಕ್ಕೆ ಬಂದಾಗ ನಮ್ಮ ಆಲೋಚನೆಗಳು, ಚಿಂತನೆಗಳು ಏನಿರುತ್ತವೆ, ಆದರೆ ನಮಗೆ ಅಧಿಕಾರ ಸಿಕ್ಕಿದಾಗ ಅದನ್ನು ನಾವು ಎಷ್ಟು ಬೇಗ ಮರೆಯುತ್ತೇವೆ; ನಮಗೆ ಅಧಿಕಾರ ಸಿಕ್ಕಿದಾಗ ಎಂಥ intoxication ಆಗುತ್ತದೆ ಎಷ್ಟು ನಿಶೆ ಬರುವ ರೀತಿಯಲ್ಲಿ ನಾವು ಮೈಮರೆಯುತ್ತೇವೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಆದರೆ ಇವರು ಎಲ್ಲರಿಂದಲೂ ಹೊರತಾಗಿ, he was an exceptional ನಾಯಕರಾಗಿದ್ದಂಥವರು. He was an excellent human being. ನಾನು ಅವರನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಅವರು ಮುಖ್ಯಮಂತ್ರಿಯಾಗಿದ್ದಾಗ ಕೇಳಿದ್ದೆ. ನಾನು ಕೇಂದ್ರದಲ್ಲಿ ಮಂತ್ರಿಯಾಗಿದ್ದಾಗ ಬಹಳ ವಿಶೇಷವಾಗಿ ನನ್ನ ಮನಸ್ಸಿನ ಮೇಲೆ ಪರಿಣಾಮ ಬೀರಿದ್ದಂಥವರು. ನಾನು ಐದು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದಂಥವನು. ಲೋಕಸಭೆಯಲ್ಲಿ ಪ್ರಶ್ನೋತ್ತರ ಬಹಳ ಆಸಕ್ತಿಯುಳ್ಳ ವೇಳೆ. ಲೋಕಸಭೆ ಮತ್ತು ರಾಜ್ಯ ಸಭೆಯಲ್ಲಿ ಪ್ರಶ್ನೋತ್ತರ 11 ಗಂಟೆಯಿಂದ 12 ಗಂಟೆಯವರೆಗೆ. ಎಂದರೆ 12 ಗಂಟೆ ಒಂದು ನಿಮಿಷಕ್ಕೂ ಅಲ್ಲಿ ಮುಂದುವರೆಸುವುದಿಲ್ಲ. ಅಲ್ಲಿರತಕ್ಕದ್ದರಲ್ಲಿ ಪ್ರಶ್ನೋತ್ತರ ವೇಳೆ ಎಂದರೆ ಬಹಳ interesting hour. ಅಲ್ಲಿ ಸುಮಾರು 20, 21 Starred Questions ಚರ್ಚೆ ಮಾಡಲು ತೆಗೆದುಕೊಳ್ಳುತ್ತೇವೆ. ಅದರಲ್ಲಿ ಲೋಕಸಭೆ ಇರಬಹುದು, ರಾಜ್ಯಸಭೆ ಇರಬಹುದು, 4-5 ಪ್ರಶ್ನೆಗಳ ಮೇಲೆ ಆಗುತ್ತಿರಲಿಲ್ಲ. ಒಂದೊಂದು ಪ್ರಶ್ನೆ 15-20 ನಿಮಿಷ ತೆಗೆದುಕೊಂಡು ಬಿಡುತ್ತಿತ್ತು. ಆದರೆ, ಬೈರೋನ್ ಸಿಂಗ್ ಶೆಕಾವತ್ ನಡೆಸುತ್ತಿದ್ದ ಸದನದ ನಡವಳಿಕೆಗಳು ಇದೆಯಲ್ಲಾ 21 ಪ್ರಶ್ನೆಗಳು ಇದ್ದರೆ 19 ಪ್ರಶ್ನೆಗಳನ್ನು ಕೆಲವೊಂದು ಸಲ 20 ಪ್ರಶ್ನೆಗಳು ಬರುವ

ರೀತಿ ಮಾಡುತ್ತಿದ್ದರು. ಅಷ್ಟರ ಮಟ್ಟಿಗೆ ಸದನದ ಕಲಾಪವನ್ನೂ ಯಾರೂ ಕೂಡ ವಿರೋಧ ವ್ಯಕ್ತಪಡಿಸದಿರುವ ರೀತಿಯಲ್ಲಿ ನಡೆಸುತ್ತಿದ್ದರು. ಒಂದೊಂದು ಪ್ರಶ್ನೆಗೆ 3–4–5 ನಿಮಿಷ ಮಾತ್ರ ಕೊಡುತ್ತಿದ್ದರು. ಮುಖ್ಯ ಪ್ರಶ್ನೆಗೆ ಮಾತ್ರ ಸೀಮಿತವಾಗಿ Supplementary ಪ್ರಶ್ನೆಗಳಿಗೆ ಅವಕಾಶ ಕೊಡುತ್ತಿದ್ದರು. ಆ ರೀತಿ ಅವರು ರಾಜ್ಯ ಸಭೆಯ ಕಲಾಪಗಳನ್ನು ನಡೆಸುತ್ತಿದ್ದರು. ಕೇವಲ ಪ್ರಶ್ನೋತ್ತರ ವೇಳೆಯಲ್ಲ, ರಾಜ್ಯ ಸಭೆಯ ಇಡೀ ಕಲಾಪಗಳನ್ನು ಎಲ್ಲರ ಮನಸ್ಸನ್ನು ಗೆದ್ದು ತುಂಬಾ ಚೆನ್ನಾಗಿ ನಡೆಸುತ್ತಿದ್ದರು. ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದಂತೆ ಅವರು ಒಂದು Role Model. ಬಹಳ ಆದರ್ಶವಾದಂಥ ರಾಜಕಾರಣಿಗಳು ಇಂಡಿಯಾ ದೇಶದಲ್ಲಿ ಇದ್ದಾರೆ. ಅವರು ಯಾವುದೇ ಪಕ್ಷದವರಾಗಿರಬಹುದು, he has towering personality in Indian politics. ಯಾವುದೇ ಪಕ್ಷದಲ್ಲಿ ಇರತಕ್ಕವರು ಅವರು ನಮಗೆಲ್ಲರಿಗೂ ಬಹಳ ಆದರ್ಶವಾದಂಥವರು ಎಂಬುದನ್ನು ಇವತ್ತು ಈ ಸದನದಲ್ಲಿ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿರುವ ಸಮಯದಲ್ಲಿ ನಿಜಕ್ಕೂ ನಾವೆಲ್ಲರೂ ಯೋಚನೆ ಮಾಡುವ ನಿಟ್ಟಿನಲ್ಲಿ ಬೈರೋನ್ ಸಿಂಗ್ ಶೆಖಾವತ್ ರವರು ವ್ಯಕ್ತಿತ್ವ ರೂಪಿಸಿಕೊಂಡಿದ್ದರು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ನಾನಾಜಿ ದೇಶ್‌ಮುಖ್‌ರವರನ್ನು ನಾನು ನೋಡಿದ್ದೆ. ಅವರನ್ನು dedication ಎಂದು ಕೂಡ ಹೇಳಿದ್ದಾರೆ. ಸ್ವಾರ್ಥ ಇಲ್ಲದೆ ತ್ಯಾಗದ ಮನೋಭಾವ ಹೇಗಿರಬೇಕು ಎಂಬ ರೀತಿಯಲ್ಲಿ ನಾಯಕರಾಗಿದ್ದಂಥ ಮತ್ತೊಬ್ಬ ಮುಖಂಡರು ನಾನಾಜಿ ದೇಶ್‌ಮುಖ್‌ರವರು. ಮಾನ್ಯ ಸುರೇಶ್ ಕುಮಾರ್‌ರವರು ಅವರ ಬಗ್ಗೆ ಸಹ ಬಹಳ ಚೆನ್ನಾಗಿ ಹೇಳಿದರು. ಅದನ್ನು ನಾನು ರಿಪೀಟ್ ಮಾಡಲು ಹೋಗುವುದಿಲ್ಲ. ಮಾನ್ಯ ಸುರೇಶ್ ಕುಮಾರ್ ರವರು ಬಹಳ ಎಳೆ ಎಳೆಯಾಗಿ ಸಂಕ್ಷಿಪ್ತವಾಗಿ ಮಾತನಾಡಿದರೂ ಸಹ ನಾನಾಜಿ ದೇಶ್‌ಮುಖ್‌ರವರ ಬಗ್ಗೆಯೂ ತುಂಬಾ ಚೆನ್ನಾಗಿ ಹೇಳಿದ್ದಾರೆ. ಬೈರೋನ್ ಸಿಂಗ್ ಶೆಖಾವತ್, ನಾನಾಜಿ ದೇಶ್‌ಮುಖ್ ಮತ್ತು ಇತರ ಗಣ್ಯರೆಲ್ಲರೂ ನಮಗೆ ಆದರ್ಶವಾದಂಥ ವ್ಯಕ್ತಿಗಳು. ಅವರೆಲ್ಲರಿಗೂ ನಿಜವಾದಂಥ ಸಂತಾಪವನ್ನು ಶ್ರದ್ಧಾಂಜಲಿಯನ್ನು ಅರ್ಪಿಸತಕ್ಕದ್ದು. ನಾವೇನು ಈಗ ಮಾತನಾಡಿದ್ದೇವೆ ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಆ ದಿಕ್ಕಿನಲ್ಲಿ ಸ್ವಲ್ಪವಾದರೂ ಅನುಷ್ಠಾನಗೊಳಿಸಿ ಕಾರ್ಯಗತಕ್ಕೆ ತರುವ ನಿಟ್ಟಿನಲ್ಲಿ

ಪ್ರಯತ್ನವನ್ನು ಮಾಡಿದರೆ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಕ್ಕೂ ಸಾರ್ಥಕವಾಗುತ್ತದೆ ಎನ್ನುವ ಮಾತನ್ನು ಹೇಳಿ ಮತ್ತೊಮ್ಮೆ ನಾನು ಈ ಸದನದ ಪರವಾಗಿ ಅಗಲಿದ ನಾಯಕರೆಲ್ಲರ ಪರವಾಗಿ ನನ್ನ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು ತಂದಂಥ ಸಂತಾಪ ಸೂಚನೆಯನ್ನು ಬೆಂಬಲಿಸಿ ಇವತ್ತು ಅಗಲಿರುವಂಥ ನಮ್ಮ ನಾಯಕರುಗಳು ಮತ್ತು ಗಣ್ಯರು, ಅವರ ಬಗ್ಗೆ ಮಾತನಾಡುತ್ತಾ, ಅದರಲ್ಲೂ ಬೈರೋನ್ ಸಿಂಗ್ ಶೆಖಾವತ್‌ರವರ ಬಗ್ಗೆ ಹೇಳುವುದಾದರೆ, ಅವರು ಒಬ್ಬ ಅಜಾತಶತ್ರು, ಮಾನ್ಯ ಶ್ರೀನಿವಾಸಪ್ರಸಾದ್‌ರವರು ಮತ್ತು ಸುರೇಶ್‌ಕುಮಾರ್‌ರವರು ಬೈರೋನ್ ಸಿಂಗ್ ಶೆಖಾವತ್‌ರವರ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಒಬ್ಬ ಜನಪ್ರತಿನಿಧಿ ಯಾವ ರೀತಿಯಾಗಿ ಇರಬೇಕು ಎಂಬುದನ್ನು ತೋರಿಸಿ ಕೊಟ್ಟಂಥ ವ್ಯಕ್ತಿ ಶೆಖಾವತ್‌ರವರು. 1952ನೇ ಇಸವಿಯಿಂದ ವಿಧಾನ ಸಭೆಗೆ ಅವರ ಪ್ರವೇಶವಾದ ಮೇಲೆ ಅವರು ಎಂದೂ ಹಿಂದೆ ನೋಡಲೇ ಇಲ್ಲ. Continuous ಆಗಿ 9–10 ಸಲ ಅವರು ವಿಧಾನಸಭೆಗೆ ಆಯ್ಕೆಯಾಗಿದ್ದಾರೆ. ಬಹುಶಃ ಅದು ನಮ್ಮ ದೇಶದಲ್ಲಿ ದಾಖಲೆ ಇರಬಹುದು. 50 ವರ್ಷಕ್ಕೂ ಹೆಚ್ಚು ಕಾಲ ವಿಧಾನಸಭೆಯಲ್ಲಿ ಜನಪ್ರತಿನಿಧಿಯಾಗಿ ಕೆಲಸ ಮಾಡಿದಂಥ ಗೌರವ ಶೆಖಾವತ್‌ರವರಿಗೆ ಸೇರುತ್ತದೆ. ಅಂದರೆ ಅವರು ಯಾವ ರೀತಿಯಾಗಿ ಅಜಾತ ಶತ್ರುವಾಗಿದ್ದರು ಎಂಬುದಕ್ಕೆ ಇದೇ ಒಂದು ಸಾಕ್ಷಿಯೆಂದು ನಾನು ಹೇಳಬೇಕಾಗುತ್ತದೆ. ಅವರು ಮೂರು ಸಲ ಮುಖ್ಯಮಂತ್ರಿಗಳಾಗಿದ್ದರು. ಇಡೀ ರಾಷ್ಟ್ರದಲ್ಲಿ ಜನಸಂಘ ಇನ್ನು ಸಂಘಟನೆಯ ಹಂತದಲ್ಲಿದ್ದಾಗ, ಇನ್ನೂ ರಾಜಕೀಯ ಶಕ್ತಿಯಾಗಿ ಬೆಳೆಯದೇ ಇದ್ದ ಸಂದರ್ಭದಲ್ಲಿ ಅವರು ರಾಜಾಸ್ಥಾನದಲ್ಲಿ ಜನಸಂಘ ಪಕ್ಷವನ್ನು ಬೆಳೆಸಿ, ಕಟ್ಟಿ ಅಧಿಕಾರಕ್ಕೆ ತರುವ ಕೆಲಸವನ್ನು ಮಾಡಿದಂಥ ವ್ಯಕ್ತಿ ಮಾನ್ಯ ಶೆಖಾವತ್‌ರವರು. ಹೀಗಾಗಿ ಅವರು ಮೂರು ಸಲ ಅಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರವನ್ನು ತೆಗೆದು ಕೊಂಡಿದ್ದರು. ಇನ್ನೊಂದು ವಿಶೇಷವೇನೆಂದರೆ ಅವರು ಯಾವ್ಯಾವಾಗ ಮುಖ್ಯಮಂತ್ರಿಗಳಾಗಿದ್ದಾರೆ ಎಂದರೆ ಬಹಳ thin majority ಯಲ್ಲಿ Clear majority ಗೆ 5–6 ಸೀಟು ಕಡಿಮೆಯೇ ಇರುತ್ತಿತ್ತು. ಅಂಥ ಸಮಯದಲ್ಲೂ ಆ ಸಮ್ಮಿಶ್ರ ಸರ್ಕಾರವನ್ನು ನಡೆಸಿದಂಥ ಕೀರ್ತಿ ಇದೆಯಲ್ಲಾ ಅದು

ಶೆಖಾವತ್‌ರವರಿಗೆ ಸಲ್ಲುತ್ತಿದೆ. ಸಮ್ಮಿಶ್ರ ಸರ್ಕಾರವನ್ನು ನಮ್ಮ ಭಾರತದಲ್ಲಿರುವ ಡೆಮಾಕ್ರೆಟಿಕ್ ವ್ಯವಸ್ಥೆಯಲ್ಲಿ ಯಾವ ರೀತಿ ನಡೆಸಬೇಕು ಎಂಬ ಕಲೆ ಮೊದಲು ಪ್ರಾರಂಭವಾಗಿದ್ದು ಎಲ್ಲಿ ಎಂದರೆ ಅದು ರಾಜಾಸ್ಥಾನದ ಶೆಖಾವತ್ ರವರಿಂದ ಎಂದು ಹೇಳಬೇಕಾಗುತ್ತದೆ. ಆ ರೀತಿಯಾದ ವ್ಯಕ್ತಿತ್ವವನ್ನು ಅವರು ಹೊಂದಿದ್ದರು. ಅವರು ಉಪರಾಷ್ಟ್ರಪತಿ ಚುನಾವಣೆಗೆ ನಿಂತಾಗ ಇಂತಿಷ್ಟು ಮತಗಳು ಅವರಿಗೆ ಬರುತ್ತದೆಂದು ಏನು ಲೆಕ್ಕಾಚಾರ ಮಾಡಲಾಗಿತ್ತೋ ಅದಕ್ಕಿಂತಾ ಹೆಚ್ಚು ಮತಗಳು ಬಂದಿದ್ದನ್ನು ನೋಡಿದರೆ ಅವರು ಎಲ್ಲಾ ಪಕ್ಷದಲ್ಲೂ ಮಿತ್ರರನ್ನು ಹೊಂದಿದ್ದರು ಎಂಬುದು ಗೊತ್ತಾಗುತ್ತದೆ. ಎಲ್ಲರ ಜೊತೆಯಲ್ಲೂ ಸೌಹಾರ್ದದ ಭಾವನೆಯನ್ನು ಅವರು ಇಟ್ಟುಕೊಂಡಿದ್ದರು. ಆ ಆಧಾರದ ಮೇಲೆ ಅವರಿಗೆ ಉಪರಾಷ್ಟ್ರಪತಿಯಾದ ಮೇಲೆ ಆ ಗೌರವ ಸಿಕ್ಕಿತು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರು ರಾಜ್ಯಸಭೆ ಯನ್ನು ಬಹಳ ಉತ್ತಮವಾಗಿ ನಡೆಸಿದ್ದಂಥದ್ದು, ನಮ್ಮ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು ಅವರ ಜೊತೆ ಚರ್ಚೆ ಮಾಡಿದಾಗ, ರಾಜ್ಯಸಭೆ ಮತ್ತು ಲೋಕಸಭೆಯನ್ನು ಇವತ್ತು ಯಾವ ರೀತಿಯಾಗಿ ನಡೆಸಬೇಕು ಎನ್ನುವುದನ್ನು ಕಲಿಯುವುದಿದ್ದರೆ ಅದನ್ನು ಶೆಖಾವತ್‌ರವರಿಂದ ಕಲಿಯಬೇಕು ಎನ್ನುವ ಮಾತನ್ನು ಹೇಳುತ್ತಿದ್ದರು. ಅವರು ಮುಖ್ಯಮಂತ್ರಿ ಗಳಾಗಿ ಕೆಲಸ ಮಾಡುವಾಗ ಏನು ಕೆಲವೊಂದು ಕಾರ್ಯಕ್ರಮಗಳನ್ನು ತಂದರು ಅದರಲ್ಲಿ ಅಂತ್ಯೋದಯ ಎನ್ನುವ ಕಾರ್ಯಕ್ರಮ ಬಹಳ ಮುಖ್ಯವಾದದ್ದು. ಇಡೀ ರಾಷ್ಟ್ರದಲ್ಲೇ ಅತ್ಯಂತ ಜನಪ್ರಿಯವಾದ ಯೋಜನೆ ಅಂತ್ಯೋದಯ. ಒಂದೊಂದು ಗ್ರಾಮವನ್ನು ಆಯ್ಕೆಮಾಡಿ ಅದರಲ್ಲಿ 5 ಕುಟುಂಬಗಳನ್ನು ಆಯ್ಕೆ ಮಾಡಿ ಬಡತನದ ರೇಖೆಯಿಂದ ಮೇಲಕ್ಕೆ ತರುವಂಥ ಕೆಲಸ ಮಾಡಿದ್ದು ಆ ಅಂತ್ಯೋದಯ ಕಾರ್ಯಕ್ರಮದಿಂದ. ಹೀಗಾಗಿ ಅದು ಬಹಳ ಜನಪ್ರಿಯವಾದ ಕಾರ್ಯಕ್ರಮವಾಗಿತ್ತು. ಕೆಳಮಟ್ಟದಿಂದ ಮೇಲಕ್ಕೆ ಏರಿದಂಥ ಒಬ್ಬ ವ್ಯಕ್ತಿ ಎಂದರೆ ಶೆಖಾವತ್‌ರವರು. ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಯವರು ಮತ್ತು ಲಾಲ್‌ಕೃಷ್ಣ ಅಡ್ವಾಣಿಯವರ ಸಮಕಾಲೀನರಾಗಿ ಬೆಳೆದಂಥ, ಜನಸಂಘ ಸ್ಥಾಪನೆ ಆದಾಗಿನಿಂದ ಅದರ ಸಂಘಟನೆ ಮಾಡಿ ಆ ಬೆಳವಣಿಗೆಯಲ್ಲಿ ಆ ಇಬ್ಬರೂ ಧೀಮಂತ ವ್ಯಕ್ತಿಗಳ ಜೊತೆ ಕೈಜೋಡಿಸಿ ಕೆಲಸ ಮಾಡಿದಂಥ ವ್ಯಕ್ತಿ ಶೆಖಾವತ್‌ರವರು. ರಾಜಕೀಯ ರಂಗದಲ್ಲಿರುವ ಎಲ್ಲರೂ

ಅವರ ಮಾರ್ಗದರ್ಶನವನ್ನು ತೆಗೆದುಕೊಂಡು ಹೋಗಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ.

ಶ್ರೀಯುತ ಚಂದ್ರಶೇಖರ ಪಾಟೀಲ್ ರೇವೂರ್‌ರವರು ಗುಲ್ಬರ್ಗಾ ನಗರದಿಂದ ಬಿ.ಜೆ.ಪಿ. ಶಾಸಕರಾಗಿ ಎರಡನೇ ಬಾರಿಗೆ ಆರಿಸಿ ಬಂದಿದ್ದರು. ಮಹಾನಗರ ಜನಸಂಘದ ಜಿಲ್ಲಾಧ್ಯಕ್ಷರಾಗಿ ಪಕ್ಷವನ್ನು ಸಂಘಟನೆ ಮಾಡಿಕೊಂಡು ಎರಡು ಬಾರಿ ಆರಿಸಿ ಬಂದಂತಹ ವ್ಯಕ್ತಿಯಾಗಿದ್ದರು. ಅವರು ಪಕ್ಷದ ಬೆಳವಣಿಗೆ ಜೊತೆಗೆ ಸಂಘಟನೆಗೂ ಸಹ ಹೆಚ್ಚು ಒತ್ತು ಕೊಟ್ಟಿದ್ದರು. ಅಲ್ಲಿ ಸಾರ್ವಜನಿಕರ ಸಮಸ್ಯೆಗಳು ಬಂದಾಗ ಕಾರ್ಯಕರ್ತರಿಗೆ ಏನಾದರೂ ತೊಂದರೆಯಾದಾಗ ಅದನ್ನು ಎದುರಿಸಿ ರಾಜಕೀಯ ಪಕ್ಷವನ್ನು ಕಟ್ಟಿ ಜನಪರವಾದ ಕೆಲಸವನ್ನು ಮಾಡಿದಂತಹ ವ್ಯಕ್ತಿಯಾಗಿದ್ದರು. ಬಹಳ ಚಿಕ್ಕ ವಯಸ್ಸಿನಲ್ಲೇ ಅವರು ತೀರಿಕೊಂಡಿದ್ದಾರೆ. ಅವರು ಸಿಕ್ಕಿದಾಗಲ್ಲೆಲ್ಲಾ 'ನಿಮ್ಮ ಆರೋಗ್ಯವನ್ನು ಕಾಪಾಡಿಕೊಂಡು ಹೋಗಿ' ಎಂದು ಸಾಕಷ್ಟು ಸಲ ಹೇಳುತ್ತಿದ್ದೆ. ಅವರು ತಮ್ಮ ಆರೋಗ್ಯದ ಬಗ್ಗೆ ಅಷ್ಟೊಂದು ಕಾಳಜಿ ತೆಗೆದುಕೊಳ್ಳಲಿಲ್ಲ. ಆದ್ದರಿಂದಲೇ ಇವತ್ತು ಅವರು ಅಕಾಲಿಕವಾಗಿ ಮೃತ ಪಟ್ಟಿದ್ದಾರೆ. ಮಾನ್ಯ ಚಂದ್ರಶೇಖರ ಪಾಟೀಲ್ ರೇವೂರ್ ಮತ್ತು ಶೆಖಾವತ್ ರವರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತಿದ್ದೇನೆ. ಶ್ರೀಯುತ ನಾನಾಜಿ ದೇಶ್‌ಮುಖ್ ಎಂಬ ಹೆಸರು ಕೇಳಿದ ಕೂಡಲೇ ನಮ್ಮ ಮನದಲ್ಲಿ ಆದರ್ಶದ ಕಲ್ಪನೆ ಮೂಡಿ ಬರುತ್ತದೆ. ಆದರ್ಶದ ವ್ಯಕ್ತಿಗಳು ಹೇಗಿರುತ್ತಾರೆ ಎನ್ನುವುದನ್ನು ನಾವೇನಾದರೂ ಕಲ್ಪನೆ ಮಾಡಿಕೊಳ್ಳಬೇಕಾಗಿದ್ದರೆ, ನಾವು ದಿವಂಗತ ನಾನಾಜಿ ದೇಶ್‌ಮುಖ್‌ರವರ ವ್ಯಕ್ತಿತ್ವವನ್ನು ನೋಡಬೇಕಾಗುತ್ತದೆ. ಮಾನ್ಯ ಜಯಪ್ರಕಾಶ್ ನಾರಾಯಣ್‌ರವರ ಚಳುವಳಿ ಬಹಳ ದೊಡ್ಡ ಪ್ರಮಾಣದಲ್ಲಿ ಬಿಹಾರ, ಉತ್ತರ ಪ್ರದೇಶ ಮತ್ತು ದೇಶದ ಇತರ ಕಡೆಗಳಲ್ಲಿ ಬೆಳೆದಾಗ, 'ಜೆ.ಪಿ.'ಯವರ ಜೊತೆಗೆ ನಾನಾಜಿ ದೇಶ್‌ಮುಖ್‌ರವರು ಕೈ ಜೋಡಿಸಿ ನಿಂತಿದ್ದರು. 1977 ರಲ್ಲಿ ಎಲ್ಲಾ ವಿರೋಧ ಪಕ್ಷಗಳು ಸೇರಿ 'ಜನತಾ ಪಕ್ಷ' ಸ್ಥಾಪನೆಯಾದಾಗ, ಜೆ.ಪಿ.ಯವರ ಜೊತೆಗೆ ಸೇರಿ 'ಜನತಾ ಪಕ್ಷ'ದ ಸಂಘಟನೆಯಲ್ಲಿ ಪ್ರಮುಖ ಆಧಾರ ಸ್ಥಂಭವಾಗಿ ನಿಂತಿದ್ದರು. ಎಲ್ಲರಿಗೂ ನಿವೃತ್ತಿ ಎಂಬುದು ಹೇಗೆ ಇರುತ್ತದೆಯೋ, ಆದೇ ರೀತಿಯಲ್ಲಿ ರಾಜಕೀಯ ರಂಗದಲ್ಲಿ ಇದ್ದವರಿಗೂ ನಿವೃತ್ತಿ ಎಂಬುದು ಇರಬೇಕು ಎಂದು ಅವರು ಕರೆ ಕೊಟ್ಟಿದ್ದರು. ಸಾಯುವವರೆಗೂ ನಾವು ರಾಜಕೀಯ ರಂಗದಲ್ಲಿ ಇರಬೇಕು ಎಂಬುದೇನಿದೆ, ಅದು ಹೋಗಬೇಕು. 60 ವರ್ಷಕ್ಕೆ ರಾಜಕಾರಣಿಗಳು ನಿವೃತ್ತರಾಗಬೇಕು

O.32 F-85

ಎಂದು ಅವರು ಕರೆಯನ್ನು ಕೊಟ್ಟಿದ್ದರು. ಅವರು ಕೇವಲ ಕರೆಯನ್ನಷ್ಟೇ ನೀಡಲಿಲ್ಲ. ನಿಜವಾಗಿಯೂ ಅವರು ತಮ್ಮ 60ನೇ ವರ್ಷಕ್ಕೆ ಸಕ್ರಿಯ ರಾಜಕಾರಣದಿಂದ ನಿವೃತ್ತರಾಗಿ ಕೆಲವೊಂದು ಸಾಮಾಜಿಕ ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರು ನಿಜವಾಗಿ ಬಯಸಿದ್ದಲ್ಲಿ ಕೇಂದ್ರದಲ್ಲಿ ಮಂತ್ರಿಯಾಗಬಹುದಾಗಿತ್ತು, ಸತತವಾಗಿ ರಾಜ್ಯಸಭಾ ಸದಸ್ಯರಾಗಬಹುದಾಗಿತ್ತು, ಯಾವುದಾದರೊಂದು ಕ್ಷೇತ್ರದಿಂದ ಲೋಕಸಭಾ ಸದಸ್ಯರಾಗಬಹುದಾಗಿತ್ತು. ಆದರೆ ಅವೆಲ್ಲವನ್ನೂ ಬಿಟ್ಟು ಅವರು ಒಂದೇ ಒಂದು ಸಲ nominate ಆದರು. ಕೇಂದ್ರ ಸರ್ಕಾರ ಒಮ್ಮೆ ಅವರನ್ನು nominate ಮಾಡಿತ್ತು. ಅದಕ್ಕೂ ಕೂಡ ಅವರು ತಯಾರಿರಲಿಲ್ಲ. ಅಂತಹ ವ್ಯಕ್ತಿತ್ವ ಅವರದಾಗಿತ್ತು. ಅವರು ಸಕ್ರಿಯ ರಾಜಕಾರಣದಿಂದ ಹೊರಗೆ ಬಂದ ಮೇಲೆ, ಉತ್ತರಪ್ರದೇಶದ ಚಿತ್ರಕೂಟ ಮತ್ತಿತರ ಕೆಲವೊಂದು ಹಿಂದುಳಿದ ಪ್ರದೇಶಗಳಲ್ಲಿ ಗ್ರಾಮೀಣ ಪ್ರದೇಶದ ಅಭಿವೃದ್ಧಿ ಕೆಲಸವನ್ನು ಅವರು ಪ್ರಾರಂಭಿಸಿದರು. ಹಿಂದೊಮ್ಮೆ ನಾನೂ ಕೂಡ ಅಲ್ಲಿಗೆ visit ಮಾಡಿ ಬಂದಿದ್ದೇನೆ. ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ University ಯೊಂದನ್ನು ಅಲ್ಲಿ ಸ್ಥಾಪಿಸಲಾಗಿದೆ. ಬಹುಶಃ ನಮ್ಮ ದೇಶದಲ್ಲಿ ಅಥವಾ ಇಡೀ ಜಗತ್ತಿನಲ್ಲಿ ಗ್ರಾಮೀಣಾಭಿವೃದ್ಧಿಗೆ ಸೀಮಿತವಾದ ವಿಶ್ವವಿದ್ಯಾನಿಲಯವೊಂದು ಎಲ್ಲಿಯೂ ಇಲ್ಲ. ಅಂತಹ ವಿಶ್ವವಿದ್ಯಾನಿಲಯವನ್ನು ಆನ್ಯ ನಾನಾಜಿ ದೇಶ್‌ಮುಖ್‌ರವರು ಚಿತ್ರಕೂಟದಲ್ಲಿ ಸ್ಥಾಪಿಸಿ ಬಹಳ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟಂತೆ ಒಂದು ಸರ್ಕಾರ ಅಥವಾ ಒಂದು NGO ಯಾವ ರೀತಿಯಾಗಿ ಕೆಲಸವನ್ನು ಮಾಡಬಹುದು ಎಂಬುದನ್ನು ನಾವೇನಾದರೂ ನೋಡಬೇಕಾಗಿದ್ದರೆ, ಆ ಚಿತ್ರಕೂಟಕ್ಕೆ ಹೋಗಿ ನೋಡಬೇಕಾಗುತ್ತದೆ. ಆ ರೀತಿಯಾದಂತಹ ಉತ್ತಮವಾದ ವಿಶ್ವವಿದ್ಯಾನಿಲಯವೊಂದನ್ನು ಅವರು ಅಲ್ಲಿ ಸ್ಥಾಪಿಸಿದ್ದಾರೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇಂತಹ ಆದರ್ಶ ವ್ಯಕ್ತಿಗಳನ್ನು ನಾವು ನೆನಪು ಮಾಡಿಕೊಳ್ಳುವುದರಲ್ಲದೇ ಅವರ ಆದರ್ಶವನ್ನು ಮೈಗೂಡಿಸಿಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ. ಮಾನ್ಯ ಸುರೇಂದ್ರ ದಾನಿಯವರು ನಮ್ಮ ಹುಬ್ಬಳ್ಳಿ ನಗರದವರಾಗಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು. ಮಾನ್ಯ ಸುರೇಂದ್ರ ದಾನಿಯವರು 'Quit Inida' ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. 'ಸಂಯುಕ್ತ ಕರ್ನಾಟಕ'

ಪತ್ರಿಕೆಯ ಪತ್ರಕರ್ತರಾಗಿ ಮತ್ತು ಸಂಪಾದಕರಾಗಿ ಉತ್ತಮವಾದ ಮತ್ತು ರಚನಾತ್ಮಕವಾದ ಲೇಖನ ಮತ್ತು ಬರಹಗಳನ್ನು ಬರೆದಿದ್ದರು. ಮಾನ್ಯ ಸುರೇಂದ್ರ ದಾನಿಯವರು ಸಜ್ಜನ ಮತ್ತು ಪ್ರಾಮಾಣಿಕರಾಗಿ ಬೆಳೆದಂತಹ ವ್ಯಕ್ತಿಯಾಗಿದ್ದರು. ಪತ್ರಿಕಾ ರಂಗಕ್ಕೂ ಸಹ ಮಾರ್ಗದರ್ಶನ ನೀಡಬಲ್ಲವ ರಾಗಿದ್ದ ಮಾನ್ಯ ಸುರೇಂದ್ರ ದಾನಿಯವರು ಇವತ್ತು ನಮ್ಮ ನಡುವೆ ಇಲ್ಲ. ಅವರು ಹಲವಾರು ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದರು. ಅವರ ಆದರ್ಶ ಮತ್ತು ಮಾರ್ಗದರ್ಶನ ಪತ್ರಿಕಾ ರಂಗಕ್ಕೆ ಅಮೂಲ್ಯವಾದುದು ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಮಾನ್ಯ ಸುಬ್ರಾಯ್ ನಾರಾಯಣ್ ಮಲ್ಯರವರಿಗೂ ಮತ್ತು ನನಗೂ ಬಹಳಷ್ಟು ಆತ್ಮೀಯವಾದಂತಹ ಸಂಬಂಧವಿತ್ತು. 'ವಿಕ್ರಮ' ವಾರಪತ್ರಿಕೆಯನ್ನು ಅವರು ಬಹಳಕಷ್ಟಕರವಾದ ಸಂದರ್ಭದಲ್ಲಿ ತೆಗೆದುಕೊಂಡು ನಡೆಸಿಕೊಂಡು ಬಂದರು. ದೇಶಭಕ್ತಿ ಬಗ್ಗೆ ಮತ್ತು ಇವತ್ತಿನ ವ್ಯವಸ್ಥೆ ಬಗ್ಗೆ ಬಹಳ ಉತ್ತಮವಾದ ಲೇಖನಗಳನ್ನು ಬರೆಯುತ್ತಿದ್ದರು. 'ವಿಕ್ರಮ'ದಲ್ಲಿಯ ತಮ್ಮ ಲೇಖನಗಳ ಮೂಲಕ ರಾಷ್ಟ್ರಪ್ರೇಮವನ್ನು ಉಜ್ವಲಗೊಳಿಸುವಂತಹ ಕಾರ್ಯವನ್ನು ಅವರು ಮಾಡುತ್ತಿದ್ದರು. ಅವರದು ಹೋರಾಟದ ಬದುಕಾಗಿತ್ತು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಮಾನ್ಯ ಹನುಮಂತರಾವ್ ದೇಸಾಯಿ ಇರಬಹುದು, ಮಾನ್ಯ ಅಂದಾನಪ್ಪನವರು ಇರಬಹುದು, ಮಾನ್ಯ ದೊಡ್ಡೇಗೌಡರು ಇರಬಹುದು, ಮಾನ್ಯ ಮನೋಹರ್ ಮಾಳಗಾವಂಕರ್ ರವರು ಇರಬಹುದು, ಮಾನ್ಯ ಮಹಾ ಪ್ರಜ್ಞಾಜಿಯವರು ಇರಬಹುದು ಮತ್ತು ಮಂಗಳೂರಿನಲ್ಲಿ ನಡೆದ ದುರಂತದಲ್ಲಿ ತೀರಿಕೊಂಡಂತಹ ಎಲ್ಲಾ ಅಮಾಯಕರು ಇರಬಹುದು, ಅವರೆಲ್ಲರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತಿದ್ದೇನೆ. ಅವರುಗಳ ಅಗಲಿಕೆಯಿಂದ ಅವರ ಕುಟುಂಬ ಸದಸ್ಯರಿಗೆ ಏನೊಂದು ನೋವಾಗಿದೆ, ಅದನ್ನು ಭರಿಸತಕ್ಕ ಶಕ್ತಿಯನ್ನು ಆ ದೇವರು ಅವರಿಗೆ ದಯಪಾಲಿಸಲೆಂದು ದೇವರಲ್ಲಿ ಪ್ರಾರ್ಥಿಸುತ್ತಾ, ತಾವು ತಂದಿರತಕ್ಕ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI QAMARUL ISLAM (GULBARGA NORTH) : Chandra Shekar Patil Revur is one of the good friends of mine. No doubt he was in the BJP and to the first time he brought BJP to success in the year 2004 as MLA n the united Gulbarga. He

contested 3 times. I defeated him in 1999. He won the election in 2004 and again in 2008, when there was delimitation we both were in the Assembly. Today I am in the Assembly as MLA and he is no more. Sir, you know I am representing this constituency from 1978 and on the day of the prophet, I started the procession of Id-Milad. There were 31 processions continuously headed by me. Since so many tears people are observing the Ganesha procession. Many a time people say, 'ಸಾರ್, ಇದು ಬಿ.ಜೆ.ಪಿ. ಕ್ಷೇತ್ರವಾಗಿದೆ, ಇಲ್ಲಿಂದ ಬಿ.ಜೆ.ಪಿ. ಶಾಸಕರು ಆರಿಸಿ ಬಂದಿದ್ದಾರೆ, ಆದ್ದರಿಂದ ಈ ತರಹ ಆಗುತ್ತಿದೆ'. One thing I will tell you, whatever party he belongs, I told "Patil, it is a test for me and you. In the Last two years continuously Holi and Id-Milad Processions were held on the same day. The whole administration and I think even C.M. knows it very well. ಬಹಳ ಪರೇಶಾನ್ ಇತ್ತು, ಅಲ್ಲಿ ಏನಗುತ್ತದೋ ಎಂದು ಆತಂಕವಿತ್ತು. ನಾನು ಹೇಳಿದೆ, 'ಗೌಡ್ರೇ, ನೀವು ಮತ್ತು ನಾವು ಬಂದೇನವಾಜ್ ಮತ್ತು ಬಸವೇಶ್ವರ ಕ್ಷೇತ್ರದಲ್ಲಿದ್ದೇವೆ. ಬಂದೇನವಾಜ್ ಗುಂಬಜ್ ಮತ್ತು ಬಸವೇಶ್ವರ ಟೆಂಪಲ್ ನಮ್ಮ Corporation symbol ಆಗಿದೆ. ಈ symbol ಗುಲ್ಬರ್ಗಾದಲ್ಲಿ ಶಾಂತಿ ಇರಬೇಕು ಎಂಬುದರ ಸೂಚಕ ಎಂದು ಹೇಳಿದೆ. ಆಗ ಅವರು "ಖಮರುಲ್, ಏನೂ ಚಿಂತೆ ಮಾಡಬೇಡಿ, ಏನೂ ಆಗುವುದಿಲ್ಲ' ಎಂದು ಹೇಳಿದರು. Same thing has happened. See, if I don't give that credit to hin in this House when he is no more, I may not be doing justification. Nothing has happened. When a lakh people were passing, people were burning the effigy of Kamanna during Holi, when we were shouting, "Narayan, Allah-Hu-Akbar' like that in the same voice, they were burining thei Kamanna. The wholeevils were burnt by our Hindu Brothers. They were shouting prophet Mohammed is a Pigamber of peace. He is for the humanity not for any particular caste, community or the religion of the people. No doubt this message has been given in the papers, somewhere something has placed. But the city of Gulbarga is a peaceful city. It was very

shocking. On 14th night I was observing T.V late in the night. One of my friends telephoned me, Qamarul Saab what are you doing'? I said, 'I an just observing the T.V'. 'Have you heard your friend expired'? It was shocking for me. 'Hey, How it is possible'? No. Is it correct news? Then I telephoned my P.A, 'you ask Halakatti, Who is the leader of the Party'. He started weeping. My P.A was telling. They were not aware. All his friends who have to attend a Meeting on 15th April it seems were in Bangalore. Then I got it confirmed from the police authority and from the Government Hospital.

As you know Sir, there is a type of Patils. Patils have got a special type. Gowdas are having another type. I have seen in my 30 years Gowdas and Patils. But we usually tell him Chandrashekar Revoor Gowda Patil. Because he has got a special category. He will tell what is in his heart openly. He used to tell, ಕಮರುಲ್ ನೋಡಿ ನಾನು 2ನೇ ಸಾರಿ ಗೆದ್ದು ಬಂದಿದ್ದೇನೆ, ಮಂತ್ರಿಯಾಗುತ್ತೇನೆಂದು ಹೇಳಿದರು. ಮುಖ್ಯಮಂತ್ರಿಯವರ prerogatory right ಇದು, ನೀವು ಸಿಎಂ ಜೊತೆಯಲ್ಲಿ ಅಲ್ಲೇ ಇರಬೇಕು ಎಂದು ಹೇಳಿದೆ. ಇಲ್ಲ ಇಲ್ಲ ನಾನು ಹೇಳಿದ್ದೇನೆಂದು ಹೇಳಿದರು. we have not seen him as a Minister. He was only 52 years old. He is no more. But, he has created his own style of upfront and I must say apart from all, Gulbarga was peaceful. Now we both were there. When he was there I was Ex-MLA. Nothing has happened by the grace of Almighty, by the grace of Sufis, Saints, it is a mercy of Banda Nawaz, it is a mercy of Basaveshwara, now the worship of Budha has come there. So, a big temple is also coming a very big Anubhava Matapa with seven crores. I think Hon'ble Chief Minister has also given. That is an example for us. The city of Gulbarga is a city of peace whichever party comes and goes. Such a city I am representing from last 30 years. Sir, in this House while giving my blessings, I pray Almighty that my friend and colleague whoever comes and goes Gulbarga city remains calm and peaceful. Bhairam Singh Shekawathji, he

served as C.M. for three times, he served as Chairman of the Rajya Sabha, he served as Vice President. His services are very well know. I pray Almighty his soul in peace. ಅದೇ ರೀತಿ ಹನುಮಂತರಾವ್ ದೇಸಾಯಿಯವರು. He was a very good friend of mine. He was our collegue, a Senior Advocate and he was a Horatagara. He never compromised as far as the development is concerned. Whatever pro-people decisions we take, agitations we take, Mr.Hanumanth Rao Desai would be on the fotrefront. He is no more today. Even in this age he was having up to date knowledge. He always read many papers. He came here for his surgery. For 8-10 days he was in Bagalore. All the 10 days papers were in his House. After coming from Bangalore he would go through all the papers so that he could keep his political knowledge updated. Today he is no more. I pray Almighty Allah and the God that his soul may rest in peace. Likewise pray for all seven others. For them also I pray Almighty Allah, their soul be in peace. Thank you.

ಶ್ರೀ ಗೋವಿಂದ ಕಾರಜೋಳ (ಸಣ್ಣ ನೀರಾವರಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಏನು 10 ಜನ ಗಣ್ಯರು ನಮ್ಮನಗಲಿದ್ದಾರೆ, ಅವರ ಅಗಲಿಕೆಯಿಂದ ನಷ್ಟವಾಗಿದೆ ಎನ್ನುವ ಮಾತನ್ನು ಮಾತನಾಡಿದ ಎಲ್ಲಾ ಮುಖಂಡರು ಕೂಡ ಹೇಳಿದ್ದಾರೆ. ಚಂದ್ರಶೇಖರ ಪಾಟೀಲ್ ರೇವೂರ್ ಅವರು ಒಂದು ಸಣ್ಣ ಹಳ್ಳಿಯ ರೈತನ ಮಗನಾಗಿ ಹುಟ್ಟಿ, ಬಡವರ ಬಗ್ಗೆ ದಿನದಲಿತರ ಬಗ್ಗೆ ಅಪಾರವಾದ ಕಾಳಜಿವುಳ್ಳವರಾಗಿದ್ದರು. ಚಂದ್ರಶೇಖರ ಪಾಟೀಲ್ ಅವರು ಅವತ್ತು ಸಾಯುವುದಕ್ಕಿಂತ ಮುಂಚೆ ನನಗೆ ಫೋನ್ ಮಾಡಿದ್ದರು. "ನಾನು ಇವತ್ತು ಸಾಯಂಕಾಲ ಗುಲ್ಬರ್ಗಾ ನಗರದ ಟಾರ್ಬೈಲ್‌ನಲ್ಲೇನು ಪೋಲಿಸರಿಂದ ದೌಜನ್ಯವಾಗಿದೆ, ಆ ದೌರ್ಜನ್ಯಕ್ಕೊಳಗದ ಕುಟುಂಬದ ಸದಸ್ಯರನ್ನು ಕರೆದುಕಂಡು ನಾನು ಬರುತ್ತಿದ್ದೇನೆ, ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಅವರ ಮೇಲೆ ಹಾಕಿದ ಕೇಸನ್ನು ವಾಪಸ್ ತೆಗೆಸಬೇಕು, ಅವರಿಗೆ ನ್ಯಾಯ ದೊರಕಿಸಿಕೊಡಬೇಕು" ಎಂದು ಬೆಳಿಗ್ಗೆ ನನಗೆ ಫೋನ್ ಮಾಡಿ ಮಾತನಾಡಿದರು. ಸಾಯಂಕಾಲ ಅವರು ಬೆಂಗಳೂರಿಗೆ ಬರಬೇಕಾದರೆ ಹೃದಯಘಾತದಿಂದ ಅವತ್ತು ನಿಧನ ಹೊಂದಿದರು ಎಂದು ಕೇಳಿ ನನಗೆ

ಬಹಳ ನೋವಾಯಿತು. ಸಾಮಾಜಿಕ ಕಳಕಳಿವುಳ್ಳಂಥ ಯುವ ರಜಕಾರಣಿ ಚಂದ್ರಶೇಖರ ಪಾಟೀಲರು ನಿಧನವಾಗಿರುವುದು ನಮಗೆಲ್ಲರಿಗೂ ಕೂಡ ಸಾಕಷ್ಟು ನೋವಾಗಿದೆ. ಮತ್ತು ಅವರ ಕುಟುಂಬಕ್ಕಾಗಿರುವ ನೋವು ಹಾಗೂ ದುಃಖದಲ್ಲಿ ನಾವೆಲ್ಲರೂ ಕೂಡ ಭಾಗಿಯಾಗಿದ್ದೇವೆ. ಅವರ ಆತ್ಮಕ್ಕೆ ಭಗವಂತ ಶಾಂತಿ ನೀಡಲೆಂದು ಪ್ರಾರ್ಥನೆ ಮಾಡುತ್ತೇನೆ.

ಅದೇ ರೀತಿಯಾಗಿ ಭೈರೋನ್ ಸಿಂಗ್ ಶೇಖಾವತ್ ರವರು ಒಂದು ಸಾಮಾನ್ಯ ಕುಟುಂಬದಲ್ಲಿ ಜನಿಸಿ ದೇಶದ ಅತ್ಯಂತ ಉನ್ನತ ಸ್ಥಾನಕ್ಕೆ ಹೋದಂಥವರು ಮಹಾನ್ ಆದರ್ಶ ರಾಜಕಾರಣಿ. ಅದೇ ರೀತಿಯಾಗಿ ಹನುಮಂತರಾವ್ ದೇಸಾಯಿಯವರು, ಅನ್ನದಾಸಪ್ಪನವರು, ದೊಡ್ಡೇಗೌಡರು, ನಾನಾಜಿ ದೇಶ್‌ಮುಖ್, ಸುರೇಂದ್ರ ದಾನಿಯವರು, ಸುಬ್ರಾಯ ಮಲ್ಯರವರು, ಮೋಹನ್ ಮಲಗಾಂಕರ್ ಮತ್ತು ಜೈನ ಮುನಿಗಳಾಗಿರುವಂಥ ಶ್ರೀ ಮಹಾ ಪ್ರಜ್ಞಾಜಿಯವರು, ವಿಮಾನ ದುರಂತದಲ್ಲಿ ಅಗಲಿದ 158 ಜನರೆಲ್ಲರ ಕುಟುಂಬಕ್ಕಾದ ದುಃಖದಲ್ಲಿ ನಾವೆಲ್ಲರೂ ಭಾಗಿಗಳಾಗಿದ್ದೇವೆ. ಭಗವಂತ ಅವರ ಆತ್ಮಕ್ಕೆ ಶಾಂತಿಯನ್ನು ನೀಡಲು ಅವರ ಕುಟುಂಬ ವರ್ಗದವರಿಗೆ ದುಃಖವನ್ನು ಸಹಿಸುವಂಥ ಶಕ್ತಿಯನ್ನು ದಯಪಾಲಿಸಲೆಂದು ದೇವರಲ್ಲಿ ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಾಲಿಕಯ್ಯ ಗುತ್ತೇದಾರ್ (ಅಫ್ಜಲ್ ಪುರ) : ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿದಂಥ ಸಂತಾಪ ಸೂಚನೆಗೆ ನಾನು ಕೂಡ ನನ್ನ ಬೆಂಬಲನ್ನು ವ್ಯಕ್ತಪಡಿಸುತ್ತೇನೆ. 10 ಜನ ಮುಖಂಡರ ಬಗ್ಗೆ ಸಭಾನಾಯಕರು, ವಿರೋಧ ಪಕ್ಷದ ನಾಯಕರು ಸೇರಿದಂತೆ ಅನೇಕ ಮುಖಂಡರು, ಅವರ ವ್ಯಕ್ತಿತ್ವ ಅವರು ನಡೆದುಕೊಂಡು ಬಂದಂಥ ದಾರಿಯ ಬಗ್ಗೆ ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಎಲ್ಲರ ಬಗ್ಗೆ ಮಾತನಾಡುವುದಿಲ್ಲ, ಶ್ರೀ ಚಂದ್ರಶೇಖರ ಪಾಟೀಲರು ಮತ್ತು ಹನುಮಂತರಾವ್ ದೇಸಾಯಿ ಇವರು ಇಬ್ಬರು ನಮ್ಮ ಕುಟುಂಬಕ್ಕೆ ಅತ್ಯಂತ ಸಮೀಪದ ಆತ್ಮೀಯರಾಗಿದ್ದರು. ನಮ್ಮ ಅಫ್ಜಲ್‌ಪುರ್ ಮತಕ್ಷೇತ್ರದಿಂದ ರೈತರ ಮಕ್ಕಳಾಗಿ ಬೆಳೆದು ಬಂದಂಥ ಇವರಿಬ್ಬರು ಮಹಾನಾಯಕರು. ಅ ಭಾಗದ ಅನೇಕ ಅಭಿವೃದ್ಧಿ ಕೆಲಸಕಾರ್ಯಗಳಲ್ಲಿ ತಮ್ಮದೇ ಆದಂಥ ವ್ಯಕ್ತಿತ್ವದ ಮುಖಾಂತರ ರಾಜಕೀಯ ಜೀವನದಲ್ಲಿ ಹೋರಾಟವನ್ನು ಮಾಡಿ ಬಹಳ ಆದರ್ಶ ವ್ಯಕ್ತಿಗಳಾಗಿ ಬೆಳೆದಿದ್ದರು. ಚಂದ್ರಶೇಖರ ಪಾಟೀಲರ ಆರೋಗ್ಯದ ಬಗ್ಗೆ ಅನೇಕ ಮುಖಂಡರು ಮಾತನಾಡಿದರು. ರೈಲಿನಲ್ಲಿ ಯಾವಾಗಲೂ ಜೊತೆಯಲ್ಲಿ ಹೋಗುವಾಗ ಆರೋಗ್ಯದ ಬಗ್ಗೆ ಸ್ವಲ್ಪ

ಕಾಳಜಿವಹಿಸಪ್ಪ ಎಂದಾಗ, ಇಲ್ಲ ನಾನು ಕಲ್ಲಿದಂತೆ ಇದ್ದೇನೆ ನನಗೇನು ಆಗುವುದಿಲ್ಲವೆಂದು ಮಾತನಾಡುತ್ತಿದ್ದರು. ಇಲ್ಲಪ್ಪ ಆರೋಗ್ಯದ ಬಗ್ಗೆ ಸ್ವಲ್ಪ ಲಕ್ಷ್ಯವಿರಬೇಕೆನ್ನುವ ಕೆಲವು ಮಾತುಗಳನ್ನು ಸಂಬಂಧದ ಹಿನ್ನೆಲೆಯಲ್ಲಿ ಹೇಳಿದರು ಕೂಡ, ವಿಧಿಯ ಆಟ ನಮ್ಮ ಕೈಯಲ್ಲಿರುವುದಿಲ್ಲ, ಅವರಿಂದ ಕರೆ ಬಂದಾಗ ಎಲ್ಲರು ಹೋಗಲೇ ಬೇಕಾಗುತ್ತದೆ. ಆದರೆ ಒಂದು ನಮಗೆ ಬಹಳ ನೋವಾಗುತ್ತದೆ, ಮೊದಲನೆ ಸಾರಿ ಅವರು ಶಾಸಕರಾಗಿದ್ದಾಗಲೂ ಕೂಡ ಕೇವಲ 3 ವರ್ಷ ಕೆಲಸ ಮಾಡುವ ಅವಕಾಶ ಸಿಕ್ಕಿತು. ಮಾನ್ಯ ಖಮರುಲ್ ಇಸ್ಲಾಂಜಿಯವರು ಹೇಳಿದಂತೆ ಈ ಒಂದು ಅವಧಿಯಲ್ಲಿ ಅವರು ಮಂತ್ರಿಗಳಾಗುತ್ತಾರೆಂದು ಆಸೆ ಇತ್ತು ಅದನ್ನು ನಮ್ಮೊಂದಿಗೆ ಹೇಳಿಕೊಳ್ಳುತ್ತಿದ್ದರು, ಆದರೆ ಅವರಿಗೆ ಕೂಡಿ ಬರಲಿಲ್ಲ. ಆದರೆ ಇವತ್ತು ಒಬ್ಬ ಒಳ್ಳೆಯ ಗೆಳೆಯನನ್ನು, ಸಹೋದರ ಭಾವನೆಯ ವ್ಯಕ್ತಿವುಳ್ಳ ಚಂದ್ರಶೇಖರ ಪಾಟೀಲರನ್ನು ನಾವು ಕಳೆದುಕೊಂಡು ಬಹಳ ದುಃಖವಾಗಿದೆ. ಅವರ ನಿಧನಕ್ಕೆ ನಾವು ಕೂಡ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇವೆ. ಅದೇ ರೀತಿ ಹನುಮಂತರಾವ್ ದೇಸಾಯಿಯವರು, ನಮ್ಮ ಶಾಸಕಾಂಗ ಪಕ್ಷದ ನಾಯಕರಾದ ಸಿದ್ಧರಾಮಯ್ಯನವರು ಹೇಳಿದಂತೆ, ನಮ್ಮ ಹಿಂದುಳಿದ ಪ್ರದೇಶವಾದ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿಯಾಗಬೇಕು ಅಲ್ಲಿ ಅನೇಕ ನೀರಾವರಿ ಯೋಜನೆಗಳು ಬರಬೇಕು, ಅಭಿವೃದ್ಧಿಯಾಗಬೇಕೆನ್ನುವ ವಿಚಾರದಲ್ಲಿ ಆರ್ಟಿಕಲ್ 371 ಬಗ್ಗೆ ವೈಜನಾಥ ಪಾಟೀಲರು ಸೇರಿದಂತೆ ಅನೇಕ ಮುಖಂಡರು ಆ ಒಂದು ವಿಷಯವನ್ನು ತೆಗೆದುಕೊಂಡು ಕೂರಟಾಗ ಅದಕ್ಕೆ ಅವರು ಮುಂಚೂಣಿಯಲ್ಲಿದ್ದರು, ತಮ್ಮದೇ ಆದ ಸಹಕಾರವನ್ನು ಕೊಟ್ಟು ಹೋರಾಟವನ್ನು ಮಾಡಿದಂಥ ವ್ಯಕ್ತಿ. ಮತ್ತು ಪ್ರಥಮವಾಗಿ 1983ರ ಕಾಲೇಜು ಜೀವನದಲ್ಲಿ ಕ್ರಾಂತಿರಂಗದ ಅಭ್ಯರ್ಥಿಯಾಗಿ ಚುನಾವಣೆಗೆ ನಿಂತಾಗ, ಅವರ ಗೆಲುವಿನಲ್ಲಿ ನಾವು ಕೆಲಸ ಮಾಡುವಂಥ ಭಾಗ್ಯ ಸಿಕ್ಕಿತ್ತು. 1983 ರಲ್ಲಿ ಅವರು ಗೆದ್ದರು, ಆದರೂ ಎರಡೂವರೆ ವರ್ಷ ಮಾತ್ರ ಈ ರಾಜ್ಯದ ಶಾಸಕರಾಗಿ ಕೆಲಸ ಮಾಡುವಂಥ ಸಂದರ್ಭ ಬಂದಾಗ ಮುಂದೆ ಯಾವುದೇ ಅವಕಾಶ ಸಿಕ್ಕದಿದ್ದಾಗಲೂ ಆ ಭಾಗದ ಜನರ ಬಗ್ಗೆ ಅತ್ಯಂತ ಕಾಳಜಿಯನ್ನಿಟ್ಟುಕೊಂಡು ಬಂದಂಥ ಜನರನ್ನು ಬಹಳ ಆತ್ಮೀಯತೆಯಿಂದ ಕಂಡರು.

(2-00 PM)

ಬಂದಂತಹ ಜನರಿಗೆ ಬಹಳ ಆತ್ಮೀಯತೆಯಿಂದ ಕಂಡು ಅವರ ಕೈಲಾದಷ್ಟು ಅವರ ಕೆಲಸವನ್ನು ಮಾಡುವಂತಹ ಎಂದು ವ್ಯಕ್ತಿತ್ವ ಶ್ರೀಮಾನ್ ದೇಸಾಯಿಯವರು ಇಟ್ಟುಕೊಂಡಿದ್ದರು. ಅವರ ಅಗಲಿಕೆಯಿಂದ ನಮಗೆ ಬಹಳ ನೋವಾಗಿದೆ. ಏಪ್ರಿಲ್ ತಿಂಗಳು ಏಕೋ ನಮ್ಮ ತಾಲ್ಲೂಕಿಗೆ ಕರಾಳ ತಿಂಗಳಾಗಿ ಕಾಡಿದೆ. ಇಬ್ಬರೂ ಮಹಾನ್ ವ್ಯಕ್ತಿಗಳನ್ನು ಏಪ್ರಿಲ್ ತಿಂಗಳಿನಲ್ಲಿ ನಾವು ಕಳೆದುಕೊಂಡಿದ್ದೇವೆ. ಒಬ್ಬರು ಏಳನೇ ತಾರೀಕು, ಒಬ್ಬರು 10ನೇ ತಾರೀಕು ಒಂದೇ ತಿಂಗಳಲ್ಲಿ ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಕುಟುಂಬಕ್ಕೆ ಈ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಭಗವಂತ ದಯಪಾಲಿಸಲಿ ಎಂದು ಈ ಸಂದರ್ಭದಲ್ಲಿ ಹೇಳಿ, ಅದೇ ರೀತಿ ನಮ್ಮ ಬೈರೋನ್ ಸಿಂಗ್ ಶೇಖಾವತ್‌ರವರು ಮತ್ತು ಅನೇಕ ಮಹಾ ನಾಯಕರುಗಳಿಗೂ ಕೂಡ ಈ ಸಂದರ್ಭದಲ್ಲಿ ಶ್ರದ್ಧಾಂಜಲಿಯನ್ನು ಸಲ್ಲಿಸಿ, ದುಬೈಯಿಂದ ಹೊರಟಿದ್ದ ಏರ್ ಇಂಡಿಯಾದಲ್ಲಿ ಇದ್ದಂತಹ ಸುಮಾರು 158 ಜನ ಅಮಾಯಕರು ದುರ್ಮರಣದಲ್ಲಿ ಸಾವನ್ನಪ್ಪಿದ್ದಾರೆ, ಇಂತಹ ಒಂದು ಘೋರ ಅಪಘಾತ ಮುಂದೆ ಎಂದೂ ಆಗಲಾರದ ಹಾಗೆ ದೇವರಲ್ಲಿ ನಾವು ಪ್ರಾರ್ಥಿಸಿ, ಅವರ ಆತ್ಮಕ್ಕೂ ಶಾಂತಿಯನ್ನು ಕೋರಿ, ಈ ಶ್ರದ್ಧಾಂಜಲಿಗೆ ನನ್ನ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರೇವೂ ನಾಯಕ್ ಬೆಳಮಾಗಿ : ಮಾನ್ಯ ಅಧ್ಯಕ್ಷರೆ, ತಾವು ತಂದಂತಹ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತಾ, ಮಾನ್ಯ ಸಭಾನಾಯಕರು, ಪ್ರತಿ ಪಕ್ಷದ ನಾಯಕರು ಹಾಗೂ ಅನೇಕ ಪ್ರಮುಖರು ಈಗಾಗಲೇ ಸಂತಾಪ ಸೂಚನಾ ನೀರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಚಂದ್ರಶೇಖರ ಪಾಟೀಲ್ ರೇವೂರು ನಮ್ಮ ಕ್ಷೇತ್ರದ ಕೊಂಡಿ ಇದ್ದ ಹಾಗೆ, ನನಗೆ ಬಹಳ ಆತ್ಮೀಯರೂ ಕೂಡ. ಸದಾ ಬಡ ಜನರ ಬಗ್ಗೆ ಚಿಂತನೆ ಮಾಡುವವರು, ಗುಲ್ಬರ್ಗ ಜಿಲ್ಲೆಯಲ್ಲಿ ಭಾರತೀಯ ಜನತಾ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿ, ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾಗಿ ಕೆಲಸ ಮಾಡಿ ಎರಡು ಬಾರಿ ಗುಲ್ಬರ್ಗ ಜಿಲ್ಲೆಯಿಂದ ಶಾಸಕರಾಗಿ ಆಯ್ಕೆಯಾಗಿ ಬಹಳ ಪ್ರಾಮಾಣಿಕತೆಯಿಂದ ಕೆಲಸ ಮಾಡಿದವರು. ಅನೇಕ ಬಾರಿ ಸಿಕ್ಕಾಗಲೆಲ್ಲಾ ಹೇಳುತ್ತಿದ್ದರು, ಚುನಾವಣೆ ಬಂದಾಗ, ನಾವು ಚುನಾವಣೆಗೆ ನಿಂತಾಗ "ರೇವುನಾಯಕ್ ಚಿಂತೆ ಮಾಡಬೇಡ, ನೀನು ಗೆದ್ದು

ಬಂದೇ ಬರುತ್ತೀ" ಎನ್ನುವ ಭಾವನೆ ವ್ಯಕ್ತಪಡಿಸುತ್ತಿದ್ದರು. ಸದಾ ನನ್ನ ಬೆಂಬಲಿಗರಾಗಿ ಇರುತ್ತಿದ್ದರು. ಆದರೆ ಅವರು ದವಾಖಾನೆಗೆ ಭೇಟಿ ಕೊಟ್ಟರೂ ಕೂಡ, ಡಾ: ಬಾಬಾಸಾಹೇಬ್ ಅಂಬೇಡ್ಕರ್ ಜಯಂತಿಗೆ ಆ ದಿವಸ ಬರಲಿಲ್ಲ. ಮುಂಜಾನೆ ಡಾ: ಬಾಬಾಸಾಹೇಬ್ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕೆಂದು ಹೊರಗಡೆ ಬಂದಾಗ ಅವರಿಗೆ ತಲೆ ಸುತ್ತು ಬಂದು ಮನೆಗೆ ವಾಪಸ್ ಹೋದಾಗ ಬಹಳ ಜನ ದವಾಖಾನೆಗೆ ಹೋಗಿ ಎಂದು ಹೇಳಿದರೂ ನನಗೇನೂ ಆಗುವುದಿಲ್ಲ, ನಾನು ಕಲ್ಲು ಇದ್ದ ಹಾಗೆ ಇದ್ದೇನೆಂದು ಹೇಳಿ ಡಾಕ್ಟರ್‌ಗಳಿಗೆ ಕರೆದು ಅಲ್ಲಿಯೇ ತೋರಿಸಿ ನಿರ್ಲಕ್ಷ್ಯ ಮಾಡಿ, ಮತ್ತೆ ಮರು ದಿವಸ ಬೆಂಗಳೂರಿಗೆ ಬರುವ ಸಮಯದಲ್ಲಿ ಸೇಡಂಗೆ ಬಂದಾಗ ಒಮೆ ಜೋರಾಗಿ ಕೆಮ್ಮು ಬಂದಿದ್ದಕ್ಕೆ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಅವರ ಅಗಲಿಕೆ ನಮ್ಮ ಭಾಗಕ್ಕೆ ನಮ್ಮ ಭಾರತೀಯ ಜನತಾ ಪಕ್ಷಕ್ಕೆ ಅಷ್ಟೇ ಅಲ್ಲ, ಇಡೀ ನಮ್ಮ ಭಾಗದ ರೈತಾಪಿ ಜನ ಇರಬಹುದು, ಕಡು ಬಡವರು ಇರಬಹುದು, ಎಲ್ಲರಿಗೂ ತುಂಬಲಾರದ ನಷ್ಟವಾಗಿದೆ. ಎಲ್ಲರ ಬೆನ್ನೆಲುಬಾಗಿದ್ದಂತಹ ನಾಯಕ, ಇವತ್ತು ನಮ್ಮನ್ನು ಅಗಲಿ ಹೋಗಿರುವುದಕ್ಕೆ ಅತ್ಯಂತ ದುಃಖದಿಂದ ನಾನು ಈ ಮಾತನ್ನು ಹೇಳಬೇಕಾಗಿ ಬಂದಿದೆ. ಅವರು ಬಹಳ ಧೈರ್ಯವಂತರಾಗಿದ್ದರು, ನುಡಿದಂತೆ ನಡೆಯಬೇಕೆಂದು ಅವರ ಭಾವನೆ ಇತ್ತು. ನಮಗೆಲ್ಲರಿಗೂ ಬಹಳ ಬೆಂಬಲ ಇದ್ದ ಹಾಗಿದ್ದರು. ಇವರ ಅಗಲಿಕೆಯಿಂದ ನನಗೆ ಮತ್ತು ನಮ್ಮ ಭಾಗದ ಜನರಿಗೆ ಬಹಳ ದುಃಖವಾಗಿವೆ. ಭಗವಂತ ಅವರ ಮನೆತನದವರಿಗೆ ದುಃಖವನ್ನು ಭರಿಸುವಂತಹ ಶಕ್ತಿ ಕೊಡಲಿ, ಚಂದ್ರಶೇಖರ ಪಾಟೀಲ್‌ರವರ ಆತ್ಮಕ್ಕೆ ಭಗವಂತ ಚಿರ ಶಾಂತಿಯನ್ನು ಕೊಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಅದರಂತೆ ಹನುಮಂತರಾವ್ ದೇಸಾಯಿಯವರೂ ಕೂಡ ಶಾಸಕರಾಗಿ ಕೆಲಸ ಮಾಡಿದ್ದಾರೆ. ಅವರೂ ಕೂಡ ಮಹಾನ್ ಹೋರಾಟಗಾರರು, ನ್ಯಾಯವಾದಿಗಳು, ನನಗೆ ಬಹಳ ಹತ್ತಿರ ಇದ್ದರು, ಹೈದರಾಬಾದ್ ಕರ್ನಾಟಕದ ಬಗ್ಗೆ ಬಹಳ ಚಿಂತನೆ ಮಾಡತಕ್ಕಂತಹ ವ್ಯಕ್ತಿ ಕೂಡ ಆಗಿದ್ದರು. ಆವರೂ ಕೂಡ ಇವತ್ತು ನಮ್ಮನ್ನು ಅಗಲಿದ್ದಾರೆ. ಇವರ ಅಗಲಿಕೆಯಿಂದ ನಮ್ಮ ಭಾಗಕ್ಕೆ ಬಹಳ ನಷ್ಟವಾಗಿದೆ ಎಂದು ಬಹಳ ದುಃಖದಿಂದ ಹೇಳಬೇಕಾಗುತ್ತದೆ. ಇವರ ಜೊತೆಯಲ್ಲ 8-10 ಜನ ಗಣ್ಯರು ನಮ್ಮನ್ನು ಅಗಲಿದ್ದಾರೆ. ಅವರ ಕುಟುಂಬ ವರ್ಗದವರಿಗೆ ಭಗವಂತ ಧೈರ್ಯ

ತುಂಬುವಂತಹ ಶಕ್ತಿ ಕೊಡಲಿ, ಅವರ ಮನಸ್ಸಿಗೆ ಶಾಂತಿ ಕೋರಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸುನೀಲ್ ವಿ. ಹೆಗಡೆ : ಮಾನ್ಯ ಅಧ್ಯಕ್ಷರೆ, ಇವತ್ತಿನ ದಿನ ಸದನದಲ್ಲಿ ತಂದಿರುವಂತಹ ಸಂತಾಪ ಸೂಚನೆಗೆ ನನ್ನ ಬೆಂಬಲ ವ್ಯಕ್ತಪಡಿಸುತ್ತಾ, 10 ಜನ ಗಣ್ಯರು ಏನು ತೀರಿಕೊಂಡಿದ್ದಾರೆ ಅವರೆಲ್ಲ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅವರ ಕುಟುಂಬಕ್ಕೆ ಈ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತಾ, ಅದೇ ರೀತಿ ಏರ್ ಇಂಡಿಯಾ ವಿಮಾನ ಅಪಘಾತದಲ್ಲಿ ಮೃತರಾದ 158ಕ್ಕೂ ಹೆಚ್ಚಿನ ಕುಟುಂಬದ ಎಲ್ಲಾ ಸದಸ್ಯರಿಗೂ ಇದನ್ನು ಸಹಿಸುವಂತಹ ಶಕ್ತಿ ಕೊಡಲಿ ಎಂದು ಪ್ರಾರ್ಥಿಸುತ್ತಾ, ನನ್ನ ಕ್ಷೇತ್ರದ ಲೇಖಕರು ಹಾಗೂ ಖ್ಯಾತ ಬರಹಗಾರರದ ಮನೋಹರ್ ಮಾಳಗಾವಂಕರ್ ರವರ ಬಗ್ಗೆ ಶ್ರದ್ಧಾಂಜಲಿ ಸಲ್ಲಿಸುವುದಕ್ಕೆ ಬಯಸುತ್ತೇನೆ. ಮನೋಹರ್ ಮಾಳಗಾವಂಕರ್ ರವರ ತಂದೆಯವರು ಹಾಗೂ ಅಜ್ಜನವರು ಮಹಾರಾಷ್ಟ್ರದ ರಾಜ ಮನೆತನಕ್ಕೆ ಸೇರಿದಂತಹವರು. ಇವರ ತಂದೆಯವರು ಗೋವಾದ ಮಾಳಗಾವ್‌ದಿಂದ ವಲಸೆ ಬಂದು ಜಗಲ್‌ಬಿಡ್‌ನಲ್ಲಿ ನೆಲೆಸಿದ್ದರು. ಜುಲೈ 12 ರಂದು ಇವರ ಜನನ ಆಗಿದೆ. ಇವರಿಗೆ ಐದು ಜನ ಸಹೋದರರಿದ್ದರು. ಇವರ ವಿಧ್ಯಾಭ್ಯಾಸ ಜಗಲ್‌ಬಿಡ್ ಮತ್ತು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಮುಗಿಸಿ ಬಾಂಬೆಯಲ್ಲಿ ಉನ್ನತ ವ್ಯಾಸಂಗವನ್ನು ಮಾಡಿ, ಅವತ್ತಿನ ದಿನಗಳಲ್ಲಿ ಬ್ರಿಟೀಷರ ಕಾಲದಲ್ಲಿ ಸೇನೆಯನ್ನು ಸೇರಿದರು. ಇವರು 1948 ರಲ್ಲಿ ಯಾವ ದಿನ ಭಾರತ ಹಾಗೂ ಆಕಿಸ್ಥಾನದ ಯುದ್ಧ ಆಗಿತ್ತು, ಅದೇ ದಿನ ಪಂಜಾಬಿನ ಸೈನಿಕ ಕುಟುಂಬದ ಮನೋರಮಾ ಎಂಬ ಹೆಣ್ಣು ಮಗಳ ಜೊತೆ ಮದುವೆ ಮಾಡಿಕೊಂಡಿದ್ದರು. ಮನೋರಮಾರವರು 83ನೇ ವಯಸ್ಸಿನಲ್ಲಿ ತೀರಿಕೊಂಡರು. ಮನೋಹರ ಮಾಳಗಾವಂಕರ್‌ರವರ ಮಗಳಿಗೆ ಇಂಗ್ಲೇಡ್ ನಲ್ಲಿರುವಂತಹ ಕಪೂರ್ ಫ್ಯಾಮಿಲಿಯವರಿಗೆ ಮದುವೆ ಮಾಡಿ ಕೊಟ್ಟಿದ್ದರು. ಅವರೂ ಸಹ ಅವರ ತಾಯಿ ತೀರಿಕೊಂಡ ನಾಲ್ಕೈದು ವರ್ಷಗಳಲ್ಲಿ ತೀರಿಕೊಂಡಿದ್ದರು. ಇವರು ಸೇನೆಯನ್ನು ತ್ಯಾಗ ಮಾಡಿ, ಸೇನೆಗೆ ರಾಜೀನಾಮೆ ಕೊಟ್ಟು, ನಮ್ಮ ರಾಜಕೀಯ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಲಿಕ್ಕೆ ಎರಡು ಸಾರಿ ಸಂಸತ್ತಿನ ಚುನಾವಣೆಗೆ ನಿಂತಿದ್ದರು. ಆದರೆ ದುರ್ದೈವದಿಂದ ಅವರು ಆ ಚುನಾವಣೆಯಲ್ಲಿ ಗೆಲ್ಲಲಿಕ್ಕಾಗಲಿಲ್ಲ. ಆದರೆ ತಮ್ಮ 50ನೇ ವಯಸ್ಸಿನಲ್ಲಿ ಇವರು ಬರಹಗಾರರಾಗಿ ಲೇಖಕರಾಗಿ ತಮ್ಮ

ಕೆಲಸವನ್ನು ಆರಂಭಿಸಿದರು. ನಮ್ಮ ಭಾರತದ ಮೂರು ತಲೆಮಾರಿನ ಇಂಗ್ಲೀಷ್ ಲೇಖಕರಲ್ಲಿ ಪ್ರಖ್ಯಾತ ಲೇಖಕರು ಎಂದೂ ಸಹ ಇವರು ಗುರುತಿಸಿಕೊಂಡಿದ್ದರು. ಇವರು ಹಲವಾರು ದೇಶ ವಿದೇಶಗಳ ವಿಶ್ವವಿದ್ಯಾಲಯಗಳಲ್ಲಿ ತಮ್ಮ ಉಪನ್ಯಾಸಗಳನ್ನು ಕೊಟ್ಟಿದ್ದಾರೆ. ಇವರನ್ನು ಗುರುತಿಸಿದವರು ಜಿ.ಎಸ್. ಹಮೂರ್ ಎಂದು ಹಾಗೂ ಡಾ: ಶೆಟ್ಟರ್ ಎಂದು. ಇವರು ವಿಮರ್ಷಕರಾಗಿ ಇವರನ್ನು ಗುರುತಿಸಿಕೊಂಡರು. ಇವರು ಹಲವಾರು ಲೇಖನಗಳನ್ನು ಬರೆದಿದ್ದಾರೆ. ಅತೀ ಖ್ಯಾತ ಲೇಖನ "The Princes" ಹಾಗೂ "Devils Wind" ಎಂದು ಈ ಎರಡೂ ಲೇಖನಗಳು ಪ್ರಖ್ಯಾತವಾಗಿದ್ದವು. ಇವರು ರಚನೆ ಮಾಡಿದಂತಹ ಹಲವಾರು ಲೇಖನಗಳು ಕಾದಂಬರಿಗಳು ಚಲನಚಿತ್ರಗಳು ಸಹ ಆಗಿವೆ. ಹಿಂದಿಯಲ್ಲಿ 'ಶಾಲಿಮಾರ್' ಎನ್ನುವ ಒಂದು ಚಲನಚಿತ್ರವಾಗಿದೆ. "The great Maratha" ಎನ್ನುವಂತಹ ಧಾರವಾಹಿಯೂ ಕೂಡ ಇವರ ಕಾಲದಲ್ಲಿ ಆಗಿದೆ. ಇವರ ಹಲವಾರು ಕೃತಿಗಳು ಫ್ರಾನ್ಸ್ ದೇಶದಲ್ಲಿ ಇವತ್ತಿಗೂ ಬಹಳ ಜನಪ್ರಿಯವಾಗಿವೆ. ಹಲವಾರು ಕೃತಿಗಳು ಫ್ರೆಂಚ್ ಭಾಷೆಯಲ್ಲಿ ತರ್ಜುಮೆ ಸಹ ಆಗಿವೆ. ಇಂತಹ ಒಂದು ಲೇಖಕರು ಕೇವಲ ಲೇಖಕರು ಹಾಗೂ ಬರಹಗಾರರಾಗಿರಲಿಲ್ಲ. ಇವರು ಖ್ಯಾತ ಹೋರಾಟಗಾರರಾಗಿದ್ದರು. ನಮ್ಮ ಉತ್ತರ ಕನ್ನಡ ಜಿಲ್ಲೆಯ ಕೈಗಾ ಸ್ಥಾವರ ನಮ್ಮ ಪರಿಸರ ವಿರೋಧಿ ಆಗುತ್ತವೆ ಎಂದು ಹೇಳಿ ಶಿವರಾಂ ಕಾರಂತರ ಜೊತೆ ಇವರೂ ಸೇರಿ ಬಹಳ ಹೋರಾಟವನ್ನು ಮಾಡಿದರು. ಅದೇ ರೀತಿ ನನ್ನ ಕ್ಷೇತ್ರದ ರಾಮನಗರದಲ್ಲಿ ಕಲ್ಯಾಣಿ ಸ್ಟೀಲ್ ಇಂಡಸ್ಟ್ರೀಯವರು ಕೋಲ್ ಆಧಾರಿತ ಇಂಡಸ್ಟ್ರೀ ಹಾಕಬೇಕಾದರೆ, ಕೇವಲ ಹೋರಾಟ ಅಷ್ಟೇ ಮಾಡದೇ, ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು, ಪರಿಸರ ವಿರೋಧಿ ಯೋಜನೆಯನ್ನು ತರದ ಹಾಗೆ ನೋಡಿಕೊಂಡರು. ಏಕೆಂದರೆ ಇವರು ಬಹಳ ದೊಡ್ಡ ಪರಿಸರ ಪ್ರೇಮಿ. ನಾನು ಕೇವಲ ಎರಡು ತಿಂಗಳ ಹಿಂದೆ ಅವರನ್ನು ಭೇಟಿ ಆದಾಗ ಅವರು ಹೇಳಿದ್ದು ಇಷ್ಟೇ. ನೀವು ರಾಜಕಾರಣಿಗಳಾಗಿ ಏನೂ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂದರೆ ಅಡ್ಡಿ ಇಲ್ಲ, ನಮ್ಮ ಪರಿಸರವನ್ನು ಈಗ ಹೇಗಿದೆ ಹಾಗೆಯೇ ಉಳಿಸಿ, ಅಲ್ಲಿರುವಂತಹ ಪ್ರಾಣಿಗಳ ಬಗ್ಗೆ, ಪಕ್ಷಿಗಳ ಬಗ್ಗೆ ಹಾಗೂ ಕ್ರಿಮಿ ಕೀಟಗಳ ಬಗ್ಗೆ ನೋಡಿ, ಅವರಿಗೂ ಬದುಕುವ ಹಕ್ಕು ಇದೆ. ಅವರಿಗೂ ಹಕ್ಕು ಕೊಡಿ ಎಂದು ಹೇಳಿದಂತಹ ವ್ಯಕ್ತಿ. ಅಂತಹ ಒಂದು ಜಗಲ್ ಭೇಟಿಯ ಪರ್ಮುಸಾ

ಗ್ರಾಮದಲ್ಲಿ ಅಲ್ಲಿಯ ಸ್ಥಳೀಯ ಕೆಂಪು ಮಿಶ್ರಿತ ಕಲ್ಲುಗಳಿಂದ ಯಾವುದೇ ಇಂಜಿನಿಯರ್‌ಗಳ ಸಹಾಯ ಇಲ್ಲದೆ 30-40 ವರ್ಷಗಳ ಹಿಂದೆ ಒಂದು ಸುಂದರವಾದ ಮನೆಯನ್ನು ಕಟ್ಟಿದ್ದಾರೆ. 10,000ಕ್ಕೂ ಹೆಚ್ಚಿನ ಪುಸ್ತಕಗಳು ಅವರ ಮನೆಯಲ್ಲಿವೆ. ಭಗವಂತನೂ ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ, ಅದೇ ರೀತಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಅವರು ಇರುವಂತಹ ಮನೆ ಹಾಗೂ ಅವರ ಪುಸ್ತಕಗಳನ್ನು ಮಾಳಗಾವಂಕರ್ ರವರ ಹೆಸರಿನಲ್ಲಿ ನಾವು ಸ್ಮಾರಕವಾಗಿ ಮಾಡಿದ್ದಲ್ಲಿ ಮುಂದಿನ ದಿನಗಳಲ್ಲಿ ಇಂತಹ ಇನ್ನೂ ಹಲವಾರು ಲೇಖಕರಿಗೆ ನಾವು ಗೌರವ ಕೊಟ್ಟ ಹಾಗಾಗುತ್ತದೆ ಎನ್ನುವಂತಹ ಮಾತನ್ನು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಅಭಯಚಂದ್ರ : ಮಾನ್ಯ ಅಧ್ಯಕ್ಷರೆ, ನಿಧನ ಹೊಂದಿದಂತಹ 10 ಜನ ಗಣ್ಯರಿಗೆ ಸಂತಾಪ ಸೂಚನೆಯನ್ನು ಸಲ್ಲಿಸುತ್ತಾ, ದಕ್ಷಿಣ ಭಾರತದಲ್ಲಿ ಕಂಡಂತಹ ಅತೀ ದೊಡ್ಡ ದುರಂತ ಮಂಗಳೂರು ವಿಮಾನ ನಿಲ್ದಾಣದಲ್ಲಿ ದುಬೈನಿಂದ ಬಂದಂತಹ ವಿಮಾನ ಅಪಘಾತ ಬೆಳಿಗ್ಗೆ ಆರುಕಾಲು ಗಂಟೆಗೆ ಮಂಗಳೂರಿಗೆ ತಲುಪಿದಂತಹ ಸಮಯದಲ್ಲಿ ಲ್ಯಾಂಡ್ ಆಗಿ, ಆ ಮೇಲೆ ಪುನಃ ಅಲ್ಲಿ ಅಪಘಾತ ಆದಂತಹ ಸಂದರ್ಭದಲ್ಲಿ ಸುಮಾರು 158 ಜನ ಸುಟ್ಟು ನಿಧನ ಹೊಂದಿದ್ದು ಅತೀ ದೊಡ್ಡ ದುರಂತ.

ಆ ಮಂಗಳೂರು ಏರ್‌ಪೋರ್ಟ್‌ಗೆ Table Airport ಎಂದೇ ಹೆಸರಿದೆ. ಅಂಥ ವಿಮಾನ ನಿಲ್ದಾಣದಲ್ಲಿ ರನ್‌ವೇ ವಿಸ್ತರಣಾ ಕಾರ್ಯ ಇನ್ನೂ ಹೆಚ್ಚಾಗಿ ಆಗಬೇಕಾಗಿದೆ. ಆದರ ಬಗ್ಗೆ ಕೂಡ ನಾವು ಮುಂದಿನ ದಿನಗಳ್ಲಲಿ ಕ್ರಮವನ್ನು ತೆಗೆದುಕೊಳ್ಳಬೇಕು. ಅಂದು ವಿಮಾನ ಅಪಘಾತದಲ್ಲಿ 158 ಜನರು ಏನು ದುರ್ಮರಣವನ್ನು ಹೊಂದಿದ್ದಾರೋ ಅವರೆಲ್ಲರೂ ಕೂಡ ಭಾರತ ದೇಶದಿಂದ ಕೊಲ್ಲಿ ರಾಷ್ಟ್ರಕ್ಕೆ ಉದ್ಯೋಗಕ್ಕಾಗಿ ಹೋದವರು. ಅವರು ಅಲ್ಲಿ ಕೆಲಸ ಮಾಡಿ ಬಂದಂಥ ಸಂಪಾದನೆಯಿಂದ ಕುಟುಂಬವನ್ನು ಸಾಕುವುದಕ್ಕೆ ಅಲ್ಲಿಗೆ ಹೋಗಿದ್ದರು. ಅವರುಗಳು ಅಲ್ಲಿಂದ ಮತ್ತೆ ಭಾರತ ದೇಶಕ್ಕೆ ಬರುವಂಥ ಸಂದರ್ಭದಲ್ಲಿ ವಿಮಾನ ಅಪಘಾತದಲ್ಲಿ ದುರ್ಮರಣ ವನ್ನು ಹೊಂದಿದ್ದಾರೆ. ಅವರೆಲ್ಲರಿಗೂ ಸದ್ಗತಿಗಳನ್ನು ಭಗವಂತನು ಕೊಡಲೆಂದು ಬಯಸುತ್ತೇನೆ. ಸರ್ಕಾರ ಕೂಡ ಮುಂದಿನ ದಿನಗಳಲ್ಲಿ ಆ ಏರ್‌ಪೋರ್ಟ್‌ನ ರನ್‌ವೇ ವಿಸ್ತರಣೆಯಲ್ಲಿ ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

O.32 F-87

ಶ್ರೀ ಬಸವರಾಜ ಪಾಟೀಲ್ ಅಟ್ಟೂರು(ಬಸವಕಲ್ಯಾಣ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ತಾವು ಮಂಡಿಸಿರುವ ಸಂತಾಪ ಸೂಚನೆ ನಿರ್ಣಯದ ಬಗ್ಗೆ ಬೆಂಬಲವನ್ನು ವ್ಯಕ್ತಪಡಿಸಿ ಮಾನ್ಯ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು ಮತ್ತು ವಿಧಾನಸಭೆಯ ಹಲವಾರು ಮಾನ್ಯ ಸದಸ್ಯರು ಮಾತನಾಡಿ ಶ್ರೀ ಚಂದ್ರಶೇಖರ ಪಾಟೀಲ್ ರೇವೂರ್‌ರವರೊಳಗೊಂಡಂತೆ ಇತರ ಗಣ್ಯರುಗಳು ಏನು ನಿಧನರಾಗಿದ್ದರೆ ಅದರಿಂದ ಸಮಾಜಕ್ಕೆ ತುಂಬಲಾರದ ನಷ್ಟ ಉಂಟಾಗಿದೆಯೆಂದು ಹೇಳಿದ್ದಾರೆ. ಶ್ರೀಮಾನ್ ಚಂದ್ರಶೇಖರ ಪಾಟೀಲ್‌ರವರು ಎರಡು ಸಾರಿ ವಿಧಾನಸಭೆಯ ಶಾಸಕರಾಗಿ ಗುಲ್ಬರ್ಗ ಜಿಲ್ಲೆಯಲ್ಲಿ ಬಹಳಷ್ಟು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವರನ್ನು ಯಾವಾಗಲೂ ಆ ಭಾಗದ ಜನರು ಆದರ್ಶ ಪಾಟೀಲ್ ಎಂದು ಅವರಿಗೆ ನೆನಪಿಸುತ್ತಿದ್ದರು. ನಾವು ಮತ್ತು ಅವರು ರೈಲ್ವೆ ಮೂಲಕ ಹೋಗುವ ಮತ್ತು ಬರುವಂಥ ಸಂದರ್ಭದಲ್ಲಿ ಅವರನ್ನು ಆದರ್ಶ ಪಾಟೀಲರು ಎಂದೇ ಕರೆಯುತ್ತಿದ್ದೆವು. ಏಕೆಂದರೆ ಗುಲ್ಬರ್ಗದಲ್ಲಿ ಅವರನ್ನು ಅದೇ ರೀತಿ ಕರೆಯಲಾಗುತ್ತಿತ್ತು. ಏಕೆಂದರೆ ಗುಲ್ಬರ್ಗದಲ್ಲಿ ಹಲವಾರು ಮೆಡಿಕಲ್ ಸ್ಟೋರ್‌ಗಳು ಆದರ್ಶ ಎನ್ನುವ ಅವರ ಹೆಸರಿನಲ್ಲಿವೆ. ಆದರ್ಶ ಗೌಡ ಎನ್ನುವ ಹೆಸರನ್ನು ಅವರು ಪಡೆದಿದ್ದರು ಮತ್ತು ಅವರು ನಮಗೆ ಬಹಳ ಸಮೀಪದ ನಿಕಟವರ್ತಿಗಳಾಗಿದ್ದರು. ಅವರು ಮರಣ ಪೂರ್ವದಲ್ಲಿ ಒಂದು ದಿವಸ ನಮ್ಮ ಬಸವಕಲ್ಯಾಣಕ್ಕೆ ನೆಂಟಸ್ತನದಲ್ಲಿ ಬಂದಿದ್ದರು. ಆಗ ಅವರು ನಮ್ಮೊಂದಿಗೆ ಬಹಳ ಚೆನ್ನಾಗಿಯೇ ಮಾತನಾಡಿದರು. ಈಗಾಗಲೇ ಹಲವಾರು ಮಾನ್ಯ ಸದಸ್ಯರುಗಳ ಹೇಳಿದಂತೆ ಅವರ ಮರಣ ಅಕಾಲಿಕ ಮರಣವೇ ಆಗಿದೆ. ಮನುಷ್ಯನ ಜೀವನದಲ್ಲಿ ಹುಟ್ಟು ಮತ್ತು ಸಾವು, ಇವೆರಡೂ ಕೂಡ ನಮ್ಮ ಕೈಯಲ್ಲಿ ಇರುವುದಿಲ್ಲ. ಪಾಟೀಲರ ಶವ ಸಂಸ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿಗಳು, ಹಲವಾರು ಮಂತ್ರಿಗಳು ಮತ್ತು ಶಾಸಕರುಗಳು ಬಂದಿದ್ದರು. ಶ್ರೀ ಚಂದ್ರಶೇಖರ ಪಾಟೀಲರು ಒಳ್ಳೆಯ ಕೆಲಸಗಳನ್ನು ಮಾಡಿದ್ದರು. ಅವರ ನಿಧನದಿಂದ ಸಮಾಜಕ್ಕೆ ಬಹಳ ದೊಡ್ಡ ನಷ್ಟ ಉಂಟಾಗಿದೆ. ಇನ್ನು ನನಗೆ ಪರಿಚಯವಿದ್ದ ಶ್ರೀಮಾನ್ ಹನುಮಂತರಾಯ ದೇಸಾಯಿಯವರು ಕೂಡ ನಿಧನವನ್ನು ಹೊಂದಿದ್ದಾರೆ. ಈ ದೇಸಾಯಿ ಯವರು ಭಾಷಣ ಮಾಡುವುದರಲ್ಲಿ ಬಹಳ ಚೆನ್ನಾಗಿ ಪಳಗಿದ್ದರು. ಅವರು ದಿವಂಗತ ದೇವರಾಜ ಅರಸುರವರ ನಿಕಟವರ್ತಿಗಳಾಗಿದ್ದರು. ಅವರು ಕನ್ನಡದಲ್ಲಿ ಬಹಳ ಚೆನ್ನಾಗಿ ಭಾಷಣವನ್ನು ಮಾಡುತ್ತಿದ್ದರು. ಬಹಳ ಚೆನ್ನಾಗಿ

ಭಾಷಣ ಮಾಡುವ ಅಭಿರುಚಿ ಅವರಲ್ಲಿತ್ತು. ನಾವು ಅವರನ್ನು ಆಗಾಗ ಹಲವಾರು ಕಾರ್ಯಕ್ರಮದಲ್ಲಿ ಭಾಷಣ ಮಾಡಲು ಕರೆಸುತ್ತಿದ್ದೆವು. ಇನ್ನು ಅವರು ವಕೀಲರಾಗಿ ಗುಲ್ಬರ್ಗದಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆದಿದ್ದರು. ನಾನು ಅವರ ಪಕ್ಕದ ರೂಮಿನಲ್ಲಿ ಇರುತ್ತಿದ್ದೆ. 1983 ರಲ್ಲಿ ಅವರೂ ಬಂದಿದ್ದರು. ನಾನು ಕೂಡ 1983 ರಲ್ಲಿ ಬಂದಿದ್ದೆ. ಅವರು ಯಾವಾಗಲೂ ನಾಟಕದ ಉದ್ಘಾಟನೆಗೆ ಹೋಗುತ್ತಿದ್ದರು. ನಾನು ಅವರಿಗೆ ಹೇಳುತ್ತಿದ್ದೆ, ಸ್ವಾಮಿ ನೀವು ಯಾವಾಗಲೂ ನಾಟಕ ಉದ್ಘಾಟನೆಗೆಂದು ಹೊರಟು ಹೋಗುತ್ತೀರಿ. ಇದೇ ರೀತಿಯಾದರೆ ನೀವು ಮುಂದೆ ಚುನಾವಣೆಯಲ್ಲಿ ಬರುವುದಿಲ್ಲವೆಂದು ತಮಾಷೆ ಮಾಡುತ್ತಿದ್ದೆ. ಅವರು ಬಹಳ ಒಳ್ಳೆಯ ವ್ಯಕ್ತಿಗಳಾಗಿದ್ದರು. ಹೈದ್ರಾಬಾದ್ ಕರ್ನಾಟಕದ ಬಗ್ಗೆ ಬಹಳಷ್ಟು ಅಭಿರುಚಿ ಇಟ್ಟುಕೊಂಡು ಒಳ್ಳೆಯ ಸ್ಟೇಟ್‌ಮೆಂಟ್‌ನ್ನೂ ಕೂಡ ಕೊಡುತ್ತಿದ್ದರು. ಅಂಥವರ ನಿಧನದಿಂದ ಅದರಲ್ಲಿಯೂ ಹೈದ್ರಾಬಾದ್-ಕರ್ನಾಟಕ ಭಾಗಕ್ಕೆ ಹೆಚ್ಚು ನಷ್ಟವುಂಟಾಗಿದೆ ಎನ್ನುವಂಥ ಮಾತನ್ನು ವ್ಯಕ್ತಪಡಿಸುತ್ತೇನೆ. ಇನ್ನು ಶ್ರೀ ಸಿ. ಅಂದಾನಪ್ಪನವರು, ಎ. ದೊಡ್ಡೇಗೌಡರು ನಮ್ಮ ಜೊತೆಯಲ್ಲಿ ಎಂ.ಎಲ್.ಸಿ. ಯಾಗಿ ಮತ್ತು ವಿಧಾನಸಭಾ ಸದಸ್ಯರಾಗಿ ನಮ್ಮ ಜೊತೆಯಲ್ಲಿ ಅವರು ಕಾರ್ಯವನ್ನು ನಿರ್ವಹಿಸಿದ್ದರು. ಅವರೂ ಕೂಡ ಬಹಳ ಒಳ್ಳೆಯ ವ್ಯಕ್ತಿಗಳಾಗಿದ್ದರು. ನಾನು ಹಿಂದೆ ಸಚಿವನಾಗಿದ್ದಾಗ ಅವರ ಕ್ಷೇತ್ರಕ್ಕೇ ಹೋಗಿದ್ದೆ. ನನ್ನನ್ನು ಮೂರ್‍ನಾಲ್ಕು ಬಾರಿ ಅವರ ಕ್ಷೇತ್ರಕ್ಕೆ ಬರುವಂತೆ ಆಹ್ವಾನವನ್ನು ಕೊಟ್ಟಿದ್ದರು. ಅವರು ಹಿಂದೆ ನಮ್ಮ ದೇವೇಗೌಡರ ನಕಟ ವರ್ತಿಗಳಾಗಿ ಕೆಲಸವನ್ನು ಮಾಡುತ್ತಿದ್ದರು. ಇಂಥವರ ನಿಧನವಾಗಿದೆ. ಇದರಲ್ಲದೇ ನಾನಾಜಿ ದೇಶ್‌ಮುಖ್‌ರವರು, ಸುರೇಂದ್ರ ದಾನಿಯವರು, ಸುಬ್ರಾಯ್ ನಾರಾಯಣ್ ಮಲ್ಯರವರು, ಮನೋಹರ್ ಮಾಳಗಾವಂಕರ್‌ರವರು, ಮಹಾ ಪ್ರಜ್ಞಾಜೀಯವರುಗಳು ನಿಧನರಾಗಿದ್ದಾರೆ. ಇವರಲ್ಲದೇ ವಿಮಾನ ಅಪಘಾತದಲ್ಲಿ ಕೂಡ 158 ಜನರು ದುರ್ಮರಣವನ್ನು ಹೊಂದಿದ್ದಾರೆ. ಇಂಥವರುಗಳೆಲ್ಲರ ಬಗ್ಗೆ ಮಾನ್ಯ ಸಭಾಧ್ಯಕ್ಷರಾದ ತಾವು ಏನು ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿದ್ದೀರಿ ಅದನ್ನು ನಾನು ಸ್ವಾಗತ ಮಾಡಿ, ಬೆಂಬಲ ವ್ಯಕ್ತಮಾಡಿ ನಿಧನ ಹೊಂದಿದ ಎಲ್ಲರ ಕುಟುಂಬ ವರ್ಗದವರಿಗೆ ದೇವರು ಒಳ್ಳೆಯದನ್ನು ಮಾಡಲೆಂದು ದೇವರಲ್ಲಿ ನಾನು ಪ್ರಾರ್ಥನೆಯನ್ನು ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಯು.ಟಿ. ಖಾದರ್(ಉಳ್ಳಾಲ) : ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಈಗಾಗಲೇ ಅಗಲಿದ ಹಿರಿಯ ನಾಯಕರ ಬಗ್ಗೆ ಬಹಳಷ್ಟು ಸದಸ್ಯರುಗಳು ಮಾತನಾಡಿದ್ದಾರೆ. ನಾನು ಕೂಡ ಅಗಲಿದ ಹಿರಿಯ ನಾಯಕರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ. ವಿಮಾನ ಅಪಘಾತದಲ್ಲಿಯೂ ಕೂಡ 158 ಜನರು ದುರ್ಮರಣಕ್ಕೆ ಒಳಗಾಗಿದ್ದಾರೆ. ಮೇ 20 ರಂದು ಜಗತ್ತು ಕಂಡಂಥ ಅತ್ಯಂತ ದೊಡ್ಡ ದುರಂತ ಮಂಗಳೂರಿನ ಬಜ್ಪೆ ವಿಮಾನ ನಿಲ್ದಾಣದಲ್ಲಿ ನಡೆದಿದೆ. 166 ಪ್ರಯಾಣಿಕರು ಆ ವಿಮಾನದಲ್ಲಿದ್ದರು. ಅವರಲ್ಲಿ ಕೊಲ್ಲಿ ರಾಷ್ಟ್ರಗಳಲ್ಲಿ ಕೆಲಸಕ್ಕೆ ಹೋಗಿ ಮತ್ತೆ ಸ್ವದೇಶಕ್ಕೆ ಬರುತ್ತಿದ್ದವರು, ಕೆಲವರು ಮದುವೆಗಾಗಿ ಸ್ವದೇಶಕ್ಕೆ ಬರುತ್ತಿದ್ದವರಿದ್ದರು, ಕೆಲವರು ತಮ್ಮ ಮಕ್ಕಳನ್ನು ನೋಡುವುದಕ್ಕಾಗಿ ಬರುತ್ತಿದ್ದಂಥವರೂ ಇದ್ದರು. 166 ಪ್ರಯಾಣಿಕರಿದ್ದ ವಿಮಾನದಲ್ಲಿ ಅಪಘಾತವಾಗಿ 158 ಜನರು ಸುಟ್ಟು ಕರಕಲಾಗಿ ಜೀವವನ್ನು ಕಳೆದುಕೊಂಡಿದ್ದಾರೆ. ಬಹುಶಹ 6 ಗಂಟೆಗೆ ಈ ಘಟನೆ ನಡೆದಿದೆ. 6.30 ಕ್ಕೆ ನಾನು ಮತ್ತು ಅಭಯ ಚಂದ್ರ ಜೈನ್‌ರವರು ಸೇರಿ ಆ ಪ್ರದೇಶಕ್ಕೆ ಹೋಗಿ ನೋಡಿದೆವು. ನಿಜವಾಗಿ ಅಲ್ಲಿ ಹೃದಯ ವಿದ್ರಾಯಕವಾಗುವ ಸನ್ನಿವೇಶ ಅಲ್ಲಿ ನಡೆದಿತ್ತು. ಆ ವಿಮಾನದಲ್ಲಿ ಬೆಲ್ಟ್ ಹಾಕಿಕೊಂಡು ಕುಳಿತವರು ಹಾಗೆಯೇ ಸುಟ್ಟು ಕರಕಲಾಗಿದ್ದಾರೆ. ಯಾರು ಕೆಲವರು ಓಡುವಂಥ ಪರಿಸ್ಥಿತಿಯಲ್ಲಿದ್ದರೋ ಅವರು ಅದೇ ಪರಿಸ್ಥಿತಿಯಲ್ಲಿ ಸುಟ್ಟು ಹೋಗಿದ್ದಾರೆ. ಕೆಲವು ತಾಯಂದಿರು ಮಕ್ಕಳನ್ನು ಎದೆಯಲ್ಲಿ ಗಟ್ಟಿಯಾಗಿ ಇಟ್ಟುಕೊಂಡಿದ್ದರೆ ಅದೇ ಪರಿಸ್ಥಿತಿಯಲ್ಲಿಯೇ ಅವರು ಸುಟ್ಟು ಕರಕಲಾಗಿದ್ದಾರೆ. ಇವೆಲ್ಲವನ್ನೂ ನೋಡಿದರೆ ಹೃದಯವಿದ್ರಾಯಕವಾಗಿ ಇನ್ನು ಮುಂದೆ ಈ ರೀತಿ ಘಟನೆ ಎಲ್ಲಿಯೂ ನಡೆಯದಂತೆ ದೇವರು ಎಲ್ಲರನ್ನೂ ಕಾಪಾಡಬೇಕೆಂದು ಬೇಡಿಕೊಂಡೆ. ಅವತ್ತು ಆ ಘಟನೆ ನಡೆದಾಗ ಅಲ್ಲಿಗೆ ಆಗಮಿಸಿದ ಜನರು ಜಾತಿ, ಭೇದವೆಲ್ಲವನ್ನೂ ಮರೆತು, ರಾಜಕಾರಣಿಗಳು, ಜಿಲ್ಲಾಡಳಿತ, ಪೋಲೀಸ್ ಇಲಾಖೆ, ಏರ್‌ಫೋರ್ಸ್‌ನವರು ಮತ್ತು ಸಾರ್ವಜನಿಕರೆಲ್ಲರೂ ಸೇರಿಕೊಂಡು ಸಾಮಾನ್ಯ ಕಾರ್ಯಕರ್ತರಾಗಿ ದುಡಿದು ಆ ಪ್ರದೇಶದ ಎಲ್ಲ ಯುವಕರೂ ಸೇರಿಕೊಂಡು ಸಂಜೆ 7 ಗಂಟೆಯವರೆವಿಗೆ ಗಾಯಾಳುಗಳಾಗಿದ್ದವರನ್ನು ಮತ್ತು ಮರಣ ಹೊಂದಿದವರನ್ನು ಆಸ್ಪತ್ರೆಗೆ ಸಾಗಿಸುವಂಥ ಕೆಲಸವನ್ನು ಮಾಡಿದೆವು. ಸತ್ತವರಲ್ಲಿ 12 ದೇಹಗಳನ್ನು ಯಾರೂ ಯಾವ ಕುಟುಂಬದವರು ಐಡೆಂಟಿಫೈ ಮಾಡುವುದಕ್ಕೆ

ಆಗಲಿಲ್ಲವೋ ಅಂಥ ಶವಗಳನ್ನು ನಾಲ್ಕು ದಿವಸಗಳ ನಂತರ ಸಾಮೂಹಿಕವಾಗಿ ದಫನ್ ಮಾಡಲು ಜಿಲ್ಲಾಡಳಿತವೇ ಅವರಿಗೆ ತಂದೆ ತಾಯಿಗಳಾಗಿದ್ದು ಕೊಂಡು, ಆ ಸಂದರ್ಭದಲ್ಲಿ ಎಲ್ಲ ಜಾತಿ ಮತದವರು ಸೇರಿಕೊಂಡು ತಮ್ಮ ತಮ್ಮ ಧರ್ಮದ ಪ್ರಾರ್ಥನೆ ಮಾಡಿಕೊಂಡು ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಯಾವ ಯಾವ ಕುಟುಂಬದವರು ತಮ್ಮವರನ್ನು ಕಳೆದು ಕೊಂಡಿದ್ದಾರೋ ಅವರಿಗೆ ಈ ನೋವನ್ನು ಭರಿಸುವಂಥ ಶಕ್ತಿಯನ್ನು ಭಗವಂತನು ಕೊಡಲೆಂದು ನಾನು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅಲ್ಲಿ ಯಾರು ಯಾರು ಸತ್ತಿದ್ದಾರೋ ಆ ಪ್ರದೇಶದಲ್ಲಿ ಒಂದು ಸ್ಮಾರಕವನ್ನು ನಿರ್ಮಾಣ ಮಾಡಲು ಸರ್ಕಾರ ಆದೇಶವನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆ ಪ್ರದೇಶಕ್ಕೆ ಮಾನ್ಯ ಮುಖ್ಯಮಂತ್ರಿಗಳು ಭೇಟಿ ನೀಡಿ 2 ಲಕ್ಷ ರೂ.ಗಳ ಪರಿಹಾರವನ್ನು ಕೊಡಲು ಯೋಜನೆಯೊಂದನ್ನು ಮಾಡಿದ್ದಾರೆ ಮತ್ತು ಹಣವನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಇದುವರೆಗೂ ಸತ್ತ ವ್ಯಕ್ತಿಗಳ ಕುಟುಂಬದವರ ಮನೆಗೆ ಅದು ಇನ್ನೂ ಮುಟ್ಟಿಲ್ಲ. ಈ ಪರಿಹಾರದ ಹಣ ಆದಷ್ಟು ಬೇಗ ಆ ಕುಟುಂಬದವರಿಗೆ ತಲುಪುವಂತಾಗಲಿ. ಇನ್ನು Insurance claim ಮಾಡುವುದು ಕೂಡ ಇಂದು ಬಹಳ ಕಷ್ಟವಾಗಿದೆ. ಬೇರೆ ಬೇರೆ ಪಾಸ್‌ಪೋರ್ಟ್, ಡಾಕ್ಯುಮೆಂಟ್‌ಗಳು ಮತ್ತು ಅ ಸಂಬಂಧ ಫೈಲನ್ನು ತಯಾರು ಮಾಡುವಂಥ ಸಂದರ್ಭದಲ್ಲಿ ಅಟೆಸ್ಟೇಶನ್‌ಗಾಗಿ ಮಂಗಳೂರು, ಮೈಸೂರು ಎಂದು ಅಲ್ಲಿಂದ ಬೆಂಗಳೂರಿಗೆ ತಿರುಗಾಡುವಂಥ ಪರಿಸ್ಥಿತಿ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಕಳಕಳಿ ಏನೆಂದರೆ ಮೃತರ ಕುಟುಂಬದವರಿಗೆ ಈ ಅಟೆಸ್ಟೇಶನ್ ವಿಚಾರದಲ್ಲಿ ಸಹಾಯ ಮಾಡಿ ಪರಿಹಾರದ ಹಣ ಬೇಗ ಸಿಗುವಂತೆ ಮಾಡಲು ಎರಡ್ಮೂರು ದಿವಸಗಳ ಕಾಲ ಸಂಬಂಧಪಟ್ಟ ಅಧಿಕಾರಿಗಳು ಮಂಗಳೂರಿನಲ್ಲಿಯೇ ಇದ್ದು ತೊಂದರೆಗೊಳ ಗಾಗಿರುವ ಕುಟುಂಬದವರಿಗೆ ಸಹಾಯ ಮಾಡುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬೈರೂನ್ ಸಿಂಗ್ ಶೇಖಾವತ್ ಸೇರಿದಂತೆ ದಿವಂಗತರಾಗಿರುವ ಎಲ್ಲ ಹಿರಿಯ ಚೇತನಗಳಿಗೆ ಭಗವಂತನು ಚಿರಶಾಂತಿ ಯನ್ನು ನೀಡಿ ಸದ್ಗತಿ ದೊರಕಿಸಲೆಂದು ಮತ್ತು ಮೃತರ ಕುಟುಂಬ ವರ್ಗದವರಿಗೆ ಇವರುಗಳ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸತಕ್ಕ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಬೀದರ್-ಶ್ರೀರಂಗಪಟ್ಟಣದ ಹೆದ್ದಾರಿಯಲ್ಲಿ ಯಾದಗಿರಿಯಿಂದ ಬೆಂಗಳೂರಿಗೆ ಹೊರಟಿದ್ದ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಬಸ್ ದಿನಾಂಕ: 30-5-2010 ರಂದು ಮುಂಜಾನೆ 3.20 ಕ್ಕೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಪಟ್ಟಣದ ಹೊರ ವಲಯದಲ್ಲಿ ಅಪಘಾತಕ್ಕೀಡಾಗಿದ್ದು ದುರಂತದಲ್ಲಿ 64 ಪ್ರಯಾಣಿಕರ ಪೈಕಿ ಸುಮಾರು 30 ಜನರು ದುರ್ಮರಣಕ್ಕೀಡಾಗಿರುತ್ತಾರೆ. ಅವರಲ್ಲಿ ಕೂಲಿ ಕಾರ್ಮಿಕರು, ಮಕ್ಕಳು ಮತ್ತು ಮಹಿಳೆಯರು ಸಹ ಸೇರಿರುತ್ತಾರೆ. ಮೃತರಿಗೆ ಈ ಸದನವು ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷಗಳ ಕಾಲ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದಲ್ಲಿ ಎಲ್ಲ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಿದರು)

ಅಧ್ಯಕ್ಷರು : ಸದನವು ಅಂಗೀಕರಿಸಿದ ಸಂತಾಪ ಸೂಚನ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬದವರಿಗೆ ಕಳುಹಿಸಲಾಗುವುದು. ಈಗ ಸದನವನ್ನು ಮತ್ತೆ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 11 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ 29ನೇ ಜೂನ್ 2010ರ ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಲಾಯಿತು)

* * * * *

ಮುದ್ರಕರು: ಸರ್ಕಾರಿ ಭದ್ರತಾ ಮುದ್ರಣಾಲಯ, ಪೀಣ್ಯ, ಬೆಂಗಳೂರು.